
ಬಿ.ಎಚ್. ಶ್ರೀಧರ

ಸಮಗ್ರ ಸಾಹಿತ್ಯ

ಸಂಪುಟ-೧

ಕಾವ್ಯ





ಸಂಪಾದಕರು

ರಾಜಶೇಖರ ಹೆಬ್ಬಾರ

ತೇಜು ಪಬ್ಲಿಕೇಷನ್ಸ್

ಬಿ.ಎಚ್. ಶ್ರೀಧರ ಸಮಗ್ರ ಸಾಹಿತ್ಯ

ಸಂಪುಟ – ೧

ಕಾವ್ಯ

ಪ್ರಧಾನ ಸಂಪಾದಕರು

ರಾಜಶೇಖರ ಹೆಬ್ಬಾರ

ತೇಜು ಪಬ್ಲಿಕೇಷನ್ಸ್

ನಂ. 233, 7ನೇ 'ಎ' ಅಡ್ಡರಸ್ತೆ,

ಶಾಸ್ತ್ರಿನಗರ, ಬೆಂಗಳೂರು – 560 028.

B.H. Shridhar's Complete Works
Volume - 1
KAVYA

Edited by
Rajashekhar Hebbar

Published by
V. Padmavathi, on behalf of **Teju Publications**
233, 7th 'A' Cross, Shastrinagar,
Bangalore - 560 028. Mob : 9900195626

First Edition : 2013

Pages : 732 (Box Binding)

Price : Rs. 490 **ಬೆಲೆ : ರೂ. ೪೯೦**

No. of Copies : 1000

70 GSM N.S. Maplitho – 1/8 Demy

ಸಲಹೆ ಸಹಕಾರ
ಪ್ರೊ.ಎಚ್.ಆರ್.ಅಮರನಾಥ, ಡಾ.ಎಮ್.ಜಿ.ಹೆಗಡೆ, ಶ್ರೀ ಸಿ.ಆರ್.ಶಾನಭಾಗ,
ಡಾ. ಸುಮಿತ್ರ ಮೋತಿಲಾಲ ಹಲವಾಯಿ, ಶ್ರೀಮತಿ ರಾಜೇಶ್ವರಿ ಲೋಕರೆ, ಶ್ರೀಕೃಷ್ಣ ಲೋಕರೆ,
ಶ್ರೀಮತಿ ಭುವನೇಶ್ವರಿ ಹೆಗಡೆ

Cover Design : **Bagur Markandaya**

Typeset at : **Page Designers**
Bangalore - 560 004. Ph : 41691270 E-mail : bsmadhu75@gmail.com

Printed at : **Jagruthi Printers**
56/1-6, Narasimhaiah Garden, Kottigepalya, Magadi Main Road,
Bangalore - 560 091. Phone : 23583850

ಅರ್ಪಣೆ

ನೋವು ನುಂಗಿ ನಕ್ಕ ಶ್ರೀಧರರ ಧರ್ಮಪತ್ನಿ

ಶ್ರೀಮತಿ ರಮಾದೇವಿಯವರಿಗೆ



ಚಂದ್ರಲೋಕದ ತಾಯಿ

ತುಸುವೆ ನೋಡಿದೆವು ಎನ್ನುವಂತಿಲ್ಲ
ಅರೆಗಳಿಗೆ ಕಂಡರೂ ಅದು ಪೂರ್ಣವೇ
ಕಂಡದ್ದಲ್ಲ, ಕಣ್ಣ ತುಂಬಿತು ನೋಟ
ಕಣ್ಣುತುಂಬಿದ ಮೇಲೆ ಮನ ಬಾಕಿಯೇ?

ಹಲವೊಮ್ಮೆ ನೋಡಿದ್ದಕ್ಕೆ ಹೆಚ್ಚಾಗಲಿಲ್ಲ
ಹೊಟ್ಟೆಯಲಿ ಹುಟ್ಟಿದ್ದಕ್ಕೇ ಮಕ್ಕಳೆನಿಸಿದ್ದಲ್ಲ
ದೂರ ನಿಂತವರೂ ತಮ್ಮ ಹತ್ತಿರದ ಬಂಧುಗಳೇ
ಅರಿಯದಿದ್ದವರೂ ತಮ್ಮ ಸ್ವಂತದವರೇ!

ಹುಲ್ಲು ಸಸಿ ಕಲ್ಲುಗಳೆಲ್ಲವನೂ ಹಾದು
ಹೊಳೆಸುತ್ತ ಹರಿಸುತ್ತ ಮತ್ತೆ ಹಡೆದಿರಿ ತಾವು
ಭೂಮಿಯೆಂದೆನಲಾರೆ ಚಂದ್ರನಂಥವರನ್ನು
ಮಣ್ಣಾಗಬಹುದೇ ಬೆಳದಿಂಗಳು?

–ಎಸ್.ಮಂಜುನಾಥ್

(ಖ್ಯಾತ ಕವಿ)

ಕವಿ ಕಾವ್ಯ ವಿಚಾರ

ಕವಿ, ಚಿಂತಕ, ವಿಮರ್ಶಕ, ವಾಗ್ಮಿ, ಬಹುಶ್ರುತ ವಿದ್ವಾಂಸ ಪ್ರೊ.ಬಿ.ಎಚ್.ಶ್ರೀಧರರ ಜನನ ೧೯೧೮, ಏಪ್ರಿಲ್ ೨೪ ರಂದು ಬಿಜೂರಿನ (ದ.ಕನ್ನಡ) ಬವಲಾಡಿಯಲ್ಲಿ. ತಂದೆ ಸೀತಾರಾಮ ಹೆಬ್ಬಾರ, ತಾಯಿ ನಾಗಮ್ಮ. ಲಕ್ಷ್ಮಿಯದಿಲ್ಲದಿದ್ದರೂ ಸರಸ್ವತಿಯ ಕೃಪಾಕಟಾಕ್ಷ ಧಾರಾಳವಾಗಿ ಇದ್ದ ಆಶುಕವಿಗಳ, ಪಂಡಿತರ, ಸತ್ಯವ್ರತರ ಕುಟುಂಬ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಜ್ಞಾನನಿಧಿಗಳೂ, ಗುಣನಿಧಿಗಳೂ ಆದ ಶಿಕ್ಷಕರಿಂದ ಬೋಧನೆ, ಸಂಸ್ಕೃತ ಎಮ್.ಎ. ಪೂರೈಕೆ (೧೯೪೨). ರಮಾದೇವಿಯವರೊಡನೆ ೧೯೪೬ರಲ್ಲಿ ವಿವಾಹ. ನಾಲ್ಕು ಹೆಣ್ಣು, ಒಂದು ಗಂಡು ಮಕ್ಕಳ ತಂದೆ. ೧೯೪೨ರಲ್ಲಿ ಮಿಲಿಟರಿ ಅಕೌಂಟ್ಸ್ ಆಫೀಸಿನಲ್ಲಿ ಗುಮಾಸ್ತಗಿರಿಯಿಂದ ಆರಂಭವಾದ ಉದ್ಯೋಗಪರ್ವ ಶಿಕ್ಷಕವೃತ್ತಿ, ಪತ್ರಿಕೋದ್ಯಮ ಪ್ರಾಚಾರ್ಯಗಿರಿಯವರೆಗೆ ಹಬ್ಬಿದೆ. ಈ ಎಲ್ಲ ಕಾಲಘಟ್ಟಗಳಲ್ಲೂ (೧೯೪೫ರಿಂದಲೇ) ವಿವಿಧ ಸಾಹಿತ್ಯಪ್ರಕಾರಗಳಲ್ಲಿ ಅವಿರತವಾಗಿ ಬರಹ, ಬರಹ–ದೇಹ ಸಂಪೂರ್ಣವಾಗಿ ಸೋಲುವ (ನಿಧನ ೧೯೯೦ ಏಪ್ರಿಲ್ ೨೪) ತುಸು ಮುಂಚಿನವರೆಗೂ. ಶಿಶುಸಾಹಿತ್ಯದಿಂದ ಹಿಡಿದು ವಿಮರ್ಶೆ, ಇತಿಹಾಸ, ದರ್ಶನಗಳವರೆಗೂ ಶ್ರೀಧರರ ಆಸಕ್ತಿ, ಅಭ್ಯಾಸ, ಕೊಡುಗೆ. ಕಾವ್ಯಸೂತ್ರ, ಜ್ಞಾನಸೂತ್ರ, ರಾಷ್ಟ್ರಸೂತ್ರಗಳು ಸೂತ್ರತ್ರಯಗಳೆನಿಸಿಕೊಂಡವುಗಳು, ಬಹು–ಬಹುಮಾನಿತವಾದವುಗಳು. ಜೀವನದ ಮತ್ತು ಸಾಹಿತ್ಯ ಶ್ರೇಷ್ಠತೆಯ ನಿಕಷದ ಅನ್ವೇಷಣೆಯಲ್ಲಿ ಪಾಶ್ಚಾತ್ಯ–ಪೌರಾತ್ಯ ಇತಿಹಾಸ, ಸಾಹಿತ್ಯ, ದರ್ಶನಗಳನ್ನು ಅಭ್ಯಸಿಸಿ ಅರಗಿಸಿಕೊಂಡು ನಿಖರ ನಿಲುವಿಗೆ ಬಂದು ಅದನ್ನು ತಮ್ಮ ಐವತ್ತಕ್ಕೂ ಹೆಚ್ಚಿನ ಕೃತಿಗಳಲ್ಲಿ, ಅಸಂಖ್ಯಾತ ಲೇಖನಗಳಲ್ಲಿ ಸ್ಪಷ್ಟವಾಗಿ ("ಧರ್ಮಾದರ್ಥಶ್ಚ ಕಾಮಶ್ಚ" ಎಂದ ವ್ಯಾಸನಷ್ಟೇ ಖಚಿತವಾಗಿ) ಅಭಿವ್ಯಕ್ತಿಸಿದ ವಿಶಿಷ್ಟ ಲೇಖಕ.

ಸಂಪಾದಕೀಯ

ಯಾವುದೇ ಲೇಖಕನ ಕೃತಿಯೊಂದು ಇಂದಿಗೂ, ಎಂದಿಗೂ ಪ್ರಸ್ತುತವೆನಿಸುವದು ಅದು ಸಾರ್ವಕಾಲಿಕ ಮೌಲ್ಯವನ್ನು ಪ್ರತಿಪಾದಿಸುತ್ತಿದ್ದರೆ ಮಾತ್ರ. ಶತಕ–ದಶಕಗಳ ಹಿಂದಿನ ಶ್ರೇಷ್ಠ ಕೃತಿಗಳು ಇಂದಿಗೂ ಪ್ರಸ್ತುತವೆನಿಸುವದು ಇದೇ ಕಾರಣಕ್ಕೆ ಮತ್ತು ಬದಲಾದ ಕಾಲ–ದೇಶಗಳ ಆವರಣದಲ್ಲಿ ಅವುಗಳ ಪುನರಧ್ಯಯನ ಹೊಸ ಕಾಣ್ಕೆಗೂ, ಜಾಗರಕ್ಕೂ ಕಾರಣವಾಗುತ್ತದೆ. ಏಕೆಂದರೆ ಕಾಲ–ದೇಶಗಳು ಬದಲಾದರೂ ಸಮಾಜವನ್ನು ಕಟ್ಟಿ ನಿಲ್ಲಿಸುವ ಶಕ್ತಿ ಇಂದಿಗೂ ಬದಲಾಗಿಲ್ಲ ಮತ್ತು ಅದರ ಸ್ವರೂಪ ನೈತಿಕವಾದುದೆಂಬುದನ್ನು ಮಾನವಕುಲದ ಚರಿತ್ರೆಯನ್ನು ಅಭ್ಯಸಿಸಿ ಅರ್ಥೈಸಿಕೊಂಡ ಪೂರ್ವಗ್ರಹರಹಿತ ವಿವೇಕಿಗಳೆಲ್ಲರೂ ಒಪ್ಪುತ್ತಾರೆ.

ಪ್ರೊ.ಬಿ.ಎಚ್.ಶ್ರೀಧರರ ಎಲ್ಲ ಕೃತಿಗಳಲ್ಲೂ ಸಮಾಜದ ಸುದೃಢತೆಗೆ ಅನಿವಾರ್ಯವಾದ ಮತ್ತು ಅತ್ಯವಶ್ಯವಾದ ಈ ನೈತಿಕತೆಯ ಅಂತಃಸೂತ್ರದ ಅಭಿವ್ಯಕ್ತಿ ಖಚಿತವಾಗಿ ಮತ್ತು ಪ್ರಬಲವಾಗಿ ಪಡಿಮೂಡಿದೆ. ಹೀಗಾಗಿ ಅವು ಅಂದಿಗೂ, ಇಂದಿಗೂ ಸಲ್ಲುವಂಥವುಗಳೆಂಬ ವಿಚಾರವೇ ಅವುಗಳ ಪುನರ್ಮುದ್ರಣಕ್ಕೆ ಪ್ರೇರಣೆ. ಅವರ ಐವತ್ತಕ್ಕೂ ಹೆಚ್ಚಿನ ಕೃತಿಗಳಲ್ಲಿ ಹಲವಾರು ಪ್ರಾತಿನಿಧಿಕ ಕೃತಿಗಳ ಪ್ರತಿಗಳು ಮುಗಿದುಹೋಗಿ ವಾಚಕವರ್ಗಕ್ಕೆ ಲಭ್ಯವಾಗದ ಪರಿಸ್ಥಿತಿ ಇತ್ತು. ಈಗ ಶ್ರೀಧರರು ಕಾಲವಾದ ೨೨–೨೩ ವರ್ಷಗಳ ಬಳಿಕ ಅವೆಲ್ಲ ಮತ್ತೆ ಬೆಳಕು ಕಾಣುವ, ಬೆಳಕು ಬೀರುವ ಸುಯೋಗ ಬಂದೊದಗಿದೆ.

೧೯೪೫ರಲ್ಲಿ ಪ್ರಕಟವಾದ "ಮೇಘನಾದ" ಕವನಸಂಕಲನದೊಂದಿಗೆ ಆರಂಭವಾದ ಅವರ ಸಾಹಿತ್ಯಕೃಷಿ ೧೯೮೮ರಲ್ಲಿ ಬಂದ "ಭಾರತೀಯ ಮೂರ್ತಿಶಿಲ್ಪ" ಗ್ರಂಥದವರೆಗೂ ಅವಿರತವಾಗಿ ನಡೆಯಿತು. ಕಾವ್ಯ, ವಿಮರ್ಶೆ, ವೈಚಾರಿಕ ಪ್ರಬಂಧಗಳು, ವಿಡಂಬನೆ, ಇತಿಹಾಸ, ನಾಟಕ, ಯಕ್ಷಗಾನ, ಅನುವಾದ ಇತ್ಯಾದಿ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಅವರ ಕೊಡುಗೆ ಇದೆ. ಆದರೆ ಪ್ರಮಾಣದಿಂದಾಗಿ ಅಲ್ಲ, ಅವುಗಳೆಲ್ಲವೂ 'ಸಮ್ಯಗ್' ಜೀವನಕ್ಕೆ ಪೋಷಕವಾದ ಮೌಲ್ಯಗಳನ್ನು ಪ್ರತಿಪಾದಿಸುವುದರಿಂದ ಮಹತ್ವದ್ದೆನಿಸಿವೆ. ಶ್ರೀಧರರ ಪ್ರಕಾರ "ಸಾಹಿತ್ಯವು ಉತ್ತಮ ಜೀವನದಿಂದ ಸಂಪೂರ್ಣ ಪ್ರತ್ಯೇಕವೂ, ಸ್ವತಂತ್ರವೂ ಆದ ಅಸ್ತಿತ್ವ ಉಳ್ಳದ್ದಲ್ಲ. ಸತ್ಯವೂ, ಶಿವವೂ ಆದದ್ದಷ್ಟೇ ನಿಜಸೌಂದರ್ಯ ಉಳ್ಳದ್ದು"–(ಕಾವ್ಯಸೂತ್ರ). ಶುಚಿ, ಸದಭಿರುಚಿ ಬದುಕು–ಬರಹಗಳಲ್ಲಿ

ಅವರ ಅಪೇಕ್ಷೆಯಾಗಿತ್ತು, ಆಗ್ರಹವಾಗಿತ್ತು. ಅದಿಲ್ಲದುದು, ಅದಲ್ಲದುದು ವರ್ಜ್ಯ ಎಂಬುದವರ ಧೀರೋದಾತ್ತ ನಿಲುವು. ಶ್ರೇಷ್ಠ ಕಾವ್ಯಗಳಾದ ರಾಮಾಯಣ–ಮಹಾಭಾರತಗಳನ್ನು ಪೂಜಿಸಿದಷ್ಟೇ ಭಕ್ತಿಯಿಂದ ವಾಲ್ಮೀಕಿ–ವ್ಯಾಸರನ್ನೂ ಪೂಜಿಸುವ ಭಾರತೀಯ ಮನೋಭಾವ ಬದುಕು–ಬರಹಗಳಿಗೆ ಸಮಾನ ಮಹತ್ವ ನೀಡುತ್ತದೆ. ಶ್ರೀಧರರ ಈ ನಿಲುವು ಅವರ ಕೌಟುಂಬಿಕ, ಶೈಕ್ಷಣಿಕ ಹಾಗೂ ಅಂದಿನ ಸಾಮಾಜಿಕ ಪರಿಸರದಿಂದ ರೂಪಿತವಾಗಿದ್ದಿರಬಹುದು ಎಂದಿಟ್ಟುಕೊಂಡರೂ ಪಾಶ್ಚಾತ್ಯ ಕಾವ್ಯ, ವಿಮರ್ಶೆ, ದರ್ಶನಗಳನ್ನು ಓದಿದ ಬಳಿಕವೂ ಅವರ ಮೂಲಭೂತ ನಿಲುವು ಬದಲಾಗಲಿಲ್ಲ ಅಥವಾ ಇನ್ನಷ್ಟು ಗಟ್ಟಿಗೊಂಡಿತು – ಪಾಶ್ಚಾತ್ಯ ವಿಚಾರಧಾರೆಯ ದೋಷ, ಮಿತಿಗಳನ್ನು ಕಂಡುಕೊಂಡದ್ದರಿಂದ ಎಂಬುದು ಗಮನಾರ್ಹ. ಹೀಗಾಗಿ ಅವರ ಕೃತಿಗಳು, ಅವುಗಳಲ್ಲಿಯ ಖಚಿತ ನಿಗಮನಗಳು ಇಂದಿನ ಸಂದರ್ಭದಲ್ಲೂ ಚರ್ಚೆಗೆ ಯೋಗ್ಯವಾಗಿವೆ ಮತ್ತು ಸಮಕಾಲೀನತೆಯನ್ನು ಪಡೆದುಕೊಂಡಿವೆ. ತೆರೆದ ಮನಸ್ಸಿನ, ಪಾಶ್ಚಾತ್ಯ–ಪೌರಾತ್ಯ ಚಿಂತನೆಗಳನ್ನು ಅಭ್ಯಸಿಸಿ ಅರಗಿಸಿಕೊಂಡ, ಸಮಷ್ಟಿಕಲ್ಯಾಣದ ಕಳಕಳಿಯುಳ್ಳ ವಿದ್ವಾಂಸವೃಂದ ಶ್ರೀಧರರ ನಿಗಮನಗಳನ್ನು ಮರುಪರಿಶೀಲಿಸಬೇಕಿದೆ, ಸಮಾಜಸೌಧದ ಸುದೃಢತೆಗೆ. ಶ್ರೀಧರರ ಕೃತಿಗಳನ್ನೋದಿ ಅವರ ನಿಲುವನ್ನು ನಿಖರವಾಗಿ ಅರಿತು ಅರ್ಥೈಸಿಕೊಂಡ ಅವರ ಕುಟುಂಬಮಿತ್ರ ಮತ್ತು ಶ್ರೀಧರರ ಪುತ್ರ ಸಮಾನ ಪ್ರೊ.ಎಚ್.ಆರ್.ಅಮರನಾಥರು ತಮ್ಮ "ಪ್ರವೇಶ"ದಲ್ಲಿ ಈ ಕುರಿತು ಸವಿವರವಾಗಿ ಚರ್ಚಿಸಿದ್ದಾರೆ.

ಐದು ಸಂಪುಟಗಳಲ್ಲಿ ಶ್ರೀಧರರ ಎಲ್ಲಾ ಕೃತಿಗಳು ಆಯಾ ಪ್ರಕಾರಗಳಿಗೆ ಅನುಗುಣವಾಗಿ ಬರುತ್ತಿವೆ – ಕಾವ್ಯ, ವಿಮರ್ಶೆ, ವಿಚಾರ, ಸಂಕೀರ್ಣ, ಅನುವಾದ ಎಂಬುದಾಗಿ. ಶ್ರೀಧರರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದರೂ ಅವರದು ಮೂಲಭೂತವಾಗಿ ಸವಿಸತ್ವ. ಸಾಹಿತ್ಯಲೋಕಕ್ಕೆ ಅವರ ಪದಾರ್ಪಣವಾಗಿದ್ದೇ ಕವಿತೆಯಿಂದ. ಹೀಗಾಗಿ ಕವನಸಂಕಲವನ್ನೇ ಪ್ರಥಮ ಸಂಪುಟವಾಗಿ ತರುತ್ತಿದ್ದೇವೆ.

'ಕಾವ್ಯ' ಎಂಬ ಈ ಸಂಪುಟದಲ್ಲಿ ಈ ಮೊದಲು ಪ್ರಕಟಿತವಾದ ಕವನ ಸಂಕಲನಗಳಾದ ಮೇಘನಾದ, ಕಿನ್ನರಗೀತ, ಅಮೃತಬಿಂದು, ರಸಯಜ್ಞ, ಮುತ್ತುರತ್ನ, ನೌಕಾಗೀತ, ಕದಂಬವೈಭವ, ಕಂಟಕಾರಿ ಮಹಾಕಾವ್ಯಂ ಮತ್ತು ಜಾತವೇದ ಎಂಬ ಒಂಬತ್ತು ಕವನಸಂಕಲನಗಳ ಕವನಗಳು ಅಡಕವಾಗಿವೆ. ಪ್ರೊಫೆಸರ್ ಎಚ್.ಆರ್. ಅಮರನಾಥರ "ಪರಂಪರೆಯ ಕಾವಲುಗಾರ" ಎಂಬ ಲೇಖನ ಶ್ರೀಧರರ ಕಾವ್ಯದ ಮೂಲ ನಿಲುವನ್ನು, ಒಲವನ್ನು ಗುರುತಿಸಿ ಓದುಗರಿಗೆ ಸಮರ್ಪಕವಾಗಿ ಪರಿಚಯಿಸುತ್ತದೆ.

ಶ್ರೀಧರರ ಸಮಗ್ರಸಾಹಿತ್ಯದ ಪುನರ್ಮುದ್ರಣವೆಂಬ ಸುವಿಚಾರದ ಬೀಜವನ್ನು ನಮ್ಮೊಳಗೆ ಬಿತ್ತಿ, ಈ ಧನ್ಯ ಕಾರ್ಯಕ್ಕೆ ನಮ್ಮನ್ನು ಪ್ರೇರೇಪಿಸಿದ ಶ್ರೇಯಸ್ಸು ಶ್ರೀಧರರ ಶಿಷ್ಯೆ ಶ್ರೀಮತಿ ಡಾ, ಸುಮಿತ್ರ ಮೋತಿಲಾಲ ಹಲವಾಯಿ ಅವರಿಗೆ ಸಲ್ಲಬೇಕು. ಅವರಿಗೆ ನಮ್ಮ ಮೊದಲ ಕೃತಜ್ಞತೆಗಳು. ಇನ್ನು ಈ ಬೃಹತ್ (ಸುಮಾರು ೬೦೦೦ ಪುಟಗಳು) ಹಾಗೂ ಮಹತ್ತಾದ ಕಾರ್ಯ ಒಬ್ಬಿಬ್ಬರಿಂದ ಸಾಧ್ಯವಿಲ್ಲವೆಂಬುದು ಸುವಿದಿತ. ಇದರ ಹಿಂದೆ ಹಲವು ಹಿರಿಯರ, ಸ್ನೇಹಿತರ, ಶ್ರೀಧರರ ಶಿಷ್ಯರ, ಕುಟುಂಬ ಬಂಧುಗಳ ಸಲಹೆ, ಸಹಕಾರ, ಹಾರೈಕೆಗಳಿವೆ. ಅವರೆಲ್ಲರಿಗೂ ಹೃತ್ಪೂರ್ವಕ ನಮನಗಳು.

ಸಂಪುಟಗಳ ಪ್ರಕಟಣೆಯ ಕಾರ್ಯಭಾರವನ್ನು ಪ್ರೀತಿಯಿಂದ ಮತ್ತು ನಿಜ–ಆಸಕ್ತಿಯಿಂದ (ಇದು ಔಪಚಾರಿಕ ಮಾತಲ್ಲ) ವಹಿಸಿಕೊಂಡು ಶುದ್ಧವಾಗಿ ಮತ್ತು ಮನೋಹರವಾಗಿ ಪ್ರಕಟಿಸಿಕೊಟ್ಟ ತೇಜು ಪ್ರಕಾಶನ, ಬೆಂಗಳೂರು ಅವರಿಗೆ ತುಂಬುಹೃದಯದ ವಂದನೆಗಳು. ಅವರನ್ನು ಪರಿಚಯಿಸಿದ ಖ್ಯಾತ ಹಾಸ್ಯ ಲೇಖಕಿ, ಶ್ರೀಮತಿ ಭುವನೇಶ್ವರಿ ಹೆಗಡೆಯವರಿಗೆ ಹಾರ್ದಿಕ ನಮನಗಳು.

ಈ ಎಲ್ಲಾ ಸಂಪುಟಗಳನ್ನು ಶ್ರೀಧರರ 'ಜೀವಯಾನ'ದ ಜತೆಗಾತಿ, ಜೀವಸಖಿ ಶ್ರೀಮತಿ ರಮಾದೇವಿಯವರಿಗೆ ಅರ್ಪಿಸುತ್ತಿದ್ದೇವೆ. ೨೦೦೭, ಏಪ್ರಿಲ್ ೨೪ರಂದು ರಮಾದೇವಿಯವರ ಹಸ್ತದಿಂದಲೇ ಬಿ.ಎಚ್.ಶ್ರೀಧರ ಪ್ರಶಸ್ತಿಯನ್ನು ಖ್ಯಾತ ಕವಿ ಶ್ರೀ ಎಸ್. ಮಂಜುನಾಥರು ಸ್ವೀಕರಿಸಿದ್ದರು. ಮುಂದೆ ಮೂರೇ ತಿಂಗಳಲ್ಲಿ (ಜುಲೈ ೨೦, ೨೦೦೭) ರಮಾದೇವಿಯವರು ದೈವಾಧೀನರಾದಾಗ ಸುದ್ದಿ ತಿಳಿದು ನೊಂದ ಮಂಜುನಾಥರು ಬರೆದು ಕಳುಹಿಸಿದ್ದ ರಮಾದೇವಿಯವರ ಒಳ–ಹೊರಗನ್ನು ತದ್ವತ್ ಕಟ್ಟಿಕೊಟ್ಟ ಕವನವನ್ನೇ ಅರ್ಪಣೆಯಲ್ಲಿ ಬಳಸಿಕೊಂಡಿದ್ದೇವೆ. ಅವರಿಗೆ ನಮ್ಮ ವಿಶೇಷ ಪ್ರಣಾಮಗಳು. ಹಾಗೆಯೇ ಸಂಪುಟದ ಬೆನ್ನುಡಿಗೆ ಶ್ರೀ ಎಚ್.ಆರ್. ಅಮರನಾಥರ ಕವನವನ್ನು (ಶ್ರೀಧರರ ನಿಧನದ ನೋವು ಹಸಿಯಾಗಿದ್ದಾಗ ಬರೆದದ್ದು) ಮತ್ತು ಶ್ರೀ ಸತೀಶ್ ಎಲ್ಲಾಪುರ ಅವರ ಕಾರ್ಟೂನನ್ನು ಉಪಯೋಗಿಸಿಕೊಂಡಿದ್ದೇವೆ. ಕವಿಗೂ, ಕಲಾವಿದನಿಗೂ ಕೃತಜ್ಞತೆಗಳು.

ನಂಬಿದಂತೆ ನಡೆದ, ನುಡಿದ, ಬರೆದ ಬಿ.ಎಚ್. ಶ್ರೀಧರರ ಕೃತಿ ನಿಮ್ಮ ಮುಂದಿದೆ. ಇವುಗಳ ವಾಚನ, ಮನನ ಬುದ್ಧಿಯ ಔನ್ನತ್ಯಕ್ಕೂ, ಹೃದಯ ಸಂಸ್ಕಾರಕ್ಕೂ ಕಾರಣವಾಗಲೆಂಬುದೇ ಆಶಯ. ಶ್ರೀಧರರು ಕಾಯೇನ–ವಾಚಾ–ಮನಸಾ ನಂಬಿದ್ದ ಶ್ರೀರಮಣರ ಅನುಗ್ರಹವೇ ಎಲ್ಲ ಕಾರ್ಯಕ್ಕೂ ಕಾರಣವೆಂಬ ಸತ್ಯದ ಅರಿವು ನಮ್ಮೊಳಗೆ ಇದ್ದೇ ಇದೆ. ಅವರಲ್ಲಿ ತುಡಿಯುತ್ತಿದ್ದ ಸಮಷ್ಟಿಯ ಒಳಿತಿನ ಬಯಕೆ ಶ್ರೀಗುರುವಿಗೆ ತಲುಪಲೆಂಬುದೇ ಹರಕೆ.

– ರಾಜಶೇಖರ ಹೆಬ್ಬಾರ

ಪ್ರವೇಶ

ಪ್ರೊ.ಬಿ.ಎಚ್.ಶ್ರೀಧರರು ನನ್ನ ತಂದೆ ವಿದ್ವಾನ್ ರಾ.ಭ. ಹಾಸಣಗಿಯವರ ಮಿತ್ರರು, ಆಪ್ತರು, ನನಗೆ ತಂದೆ ಸಮಾನರು. ಇಬ್ಬರೂ ಕವಿ ದ.ರಾ.ಬೇಂದ್ರೆಯವರೊಂದಿಗೆ ಒಡನಾಟ, ವಿಶ್ವಾಸ ಹೊಂದಿದವರು. ಈ ತ್ರಿಮೂರ್ತಿಗಳು ನನ್ನ ಚಾರಿತ್ರ್ಯವನ್ನು ರೂಪಿಸಿದ ಶಿಲ್ಪಿಗಳು. ಇವರಲ್ಲಿ ಶ್ರೀಧರರದು ವಿಷ್ಣುಸ್ಥಾನ. ಮೂರ್ತಿಪೂಜೆಯೇ ಕಂದಾಚಾರವಾಗಿ, ರಾಜಕೀಯವಾಗಿ, ಮೂರ್ತಿಭಂಜನೆಯೇ ಮೌಲ್ಯವಾಗಿ ಕಂಡುಬರುವ ಕಾಲದಲ್ಲಿ ಬರೆಯುತ್ತಿದ್ದೇನೆ. ಈ ಮೂವರಲ್ಲಿ ನನ್ನ ತಂದೆಯವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ಮೂವರಿಗೂ ಸಂಸ್ಕೃತ–ಕನ್ನಡ, ಮಾರ್ಗ–ದೇಸಿಗಳ ಹಾಸುಹೊಕ್ಕಿನ ಸೂಕ್ಷ್ಮ ಜ್ಞಾನವಿತ್ತು. ನಾನು ಇವರಿಂದ ಕಲಿತದ್ದು ತರಗತಿಯಲ್ಲಿ ಅಲ್ಲ, ಅಂತೇವಾಸದ (one-to-one)ಸಂಬಂಧದಲ್ಲಿ. ಇಂದಿಗೂ ನಾನು ಅವರೊಂದಿಗೆ ಮನೋಸಂವಾದದಲ್ಲಿ ತೊಡಗಿರುತ್ತೇನೆ. ಅವರ ಗ್ರಂಥಗಳಲ್ಲಿ ಏನನ್ನೋ ಹುಡುಕುತ್ತಿರುತ್ತೇನೆ. ಅವರನ್ನೂ ನನ್ನನ್ನೂ ಅರ್ಥೈಸಿಕೊಳ್ಳಲು ಯತ್ನಿಸುತ್ತೇನೆ. ಅವರ ನಿರೀಕ್ಷೆಯಂತೆ ನಾನು ಬೆಳೆದಿದ್ದೇನೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೂ ಶ್ರೀಧರರ ಮಕ್ಕಳ ಅಪೇಕ್ಷೆಯಂತೆ ಅವರ ಸಮಗ್ರ ಸಾಹಿತ್ಯ ಸಂಪುಟಕ್ಕೆ ಒಂದು ಪ್ರಸ್ತಾವನೆ ಬರೆಯಲು ಅಳುಕುತ್ತಲೇ ಒಪ್ಪಿಕೊಂಡಿದ್ದೇನೆ. ಅವರ ಸಾವಿರಾರು ಪುಟಗಳ, ಹಲವು ಜ್ಞಾನ ಕ್ಷೇತ್ರಗಳ ಶಾಸ್ತ್ರ ಸಾಹಿತ್ಯವನ್ನೂ, ಸೃಜನಶೀಲ ಸಾಹಿತ್ಯ–ವಿಮರ್ಶೆಗಳನ್ನೂ ಹಿಂಡಿ ಭಟ್ಟಿ ಇಳಿಸಿ ಐದಾರು ಪುಟಗಳಲ್ಲಿ ಸಾರಾಂಶ ಕೊಡುವ ಅಸಾಧ್ಯ ಪ್ರಯತ್ನಕ್ಕೆ ಕೈ ಹಾಕುವುದಿಲ್ಲ. ಅವರ ಬರಹಗಳನ್ನು ಗಮನಿಸಬೇಕಾದ, ಅವು ನಮಗೆ ಪ್ರಸ್ತುತವಾಗುವ ಒಂದು ದಿಕ್ಸೂಚಿಯನ್ನು ಮಾತ್ರ ನೀಡಬಯಸುತ್ತೇನೆ.

ಶ್ರೀಧರರ ಬರಹಗಳಲ್ಲಿ ಎದ್ದು ಕಾಣುವ ಒಂದು ಮುಖ್ಯ ಅಂಶವೆಂದರೆ ಭಾರತೀಯತೆಯಲ್ಲಿ ಅಚಲ ವಿಶ್ವಾಸ ಮತ್ತು ಅದರ ಅಧಿಕಾರಯುತ ಪ್ರತಿಪಾದನೆ. ಮೂಲಭೂತವಾದ ಮತ್ತು ಪಾಶ್ಚಾತ್ಯೀಕರಣದ ಅತಿರೇಕಗಳ ನಡುವೆ ಅವರು ಒಂದು ಮಧ್ಯಮ ಮಾರ್ಗ ಕಂಡುಕೊಂಡಿದ್ದರು. ಭಾರತವೆಂಬುದು ಅವರಿಗೆ ಕೇವಲ ಭೌಗೋಳಿಕ/ರಾಜಕೀಯ ನಕಾಶೆ ಆಗಿರಲಿಲ್ಲ, ಒಂದು ಜೀವನ ದರ್ಶನವಾಗಿತ್ತು. ಅವರ ಸೂತ್ರತ್ರಯಗಳಲ್ಲಿ (ಜ್ಞಾನಸೂತ್ರ, ಕಾವ್ಯಸೂತ್ರ, ರಾಷ್ಟ್ರಸೂತ್ರ) ಇದು ಮಂಡಿಸಲ್ಪಟ್ಟಿದೆ. ಇದರ ಹಿನ್ನೆಲೆಯಲ್ಲಿ ಪ್ರಾಚೀನ ಭಾರತದ ಮೂವರು ಸೂತ್ರಕಾರರಿದ್ದಾರೆ– ಪಾಣಿನಿ, ಭರತ ಮತ್ತು ವ್ಯಾಸ ಇವರ ಸಾರ್ವಕಾಲಿಕ ಶ್ರೇಷ್ಠತೆ, ಪ್ರಸ್ತುತತೆಗಳ ಬಗ್ಗೆ ಅವರಿಗೆ

ಯಾವುದೇ ಅನುಮಾನವಿರಲಿಲ್ಲ. ಪಾಣಿನಿಯನ್ನು ಸ್ಮರಿಸದ ಧ್ವನಿಶಾಸ್ತ್ರ, ಭಾಷಾಶಾಸ್ತ್ರ; ಭರತನನ್ನು ಮೆಚ್ಚದ ಸಾಹಿತ್ಯ ಸಿದ್ಧಾಂತ, ವಿಮರ್ಶೆ; ವ್ಯಾಸರ ಶಾಂತಿಪರ್ವಕ್ಕೆ ಮನ್ನಣೆ ನೀಡದ ರಾಜ್ಯಶಾಸ್ತ್ರ – ಇವು ಅವರಿಗೆ ದ್ರೋಹವಾಗಿ, ವಿದ್ರೋಹವಾಗಿ ಕಾಣುತ್ತಿದ್ದವು ವ್ಯಾಸರ ಬ್ರಹ್ಮಸೂತ್ರಕ್ಕೆ ಶಾಂಕರ ಭಾಷ್ಯದ ಬಗ್ಗೆ ಅವರಿಗೆ ವಿಶೇಷ ಒಲವಿದ್ದಿತಾದರೂ ಅದ್ವೈತ–ದ್ವೈತ–ವಿಶಿಷ್ಟಾದ್ವೈತಗಳ ಅಂತಃಕಲಹದಲ್ಲಿ ಅವರು ಪಾಲ್ಗೊಂಡಿದ್ದು ನನಗಂತೂ ಕಂಡುಬಂದಿಲ್ಲ. ಭರತನ ನಾಟ್ಯಶಾಸ್ತ್ರ, ರಸಸಿದ್ಧಾಂತಗಳಲ್ಲಿ ನಾಟಕ–ಕಾವ್ಯ–ಸಾಹಿತ್ಯ–ಕಲಾ ಸಾಧಕರು ಮಾತ್ರವಲ್ಲ, ಮನೋವಿಜ್ಞಾನಿಗಳೂ ಆಸಕ್ತರಾಗಬೇಕು ಎಂಬುದು ಅವರ ಅಪೇಕ್ಷೆಯಾಗಿತ್ತು. ಅವರು ಮೆಚ್ಚಿದ ಚಾಣಕ್ಯ ಗದ್ದುಗೆಯ ಗುರಿಯಾಗಿ ಏನನ್ನೂ ಮಾಡುವ ದಾರಿ ಸರಿ ಎನ್ನುವ ಮೆಕೆವಿಲಿ ಆಗಿರಲಿಲ್ಲ; ಚಂದ್ರಗುಪ್ತನ ಸತ್ವವನ್ನು ಬೀಜರೂಪದಲ್ಲಿ ಗುರುತಿಸುವ, ಅಮಾತ್ಯ ರಾಕ್ಷಸನನ್ನು ಆಳದಲ್ಲಿ ಗೌರವಿಸುವ, ಅಂತರಂಗದಲ್ಲಿ ಸನ್ಯಾಸಿಯಾಗಿರುವ ಚಾಣಕ್ಯನ ನೀತಿ ಬೇಕೆನ್ನುತ್ತಿದ್ದರು. ನೀತಿಪ್ರಧಾನ ಸಮಾಜ, ಸರ್ವಧರ್ಮ ಸಾಮರಸ್ಯ, ಭ್ರಷ್ಟಾಚಾರರಹಿತ ಆಡಳಿತ ವ್ಯವಸ್ಥೆ ಅವರ ಕಾಳಜಿಯ ವಿಷಯಗಳಾಗಿದ್ದವು. ಆತ್ಮಪೌರುಷವಿಲ್ಲದ ನಾಡು ಪರಕೀಯರ ಪಾಲಾಗುವುದು ಎಲ್ಲ ರಾಷ್ಟ್ರಗಳ ಹಣೆಬರಹವೆಂದು ಇತಿಹಾಸ ಸಾರಿಸಾರಿ ಹೇಳುತ್ತದೆ. ಮನೆಮುರುಕರನ್ನು ಹೊರ ಹಾಕಬೇಕಾಗುತ್ತದೆ, ಸಮಯಸಾಧಕರ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ. ನಮ್ಮೊಳಗೆ ಜಗಳವಾದರೆ ನಾವು (ಪಾಂಡವರು) ಐದು ಜನ, ಅವರು (ಕೌರವರು) ನೂರು ಜನ; ಹೊರಗಿನವರೊಂದಿಗೆ ಜಗಳ ಬಂದರೆ ನಾವು ನೂರೈದು ಜನ ಎಂಬ ಧರ್ಮರಾಯನ ಭ್ರಾತೃತ್ವದ ರಾಜನೀತಿ ಶ್ರೀಧರರಿಗೆ ಮಾನ್ಯವಿತ್ತು.

ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಚಿಂತಕರಲ್ಲಿ ಶ್ರೀಧರರ ಹೃದಯ ಗೆದ್ದವರು ಇಬ್ಬರು: ವಿಜ್ಞಾನಿಗಳಲ್ಲಿ ಐನ್‌ಸ್ಟೀನ್ ಮತ್ತು ಸಾಹಿತಿಗಳಲ್ಲಿ ಟಿ.ಎಸ್.ಎಲಿಯಟ್. ಅವರ ವಿಶೇಷ ಆಗ್ರಹವಿರುವುದು ಮಾರ್ಕ್ಸ್ ಮತ್ತು ಫ್ರಾಯ್ಡ್ ಕುರಿತು. ಮಾರ್ಕ್ಸ್‌ನದು ಅರ್ಥಮೂಲದ ದೃಷ್ಟಿ, ಫ್ರಾಯ್ಡನದು ಕಾಮಮೂಲದ ದೃಷ್ಟಿ. ಇವೆರಡೂ ವ್ಯಕ್ತಿಯ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಲ್ಲ ಎಂಬುದು ಶ್ರೀಧರರ ಖಚಿತ ನಿಲುವು. ಪಂಪನ ಆದಿಪುರಾಣದಲ್ಲಿ ಭರತನ ಸ್ವಗತವಾಗಿ ಬರುವ ಒಂದು ಪದ್ಯದೆಡೆ ಓದುಗರ ಗಮನ ಸೆಳೆಯಬಯಸುತ್ತೇನೆ.

ಧರ್ಮಂ ಪ್ರಧಾನಂ, ಅರ್ಥಂ

ಧರ್ಮಾಪ್ತಿಪ ಫಲಂ, ಅದರ್ಕೆ ರಸಮದು ಕಾಮಂ. (೧೦–೫೦)

ಧರ್ಮವು ಮೂಲ, ಅರ್ಥವು ಧರ್ಮವೃಕ್ಷದ ಹಣ್ಣು, ಅದರ ರಸವೇ ಕಾಮ. ಇದು ಜೀವನ ಮೌಲ್ಯಗಳ ಆದ್ಯತಾ ಮಾರ್ಗಸೂಚಿ. ಈ ಬಗ್ಗೆ ಯಾವುದೇ ಭರತರ ಅಥವಾ ಬಾಹುಬಲಿಗಳ ಆಕ್ಷೇಪವಿರಲಾರದು ಎಂದು ಭಾವಿಸುತ್ತೇನೆ.

ಶ್ರೀಧರರು ಬರೆಯಲಾರಂಭಿಸಿದಾಗ ನವ್ಯಪಂಥ ಚಿಗುರೊಡೆಯುತ್ತಿತ್ತು. ಅಡಿಗರು ಶ್ರೀಧರರ ಸಮವಯಸ್ಕರು, ಸಂಬಂಧಿಗಳೂ ಕೂಡ. ಶ್ರೀಧರರು ನವ್ಯ ಪಂಥದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಅವರು ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, ಹೆಚ್ಚಿನ ನವ್ಯರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದುದು ಗಮನಾರ್ಹ ಸಂಗತಿ. (ಯುಗಧರ್ಮ, ವಯೋಧರ್ಮ, ಮನೋಧರ್ಮ ಮತ್ತು ವೃತ್ತಿಧರ್ಮಗಳ ಸಂಬಂಧವನ್ನು ಬಿಡಿಸಿ ವಿವರಿಸಿ ಹೇಳುವುದು ನನಗೆ ಸದ್ಯಕ್ಕಂತೂ ಸಾಧ್ಯವಿಲ್ಲ.) ವಿ.ಕೃ.ಗೋಕಾಕರ ನವ್ಯಕ್ಕೆ ಶ್ರೀಧರರ ಆಕ್ಷೇಪವಿರಲಿಲ್ಲ. ಉಳಿದವರ ಸಾಹಿತ್ಯ ಕೇವಲ 'ಸಂಕರ', 'ಸಂಸೃಷ್ಟಿ' ಅಲಂಕಾರಗಳ ಉದಾಹರಣೆ ಎಂದು ಒಂದೇ ವಾಕ್ಯದಲ್ಲಿ ನಿರ್ಣಯ ಹೇಳುತ್ತಿದ್ದರು. ದೇವರನ್ನು ತಲೆಹಿಡುಕನನ್ನಾಗಿ ಗ್ರಹಿಸಿ ಇಂತಿಂಥ ಹೆಣ್ಣುಗಳ ತನ್ನ ಬಳಿ ಕಳಿಸು ಎಂದು ಬೇಡುವ ಅಡಿಗರ 'ಪ್ರಾರ್ಥನೆ'ಯಂತೂ ವಿಕೃತಿಯ ಪರಮಾವಧಿ ಎನ್ನುತ್ತಿದ್ದರು. ಶಿಲ್ಪಶಾಸ್ತ್ರದಿಂದ ಹಿಡಿದು ಮಕ್ಕಳ ಸಾಹಿತ್ಯದವರೆಗಿನ ಅವರ ಆಸಕ್ತಿ ಮತ್ತು ಕೃಷಿ ನವ್ಯ ಪಾಳೆಯದಲ್ಲಿ ಕಂಡುಬರುವುದಿಲ್ಲ. ನವ್ಯರದೇನಿದ್ದರೂ ಬರಿ ಕಾವ್ಯಶಿಲ್ಪದ ಕಾಳಜಿ. ನವ್ಯರಲ್ಲಿ ಕಾಣದ ವಾತ್ಸಲ್ಯ ಭಾವ ಮತ್ತು ಹಾಸ್ಯ ಪ್ರಜ್ಞೆ ಶ್ರೀಧರರ ಕಾವ್ಯದಲ್ಲಿವೆ. ಹಲವು ಬಗೆಯ ಛಂದಸ್ಸುಗಳಲ್ಲಿ ಅವರ ಪ್ರಭುತ್ವ ಯಕ್ಷಗಾನ ಪ್ರಸಂಗಗಳ ದೇಸಿ ಮತ್ತು ಪಂಪಾದಿ ಮಾರ್ಗಕಾವ್ಯಗಳಿಂದ ಹೀರಿಕೊಂಡದ್ದಾಗಿದೆ. ಯಕ್ಷಗಾನದ ವೇಷ ಕಟ್ಟಿ ನಿಲ್ಲಿಸಿದರೆ ತಾನು ಕುಣಿಯಲಾರೆನಾದರೂ ಅರ್ಥ ಹೇಳಬಲ್ಲೆ ಎಂದು ಅವರು ಹೇಳಿದ್ದು ನನಗೆ ನೆನಪಿದೆ.

ಕನ್ನಡವು ನನ್ನ ತಾಯಿನುಡಿ, ಸಂಸ್ಕೃತವು ತಂದೆನುಡಿ ಎಂದು ಘೋಷಿಸಿದ ಶ್ರೀಧರರು ಕನ್ನಡ–ಸಂಸ್ಕೃತಗಳಿಗೆ ಬಾಂಧವ್ಯವಿದೆ, ದಾಯಾದಿತನವಿಲ್ಲ ಎಂದು ಸಾಧಿಸಿದ್ದಾರೆ. ತಾಯಿ–ತಂದೆಯರ ನಡುವೆ ವಿರಸವಾದಾಗ ಮಕ್ಕಳೇನು ಮಾಡಬೇಕೆಂಬುದು ಯಕ್ಷಪ್ರಶ್ನೆ. ವಾಗರ್ಥ ದಾಂಪತ್ಯದ ತಾಯಿತಂದೆ ಎಲ್ಲರಿಗೂ ಸಿಗುವುದಿಲ್ಲ. ತಾಯಿತಂದೆಯರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಯಾವ ಮಕ್ಕಳಿಗೂ ಇರುವುದಿಲ್ಲ. ಹೆಚ್ಚೆಂದರೆ ರಾಮ–ಸೀತೆಯರ ಬಿಂಬವನ್ನು ಹೃದಯದಲ್ಲಿರಿಸಿಕೊಂಡು ಅವರು ಒಂದಾಗಲು ಶ್ರಮಿಸುವ ಹನುಮರಾಗಬಹುದು. ಸಂಸ್ಕೃತ=ಬ್ರಾಹ್ಮಣಿಕೆ=ಪುರೋಹಿತಶಾಹಿ=ಶೋಷಣೆ ಎಂಬ ಅತಾರ್ಕಿಕ ಸಮೀಕರಣವನ್ನಿಟ್ಟುಕೊಂಡು ಇಂಗ್ಲೀಷ್=ಉದ್ಧಾರ ಎಂಬ ನಿರ್ಣಯಕ್ಕೆ ಜಿಗಿಯುವವರ ಬಗ್ಗೆ ಶ್ರೀಧರರಿಗೆ ಯಾವ ಗೌರವವೂ ಇರಲಿಲ್ಲ. ಆಯಾ ಪ್ರಾಧ್ಯಾಪಕರು ತಮ್ಮದು ಅಂತರರಾಷ್ಟ್ರೀಯ ಮಟ್ಟ, ರಾಷ್ಟ್ರಮಟ್ಟ, ಪ್ರಾದೇಶಿಕ ಮಟ್ಟ ಎಂದು ಮೇಲರಿಮೆಯನ್ನೋ, ಕೀಳರಿಮೆಯನ್ನೋ ಬೆಳೆಸಿಕೊಳ್ಳುವುದು ಆರೋಗ್ಯದ ಲಕ್ಷಣವಲ್ಲ. ಎಂಥ ವಿಶ್ವಮಾನವನಾದರೂ ನಿಂತಷ್ಟು ನೆಲ ಪ್ರಾದೇಶಿಕವಾಗಿರುತ್ತದೆ ಎಂಬ ಅರಿವು ಕುವೆಂಪು

ಅವರಿಗೂ ಇತ್ತು. "ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿತಿ/ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ" ಎಂಬುದು ಶ್ರೀಧರರ ಒಂದು ಕವಿತೆಯ ಸಾಲು.

ಅವರ ಕನ್ನಡ ಪ್ರೀತಿ ಉಕ್ಕಿ ಹರಿಯುವುದು ಕದಂಬರ, ಅದರಲ್ಲೂ ಮಯೂರಶರ್ಮನ ಬಗ್ಗೆ ಬರೆಯುವಾಗ. ಬನವಾಸಿಯ ಕದಂಬರು (ಇತಿಹಾಸ ಸಂಶೋಧನೆ), ನೌಕಾಗೀತ (ಖಂಡಕಾವ್ಯ), ಕದಂಬ ವೈಭವ ('ರಘುವಂಶ' ಮಾದರಿಯ ಕಥನಕಾವ್ಯ), ಮಯೂರಶರ್ಮ (ಚಾರಿತ್ರಿಕ ನಾಟಕ)– ಎಲ್ಲದರ ಆಶಯ ಒಂದೇ: ರಾಷ್ಟ್ರ ಕಟ್ಟುವ ಕನಸು. ಸಮೃದ್ಧ, ಸ್ಥಿರ, ಸಮರ್ಥ ರಾಜ್ಯ ವ್ಯವಸ್ಥೆಯಲ್ಲಿ ವೇದಮಂತ್ರಗಳಿಂದ ಸ್ಫೂರ್ತಿ ಪಡೆದು ಬೇಡರು, ಬೆಸ್ತರವರೆಗೆ ಎಲ್ಲರ ಸಹಕಾರದೊಂದಿಗೆ ನಿರ್ಮಿಸಿದ ಸಕಾರಾತ್ಮಕ ಮಾದರಿಯ ಚಿತ್ರಣವಿದೆ. ಮಯೂರಶರ್ಮನ ವ್ಯಕ್ತಿತ್ವಕ್ಕೆ ಪರಶುರಾಮನ ಪುರಾಣಕಥೆಯ ಪ್ರೇರಣೆ ಇದೆಯಾದರೂ ಶ್ರೀಧರರಿಗೆ ಪುರಾಣ–ಇತಿಹಾಸಗಳ ವ್ಯತ್ಯಾಸದ ಸ್ಪಷ್ಟತೆ ಇದೆ. ಧರ್ಮ, ವಾಣಿಜ್ಯ, ವಿಜ್ಞಾನಗಳ ಸ್ಥಾನದ ಬಗ್ಗೆಯೂ ಕಾಳಜಿಯದೆ.

ಪರಶುರಾಮನ ಬಗ್ಗೆ ಸ್ವಲ್ಪ ಹೆಚ್ಚು ಬರೆಯಬೇಕೆನಿಸುತ್ತದೆ. ಸಂಪ್ರದಾಯ ಇವನನ್ನು ಚಿರಂಜೀವಿ ಎಂದೂ, ವಿಷ್ಣುವಿನ ಅವತಾರವೆಂದೂ ಪರಿಗಣಿಸುತ್ತದೆ. ಇವನ ತಂದೆ ಜಮದಗ್ನಿಯನ್ನು ಒಬ್ಬ ಗೋತ್ರ ಪ್ರವರ್ತಕನೆಂದು ವೈದಿಕ ಸಂಸ್ಕೃತಿ ಒಪ್ಪಿಕೊಳ್ಳುತ್ತದೆ. ಇವನ ತಾಯಿ ರೇಣುಕೆ=ಎಲ್ಲಮ್ಮ ಎಂಬ ನಂಬಿಕೆ ಕೆಲವು ತಳಸಮುದಾಯಗಳ ಜಾನಪದ ಆಚರಣೆಗಳಲ್ಲಿ ಕಂಡುಬರುತ್ತದೆ. (ಇದು ಬೆತ್ತಲೆ ಸೇವೆಯ ಸಮರ್ಥನೆಯಲ್ಲ). 'ರೇಣುಕಾ ಮಹಾತ್ಮೆ' ಜನಪ್ರಿಯ ಯಕ್ಷಗಾನ ಪ್ರಸಂಗವೂ ಹೌದು. ಶ್ರೀಧರರ ಕದಂಬ ವೈಭವದ ಮೊದಲ ಸಾಲಿನಲ್ಲೇ ಭಾರ್ಗವರಾಮ ಕಾಣಿಸಿಕೊಳ್ಳುತ್ತಾನೆ. ಮಯೂರಶರ್ಮ ನಾಟಕದಲ್ಲಿ ಬ್ರಾಹ್ಮಣ ವಟು ಮಯೂರಶರ್ಮ ಪಲ್ಲವ ದೊರೆ ಶಿವಸ್ಕಂದನಿಂದ ಅವಮಾನಿತನಾದಾಗ "ಬ್ರಾಹ್ಮಣನಾದ ಪರಶುರಾಮ ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ಸಮೂಲನಾಶ ಮಾಡಿದಂತೆ ನಿನ್ನ ಗರ್ವವನ್ನು ಹಿಂಡದಿದ್ದಲ್ಲಿ ನಾನು ಮಯೂರಶರ್ಮನಲ್ಲ" ಎಂದು ಪ್ರತಿಜ್ಞೆ ಮಾಡುತ್ತಾನೆ. ಇತರ ಕೃತಿಗಳಲ್ಲೂ 'ಇದಂ ಬ್ರಾಹಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ" (ಪರಶುರಾಮ) ಮತ್ತು 'ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ' (ವಿಶ್ವಾಮಿತ್ರ) ಎಂಬ ಮಾತುಗಳು ಕಾಣಿಸಿಕೊಂಡಿವೆ. ಕಾವ್ಯಸೂತ್ರದಲ್ಲಿ "ಧರ್ಮಕ್ಷೇತ್ರಕ್ಕೆ ಕುರುಕ್ಷೇತ್ರದ ಕಳೆ ಬಂದಿದೆ" ಎಂದಿದ್ದಾರೆ ಬೇಂದ್ರೆ ಶ್ರೀಧರರ ಗದ್ಯ ಶೈಲಿಯಲ್ಲಿ ಕ್ಷಾತ್ರ ತೇಜಸ್ಸಿದೆ (ಆ ಪದ ಬಳಸಬಹುದಾದರೆ).

ಇಂದಿನ ಸಾಹಿತ್ಯಿಕ ಪರಿಸರದಲ್ಲಿ ಪರಶುರಾಮನ ಬಗ್ಗೆ ಎರಡು ಆಕ್ಷೇಪಗಳಿವೆ: ಒಂದು ಮಾತೃಹಂತಕ ಎಂದು, ಇನ್ನೊಂದು ಜನಾಂಗದ್ವೇಷಿ ಎಂದು. ಮಾತೃಹಂತಕ

ಎನ್ನುವವರು ತಾಯಿಗೆ ಮತ್ತೆ ಜೀವ ತಂದುದನ್ನು ಒಪ್ಪಿಕೊಳ್ಳುವುದಿಲ್ಲ. ಅದು ಹೇಗೆ ಸಾಧ್ಯ ಎಂದು ಭೌತವಾದಿ, ವಿಚಾರವಾದಿ ನೆಲೆಯಿಂದ ಪ್ರಶ್ನಿಸುತ್ತಾರೆ. ಪುರಾಣ ಕಥೆಗಳಲ್ಲಿ ಎಲ್ಲವೂ ಸಾಧ್ಯ, ಸಮಗ್ರವಾಗಿ ಓದಿ ಎನ್ನಬೇಕಾಗುತ್ತದೆ. ಪುರಾಣದ ಪಠ್ಯ ಸಾಹಿತ್ಯಿಕ ಪಠ್ಯದಂತಲ್ಲ; ಹಲವು ಆವೃತ್ತಿಗಳಿರುವುದು ಸಹಜ. "ತಾಯೀ ತಲೀ ಕಡದಾ/ಮತ್ತ ಮಾತೃಭಕ್ತನಾಗಿ ಉಳದಾ" ಎಂದಿದ್ದಾರೆ ಬೇಂದ್ರೆ. (ತಾ ಲೆಕ್ಕಣಿಕಿ ತಾ ದೌತಿ, ಪುಟ ೫೮). ಇನ್ನು ಜನಾಂಗ ದ್ವೇಷದ ಬಗ್ಗೆ. ವಶಿಷ್ಠ–ವಿಶ್ವಾಮಿತ್ರರ ಸಂಘರ್ಷ ವೈಯಕ್ತಿಕವೆಂದೂ, ಭಾರ್ಗವ ಬ್ರಾಹ್ಮಣರು ಮತ್ತು ಹೈಹೆಯ ಕ್ಷತ್ರಿಯರದು ಜನಾಂಗ/ವರ್ಗ/ಸಮುದಾಯಗಳ ಸಂಘರ್ಷವೆಂದೂ ವಿಶ್ಲೇಷಿಸಿದವರಿದ್ದಾರೆ. 'ಸಂಘರ್ಷ' ಪದ ಸ್ವಲ್ಪ ವಸ್ತುನಿಷ್ಠವೆನಿಸಿದರೆ 'ದ್ವೇಷ'ವು ಮನಃಕಷಾಯವನ್ನು ಸೂಚಿಸುತ್ತದೆ. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಹಾಡಿನಲ್ಲಿ 'ರಾಜನ್ಯರಿಪು ಪರಶುರಾಮನಮ್ಮನ ನಾಡು' ಎಂಬ ಸಾಲಿನ ಬಗ್ಗೆ ಎದ್ದ ವಿವಾದವೂ ಇದೇ ನೆಲೆಯದು. ವಿನಾಯಕರ ಭಾರತ ಸಿಂಧುರಶ್ಮಿಯಲ್ಲಿ ವಿಶ್ವಾಮಿತ್ರರೆದುರು ಪರಶುರಾಮ ತನ್ನ ಸ್ವಭಾವದೋಷ ಒಪ್ಪಿಕೊಳ್ಳುತ್ತಾನೆ – "ಅಂಕಿತದೊಳಿಲ್ಲ ಹಲವಾರು ಮರ್ತ್ಯಾಂಶಗಳು:/ ಪ್ರಶಂಸೆಯ ಪ್ರೀತಿ, ಮುಂಗೋಪ, ಹಿತ್ತಾಳೆ ಕಿವಿ" (ಸಂಪುಟ ೨, ಪುಟ ೭೧೩). ಈ ಲೇಖನದ ಚಿಂತನೆ ಮಾಡುತ್ತಿರುವಾಗ ನಾನೊಂದು ಚುಟುಕ ಬರೆದೆ.

ಪರಶುರಾಮನ ಶಪಥ ಕ್ಷತ್ರಿಯರ ಕುಲನಾಶ
ಜನಕ ದಶರಥರೆಂತೊ ಉಳಿದರಲ್ಲ ।
ಇನ್ನೊಂದು ಶಪಥ ಕ್ಷತ್ರಿಯಗೆ ಕಲಿಸುವುದಿಲ್ಲ
ಭೀಷ್ಮನಿವನಿಂದಲೇ ಕಲಿತನಲ್ಲ ॥

ಈ ಚುಟುಕ ಮೂಡಿದ್ದು ನನ್ನ ಸ್ಪಷ್ಟತೆಗೇ ಹೊರತು ಯಾರದೋ ಕಾಮಾಲೆ ರೋಗಕ್ಕೆ ಔಷಧಿಯಾಗಿ ಅಲ್ಲ.

ಆಫ್ರಿಕಾ ಬಗ್ಗೆ ಜೊಸೆಫ್ ಕಾನ್ರಾಡನ ಕತ್ತಲೆಯ ಹೃದಯ (Heart of Darkness, 1899) ಕಾದಂಬರಿ ಯುರೋಪಿಯನ್ನರ 'ಹೃದಯದ ಕತ್ತಲೆ' ಎಂದು ವಾದಿಸುವ ಆಫ್ರಿಕಾದ ಲೇಖಕ ಚಿನುವಾ ಅಛಬೆ ಆ ಕಾದಂಬರಿಯಲ್ಲಿ ಜನಾಂಗವಾದದ ಕುರುಹುಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾನೆ. ಅವನ ಲೇಖನದ (೧೯೭೭) ಕೊನೆಯಲ್ಲಿ ಒಂದು ವಾಕ್ಯ ಬರುತ್ತದೆ: "ಕಾನ್ರಾಡ್ ಸಾಮ್ರಾಜ್ಯವಾದೀ ಶೋಷಣೆಯ ಕೇಡನ್ನು ಕಂಡನು, ಖಂಡಿಸಿದನು, ಆದರೆ ಅದು ತನ್ನ ಕಬ್ಬಿಣದ ಹಲ್ಲುಗಳನ್ನು ಮಸೆದುಕೊಂಡ ಜನಾಂಗವಾದದ ಬಗ್ಗೆ ಅವನಿಗೆ ಗೊತ್ತಿಲ್ಲದಿರುವುದು ವಿಚಿತ್ರವಾಗಿದೆ." ಅರ್ಧವಾಕ್ಯದಲ್ಲಿ ಸಾಧನೆ ಗುರುತಿಸಿ, ಇನ್ನರ್ಧದಲ್ಲಿ ಇತಿಮಿತಿ ತೋರಿದ ಅಛಬೆ

ನನಗೆ ಒಪ್ಪಿಗೆ. ತ್ರಿಮೂರ್ತಿಗಳನ್ನಾಗಲೀ, ಅವತಾರಗಳನ್ನಾಗಲೀ ಒಪ್ಪದ ಬುದ್ಧನ ಹೃದಯ ಅಮಾಯಕರಿಗೆ ಕರುಣೆ ಹರಿಸುವಾಗ ಬ್ರಾಹ್ಮಣ ಅಬ್ರಾಹ್ಮಣ ಭೇದ ನೋಡುವುದಿಲ್ಲ ಎಂಬ ನಂಬಿಕೆ ನನಗಿದೆ. ಹೃದಯಕ್ಕೆ ಹೃದಯವೇ ಸಾಕ್ಷಿ, ಬೇರೆ ಇಲ್ಲ ಪ್ರಾಕ್ಸಿ (proxy). ವಾರಾನ್ನದ ವಿದ್ಯಾರ್ಥಿಯಾಗಿ, ಗುಮಾಸ್ತರಾಗಿ, ಚಾಕರಿ – ನೌಕರಿಗಳಲ್ಲಿ, ಸಂಸಾರಿಕೆಯ ತಪಸ್ಸಿನಲ್ಲಿ ಶ್ರೀಧರರು ಎಲ್ಲೋ ಅನುಭವಿಸಿದ ಅವಮಾನ, ನಂಬಿಕೆ ದ್ರೋಹಗಳು ಛಲ, ನಿಷ್ಠುರತೆಯಾಗಿ ರೂಪುಗೊಂಡಿವೆ ಎಂದು ನನ್ನ ಅನಿಸಿಕೆ.

ಶ್ರೀಧರರ ಸ್ವಭಾವ, ಸಂಬಂಧಗಳನ್ನು ಎತ್ತಿ ತೋರುವ ಒಂದೆರಡು ನಿದರ್ಶನಗಳನ್ನು ನೀಡಬಹುದು. ಬೇಂದ್ರೆಯವರ ಕನ್ನಡ ಮೇಘದೂತದ ಮೊದಲನೇ ಪದ್ಯದಲ್ಲಿ 'ಶಪಿತ ವರುಷವನು' ಎಂಬ ಪದಪ್ರಯೋಗವಿದ್ದು 'ಶಪಿತ' ಎಂಬುದು ಅಪಾಣಿನೀಯ, 'ಶಪ್ತ' ಎಂದಾಗಬೇಕು ಎಂದು ಹೇಳಿದರಂತೆ. ಶಿವರಾಮ ಕಾರಂತರ ಕಾದಂಬರಿಯೊಂದರಲ್ಲಿ 'ಏನಕೇನ ಪ್ರಕಾರೇಣ' ಎಂಬ ಪದವಿದ್ದು 'ಏನಕೇನ' ತಪ್ಪು, 'ಯೇನ ಕೇನ' ಎಂದಾಗಬೇಕು ಎಂದರಂತೆ. ಆ ಹಿರಿಯರಿಬ್ಬರೂ 'ಬಾಲಾದಪಿ ಸುಭಾಷಿತಂ' ಎಂದು ಶ್ರೀಧರರನ್ನು ಒಪ್ಪಿಕೊಂಡರಂತೆ. ಇವರ ಧೈರ್ಯ, ಅವರ ಔದಾರ್ಯ ಎರಡೂ ಮೆಚ್ಚಬೇಕಾದ್ದೇ. ಈ ಘಟನೆಗಳಿಂದ ಅವರ ಸಂಬಂಧಗಳು ಹಾಳಾಗಲಿಲ್ಲ ಎಂಬುದು ಮುಖ್ಯ. ಲಿಪಿದೋಷ, ವ್ಯಾಕರಣ ದೋಷಗಳೇನೂ ನೈತಿಕ ಪತನವಲ್ಲ.

ಶ್ರೀಧರರ ಹಸ್ತಪ್ರತಿ ರೂಪದಲ್ಲಿದ್ದ ಓಂ ಸಾಧು ಅವರ ರಮಣಮಾರ್ಗ ಮತ್ತು ಅರವಿಂದರ ವೇದರಹಸ್ಯ ಕನ್ನಡ ಭಾಷಾಂತರಗಳು ಈ ಸಮಗ್ರ ಸಾಹಿತ್ಯ ಸಂಪುಟದಲ್ಲಿ ಪ್ರಥಮ ಬಾರಿಗೆ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಶ್ರೀಧರರು ಹೇಳಿರುವಂತೆ "ಶಂಕರಾರ್ಥ ವಿವರಣೆ ರಮಣರಿಂದಾಗಿದೆ; ರಮಣಾರ್ಥ ವಿವರಣೆ ಅರವಿಂದರಿಂದಾಗಿದೆ. ಅರವಿಂದಾರ್ಥ ವಿವರಣೆಯು ಶಾಸ್ತ್ರೇತರ ಮಾರ್ಗದ ಮೂಲಕ ಬೇಂದ್ರೆಯವರಿಂದಾಗಿದೆ." ವೇದಗಳಿಗೆ ಸಾಯಣರ ಯಾಜ್ಞಿಕ ಅರ್ಥ ಮತ್ತು ಪಾಶ್ಚಾತ್ಯರ ಸಾಮಾಜಿಕ ಅರ್ಥ ತನಗೆ ಗ್ರಾಹ್ಯವಿಲ್ಲ. ಅರವಿಂದರ ಸಾಂಕೇತಿಕ ಅರ್ಥವೇ ಸಮ್ಮತ ಎನ್ನುತ್ತಿದ್ದರವರು. ಅದ್ವೈತಿಗಳು ಭೋಳೆ ಸ್ವಭಾವದವರು, ಸುಲಭವಾಗಿ ಮೋಸ ಹೋಗುತ್ತಾರೆ ಎನ್ನುವ ವ್ಯಾವಹಾರಿಕ ಜಾಣ ಸಾಹಿತಿಗಳಿದ್ದಾರೆ. ರಶಿಯಾದ ಕವಿ ಪುಷ್ಕಿನ್ ಹೇಳಿದಂತೆ ಪೆದ್ದು ಹುಡುಗಿಯೊಬ್ಬಳು ತನ್ನ ಭೋಳೇತನದಿಂದಾಗಿ ಪ್ರಿಯಕರನನ್ನು ಕಳೆದುಕೊಂಡರೆ ಅದು ಹಾಡಾಗಬಲ್ಲದು, ಲೋಭಿಯಾದ ಜಿಪುಣ ಅತ್ಯಾಸೆಯಿಂದ ಹಣ ಕಳೆದುಕೊಂಡರೆ ಅದು ಕೇವಲ ವಿಡಂಬನೆಗೆ ವಸ್ತುವಾಗಬಲ್ಲದು. ಕಳೆದ ಶತಮಾನದ ಕೊನೆಯಲ್ಲಿ ಗಣಪತಿ ಹಾಲು ಕುಡಿದ ಪವಾಡ (?) ಘಟಿಸಿದಾಗ

ಸಂಭ್ರಮ ಪಟ್ಟವರಲ್ಲಿ ಮುಗ್ಧ ಭಕ್ತಿಯವರು ಮಾತ್ರವಲ್ಲ, ಭಾರತದ ಮಾಧ್ಯಮದವರು, ವಿಜ್ಞಾನ–ತಂತ್ರಜ್ಞಾನದವರೂ ಪಾಲ್ಗೊಂಡಿರಲೇ ಬೇಕು. ಅವರ ಕೈವಾಡ (!) ವಿಲ್ಲದೇ ಅದು ಜಾಗತಿಕ ಮಟ್ಟದಲ್ಲಿ ಹರಡುವುದು ಸಾಧ್ಯವೇ ಇಲ್ಲ. ಗಣಪತಿಯ ಜೊತೆ ನಾನಂತೂ ಹಾಲು ಕುಡಿದಿದ್ದೇನೆ. ಕವಿ ಬೇಂದ್ರೆ ಹೇಳಿರುವಂತೆ ತಾಯಿಯ ಹಾಲನ್ನು ಎಂಜಲು ಮಾಡುವ ಮಗ ಇನ್ನೂವರೆಗೆ ಹುಟ್ಟಿ ಬಂದಿಲ್ಲ; ಅಕಸ್ಮಾತ್ ಯಾರಿಗಾದರೂ ಹಾಗೆ ಅನಿಸಿದರೆ ಅವರ ಕಣ್ಣಿನಲ್ಲೇ ದೋಷವಿರಬೇಕು.

ಜೀವನದ ನಾಟ್ಯಶಾಲೆಯಲ್ಲಿ ಶ್ರೀಧರರು ಪಾಲ್ಗೊಂಡ ವಾರಾನ್ನದೂಟ, ಗುಮಾಸ್ತಗಿರಿ, ಪತ್ರಿಕಾವೃತ್ತಿ, ಆಡಳಿತ ನಿರ್ವಹಣೆ, ಶಾಸ್ತ್ರ ಸಾಹಿತ್ಯ ರಚನೆ, ಇತಿಹಾಸ ಸಂಶೋಧನೆ–ಈ ಯಾವುದರ ನೇರ ಕ್ಷೇತ್ರಾನುಭವವೂ ನನಗಿಲ್ಲ. ಅವರನ್ನು ಆತ್ಮಿಕವಾಗಿ ಹಚ್ಚಿಕೊಂಡವನೆಂಬ ಕಾರಣಕ್ಕಾಗಿ ನನ್ನಿಂದ ಈ ಲೇಖನ ಬರೆಸಿದ್ದಾರೆ. ಇದು ಪಾಮರರಿಗೆ ಅಜೀರ್ಣವೂ, ಪಂಡಿತರಿಗೆ ಅಪಥ್ಯವೂ ಆಗದೇ ಶ್ರೀಧರ ಸಾಹಿತ್ಯದ ಅನುಸಂಧಾನಕ್ಕೆ ಪೀಠಿಕೆಯಾಗಲಿ ಎಂದು ಆಶಿಸುತ್ತೇನೆ. ಒಳಗೆ ಬನ್ನಿ.

ಎಚ್.ಆರ್. ಅಮರನಾಥ
ಇಂಗ್ಲೀಷ್ ಸಹ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಸಾಗರ (ಶಿವಮೊಗ್ಗ ಜಿಲ್ಲೆ) ೫೭೭೪೦೧

ಹರಕೆ

ಡಿ.ವೀರೇಂದ್ರ ಹೆಗ್ಗಡೆಯವರು

ಶ್ರೀ ಧರ್ಮಸ್ಥಳ – ೫೭೪೨೧೬

ದಕ್ಷಿಣ ಕನ್ನಡ, ಕರ್ನಾಟಕ

ಕಛೇರಿ : (೦೮೨೫೬) ೨೭೭೧೨೧

ಫ್ಯಾಕ್ಸ್ : ೨೭೭೧೧೬

ತಾ. ૩.೫.೨೦೧೨

ಶ್ರೀಮತಿ ರಾಜೇಶ್ವರಿ ಲೊಕಾರೆಯವರಿಗೆ,

ಖ್ಯಾತ ಸಾಹಿತಿಗಳೂ, ವಿಮರ್ಶಕರೂ ಆಗಿದ್ದ ಬಿ.ಎಚ್.ಶ್ರೀಧರರ ಸಮಗ್ರ ಕೃತಿಗಳ ಪುನರ್ ಮುದ್ರಣ ಮಾಡುವ ವಿಚಾರ ತಿಳಿದು ಸಂತೋಷವಾಯಿತು.

ತನ್ನ ವಿಭಿನ್ನ ಚಿಂತನಾ ಶೈಲಿಯಿಂದ ಅವರು ಕನ್ನಡ ನಾಡು–ನುಡಿಗೆ ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಕೃತಿಗಳ ಪುನರ್ ಮುದ್ರಣ ಮಾಡುತ್ತಿರುವುದು ಅವರಿಗೆ ನೀಡುವ ಗೌರವವಾಗಿದೆ.

ನೀವು ಹಮ್ಮಿಕೊಂಡ ಕಾರ್ಯ ಯಶಸ್ವಿಯಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತಿ,

(ಡಿ.ವೀರೇಂದ್ರ ಹೆಗ್ಗಡೆಯವರು)

ಹಾರೈಕೆ

ಜಿ. ವೆಂಕಟಸುಬ್ಬಯ್ಯ

ಶ್ರೀಮತಿ ರಾಜೇಶ್ವರಿಯವರೇ,

ನಿಮ್ಮ ತಂದೆಯವರನ್ನು ನಾನು ಚೆನ್ನಾಗಿ ಬಲ್ಲೆ. ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅತ್ಯಂತ ಕಿರಿಯ ಉಪನ್ಯಾಸಕನಾಗಿದ್ದಾಗ ಶ್ರೀ ಬಿ.ಎಚ್.ಶ್ರೀಧರ ಅವರು ಸಂಸ್ಕೃತ ವಿಭಾಗದಲ್ಲಿ ಐ.ಜೆ.ವಿದ್ಯಾರ್ಥಿಯಾಗಿದ್ದರು. ನಾವು ಆಗಾಗ ಸಂಧಿಸುತ್ತಿದ್ದೆವು. ೧೯೪೨ರಲ್ಲಿ ಪಂಪಮಹಾಕವಿಯ ಸಹಸ್ರಮಾನೋತ್ಸವವನ್ನು ನಾವೆಲ್ಲ ನೆರವೇರಿಸಿದಾಗ ಶ್ರೀ ಶ್ರೀಧರ ಅವರು ಪಂಪನ ಮೇಲೆ ಸಂಸ್ಕೃತ ಭಾಷೆಯಲ್ಲಿ ಹೊಗಳಿಕೆಯ ಸ್ತುತಿ ರಚಿಸಿ ಎಲ್ಲ ವಿದ್ವಾಂಸರ ಮನಸ್ಸನ್ನು ಗೆದ್ದರು. ಆ ಕಾಲದಲ್ಲಿಯೇ ಅವರು ಆಗಾಗ ಲೇಖನಗಳನ್ನು ರಚಿಸುತ್ತಿದ್ದರು. ನೇರವಾದ ಮಾತಿನ, ಗಟ್ಟಿ ನಿಲುವಿನ, ದೃಢವಿಶ್ವಾಸದ ವ್ಯಕ್ತಿಯಾಗಿದ್ದರು ಅವರು. ಅವರು ಉ.ಕನ್ನಡದಲ್ಲಿ ಸಂಸ್ಕೃತ ಉಪಾಧ್ಯಾಯರಾಗಿ ನಿಂತಮೇಲೆ, ಸಿದ್ಧಾಪುರದಲ್ಲಿ ಪ್ರಾಂಶುಪಾಲರಾಗಿದ್ದ ಕಾಲದಲ್ಲಿ ನಮ್ಮಿಬ್ಬರಿಗೂ ಸ್ವಲ್ಪ ಕಾಲ ಪತ್ರ ವ್ಯವಹಾರವಿತ್ತು. ಆ ಬಳಿಕ ನಾವಿಬ್ಬರೂ ವೃತ್ತಿಯ ಗೊಂದಲದಲ್ಲಿ ಮುಳುಗಿಬಿಟ್ಟಿತ್ತು. ಅವರು ರಚಿಸಿದ ಕೆಲವು ಪುಸ್ತಕಗಳು ಈಗಲೂ ನನ್ನ ಬಂಡಾರದಲ್ಲಿ ಮುಳುಗಿರುತ್ತವೆ. ಹುಡುಕಿದರೆ ಸಿಗುತ್ತವೆ. ಈ ವಯಸ್ಸಿನಲ್ಲಿ ಆ ಕೆಲಸ ಕಷ್ಟ.

ಶ್ರೀಧರರ ಪುಸ್ತಕಗಳನ್ನು ಪುನರ್ಮುದ್ರಿಸುವ ಕೆಲಸ ಸ್ತುತ್ಯವಾದುದು. ಅವರ ಎಲ್ಲ ಪ್ರಕಾರದ ಕೃತಿಗಳನ್ನು ಸಮಗ್ರವಾಗಿ ಒಂದೊಂದು ಸಂಪುಟವಾಗಿ ಪ್ರಕಟಿಸಿದರೆ ಕನ್ನಡಕ್ಕೆ ಸಹಾಯವಾಗುತ್ತದೆ. ನಿಮ್ಮ ಕಾರ್ಯದಲ್ಲಿ ನಿಮಗೆ ಗೆಲುವು ದೊರಕಲಿ. ನನ್ನ ಶುಭಾಶಯಗಳು.

ಇಂತೀ ನಿಮ್ಮ

ಜಿ.ವೆಂಕಟಸುಬ್ಬಯ್ಯ

೯–೩–೧೨

FOREWORD

I feel honoured that I am invited to write a few words way of a Foreword to the complete works or Professor B.H.Shridhar in six volumes edited with devotion Shrimati Sumitra Halawai, for the excellent reason that Professor B.H.Shridhar was a fascinating figure in the intellectual history of modern Karnataka in the last century. It is one of the regrets of my life that I did not have the opportunity or knowing him personally. I may have run into him either places my younger brother, Prof. K.V.Rao, was his junior colleague in colleges there. But I have no recollection of any such meeting. I see that destiny has forged four connections with him. First he was an independent thinker who refused to be anybody's man. I think I am somewhat like him in this regard. Then, he was devoted to Bendre and I am an equally ardent devotee of Bendre. He was a dedicated teacher whom his students worshipped. I may also claim immodestly that I am a committed teacher, committed to my work and my students. Lastly he has one more interesting link with me. I am not potentially a promising candidate for awards, and the first award I received in my life was given in his name in 2000 for my service to Kannadamma through the mediation of Englishamma! I later learnt that it was given to distinguished writers, and I was happy to be in good company.

Prof. Shridhar was a prolific writer who contributed to a variety of literary fields - creative poetry, drama, fiction, discursive writings, works of impeccable scholarship and lively translations from Sanskrit and English into Kannada. A brief Foreword is no place to engage in a serious discussion of his writings. Instead, I shall focus on one of

his central ideas with which I wholly agree. This is the idea that Indian cultural categories do not mix mechanically with Western categories. This is not to say that the West can have no entry into our cultural universe but that it can enter it only on our terms after being refracted through Indian cultural glass. This was the position of Gandhi and Bendre, perhaps not of Tagore, and I am one with him on this basic idea. It is to the great man's credit that he did not dilute his cultural identity. Instead he fashoined creatively an Indian version of modernity, contrasting sharply with imitative modernity. Shrimati Halawai has done a signal service to the cause of our culture by editing competently Prof Shridhar's corpus. We should all be greateful to her. I am sure these volumes will make a profound impact on our cultural and intellectual life.

Dharwad **K.Raghavendra Rao**

ಪರಂಪರೆಯ ಕಾವಲುಗಾರ ಬಿ.ಎಚ್.ಶ್ರೀಧರರ ಕಾವ್ಯ ಸಮೀಕ್ಷೆ

ಕಾವ್ಯ ಕಾಂತಾ ಸಂಹಿತೆ ಎಂಬುದು ಬಹಳ ಹಳೆಯ ಮಾತು, ಆದರೆ ಹಳಸಿದ ಮಾತಲ್ಲ. ಸಾಹಿತಿ – (ಸಾಹಿತ್ಯ ಕೃತಿ) – ಓದುಗರ ಸಂಬಂಧದಲ್ಲಿ ಉತ್ಪಾದಕ–ಗ್ರಾಹಕ ಸಂಬಂಧವನ್ನೋ, ಸೂಳೆ–ವಿಟ ಸಂಬಂಧವನ್ನೋ, ಉದ್ಧಾರಕ–ಪಾಪಿ, ಶಿಕ್ಷಕ–ವಿದ್ಯಾರ್ಥಿ, ಪ್ರಚಾರಕ–ಮೂಢರ ಸಂಬಂಧವನ್ನೋ ಆಧುನಿಕರು ತಮ್ಮ ತಮ್ಮ ಪೂರ್ವಗ್ರಹ, ಕಾಳಜಿಗನುಗುಣವಾಗಿ ಕಲ್ಪಿಸಬಹುದು, ಸಿದ್ಧಾಂತ ಮಾಡಬಹುದು, ಹಾಗಾದುದರ ಕಾರಣ–ಪರಿಣಾಮಗಳನ್ನು ಚರ್ಚಿಸಬಹುದು. ಆದರೂ 'ಕಾಂತಾಸಂಹಿತೆ' ಎಂಬುದು ಹಳಸಿದ ಮಾತಾಗುವುದಿಲ್ಲ. ಏಕೆಂದರೆ ಪಾಶ್ಚಾತ್ಯರು ಒಮ್ಮೆ ಅತ್ತ, ಒಮ್ಮೆ ಇತ್ತ ಹೆಚ್ಚು ವಾಲುತ್ತ ಹೇಳುತ್ತ ಬಂದ entertainment and enlightenment ಅಂಶಗಳನ್ನು ಈ ಶಬ್ದ ಅವರಿಗಿಂತ ಸುಂದರವಾಗಿ ಹೇಳುತ್ತದೆ. ಅಷ್ಟೇ ಅಲ್ಲ, ಸಾಮಾಜಿಕ, ನೈತಿಕ ಸ್ವಾಸ್ಥ್ಯದ ದೃಷ್ಟಿಯೂ ಇದರಲ್ಲಿದೆ. 'ಕಾಂತೆ' ಎಂದರೆ ಕೇವಲ ಪ್ರೇಯಸಿಯಲ್ಲ, ಕೇವಲ ಹೆಂಡತಿಯೂ ಅಲ್ಲ. ಪ್ರೇಮದ ಹುಚ್ಚು ಹೊಳೆಯಲ್ಲಿ ತೇಲುವವರಿಗೂ, ದಾಂಪತ್ಯದ ಕರ್ಮಕಾಂಡದಲ್ಲಿ ಹಣೆ ಜಜ್ಜಿಕೊಳ್ಳುವವರಿಗೂ 'ಕಾಂತೆ'ಯ ಒಳನೋಟ ಸಿದ್ಧೌಷಧವಾಗಬಲ್ಲದು.

ಬಿ.ಎಚ್.ಶ್ರೀಧರರು ತಮ್ಮ ತಲೆಮಾರಿನ 'ಮೇಜರ್' ಎನಿಸಬಹುದಾದ ಕವಿ ಅಲ್ಲ. ಆದರೂ ಅವರ ಕಾವ್ಯದ ಬಗ್ಗೆ ಸಾಕಷ್ಟು ವಿಮರ್ಶೆ ಬಂದಿಲ್ಲ. ಇದಕ್ಕೆ ಇರಬಹುದಾದ ಕಾರಣಗಳು ಮೂರು ಎನಿಸುತ್ತದೆ:

೧) ಶ್ರೀಧರರು ಮೂಲತಃ ವಿದ್ವಾಂಸರು, ವಿಮರ್ಶಕರು. ನಂತರ ಕವಿಗಳು. ಅವರ ವಿದ್ವತ್ತು, ವಿಮರ್ಶೆಗಳೇ ಅವರ ಕಾವ್ಯವನ್ನು ಗೌಣವಾಗಿಸಿವೆ.

೨) ಪ್ರಗತಿಶೀಲ, ನವ್ಯ, ಬಂಡಾಯ – ಈ ಯಾವ ಪಂಥಕ್ಕೂ ಅವರು ಸೇರಿದವರಲ್ಲ. ಪಂಥಗಳಿಗೆ ಸಿಗುವ ಪ್ರಚಾರ ಸೌಲಭ್ಯ ಅವರಿಗೆ ಸಿಗಲಿಲ್ಲ.

೩) 'ಪ್ರತಿವಾದಿ ಭಯಂಕರ'ರಾಗಿರುವ ಶ್ರೀಧರರನ್ನು ಎದುರು ಹಾಕಿಕೊಳ್ಳುವ ಭಯ. ಶ್ರೀಧರರನ್ನು ಎದುರು ಹಾಕಿಕೊಳ್ಳುವುದೆಂದರೆ ಆಯಾ ಕ್ಷೇತ್ರದಲ್ಲಿ ಭರತ (ನಾಟ್ಯಶಾಸ್ತ್ರ, ಸಾಹಿತ್ಯ), ಪಾಣಿನಿ (ವ್ಯಾಕರಣ), ಚಾಣಕ್ಯ

(ರಾಜನೀತಿ), ಶಂಕರಾಚಾರ್ಯ (ತತ್ವಶಾಸ್ತ್ರ)ರನ್ನು ಪ್ರಶ್ನಿಸಿದಂತೆಯೇ ಆಗುವುದು ಹಲವರ ಅನುಭವ. ಹೀಗಿದ್ದಾಗ ಭಯ ಸಹಜವೂ ಇರಬಹುದು. ಆದರೆ ಅವರು ಟಿ.ಎಸ್.ಎಲಿಯಟ್, ಬೇಂದ್ರೆ, ಗಾಂಧಿ, ಅರವಿಂದರನ್ನು ಮೆಚ್ಚುವುದನ್ನು ಕಂಡಾಗ ಭಯಕ್ಕೆ ಕಾರಣವಿಲ್ಲ ಎನಿಸುತ್ತದೆ.

ಶ್ರೀಧರರು ಪ್ರಭುಸಂಹಿತೆಯ ದಾಟಿಯಲ್ಲಿ ಬರೆಯುತ್ತಾರೆ, ಭಾಷಣ ಮಾಡುತ್ತಾರೆ. ಎದುರಿಗೆ ಕುಳಿತಾಗ ಮಿತ್ರಸಂಹಿತೆಯಲ್ಲಿ ಮಾತನಾಡುತ್ತಾರೆ. ಅವರ ಮಾತು ಎಂದರೆ ಸಾಕ್ರೆಟಿಸ್‌ನಂತೆ ಪ್ರಶ್ನೇ ಕೇಳುತ್ತ ಪೇಚಿಗೆ ಸಿಲುಕಿಸಿ ಒಪ್ಪಿಸುವ ರೀತಿಯವಲ್ಲ. ಒಂದು ಪ್ರಶ್ನೆಗೆ ಹತ್ತು ದೃಷ್ಟಿಯಿಂದ ಒಂದೇ ಉತ್ತರ ನೀಡುವ ಭಗವದ್ಗೀತೆಯ ರೀತಿಯದು. ಅದರ ಅರ್ಥ ಶ್ರೀಧರರ ಎದುರಿಗೆ ಕುಳಿತವರು ಅರ್ಜುನನಂತೆಯೇ ಇರಬೇಕೆಂದಿಲ್ಲ. ಕೃಷ್ಣನಂತಹವರು ಬಂದರೆ ಅವರು ಅರ್ಜುನ ಆಗಬಲ್ಲರು. ಆದರೆ ಅಂಥವರು ವಿರಳವಾಗಿದ್ದರಿಂದ ಅವರ ಮಾತು ಸಾಮಾನ್ಯವಾಗಿ one way traffic ಆಗಿರುತ್ತದೆ.

ಇನ್ನು ಕಾಂತಾ ಸಂಹಿತೆಯಾದ ಕಾವ್ಯ. 'It is the minor poets who preserve the tradition' ಎಂಬ ಎಲಿಯಟ್ಟನ ಮಾತು ನಿಜವಿದ್ದರೆ ಬಿ.ಎಚ್.ಶ್ರೀಧರರಂತೆ ಪರಂಪರೆಯನ್ನು ಕಾಯ್ದುಕೊಂಡು ಬಂದವರು ವಿರಳ. ಪರಂಪರೆ ಎಂದರೆ ಶ್ರೀಧರರಿಗೆ ಕೇವಲ ಪರಂಪರೆಯಲ್ಲಿ ರಾಜಕೀಯ, ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ, ವೈಯಕ್ತಿಕ ಸಾಮಾಜಿಕ ನೀತಿ ಈ ಎಲ್ಲವುಗಳ ಬಗ್ಗೆ ಇರುವರೆಗೆ ಬಂದ ಅತ್ಯುತ್ತಮ ವಿಚಾರ–ಆಚಾರ ಸಂಹಿತೆಯೇ ಪರಂಪರೆ. ಇಂತಹ 'ಪ್ರಚಂಡ' ವ್ಯಕ್ತಿಯ ('ಪ್ರಚಂಡ' ಎಂಬುದು ಬೇಂದ್ರೆಯವರು ಇವರ ಬಗ್ಗೆ ಉಪಯೋಗಿಸಿದ ಶಬ್ದ) ಕೈಯಲ್ಲಿ ಸಿಕ್ಕ ಕೋಮಲೆಯಾದ ಕಾವ್ಯ ಕನ್ಯೆ ಸಾಕಷ್ಟು ನರಳಿರಬೇಕೆಂದು ಕೆಲವರಿಗೆ ಅನಿಸಬಹುದು. ಆದರೆ ಕಾವ್ಯ 'ಕೋಮಲೆ' ಎಂದರೆ ಶ್ರೀಧರರು ಒಪ್ಪುವುದಿಲ್ಲ. ಆಕೆ ಕಠೋರಳು ಆಗಬಲ್ಲಳು, ಕಷ್ಟ ಸಹಿಷ್ಣುವೂ ಆಗಬಲ್ಲಳು.

ಕಾಂತಾ ಸಂಹಿತೆಯ ಬಗೆಗಿನ ಮಾತುಗಳಿಂದ ಈ ಲೇಖನ ಪ್ರಾರಂಭವಾದದ್ದು ಇದಕ್ಕೇ. ಪ್ರಪಂಚದಲ್ಲಿ ಕಾಂತೆಯರಿಗೆ ಇರುವಷ್ಟೇ ವೈವಿಧ್ಯ ಕಾವ್ಯದಲ್ಲಿಯೂ ಇದೆ. ಬೇಂದ್ರೆಯವರ ಕಾವ್ಯವನ್ನೋ, ಕುವೆಂಪು ಅವರ ಕಾವ್ಯವನ್ನೋ ಶ್ರೀಧರರಲ್ಲಿ ಹುಡುಕುವುದು ಸರಿಯಲ್ಲ. ಶ್ರೀಧರರ ಕಾಂತಾಸಂಹಿತೆಯ ವಿಶಿಷ್ಟ ಸ್ವರೂಪವನ್ನೂ, ಅವರ ಕಾವ್ಯ ನಡೆದುಬಂದ ದಾರಿಯನ್ನೂ ತಿಳಿದುಕೊಳ್ಳುವ ಪ್ರಯತ್ನ ಮಾಡಬಹುದು. ಈ ಶ್ರಮಕ್ಕೆ ಅವರ ಕಾವ್ಯ ಯೋಗ್ಯವಾಗಿದೆ ಎಂದು ನನ್ನ ನಂಬಿಕೆ.

ಶ್ರೀಧರರನ್ನು ಪರಂಪರೆಯ ಕಾವಲುಗಾರ ಎಂದು ಕರೆದಾಗ ಇದು ಹೊಗಳಿಕೆಯೋ ತೆಗಳಿಕೆಯೋ ಎಂಬ ಪ್ರಶ್ನೆ ಕೆಲವರಿಗೆ ಏಳಬಹುದು. ಇದು ವಸ್ತು ಸ್ಥಿತಿಯ ಹೇಳಿಕೆ

ಮತ್ತು ನನ್ನ ಮಟ್ಟಿಗೆ ಹೊಗಳಿಕೆ. ಯಾವುದೇ ಒಬ್ಬ ಕಾವಲುಗಾರನನ್ನು ಹೊಗಳುವುದು ಅಥವಾ ತೆಗಳುವುದು ಆತನೊಬ್ಬನ ಕಾರಣಕ್ಕಾಗಿ ಅಲ್ಲ. ಆತ ಏನನ್ನು ಕಾಯುತ್ತಾನೋ ಅದರ ಬಗ್ಗೆ ನಮಗಿರುವ ಆದರ–ಅನಾದರ ದೃಷ್ಟಿಯೂ ಇಲ್ಲಿ ಕೆಲಸ ಮಾಡುತ್ತದೆ.

ಪಂಪ, ಹರಿಹರ, ಲಕ್ಷ್ಮೀಶ, ಕುವೆಂಪು ಅವರಂಥವರ ಕವಿಗಳು ಪರಂಪರೆಯನ್ನು ಚೊಕ್ಕವಾಗಿ ಕಟ್ಟಲು ಪ್ರಯತ್ನಿಸುತ್ತಾರೆ. ಅಲ್ಲಮಪ್ರಭು, ಕುಮಾರವ್ಯಾಸ, ಬೇಂದ್ರೆಯಂಥವರು ಪರಂಪರೆಯನ್ನು ಕೊಳ್ಳೆಹೊಡೆಯುತ್ತಾರೆ. ಶ್ರೀಧರರಂಥವರು ಇಂತಹ ಪರಂಪರೆಯನ್ನು ಕಾಯುತ್ತಾರೆ. ಕಾವಲುಗಾರನಿಗೆ ಬೇಕಾದ ಸ್ವಾಮಿನಿಷ್ಠೆ ಮತ್ತು ಶಸ್ತ್ರಪಾಂಡಿತ್ಯ ಎರಡೂ ಇವರಲ್ಲಿವೆ.

ಶ್ರೀಧರರ ಕಾವ್ಯದ ಬಗ್ಗೆ ಒಟ್ಟಾರೆಯಾಗಿ ಏನು ಹೇಳುವುದಿದ್ದರೂ ಅಡಿಗರ ಕಾವ್ಯದೊಂದಿಗೆ ಹೋಲಿಸುವುದು ಅನಿವಾರ್ಯವಾಗುತ್ತದೆ. ಶ್ರೀಧರರನ್ನು ಪರಂಪರೆಯ ಕಾವಲುಗಾರ ಎಂದು ಕರೆದ ಮೇಲೆ ಅಡಿಗರಿಗೂ ಪರಂಪರೆಗೂ ಇರುವ ಸಂಬಂಧದ ಬಗ್ಗೆ ಹೇಳುವುದೂ ಅನಿವಾರ್ಯವಾಗುತ್ತದೆ. 'ಸೇತುವೆ ಕವಿ'ಗಳೆಂದು ಹೆಸರಾದ ಜಿ.ಎಸ್.ಶಿವರುದ್ರಪ್ಪ ಮತ್ತು ಚೆನ್ನವೀರಕಣವಿಯವರು 'ನವ್ಯ'ದ ಬಗ್ಗೆ ಸಾಶಂಕ ಔದಾರ್ಯ ತೋರಿದ ಕಾಲದಲ್ಲಿ ಶ್ರೀಧರರು ಉಗ್ರವಿರೋಧ ವ್ಯಕ್ತಪಡಿಸಿದರು. ವಿಮರ್ಶೆಯಲ್ಲಿ, ಕಾವ್ಯದಲ್ಲಿ 'ನವ್ಯ'ರಿಗಿಂತ ಭಿನ್ನ ದಾರಿಯಲ್ಲಿ ನಡೆದರು. ಅಡಿಗ, ಅನಂತಮೂರ್ತಿಯವರ ಸಾಹಿತ್ಯ ವಿಶ್ಲೇಷಣೆ ಮಾಡುತ್ತ ಶ್ರೀ ಪೋಲಂಕಿ ರಾಮಮೂರ್ತಿಯವರು ಇವರಿಬ್ಬರನ್ನೂ ಪರಂಪರೆಯ ಪ್ರತಿನಿಧಿಗಳೆಂದು ಗ್ರಹಿಸಿಕೊಂಡು ಒಟ್ಟಾರೆ ಪರಂಪರೆಯ ಬಗ್ಗೆ ಆಕ್ಷೇಪಗಳನ್ನು ಎತ್ತಿದ್ದಾರೆ. ಆದರೆ ಇವರಿಬ್ಬರೂ ಪರಂಪರೆಯನ್ನು ಪ್ರತಿನಿಧಿಸುವುದಿಲ್ಲ. ಹೊಸಗನ್ನಡ ಸಾಹಿತ್ಯದಲ್ಲಿ ಪರಂಪರೆಯ ಪ್ರತಿನಿಧಿಗಾಗಿ 'ಬ್ರಾಹ್ಮಣ' ಸಾಹಿತಿಯೇ ಬೇಕೆಂದಿದ್ದರೆ ಬೇಂದ್ರೆಯವರನ್ನು ಆಯ್ದುಕೊಳ್ಳಬಹುದು. ಅಡಿಗರ ಓರಿಗೆಯವರೇ ಬೇಕೆಂದಿದ್ದರೆ ಶ್ರೀಧರರನ್ನು ಆಯ್ದುಕೊಳ್ಳಬಹುದು. (ಶ್ರೀಧರರು ಅಡಿಗರಿಗಿಂತ ಆರು ತಿಂಗಳು ಮಾತ್ರ ಚಿಕ್ಕವರು. ಇಬ್ಬರೂ ರಕ್ತಸಂಬಂಧಿಗಳೂ ಹೌದು). ಅಡಿಗರೊಡನೆ ಹೋಲಿಸಬಹುದಾದ ಕವಿಯೇ ಇಲ್ಲವೆಂದು ಪರಿತಪಿಸುತ್ತಿರುವ ವಿಮರ್ಶಕರು ಕುತೂಹಲಕ್ಕಾಗಿಯಾದರೂ ಅವರನ್ನು ಶ್ರೀಧರರೊಂದಿಗೆ ಹೋಲಿಸಬೇಕು.

"ನಡೆದುಬಂದ ದಾರಿಯೆಡೆಗೆ ಕಣ್ಣ ಹೊರಳಿಸಬೇಡ" ಎಂಬ ಪ್ರತಿಜ್ಞಾ ವಾಕ್ಯದಂತೆ ನಡೆದ ಅಡಿಗರಿಗೆ "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?" ಎಂಬ ಸುಂದರ ಸಾಲಿನ ಪ್ರಶ್ನಾರ್ಥಕವೇ ಉರುಲಾಗಿ ಪರಿಣಮಿಸಿತು. ಬೇಂದ್ರೆಯವರು ಈ ಸಾಲು ಬರೆದಿದ್ದರೆ ಬಹುಶಃ ಉದ್ಗಾರವಾಚಕವನ್ನಿಡುತ್ತಿದ್ದರು; ಶ್ರೀಧರರು ಬಹುಶಃ ಪೂರ್ಣವಿರಾಮವನ್ನಿಡುತ್ತಿದ್ದರು. ಬೇಂದ್ರೆಯವರಿಗೆ ಕಾವ್ಯ ಏನೆಲ್ಲ ನೀಡುವ ದಿವ್ಯ

ಮಾಯೆಯಾಯಿತು; ಅಡಿಗರಿಗೆ ಏನೆಲ್ಲ ಬೇಡುವ ಮಾಟಗಾತಿಯಾಯಿತು; ಶ್ರೀಧರರಿಗೆ ಜೊತೆಯಲ್ಲಿ ಕಷ್ಟ ಸಹಿಸುವ ಸತಿಯಾಯಿತು.

ಅಡಿಗರು–ಶ್ರೀಧರರು ಇಬ್ಬರೂ ಯಕ್ಷಗಾನದಿಂದ ಪ್ರಭಾವಿತರಾದವರು. ಅಡಿಗರ ಕಾವ್ಯ ಚಂಡೆಯ ಅಬ್ಬರವಾದರೆ ಶ್ರೀಧರರದು ಮದ್ದಳೆಯ ನುಡಿತ. 'ಅಬ್ಬರಕ್ಕೆ ಚಂಡೆ, ಗೊಬ್ಬರಕ್ಕೆ ಸೊಪ್ಪು' ಎಂಬ ಗಾದೆ ಮಾತಿದೆ. ಕುಣಿಯುತ್ತಿರುವ ಯಕ್ಷನಟನ ಲಕ್ಷ್ಯ ಇರಬೇಕಾದದ್ದು ಮದ್ದಳೆಯ ಕಡೆಗೇ ವಿನಃ ಚಂಡೆಯ ಕಡೆಗಲ್ಲ. ಯಕ್ಷಗಾನದಿಂದ ಅಡಿಗರು ಮಾತುಗಾರಿಕೆಯ ಆವೇಶವನ್ನು ಕಲಿತರು; ಶ್ರೀಧರರು ಕಥಾಬಂಧದೊಳಗಿನ ಪಾತ್ರ ಸ್ವಾತಂತ್ರ್ಯವನ್ನು ಕಲಿತರು. ಅಡಿಗರ 'ನನ್ನ ಅವತಾರ' 'ಪ್ರಾರ್ಥನೆ' ಕವನಗಳೊಂದಿಗೆ ಶ್ರೀಧರರ 'ನನ್ನ ಠೀವಿ', 'ಜಾತವೇದಸ ಪ್ರಜ್ಞೆ' ಕವನಗಳನ್ನು ಹೋಲಿಸಿ ನೋಡಿದಾಗ ಅಡಿಗರ ವ್ಯಕ್ತಿತ್ವ, ವ್ಯಕ್ತಿಧ್ವನಿಗೂ ಶ್ರೀಧರರ ಪರಂಪರೆಯ ಸತ್ವ, ಧ್ವನಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗುತ್ತದೆ, ಶ್ರೀಧರರ ಕಾವ್ಯದ ಕ್ಲಿಷ್ಟತೆ ಕೇವಲ ಪದಕ್ಲಿಷ್ಟತೆ, ಅಡಿಗರದು ಭಾವಕ್ಲಿಷ್ಟತೆ.

ಅಡಿಗರ ಕಾವ್ಯದಲ್ಲಿ ಪರಂಪರೆಯ ಪಾರಿಭಾಷಿಕ ಶಬ್ದಗಳು, ಪುರಾಣ–ಅಭಿಜಾತ ಸಾಹಿತ್ಯದ ಉಲ್ಲೇಖಗಳು ಎಷ್ಟೇ ವಿಫುಲವಾಗಿದ್ದರೂ ಅವರು ಪರಂಪರೆಗೆ ಸೇರುವ ಕವಿಯಲ್ಲ. ಟಿ.ಎಸ್.ಏಲಿಯಟ್‌ನೊಡನೆ ಅವರನ್ನು ಹೋಲಿಸುವಾಗ ನೆನಪಿಡಬೇಕಾದ ಸಂಗತಿಯೆಂದರೆ ಏಲಿಯಟ್ ಪಾಶ್ಚಾತ್ಯ ಸಾಹಿತ್ಯ–ಸಂಸ್ಕೃತಿಗಳ ಬಗ್ಗೆ ಉತ್ತಮ ವಿಮರ್ಶೆಯನ್ನೂ ಬರೆದಿದ್ದಾನೆ. ಅಡಿಗರು ಭಾರತೀಯ (ಅಥವಾ ಪಾಶ್ಚಾತ್ಯ) ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಬರೆದಿಲ್ಲ. ಕಾರಣ ಪರಂಪರೆಯನ್ನು ಅರ್ಥೈಸಿಕೊಳ್ಳುವ, ಅರಗಿಸಿಕೊಳ್ಳುವ ಪ್ರವೃತ್ತಿಯೇ ಅವರಲ್ಲಿಲ್ಲ. ಅವರು ಪ್ರತಿಜ್ಞೆ ಮಾಡಿ ಭಿನ್ನರಾಗಿದ್ದಾರೆ. ದುರ್ದಾನ ತೆಗೆದುಕೊಂಡವರಂತೆ ಹಿಂದೆ ನೋಡದೆಯೇ ಸಾಗಿದ್ದಾರೆ. (ಶಿವರಾಮ ಕಾರಂತರು ಪರಂಪರೆಯಿಂದ ಭಿನ್ನರಾದದ್ದು ಪ್ರತಿಜ್ಞೆಯಿಂದಲ್ಲ, ಸಾಮಾಜಿಕ ಜವಾಬ್ದಾರಿಯ ಅನ್ವೇಷಕ ದೃಷ್ಟಿಯಿಂದ. ಅವರು ಮತ್ತೆ ಮತ್ತೆ ಹಿಂದೆ ನೋಡುತ್ತಲೇ ಮುಂದುವರೆದಿದ್ದಾರೆ). ಪರಂಪರೆಯಿಂದ ಕೇವಲ ದುರ್ದಾನ ಪಡೆಯುವ ಕವಿ ತನ್ನನ್ನು ಪರಂಪರೆಯಲ್ಲಿ ಕಳೆದುಕೊಳ್ಳುವ ಪರಂಪರೆಯನ್ನು ತನ್ನಲ್ಲಿ ಎಳೆದುಕೊಳ್ಳುವ ಕವಿಯಾಗಲಾರ. 'ಪಂಪ, ಕುಮಾರವ್ಯಾಸರು ಕೇವಲ ಸಜ್ಜನರು, ಕವಿಗಳಲ್ಲ' ಎಂದು ಹೇಳುವವನಿಗೆ ಎಂತಹ ಶ್ರೀಮಂತ ಪರಂಪರೆಯೂ ಕೂಡ ಏನನ್ನೂ ಕಲಿಸಲಾರದು. ಏಕೆಂದರೆ ಈತ ಅವರಿಂದ ಕಲಿಯಬಾರದೆಂಬ ಹಟ ತೊಟ್ಟಿದ್ದಾನೆ. ಆ ಮಾತು ಒಂದು ವಯಸ್ಸಿನ ಹುಂಬತನ ಎಂದು ಅನಿಸಬಹುದಾದರೂ, ನಂತರವೂ ಕೂಡ ಅಡಿಗರ ದೃಷ್ಟಿ ಬದಲಾದ ಬಗ್ಗೆ ಸಾಕ್ಷಿಯಾಗಲೀ ರುಜುವಾತಾಗಲೀ ಇಲ್ಲ. ಅವರ ಸಮಗ್ರ ಹದ್ಯದಲ್ಲಿ ಹುಡುಕಿ ನೋಡಿದರೆ ಸಾಹಿತ್ಯ ವಿಮರ್ಶೆ ಸಿಗುವುದು ಮೂರು ಲೇಖನಗಳು ಮಾತ್ರ – 'ಮಾದ್ರಿಯ ಚಿತೆ' (ಇದು ೧೯೩೦ರಷ್ಟು ಹಿಂದೆ ಬರೆದದ್ದು),

ಮಾಸ್ತಿಯವರ ಕವಿತೆ ಮತ್ತು 'ಮರಳಿ ಮಣ್ಣಿಗೆ' ಉಳಿದ ಸಾಹಿತ್ಯಿಕ ಲೇಖನಗಳಲ್ಲಿ ತಮ್ಮ ಪಂಥದ ವಸ್ತು, ತಂತ್ರ, ಭಾಷೆಗಳ ಸಮರ್ಥನೆಯೇ ತುಂಬಿದೆ. ಬೇಂದ್ರೆ, ಕುವೆಂಪು ಅವರ ಸಾಹಿತ್ಯಿಕ ಬರಹ ಪರ್ವತದಷ್ಟಿದೆ. ಶ್ರೀಧರರದು ಸಣ್ಣ ಗುಡ್ಡದಷ್ಟಾದರೂ ಇದೆ. (ಉಳಿದ ಜ್ಞಾನ ಕ್ಷೇತ್ರಗಳ ಬಗ್ಗೆ ಅವರು ಬರೆದದ್ದು ಪರ್ವತದಷ್ಟೇ ಇದೆ). ಅಡಿಗರದು ಹೋಲಿಕೆಯಲ್ಲಿ ಹುಲ್ಲುಕಡ್ಡಿಯ ಪ್ರಮಾಣದ್ದು. (ಶಿವರಾಮ ಕಾರಂತರು ಬರೆದ ಸಾಹಿತ್ಯ ವಿಮರ್ಶೆ ಕಡಿಮೆಯಾಗಿದ್ದರೂ ಕಲೆ, ವಿಜ್ಞಾನ, ಸಂಸ್ಕೃತಿ, ಸಮಾಜಗಳ ಬಗ್ಗೆ ಅವರ ಪಾಂಡಿತ್ಯ (ಕೇವಲ ಅನಿಸಿಕೆಯ ತೀವ್ರತೆಯಲ್ಲ) ಅದ್ಭುತವಾಗಿದೆ). ಅಡಿಗರ ವಿಶಿಷ್ಟ ಗುಣ ವ್ಯಕ್ತಿ ವಿಶಿಷ್ಟತೆ ಎಂದು ಬೇಂದ್ರೆಯವರು ಬಹಳ ಸುಂದರವಾಗಿ ಗುರುತಿಸಿದ್ದಾರೆ. ವ್ಯಕ್ತಿ ವಿಶಿಷ್ಟತೆಯ ಹುಚ್ಚಿನಿಂದಾಗಿಯೇ ಪರಂಪರೆ ಮತ್ತು ಸಮಾಜ ಎರಡೂ ಅಡಿಗರಿಗೆ ವ್ಯಕ್ತಿ ವಿಶಿಷ್ಟತೆ. ವ್ಯಕ್ತಿ ಸ್ವಾತಂತ್ರ್ಯಗಳ ಮೇಲೆ ಆಕ್ರಮಣ ಮಾಡುತ್ತವೆ ಎಂದು ಅನಿಸುತ್ತದೆ.

ಅಡಿಗರ ಬಗ್ಗೆ ಹೇಳಿದ ಮೇಲೆ ಅನಂತಮೂರ್ತಿಯವರ ಬಗ್ಗೆಯೂ ಹೇಳಬೇಕಾಗುತ್ತದೆ. ಅನಂತಮೂರ್ತಿಯವರು ಪರಂಪರೆ ಮತ್ತು ಸಮಾಜ ಎರಡನ್ನೂ ಗಮನಿಸುತ್ತಾರೆ. ಆದರೆ ಅವರಿಗೆ ಪರಂಪರೆಯ ಸತ್ವದೊಡನೆಯಾಗಲೀ, ಸಮಾಜದ ಸತ್ವದೊಡನೆಯಾಗಲೀ (ಇವೆರಡೂ ಒಂದು ಹಂತದಲ್ಲಿ ಒಂದೇ ಆಗಿರಬಹುದು) ಭದ್ರವಾದ ಸಂಬಂಧವಿಲ್ಲ. ಹಾಗಾಗಿಯೇ ಅವರ ಎಲ್ಲ ಅನಿಸಿಕೆಗಳು ಹುದುಲಿನಲ್ಲಿರುವ ಎರಡು ಕಂಬಗಳಲ್ಲಿ ಅತ್ತ-ಇತ್ತ ಆಸರೆ ಪಡೆಯುವ ಪ್ರಯತ್ನಗಳಾಗುತ್ತವೆ. ಅಡಿಗ, ಅನಂತಮೂರ್ತಿಯವರನ್ನು ಒಂದು ಕಾಲಕ್ಕೆ ಬಹಳ ಹಚ್ಚಿಕೊಂಡ ಲಂಕೇಶ, ಪೂರ್ಣಚಂದ್ರ ತೇಜಸ್ವಿಯವರಿಗೆ ಭ್ರಮನಿರಸನವಾದದ್ದು ಆಶ್ಚರ್ಯವೇನಲ್ಲ. ಸಿಟ್ಟು ಹಿಂಸಾರತಿಯಾಗುವ ಅಡಿಗರು ಮತ್ತು ಸಿಟ್ಟೇ ಸಾಧ್ಯವಾಗದ ಅನಂತಮೂರ್ತಿಯವರಿಂದ ಸಿಡಿದು ನಿಂತ ಸಾಹಿತ್ಯ ನೋವಿನಾಳದ ಸಿಟ್ಟಿನಲ್ಲಿ ಗಟ್ಟಿಯಾಗಲು ಬಯಸುತ್ತಿದೆ.

ನೋವಿನಾಳದ ಸಿಟ್ಟು ಶ್ರೀಧರರ ಕಾವ್ಯದ ಮೂಲ ಸೋತ್ರ. ಶ್ರೀಧರರ ಮಾತಿನಲ್ಲೇ ಹೇಳುವುದಾದರೆ ಇದು 'ಸಾತ್ವಿಕ ಸಂತಾಪ' (Righteous Indignation). ಕನ್ನಡ ಸಾಹಿತ್ಯ ನವ್ಯವನ್ನುಳಿದು ಅಭಿನವ್ಯ ಮಾರ್ಗದಲ್ಲಿ ಮುಂದೆ ಸಾಗುವುದೆಂದು ಅವರು ೧೯೬೪ರಷ್ಟು ಹಿಂದೆಯೇ ಹೇಳಿದ್ದಾರೆ. ಈ ಅಭಿನವ್ಯ ಕಾವ್ಯ 'ಜನಕಾವ್ಯ'ವಾಗಿರುತ್ತದೆ ಎಂಬುದೂ ಅವರ ಕಾಣ್ಕೆ. ಶ್ರೀಧರರು ಹೇಳುವ ಜನಕಾವ್ಯ ಈಗ 'ಬಂಡಾಯ' ಸಾಹಿತಿಗಳು ಹೇಳುತ್ತಿರುವ ಜನಪರ ಕಾವ್ಯದ ಸೈದ್ಧಾಂತಿಕ ಚೌಕಟ್ಟಿನಲ್ಲಿ ಸೇರುವುದಿಲ್ಲವೆಂಬುದು ನಿಜ. ಆದರೆ ಜನರ ಬಗ್ಗೆ 'ನವ್ಯ'ರಿಗಿಲ್ಲದ ಕಾಳಜಿ ಶ್ರೀಧರರಿಗಿರುವುದು ಗಮನಾರ್ಹ. 'ಆಧುನಿಕ' ಕನ್ನಡ ಸಾಹಿತ್ಯದಲ್ಲಿ 'ಗ್ರಾಮಜೀವನ ಚಿತ್ರಣ' ಎಂಬ ಅವರ ಲೇಖನ ನಿಜಕ್ಕೂ ಅದ್ಭುತವಾಘಿದೆ. ಅವರ 'ಎಸ್.ಟಿ.ಬಸ್.'

'ಗೌನಿನ ಹಬ್ಬದ ಬೆಡಗು' ಮುಂತಾದ ಕವನಗಳಲ್ಲಿ ಸ್ವಾತಂತ್ರ್ಯದ ನಂತರ ಗ್ರಾಮಜೀವನ 'ನವ್ಯ' ದೃಷ್ಟಿಯಿಂದ ಬದಲಾಗುತ್ತಿರುವುದರ ಸೂಕ್ಷ್ಮಗ್ರಹಿಕೆ ಇದೆ. ನಗರ ಕೇಂದ್ರಿತ 'ನವ್ಯ' ದೃಷ್ಟಿಯಿಂದ ಶ್ರೀಧರರು ಈ ರೀತಿ ಭಿನ್ನರಾಗಿರುವುದು ಆರೋಗ್ಯದ ಕುರುಹು.

ಶ್ರೀಧರರ ಸಿಟ್ಟಿಗೂ 'ಬಂಡಾಯ' ಸಾಹಿತಿಗಳ ಸಿಟ್ಟಿಗೂ ವ್ಯತ್ಯಾಸವಿದೆ. ಶ್ರೀಧರರ ಸಿಟ್ಟಿನ ನೆಲೆ ಇರುವುದು ರಾಷ್ಟ್ರೀಯವಾದಿ ಇತಿಹಾಸ ಪ್ರಜ್ಞೆಯಿಲ್ಲ. ಅವರ ಸಿಟ್ಟಿರುವುದು ರಾಷ್ಟ್ರ ದ್ರೋಹಿಗಳ ಮತ್ತು ರಾಷ್ಟ್ರಾಭಿಮಾನ ಶೂನ್ಯರ ಬಗ್ಗೆ. (ಇದು ಒಟ್ಟಾರೆಯಾಗಿ ವಿಶ್ವಾಸಘಾತಕರ ಮತ್ತು ಆತ್ಮಾಭಿಮಾನ ಶೂನ್ಯರ ಬಗ್ಗೆಯೂ ಇದೆ). 'ಬಂಡಾಯ'ಗಾರರ ಸಿಟ್ಟಿರುವುದು ಪುರೋಹಿತಶಾಹಿ, ಅಧಿಕಾರಶಾಹಿ ಮತ್ತು ನೌಕರ ಶಾಹಿಗಳ ವಿರುದ್ಧ. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಸಿಕ್ಕಲ್ಲಿ ಸಿಕ್ಕಂತೆ ಖಂಡಿಸುವ ಪ್ರವೃತ್ತಿ ಮೇಲ್ನೋಟಕ್ಕೆ ಕಂಡುಬರುವುದಾದರೂ ಕೂಡ ಇದು ಆಳದಲ್ಲಿ ರಾಷ್ಟ್ರೀಯವಾದಿ ಇತಿಹಾಸ ದೃಷ್ಟಿಗಿಂತ ಭಿನ್ನವಾದ ಇತಿಹಾಸ ದೃಷ್ಟಿ ಮೂಡುತ್ತಿರುವ ಸೂಚನೆ ಎನಿಸುತ್ತದೆ. (ಲೋಹಿಯಾ ಅವರ ವರ್ಗ – ವರ್ಣ ಸಿದ್ಧಾಂತ ಸಾಕಷ್ಟು ಗದ್ದಲ – ಗೊಂದಲ ಎಬ್ಬಿಸಿದೆ. ಸಗಣಿಯನ್ನು ಗೊಬ್ಬರವಾಗಿಸಿಕೊಳ್ಳುವವರು ಇನ್ನೂ ಹುಟ್ಟಿಬರಬೇಕಾಗಿದೆ). ಕಾಮವನ್ನಾಗಲೀ, ಕ್ರೋಧವನ್ನಾಗಲೀ ಬರಿದೆ ಬೆನ್ನು ಹತ್ತಿದರೆ ಅನುಭವ ಸಿಗಬಹುದು. ವಿವೇಕ ಸಿಗಲಿಕ್ಕಿಲ್ಲ. 'ನವ್ಯ'ರಿಗೆ ಕಾಮ Obsession ಆದಂತೆ 'ಬಂಡಾಗಾರ'ರಿಗೆ ಕ್ರೋಧ ಆಗಬಾರದೆಂದಿದ್ದರೆ ಪರಂಪರೆಗೆ ತಕ್ಕ ಗೌರವ ಸಲ್ಲಿಸಬೇಕಾಗುತ್ತದೆ. ಸಿಟ್ಟಿನ ಪರಂಪರೆ ಎಂಬುದು ಇರುವುದಿಲ್ಲ. ವಿವೇಕದ ಪರಂಪರೆ ಎಂಬುದಿರುತ್ತದೆ; ಎಲ್ಲ ಸಿಟ್ಟು ಅವಿವೇಕವಲ್ಲ, ಎಲ್ಲ ಸಹನೆಯೂ ಷಂಡತನವಲ್ಲ ಎಂಬ ದೃಷ್ಟಿ ಬೆಳೆಯಲಿಕ್ಕೆ ಶ್ರೀಧರರ ಕಾವ್ಯದ ಅಭ್ಯಾಸ ಸಹಾಯಕವಾಗಬಲ್ಲದು ಅನಿಸುತ್ತದೆ.

–೨–

ಶ್ರೀಧರರ ಕಾವ್ಯದ ಬಗ್ಗೆ ಇರುವ ಈ ಲೇಖನದಲ್ಲಿ ಸಾಹಿತ್ಯ ವಿಮರ್ಶೆಯಲ್ಲಿ ಪ್ರಚಲಿತವಿರುವ ಪೂರ್ವಗ್ರಹಗಳ ಕುರಿತು ಕೆಲವು ಮಾತುಗಳನ್ನು ಹೇಳುವುದು ಯೋಗ್ಯವೆನಿಸುತ್ತದೆ. ಇದು ಶ್ರೀಧರರ ಕಾವ್ಯದ ರಸಾಸ್ವಾದನೆಯ ಪೂರ್ವಸಿದ್ಧತೆಯೂ ಹೌದು, ಸಾಹಿತ್ಯದ ಬಗ್ಗೆ ಆರೋಗ್ಯಕರ ದೃಷ್ಟಿಯೂ ಹೌದು, ಸಾಹಿತ್ಯ ಪರಂಪರೆಯನ್ನು ಅರ್ಥೈಸಿಕೊಳ್ಳಲು ತೆರೆದಿಟ್ಟ ಬಾಗಿಲೂ ಹೌದು. (ಮುಂ.ಮಾತುಗಳಿಗೆ ನಾನು ಶ್ರೀಧರರಿಗೆ ಹೇಳಲಾಗದಷ್ಟು ಋಣಿಯಾಗಿದ್ದೇನೆ).

೧) ಸಾಹಿತ್ಯ ಪ್ರತಿಮಾನಿಷ್ಠವೇ ಆಗಿರಬೇಕಿಲ್ಲ. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ.

೧. ಸಹನಾವವತು ಸಹನೌ ಭುನಕ್ತು ಸಹವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು ಮಾವಿದ್ವಿಶಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ ॥

೨. ಪ್ರಾಪ್ತ ಚಾರಿತ್ರ ಸಂದೇಹಾ ಮಮ ಪ್ರತಿಮುಖೇ ಸ್ಥಿತೌ ।
ದೀಪೋ ನೇತ್ರಾತುರಸ್ಯೇವ ಪ್ರತಿಕೂಲಾಸಿ ಮೇ ದೃಢಂ ॥
(ವಾಲ್ಮೀಕಿ ರಾಮಾಯಣ – ಯುದ್ಧಕಾಂಡ)

೩. ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ
ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ ।
ಕೇನಾಪಿ ದೇವೇನ ಹೃದಿ ಸ್ಥಿತೇನ
ಯಥಾ ನಿಯಕ್ತೋಽಸ್ಮಿ ತಥಾ ಕರೋಮಿ ॥ (ವ್ಯಾಸ ಭಾರತ)

೪. ಸ್ನೇಹಂ ದಯಾಂ ಚ ಸೌಖ್ಯಂ ಚ
ಯದಿ ವಾ ಜಾನಕೀಮಪಿ ।
ಆರಾಧನಾಯ ಲೋಕಸ್ಯ
ಮುಂಚತೇ ನಾಸ್ತಿ ಮೇ ವ್ಯತಾ ॥ (ಭವಭೂತಿ– ಉತ್ತರ ರಾಮಚರಿತೆ)

೫. ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥
(ಶಂಕರಾಚಾರ್ಯ ದೇವ್ಯಪರಾಧಕ್ಷಮಾಸ್ತೋತ್ರ)

೬. ಇದು ಲಾಕ್ಷಗೇಹದಾಹಕ್ಕಿದು ವಿಷಮ ವಿಷಾನ್ನಕ್ಕಿದಾ ನಾಡಜೂದಿಂ ।
ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ ॥
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ
ಕೋ
ಪದೊಳಯ್ದುಂ ದುರ್ಣಯಕ್ಕಯ್ದೆಡೆಯನುರು ಗದಾ ದಂಡಂದಿಂ
ಭೀಮಸೇನಂ ॥
(ರನ್ನ – ಗದಾಯುದ್ಧ)

೭. ಕಳಬೇಡ, ಕೊಲಬೇಡ.
ಹುಸಿಯ ನುಡಿಯಲು ಬೇಡ,
ಅನ್ಯರಿಗೆ ಅಸಹ್ಯ ಪಡಬೇಡ.
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ಕೂಡಲಸಂಗಮದೇವನನೊಲಿಸುವ ಪರಿ. (ಬಸಣ್ಣ)

೮. ನನ್ನ ಹರಣ
ನಿನಗೆ ಶರಣ
ಸಕಲಕಾರ್ಯ ಕಾರಣ ।
ನಿನ್ನ ಮನನ
ದಿಂದ ತನನ
ಎನುತಿದೆ ತನು ಪಾವನ ॥ (ಬೇಂದ್ರೆ)

9. "Think not death a theme
of consolation; I had rather live
The servile hind for hire, and eat the bread
Of some man scanity himself sustained.
Then sovereign empire hold over all the shades"
(Homer, Odyssey-XI)

10. In his will is our peace. (Dante)

11. I had not thought death had undone
so many (Dante)

12. Better to reign in hell than serve in heaven (Milton)

13. What man has made of man. (Wordsworth)

ಈ ಸಾಲುಗಳು ಬಿಡಿಯಾಗಿ ಅಥವಾ ಅವು ಬರುವ ಇಡೀ ಕಾವ್ಯ ಪ್ರತಿಮಾ ನಿಷ್ಠವಲ್ಲ. ಪ್ರತಿಮೆಯನ್ನು ವ್ಯಾಖ್ಯಾನಿಸುವ ಪ್ರಯತ್ನಕ್ಕೆ ನಾನು ಇಲ್ಲಿ ಹೋಗುವುದಿಲ್ಲ. ಆದರೆ ಅಡಿಗರ 'ಭೂಮಿಗೀತ' ಇಡೀ ಕವನ ಅಥವಾ "ಮೆದುಳು ಬಚ್ಚಲ ಹಂಡೆಯಲ್ಲಿ ಬೇಯತ್ತಿರುವ ಆಮೆ" (ಚಂಡೆ ಮದ್ದಳೆ) ಎಂಬ ಬಿಡಿಸಾಲು ಯಾವ ಅರ್ಥದಲ್ಲಿ ಪ್ರತಿಮಾನಿಷ್ಠವೋ ಆ ಅರ್ಥದಲ್ಲಿ ನಾನು ಕೊಟ್ಟ ಉದಾಹರಣೆಗಳು ಪ್ರತಿಮಾನಿಷ್ಠವಲ್ಲ. ಕವಿಯ (ಅನುಭವವಾದ, ಭಾವವಾದ ವಿಚಾರ) ಪ್ರತಿಮೆಗಳ ರೂಪದಲ್ಲಿಯೇ ಅಭಿವ್ಯಕ್ತವಾಗಬೇಕೆಂದು ಹಠ ಹಿಡಿಯಬೇಕಾಗಿಲ್ಲ.

೨) ಆಸ್ತಿಕತೆ, ಆಧ್ಯಾತ್ಮಗಳನ್ನು ಕಾವ್ಯ ಬಹಿಷ್ಕರಿಸಬೇಕಿಲ್ಲ.

ಶರಣ ಸಾಹಿತ್ಯ, ದಾಸ ಸಾಹಿತ್ಯ, ಕುಮಾರವ್ಯಾಸ ಭಾರತ ಮುಂತಾದವುಗಳ ಬಗ್ಗೆ ಇತ್ತೀಚೆಗೆ ಬರುತ್ತಿರುವ ವಿಮರ್ಶೆಯಲ್ಲಿ ದೈವ ಶ್ರದ್ಧೆಯೊಂದು ಅಪರಾಧವೆಂಬ ದೃಷ್ಟಿ ಕಂಡುಬರುತ್ತದೆ. ಬೇಂದ್ರೆ, ಕುವೆಂಪು ಅವರ ಆಧ್ಯಾತ್ಮಿಕತೆಯನ್ನು ನಲ್ಲಿ ನೋಡುವ ದೃಷ್ಟಿಯೂ ಇದೆ. ಕುವೆಂಪು ಅವರನ್ನು ಇತರ ಕಾರಣಗಳಿಗಾಗಿ ಮೆಚ್ಚುವ ಹಲವರು

ಅವರ ಆಸ್ತಿಕತೆ, ಆಧ್ಯಾತ್ಮಿಕತೆಗಳನ್ನು ಬಿಸಿ ತುಪ್ಪದಂತೆ ನುಂಗಲೂ ಆಗದೆ, ಉಗಿಯಲೂ ಆಗದೆ ಚಡಪಡಿಸುತ್ತಿದ್ದಾರೆ. ಆಸ್ತಿಕತೆ, ಆಧ್ಯಾತ್ಮಿಕತೆಗಳು ಮೂಢ ನಂಬಿಕೆಯೋ, ಪಲಾಯನವಾದವೋ ಆಗಲೇಬೇಕೆಂದಿಲ್ಲ. ಶ್ರೀ ಅನಂತಮೂರ್ತಿಯವರು ಆಧ್ಯಾತ್ಮಿಕತೆಯನ್ನು ಭೋಳೇತನದೊಂದಿಗೆ ಸಮೀಕರಿಸುತ್ತ ಆಧ್ಯಾತ್ಮಿಕರಾಗದೇ ಇರುವುದನ್ನು ಸದ್ಗುಣವೆಂದು ಗ್ರಹಿಸುತ್ತಾರೆ. ಒಳ್ಳೆಯತನ –ಕೆಟ್ಟತನ, ಶಾಣ್ಯಾತನ–ಭೋಳ್ಯಾತನ, ಶೂರತನ–ಹೇಡಿತನ, ವಿವೇಕ–ಅವಿವೇಕಗಳನ್ನು ಆಸ್ತಿಕತೆ–ನಾಸ್ತಿಕತೆಗಳೊಡನೆ ಸಮೀಕರಿಸಬಾರದು. ಆ ವರ್ಗೀಕರಣಗಳೇ ಬೇರೆ, 'ಅಧ್ಯಾತ್', 'ಆಸ್ತಿಕತೆ'ಗಳನ್ನು ಕರ್ಮಕಾಂಡ (ritualism) ಧಾರ್ಮಿಕ ಸಂಸ್ಥೆಗಳೊಂದಿಗೆ ಸಮೀಕರಿಸಬಾರದು. ಆಸ್ತಿಕತೆ, ಅಧ್ಯಾತ್ಮಗಳಿಗೆ ಕಾವ್ಯ ತನ್ನ ರಾಜ್ಯದಿಂದ ಗಡಿಪಾರು ಶಿಕ್ಷೆ ನೀಡಬೇಕೆಂದು ಬಯಸುವುದು ಯೋಗ್ಯವಲ್ಲ.

೩) ಸಾಹಿತ್ಯದಲ್ಲಿ ಅತಿಮಾನುಷ ಮತ್ತು ಪೌರಾಣಿಕ ಕಲ್ಪನೆಗಳು ಶುದ್ಧ ಸಾಮಾಜಿಕ ನಿಕಷಕ್ಕೆ ಒಳಪಡುವುದಿಲ್ಲ.

ಆಂಧ್ರಪ್ರದೇಶದ ರಾಜಕೀಯದಲ್ಲಿ ಎನ್.ಟಿ.ರಾಮರಾವ್–ಭರತರೆಡ್ಡಿ–ದಿ.ಶ್ರೀಮತಿ ಇಂದಿರಾಗಾಂಧಿ ಆಡಿದ ಪಾತ್ರವನ್ನು ರಾಮ–ಭರತ–ಕೈಕೇಯಿಯರ ಪಾತ್ರವೆಂದು ತಿಳಿಯುವುದು ಮೂರ್ಖತನ. ರಾಜಕಾರಣಕ್ಕಾಗಿ ಅಂತಹ ಘೋಷಣೆಗಳು ಹುಟ್ಟಬಹುದು. ಆದರೆ ರಾಜನೀತಿಜ್ಞರು, ಇತಿಹಾಸಕಾರರು ಅದನ್ನು ಹಾಗೆ ಗ್ರಹಿಸಲಾರರು. ಇಂಗ್ಲೆಂಡಿನಲ್ಲಿ ಇವತ್ತು ಯಾರಾದರೂ ದೆವ್ವದಿಂದಾಗಿ ಹೆದರಿದರೆ ಅದಕ್ಕಾಗಿ ಹ್ಯಾಮ್ಲೆಟ್ ಬರೆದ ಶೇಕ್ಸ್‌ಪಿಯರನನ್ನು ತರಾಟೆಗೆ ತೆಗೆದುಕೊಳ್ಳುವುದು ಮೂರ್ಖತನ. ಅದೇ ರೀತಿ ವರದಕ್ಷಿಣೆಗಾಗಿ ಯಾರಾದರೂ ಹೆಂಡತಿಯನ್ನು ಸುಟ್ಟರೆ ಅದರ ಸಾಂಸ್ಕೃತಿಕ ಬೇರುಗಳನ್ನು ರಾಮಾಯಣದ ಸೀತೆಯ ಅಗ್ನಿಪ್ರವೇಶದಲ್ಲಿ ಹುಡುಕುವುದು ತಪ್ಪು. ಸಮಾಜದಲ್ಲಿ ಹೆಣ್ಣನ್ನು ಸುಡುವುದರ ಬಗ್ಗೆ ಅವರಿಗೆ ಇರುವ ಸಿಟ್ಟು ಸಮರ್ಥನೀಯವಾದರೂ ರಾಮಾಯಣದ ಬಗ್ಗೆ ಅವರ ಮಾತು ಸಾಹಿತ್ಯ ವಿಮರ್ಶೆಯಾಗುವುದಿಲ್ಲ. ಪರಶುರಾಮ ತಾಯಿಯನ್ನು ಕೊಂದ ಬಗ್ಗೆ ಸಿಟ್ಟನ್ನು ವ್ಯಕ್ತಪಡಿಸುವವರು ಪರಶುರಾಮ ಅವಳನ್ನು ಪುನಃ ಬದುಕಿಸಿದುದನ್ನು ಮರೆಯುವುದು ತಪ್ಪು. ಪೌರಾಣಿಕ ಕಲ್ಪನೆಗಳನ್ನು ಸಾಹಿತ್ಯ ವಿಮರ್ಶೆಗೆ ಒಳಪಡಿಸುವವರು ಪುರಾಣಗಳನ್ನು ಸಮಗ್ರವಾಗಿ ತೆಗೆದುಕೊಳ್ಳಬೇಕು ಮತ್ತು ಸಾಮಾಜಿಕ ಸಂಭಾವ್ಯತೆಯ ನಿಯಮಗಳನ್ನು ಒರೆಗಲ್ಲಾಗಿ ಪರಿಗಣಿಸಬಾರದು.

೪) ಸಾಹಿತ್ಯ ಅಧಿಕೃತವಾಗುವುದು (Authentic) ಲೇಕನ ಪರಕಾರ ಪ್ರವೇಶದ ಸಿದ್ಧಿಯಿಂದಲೇ ಹೊರತು ಹುಟ್ಟಿನಿಂದಲ್ಲ. ಮುಖ್ಯವಾಗುತ್ತಿರುವುದು ಖಂಡನಾರ್ಹ. ಹೆಣ್ಣಿನ ಬಗ್ಗೆ ಹೆಣ್ಣು, ದಲಿತರ ಬಗ್ಗೆ ದಲಿತರು ಬರೆದದ್ದು ಮಾತ್ರ ಅಧಿಕೃತವೆನ್ನಿವುದು

ತಪ್ಪು. ಇವೇ ವಾದ ಮುಂದುವರಿಸಿದರೆ ಬ್ರಾಹ್ಮಣರ ಬಗ್ಗೆ ಬ್ರಾಹ್ಮಣೇತರರು ಬರೆದದ್ದೆಲ್ಲಾ ಅನಧಿಕೃತವಾಗುತ್ತದೆ. ಹೆಣ್ಣಿನ ಅನುಭವದ ಬಗ್ಗೆ ಗಂಡು ಬರೆಯುವುದು, ನಿಸರ್ಗದ ಬಗ್ಗೆ ಮನುಷ್ಯ ಬರೆಯುವುದು – ಎಲ್ಲವೂ ಅನಧಿಕೃತ! ಪರಂಪರೆಯ ಕಾವ್ಯ ಬರುವ ಇತರರ ಅನುಭವವನ್ನು ತನ್ನದಾಗಿಸಿಕೊಂಡು (ಇದು ಎಲ್ಲರಲ್ಲೂ ಇರುತ್ತದೆ) ಕತೆಯಾಗಿ, ಕವನವಾಗಿ ಅಭಿವ್ಯಕ್ತ ಮಾಡುವ ಶಕ್ತಿ (ಇದು ಸಾಹಿತಿಯ ವಿಶೇಷತೆ) ಅವನಿಗಿರುತ್ತದೆ. ಕಾವ್ಯದ ಮುಖಾಂತರ ತನ್ನ ಅನುಭವವನ್ನು ಇತರರಿಗೆ ನೀಡುತ್ತಾನೆ. ಇದು ಒಂದು ರೀತಿಯಲ್ಲಿ ಅನುಭವದ ಅದ್ವೈತ. ಶಿವರಾಮ ಕಾರಂತರು ಬ್ರಾಹ್ಮಣರಾದ್ದರಿಂದ ಅವರು ಬರೆದ 'ಚೋಮನದುಡಿ' ಅನಧಿಕೃತ ಎಂಬುದು ತಪ್ಪು. ಕಾರಂತರ ಭಾವ ಪ್ರಪಂಚ ಸಣ್ಣದು ಎಂದರೆ, ಅವರ ಪರಕಾಯ ಪ್ರವೇಶದ ಶಕ್ತಿಯಲ್ಲಿ ಕೆಲವು ತನ್ಮಯತೆ (ತಾನು ಅದೇ ಆಗುವುದು) ಎಂದಲ್ಲ, ಎಲ್ಲ ಪಾತ್ರಗಳೊಡನೆಯೂ ತನ್ಮಯನಾಗಿರಬೇಕು. ಅದೇ ಆತನಿಗೆ ಸಮಗ್ರತೆಯನ್ನು ನೀಡುತ್ತದೆ. ಶುದ್ಧ ಸಾಕ್ಷಿತ್ವವನ್ನು ನೀಡುತ್ತದೆ. ಕಾರಂತರು ಬ್ರಾಹ್ಮಣರಾದ್ದರಿಂದ ಸಮುದ್ರ ಅವರ ಕಾದಂಬರಿಗಳಲ್ಲಿ ಪಾತ್ರವಾಗಿ ಬರುವುದಿಲ್ಲ (ಕುವೆಂಪು ಕಾದಂಬರಿಗಳಲ್ಲಿ ಕಾಡುಪಾತ್ರವಾದಂತೆ) ಎಂದು ತೇಜಸ್ವಿಯವರು ಹೇಳಿದ್ದಾರೆ. ಬ್ರಾಹ್ಮಣರಾಗಿದ್ದ ಬೇಂದ್ರೆಯವರ ಕವನಗಳಲ್ಲಿ ನಿಸರ್ಗ ಪಾತ್ರವಾಗಿ ಬರುತ್ತದೆ. ಪ್ರತಿಭೆ ಯಾವುದೇ ಜಾತಿಯ, ಲಿಂಗದ ಗುತ್ತಿಗೆಯಲ್ಲ. ದಲಿತರು, ಹೆಂಗಸರು ಕೂಡ ಸಾಹಿತ್ಯ ಬರೆಯಲಿ ಎಂಬುದಕ್ಕೆ ಆಕ್ಷೇಪವಿಲ್ಲ. ಆದರೆ ಅವರು ಬರೆದದ್ದು ಮಾತ್ರ ಅಧಿಕೃತ ಎನ್ನುವಾಗ ಕೇವಲ ಹಿಂಗಾಲಿನ ಮೇಲೆ ನಡೆಯುವ ನಾಯಿಯನ್ನು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವಂತೆ ಮಾಡುತ್ತಿದ್ದೇವೆಯೇ ಎಂಬುದನ್ನು ತಿಳಿದಿರಬೇಕು. ದಲಿತ, ಹೆಣ್ಣು ಎಂಬ ಕಾರಣಕ್ಕಾಗಿಯೇ ಅವರನ್ನು ಎತ್ತಿ ಕಟ್ಟುವುದರಿಂದ ಅವರ ಪ್ರತಿಭೆಗೂ ಅಪಚಾರವಾಗುತ್ತದೆ.

೫) ಛಂದಸ್ಸು ಕಾವ್ಯದ ವೈರಿಯಲ್ಲ.

'ನವ್ಯ'ದ ಮುಕ್ತಛಂದ ಪ್ರಚಾರಕ್ಕೆ ಬಂದ ಮೇಲೆ ಛಂದೋಬದ್ಧವಾಗಿರುವ ಕಾವ್ಯ ಆ ಕಾರಣಕ್ಕಾಗಿಯೇ ಅವಜ್ಞೆಗೆ ಒಳಗಾಗಿದೆ. ಮುಕ್ತ ಛಂದವನ್ನಾದರೂ ಸಮರ್ಥವಾಗಿ ಬಳಸಲಿಕ್ಕೆ ಛಂದಸ್ಸಿನ ಮೇಲೆ ಹಿಡಿತವಿರಬೇಕೆಂಬುದು ಹಲವರಿಗೆ ಮರೆತಿದೆ. ಭಾವದ ಗತಿ, ಭಾಷೆಯ ಗತಿ ಸರಿ ಬೆರೆಸಿದ್ದರೆ ಬರುವ ಚೆಂದಕ್ಕಿಂತ ಅವೆರಡರ ಜೊತೆಗೆ ಛಂದದ ಗತಿಯೂ ಸೇರಿದಾಗ ಬರುತ್ತದೆ. ಜೋಗುಳ ಪದಗಳು, ಹಳ್ಳಿ ಹಾಡುಗಳು, ಸೈನಿಕ ಗೀತೆಗಳು ಛಂದೋಬದ್ಧವಾಗಿರುವುದು ಸುಮ್ಮನೇ ಅಲ್ಲ. ಛಂದಸ್ಸು ಉರುಳಾಗದಂತೆ ನೋಡಿಕೊಳ್ಳುವುದು ಕವಿಯ ಕೆಲಸ. ಬಂಡಾಯ ಕವಿಗಳು ಛಂದಸ್ಸನ್ನು ಬಳಸುತ್ತಿರುವುದು ಸ್ವಾಗತಾರ್ಹ.

ಕಾವ್ಯ ಸ್ವರೂಪದ ಬಗ್ಗೆ ನಾನು ಇದುವರೆಗೆ ಹೇಳಿದ್ದರಲ್ಲಿ ಹೊಸತೇನನ್ನೂ ಹೇಳಿಲ್ಲ. ಇವು ಕಾರ್ಯದ ಬಗ್ಗೆ ಇರುವ ಪ್ರಾಥಮಿಕ ಪಾಠಗಳೇ ಆಗಿವೆ.

–೩–

ಮೇಘನಾದ (೧೯೪೫) ಶ್ರೀಧರರ ಮೊದಲ ಕವನಸಂಕಲನ. ಇದರಲ್ಲಿ ೩೨ ಕವನಗಳಿವೆ. ಇಲ್ಲಿಯ ಹಲವು ಕವನಗಳಿಗೆ ಬಡತನದ ಅನುಭವ ತನ್ನ ಮುದ್ರೆಯೊತ್ತಿದೆ. ಇಲ್ಲಿಯ ಹಲವು ಕವನಗಳಿಗೆ ಬಡತನದ ಅನುಭವ ತನ್ನ ಮುದ್ರೆಯೊತ್ತಿದೆ. ಇದು ಕೆಲವೊಮ್ಮೆ ದೈನ್ಯವಾಗಿ, ಕೆಲವೊಮ್ಮೆ ಹಿತೈಷಿಗಳ ಸ್ಮರಣೆಯಾಗಿ, ಕೆಲವೊಮ್ಮೆ ಆಕ್ರೋಶವಾಗಿ, ಕೆಲವೊಮ್ಮೆ ತನಗೆ ತಾನೇ ಕೊಟ್ಟುಕೊಳ್ಳುವ ಧೈರ್ಯದ ದೀಕ್ಷೆಯಾಗಿ ಅವತರಿಸಿದೆ. 'ಗುರುವಿನ ಅಡಿದಾವರೆ'ಯಲ್ಲಿ ಕವನದಲ್ಲಿ ಬಡತನದ ಚಿತ್ರ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ:

> 'ಕಡಲಿನೊಳಗಿನಾ ಕಡ್ಡಿಯಂತೆವೊಲು ತೇಲಿಬಂದೆನಣ್ಣ',
> 'ಹುಸುಳೆತನದೊಳೂ ಹಾಲು ಕಂಡ ನೆನಪೆನಗೆ ತೀರ ಅಲ್ಪ',
> " 'ಕಳ್ಳುಬಳ್ಳಿ' ಕಂಡವರು ಕೇಳಿದವರೆಂಬರಿಲ್ಲದಾಗಿ
> ಬೆಳ್ಳುಳ್ಳಿ ಕೂಡ ಸಿಗದಾಯ್ತು ಮದ್ದಿಗೂ ಕಾಲಚಕ್ರ ತಿರುಗಿ",
> 'ನಂಬಿಕೆಗಳು ನಯವಾಗಿ ಜಾರಿದವು ಸದ್ದುಸುಳಿವು ಇರದೆ'
> ಹುರುಪೆ ಇಲ್ಲದೀ ತಿರುಪೆ ಬಾಳಿನಲಿ ಏನ ಹೇಳಬಲ್ಲೆ
> ಒಂತುರುಷು ಇಲ್ಲದೇ ಆಟ ಹೇಳಿದರೆ ಸೋಲು ಸಿದ್ಧವಲ್ಲೆ".

'ದೀನಲಕ್ಷ್ಮಿಯೆ ಬಾರ' ಕವನದಲ್ಲಿ ಬಡಹುಡುಗನೊಬ್ಬ ತಂಗಿಗೆ ಸಂತೈಸುವ ದೃಶ್ಯ ಜೀವಂತವಾಗಿ ಮೂಡಿಬಂದಿದೆ. ಅವಳ ಕಣ್ಣೀರು ಕಂಡಾಗ ಇವನಿಗೆ 'ಕರುಳಿನುರಿಯೆಣ್ಣೆಯಲ್ಲಿ ಕರಿದ ಹಾಗೆ'ನಿಸುತ್ತದೆ. ಈ ಕವನದ ಕೆಲವು ಸಾಲುಗಳು ಬೇಂದ್ರೆಯವರ 'ನಾನು ಬಡವಿ, ಆತ ಬಡವ' ಕವನದೊಡನೆ ಸಿದ್ಧಿಯಲ್ಲಿ ಸ್ಪರ್ಧಿಸುವಂತಿವೆ;

> "ಬಾ ಮುದ್ದು ಬಂಗಾರ, ನಿನ್ನ ಎಳಮೈಗಿಂದು
>   ಅಳಲಾಯ್ತು ಪರಿಕಾರ, ದೀನ ಮುದ್ರೆ
> ನಿನಗಾಯ್ತಲಂಕಾರ, ನನ್ನ ಭುಜಕಾಷ್ಠಗಳ
>   ದಿಂಬಿನಲಿ ಬಡತನದ ಯೋಗನಿದ್ರೆ".

ಬಡತನದ ದಾರುಣತೆ "ದೇವಧರ್ಮ ವಿಚಾರ ಸತ್ಯತೆ ಸದಾಚಾರ ಯಾವುದಿದ್ದರು ಉಂಡ ಹೊಟ್ಟೆಗೆಲ್ಲ" ಎಂಬ ಮಾತನ್ನೂ ಆಡಿಸುತ್ತದೆ. ಬಡತನದ ಚಿತ್ರಣವನ್ನು

ಶ್ರೀಧರರ ಕಾವ್ಯದಲ್ಲಿ ಕಂಡಾಗ ಗಮನಕ್ಕೆ ಬರುವ ಅಂಶವೆಂದರೆ ಬಡತನವನ್ನು ಅವರು ಎಂದಿಗೂ ಪೂರ್ವಜನ್ಮದ ಪಾಪಕರ್ಮದ ಫಲ ಎಂದು ಪರಿಗಣಿಸಿಲ್ಲ ಎಂಬುದು. ಬಡತನದಲ್ಲಿ ನಂಬಿಕೆಗಳು ನಯವಾಗಿ ಜಾರಿ ಹೋದ ಮೇಲೆ ಅವರು ಪರಂಪರೆಯ ಪ್ರಜ್ಞೆಯನ್ನು ಬೆಳೆಸಿಕೊಂಡದ್ದು ಪರಿಶ್ರಮದ ಸತತಾಭ್ಯಾಸದಿಂದ ಮತ್ತು ಅನುಭವದ ಗರಡಿಯಲ್ಲೇ ಹೊರತು ಮೂಢನಂಬಿಕೆಗಳ, ಕಂದಾಚಾರಗಳ ಅಥವಾ ಧಾರ್ಮಿಕ ಸಂಸ್ಥೆಗಳ ನೆರಳಿನಲ್ಲಿ ಅಲ್ಲ. ಅನುಭವದ ಬಗ್ಗೆ ಅವರ ಮಾತು ನೋಡಿ; “ಉದಧಿಯಾಳದೊಳಿರುವ ನವರತ್ನಗಳಿಗಿಂತ.

ಎದೆಯಾದನುಭವವೆ ಮೇಲು”. (ಅನುಭವ)

ಬಡತನದ ದೈನ್ಯದ ಅನುಭವ ರಾಷ್ಟ್ರೀಯ ದೃಷ್ಟಿಯಾಗಿ ಅಭಿಮಾನ ಹೋರಾಟದ ಛಲ ಬೆಳೆದು ಬಂದಿರುವುದನ್ನು ‘ಶರತ್ಕಾಲ’ ಕವನದಲ್ಲಿ ನೋಡಬಹುದು. ನಿಸರ್ಗದ ಸೌಂದರ್ಯವನ್ನು ವರ್ಣಿಸಿದ ಕವಿ “ಎಂಥ ಚೆಂದವೆ ಇರಲಿ ಬುವಿಬಾನು ಸೊಗಯಿಸದು। ಅಂತರಂಗದಿ ದಾಸ್ಯದಗ್ನಿ ಸುಡಲು” ಎನ್ನುತ್ತಾನೆ. “ಕೊಲ್ಲಬಹ ಕುನ್ನಿಗಳ ಕೊರಳನರಿವುದೆ ಧರ್ಮ । ತಿಳಿಯಿರಿದು ವೀರಯೋಗ” (ಮತಿ ಕೆಂಡವಾಯ್ತು) ಎಂಬಲ್ಲಿ ಹೋರಾಟದ ಛಲ ಸ್ಫೋಟಗೊಳ್ಳುತ್ತದೆ. ಛಲವಿದ್ದರೂ ಕವಿ ಛಲವಾದಿಯಲ್ಲ. ಛಲಕ್ಕಿಂತ ನ್ಯಾಯ ಮುಖ್ಯ. ಛಲವನ್ನು ಮೀರಿದ ವಿಧಿಯೂ ಇರುತ್ತದೆ – ಎಂಬ ಎಚ್ಚರ ಕವಿಗಿದೆ. “ಎಷ್ಟು ಛಲವಿರಲೇನು ವಿಧಿ ಬಂದವುಂಕಿದರೆ । ಕೆಟ್ಟ ನರ ಹರಹರಾ, ಹೇಳಲೇನು” (ಎಷ್ಟು ಛಲವಿರಲೇನು).

ಪ್ರಕೃತಿ ಸೌಂದರ್ಯವನ್ನುವರ್ಣಿಸುವ ‘ಬೆಟ್ಟಕುಳಿ’ ಕವನದಲ್ಲಿ ಛಂದಸ್ಸು ಭಾವಕ್ಕನುಗುಣವಾಗಿ ನರ್ತಿಸುತ್ತದೆ.

“ರಾಜರಾಣಿಯರ ರತ್ನಮಂಟಪಕ್ಕೆ
ಹಾಕಿದ ಯಮ ತೆಕ್ಕೆ;
ನಿ। ರ್ವ್ಯಾಜರಮ್ಯ ಭೂರಮೆಯ ಸೌಂದರಕ್ಕೆ
ಆಗಲಿಲ್ಲ ಧಕ್ಕೆ!”

ಎಂಬಲ್ಲಿ ಇತಿಹಾಸದ ರಾಜ–ರಾಣಿಯರ ನಶ್ವರತೆ. ನಿಸರ್ಗ ಸೌಂದರ್ಯದ ಅಮೃತ ತತ್ವಗಳ ತುಲನೆ ಸುಂದರವಾಗಿದೆ. ಇಳೆಯ ಎದುರು ಆ ಸ್ವರ್ಗವನ್ನು ‘ಸುಳಿದಿಕ್ಕಿ’ದ ಕವಿ ನಿಸರ್ಗವನ್ನು ಪರಮಾತ್ಮನೆಡೆಗೆ ಸೋಪಾನಪಂಕ್ತಿ ಎಂದು ಕರೆದು ಇದನ್ನು ನೋಡಲು ಎಲ್ಲರನ್ನೂ ಆಹ್ವಾನಿಸುತ್ತಾನೆ. (ಸ್ವರ್ಗಕ್ಕೂ ಪರಮಾತ್ಮನ ಸಾಕ್ಷಾತ್ಕಾರಕ್ಕೂ ವ್ಯತ್ಯಾಸವಿದೆ).

'ಕನ್ನಡ ಕಡಲು ಸೀಮೆ' ಕವನದಲಿ ನಿಸರ್ಗ ಸೌಂದರ್ಯದಪಡನೆ ಅಲ್ಲಿಯ ಜನಜೀವನವೂ ಸುಂದರವಾಗಿ ಚಿತ್ರಿತವಾಗಿದೆ. ಈ ಗದ್ದೆಗಳಲ್ಲಿ ಕೆಲಸ ಮಾಡುವ ಹೆಂಗಸರು ಕುಪ್ಪಸ ತೊಟ್ಟಿರುವುದಿಲ್ಲ ಎಂಬುದನ್ನು ಕವಿ ಕಾಮುಕದೃಷ್ಟಿಯಿಲ್ಲದೇ ದಾಖಲು ಮಾಡಿದ್ದಾನೆ:

"ಆ ನೀರಲಿ ನಿಂತ ನೀರೆ–
ಗಿರುವುದು ಬರಿ ಸೀರೆ;
ಆಯದೆಯಾ ಕಾವ್ಯಧಾರೆ–
ಗಿಲ್ಲ ಮರೆಯು ಬೇರೆ;"

'ಹೃದಯ ಪರೀಕ್ಷೆ', 'ಯುದ್ಧಾಯ ಯುಜ್ಯಸ್ವ' ಕವನಗಳಲ್ಲಿ ನಿಷ್ಠುರ ಆತ್ಮವಿಮರ್ಶೆಯಿದೆ. 'ಹೃದಯ ಪರೀಕ್ಷೆ'ಯಲ್ಲಿ ಮೋಹವನ್ನು ಪ್ರೇಮವೆಂದು, ವಿಷವನ್ನು ಅಮೃತವೆಂದು, ತೃಷೆಯನ್ನು ದೈವವೆಂದು ಭ್ರಮಿಸಿದ್ದು, ದೈವಮಾಯೆಯನ್ನು ಎದುರಿಸಲು ತನ್ನ ಮಾಯೆಯನ್ನು ಬೀರಿದ್ದು, ತನ್ನ ಮಾಯೆಯಲ್ಲಿ ತಾನೇ ಸಿಲುಕಿದ್ದು – ಎಲ್ಲವನ್ನೂ ಕವಿ ಸರಳವಾಗಿ ನಿವೇದಿಸುತ್ತಾನೆ. ಕವಿತೆಯ ಮುಂದಿನ ಭಾವ ಅದ್ಭುತವಾಗಿದೆ. ತನ್ನ ಮಾಯೆಯ ಪಂಜರವನ್ನು ಒಳಗಡೆಯಿಂದ ಕೀಲಿಸಿ ಮೆಟ್ಟಿ ಮುರಿಯಲು ನೋಡುತ್ತಾರೆ. ಅದು ಮುರಿಯದಿದ್ದಾಗ ಕಟ್ಟಿ ಒಳಗೆ ಕೂಡಿ ಹಾಕುತ್ತಾನೆ. ಮನಸ್ಸಿನ ರೀತಿ ನೀತಿಗಳ ಕುರಿತು ಚಿಂತನ ನಡೆಸುತ್ತಾನೆ. ಈ ಕವನ ತನ್ನ ತೀವ್ರತೆ, ಸ್ಪಷ್ಟತೆ, ಆಳದ ತಾತ್ವಿಕತೆಗಳಲ್ಲಿ ಅದ್ಭುತ ಸಿದ್ಧಿಯಾಗಿದೆ. 'ಯುದ್ಧಾಯ ಯುಜ್ಯಸ್ವ' ಕವನದಲ್ಲಿ ಕವಿ ತನ್ನ ಕೋಮಲ ಹೃದಯಕ್ಕೆ ಆತ್ಮಶಕ್ತಿಯ ವೀರತನವನ್ನು ಉಪದೇಶಿಸುತ್ತಾನೆ:

"ಮೂರ್ಖರಿಗೆ ಎತ್ತದಿರೆ ಮತ್ತೆ ದೇವ ನಿನ–
ಗೇಕೆ ಮುಷ್ಟಿಯಿತ್ತ?
ನೂರ್ಕಾಲ ಬದುಕಿ ಫಲವೇನು, ಹೇಡಿ ತಾ–
ನಿದ್ದು ಯಿದ್ದು ಸತ್ತ!"
"ವಿಧಿವಾದ ಶರಣತೆಯ ನಂಬಬೇಡ, ನಡೆ
ತಿಳಿವನೀಂಟಿ ತೇಗು–
ಅಧಿಕಾರದಿಂದ ಭಯವೃತ್ರನನ್ನು ಅರಿ
ದೊಗೆದು ಇಂದ್ರನಾಗು!"

ವೃತ್ರ–ಇಂದ್ರರ ಪ್ರತಿಮೆ ವೈದಿಕ ಮೂಲದ್ದಾಗಿದೆ. ಕೃಷ್ಣ, ಅರ್ಜುನ ಇಬ್ಬರೂ ಒಬ್ಬನಲ್ಲೇ ಇರುವರೆಂಬ ದೃಷ್ಟಿಯ ಹಿನ್ನೆಲೆಯಲ್ಲಿ 'ಕ್ಷುದ್ರಂ ಹೃದಯ ದೌರ್ಬಲ್ಯಂ', 'ತತೋ ಯುದ್ಧಾಯ ಯುಜ್ಯಸ್ವ' ಎಂಬ ಗೀತೋಪದೇಶ ಸ್ವಗತ ಸಂಭಾಷಣೆಯಾಗುತ್ತದ.

'ಹೃದಯ ಪರೀಕ್ಷೆ', 'ಯುದ್ಧಾಯ ಯುಜ್ಯಸ್ವ' ಈ ಎರಡೂ ಕವನಗಳಲ್ಲಿ ಪಾಂಡಿತ್ಯ, ಅನುಭವಗಳು ಏಕಪಾಕದಲ್ಲಿ ಹದವಾಗಿ ಬೆರೆತು ಸಮತೂಕದ ದೃಷ್ಟಿ ಲಭಿಸಿದೆ.

ಹೊರಜಗತ್ತಿನ ಅನುಭವಗಳಿಂದ ಕವಿಯ ಒಳಗಿನ ಪುಟ್ಟ ಮಧುರಲೋಕ ಘಾಸಿಯಾದುದನ್ನು "ಪುಟ್ಟದೊಂದು ಪಟ್ಟಣ" ಮಾರ್ಮಿಕವಾಗಿ ಚಿತ್ರಿಸುತ್ತದೆ. ಕವಿಯ ಪುಟ್ಟ ಪಟ್ಟಣದ ಚಿತ್ರ ಬಾಲ್ಯದ ನೆನಪುಗಳಂತೆ, ಮಧುರ ಕನಸುಗಳಂತೆ ಆತ್ಮೀಯವಾಗಿದೆ. ದೊಡ್ಡ ಜಗತ್ತಿನ ಕ್ರೂರ ಅನುಭವ ಕವಿಯ ದೃಷ್ಟಿಯನ್ನು ಮಕ್ಕಳತ್ತ ತಿರುಗಿಸಿದಾಗಿನ ಭಾವ 'ಮಕ್ಕಳಿಗೆ ಕರೆ ಕವನದಲ್ಲಿದೆ. ಇಲ್ಲಿ ಕವಿ ತನಗಿರುವ ಹೊಗಳಿಕೆಯ ಶಕ್ತಿಯನ್ನೆಲ್ಲ ಮಕ್ಕಳ ಮೇಲೆ ಧಾರೆಯೆರೆದಿದ್ದಾನೆ. ಕವನದ ಛಂದಸ್ಸು ಕೂಡ ಮಕ್ಕಳೊಡನೆ ಮಗುವಾಗಿ ಕುಣಿಯುತ್ತಿರುವ ಪ್ರೌಢನ ಹಾಗೆ ತನ್ನ ಭಂಗಿ ಭಣಿತಗಳನ್ನು ತೋರಿಸುತ್ತದೆ. 'ಮಿತ್ರನಿಗೆ ಪತ್ರ', 'ಪ್ರೀತಿಯ ನೆನೆನೆನೆವೆ' – ಕವನಗಳಲ್ಲಿ ಗೆಳೆತನದ ಸವಿ, ಶುಭಕಾಮನೆಗಳು ಅಭಿವ್ಯಕ್ತವಾಗಿದೆ.

ಮೊದಲ ಕವನ ಸಂಕಲನವಾದರೂ ಭಾವ, ಭಾಷೆ, ಛಂದಸ್ಸುಗಳ ಮೇಲೆ ಕವಿಗಿರುವ ಹಿಡಿತ ಹಲವು ಕವನಗಳಲ್ಲಿ ಕಂಡುಬರುತ್ತದೆ.

ಕಿನ್ನರಗೀತ (೧೯೪೭) ಇದರಲ್ಲಿ ನಾಲ್ಕು ಕವನಗಳಿವೆ. ಇವುಗಳನ್ನು 'ಕಥನಕವನ'ಗಳೆಂದು ಕರೆಯಲಾಗಿದೆಯಾದರೂ ಕಥನಕವನ (narrative poem) ವಿರುವುದು 'ಖಗ್ರಾಸಖಂಡ' ಒಂದೇ. ಉಳಿದವು ನಾಟಕೀಯ ಸ್ವಗತಗಳು (dramatic monologues). ಬಹುಶಃ ಆಗಿನ ವಿಮರ್ಶೆಯ ಪರಿಭಾಷೆಯಲ್ಲಿ ಇವೆರಡರ ಅಂತರ ಅಷ್ಟು ಮುಖ್ಯವಾಗಿರಲಿಲ್ಲವಾದ್ದರಿಂದ ಮತ್ತು ಈ ಎಲ್ಲ ಕವನಗಳಲ್ಲಿಯೂ ಒಂದು ರೀತಿಯ ಕಥೆ ಇರುವುದರಿಂದ ಈ ಕವನಗಳನ್ನು 'ಕಥನಕವನ'ಗಳೆಂದು ಕರೆಂಯುಲಾಗಿದೆ. ಈ ಸಂಕಲನದ ಮುನ್ನುಡಿಕಾರರಾದ ಶ್ರೀ ಜಿ.ಎ.ನರಸಿಂಹಮೂರ್ತಿಯವರು ಹೇಳಿರುವಂತೆ "ಶ್ರೀಧರರ ಕವಿತೆಗಳಲ್ಲಿ ಭಾವ ಪ್ರಧಾನವೇ ಹೊರತು ಕತೆಯ ಓಟವಲ್ಲ".

'ಕಿನ್ನರಗೀತ', 'ಹೂಬಾಳು', 'ಮಲ್ಲಿಕಾ ಮಾಧವೀಯ' ಈ ಮೂರು ಕವನಗಳ ವಸ್ತು ಪ್ರೇಮ. ಅಷ್ಟೇ ಅಲ್ಲ (ಶ್ರೀಧರರನ್ನು ಸಂಪ್ರದಾಯಜಡರೆಂದು ಗ್ರಹಿಸಿಕೊಂಡವರಿಗೆ ಅಚ್ಚರಿಯಾಗುವಂತೆ) ವಿವಾಹಪೂರ್ವಪ್ರೇಮ. 'ಕಿನ್ನರಗೀತ'ದಲ್ಲಿ ಶಾಲೆಯ ವಿದ್ಯಾರ್ಥಿ (ಕಿನ್ನರ) ಯೊಬ್ಬನ ಲಹರಿಯ ಚಿತ್ರಣವಿದೆ. ಈತನ ಪ್ರೇಮಕ್ಕೆ ಯಾವೊಬ್ಬ ಹೆಣ್ಣೂ ಕೇಂದ್ರವಲ್ಲ. ಸ್ತ್ರೀಸೌಂದರ್ಯದಿಂದ ಆಕರ್ಷಿತನಾಗುವ ಭಾವಕ್ಕೆ ಯುವಹೃದಯವೊಂದು ಸಜ್ಜಾಗುವ ಅವಧಿಯ ಸಂಭ್ರಮ ಸುಂದರವಾಗಿ ಮೂಡಿಬಂದಿದೆ. ಇಲ್ಲಿಯ ವಿದ್ಯಾರ್ಥಿ ಚಂಪೆ, ಸೀತೆ, ಮಾಲತಿ, ಶಾರದೆ, ಲಲಿತೆ – ಎಲ್ಲರನ್ನೂ ಬಣ್ಣಿಸುತ್ತಾನೆ, ಅಣಕವಾಡುತ್ತಾನೆ.

ಗದರಿಸುತ್ತಾನೆ, ಛೇಡಿಸುತ್ತಾನೆ, ಪುನಃ ಸಾಂತ್ವನಗೊಳಿಸುತ್ತಾನೆ. ತರಗತಿಯ ಪಾಠವೆಲ್ಲ ಇವರ ಎದುರು ಕ್ಷುಲ್ಲಕ ಇವನಿಗೆ–

'ಜ್ಞಾನದಾನವೆತ್ತ ನಿಮ್ಮ
ಪ್ರೇಮದಾನದೆದುರಿಗೆ?'
ಅಷ್ಟೇ ಅಲ್ಲ, 'ರೊಕ್ಕವಿಲ್ಲದೆಂಬ ಜಗದ
ದುಕ್ಕವಿತ್ತಬಾರದು'.

ಇದು ವಯಸ್ಸಿನ ಸಹಜ ಭಾವವನ್ನು ಉತ್ತಮವಾಗಿ ಅಭಿವ್ಯಕ್ತಿಸುವಲ್ಲಿ ಈ ಕವನ ಯಶಸ್ವಿಯಾಗಿದೆ. ವಿಶೇಷವಾದ ಸಂಗತಿ ಒಂದಿದೆ – ಈ ಕನ್ನೆಯರ ಚೆಲುವಿನಲ್ಲಿ ಈ ಹುಡುಗ ತಮ್ಮನ ಒಲವು, ಅಮ್ಮನ ನಗೆಯನ್ನೂ ಕಾಣುತ್ತಾನೆ.

'ಚೆನ್ನಿಗಿದ್ದ ತಮ್ಮನೊಲವು
ನಿಮ್ಮ ಕಣ್ಣು ಹೊಕ್ಕಿತೋ,
ಅಮ್ಮನೀವ ಮುದ್ದುನಗೆಯು
ನಿಮ್ಮ ಮುಖದಿ ಸಿಕ್ಕಿತೋ!'

ಪ್ರಬುದ್ಧನಾಗುವ ಪ್ರಕ್ರಿಯೆಯ ಒಂದು ಹಂತದ ಈ ಮಾನಸಿಕ ಅವಸ್ಥೆಯನ್ನು ಗುರುತಿಸಿರುವುದು ಕವಿಯ ಪ್ರತಿಭೆಗೆ ಸಾಕ್ಷಿಯಾಗಿದೆ.

'ಹೂಬಾಳು' ಕವನದಲ್ಲಿ, ೨೦ನೆಯ ಶತಮಾನದ ಮಧ್ಯಮ ವರ್ಗದ ವಿನಯವೆಂಬ ವಿದ್ಯಾಧರ (Graduate) ತನ್ನ ವಿಷಾದಾಂತ ಪ್ರೇಮಕಥೆಯನ್ನು ತಾನೇ ಹೇಳುತ್ತಾನೆ. ಇದರಲ್ಲಿ ಪ್ರೇಮ 'ಜಡಧರ್ಮದಂಕುಶದ ತಿವಿತದಿಂದ' ಭಗ್ನವಾಗುವ ಕಥೆಯಿದೆ. ಯೌವನೋದಯ, ಪ್ರೀತಿ ಬೆಳೆದ ರೀತಿ, ನಂತರ ಭಗ್ನವಾದ ರೀತಿ – ಎಲ್ಲವೂ ಆಯಾ ಕಾಲದ ಭಾವಸಂಭ್ರಮ – ವಿಭ್ರಮಗಳ ಶ್ರೀಮಂತಿಕೆಯಲ್ಲಿ ವಾಸ್ತವಿಕ ವಿವರಗಳೊಂದಿಗೆ ಚಿತ್ರಿತವಾಗಿವೆ. 'ಅವ ಜಾತಿಯಲ್ಲ, ಧನವಾತಗಿಲ್ಲ, ಬರಿ ವಿದ್ಯೆಯಿಂದಲೇನು' ಎಂದು ಹುಡುಗಿಯ ಅಪ್ಪ ವಿನಯನನ್ನು ತಿರಸ್ಕರಿಸುತ್ತಾನೆ. ಆ ಹುಡುಗನಿಗೆ 'ವರವರಣದಲ್ಲಿ' ಸ್ವಾತಂತ್ರ್ಯವೇ ಇಲ್ಲ. ಅಪ್ಪ ನೋಡಿದ ವರನೊಂದಿಗೆ ಅವಳ ಮದುವೆಯಾಗುತ್ತದೆ. ಈ ಸಂದರ್ಭದಲ್ಲಿ ಬರುವ

'ಮತ್ತೇನ ಹೇಳಲೀ ಕಥೆಯ ಬರೆಯುತಿರೆ
ನಡುಗುತಿಹುದು ಬೆರಳು'!

ಎಂಬ ಸಾಲಿನಲ್ಲಿ ಜ್ವರದ ತೀವ್ರತೆಯ ಕಾವ್ಯೋದಯ ಕಂಡುಬರುತ್ತದೆ. ಜಾತಿ, ಧನ, ಧರ್ಮ ಎಲ್ಲವೂ ಸೇರಿ ಪ್ರೇಮವನ್ನು ಭಗ್ನವಾಗಿಸಿದ ಕಥೆ ಮಾರ್ಮಿಕವಾಗಿ

ಮೂಡಿಬಂದಿದೆ. ವಿದ್ಯೆಯಿದ್ದರೂ ಬಡತನ ಹೇರುವ ಅಸಹಾಯಕ ಅಳಲು ತೀವ್ರವಾಗಿ ಚಿತ್ರಿತವಾಗಿದೆ. ಹೊಸಗನ್ನಡ ಕಾವ್ಯರಾಶಿಯಲ್ಲೇ ಒಂದು ಅಪರೂಪದ ಕವನ ಇದಾಗಿದೆ.

'ಮಲ್ಲಿಕಾ ಮಾಧವೀಯ' ಕವನದಲ್ಲಿ ಮಾಧವನೊಡನೆ ತನ್ನ ಪ್ರಣಯ ವಿಷಾದಾಂತವಾಗುವ ಅಪಾಯ ತಪ್ಪಿ ಸುಖಾಂತವಾದ ಕಥೆಯನ್ನು ಮಲ್ಲಿಕೆ ತನ್ನ ಗೆಳತಿಗೆ ಹೇಳುತ್ತಾಳೆ. ಸಾಂಪ್ರದಾಯಿಕವಾಗಿ ವಿವಾಹವಾಗಲು ಬಂದ ವರನೇ ಮಲ್ಲಿಕೆ–ಮಾಧವರ ಮಿಲನಕ್ಕೆ ದಾರಿ ಮಾಡಿಕೊಡುತ್ತಾನೆ. ವರನ ಹೃದಯ ವಿವೇಕದೆದುರು ಮಾಧವನ ಸರಸ ಮತ್ತು ಆತ ಮಲ್ಲಿಕೆಗೆ ಹೇಳಿಕೊಡುವ ಉಪಾಯಗಳು ಸಪ್ಪೆಯಾಗುತ್ತವೆ. ಮಲ್ಲಿಕಾ–ಮಾಧವರ ಪ್ರೇಮದ ಶಕ್ತಿಯ, ಆರೋಗ್ಯಕರ ದೃಷ್ಟಿಯ ಪರಿಚಯವಾಗುವುದು ಮಲ್ಲಿಕೆ ತನ್ನ ಗೆಳತಿಗೆ ಹೇಳುವ ಮಾತಿನಲ್ಲಿ–

> 'ಪ್ರಭೆ ನೀನೆಂಥವಳಿನ್ನೂ ತಿಳಿಯದ
> ಸನ್ಯಾಸಿನಿಯರ ಹಾಗೆ
> ಅಭಿಲಾಷೆಯನೊತ್ತಾಯದೊಳೊತ್ತಿಹೆ
> ಹಗೆಯಾದೀತದು ಕಡೆಗೆ ।'

ಆಸುರ ಯಜ್ಞಕ್ಕೆ ಬಲಿಯಾಗದೇ ಹೃದಯವನ್ನು ಜೋಪಾನ ಮಾಡಿ ನಿನ್ನ ಮನ ಮೆಚ್ಚಿದವನಿಗಾಗಿ ಕಾಯಬೇಕು ಎಂದು ಮಲ್ಲಿಕೆ ಗೆಳತಿಗೆ ಹೇಳುತ್ತಾಳೆ. ಈಗ ನಿನ್ನ ಸರತಿ ಎಂದು ಸರಸವಾಡುತ್ತಾಳೆ.

'ಹೂಬಾಳು', 'ಮಲ್ಲಿಕಾಮಾಧವೀಯ' – ಈ ಎರಡೂ ಕವನಗಳಲ್ಲಿ ಮದುವೆ, ಪ್ರೇಮ ಪರಸ್ಪರರ ಸಂಬಂಧಿತವಾಗಿ ನೋಡಲ್ಪಟ್ಟಿದ್ದು, ಇಲ್ಲಿ ವಾಸ್ತವಿಕತೆ ಮತ್ತು ಆರೋಗ್ಯಕರ ದೃಷ್ಟಿ ಕಂಡುಬರುತ್ತದೆ. ಭಾವುಕ ದುರಂತವಾಗಲೀ, ಅಸಂಭವನೀಯ ಸುಖಾಂತವಾಗಲೀ ಇಲ್ಲಿ ಇಲ್ಲ. ವಾಸ್ತವದ ಕಟುತ್ವ, ಭಾವದ ಆಳ ಇಲ್ಲಿ ವಿಚಿತ್ರವಾಗಿವೆ. ಎರಡೂ ಕವನಗಳನ್ನು ಒಟ್ಟಿಗೆ ನೋಡಿದಾಗ ಕವಿ ಘೋರ ನಿರಾಶಾವಾದ, ಅತಿರೇಕದ ಆಶಾವಾದ್ಧ ನಡುವೆ ಸಮತೂಕದ ವಿವೇಕವನ್ನು ಕಾಯ್ದುಕೊಂಡದ್ದು ಕಂಡುಬರುತ್ತದೆ.

'ಖಗ್ರಾಸಖಂಡ' ಕವನದಲ್ಲಿ ನೇತಾಜಿ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಸಿದ ಹೋರಾಟ ಅನ್ಯೋಕ್ತಿಯ ಮೂಲಕ ಅಭಿವ್ಯಕ್ತವಾಗಿದೆ. ಭರತದೇಶದಿಂದ ಸಿಂಹಪುರಕ್ಕೆ ಓಡಿಹೋದ ದೊರೆ ಹರಿಕುಮಾರ ಪ್ರಚ್ಛನ್ನನಾಗಿ ತನ್ನ ಒಡನಾಡಿಗಳ ಮತ್ತು ಸ್ಥಳೀಯರ ಸೈನ್ಯ ಕಟ್ಟುತ್ತಾನೆ. ಪಡುವಣ ಸಾಮ್ರಾಟನನ್ನು ಅವರು ಬ್ರಹ್ಮದೇಶದಲ್ಲಿ ಎದುರಿಸುತ್ತಾರೆ. ವೀರಾವೇಶದ ಹೋರಾಟ ತಾದಾತ್ಮ್ಯದ ಭಾವಾಭಿವ್ಯಕ್ತಿ ಪಡೆದಿದೆ. "ಅಗ್ನಿಪಿಂಡಗಳೇ। ಕಾಲದಂಡಗಳೇ। ಶಸ್ತ್ರಖಂಡಗಳೆ ನಿಲ್ಲಿರೆದೆ ಚಾಚಿ" ದೇವತೆಗಳು ಆನಂದದಿಂದ ಈ ಸೇವೆಗೆ ಹೂಮಳೆ ಸುರಿಸುತ್ತಾರೆ. ಮೊದಲ ಹಂತದಲ್ಲಿ ಈ ಸೈನ್ಯ ಗೆಲ್ಲುತ್ತದೆ. ಆಗ

"ಬಂಡವಾಲಶಹ। ತಂಡ ಚೀರಿತಹ। ಗಂಡ ಸತ್ತಂತ – ಅಬಲೆಯಂತಾಯ್ತು". ಎರಡನೇ ಹಂತದಲ್ಲಿ ಸೋಲು ಕಂಡಾಗ ಕವಿ ಹೇಳುತ್ತಾನೆ – "ಅತ್ತು ಅತ್ತು ನಾ। ಸತ್ತು ಹೋದೆ ನಾ। ಹೊತ್ತು ಸುದ್ದಿಯನು ಕೇಳಿ ಹೃದಯದಲಿ। ಬಿತ್ತು ಕಾದ ಕ– । ಬ್ಬಿಣದ ಗೋಲಕಾ । ಗ್ರಸ್ತವಾಗಿತ್ತು ಆತ್ಮ ಕತ್ತಲಲಿ॥" "ಬರದ ಮೇಲೆ ಬರ। ಬರೆಯ ಮೇಲೆ ಬರೆ। ಹೊರೆಯ ಮೇಲೆ ಹೊರೆ ಹೇರಿದರು ಪರರು। ತೆರದ ಮೇಲೆ ತೆರ। ಕರದ ಮೇಲೆ ಕರ। ಹಾಕಿದರು ಪರರು – ಮನುಜ ದಾನವರು ॥" ಹರಿಕುಮಾರನ ಸಾವಿನೊಂದಿಗೆ "ಸಹರದಂತೆ ನಾಡೆಲ್ಲ ರುದ್ರ ನಾಟಕದ ಬಯಲಾಯ್ತು". ಕವನದ ಕೊನೆಗೆ ಕವಿ ಹೇಳುತ್ತಾನೆ – ಇದು ಪ್ರಳಯವಲ್ಲ, ಖಗ್ರಾಸ ಮಾತ್ರ. ಬೆಂಕಿಯ ಸತ್ವ ಒಳಗಿದೆ.

'ಖಗ್ರಾಸಖಂಡ'ವೆಂಬ ಹೆಸರು ಕವಿಯ ದುರಂತ ಪ್ರಜ್ಞೆಯನ್ನೂ ಆಶಾವಾದವನ್ನೂ ಏಕಕಾಲಕ್ಕೇ ಸೂಚಿಸಲು ಸಮರ್ಥವಾಗಿದೆ. ಖಗ್ರಾಸ ಸೂರ್ಯ / ಚಂದ್ರಗ್ರಹಣವಾದರೂ ಕಾಲಾವಧಿಯಲ್ಲಿ ಬಿಡಲೇಬೇಕಲ್ಲ. ವಿಶಾಖದತ್ತನ 'ಮುದ್ರಾ ರಾಕ್ಷಸ' ನಾಟಕದ ಪ್ರಸ್ತಾನೆಯಲ್ಲಿ ಚಂದ್ರಗ್ರಹಣದ ಮಾತು ಬರುತ್ತಲೇ 'ನಾನಿರುವಾಗ ಯಾರು ಚಂದ್ರ (ಗುಪ್ತ)ನನ್ನು ಹಿಡಿಯುವವರು?" ಎಂಬ ಚಾಣಕ್ಯನ ಗುಡುಗು ಕೇಳಿಬರುತ್ತದೆ. ಅಷ್ಟೇ ಮಾರ್ಮಿಕವಾಗಿದೆ 'ಖಗ್ರಾಸಖಂಡ'ವೆಂಬ ಹೆಸರು. ಈ ಕವಿಯ ಸತ್ವ ಭಾವಗೀತಕಾರನವೇ ಹೊರತು ಕಥನಕಾರನದಲ್ಲ ಎಂಬುದನ್ನು ಈ ಕವನ ವಾದಾತೀತವಾಗಿ ಸಿದ್ಧಮಾಡುತ್ತದೆ.

ಈ ಸಂಗ್ರಹದಲ್ಲಿಯ Dramatic Monologues ಎಲಿಯಟ್ಟನ ರೀತಿಯವಲ್ಲ, ಬ್ರೌನಿಂಗನ ರೀತಿಯವು. ಛಂದೋಗತಿಯಲ್ಲಿ ಎಂಟು ಮಾತ್ರೆಯ ಗಂಟು ಕವಿಗೆ ಹೆಚ್ಚು ಆಕರ್ಷಕವಾಗಿದೆ. ಕೆಲವೊಮ್ಮೆ ಮಾತ್ರೆಯ ಲೆಕ್ಕಕ್ಕಿಂತ ತಾಳದ ಗತ್ತಿಗೆ ಹೆಚ್ಚು ಲಕ್ಷ್ಯಕೊಟ್ಟದ್ದು ಕಂಡುಬರುತ್ತದೆ.

ಅಮೃತಬಿಂದು (೧೯೪೯)ವಿನಲ್ಲಿ ೫೧ ಕವನಗಳಿವೆ. ಗಂಡು–ಹೆಣ್ಣಿನ ಒಲವು ಹಾಗೂ ರಾಷ್ಟ್ರೀಯ ಭಕ್ತಿ ಬಹಳ ಕವನಗಳ ವಸ್ತುವಾಗಿವೆ. ಭಾವಾಭಿವ್ಯಕ್ತಿ ಹೆಚ್ಚು ಸೂಕ್ಷ್ಮವೂ, ಪ್ರೌಢವೂ ಆಗಿದೆ. ಕೆಲವು ಕವನಗಳಲ್ಲಿ ಛಂದದೊಳಗೂ ಸ್ವಚ್ಛಂದದ ಸಿದ್ಧಿ ಇದೆ. ಕವಿಯ ಜೀವನ ದೃಷ್ಟಿಯಲ್ಲಿ ಉತ್ಸಾಹ, ಆವೇಶಕ್ಕಿಂತ ಹೆಚ್ಚಾಗಿ ಸಂತಾಪ, ಮಂಗಲಾಕಾಂಕ್ಷೆ ಕಂಡುಬರುತ್ತದೆ. ಆತ್ಮವಿಮರ್ಶೆಯ ಕವನಗಳು ಯಾವುದೇ ಸೋಗಿನಲ್ಲಿ ಸುಳ್ಳಾಗುವ ಹಾದಿ ಹಿಡಿಯುವುದಿಲ್ಲ.

ಮೊದಲ ಕವನ 'ಭಾರತ ಸ್ವಾತಂತ್ರ್ಯ'ದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಕಾಲದಲ್ಲಿ ಉಂಟಾದ ಸಂಭ್ರಮಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯದ ಜವಾಬ್ದಾರಿಯ ಕುರಿತು ಕವಿಯ ಕಾಳಜಿ ಅಭಿವ್ಯಕ್ತವಾಗಿದೆ. ಭಾರತೀಯರ ಶೋಕ ಮುಗಿಯಿತೆಂದು ಒಮ್ಮೆ

ಕವಿ ತಿಳಿಯುತ್ತಾನೆ. ಆದರೆ ಮತ್ತೆ ಗಾಢಾಂಧಕಾರವೇ ಕಾಣುತ್ತದೆ.

"ಧನಶಕ್ತಿ, ಶಾರೀರ ಶಕ್ತಿ, ಧೀ ಶಕ್ತಿಗಳ
ಪಡೆದಲ್ಪಸಂಖ್ಯರನವರತ ತಮ್ಮ
ಬಲುಮೆಯಿಂದೂನಬಲರನ್ನಾಳಲೆಳಸುತಿಹ
ಕಲುಷ ಚಿತ್ರವ ಕಂಡೆ ಭಾರತದಲ್ಲಿ!"
ಹೀಗಾಗದಿರಲು, "ಭಾರತ ಸ್ವಾತಂತ್ರ್ಯ ಮಿಂಚಿಮೆರೆಯಲು ಜನತೆ
ವೀರಧರ್ಮದ ಹಿಡಿದು ನಿಲ್ಲಬೇಕು;
ಆ ರಿಸಿಗಳೆಂದುದರಗಿಸಿಕೊಳ್ಳಬೇಕು;
ಯಾವಿಗಳ ಮಾಯೆಯನು ಗೆಲ್ಲಬೇಕು".

ಅಡಿಗರ "ಕಟ್ಟುವೆವು ನಾವು" ಕವನದೊಂದಿಗೆ ಈ ಕವನವನ್ನು ಹೋಲಿಸಿದರೆ ಶ್ರೀಧರರ ದೂರದೃಷ್ಟಿ ಸ್ಪಷ್ಟವಾಗುತ್ತದೆ. 'ಯಾರಿಗೆ ಬಂತು, ಎಲ್ಲಿಗೆ ಬಂತು, ನಲವತ್ತೇಳರ ಸ್ವಾತಂತ್ರ್ಯ' ಎಂದು ಬಂಡಾಯ ಕವಿಗಳು ಈಗ ಕೇಳುವ ಪರಿಸ್ಥಿತಿಯನ್ನು ಶ್ರೀಧರರು ಆಗಲೇ ಕಂಡಿದ್ದರೆಂಬುದು ಅಚ್ಚರಿಗೊಳಿಸುತ್ತದೆ. 'ಕವಯಃ ಕ್ರಾಂತದರ್ಶಿನಃ' ಎಂಬುದು ಇದೇ ಅರ್ಥದಲ್ಲಿ ಅಲ್ಲವೇ?

ನಾಳ್ಗಾಹಿಗೆ' ಕವನದಲ್ಲಿ ಕವಿ ಕೇಳುತ್ತಾನೆ:
　　'ಬಿಡುಗಡೆಯ ಸಡಗರವನಡಿಗಡಿಗೆ ಕಂಡಾಯ್ತು
ನಾಡುದ್ದ ನಿನ್ನೆಯಿಂದು;
　　ಬಿಡುಗಡೆಯ ಪಡೆದ ಭಾರತದ ಬಡಜೀವಿಗಳ
ಬಡತನಕೆ ಮುಕ್ತಿಯೆಂದು?'

ಗಾಂಧಿಯ ಸ್ಫೂರ್ತಿದಾಯಕ ನೆನಪು 'ರಾಷ್ಟ್ರಪಿತಾಮಹ' ಕವನವನ್ನು ಬರೆಸಿದರೆ ಗಾಂಧಿಹತ್ಯೆಯ ನೆನಪು 'ದುಃಖಾಷ್ಟಕ'ಕ್ಕೆ ಕಾರಣವಾಗಿದೆ. ಗಾಂಧಿಯ ಗುಣಗಳನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ ಕವಿಗೆ. ಗಾಂಧಿಹತ್ಯೆ ಸತ್ಯ, ಪ್ರೇಮ, ಅಹಿಂಸೆ, ಮೈತ್ರಿ, ರಾಷ್ಟ್ರೀಯತೆ ಮುಂತಾದ ಮೌಲ್ಯಗಳ ಕೊಲೆಯೆನಿಸಿ ಕವಿಯನ್ನು ಘಾಸಿಗೊಳಿಸಿದೆ. "ಅಕುಟಿಲನ ಮರಣಕ್ಕೆ ಮರುಗಿದ ಕರಣ ಹಸುಳೆಗಳಾದವೋ" ಮುಂತಾಗಿ ದುಃಖ ಹರಿದು ಬಂದಿದೆ.

ಗಂಡು – ಹೆಣ್ಣಿನ ಸಂಬಂಧ ಮೂಲತಃ ಸಖ್ಯಯೋಗವೆಂಬ ಧೋರಣೆ ಪ್ರೇಮ ಕವನಗಳಲ್ಲಿ ಕಂಡು ಬರುತ್ತದೆ:

'ಸಖ್ಯಕ್ಕಿಂತ ಸೌಖ್ಯವಿಲ್ಲ;
ಮುಖ್ಯವೆಲ್ಲ ಮುಖ್ಯನಲ್ಲೆ!
ಮುಖಕೆ ಮುಖವನಿಟ್ಟು ನಿಲ್ಲೆ–ಕುಣಿಯೆ' (ಅವಳು–ಅವನು)

ಎಂಬಲ್ಲಿ ಸಖ್ಯದ ಆಹ್ವಾನವಿದೆ. ಗಂಡು ಹೆಣ್ಣು ಕೇವಲ ಎರಡು ವ್ಯಕ್ತಿಗಳಲ್ಲ.

"ನಾನು ರಾಧೆ, ನೀನು ರಂಗ,
ಅದಲು–ಬದಲಿನೊಂದು ಅಂಗ,
ತೋರಿಸೋಣ ಅದರ ರಂಗ – ಕುಣಿಯೆ".

"ಪುರುಷಪ್ರಕೃತಿ ನಾವು ಜಾಣೆ,
ಅರ್ಧ ನಾರಿ ನಟರು ಕಾಣೆ –
ನನ್ನ ನಿನ್ನ ದೇಹದಾಣೆ – ಕುಣಿಯೆ".

ಎಂಬಲ್ಲಿ ಎರಡು ವಿಶ್ವತತ್ವಗಳ ಬೆಸುಗೆಯ ಕಾಣ್ಕೆಯಿದೆ. 'ಉದಯರಾಗ', 'ಉತ್ತರರಾಗ' ಎಂಬ ಜೋಡಿ ಕವನಗಳು ದಾಂಪತ್ಯದ ಮಂಗಲಾಕಾಂಕ್ಷೆ. ಮಾಧುರ್ಯ, ಸ್ನಿಗ್ಧತೆ, ಪರಸ್ಪರರ ವಾತ್ಸಲ್ಯ ರಸದಲ್ಲಿ ಮಿಂದು ಎದ್ದುಬಂದ ಹಾಗಿವೆ.

ಪ್ರೇಮ ಸಾಧನೆಯಲ್ಲಿ ಒದಗಿಬರುವ ಪೇಚುಗಳು, ಸಂಕಟಗಳು 'ಪ್ರೇಮವ್ರತ'ದಲ್ಲಿ ಗಂಡಿನ ದೃಷ್ಟಿಯಿಂದಲೂ, 'ಸುಮದರಿಯ ಸಂಕಟ'ದಲ್ಲಿ ಹೆಣ್ಣಿನ ದೃಷ್ಟಿಯಿಂದಲೂ ನಿವೇದಿತವಾಗಿವೆ. 'ಸುಂದರಿಯ ಸಂಕಟ'ದಲ್ಲಿ ನಲ್ಲನ ಭಕ್ತಿಯಿಂದ ಪೂಜ್ಯತೆಯ ಪಟ್ಟಕ್ಕೇರಿಸಲ್ಪಟ್ಟ ಸುಂದರಿ ಕೇಳುತ್ತಾಳೆ: "ಭಜಕನು ನಲ್ಲನೆ? ಭಕ್ತಿ ಪ್ರೇಮವೆ? ಪೂಜ್ಯವೆ ರಮ್ಯತೆಯೆಲ್ಲ?" ಈ ಪ್ರಶ್ನೆಗಳು ಆಳದಲ್ಲಿ ಗಾಭರಿಗೊಳಿಸುವ ಸತ್ವ ಪಡೆದಿವೆ.

ಪ್ರೇಮಕವನಗಳಲ್ಲಿ ಅತ್ಯಂತ ವಿಶಿಷ್ಟವಾದದ್ದು "ಇರಿತವೋ, ದುರಿತವೋ". ಪ್ರೇಮದ ಆರಾಧಕನೊಬ್ಬ ಕಾಮದ ಅನುಭವಕ್ಕೆ ಮೊದಲ ಬಾರಿಗೆ ಸ್ಪಂದಿಸುವಾಗಿನ ಗೊಂದಲ,ಗಳ ಕೋಲಾಹಲ, ನೂರೆಂಟು ಜಿಜ್ಞಾಸೆಗಳ ಚಿತ್ರ ಈ ಕವನದಲ್ಲಿದೆ.

"ಒಲವ ಸವಿವುದು ಪಾಪವೆನಿಪುದೆ?
ದೇವರಾಜ್ಯದ ನೀತಿಗೆ?"
"ಒಲವಿಗಿಂತಲು ಚೆಲುವದಾವುದು?
ದಿವಿಜ ಹೇಳಲು ಬಲ್ಲನೆ?"
"ಅಂದಿನನುರಕ್ತತೆಯು ಕಾಮವೆ?
ಕಾಮವೆಂದೂ ನಿಂದ್ಯವೇ?"
"ಪಂದಮೇಂದ್ರೀಯವಧಮವೆನಿಸಿತೆ?
ಮುಟ್ಟಿದರೆ ಕೇಡೊದವಿತೇ?"
"ವಂಚಿಸಲು ನನ್ನಂಥ ಮುಗ್ಧರ
ಸಂಚು ಹೂಡುವುದೊಳ್ಳಿತೆ?"

ಈ ಎಲ್ಲ ಪ್ರಶ್ನೆಗಳು ಸಂಪ್ರದಾಯದ ಗೃಹೀತ ಮೌಲ್ಯಗಳಿಗೆ ವೈಯಕ್ತಿಕ ಅನುಭವ ತನ್ನ ತೀವ್ರತೆಯಲ್ಲಿ, ಪ್ರಾಮಾಣಿಕತೆಯಲ್ಲಿ ತೋರಿದ ಪ್ರತಿಕ್ರಿಯೆಗಳಾಗಿವೆ. ಲೈಂಗಿಕತೆಯ ಬಗ್ಗೆ ಗಾಂಧಿಯವರ ನಿಲುವು ಪ್ರಚೋದಿಸಿದ ಪ್ರತಿಕ್ರಿಯೆಯೂ ಇದಾಗಿರಬಹುದು. (ಶಿವರಾಮ ಕಾರಂತರು ಗಾಂಧಿಯವರ ಆರಾಧನೆಯನ್ನು ಬಿಟ್ಟದ್ದು ಇದೇ ಕಾರಣಕ್ಕಾಗಿ. ಶ್ರೀಧರರು ಈ ಒಂದು ವಿಷಯದಲ್ಲಿ ಗಾಂಧಿಯೊಡನೆ ತಮ್ಮ ಭಿನ್ನಾಭಿಪ್ರಾಯವನ್ನು ದೊಡ್ಡದೆಂದುಕೊಳ್ಳದೇ ಗಾಂಧಿಯವರನ್ನು ಆರಾಧಿಸಿದಂತೆ ತೋರುತ್ತದೆ).

'ನರನಾದೇಕೆ' ಕವನ ಶ್ರೀಧರರ ನೋವಿನಾಳದ ಸಿಟ್ಟನ್ನೂ ಸಮರ್ಥವಾಗಿ ಪ್ರತಿನಿಧಿಸುವ ಕವನ. ಕವಿಯು ತಾತ್ವಿಕ, ಪೌರಾಣಿಕ, ಸಾಮಾಜಿಕ, ವೈಯಕ್ತಿಕ ಕಾಳಜಿಗಳು ಒಂದಾದ ಭಾವತೀವ್ರತೆಯ ಅಪರೂಪದ ಸಿದ್ಧಿ ಇದರಲ್ಲಿದೆ. 'ನರನಾದೆನೇಕೆ ಅಯಯ್ಯೋ ನಾನು ಹರನಾಗಲಿಲ್ಲವೇಕೆ?' ಎಂಬಲ್ಲಿ ಹರನಾಗುವ ಆಸೆ, ನರನೆಂಬ ಅರಿವುಗಳ ನಡುವಿನ ತುಮುಲ 'ಶಿವೋऽಹಂ' ತತ್ವದ ಹಿನ್ನೆಲೆಯಲ್ಲಿ ಪಡೆಯುವ ಸಾಂದ್ರತೆ ಅಷ್ಟಿಷ್ಟಲ್ಲ. 'ಜಿನತತ್ವ ಬೆಳಗಿದೀ ಭರತ ಖಂಡದಲ್ಲನ್ಯ ತತ್ವ ಬಂದು' ಎಂಬಲ್ಲಿ ಜಿನತತ್ವ ಮಾತ್ರವಲ್ಲ, ಗಾಂಧಿಯವರ ಅಹಿಂಸಾ ತತ್ವದ ಬಗ್ಗೆಯೂ ಗೌರವದ ದೃಷ್ಟಿಯಿದೆ. “ಎಂಟು ಗೇಣಿನೀ ದೇಹ ಸಾಲದೋ। ಕುಂಟು ಕೈಗಳಿವು ಬಂಟರಾಗವೋ” ಎಂಬಲ್ಲಿ ಮನುಷ್ಯತ್ವದ ಇತಿಮಿತಿಗಳ ದುರಂತ ಪ್ರಜ್ಞೆಯಿದೆ. 'ಧಮನಿ ಧಮನಿಯಲಿ ಧೂಮಕೇತುಗಳ ದಾಳಿಯಿಟ್ಟ ಹಾಗೆ' ಎಂಬ ಆವೇಶ, 'ಯಮಲೀಲೆಯಲ್ಲ ನರಕಕ್ಕು ಹೊಲ್ಲದನ್ಯಾಯ ನಡೆಯಿತಣ್ಣ' ಎಂಬ ಅಳಲಿನ ನಿವೇದನೆ – ಎರಡರಲ್ಲೂ ಕುಮಾರವ್ಯಾಸನ ರಸಾವೇಶ ಶಕ್ತಿ ಸಮಾನವಾಗಿ ಪ್ರವಹಿಸಿರುವುದನ್ನು ಕಾಣಬಹುದು. ಈ ಕವನ ಹೊಸಗನ್ನಡ ಶ್ರೇಷ್ಠ ಭಾವಗೀತೆಗಳಲ್ಲಿ ಒಂದಾಗಿದೆ.

'ಉಪವಾಸ' ಕವನವನ್ನು ಕವಿಯ ಹೆಸರು ಹೇಳದೇ ಓದಿದರೆ, ಎಂತಹ ಶೈಲಿ ತಜ್ಞನಾದರೂ ಇದು ಬೇಂದ್ರೆಯವರ ಕವನವೆಂದು ಮೋಸ ಹೋಗುವ ಸಾಧ್ಯತೆಯಿದೆ. ಭಾವಸತ್ವ, ಶಬ್ದಶಕ್ತಿಯ ಮಾಯೆ, ಛಂದಸ್ಸಿನೊಡನೆ ಚೆಲ್ಲಾಟ – ಯಾವುದರಲ್ಲೂ ಇದು ಬೇಂದ್ರೆಯವರ ಉತ್ತಮ ಕವನಗಳಿಗೆ ಕಡಿಮೆಯಿಲ್ಲ. ಆಕಾಶ ಪಾತಾಳಗಳನ್ನು ತುಂಬಿ ಮಿಕ್ಕುವ ವಿಶ್ವದೃಷ್ಟಿಯೂ ಇಲ್ಲಿದೆ. ಇಲ್ಲಿಯ ಉಪವಾಸ. ಬೇಂದ್ರೆಯವರ 'ಬೆಳದಿಂಗಳಽನೋಡ' ಕವನವನ್ನು ಉರಿಬಿಸಿಲಿನಲ್ಲಿ ಓದಿದರೂ ಬೆಳದಿಂಗಳ ಅನುಭವವಾಗುವಂತೆ, 'ಉಪವಾಸ' ಕವನವನ್ನು ಮೃಷ್ಟಾನ್ನ ಉಂಡು ಸುಸ್ತಾಗಿ ವಿಶ್ರಾಂತಿಗಾಗಿ ಮಲಗಿದಾಗ ಓದಿದರೂ ಉಪವಾಸದ ಅನುಭವವೇ ಆಗುತ್ತದೆ.

೧೯೪೫ರಿಂದ ೧೯೪೯ರ ವರೆಗೆ ನಾಲ್ಕು ವರ್ಷಗಳಲ್ಲಿ ಮೂರು ಕವನ ಸಂಕಲನಗಳು ಪ್ರಕಟವಾಗಿವೆ. ಮುಂದಿನ ಕವನಸಂಕಲನ ರಸಯಜ್ಞ ಪ್ರಕಟವಾದದ್ದು ೧೯೬೪ರಲ್ಲಿ. ಹದಿನೈದು ವರ್ಷಗಳ ಅಂತರದಲ್ಲಿ ಆದ ಕವಿಯ ಬೆಳವಣಿಗೆಯ

ಹಂತಗಳನ್ನು ಗುರುತಿಸುವುದು ಕಷ್ಟ. ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಆಗುಹೋಗುಗಳು, ವೈಯಕ್ತಿಕ ಅನುಭವಗಳು ಹಂತ ಹಂತವಾಗಿ ಶ್ರೀಧರರನ್ನು ರೂಪಿಸಿದ ಬಗೆ ಸ್ಪಷ್ಟವಾಗುವುದಿಲ್ಲ. ಆದರೆ ಅಮೃತಬಿಂದುವಿನ ಭಾವತನ್ಮಯ ದೃಷ್ಟಿಗೂ ರಸಯಜ್ಞದ ವಿಡಂಬಕ, ಚಿಕಿತ್ಸಕ ದೃಷ್ಟಿಗೂ ವ್ಯತ್ಯಾಸ ಎದ್ದು ಕಾಣುತ್ತದೆ. ಈ ನಡುವೆ ಶ್ರೀಧರರ ಹಲವು ಗದ್ಯಕೃತಿಗಳು ಪ್ರಕಟವಾಗಿವೆ. ಬೇಂದ್ರೆ ಹೊಸಗನ್ನಡ ಸಾಹಿತ್ಯಶೈಲಿ, ಕವೀಂದ್ರ ರವೀಂದ್ರ, ಟಿ.ಎಸ್.ಎಲಿಯಟ್ (ಅನುವಾದ), ಅರವಿಂದರ ಭಾರತೀಯ ವಾಙ್ಮಯ (ಅನುವಾದ) – ಇವು ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ, ವಿದೇಶದ ತಿಳುವಳಿಕೆಗಳು, ಮಾನಸ ದರ್ಪಣ, ಅರವಿಂದರ ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ (ಅನುವಾದ), ಸ್ವಾತಂತ್ರ್ಯ ಮೀಮಾಂಸೆ (ಅನುವಾದ) – ಇವು ಸಾಂಸ್ಕೃತಿಕ ಆಸಕ್ತಿಯ ಇತರ ಕೃತಿಗಳು. ಮುತ್ತುರತ್ನ, ರಮಣ ಮಹರ್ಷಿ ಇವು ಮಕ್ಕಳ ಪದ್ಯ–ಗದ್ಯ ಪುಸ್ತಕಗಳು. ಬೇತಾಳಗಳ ಕುಣಿತ ವಿಡಂಬನ ಕೃತಿ. ಹಲವು ಲೇಖನಗಳು, ವಿಡಂಬನೆಗಳು, ಕವನಗಳು ಪ್ರಕಟವಾಗಿವೆ.

ರಸಯಜ್ಞ (೧೯೬೪) ದಲ್ಲಿ ೫೧ ಕವನಗಳಿವೆ. (ಇದರ ಸಂಪಾದಕರು ಶ್ರೀ ಪಿ.ಎಂ.ಹೆಗಡೆ ಮತ್ತು ಶ್ರೀ ಪಿ.ವಿ.ಶಾಸ್ತ್ರಿ) ಇಲ್ಲಿಯ ಕವನಗಳಲ್ಲಿ ವಿಡಂಬನೆಯದು ಭೀಮಪಾಲು. ದೈವಭಕ್ತಿ, ತಾತ್ವಿಕ ಜಿಜ್ಞಾಸೆ, ಪ್ರೇಮ, ಗ್ರಾಮಜೀವನ – ಇವುಗಳದು ಉಳಿದ ಪಾಂಡವ ಪಾಲು. ಪಾಂಡವರ ಭಾವೈಕ್ಯವೂ ಇಲ್ಲಿದೆ. ವಿಡಂಬನೆ ಎಂದಾಗ ನನ್ನ ತಲೆಮಾರಿನವರಿಗೆ ನೆನಪಾಗುವುದು ಶ್ರೀ ಚಂದ್ರಶೇಖರ ಪಾಟೀಲರ ಕಾವ್ಯ. ಪಾಟೀಲರ ವ್ಯಂಗ್ಯಕ್ಕೆ ಮೂರ್ತಿಭಂಜನವೇ ಗುರಿ. ಶ್ರೀಧರರ ವಿಡಂಬನೆಗೆ ನಂಬಿದ ಮೌಲ್ಯಗಳ ರಕ್ಷಣೆಯೇ ಗುರಿ. ಶ್ರೀಧರರು ಯಾವ ಮೌಲ್ಯಗಳನ್ನು ರಕ್ಷಿಸಬಯಸುತ್ತಾರೆ ಎಂಬುದು ಸ್ಪಷ್ಟವಾದ ಹಾಗೆ ಪಾಟೀಲರಲ್ಲಿ ಸ್ಪಷ್ಟವಾಗುವುದಿಲ್ಲ. ಇದ್ದದ್ದನ್ನು ನಾಶಗೊಳಿಸಿದಾಗ ಬೇಕಾದ್ದು ಹುಟ್ಟುತ್ತದೆ ಎಂಬುದು ಪಾಟೀಲರ ಧೋರಣೆಯೆನಿಸುತ್ತದೆ. ಶ್ರೀಧರರ ವಿಡಂಬನೆ ಲೇವಡಿ ಅಥವಾ ಕುಹಕವಾಗುವುದಿಲ್ಲ. ಪಾಟೀಲರ ಕಾವ್ಯ ಅಲೆಕ್ಝಾಂಡರ ಪೋಪನನ್ನು ನೆನಪಿಸಿದರೆ ಶ್ರೀಧರರ ಕಾವ್ಯ ಬೆನ್ ಜಾನ್‌ಸನ್ನನನ್ನು ನೆನಪಿಸುತ್ತದೆ. ಶ್ರೀಧರರ ವಿಡಂಬನೆಗೆ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಮುಂತಾದ ಕ್ಷೇತ್ರಗಳ ಮೌಲ್ಯರಾಹಿತ್ಯ, ವಿಕ್ಷಿಪ್ತತೆ, ಸೋಗುಗಳು ವಸ್ತುವಾಗುತ್ತವೆ. ಖಂಡಿಸುವ ಮೂಲಕವೇ ತನ್ನ ತನವನ್ನು ಅರಸುವ ಅಥವಾ ಘೋಷಿಸುವ ರೀತಿ ಇವರದಲ್ಲ. ಉದಾಹರಣೆಗೆ 'ದಿಲ್ಲೀಶ್ವರನ ದಿನಚರಿ ಅಥವಾ ದಿವ್ಯಜೀವನ' ಎಂಬ ಕವನ ನೋಡಬಹುದು. 'ದಿವ್ಯಜೀವನ' ಎಂಬುದು ಅರವಿಂದರ ಉದ್ಗ್ರಂಥದ ಹೆಸರು. ಅರವಿಂದರನ್ನು ಮೆಚ್ಚಿಕೊಳ್ಳುವ ಶ್ರೀಧರರು ಆ ಹೆಸರನ್ನೂ ತಮ್ಮ ವಿಡಂಬನೆಯ

ಅಸ್ತ್ರವನ್ನಾಗಿ ಪ್ರಯೋಗಿಸಿದ್ದಾರೆ. ವಿಡಂಬನೆಯ ಗುರಿ ಅರವಿಂಡದರಲ್ಲ ಎಂಬುದು ಯಾರಿಗೂ ತಿಳಿಯುವಂತಿದೆ. 'ಕಾನ್ಕೆ', 'ನನ್ನ ಠೀವಿ', 'ಗ್ರಾಮಸಿಂಹ ಘೋಷಣೆ' 'ಕಳ್ಳಭಟ್ಟಿ ಶಿಷ್ಯರನ್ನು ಬೀಳ್ಕೊಡುವಾಗ', 'ದಿಲ್ಲೀಶ್ವರನ ದಿನಚರಿ' ನವ್ಯ ಕವಿಗಳನ್ನು ಹಂಗಿಸುವಂತೆ ಇಂಗ್ಲೀಷ್, ಸಂಸ್ಕೃತ ಬೆರೆಸಿ ಬರೆಯಲ್ಪಟ್ಟಿದೆ.

"ಹಾಡು, ಇಂಡಿಯನ್ ಲಾರ್ಕೇ ಹೈಡ್ ಪಾರ್ಕಿದೆಯೆಂದು".

'ವೇಸ್ಟ್‌ಸೂಕ್ತ'ದಲ್ಲಿ ವ್ಯರ್ಥತೆಯ ವಿಶ್ವರೂಪದರ್ಶನವಿದೆ. ಶೈಲಿ ವೈದಿಕಸೂಕ್ತ, ಉಪನಿಷತ್ತುಗಳ ಅನುಕರಣೆಯದಾಗಿದೆ.

"ಆ ಅದೂ ವೇಸ್ಟ್ ಈ ಇದೂ ವೇಸ್ಟ್ ಯಾವುದೂ ವೇಸ್ಟ್ ಜಗದ
ಈ ವೇಸ್ಟಿನಿಂದ ವೇಸ್ಟ್ ತೆಗೆದರುಳಿವುದೋ ವೇಸ್ಟ್ ಜಗದ
ಈ ವೇಸ್ಟಿನಿಂದ ವೇಸ್ಟ್ ತೆಗೆದರುಳಿವುದೋ ವೇಸ್ಟ್ ಬುದ್ಧಿಯೊಗೆದ"

ಈ ಸಾಲುಗಳಲ್ಲಿ "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥" ಎಂಬ ಶ್ಲೋಕದ ಪ್ರಜ್ಞಾಪೂರ್ವಕ ಅನುಕರಣೆಯಿದೆ. ಆದರೆ ಶೈಲಿಯ ಅನುಕರಣೆಯಿಂದಾಗಿ ಕವನ ವೈದಿಕಸೂಕ್ತಗಳ ವಿಡಂಬನೆಯಾಗುವುದಿಲ್ಲ ಎಂಬುದೇ ವೈಶಿಷ್ಟ್ಯ. ವಿಡಂಬಿಸಲ್ಪಟ್ಟಿರುವುದು ಆಧುನಿಕತೆ. ಕವನದ ಕೊನೆಗೆ ಬರುವ 'ಆರು ಹಗೆಗಳಾತ್ಮವನು ಬಂಧಿಸಿರಲು' ಎಂಬ ಮಾತು ಕವಿಯ ಮೌಲ್ಯ ಪ್ರಜ್ಞೆಯನ್ನು ನಿರ್ದಿಷ್ಟಗೊಳಿಸುತ್ತದೆ.

'ತಪ್ಪಿನ ಸರಿ ಅಥವಾ ಮುದ್ದು ತಪ್ಪು' ಕವನದಲ್ಲಿ ಕವಿ ಹಾಸ್ಯಲಹರಿಯಲ್ಲಿ ತೇಲುತ್ತಿರುವಾಗಲೇ ಕಾವ್ಯದ ಹುಟ್ಟು, ಜಗದ ಹುಟ್ಟು, ಭಾಷೆಯ ಹುಟ್ಟುಗಳ ಬಗ್ಗೆ ಸಮಗ್ರ ದೃಷ್ಟಿಯನ್ನು ವ್ಯಕ್ತಪಡಿಸಿರುವುದು ಅದ್ಭುತವಾಗಿದೆ. ಬ್ರಹ್ಮ ತನ್ನ ಮಗಳಾದ ಸರಸ್ವತಿಯನ್ನು ಮದುವೆಯಾದ ಕಥೆಯನ್ನು ದೇವತೆಗಳ ಲಂಪಟತನವೆಂದು ಟೀಕಿಸುವುದು ಸುಲಭ. ಆದರೆ ಈ ಕಥೆಗೆ ಶ್ರೀಧರರ ಭಾಷ್ಯ ಮನೋವೈಜ್ಞಾನಿಕವಾಗಿದೆ. ಕವಿ ಕವಿತೆಯ ಸೃಷ್ಟಿಕರ್ತನಷ್ಟೇ ಅಲ್ಲ, ಪ್ರಥಮ ಭೋಕ್ತಾರನೂ ಹೌದು. ತನ್ನ ಕವಿತೆಯ ಚೆಂದವನ್ನು ಕವಿ ತಾನೇ ಸವಿದಿರುತ್ತಾನೆ.

"ಆ ಬ್ರಹ್ಮನಂತೆ ನಾನು
ನಿನ್ನ ಹಡೆದು ಮದುವೆಯಾದೆ;
ನೀನೆ ಸುತೆ, ನೀನೆ ಸತಿ,
ಸೌಂದರ್ಯದ ದವತಿಯೇ?"

ಭಾಷೆಯ ರೀತಿಯನ್ನು ನೋಡಿ;

" 'ಎಣ್ಣಿ, ಬೆಣ್ಣಿ, ಡೊಣ್ಣಿ'ಯಾಗಿ
ಎತ್ವವನ್ನು ನುಂಗಿರುವೆ".
"ಹೆಸರು ಬರೆಯುವಾಗ ಸಹ
'ಹನುಮಂತ'ನ ತೆಗೆದು ನೀನು
'ಹಣವಂತ'ನ ಮಾಡಿಹೆ–
ಮೂರ್ಧನ್ಯದಿ ಮೂಡಿಹೆ".

ಪಾಣಿಯನ್ನು ಇಷ್ಟು ಸರಸವಾಗಿ ಕಾವ್ಯಕ್ಕೆ ದಕ್ಕಿಸಿಕೊಂಡ ಉದಾಹರಣೆಗಳು ಸಿಗುವುದು ಅಪರೂಪ. 'ಮೂರ್ಧನ್ಯ'ದಂತಹ ಶಬ್ದದಿಂದಲೂ ರಸೋತ್ಕರ್ಷವಾಗುವುದು ಕವಿಯ ಮಾಯೆಯಿಂದ ಮಾತ್ರ ಸಾಧ್ಯ. ಶ್ರೀಧರರ ಪಾಂಡಿತ್ಯ ಕಾವ್ಯಶಕ್ತಿಯನ್ನು ತಿಂದು ಹಾಕಲಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆ. (ಪಾಂಡಿತ್ಯವಿಲ್ಲದಿರುವುದೇ ಕಾವ್ಯಶಕ್ತಿಯೆಂದು ತಿಳಿಯುವವರಿಗೆ, ಪಂಡಿತನಾದರೆ ಕವಿ ಸತ್ತು ಹೋದಾನೆಂದು ಹೆದರುವವರಿಗೆ ಏನು ಹೇಳಬೇಕು!)

'ಎಸ್.ಟಿ.ಬಸ್' ಕವನ ಶ್ರೀಧರರ ಶುದ್ಧ ಹಾಸ್ಯ ಪ್ರಜ್ಞೆಗೊಂದು ಸಾಕ್ಷಿ. ಸರಕಾರಿ ಬಸ್ಸಿನ 'ಗಲಗಲ ಸದ್ದಿನ ಸರ್ಕಸ್ಸಿ'ನಲ್ಲಿ ಕವಿ ಏನೆಲ್ಲ ಕಾಣುತ್ತಾನೆ!

"ಬ್ರಹ್ಮಾಂಡವ ಪ್ರತಿನಿಧಿಸುವ

ಪಿಂಡಾಂಡದ ಚಲನದ ರಷ್".

"ನೂರ್ ಮೀರಿದ ವೃದ್ಧಾಪ್ಯದ ಗೂಡೊಳಗಿನ ಮೂಳೆಗನೋ

ಕಡಲಾಳದ ಜಲಚರಗಳ ಹಿಡಿದೆಳೆದಿಹ ಜಾಲಗಳೋ"

"ಜೀವಿಗಿಂತ ರಾವಣಾ"

"ರಶಿಯ ಅಮೇರಿಕೆಗಳಲ್ಲಿ ಕಾಳಗ ಶುರುವಾಯಿತೋ

ಜ್ವಾಲಾಮುಖಿ ಧಬಧಬೆಗಳು ಕಲಹಕ್ಕಿದಿರಾದವೋ

ನರಕದ ಆಸ್ಪತ್ರೆಯಲ್ಲಿ ಹೊಸ ಮಕ್ಕಳು ಹುಟ್ಟಿದವೋ

ವಿಶ್ವರಾಷ್ಟ್ರ ಸಂಮೇಳನ ಕಂಬಳಗಳ ನಡೆಸಿತೋ"

'ಹಳ್ಳಿಗಳಿಗೆ ನಾಗರಿಕತೆ ಹೊತ್ತು ತಂದ ವೀರ'

'ಕನ್ನಡ ಸೀಮೆಯನಳೆಯುವ ಹೊಸ ಕಲ್ಕ್ಯವತಾರ'

'ರೋಡೆಂಜಿನ್ ಬೆಳೆದು ಬೆಳೆದು ನೀನಾಯಿತೊ ಹೇಗೆ?'

'ಕೋಡಿಲ್ಲದ ಶರಭ'

'ಕಾಲದರ್ಪ ಭಂಜನಾ'

'ಹಳ್ಳಿಯೂರ ಬಾಲಬಂಧು ಜಾಲ ಮನೋರಂಜನಾ'

'ನಿನ್ನನಾದ ಪ್ರಗತಿವಾದ ವಿಹಾರಿ ಹೃದ್ ವ್ಯಂಜನಾ'

'ಎಸ್.ಟಿ.ಬಸ್, ಎಸ್.ಟಿ.ಬಸ್, ಪ್ರಜಾರಾಜ್ಯಕೇ ಯಶಸ್'.

ರಸಯಜ್ಞ (೧೯೬೪) ದ ನಂತರ ಪ್ರಕಟವಾದ ಕವನ ಸಂಕಲನ ಕಂಟಕಾರಿ ಮಹಾಕಾವ್ಯಂ (೧೯೮೧). ಈ ಅಂತರದಲ್ಲಿ ಬೆಳಕು ಕಂಡ ಅನೇಕ ಬಿಡಿ ಕವನಗಳಲ್ಲಿ ನೌಕಾಗೀತ (೧೯೬೮) ಮತ್ತು ಕದಂಬ ವೈಭವ (ಸು. ೧೯೭೦) ಎಂಬ ದೀರ್ಘ ಕವನಗಳು ವಿಶೇಷವಾಗಿ ಗಮನಾರ್ಹವಾಗಿವೆ. ನೌಕಾಗೀತ ಕದಂಬರ ಕಾಲದ ನಾವಿಕನೊಬ್ಬನ ಆತ್ಮಕತೆಯಾದರೆ ಕದಂಬ ವೈಭವ ಕದಂಬ ರಾಜರ ವಂಶಕಥೆ. ಬನವಸೆಯ ಕದಂಬರು (೧೯೬೬) ಎಂಬ ಇತಿಹಾಸ ಪುಸ್ತಕವನ್ನು ಶ್ರೀಧರರು ಬರೆದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹುಟ್ಟಿನಿಂದ ಬ್ರಾಹ್ಮಣನಿದ್ದು ನಂತರ ಕ್ಷತ್ರಿಯನಾದ ಮಯೂರಶರ್ಮನ ಕಥೆ ಮತ್ತು ಕದಂಬರ ಯುಗ ಶ್ರೀಧರರಿಗೆ ರಾಷ್ಟ್ರೀಯ ಆದರ್ಶವಾಗಿ ಕಂಡ ಗುರುತುಗಳು ಈ ಎರಡೂ ಕವನಗಳಲ್ಲಿವೆ. ಪಂಡಿತ ಶ್ರೀಧರರು ಮತ್ತು ಕವಿ ಶ್ರೀಧರರು ಪರಸ್ಪರ ಸಂಬಂಧವಿಲ್ಲದಂತೆ ಬದುಕಿಲ್ಲವೆಂಬುದಕ್ಕೆ ಇದೊಂದು ಪ್ರಬಲ ಸಾಕ್ಷಿ.

'ನೌಕಾಗೀತ'ದಲ್ಲಿ ಕಂಗವರ್ಮನ ಸಮಕಾಲೀನವಾದ ಕಾರವಾರದ ತಿಮ್ಮನೆಂಬುವನು ತನ್ನ ಕಥೆಯನ್ನು ತಾನೇ ಹೇಳುತ್ತಾನೆ. ಜಟ್ಟಿಗನಿಗೆ ಹೊತ್ತ ಹರಕೆಯ ಫಲವಾಗಿ ಹುಟ್ಟಿದ ತಿಮ್ಮ ಅಜ್ಜನ ಕಥೆಯಿಂದ ಸ್ಫೂರ್ತಿ ಪಡೆದು, ದೊಡ್ಡವನಾಗಿ ಬೆಳೆದು ಶ್ರೇಷ್ಠ ನಾವಿಕನಾಗಿ ತಿಮ್ಮೋಜನೆಂದು ರಾಜಮನ್ನಣೆ ಪಡೆಯುತ್ತಾನೆ. ರಾಜನ ಆದೇಶದಂತೆ ವ್ಯಾಪಾರದ ಸರಕುಗಳನ್ನು ತುಂಬಿಕಂಡು ರೋಮಿಗೆ ಹೊರಡುತ್ತಾನೆ. ರೋಮಿನಲ್ಲಿ ಗೌರವಸೂಚಕವಾಗಿ ದೊರೆಯ ಮಗಳಿಗೆ ಉಂಗುರ ಕೊಡುತ್ತಾನೆ. ತಿರುಗಿ ಹೊರಟಾಗ ದೊರೆ ಕಳಿಸಿದ ದಾಸಿಯೊಬ್ಬಳು ರಾಜಕುಮಾರಿಯ ಪ್ರೇಮಪತ್ರ ಕೊಡುತ್ತಾಳೆ. ಮತ್ತೊಮ್ಮೆ ಬರುವುದರ ಬಗ್ಗೆ ಶಂಕೆ, ತಂದೆತಾಯಿ ಒಪ್ಪದಿರುವ ಭಯಗಳಿಂದ ತಿಮ್ಮೋಜ ಬಳಲುತ್ತಾನೆ. ಪತ್ರ ಓದಿದ ಚಿಕ್ಕಪ್ಪ ಕೆಂಡವಾಗುತ್ತಾನೆ. ಮುಂದೆ ತಿಮ್ಮ ತನ್ನ ಶವವನ್ನು ತಾನೇ ಕಾಣುತ್ತಾನೆ. ಜನ ನೂರೆಂಟು ರೀತಿಯಲ್ಲಿ ಇವನ ಸಾವಿನ ಬಗ್ಗೆ ಆಡಿಕೊಳ್ಳುತ್ತಾರೆ. ಆಗಿನ ಕದಂಬ ದೊರೆ ಕಂಗವರ್ಮ ಪುರೋಹಿತನ ನಿರ್ದೇಶನದಂತೆ ಜಲಪರ್ಯಟನವನ್ನು ವರ್ಜ್ಯವೆಂದು

ಧರ್ಮಶಾಸ್ತ್ರದಲ್ಲಿ ನಿಯಮಿಸುತ್ತಾನೆ. ಆ ನಿಯಮವನ್ನು ನಾಲ್ವಡಿಯ ಕೃಷ್ಣರಾಯ ತಿದ್ದಿದಾಗ ತಿಮ್ಮನ ಆತ್ಮಕ್ಕೆ ಹಬ್ಬವೆನಿಸುತ್ತದೆ. ಕಡಲವೀರರ ಜಯಘೋಷದೊಂದಿಗೆ ಕವನ ಮುಗಿಯುತ್ತದೆ.

ಶಿಷ್ಟ ಮತ್ತು ಜಾನಪದ ಸಂಸ್ಕೃತಿಗಳ ಸಂಬಂಧ, ದೇಶಿಯ ಮತ್ತು ವಿದೇಶಿಯ ಸಂಸ್ಕೃತಿಗಳ ಮುಖಾಮುಖಿ ಕವಿಯ ಮುಖ್ಯ ಕಾಳಜಿಗಳಾಗಿವೆ. ಪ್ರಾಚೀನ ಕಾಲದ ಕಥೆಯಾದ್ದರಿಂದ ಕವನದ ಕಥೆ ಅಜ್ಜಿ ಹೇಳುವ ಕಥೆಗಳಂತೆ ಆತ್ಮೀಯವೂ ಮಾರ್ಮಿಕವೂ ಆಗಿದೆ. ಕವನ ಕೆಟ್ಟ ಅರ್ಥದಲ್ಲಿ romantic ಆಗಿಲ್ಲ. ನಾವಿಕನ ಆತ್ಮಕಥೆ ಹೇಳುತ್ತಿರುವುದರಿಂದ ಆತನ ಮರಣಾನಂತರದ ಘಟನೆಗಳನ್ನು ಅದು ಹೇಳುವುದು ಕಾವ್ಯಸತ್ಯಕ್ಕೆ ವಿರುದ್ಧವೆನಿಸುವುದಿಲ್ಲ. ಮಕ್ಕಳಾಗಲಿ ಎಂದು ಜಟ್ಟಿಗನಿಗೆ ಕೋಳಿಬಲಿಯ ಹರಕೆ ಹೊರುವುದು, ಕಡಲಿನಲ್ಲಿ ಆಡಿ ಬೇಳೆ, ಚಟ್ಲಿ ತಿನ್ನಲು ತಿಮ್ಮ ಗುಡಿಸಲಿಗೆ ಓಡಿಬರುವುದು, ಅಜ್ಜನ ಕಥೆ, ಕಡಲುಗಳ್ಳ ಬಿಟ್ಟುಹೋದ ಸುಬ್ಬಿಯನ್ನು ಅಜ್ಜ ಮದುವೆಯಾದದ್ದು, ಆ ಮದುವೆಯಲ್ಲಿ ಹುಲ್ಲು ಬಣವೆಯಷ್ಟು ಮೀನು ಹಂಚಿದ್ದು, ತಿಮ್ಮ ತಿಮ್ಮೋಜನಾದದ್ದು, ಹಡಗಿನಲ್ಲಿ ನಡೆಯುವ ಯಕ್ಷಗಾನ, ರೋಮಿನ ಕುಸ್ತಿ ಕಾಳಗ ತಿಮ್ಮನಿಗೆ ಬರ್ಬರವೆನಿಸುವುದು – ಇವೆಲ್ಲವೂ ಬೇರೂರಿದ ನೆಲದ ಸಂಸ್ಕೃತಿಯ ಚಿತ್ರಗಳಾಗಿ ಮೂಡಿಬಂದಿದೆ. ಪಶ್ಚಿಮ ಮತ್ತು ಪೂರ್ವ ಮಾರುತಗಳ ಮಾತನ್ನು ತಿಮ್ಮ ಕೇಳುವಾಗ ಸಾಂಸ್ಕೃತಿಕ ಮುಖಾಮುಖಿಯ ಪ್ರಶ್ನೆ ತನ್ನೆಲ್ಲ ತಾತ್ವಿಕ ಸತ್ವದೊಡನೆ ಎದುರಾಗುತ್ತದೆ. ಇತಿಹಾಸದಲ್ಲಿ ನಡೆದುಬಂದ ಆಕ್ರಮಣಶೀಲ ಪ್ರವೃತ್ತಿಯನ್ನು ಎತ್ತಿ ತೋರುವ ಪಶ್ಚಿಮ ಗಾಳಿ "ಸ್ವಸಾಮ್ರಾಜ್ಯವನ್ನು ಕಟ್ಟಿ ಗಳಿಕೆಯಿಂದ ಕೂಡಿ ಮೆರೆವುದೆ ಸಾಫಲ್ಯವಲ್ತೆ?" ಎಂದು ಪ್ರಶ್ನಿಸುತ್ತದೆ. ತಿಮ್ಮನಿಗೆ ತನ್ನ ಹಿರಿಯರು ಲೌಕಿಕ ನೀತಿಯನ್ನು ಬಿಟ್ಟಿದ್ದಾರೆನಿಸುತ್ತದೆ. ಸಣ್ಣ ಮೀನನ್ನು ದೊಡ್ಡ ಮೀನು ತಿಂದು ಬದುಕುವ

> "ಮತ್ಸ್ಯನ್ಯಾಯವೆ ಪ್ರಗತಿಯ ಏಣಿ
> ಹುಚ್ಚನು ಭಾರತದವ ನಿತ್ರಾಣಿ ।"

ಎನಿಸುತ್ತದೆ. ಪೂರ್ವದ ಗಾಳಿ ಕೇಳುತ್ತದೆ: "ಬಲವಂತಗೆ ಬಲವತ್ತರ ಎದುರಾಳಿರದಿಹನೆ?.... ಏನೀ ಧನಕನಕಂಗಳು ಮಣ್ಣಲ್ಲವೇ ಮತ್ತೇನು?.... ಅವರ ಚಿನ್ನ ಕರ್ಬೊನ್ನಿಗೆ ಸರಿದೊರೆ ಬಿಟ್ಟೇಳು". ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಬಗ್ಗೆ ಕವಿಯ ಜಿಜ್ಞಾಸೆ, ಶಂಕೆ, ಕಂಡುಕೊಂಡ ಸಮಾಧಾನಗಳು ಇಲ್ಲಿ ಅಭಿವ್ಯಕ್ತವಾಗಿವೆ. ಯಕ್ಷಗಾನದ ಭಾಗವತ ಮಂಗಲ ಹಾಡುವಾಗ ಬಾಳಿನ ನಾಟಕಕ್ಕೆ ದೇವನೇ ಸೂತ್ರಧಾರಿ, ಮಾಡಿದ್ದೆಲ್ಲ ಅವನಿಗೇ ಸಮರ್ಪಿತ ಎಂಬಲ್ಲಿ ಜೀವನ ದೃಷ್ಟಿ ಪಕ್ವ ನಿರ್ಲಿಪ್ತತೆಯಾಗುತ್ತದೆ. ಆದರೆ ಸಾಂಸ್ಕೃತಿಕ ಮುಖಾಮುಖಿಯ ಸಮಸ್ಯೆ ಸವಾಲಾಗಿ ಎದುರಾಗುವುದು

ಪ್ರೇಮದ ದುರಂತ ಕಥೆಯಲ್ಲಿ. ತಿಮ್ಮನ ಆಗಿನ ತೊಳಲಾಟ ಸಮರ್ಥವಾಗಿ ಚಿತ್ರಿತವಾಗಿದೆ. ಆತನ ಸಾವಿನ ನಂತರ ಜಲಪರ್ಯಟನ ನಿಷಿದ್ಧವೆಂದು ಧರ್ಮಶಾಸ್ತ್ರ ರೂಪುಗೊಳ್ಳುವುದು ಧರ್ಮಶಾಸ್ತ್ರಗಳ ಬಗ್ಗೆ ಕವಿಗಿರುವ ಐತಿಹಾಸಿಕವಾದ ಮತ್ತು ಸಹಾನುಭೂತಿಪರವಾದ ದೃಷ್ಟಿಯನ್ನು ಸೂಚಿಸುತ್ತದೆ. (ಆ ನಿಯಮವನ್ನು ಗೇಲಿ ಮಾಡುವುದು ಬಹಳ ಸುಲಭ) ಕವಿ ಆ ಧರ್ಮಶಾಸ್ತ್ರವನ್ನು ಸಮರ್ಥಿಸುವ ವಾದಿಯಲ್ಲ ಎಂಬುದು ಸ್ಪಷ್ಟವಾಗಿದೆ. ಆ ನಿಯಮವನ್ನು ನಾಲ್ವಡಿಯ ಕೃಷ್ಣರಾಯ ತಿದ್ದಿದಾಗ ತಿಮ್ಮನ ಆತ್ಮಕ್ಕೆ ಹಬ್ಬವೆನಿಸಿದ್ದನ್ನು ಕವಿ ತುಂಬುಹೃದಯದರಿಂದ ಹೇಳುತ್ತಾನೆ. ಐತಿಹಾಸಿಕ ಹಿನ್ನೆಲೆಯುಳ್ಳ ಈ ಕಾಲ್ಪನಿಕ ಕಥೆ ತಾನು ಒಳಗೊಂಡಿರುವ ಸಾಂಸ್ಕೃತಿಕ ಪ್ರಶ್ನೆಗಳಿಂದಾಗಿ ಬಹಳ ಮಹತ್ವದ್ದಾಗಿದೆ. ವಿ.ಕೃ.ಗೋಕಾಕರ ಸಮುದ್ರಗೀತಗಳಲ್ಲಿ ಪ್ರವಾಸೀ ಹೃದಯ ಮತ್ತು ಚಿಂತನಪರತೆಗಳು ಎದ್ದುಕಾಣುತ್ತವೆಯಾದರೆ 'ನೌಕಾಗೀತ'ದಲ್ಲಿ ನಿಷ್ಠಾವಂತ ಹೃದಯ ಮತ್ತು ನಾಟಕೀಯತೆ ಎದ್ದು ಕಾಣುತ್ತವೆ.

'ಕದಂಬ ವೈಭವ' (ಸು. ೧೯೭೦) ೧೨ ಭಾಗಗಳ ದೀರ್ಘ ಪ್ರಬಂಧಕಾವ್ಯ. ಮಯೂರವರ್ಮನಿಂದ ಮೊದಲುಗೊಂಡು ಹರಿವರ್ಮನ ತನಕ ಸುಮಾರು ೨ ೧/೨ – ೩ ನೂರು ವರುಷ ಆಳಿದ ಕನ್ನಡ ರಾಜಮನೆತನದ ಇತಿಹಾಸ ಇದರಲ್ಲಿದೆ. ಕವಿಯ ಸ್ಫೂರ್ತಿಯ ಸೆಲೆಯಾದ ವಂಶಾಭಿಮಾನಕ್ಕೆ ಎಲ್ಲಿಯೂ ಧಕ್ಕೆ ಬಂದಿಲ್ಲ. ಕದಂಬ ಕುಲದ ಮೂಲ ಪುರುಷನಾದ ಮಯೂರವರ್ಮ ಬ್ರಾಹ್ಮಣನಾಗಿ ಹುಟ್ಟಿ ಕ್ಷತ್ರಿಯನಾದವನಾದ್ದರಿಂದ ವಂಶಾಭಿಮಾನ ಎಲ್ಲಿಯೂ ಜಾತಿಯ ಅಭಿಮಾನವಾಗಿಲ್ಲ. ಮಕ್ಕಳಿಲ್ಲದಿರುವಿಕೆ, ಅಸಮರ್ಥ ಪೀಳಿಗೆ, ಅಕಾಲಿಕ ಮರಣ, ಬಂಧುಗಳ ವಿಶ್ವಾಸದ್ರೋಹ ಮುಂತಾದ ಸಮಸ್ಯೆಗಳನ್ನು ದಾಟಿಕೊಂಡು ಬೆಳಗಿದ ವಂಶದ ಕಥೆ ಇದರಲ್ಲಿದೆ. ವ್ಯಕ್ತಿಯ ಬದಲು ವಂಶ ಕೇಂದ್ರಸ್ಥಾನದಲ್ಲಿರುವುದರಿಂದ ಕಾಲದ ನಿರಂತರತೆಯ ಬಗ್ಗೆ ಪಕ್ವ ಆಶಾವಾದ ಯಕ್ತವಾಗಿದೆ.

ಮಯೂರಶರ್ಮನ ಮಹಾಸತ್ವ ಅಥವಾ ಅವನ ಜೀವನದ ನಾಟಕೀಯ ಆಕರ್ಷಣೆ ನಂತರದವರಲ್ಲಿ ಇರದಿದ್ದರೂ ಕವಿಯ ಆಸಕ್ತಿಯಿರುವುದು ಒಬ್ಬ ಅಸಾಮಾನ್ಯ ವ್ಯಕ್ತಿಯಲ್ಲಲ್ಲ, ಒಂದು ಸಮರ್ಥ ಹೊರ ಪರಂಪರೆಯನ್ನು ಕಟ್ಟುವುದರಲ್ಲಿ. ಇದನ್ನು ಗಮನಿಸಿದಾಗ ಕವಿಯ ಇತಿಹಾಸ ಪ್ರಜ್ಞೆಯ ಬಗ್ಗೆ, ಜೀವನ ದೃಷ್ಟಿಯ ಬಗ್ಗೆ ಅಚ್ಚರಿಯೆನಿಸುತ್ತದೆ. ಇತಿಹಾಸವನ್ನು ನಿರ್ಮಿಸಬಲ್ಲ ಮಹಾಪುರುಷರು ಮಾತ್ರವಲ್ಲ, ಅವರ ಆದರ್ಶವನ್ನು ನೆನಪಿಟ್ಟುಕೊಂಡು ಮುಂದುವರೆಯುವ ಹಲವು ತಲೆಮಾರುಗಳು ಇದ್ದಾಗ ಮಾತ್ರ ಒಂದು ಭದ್ರ ಪರಂಪರೆಯ ನಿರ್ಮಾಣವಾಗುತ್ತದೆ. ನಂತರದವರು ಇರದಿದ್ದರೆ ಆ ಮಹಾಪುರುಷ ಕಾರ್ಮೋಡ ತುಂಬಿದ ಆಕಾಶದಲ್ಲಿ ಬೆಳಗುವ ಒಂಟಿ ನಕ್ಷತ್ರವಾಗುತ್ತಾನೆ. ಆದರೆ ಆಕಾಶದ ವೈಭವವಿರುವುದು ಒಂಟಿ ನಕ್ಷತ್ರದಲ್ಲಲ್ಲ, ಚಿಕ್ಕ, ದೊಡ್ಡ ಸಾವಿರಾರು ನಕ್ಷತ್ರಗಳ ಸಮೃದ್ಧಿ, ಶ್ರೀಮಂತಿಕೆಯಲ್ಲಿ.

ವಂಶದ ಚರಿತೆ ಎಂದಾಗ ರಘುವಂಶದ ನೆನಪಾಗುತ್ತದೆ. ರಘುವಂಶದ ವಸ್ತುವೈವಿಧ್ಯ, ಪಾತ್ರ ವೈವಿಧ್ಯ, ರಸವೈವಿಧ್ಯಗಳು 'ಕದಂಬ ವೈಭವ'ದಲ್ಲಿಲ್ಲ. ಆದರೆ 'ಕದಂಬ ವೈಭವ'ದ ಐತಿಹಾಸಿಕತೆ ರಘುವಂಶಕ್ಕಿಲ್ಲ. ಲೌಕಿಕವಾದ ಆಧುನಿಕ ಇತಿಹಾಸ ಪ್ರಜ್ಞೆಗೆ ಪೌರಾಣಿಕವಲ್ಲ, ಲೌಕಿಕ ಇತಿಹಾಸದ ಆದರ್ಶವೇ ಬೇಕೆನಿಸಿದರೆ ಅದನ್ನು ಕೊಡಬಲ್ಲ ಶ್ರದ್ಧಾಜೀವಿಗಳು, ಇತಿಹಾಸ ತಜ್ಞರು ಇರುವುದು ನಾಡಿನ ಭಾಗ್ಯ. ಸಿನಿಕತೆ ಎಂಬ ಮಲರೋಗಕ್ಕೆ ಹುಟ್ಟುತ್ತಲೇ ತುತ್ತಾಗುವ ಯುವ ಪೀಳಿಗೆಯ ಕೈಗೆ ಕಬ್ಬಿಣದ ತುಂಡಾಗಿ ಇವರು ಪರಿಣಮಿಸಬಲ್ಲರು. ಎಲ್ಲ ಆಶಾವಾದವೂ ಬಾಲಿಶವಿರಬೇಕೆಂದಿಲ್ಲ, ನಿರಾಶಾವಾದಕ್ಕೆ ಪಕ್ವತೆ ಎಂಬುದು ಪರ್ಯಾಯ ಪದವಲ್ಲ.

ಶ್ರೀಧರರ ಇತಿಹಾಸದೃಷ್ಟಿ ಪುರಾಣದೃಷ್ಟಿಗೆ ವಿರೋಧವಾದುದಲ್ಲ. ಅದರಿಂದ ಸ್ಫೂರ್ತಿ ಪಡೆದಿದೆಯಾದರೂ ಅದರ ಹಾದಿಯಲ್ಲೇ ನಡೆದಿಲ್ಲ. 'ಕದಂಬ ವೈಭವ'ದ ಮೊದಲ ಭಾಗದಲ್ಲಿ ತೆಂಗಿನ ಮರಗಳ ಪ್ರಾರ್ಥನೆಗೆ ಬ್ರಹ್ಮ ಪ್ರತ್ಯಕ್ಷನಾಗಿ ಮಯೂರಶರ್ಮನ ಆಗಮನದ ಬಗ್ಗೆ ಹೇಳುವುದು ಮಾತ್ರ ಶುದ್ಧ ಪೌರಾಣಿಕವಾದ ಭಾಗ. ಅಭಿಮಾನ ಉಕ್ಕಿಸುವ ಸ್ಫೂರ್ತಿಯ ಹಿನ್ನೆಲೆ ಇಲ್ಲಿ ಸೊಷ್ಟವಿದೆ. ನಂತರದ ಭಾಗಗಳಲ್ಲಿ ದೇವಾಸುರರ ಅಥವಾ ಅತಿಮಾನವರ ಪಾತ್ರಗಳಿಲ್ಲ, ಸ್ಪಷ್ಟ ಕೈವಾಡವಿಲ್ಲ. ಮೂರು ಲೋಕಗಳ ಅಥವಾ ಹದಿನಾಲ್ಕು ಲೋಕಗಳ ಕಥೆಯಿಲ್ಲ. ಆದರೆ ವಿಶ್ವಾಮಿತ್ರ, ಅಭಿಮನ್ಯು, ತ್ರ್ಯಂಬಕೇಶ್ವರ, ಕಾಕುತ್‌ಸ್ಥವರ್ಮನ ಕನಸಿನಲ್ಲಿ ಕಾಣಿಸಿಕೊಳ್ಳುವ ಪರಶುರಾಮ – ಈ ಎಲ್ಲ ಉಲ್ಲೇಖಗಳು ಪುರಾಣ ಸ್ಫೂರ್ತಿಯನ್ನು ಸ್ಪಷ್ಟಗೊಳಿಸುತ್ತವೆ.

ವೈದಿಕರು, ಬೌದ್ಧರು, ಜೈನರು ಎಲ್ಲರಿಗೂ ಕವಿ ಸಮಾನವಾದ ಮಣೆ ಹಾಕುತ್ತಾನೆ ರವಿವರ್ಮನ ಆಸ್ಥಾನದಲ್ಲಿ. ಇದು ಸ್ವಾತಂತ್ರ್ಯೋತ್ತರ ಭಾರತಕ್ಕೆ ಬೇಕಾದ ಆದರ್ಶ ಎಂಬುದು ಕವಿಯ ದೃಷ್ಟಿಯೆನಿಸುತ್ತದೆ. ಸಂಸ್ಕೃತ ವಿದ್ವಾಂಸರಾದರೂ ಕವಿಯ ಕನ್ನಡಾಭಿಮಾನ ಎಷ್ಟು ಉಕ್ಕಿದೆ ಎಂದರೆ ಕದಂಬರ ರಘುವರ್ಮನಿಂದಾಗಿಯೇ ಗುಪ್ತರ ಕಾಲದ ಕಾಳಿದಾಸ ರಘುವಂಶವೆಂಬ ಹೆಸರಿನ ಮಹಾಕಾವ್ಯ ಬರೆದಂತೆ ಕವಿ ಚಿತ್ರಿಸಿದ್ದಾನೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಕನ್ನಡ ಅಧ್ಯಾಪಕರ ಪ್ರಧಾನತೆಯೂ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇಂಗ್ಲೀಷ್ ಪ್ರಧಾನತೆಯೂ ಸ್ಪಷ್ಟವಾಗಿರುವ ಸಂಗತಿ. ಸಂಧಿಕಾಲದ ಸಂಸ್ಕೃತ ಅಧ್ಯಾಪಕರಾದ ಶ್ರೀಧರರ ಕಾವ್ಯಕೃಷಿ, ಧೋರಣೆಗಳು ಗಮನಾರ್ಹವಾಗಿವೆ.

'ಕದಂಬ ವೈಭವ', 'ನೌಕಾಗೀತ' – ಈ ಎರಡೂ ಕವನಗಳ ಕಥೆಯ ಕಾಲ ಕದಂಬರ ಕಾಲ. 'ಕದಂಬ ವೈಭವ'ದಲ್ಲಿ ರಾಜಮನೆತನದ ಕಥೆಯಿದೆ. ರಾಷ್ಟ್ರೀಯ ಆದರ್ಶ ರೂಪಿಸುವುದೇ ಇದರ ಉದ್ದೇಶ. 'ನೌಕಾಗೀತ'ದಲ್ಲಿ ಒಬ್ಬ ಕಲ್ಪಿತ ನಾವಿಕನ ಕಥೆಯಿದೆ. ಸಾಂಸ್ಕೃತಿಕ ಸಂಘರ್ಷದ ಐತಿಹಾಸಿಕ ದುರಂತದ ನಿರೂಪಣೆ ಇದರಲ್ಲಿದೆ.

ಕವಿಗೆ ಕನ್ನಡ–ಸಂಸ್ಕೃತ, ಕರ್ನಾಟಕ–ಭಾರತ ಇವುಗಳ ಮಧ್ಯೆ ದ್ವಂದ್ವವೆಂಬುದೇ ಇಲ್ಲ, ಸಮನ್ವಯ ದೃಷ್ಟಿ ಸಹಜ ಸಿದ್ಧಿಯಾಗಿದೆ. ಆದರೆ ಭಾರತೀಯ–ಪಾಶ್ಚಾತ್ಯ ಸಂಸ್ಕೃತಿಗಳ ಸಮನ್ವಯದ ಬದಲು ದುರಂತಮಯ ಸಂಘರ್ಷವೇ ಕವಿಗೆ ಕಂಡು ಬಂದಿದೆ.

ರಸಯಜ್ಞದ ನಂತರ ಪ್ರಕಟವಾದ ಕವನ ಸಂಕಲನಗಳು ಎರಡು – ಕಂಟಕಾರಿ ಮಹಾಕಾವ್ಯಂ (೧೯೬೧) ಮತ್ತು ಜಾತವೇದ (೧೯೮೪). ಈ ಮಧ್ಯದಲ್ಲಿ ಶ್ರೀಧರರು ಕಾವ್ಯಸೂತ್ರ, ಜ್ಞಾನಸೂತ್ರ ಮತ್ತು ರಾಷ್ಟ್ರಸೂತ್ರಗಳನ್ನು ಬರೆದಿದ್ದಾರೆ. ಇವನ್ನು ಶ್ರೀಧರ ಪ್ರಸ್ಥಾನತ್ರಯವೆನ್ನಬಹುದು. (ಮುಖ್ಯ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ – ಇವಕ್ಕೆ ಪ್ರಸ್ಥಾನತ್ರಯವೆಂದು ಹೆಸರಿದೆ. ಎಲ್ಲ ವೈದಿಕ ತತ್ವಜ್ಞಾನಿಗಳೂ ಈ ಮೂರರ ಮೇಲೆ ಭಾಷ್ಯ ಬರೆದು ತಮ್ಮ ಸಿದ್ಧಾಂತ ಮಂಡಿಸಿದ್ದಾರೆ).

ಈ ಎರಡು ಕವನ ಸಂಕಲನಗಳ ಬಗ್ಗೆ ಹೇಳುವ ಮೊದಲ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬಹುದು: ಶ್ರೀಧರರು ಸಿನಿಕರಾಗಿದ್ದಾರೆಯೇ? (ಸಿನಿಕ ಎಂದರೆ ಮನುಷ್ಯನ ಸ್ವಭಾವದಲ್ಲಿ ದೋಷಗಳನ್ನು ಮಾತ್ರ ಕಾಣುವವ). ಈ ಪ್ರಶ್ನೆಯನ್ನು ಕಾರಂತರ ಬಗ್ಗೆ, ಬೇಂದ್ರೆಯವರ ಬಗ್ಗೆಯೂ ಕೇಳಲಾಗಿದೆ ಎಂದು ನನಗೆ ಗೊತ್ತಿದೆ. ಸ್ವಾತಂತ್ರ್ಯ ಸಂಗ್ರಾಮದ ಸಂಸ್ಕಾರವುಳ್ಳವರಿಗೆ ನಂತರದ ಸಾಮಾಜಿಕ, ರಾಜಕೀಯ ಬೆಳವಣಿಗೆಗಳು ತಾಯ್ಗಂಡತನವೆನಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಎಲ್ಲ ದೊಡ್ಡ ಲೇಖಕರೂ ತಮ್ಮ ಬೆಳವಣಿಗೆಯ ಒಂದು ಹಂತದಲ್ಲಿ ಮನುಷ್ಯ ಸ್ವಭಾವದ ಒಳ್ಳೆಯತನದ ಬಗ್ಗೆ ಆಳವಾದ ಅಪನಂಬಿಕೆಯನ್ನು ಎದುರಿಸಿದ್ದಾರೆ ಮತ್ತು ಶ್ರದ್ಧೆಯ ಮೂಲಕ ದಾಟಿ ಬಂದಿದ್ದಾರೆ ಎಂಬುದೂ ನಿಜ. (ಉದಾ: ಶೇಕ್ಸಪೀಯರನ ನಾಲ್ಕು ಶ್ರೇಷ್ಠ ದುರಂತ ನಾಟಕಗಳು).

ಅಡಿಗರ 'ಭೂಮಿಗೀತ'ದ ಕೊನೆಯಲ್ಲಿ ಬರುವ

"ಹೆಳವನ ಹೆಗಲ ಮೇಲೆ ಕುರುಡ ಕುಳಿತಿದ್ದಾನೆ;

ದಾರಿ ಸಾಗುವುದೆಂತೂ ನೋಡಬೇಕು"

ಎಂಬ ಸಾಲುಗಳಿಗೂ, ಶ್ರೀಧರರ 'ವೇಸ್ಟ್‌ಸೂಕ್ತ'ದ ಕೊನೆಯಲ್ಲಿ ಬರುವ

"ಆರು ಹಗೆಗಳಾತ್ಮವನು ಬಂಧಿಸಿರಲು ಮಾತಾಡಿ ಕಡಿದ ಗುಡ್ಡ

ಬರೆದೊಟ್ಟಿದೋಲೆಗಳ ರಾಶಿ ಕೂಡ ವೇಸ್ಟ್‌ಬ್ರಹ್ಮ ಬಿಟ್ಟಗಡ್ಡ"

ಎಂಬ ಸಾಲುಗಳಿಗೂ ಇರುವ ವ್ಯತ್ಯಾಸ ಶ್ರದ್ಧೆಯ ಸತ್ವದಲ್ಲಿದೆ. ಸ್ವಾತಂತ್ರ್ಯ ಸಂಗ್ರಾಮದ ನಿಜವಾದ ಸಂಸ್ಕಾರವುಳ್ಳವ ನಂತರದ ಬೆಳವಣಿಗೆಯ ಬಗ್ಗೆ

ವ್ಯಾಕುಲನಾಗಬಹುದು, ಸಿನಿಕನಾಗುವುದಿಲ್ಲ. ಏಕೆಂದರೆ ಸ್ವಾತಂತ್ರ್ಯ ಸಂಗ್ರಾಮದ ಆಳದ ಪ್ರೇರಣೆಯಾಗಿರುವುದು ಮನುಷ್ಯ ಸತ್ವದ ಬಗ್ಗೆ ನಂಬಿಕೆ. ಅಡಿಗರಿಗೆ ಆ ಪ್ರೇರಣೆ ಆಳವಾಗಿಲ್ಲ. ಬಹುಶಃ ನಂತರದ ಪೀಳಿಗೆಯವರ ಮೂಲ ಸಮಸ್ಯೆ – ನಂಬುವುದು ಹೇಗೆ? ಅಭಿಮಾನವಿಡುವುದು ಹೇಗೆ? ಎಂಬುದೇ ಆಗಿದೆ. ಅಡಿಗರು ಈ ಭಾವದ ಪ್ರಥಮ ಸಮರ್ಥ ವಕ್ತಾರರಾಗಿರುವುದರಿಂದಲೇ ಅವರು 'ಮೇಜರ್' ಕವಿಯಾಗಿರುವುದು. ಶ್ರೀಧರರು ಆ ಪಟ್ಟಕ್ಕೆ ಸ್ಪರ್ಧಿಸುವುದಿಲ್ಲ.

ಅಡಿಗರ ಓರಿಗೆಯವರಾದ ಶ್ರೀಧರರು ಸಿನಿಕತೆಯ ಅಪಾಯ ತಪ್ಪಿಸಿಕೊಂಡದ್ದು ಹೇಗೆ ಎಂಬ ಪ್ರಶ್ನೆಗೆ ಮೂರು ವಿವರಣೆಗಳು ಉತ್ತರವಾಗಿ ನನಗೆ ಹೊಳೆಯುತ್ತವೆ:

೧) ಸ್ಥಿತಪ್ರಜ್ಞತ್ವದ ಪರಂಪರಾಗತ ತಾತ್ವಿಕತೆ : ಸ್ಥಿತಪ್ರಜ್ಞತ್ವವೆಂದರೆ ಸ್ಥಗಿತ ಪ್ರಜ್ಞೆ ಎಂದು ಅರ್ಥ ಮಾಡಬೇಕಾಗಿಲ್ಲ. (ಆ ಸಮೀಕರಣ ಶ್ರೀ ಶಂ.ಬಾ.ಜೋಶಿಯವರದು). ಸ್ಥಿತಪ್ರಜ್ಞನಿಗೆ ಸುಖ–ದುಃಖಗಳು ಇರುವುದಿಲ್ಲ ಎಂದಲ್ಲ, ಆತನ ಸಂವೇದನಾಶೀಲತೆ ಬತ್ತಿಹೋಗಿರುತ್ತದೆ ಎಂದಲ್ಲ. ಸುಖ–ದುಃಖಗಳನ್ನು ಗಾಢವಾಗಿ ಅನುಭವಿಸಿಯೂ, ಸುಖ–ದುಃಖಗಳು ಕ್ರಿಯೆಯ ಪರಿಣಾಮಗಳಾದರೂ ಮಾನದಂಡಗಳಲ್ಲ ಎಂಬ ವಿವೇಕದ ಹಿನ್ನೆಲೆಯಲ್ಲಿ ಕರ್ತವ್ಯನಿರತನಾಗುವವನೇ ಸ್ಥಿತಪ್ರಜ್ಞನೆನ್ನಬಹುದು.

೨) Positive ಆದರ್ಶವೊಂದರ ಪರಿಕಲ್ಪನೆ : ಶ್ರೀಧರರ ವಿಡಂಬನೆಗೂ ಚಂದ್ರಶೇಖರ ಪಾಟೀಲರ ವ್ಯಂಗ್ಯಕ್ಕೂ ಇರುವ ವ್ಯತ್ಯಾಸವನ್ನು ಈಗಾಗಲೇ ಹೇಳಿ ಆಗಿದೆ. ನಮ್ಮ ಹತೋಟಿಯನ್ನು ಮೀರಿ ಬರುವ ವಿಡಂಬನೆಯ ಅಪಾಯವನ್ನು ಪಾಟೀಲರು ಒಪ್ಪಿಕೊಂಡಿದ್ದಾರೆ. ಶ್ರೀಧರರಿಗೆ ಅಪಾಯ ಬರಲಿಲ್ಲ. ಕಾರಣ, ಪಾಟೀಲರಿಗೆ ಆದರ್ಶದ ಕಲ್ಪನೆ ಇಲ್ಲ. ಶ್ರೀಧರರಿಗೆ ಇದೆ. ಪಾಟೀಲರು ಪ್ರವೃತ್ತಿಯಿಂದ ವಿಡಂಬನಕಾರರು, ಶ್ರೀಧರರು ಜವಾಬ್ದಾರಿಯ ಆಯ್ಕೆಯಿಂದ ವಿಡಂಬನಕಾರರಾದರು. ರಸಯಜ್ಞದ ನಂತರ 'ನೌಕಾಗೀತ', 'ಕದಂಬ ವೈಭವ'ಗಳನ್ನು ಬರೆಯಬಲ್ಲ ಕವಿ ತನ್ನ ವಿಡಂಬನ ಶಕ್ತಿಗೆ ತಾನೇ ದಾಸನಾಗಿದ್ದಾನೆ ಅನಿಸುವುದಿಲ್ಲ.

೩) ಹಾಸ್ಯಪ್ರಜ್ಞೆ ಮತ್ತು ವಾತ್ಸಲ್ಯದ ಬಗ್ಗೆ ಗೌರವ : ಇವು ಪ್ರಧಾನ ಭಾವಗಳಾಗಿ ಶ್ರೀಧರರ ಕಾವ್ಯದಲ್ಲಿ ಕಂಡುಬರದಿದ್ದರೂ ಅವು ಎಂದೂ ಮಾಯವಾಗಿಲ್ಲ. ಶ್ರೀಧರರ ವಿಸ್ತಾರವಾದ ಅಧ್ಯಯನ ಈ ಎರಡು ಶುದ್ಧ ಭಾವಗಳನ್ನು ಕತ್ತು ಹಿಸುಕಿ ಕೊಂದಿಲ್ಲ. ಅಡಿಗರ ಮತ್ತು ಅನಂತಮೂರ್ತಿಯವರ ಹಾಸ್ಯಪ್ರಜ್ಞೆಯ ಬಗ್ಗೆ, ವಾತ್ಸಲ್ಯಕ್ಕೆ ಅವರು ತೋರಿದ ಗೌರವದ ಬಗ್ಗೆ

> ಇದು ವರೆಗೆ ಯಾರೂ ಸಂಶೋಧನಾ ಪ್ರಬಂಧ ಬರೆದಿಲ್ಲ. ಯಾರಾದರೂ ಬರೆಯಬಹುದೆಂಬ ನಂಬಿಕೆಯೂ ನನಗಿಲ್ಲ.

ಕಂಟಕಾರಿ ಮಹಾಕಾವ್ಯಂ (೧೯೮೧) ಹತ್ತು ಸರ್ಗಗಳುಳ್ಳ ಕ್ಷುದ್ರ ಮಹಾಕಾವ್ಯ. ರಾಜರತ್ನಂ ಅವರ ಪುರುಷ ಸರಸ್ವತಿಯ ಜಾತಿಯದು. ಕಂಟಕ ಎಂದರೆ ಮುಳ್ಳು. ಕಂಟಕಾರಿ ಎಂದರೆ ಮುಳ್ಳಿನ ಶತ್ರು, ಪಾದರಕ್ಷೆ. ಚಪ್ಪಲಿ ಪ್ರಯೋಗವಾಗುವುದು ಇಂದಿನ ಸಾಮಾಜಿಕ, ರಾಜಕೀಯ ಪರಿಸ್ಥಿತಿಗೆ. ಈ ಮಹಾಕಾವ್ಯದ ಮಹಾನಾಯಿಕೆ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ. ಆಕೆಯೇ 'ಗೊರೆ ಮೂಗಿನ ನಿದ್ರೇಶ್ವರಿ'. ಚಂದ್ರಶೇಖರ ಪಾಟೀಲರ ಗಾಂಧಿ, ಗಾಂಧಿ, ಗಾಂಧಿ, ಸಾಧಿಸಿದ ವಿಡಂಬನೆಯನ್ನು ಈ ಕಾವ್ಯ ಮತ್ತೊಂದು ರೀತಿಯಲ್ಲಿ ಸಾಧಿಸುತ್ತದೆ. ವ್ಯತ್ಯಾಸವೆಂದರೆ ಈ ಕಾವ್ಯ ಕಂದ ಪದ್ಯ, ಷಟ್ಪದಿಗಳಲ್ಲಿ ಬರೆಯಲ್ಪಟ್ಟಿದೆ. ಹಾಗಾಗಿಯೇ ಬಹುಶಃ ಸಾಮಾನ್ಯ ಓದುಗರಿಗೆ ಕ್ಲಿಷ್ಟವೆಂದು, ವಿಮರ್ಶಕರಿಗೆ ನಗಣ್ಯವೆಂದೂ ಅನಿಸಬಹುದು. ಶ್ರೀಧರರ ಪ್ರತಿಭಟನೆಯ ತೀವ್ರತೆ ಪಾಟೀಲರದಕ್ಕಿಂತ ಕಡಿಮೆಯದಲ್ಲ. ಉಳಿದ ವಿಷಯಗಳಲ್ಲಿ ವಿರುದ್ಧ ದಿಕ್ಕಿಗೆ ನಿಲ್ಲುವ ಈ ಇಬ್ಬರು ಕವಿಗಳು ಶ್ರೀಮತಿ ಗಾಂಧಿಯವರನ್ನು ವಿರೋಧಿಸುವಲ್ಲಿ ಒಂದಾಗಿರುವುದು ಆಶ್ಚರ್ಯಕಾರಿಯೂ, ಸಂತೋಷಕಾರಿಯೂ ಆದ ಸಂಗತಿ. ಆಶ್ಚರ್ಯಕಾರಿ ಏಕೆಂದರೆ ಇಂತಹ ಏಕತೆಯನ್ನು ಯಾರಾದರೂ (ಅವರಿಬ್ಬರೂ ಸೇರಿದಂತೆ) ಕನಸಿನಲ್ಲಿ ಊಹಿಸುವುದೂ ಸಾಧ್ಯವಿಲ್ಲ. ಸಂತೋಷಕಾರಿ – ಏಕೆಂದರೆ ನಂತರದ ಪೀಳಿಗೆಯವರಿಗೆ ಒಂದಾದರೂ ವಿಷಯದ ಬಗ್ಗೆ ನೈತಿಕವಾದ ಆರೋಗ್ಯಕಾರಿ ಏಕದೃಷ್ಟಿ ಸಾಧ್ಯವಾಗಬಹುದು. ಇಲ್ಲದಿದ್ದಲ್ಲಿ ಯಾವುದು ನೀತಿ, ಯಾವುದು ಅನೀತಿ ಎಂಬುದರ ಬಗ್ಗೆಯೇ ತೊಳಲಾಡುವ ಪರಿಸ್ಥಿತಿ ಇದೆ.

ಇಲ್ಲಿಯ ಸರ್ಗಗಳಿಗೆ ನಾಸ ಪ್ರಜ್ಞಾವಿಲಾಸ, ಜಿಹ್ವಾ ಪ್ರಜ್ಞಾವಿಲಾಸ ಮುಂತಾದ ಹೆಸರುಗಳಿವೆ. ಕರ್ಣ, ನೇತ್ರ, ಕುಂತಲ (ಕೂದಲು), ಕಂಠ, ನಖ, ಪೃಷ್ಠ..... ಎಲ್ಲವೂ ಪ್ರಜ್ಞಾವಿಲಾಸಗಳೇ. ಸಮಾಜ ಪುರುಷನ ದೇಹದ ಪ್ರತಿಯೊಂದು ಅಂಗದಲ್ಲೂ ಮನೆ ಮಾಡಿರುವ ಭ್ರಷ್ಟಾಚಾರ, ಮೌಲ್ಯ ವಿಪರ್ಯಾಸ, ಅವಸ್ಥೆಗಳ ಸುಂದರ ರೂಪಕ ಈ ಕಾವ್ಯ. ಶರೀರದ ಅಂಗಗಳ ವಿಕೃತಿಯನ್ನು ನಿರೂಪಿಸಿದ ಕವಿಗೆ ಸಮಾಧಾನವಾಗಿರಲಿಕ್ಕಿಲ್ಲ. ಶರೀರವನ್ನು ಮೀರಿದ ಪ್ರಜ್ಞೆಯಲ್ಲಿಯೇ ದೋಷವಿದೆ ಎಂದು ಕವಿ ಕೊನೆಯ ಸರ್ಗಕ್ಕೆ 'ವಿಚಿತ್ರ ಪ್ರಜ್ಞಾ ವಿಲಾಸ' ಎಂದು ಹೆಸರಿಟ್ಟಿದ್ದಾನೆ. ಭ್ರಷ್ಟ ದೇಶದ ಚಿತ್ರ ವಿವರವಾಗಿ ಮೂಡಿ ಬಂದಿದೆ. ಕವಿಯ ಸಮಗ್ರ ತಾತ್ವಿಕ ಚಿಂತನೆಯ ಸಾರ ವಿವಿಧ ಸರ್ಗಗಳಿಗೆ ಕೊಟ್ಟ ಹೆಸರಿನಲ್ಲಿ, ಅವುಗಳ ಬಂಧದಲ್ಲಿ ಇದೆ. ಛಂದೋ ವೈವಿಧ್ಯದಲ್ಲಿ ಕವಿಯ ಪಾಂಡಿತ್ಯ, ಪರಿಶ್ರಮ, ಪ್ರತಿಭೆ ಅಭಿವ್ಯಕ್ತವಾಗಿದೆ. ಕಿನ್ನರಗೀತದಲ್ಲಿ ಕಾಲೇಜು ವಿದ್ಯಾರ್ಥಿಯನ್ನು ಕಿನ್ನರನೆಂದೂ, ಪದವೀಧರನನ್ನು

ವಿದ್ಯಾಧರನೆಂದೂ ಕರೆದ ಕವಿಯೇ ಶ್ರೀಮತಿ ಗಾಂಧಿಯವರನ್ನು 'ಗೊರೆ ಮೂಗಿನ ನಿದ್ರೇಶ್ವರಿ' ಎಂದು ಕರೆದಿದ್ದಾನೆ. ಅದೇ ಪ್ರತಿಭೆಯೇ ಇಲ್ಲಿಯೂ ಕೆಲಸ ಮಾಡಿರುವುದು.

ಮೇಲು ನೋಟಕ್ಕೆ ಸಿನಿಕ ಎನಿಸಬಹುದಾದ ಈ ಆವ್ಯದಲ್ಲಿ ಕವಿಯ ಹಾಸ್ಯ ಪ್ರಜ್ಞೆಯ ಉದಾಹರಣೆಗಳು ಸಾಕಷ್ಟಿವೆ:

"ಗಂಡ–ಹೆಂಡತಿಯರೆದುರು–ಬದುರಾಗಿ
ಮಂಡೆ ಹಾಕಲು ಮುತ್ತಿಡೆ ।
ಪುಂಡು ಮೂಗುಗಳು ಅಡ್ಡ–ಡಿಕ್ಕಿ ಹೊಡೆ–
ದುಂಡವರನೂ ನಗಿಸವೇ?"
'ಕತ್ತರಿ ಪೇಟಾ ಕುಡಿವುದು ಘೋಟಾ'
ವಿತ್ತದ ಹಸಿವಿನ ಪಿತ್ತವಿರಾಟಾ ।
"ಗಾಂಧೀ ಟೋಪೀ ಕುಡಿ ಬಿಳಿಕಾಫೀ
ಎಂಬುದರರ್ಥವ ಹೇಳೋ ಪಾಪೀ ॥"
'ಪೃಷ್ಠಬುದ್ಧಿ ತಲೆಗಿಲ್ಲವೆಂಬುದೇ ಪೃಷ್ಠವಾದ ಸಾರ.

ಶ್ರೀಮತಿ ಗಾಂಧಿಯವರ ವರ್ಣನೆ ನೋಡಿ:

"ಅಣುಶಕ್ತಿ ಪ್ರಧಾನಾಯೈ
ಹೈಡ್ರೋಜನ್ ಬಾಂಬು ಹಸ್ತಿನಿ ।
ರಾಕೆಟ್–ಸ್ಫುಟ್ನಿಗ್ವಾಹನಾಯೈ
ನಖಾಸ್ತ್ರಾಯೈ ನಮೋ ನಮಃ ॥"
'ಅತಿಹಿಟ್ಲರನಾದಾಕೆಯೊ'.

ಜಾತವೇದ (೧೯೮೪)ದಲ್ಲಿ ೨೬ ಕವನಗಳಿವೆ. ಮೊದಲ ನೋಟದಲ್ಲೇ ಎದ್ದು ಕಾಣುವ ಅಂಶವೆಂದರೆ ಎಲ್ಲ ಕವನಗಳ ಶೀರ್ಷಿಕೆಯಲ್ಲೂ 'ಪ್ರಜ್ಞೆ' ಎಂಬ ಪದವಿದೆ. ಜಾತವೇದಸಪ್ರಜ್ಞೆ, ಗುಮಾಸ್ತಪ್ರಜ್ಞೆ, ದಾಂಪತ್ಯಪ್ರಜ್ಞೆ ಇತ್ಯಾದಿ. ಕಂಟಕಾರಿ ಮಹಾಕಾವ್ಯದ ಎಲ್ಲ ಸರ್ಗಗಳ ಶೀರ್ಷಿಕೆಯಲ್ಲೂ 'ಪ್ರಜ್ಞಾವಿಲಾಸ' ಎಂಬ ಪದವಿರುವುದನ್ನು ಗಮನಿಸಿದರೆ ಕವಿಯ ಇತ್ತೀಚಿನ ಕಾಳಜಿ ಪ್ರಜ್ಞೆಯ ವೈವಿಧ್ಯವನ್ನು ಅರ್ಥೈಸಿಕೊಳ್ಳುವುದು ಅನಿಸುತ್ತದೆ. ಕಂಟಕಾರಿ ಮಹಾಕಾವ್ಯದಲ್ಲಿ ಪ್ರಜ್ಞೆಯ ಮೇಲೆ ದೇಹ ಬೀರಬಹುದಾದ ಪ್ರಭಾವ ವಿಡಂಬನೆಯ ರೂಪಕವಾಗಿ ಮೂಡಿಬಂದರೆ ಇಲ್ಲಿ ಪ್ರಜ್ಞೆಯ ವಿವಿಧ ಪ್ರಕಾರ(types)ಗಳನ್ನು ಅರ್ಥೈಸಿಕೊಳ್ಳುವ ಗಂಭೀರ ಪ್ರಯತ್ನ ಕಂಡುಬರುತ್ತದೆ. ಇಲ್ಲಿಯ ಹಲವು ಶೀರ್ಷಿಕೆಗಳನ್ನು ನೋಡಿದರೆ ಕವಿ ತಾತ್ವಿಕವಾಗಿ ಹಲವು ಬಗೆಯಲ್ಲಿ ನಿಸರ್ಗ, ದೈವ, ಕಾಲ, ಭ್ರಮೆ ಮುಂತಾದವುಗಳ ಬಗ್ಗೆ ಜಿಜ್ಞಾಸೆಯಲ್ಲಿ ತೊಡಗಿರುವುದು

ಕಂಡುಬರುತ್ತದೆ. ಸಮಾಜ ವಿಡಂಬನೆಯ ದೃಷ್ಟಿ ಕೆಲವು ಕವನಗಳಲ್ಲಿ ಇದೆಯಾದರೂ ಅದು ಕವನ ಸಂಕಲನದ ಪ್ರಧಾನ ಧಾರೆಯಾಗಿಲ್ಲ.

ಶ್ರೀಧರರ ತಾತ್ವಿಕ ಜಿಜ್ಞಾಸೆ ಪೌರಾಣಿಕ ಕಥೆಗಳ ಬೆನ್ನು ಹತ್ತುವುದಿಲ್ಲ ಎನ್ನುವುದು ಒಂದು ವಿಶೇಷ. ಉದಾಹರಣೆಗೆ 'ರುದ್ರಪ್ರಜ್ಞೆ' ಕವನದಲ್ಲಿ ರುದ್ರನಿಗೆ ಸಂಬಂಧಿಸಿದ ಕಥೆಗಳ ಪುನರ್‌ವ್ಯಾಖ್ಯಾನ ಅಥವಾ ವಿಡಂಬನೆಯಿಲ್ಲ. ರುದ್ರ ಎಂಬುವವನು ಪೌರಾಣಿಕ ವ್ಯಕ್ತಿ ಎಂಬುದಕ್ಕಿಂತ ಹೆಚ್ಚಾಗಿ ಪ್ರಜ್ಞೆಯ ಒಂದು ಪ್ರಕಾರ ಎಂಬುದೇ ಕವಿಯ ಮೂಲಭೂತ ಗ್ರಹಿಕೆಯಾಗಿದೆ. ಈ ಕವನದ ಜೊತೆಗೇ 'ಗುಮಾಸ್ತ ಪ್ರಜ್ಞೆ' ಕವನವನ್ನೂ ಓದಿದರೆ ಕವಿಯ ಭಾವ ವೈವಿಧ್ಯ ಬೆರಗಾಗಿಸುತ್ತದೆ. ಆಯಾ ಪ್ರಜ್ಞೆಯ ಬಗ್ಗೆ ಬರೆಯುವಾಗ ಎಲ್ಲೆಲ್ಲೂ ಅದೇ ಕಾಣುತ್ತದೆ. ಅದೇ ತುಂಬುತ್ತದೆ. ಈ ಸಂಕಲನದ ಎಲ್ಲ ಕವನಗಳನ್ನು ನೋಡಿದಾಗ ಒಂದು ಯಕ್ಷಗಾನದಲ್ಲಿ ಹಲವು ಪಾತ್ರಗಳ, ಹಲವು ಬಗೆಯ ಭಾಷಣಗಳನ್ನು, ಸ್ವಗತಗಳನ್ನು ಕೇಳಿದಂತೆ ಅನಿಸುತ್ತದೆ. (ಸಂಭಾಷಣೆ ಮಾತ್ರ ಇಲ್ಲ). ಶ್ರೀಧರರ ಸಮಗ್ರ ದೃಷ್ಟಿಯನ್ನು ಯಾವುದೇ ಒಂದು ಕವನದಲ್ಲಿ ಕಾಣುವ ಪ್ರಯತ್ನ ವ್ಯರ್ಥವಾದೀತು. ಇಡೀ ಸಂಕಲನವೇ ಒಂದು ರೀತಿಯಲ್ಲಿ ನಾಟಕೀಯವಾಗಿದೆ.

ಈ ಸಂಕಲನದ ಮೊದಲ ಕವನ "ಜಾತವೇದಸ ಪ್ರಜ್ಞೆ" ಮತ್ತು ಕೊನೆಯ ಕವನ "ಗುರುಪ್ರಜ್ಞೆ" ಎರಡೂ ಪ್ರಾರ್ಥನೆಗಳಾಗಿವೆ. ಅಡಿಗರ 'ಪ್ರಾರ್ಥನೆ' ಕವನ ಪ್ರಾರ್ಥನೆಯೇ ಎಂಬ ಪ್ರಶ್ನೆ ಮೂಡುವಂತೆ ಇಲ್ಲಿ ಆಗುವುದಿಲ್ಲ. ಅನನ್ಯ ಶರಣಾಗತಿ ಸ್ಪಷ್ಟವಾಗಿ ಕಂಡುಬರುತ್ತದೆ. 'ಜಾತವೇದಸ ಪ್ರಜ್ಞೆ'ಯಲ್ಲಿ ಕವಿ ಜಾತವೇದನ ಬಗ್ಗೆ ಹೇಳುವಾಗ ಇತರ ಹಲವು ದೇವತೆಗಳ ಶಕ್ತಿಯನ್ನು ಅವನಲ್ಲಿ ಆರೋಪಿಸುವುದನ್ನು ಕಾಣಬಹುದು. ತನ್ನ ಆರಾಧ್ಯ ದೈವದಲ್ಲಿಯೇ ಸಕಲ ದೈವತಗಳನ್ನು ಕಾಣುವ ದೃಷ್ಟಿ ಸಮರ್ಥ ಭಕ್ತನಿಗಿರುತ್ತದೆ. ಇದು ಭಾರತೀಯ ಪರಂಪರೆಯಲ್ಲಿ ನಡೆದುಬಂದ ರೀತಿಯಾಗಿದೆ. (ಶ್ರೀ ಶಂ.ಭಾ. ಜೋಶಿಯವರು ಹೇಳುವ ಜಾತವೇದಾಗ್ನಿ – ನಚಿಕೇತಾಗ್ನಿಗಳ ವ್ಯತ್ಯಾಸ ಈ ಕವನದ ವಿಶ್ಲೇಷಣೆಗೆ ಸಹಾಯ ಮಾಡಿತೆಂದು ನನಗನಿಸುವುದಿಲ್ಲ).

'ಗುರುಪ್ರಜ್ಞೆ' ನನಗೆ ಹೆಚ್ಚು ಇಷ್ಟವಾದ ಕವನ. 'ಜಾತವೇದಸ ಪ್ರಜ್ಞೆ'ಯಲ್ಲಿ ಇದರಷ್ಟು ಸುಗಮತೆ, ಭಾವ ಮತ್ತು ಭಾಷೆಗಳಲ್ಲಿ ಇಲ್ಲ. ಅಂತ್ಯ ಪ್ರಾಸದ ಕೊರತೆ ಎದ್ದು ಕಾಣುತ್ತದೆ. ಅರ್ಥವಿಸ್ತಾರ, ಛಂದೋಯತಿಗಳಲ್ಲಿ ಸಾಂಗತ್ಯವಿಲ್ಲದಿರುವುದು ಕೊರತೆಯೆನಿಸುತ್ತದೆ. ('ಯತಿವಿಲಂಗನದಿಂದರಿತಲ್ತೆ ಕನ್ನಡಂ' ಎಂಬುದು ನಿಜವಿದ್ದರೂ ಕೂಡ). 'ಗುರುಪ್ರಜ್ಞೆ'ಯಲ್ಲಿ ಕವಿ ಈ ದೋಷಗಳನ್ನು ಮೆಟ್ಟಿ ನಿಂತಿದ್ದಾನೆ. ಇಲ್ಲಿಯ ಕೆಲವು ಸಾಲುಗಳು ಶಂಕರಾಚಾರ್ಯರ ಸ್ತೋತ್ರ, ಸಾಹಿತ್ಯದ ಸಿದ್ಧಿಯನ್ನು ನೆನಪಿಸುತ್ತದೆ:

"ನಡುಗಿತೋ ಶ್ರದ್ಧೆ ಯುಡುಗಿತೋ ಭಕ್ತಿ ಸತ್ಯಸ್ಯ ಸತ್ಯನಾದ
ಮೃಡ ಗುಡುಗಿ ಹೇಳು ಮತ್ತೊಮ್ಮೆ ಗೂಢವನು ತಪ್ಪಲು ಪ್ರಮಾದ'
ಕರುಣಕ್ಕೆ ನಿನ್ನ ಬೇಕೊಂದು ಪಾತ್ರವೆಂದಿದನು ಸೃಷ್ಟಿಸಿದೆಯಾ?"
"ಬೇಡಯ್ಯ ಬೇಡ ಕಲಿಸಿದ್ದು ಸಾಕು ಈ ಬಾಳ ಪಾಠಶಾಲೆ"
"ಹೊರಳಾಡಿ ಬೇಡುವೆನು ಬುದ್ಧಿ ಪೌರುಷದ ಶಿಖರವೇರಿ ನಿಂದು"

ಶ್ರೀಧರರ ಬೆಳವಣಿಗೆ 'ಗುರುವಿನ ಅಡಿದಾವರೆಯಲ್ಲಿ' (ಮೇಘನಾದ)ಯಿಂದ 'ಗುರುಪ್ರಜ್ಞೆ'ಯ ವರೆಗೆ ಸಾಗಿದೆ. 'ಗುರುವಿನ ಅಡಿದಾವರೆಯಲ್ಲಿ'ಯ ಗುರುಕವಿಗೆ ಲೌಕಿಕವಾಗಿ ಸಹಾಯ ಮಾಡಿದ ಒಬ್ಬ ಅಧ್ಯಾಪಕನೆನಿಸಿದರೆ, 'ಗುರುಪ್ರಜ್ಞೆ'ಯ ಗುರುಜೀವನದ ಸಂಕಟಮಯ ರಹಸ್ಯಗಳ ಗೊಂದಲದಲ್ಲಿ ಅಭಯ ನೀಡುವ ಶಕ್ತಿ ಎನಿಸುತ್ತದೆ.

–೪–

ಈ ಲೇಖನ ಮುಗಿಸುವ ಮೊದಲು 'ಶ್ರೀಧರರ ಕಾವ್ಯಶಕ್ತಿ ಖರ್ಚಾಗಿ ಹೋಗಿದೆಯೇ?', 'ಅವರು ಕಾವ್ಯ ಬರೆಯುವದನ್ನು ನಿಲ್ಲಿಸಬೇಕೆ?' ಎಂಬ ಪ್ರಶ್ನೆಗಳನ್ನು ಉತ್ತರಿಸಬೇಕೆನಿಸುತ್ತದೆ. ಈ ಪ್ರಶ್ನೆಗಳನ್ನು ಎಷ್ಟೋ ವಯೋವೃದ್ಧ ಕವಿಗಳ ಬಗ್ಗೆ ಕೇಳಲಾಗಿದೆ. ಮೊದಲನೇ ಪ್ರಶ್ನೆಗೆ ಪ್ರತಿ ಪ್ರಶ್ನೆಯನ್ನು ಕೇಳಬೇಕೆನಿಸುತ್ತದೆ– ಕಾವ್ಯಶಕ್ತಿ ಎಂಬುದು ಕಿಸೆಯೊಳಗಿನ ರೊಕ್ಕವೇ? The Tempest ಬರೆಯುವಾಗ ಶೇಕ್ಸ್‌ಪಿಯರನ ನಾಟ್ಯ ಪ್ರತಿಭೆ ಖರ್ಚಾಗಿ ಹೋಗಿತ್ತೆ? ಮತ್ತೊಂದು Hamletನ್ನೋ Macbethನ್ನೋ ಆತ ಆಗ ಬರೆಯಬೇಕಾಗಿತ್ತೆ? ಶ್ರೀಧರರ 'ಗುರುಪ್ರಜ್ಞೆ' ಕವನ ನೋಡಿದಾಗ ಅವರು ಹುಟ್ಟಾ ಪಡೆದುಕೊಂಡು ಬಂದ ಕಾವ್ಯ ಪ್ರತಿಭೆ ಮುಪ್ಪಿನ ಕಾಲದಲ್ಲಿ ಬಿಟ್ಟುಹೋದಂತೆ ಅನಿಸುವುದಿಲ್ಲ. ಎರಡನೇ ಪ್ರಶ್ನೆಯನ್ನು ಕೇಳುವುದೇ ತಪ್ಪು. ಚಂದ್ರಶೇಖರ ಪಾಟೀಲರು ಬೇರೊಂದು ಸಂದರ್ಭದಲ್ಲಿ ಬರೆದ ಸಾಲುಗಳು ನೆನಪಾಗುತ್ತವೆ: ಹಣ್ಣೆಲೆಯನ್ನು ಕಂಡು ಚಿಗುರೆಲೆ ನಗೆಯಾಡುತ್ತಿದೆ, ಚಿಗುರೆಲೆಯನ್ನು ಕಂಡು ಹಣ್ಣೆಲೆ (ತನ್ನದೇ ರೀತಿಯಲ್ಲಿ) ನಗುತ್ತದೆ. ಯಾವುದೇ ಒಬ್ಬ ಕವಿಯ ವೃದ್ಧಾಪ್ಯದ ಕವನಗಳನ್ನು ಓದುವುದು ಕೆಲವರಿಗೆ ಸಂಕಟವಾದರೆ ಅವರು ಓದುವುದನ್ನು ನಿಲ್ಲಿಸಬೇಕೇ ಹೊರತು 'ಬರೆಯುವುದನ್ನು ನಿಲ್ಲಿಸು' ಎಂದು ಕವಿಗೆ ಅಪ್ಪಣೆ, ಉಪದೇಶ ಅಥವಾ ಕಿವಿಮಾತು ಹೇಳುವುದಲ್ಲ. ಅಲ್ಲದೇ ಹಾಗೆ ಅಂದವರಿಗೂ ವೃದ್ಧಾಪ್ಯ ಬಂದಾಗ ಅವರನ್ನು ವಿಚಾರಿಸಿಕೊಳ್ಳುವವರೂ ಹುಟ್ಟಿಬರುತ್ತಾರೆ.

ಶ್ರೀಧರರ ಮುಂದಿನ ಕಾವ್ಯ ಹೇಗಿರಬಹುದು ಎಂದು ಹೇಳುವುದು ಕಷ್ಟ. ಆದರೆ ಅವರ ಕಿಟಕಿ ಗಳಿಗಿಂತ ಭಕ್ತಿ ನನಗೆ ಹೆಚ್ಚು ಪ್ರಿಯವಾಗುತ್ತದೆ. ಅಡಿಗರಿಗೆ

ಧರ್ಮ ಎಂಬುದು ಆಚರಣೆಗಳ ಮೊತ್ತ, ಶ್ರೀಧರರಿಗೆ ಧೈರ್ಯ ಕೊಡುವ ಶಕ್ತಿ. ಅಡಿಗರನ್ನು Reactionary ಎಂದಂತೆ ಶ್ರೀಧರರನ್ನು ಅನ್ನಲು ಸಾಧ್ಯವಿಲ್ಲ. ಶ್ರೀಧರರ ನಿಲುವಿಗೆ ಶರಣರ, ದಾಸರ, ಸ್ವಾತಂತ್ರ್ಯ ಪೂರ್ವ ಕವಿಗಳ ಭದ್ರ ಪರಂಪರೆ ಇದೆ. ಭಕ್ತಿಯ ನೆಲೆಯಿಂದ ಸಮಾಜದ ವಿಡಂಬನೆಗೆ ಅವರು ಕೈ ಹಾಕಿದರೆ ಅದು ಹೆಚ್ಚು ಹೃದ್ಯವಾಗಬಲ್ಲುದು.

ಶ್ರೀಧರರ ಕಾವ್ಯದ ಬಗ್ಗೆ ಬರೆಯುವಾಗ ಕಾವ್ಯ ಸ್ವರೂಪದ ಬಗ್ಗೆ, ಸಾಹಿತ್ಯಿಕ ಪರಂಪರೆ ಬಗ್ಗೆ ಇತರ ಲೇಖಕರ ಬಗ್ಗೆ ಬಹಳಷ್ಟು ಮಾತುಗಳನ್ನು ಹೇಳಿದ್ದೇನೆ. ಇದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಆಗಬಲ್ಲದು ಎಂದು ಬಲ್ಲೆ. ಆದರೆ ಶ್ರೀಧರರ ಕಾವ್ಯದ ಬಗ್ಗೆ ಬರೆಯುವ ಏಕ ಮಾತ್ರ ರೀತಿ ಇದು ಎಂದು ನನಗನಿಸುತ್ತದೆ.

ಪ್ರೊ. ಎಚ್.ಆರ್.ಅಮರನಾಥ

ಪ್ರಕಾಶಕರ ನುಡಿ

ಪ್ರಕಾಶನ ವೃತ್ತಿ ಬರಿದೇ ವ್ಯವಹಾರಕ್ಕೆ ಸಂಬಂಧಿಸಿದುದು ಎಂಬುದು ನಿರ್ವಿವಾದ. ಆದರೆ ವೃತ್ತಿಯ ಪಥದಲ್ಲೇ ಪ್ರಕಾಶವನ್ನು ಕಾಣುವುದು, ಅನುಭವಿಸುವುದು, ತನ್ಮೂಲಕ ಆ ಅನುಭವವನ್ನು ಇತರರು ಕಾಣುವಂತಾಗಿಸುವುದು, ಅನುಭವಗಳನ್ನು ಪುಟಕ್ಕಿಟ್ಟು ಹಂಚುವುದು ಜೀವನದ ಸಾರ್ಥಕ ಸಮಯಗಳಲ್ಲಿ ಒಂದೆಂಬುದು ನಮ್ಮ ಅಭಿಪ್ರಾಯ. ವೃತ್ತಿನಿರತರಾದ ಯಾವುದೇ ಪ್ರಕಾಶಕರು ತಾವು ಹೊರತರುವ ಎಲ್ಲಾ ಪುಸ್ತಕಗಳೂ ಶ್ರೇಷ್ಠ ಮಟ್ಟದವೇ ಆಗಿರಬೇಕೆಂದು ಆಶಿಸಿದರೂ ಆಶೆ ಆಶೆಯಾಗೆಯೇ ಉಳಿದು ಸರ್ವೇಸಾಮಾನ್ಯವೆನಿಸುವ ಅನೇಕ ಪುಸ್ತಕಗಳು ಮಾರುಕಟ್ಟೆಗೆ ಬರುವುದು ತಿಳಿದಿರುವ ಸಂಗತಿಯೇ. ಪುಸ್ತಕ ಮಳಿಗೆಯನ್ನು ತಲುಪುವುದು ಎಷ್ಟು ಮುಖ್ಯವೋ ಅದಕ್ಕಿಂತಲೂ ಮುಖ್ಯವಾದದ್ದು ಅದು ಸಾಹಿತ್ಯಾಸಕ್ತರ ಮಸ್ತಕವನ್ನು ಮುಟ್ಟಬೇಕಾದುದು. ಅರಿವಿನರಮನೆಯೊಳಚ್ಚಳಿಯದಂತಿರ್ಪ ಉನ್ನತೋನ್ನತಾರ್ಥ ಸಂಪ್ರದಾಯಧರ್ಮ ಭಾಷಾವಿಷಯಾಂಕಿತವಿಶ್ಲೇಷಣಾರ್ಥೋದಧಿ ಮಂಥನದೊಳು ದಯಿಪಾಮೃತ ಸೇಚನಸಮಾನ ಬರಹದಗ್ಗಳಿಕೆಯನ್ನು ಮೆರೆವ ಸುಕವಿಗಳ, ಸುಭಾಷಜ್ಞರ ಕೊರತೆಯು ಸ್ಪಷ್ಟವಾಗಿ ಎದ್ದುಕಾಣುತ್ತಿರುವ ಈ ದಿನಗಳಲ್ಲಿ ಶ್ರೀ. ಬಿ.ಎಚ್. ಶ್ರೀಧರರ ಬರಹಗಳನ್ನು ಮತ್ತೆ ಜನಕ್ಕೆ ಪರಿಚಯಿಸುವುದು ನಮಗೆ ಆನಂದದಾಯಕವಾದ ಅಂಶವಾಗಿದೆ.

ಬೇಂದ್ರೆಯವರ ಸಮಕಾಲೀನರಾದ ಶ್ರೀಧರರು ವರಕವಿಗಳ ಕಾಲದ ಕಾವ್ಯಶ್ರೇಷ್ಠತೆಯನ್ನು ತಮ್ಮ ಕವನಗಳಲ್ಲಿ ಬಿಂಬಿಸಿದ್ದಾರೆ. ಛಂದಸ್ಸಿಗೆ ಅನುಗುಣವಾಗಿ ಸುಲಲಿತವಾಗಿ ಹರಿಯುವ ನದಿಯಂತೆ ಹರಿಯುವ ಇವರ ಕಾವ್ಯಧಾರೆ ಕನ್ನಡದ ರಸಾಸ್ವಾದನೆ ಮಾಡಲಿಚ್ಚಿಸುವ ಓದುಗರ ಮನ ತಣಿಸುವುದಂತೂ ಸತ್ಯ. ಹಾಗೆಂದು ದ್ವಿತೀಯಾಕ್ಷರ ಪ್ರಾಸಕ್ಕೇ ಕಟ್ಟುಬೀಳದಿದ್ದಲ್ಲಿ ಅದು ಕವನವೇ ಅಲ್ಲ ಎಂಬ ಮನೋವೃತ್ತಿಯೂ ಇವರದಲ್ಲ. ನವ್ಯಕ್ಕೆ, ಶಾಸ್ತ್ರಬದ್ಧತೆಗೆ, ರಮ್ಯಕ್ಕೆ, ಗಮ್ಯಕ್ಕೆ ಅನುಗುಣವಾಗಿ ವಿಷಯಗಳನ್ನು ಮಂಡಿಸುತ್ತ ಸಾಗುವ ಇವರ ಕವನವಲ್ಲರಿಯನ್ನು ನಿಮ್ಮ ಶ್ರೀಹಸ್ತಗಳಿಗೆ ಅರ್ಪಿಸುತ್ತಿದ್ದೇವೆ. ಶ್ರೀಧರರ ಇತರ ಸಾಹಿತ್ಯ ಪ್ರಕಾರಗಳೂ ಶೀಘ್ರದಲ್ಲೇ ನಿಮ್ಮ ಕೈ ಸೇರಲಿವೆ. ಗತಕಾಲದ ಭಾಷಾವೈಭವವನ್ನು ಮುಂದುವರಿಸಿ,

ಕನ್ನಡದ ಸೊಂಪು, ಪೆಂಪು, ಇಂಪು, ಬೆಡಗು, ಬಿನ್ನಾಣಗಳನ್ನು ಆಸ್ವಾದಿಸುವುದು ಮನೋಲ್ಲಾಸಕರವಾದುದು ಎಂಬುದು ಸತ್ಯಸ್ಯ ಸತ್ಯ. ಶ್ರೀಧರರ ಬರಹಗಳಲ್ಲಿ ಇವೆಲ್ಲ ಅಡಕವಾಗಿವೆ. ಇಂತಹ ಸುಗುಣರಸಭರಿತ ಪುಸ್ತಕವನ್ನು ಹೊರತರಲು ಕಾರಣರಾದ ಶ್ರೀಧರರ ಸುಪುತ್ರಿ ರಾಜೇಶ್ವರಿಯವರಿಗೂ, ಅವರಿಗೂ ನಮಗೂ ಸೇತುವಾದ ಪ್ರಾಜ್ಞೆ ಭುವನೇಶ್ವರಿ ಹೆಗಡೆಯವರಿಗೂ ನಾವು ಋಣಿ.

ಪ್ರಕಾಶಕರು

ಪರಿವಿಡಿ

ಮೇಘನಾದ

ಗುರುವಿನ ಅಡಿದಾವರೆಯಲ್ಲಿ

ನಮೋ ಗುರುವೆ ತವ ಚರಣ ಕಮಲದಲಿ ಪತಿತನಾದೆನಣ್ಣ
ನಿನ ಕುಮಾರರಲಿ ನಾನೊಬ್ಬನೆಂದು ತಿಳಿ ಎಲ್ಲರಿಂದ ಸಣ್ಣ ॥ಪ॥

ಕಡಲಿನೊಳಗಿನಾ ಕಡ್ಡಿಯಂತೆವೊಲು ತೇಲಿ ಬಂದೆನಣ್ಣ
ನಡೆ ನಡೆದು ಹಾದಿಯನು ಕತ್ತಲಲ್ಲಿ ನಾ ಕಳೆದುಕೊಂಡೆ ಕಣ್ಣ
ಹಸುಳೆತನದೊಳೂ ಹಾಲು ಕಂಡ ನೆನಪೆನಗೆ ತೀರ ಅಲ್ಪ
ನಸು ನಸುಕು ಹರಿಯಲಿರೆ ಮತ್ತೆ ಕಂಡೆ ಮರುಕಳಿಸಿ ಬರುವ ಕಪ್ಪ

ಆಸೆಪಾಸೆಗಳ ಮಾಲೆ ಮಾಡಿ ಮುಡಿಸಿದೆನು ನನ್ನ ಮನಕೆ
ಆಯಾಸವಲ್ಲದಿನ್ನೊಂದು ಫಲಿಸಿದುದ ಕಾಣೆನಣ್ಣ ನಿಜಕೆ
ಎಳಮೆಯಲ್ಲಿ ಜವ್ವನವ ಕಾಂಬೆನೆಂದೆಂಬ ಆಸೆಯಿತ್ತು
ಈ ಬೆಳೆವ ಕಾಲ ಮುಪ್ಪಾಗಿ ಬಾರದೇಕೆನುವುದಿನ್ನು ಮಿತ್ತು

ನಾನು ನನ್ನ ಹುಟ್ಟೂರಲಿದ್ದ ನೆಲೆ ಮೊದಲೆ ಮಾರಿ ಕೊಟ್ಟೆ
ಕಾನೀನನಂತೆ ಕಾದಾಡಿ ಕಡೆಗು ಈ ಬಾಳಿನಲಿ ಕೆಟ್ಟೆ
ಹಲವು ಕೈಯ ಹದ ಸವಿದೆ ಮತ್ತೆ ಕಹಿ ಎಂದು ಕೆಲವನುಗಿದೆ
ನೆಲಜಲದ ಗುಣವ ಬೇರ್ಮಾಡಿ ನೋಡಿದೆನು ಆದರೆಲ್ಲ ಬರಿದೆ

'ಕಳ್ಳುಬಳ್ಳಿ' ಕಂಡವರು ಕೇಳಿದವರೆಂಬರಿಲ್ಲದಾಗಿ
ಬೆಳ್ಳುಳ್ಳಿ ಕೂಡ ಸಿಗದಾಯ್ತು ಮದ್ದಿಗೂ ಕಾಲಚಕ್ರ ತಿರುಗಿ
ಹರುಷ ಎಂಬುದರ ಹೆಸರ ಕೇಳದೇ ವರುಷ ಸಂದುಹೋಯ್ತು
ಈ ಪರುಷ ಲೋಕದಲಿ ಪಟ್ಟ ಪಾಡುಗಳಿಗೆಣೆಯೆ ಇಲ್ಲವಾಯ್ತು

ಅಂಕೆ ಅಂಕೆಗಳ ಪಂಕದಲ್ಲಿ ಉರುಳಾಡಿ ದಣಿದೆ ಬಹಳ
ಪರರಂಕೆಯೆಂದರೇ ಬಗೆಯು ಬೆಂಕಿಯಾಗುರಿಯದಿಹುದು ವಿರಳ
ನಿನ್ನ ಗೀತಗಳನೆನ್ನುತಿದ್ದ ಅರೆನಿಮಿಷ ಮಾತ್ರ ಶಾಂತಿ
ಕ್ಷೀರಾನ್ನವುಂಡರೂ ಮೈಗೆ ಹತ್ತದೈ ಬೇರೆ ಎಲ್ಲ ಭ್ರಾಂತಿ

ಒಡಲನಿತ್ತವರ ಒಡಲ ಸಂಕಟವ ತಣಿಸಲಾರದಾಗಿ
ಬೆಂದೊಡಲಿನಿಂದ ಬೆಂಡಾದೆ ಗುರುವೆ ನಾ ಸತ್ತು ಸುಣ್ಣವಾಗಿ
ನಂಬಿಕೆಗಳು ನಯವಾಗಿ ಜಾರಿದವು ಸದ್ದು ಸುಳಿವು ಇರದೆ
ಕೂರಂಬಿನಂತೆ ನೆಟ್ಟಿರುವ ಚಿಂತೆಯಲಿ ಐಕ್ಯವಾಗಿ ಬೆರೆದೆ

ಹಾಡಿ ಹರಸಿದಾ ನಿನ್ನ ಕಾಣಬೇಕೆಂಬ ಆಸೆ ಬಳ್ಳಿ
ತಾ ನೋಡಿ ಹೂತುದಿಂದೆನ್ನ ಬಾಳಿನಲಿ ಮೂಡಿತೆಂಬೆ ಬೆಳ್ಳಿ
ಅಂಧಕಾರದಲಿ ಮಿಂಚು ಮೂಡಿ ಬರುವಂತೆ ಬಂದ ಬಂಧು
ಏನೆಂದು ನಿನ್ನ ಸತ್ಕರಿಸಲೆಂಬುದೇ ತಿಳಿಯದಾಯಿತಿಂದು

ಹುರುಪೆ ಇಲ್ಲದೀ ತಿರುಪೆ ಬಾಳಿನಲಿ ಏನ ಹೇಳಬಲ್ಲೆ
ಒಂತುರುಪು ಇಲ್ಲದೇ ಆಟ ಹೇಳಿದರೆ ಸೋಲು ಸಿದ್ಧವಲ್ಲೆ
ಏಸು ಕಾಲವೀ ದಾಸವೃತ್ತಿಯೆಂದರಿಯದಾಯ್ತು ಗುರುವೆ
ನಿನ ಕೂಸು ನಾನು ಎಂದರ್ತಿಯಿಂದ ನಿನ್ನನ್ನೆ ಮೊರೆಯ ಹೊಗುವೆ

ಆಹ್ವಾನ

ಕೆಂದಾವರೆಯಲಿ ಹುಟ್ಟಿದ ಬೊಮ್ಮನ ಕಣ್ದಾವರೆ ಕವಿವೃಂದಹಿತೇ
ಮಂದಾರೋಜ್ವಲ ಕಾಂತಿಯುತೇ ಬಾರೌ ಮಹಿತೇ ॥ಪ॥

ಸಾರಸ್ವತ ಸುರಸಿಂಧುಸಮೀರಣ ಸೇವಿತ ಪಾದಪಯೋಜಯುತೇ
ಸಾರಾಸಾರವಿಚಾರ ವಿಲೋಕನ ಲೋಚನಯುಗಳ ವಿಳಾಸಯುತೇ
ತಾರಾಮಂಡಲಸನ್ನಿಭ ಭಾವಸಮುಚ್ಚಯ ಶೋಭಿತ ತನ್ವಿಯಹೆ
ಧಾರಾಧರನಿರ್ಮುಕ್ತ ತಟಿಲ್ಲತೆಗೋರಗೆಯೆನೆ ನರ್ತಿಸುತಲಿಹೆ

ಭಾವವೆ ನಗೆ, ಮೇಣ್ ನವರಸವೊಳಬಗೆ, ಜೀವದುಸಿರು ಪ್ರತಿಭಾ ಶಕ್ತಿ
ಹಾವವೆ ಸುಂದರ ಶೈಲಿ, ವಿಭೂಷಣ ಭೂಷಣ, ಗುಣವರ್ಥ ವ್ಯಕ್ತಿ
ಆವೇಶದಿ ಪುಟಪುಟಿದು ಪ್ರಫುಲ್ಲಿತಮಾದ ಮೊಗದಿನೊಪ್ಪುವ ಚೆಲುವೆ
ಕೇವಲ ಸಹೃದಯ ಹೃದಯ ಮಧುವ್ರತಕೊಲಿವ ಕುಸುಮ ನೀನಾಗಿರುವೆ

ಮೂಡುವ ಮುಂಬೆಳಗೊಪ್ಪುವ ಕುಂಕುಮರಾಗದ ತಿಲಕವ ತಿದ್ದಲಿದೆ
ಹಾಡುವ ಹಕ್ಕಿಯು ಹಸೆಗೆ ಕರೆದು ಮುದದಲ್ಲಿ ನಿನ್ನ ತೆಗೆದದ್ದಲಿದೆ
ಕೂಡಿದ ತರುಲತೆಗುಲ್ಮಗಳೊಟ್ಟೀ ಹಸಿರುಡೆಯಿತ್ತಿವೆ ತೊಡು ತರಳೇ
ನಾಡಿನ ಜನಜೀವನದ ವಿಕಸ್ವರ ಮುಕುಳವೆನಿಸಿ ಕಂಗೊಳಿಸುವಳೇ

ಮಾನಸಮಾನಸಹಂಸಿ, ಮನೋಮುಕುರಾಂತರಭಾಸಿತ ಕಲ್ಪಲತೇ
ಮಾನಿತೆ ಬಾರೌ ಮುದದಲಿ ಮಿಂದು ಮನೋಗತರಾಗರಸಾಕಲಿತೇ
ಜಾನಿಸಿ ಜೋಗಿಗಳೊಂದುವ ಸೊಗವನು ಜಾನಿಸದೆಯೆ ದೊರಕಿಸಿ ಕೊಡುವೆ
ಮಾನಿನಿ, ಕವಿಕಮಲೋದ್ಭವ ಭಾಮಿನಿ, ಮಾನಿಸಿ ಪದೆದಾಹ್ವಾನಿಸುವೆ

ಪುಟ್ಟದೊಂದು ಪಟ್ಟಣ

ಪುಟ್ಟದೊಂದು ಪಟ್ಟಣ । ನನ್ನ ಪುಟ್ಟ ಚಿತ್ತದಲ್ಲಿ
ಪುಟ್ಟದೊಂದು ಪಟ್ಟಣ ॥ ಪ ॥

ನನ್ನ ಪುಟ್ಟ ಚಿತ್ತದಲ್ಲಿ ಪುಟ್ಟದೊಂದು ಪಟ್ಟಣ,
ಆs ಪುಟ್ಟ ಪಟ್ಟಣದಲಿ ಪುಟ್ಟದೊಂದು ತೋಟ;

ತೋಟದಲ್ಲಿ ಬಯಕೆ ಬಳ್ಳಿ
ಹೂವ ಬಿಟ್ಟು ಹಸಿರನುಟ್ಟು
ಬಾಗಿ ಬಳುಕಿ ನಿಂದಿರೆ
ತೂಗು ಬಿಳಲ ಹೊಂದಿರೆ–

ತೂಗಿಕೊಂಡು ತಿಳ್ಳಿಯಾಡಿ ಸುಳ್ಳಸುಳ್ಳೆ ಸುಳಿದು ಹಾಡಿ
ಆs ತೋಟದಲ್ಲಿ ನಲಿದೆನೇ ॥ ಪುಟ್ಟದೊಂದು...............

ಶ್ರಾವಣನೂ ನಗುನಗುತ
ಬರಲು ಮುಗಿಲ ನಲು ನೆಗೆತ
ಕಂಡು ಕೋಗಿಲೆತ್ತಲು
ಹಿಗ್ಗಿ ದನಿಯನೆತ್ತಲು

ಅದರ ದನಿಗೆ ದನಿಯ ಕೂಡಿಸುತ್ತ ಮೆಲ್ಲ ಮೆಲ್ಲನಲ್ಲಿ
ಮುದವ ಹೀರಿ ಮುದವ ಬೀರಿದೆ ॥ ಪುಟ್ಟದೊಂದು...........

ಪುಟ್ಟ ಪಟ್ಟಣದಲಿ ಎಲ್ಲ ಪುಟ್ಟ ಪುಟ್ಟ ಮಾತು
ಪುಟ್ಟ ಕಾಲು ಪುಟ್ಟ ಕಣ್ಣು ಪುಟ್ಟ ನಡಿಗೆ ನೋಟ,

ಪುಟ್ಟ ಉಡಿಗೆ ಪುಟ್ಟ ತೊಡಿಗೆ
ಪುಟ್ಟ ಹಗಲು ಪುಟ್ಟ ಇರುಳು
ಪುಟ್ಟತನವು ನೆರೆದಿರೆ
ಇಷ್ಟ ಸುಖವು ತೆರೆದಿರೆ–

ಪುಟ್ಟ ನಲ್ಲೆ ನಲ್ಲರೆಲ್ಲ ಒಟ್ಟು ಕೂಡಿ ನಲಿವರಲ್ಲಿ
ದಿಟ್ಟತನದಿ ಸರಸವಾಡುತ ॥ ಪುಟ್ಟದೊಂದು.........

ನನ್ನ ಪುಟ್ಟ ಪಟ್ಟಣದಲಿ
ನನ್ನ ಪುಟ್ಟ ಬಾಳ ಬೆಳಗಿ
ನನ್ನ ನಾನು ಮರೆತಿರೆ
ನನ್ನೊಳಾನು ಬೆರೆತಿರೆ–

ನನ್ನ ಬಯಕೆ ಮಲರಿ ಕಂಪ ಸೂಸುತಿರಲು 'ದೊಡ್ಡ' ಜಗದ
ಕಳ್ಳ ಬಂದು ಕೊಯ್ದುಬಿಟ್ಟನೇ ॥ ಪುಟ್ಟದೊಂದು..........

ಎಷ್ಟು ಛಲವಿರಲೇನು...

ತಲೆಯೆತ್ತಿ ನಿಂದು ಮೂಲೋಕವನು ಮೆಚ್ಚಿಸಿಹ
ಹಿಮವಂತ ಹೊತ್ತಿರುವ ಮುಕುಟ ಕೂಡ
ಸೆಲೆಯಾಗಿ ಹರಿದಿತ್ತು ತಪನಾತಪಾಹತಿಗೆ
ಇರವೆಂದಮೇಲಳಿತವಿಹುದು ನೋಡ!

ಹಿಗ್ಗಿನಲಿ ಮೈಮರೆದು ಬಂಡೆಗಳ ಕೊರೆಕೊರೆದು
ನುಗ್ಗಿಬಹ ನೀರು ನೀರಾದರೇನು,
ತಗ್ಗುತಗ್ಗಿಗೆ ಬಾಗಿ ಮುಗ್ಗರಿಸಿ ನಡೆದಿತ್ತು
ಬಗ್ಗದಾತನು ಕೂಡ ಬಗ್ಗದಿರನು!

ರತ್ನವನು ರತ್ನದಿಂದಲೆ ಕೊಯ್ದ ನರನ ಪ್ರ
ಯತ್ನ ಫಲಿಸದೆ ಹೋಯ್ತು ಶಾಂತಿವಡೆಯೆ;
ನಿತ್ಯಸಿದ್ಧವಿದೆಂದು ನಂಬಿದಲ್ಲಿಯು ಕೂಡ
ಸ್ಥಿತ್ಯಂತರವು ತೋರ್ಕು ನಿಂತ ಕಡೆಯೆ!

ಲೆಕ್ಕಣಿಕೆ ಕರವಾಳಕಿಂತ ಬಲಶಾಲಿಯೆಂ
ದೊಕ್ಕಣಿಸಿದಾ ಕವಿಯ ಮಾತಿಗೀಗ
ತುಕ್ಕು ಹಿಡಿದಿದೆ ಹಸಿವು ನರನ ಬಸಿರನು ಹೊಕ್ಕು
ಹಕ್ಕಲಾರಿಸು ಎಂದು ನೂಕಿದಾಗ!

ತಾಳಲಾರದ ಮೇಲೆ ತಾಳ್ಮೆಯೆಲ್ಲಿಯದಯ್ಯ
ತೋಳು ಮುರಿದವನ ಬಲವ ಹೇಳಲೇನು?
ಬೀಳಲೊಲ್ಲದ ಮಹಾ ಸ್ಥಾವರವು ಮಳೆ ಜಡಿದು
ಬೇರು ಕಳಚಿದ ಮೇಲೆ ನಿಲುವುದೇನು?

ಬಿಟ್ಟ ಬಾಣವು ಹುಸಿಯದಿರುವ ರಾಧೇಯನೂ
ಕಟ್ಟು ಬಿದ್ದನು ತಾಯ ನುಡಿಗೆ ತಾನು;
ಎಷ್ಟು ಛಲವಿರಲೇನು ವಿಧಿ ಬಂದವುಂಕಿದರೆ
ಕೆಟ್ಟ ನರ ಹರಹರಾ, ಹೇಳಲೇನು!

ದುಂಬಿ ಬಾರ

ದುಂಬಿ ಬಾರ ಮನದುಂಬಿ ಬಾರ ಮನ–
ದುಂಬಿ ಬಾರ ಬಾ, ನೆಳಲಿನೊಲು ॥ಪ॥

ಮೂಡಲ ಮರೆಯಲಿ ಮೆಲ್ಲಮೆಲ್ಲನೆಲ
ರೇರಿ ಬರುವ ಎಳ ನೇಸರೊಲು
ನೋಡ ನೋಡುತಿರೆ ನಯನೋನ್ಮೀಲನ
ಗೈದು ನಿಲುವ ನಲ್ಮಲರವೊಲು

ತುಂಬಿದ ಬೆಳಕನು ಬಿಂಬಿಸಿ ಮೊಗದಲಿ
ಹರಿದು ಹಾಯ್ವ ತಿಳಿ ಮೋಡದೊಲು
ಕೊಂಬೆ ಕೊಂಬೆಗೂ ಪ್ರಭಾತದೊಸಗೆಯ
ಹಾಡಿ ಹಾರುವ ವಿಹಂಗದೊಲು ॥ ದುಂಬಿ...

ಚಂದ್ರಚಂದ್ರಿಕಾ ಪ್ರಣಯೋದಧಿಯಲಿ
ಮಿಂದು ಬಂದ ತಾರಗೆಯವೊಲು
ಮಂದ ಮಂದ ಗತಿಯಿಂದ ಬಳುಕುತಿಹ
ಕುಂದವಲ್ಲರಿಯ ಕುಡಿಯವೊಲು

ಅಂದ ಚಂದದಾನಂದ ವಿಕಸ್ವರ–
ಗೀತ ನೂತನಾವೇಶದೊಲು
ನಿಂದ ನಿಲುವಿನಲೆ ತ್ರಿಲೋಕವೆಲ್ಲವ
ಮೋಹಪಾಶದಿಂ ಬಿಗಿವವೊಲು ॥ ದುಂಬಿ...

ಸರಸವಾಕ್ಸುಧಾವರ್ಷಪರಿಪ್ಲುತ
ನಿರುಪಮ ರಮಣೀ ಹಾಸದೊಲು
ಅರಸನುತ್ತ ಮಾಂಗಸ್ಥಕಿರೀಟದಿ
ಹೊಳೆವ ಹೇಮರಾಜೀವದೊಲು

ದೇವ ಭಾವಭರಭಕ್ತ ನೆತ್ತಿಹಿಡಿ
ದಾರತಿ ಕೊಳ್ಳುವ ಮೂರ್ತಿಯೊಲು
ಜೀವ ಜೀವಕೂ ನಂಟನು ಬೆಸೆಯಲು
ಬಾರ ಬಾ ಮನವೆ ದುಂಬಿಯೊಲು ॥ದುಂಬಿ...

ಬಿರುಗಾಳಿ ಬೀಸು

೧

ಬಿರುಗಾಳಿ ಬಿರುಗಾಳಿ ಬಿರುಗಾಳಿ ಬೀಸು
ಬ್ರಹ್ಮಾಂಡ ಮಂಡಲವ ಹೊಕ್ಕು ಹರಿದೀಸು!
ಹೊಸ ಮಲರ ಸೌಸವವ ಸೂಸು
ಹಳ ಹೊದಿಕೆಗಳ ಹಿರಿದು ಬೀಸು–

ಕಾಲ ತೇಜಿಯನೇರಿ
ಕುರುಡು ಕತ್ತಲ ಮೀರಿ
ಶರಪಾತ ಗತಿಯಿಂದ
ಹರನೇತ್ರದುರಿಯಿಂದ
ಇದ್ದಂತೆ ಇರುವ ಶವದೊಟ್ಟಿಲನು ಸುಡಬಿಸುಟು
'ಇರಬೇಕು' ಎಂಬರಿವ ಬಿತ್ತಿ ಕಳೆ ಮೈ ಬುಗುಟು!

ಬೀಸು ನಡೆ
ಹಾಸು ಹೆಡೆ
ಬೊಬ್ಬಿರಿದು ಘೂತ್ಕರಿಸು; ಸತ್ತಮೃತಕಿಂತಲೂ
ಹಬ್ಬುವುರಿ ವಿಷ ಲೇಸು ಕಾರದನು ಸುತ್ತಲೂ
ವಿಕಟಾಟ್ಟಹಾಸದಲಿ
ಪ್ರಲಯೋಗ್ರ ವೇಷದಲಿ
ಕವಿದು ಬಾ ಬುವಿಗಿಂದು ಕಾಲಾಗ್ನಿ ರುದ್ರ
ವಿವಿಧವಾವಿಷ್ಕರಿಸು ಬಾ ವೀರಭದ್ರ!

ಹಳೆಯ ಜೀವನಸೂತ್ರ ಹರಿದು ಹಾಳಾಯ್ತು,
ಹುಳಿತು ಹಳಸಿದ ಹಿಟ್ಟಿನಂತೆ ಬಾಳಾಯ್ತು;
ತುಕ್ಕು ಹಿಡಿದಿದೆ ಬುದ್ಧಿಯಲಗು
ಸಿಕ್ಕದಾಯ್ತುತ್ಸಾಹ ಬಲೆಗು,

ಧರ್ಮ ದಾಸರ ದಂಡು
ಇಂದು ಜಾಡ್ಯದ ತುಂಡು,
ಕತ್ತರಿಸಿ ಕಡೆಗಂಡು
ಹುಟ್ಟಿಸೈ ಹೊಸದೊಂದು;
ಪ್ರಾಣನರೆಯಾಯ್ತು, ಪುರುಷಾರ್ಥ ಸುಕ್ಕಾಯ್ತು, ಕಾ–
ಲಾಣೆ ಬೆಲೆಗಿಳಿಯಿತೀ ಜೀವನದ ವರ್ತನೆಯು!

ನೆಲೆ ನಿಂತ
ಕೊಳೆ ನೀರ
ತೊಳೆ ಬೀಸಿ ಸಾಗರೋತ್ತುಂಗ ವೀಚಿಯ ತೆರೆದು
ಕೊಳವನ್ನೆ ಹೊಳೆ ಮಾಡು ಮುಸಲಧಾರೆಯ ಕರೆದು,
ಭೂಗರ್ಭದಾಳದಲಿ
ಹುದುಗಿ ಕಂಕಾಲದಲಿ
ಇಹ ಜೀವ ಚಿಹ್ನೆಗಳ ಮಗುಚಿ ಈಡಾಡು,
ಅಹಹ ಜಂಝಾವಾತ ಬಾ ತೀಡು ತೀಡು!

೩

ಮಿಡಿಯ ಮಿಡಿಯಾಗಿಡಲು ಉಪ್ಪು ಬೆರಸಿದರೂ
ಮಿಡಿತನವದುಳಿಯಿತೇ ಕಳೆಯಲದರೊಗರು?
ಕಟ್ಟುಕಟ್ಟಳೆಯೆಲ್ಲ ಬೇಕು,
ಗುಟ್ಟರಿದು ಬದಲಿಸಲು ಬೇಕು;
ಒಂದರಲಿ ನೂರೊಂದ
ತೋರುವುದೆ ಜಗದಂದ;
ಅದ ಕಾಣದವನಂಧ,
ಅವನಿಗೀ ಭವ ಬಂಧ!
ಹಗಲೆಂಬ ಭ್ರಾಂತಿಯಲಿ ಮುಚ್ಚಂಜೆಯಲಿ ಹುಡುಗ
ತೆಗೆದು ಹೊತ್ತಗೆಯೋದತೊಡಗಿದಂತಾಯ್ತೀಗ

ಹಗಲಿಲ್ಲ,
ಇರುಳಲ್ಲ!
ಇದು ನರಕವನು ಮೀರಿ ಹೊಯ್ತೆರಕ, ಬಾಳುವೆಯ
ಹದ ಹೊತ್ತಿ ಹೊಗೆ ಸುತ್ತಿತಿದನೆಂತು ತಾಳಲಹ!
ಬಿರುಗಾಳಿ ಹೊಡೆದಾಳಿ,
ಬಿರ್ದಿನಿರುವಳು ಕಾಳಿ,
ಕಡಗಿ ಬಾ ಗುಡುಗಿ ಬಾ ಕೃತಿ ನಿಕೃತಿಯೆನಿಸು;
ಹಡಗ ಹಾರಿಸಿ ವ್ಯೋಮಯಾನವನು ತರಿಸು!

ಎದೆಯ ರಾಣಿಗೆ

ಎಲ್ಲಿರುವೆ ಎಳನಗೆಯ ಗಾಡಿಗಾತಿಯೆ ನಿನ್ನ
ಬಲ್ಲೆನೆಂಬರ ಕಾಣೆ ಹುಡುಕಿ ಸೋತೆ ॥ಪ॥

ಸುಕುಮಾರತೆಯ ಮುಡಿದ ಸುಕುಮಾರಿಯರು ಹರ್ಮ್ಯ–
ದಾರಾಮಗಳಲಿ ಕೆಲೆದಾಡುತಿರಲು,
ಲತೆಗೆ ಕೋಮಲತೆಯನ್ನೊಲಿದು ಕಲಿಸುತಿರಲು
ಶುಕವಾಗಿ ಹಾರಿದೆನು ಅವರೊಳೊಬ್ಬಳ ಕಂಡು
ಅಧರ ಬಿಂಬವ ತಿಂಬ ಬಯಕೆಯಿಂದ
ಆದರಲ್ಲೆ ತಡೆದೆನು ಅಧರ ನಿನ್ನದಲ್ಲ!

ಎಲೆ ಎಲೆಯನರಸುತ್ತ ಹೊಳಲ ಹೊರ ಮೈಯಲ್ಲಿ
ಬಳಿವಿಡಿದು ಸಾರುತಿರೆ ದಾರಿಯೊಳಗೆ,
ಕಂಡುದಲೆಯುವೇರುಂಜವ್ವನೆಯರ ಬಳಗ;
ಅಳಕ ಪ್ರತಾನಗಳ ನೇವರಿಸ ಬಗೆದೊಮ್ಮೆ
ಸುಳಿದೆ ಸುಯ್ಯನೆ ಮಂದಪವನನಾಗಿ
ಆದರಲ್ಲೆ ತಡೆದೆನು ಅಳಕ ನಿನ್ನದಲ್ಲ!

ಹೂ ನಗೆಯ ಹುಡುಗಿಯರು ಹೂದೋಟವೊಂದರಲಿ
ಹುಬ್ಬನೇರಿಸಿ ಕುಳಿತು ನೋಡುತಿರಲು–
ಬಿಡದೆ ಝೇಂಕರಿಸಿದೆನು ಭೃಂಗರಾಜನಾಗಿ;
ಏನೆಂಬೆ ತುಂಟಗೈಯೊಂದೆಸೆದ ಹೂಜೊಂಪ
ಮೈಯ ಸೋಂಕಿತು, ಮೋದ ಮೂಡಿತೆನಗೆ–
ಅದರಲ್ಲೆ ತಡೆದೆನು, ಜೊಂಪ ನಿನ್ನದಲ್ಲ!

ಕಲಕಂಠವತಿಯರೊಂದಾಗಿ ಬಾಗಿಲ ಹೊರಗೆ
ಮಲೆತು ಸರಸಾಲಾಪ ಗೈಯುತಿರಲು,

ರಾಜ್ಯದಲಸಿಗರ ಬಗೆಗೆ ನಗೆಯಾಡುತಿರಲು
ಬಿನದವುಕ್ಕಿತು, ಉಕ್ಕಲಡಗಿ ಉಲಿವವನಿದ್ದೆ
ಅಣಕವನು ಕೇಳ್ವ ಹೆಬ್ಬಯಕೆಯಿಂದ–
ಆದರಲ್ಲೆ ತಡೆದೆನು ದನಿಯು ನಿನ್ನದಲ್ಲ!

ಊರ ಸನಿಹದ ಕೊಳದ ನಳದ ನೀರನು ಹೊತ್ತು
ನೀರೆಯರು ನಿರಿವಿಡಿದು ಸಾಗುತಿರಲು,
ಒಡನೆ ಹೊಂಚಿ ಮಿಂಚಿದೆನು ಆ ಪಡೆಯ ಮೇಲೆ!
ತೊನೆದೊಮ್ಮೆ ಹುಲ್ಲೆಗಣ್ಬಿಟ್ಟು ದಿಟ್ಟಿಸಿ ಮಿಂಚ
ನಲ್ಲಗಳೆದಳು ಮುಗುದ ಮೋಡಿಯಿಂದ;–
ಆದರಲ್ಲೆ ತಡೆದೆನು ನೋಟ ನಿನ್ನದಲ್ಲ!

ಪ್ರೇಯಸಿಯೆ ಪ್ರೇಮದರಸಿಯೆ ಪೇಳ ನೀನಾವ
ಮಾಯೆಯಲಿ ನಿಂದೆನ್ನ ಕುಣಿಸುತಿರುವೆ?
ಹೃದಯ ಬಾಯಾಗಿ ಮೊರೆಯಿಡುವುದೊಂದೆ ತಡವೆ;
ನಾಯಿಕೆಯೆ ಎಲ್ಲಿರುವೆ ಮೈದೋರು ವಿರಹದುರಿ
ಸಾಯ ಸುಡುತಿದೆ ಓಡಿಬಾರ ನಲ್ಲೆ!
ನಿನ್ನ ಕರೆದು ಕರೆದಾಸತ್ತೆ ಕರುಣವಿಲ್ಲೆ?

ದೀನ ಲಕ್ಷ್ಮಿಯೆ ಬಾರ...

ಬಾ ತಂಗಿ ಬಾ ತಂಗಿ, ಬಡತನವೆ ಚಿರಸಂಗಿ
ಬಾಳಿನಲಿ ನೀರಿಲ್ಲ; ಬರಡೆ ಎಲ್ಲ
ನಿಟ್ಟುಸಿರ ಹೊಗೆಯೇಕೆ ನಿನ್ನ ನಾಸಾಪುಟದಿ?
ಹುಟ್ಟಿ ಕೆಟ್ಟೆವು ಅಷ್ಟೆ ಬೇರೆಯಿಲ್ಲ!

ಹೊಲಬುಗೆಟ್ಟೆಲುಬು ಮೈ ತೂರಿ ಬಂದಿಹ ನಿನ್ನ
ಜಲಭರಿತ ನಯನಗಳ ನೋಟದಿಂದ
ಕರುಳನುರಿಯೆಣ್ಣೆಯಲಿ ಕರಿದ ಹಾಗೆನಿಸುತಿದೆ
ಎಳಗುವರಿ ಇಲ್ಲ ನೆರಳೆನ್ನ ಕಂದ!

ಹುಟ್ಟುವಾಗಲೆ ಬೆನ್ಗೆ ಕಟ್ಟಿ ಬಂದಿತು ದೈನ್ಯ,
ಹೊಟ್ಟೆಯತಿ ಹುಲಿಯಾಗಿ ಗರ್ಜಿಸಿತ್ತು;
ಮೆಟ್ಟನಿಂದಿಹುದೀಗ ಗೋಣನಾಂತೆಲೆ ತಂಗಿ
ಬಿಟ್ಟು ಹೋಗದು ಭೂತ ಬದುಕಲಿತ್ತು!

ಬಾ ಮುದ್ದು ಬಂಗಾರ, ನಿನ್ನ ಎಳ ಮೈಗಿಂದು
ಅಳಲಾಯ್ತು ಪರಿಕಾರ, ದೀನಮುದ್ರೆ–
ನಿನಗಾಯ್ತಲಂಕಾರ, ನನ್ನ ಭುಜ ಕಾಷ್ಠಗಳ
ದಿಂಬಿನಲಿ ಬಡತನದ ಯೋಗನಿದ್ರೆ!

ಒಂದು ದಿನ ಈ ಜಗದ ಬೆಳಕೆಂಬ ಕತ್ತಲೆಯ
ಕಂಡು ಮನಸೋತು ಮುದವೆಂದು ತಿಳಿದು,
ಹೆಂದವಾಡಿದೆವಿಂದು ಅದು ಮುದದ ನೆರಳೆಂದು
ನೊಂದು ಮಿಡುಕುವ ಪಾಡು ಬಂತೆ ನಿನಗೂ?

ದೇವಧರ್ಮವಿಚಾರ ಸತ್ಯತೆ ಸದಾಚಾರ
ಯಾವುದಿದ್ದರು ಉಂಡ ಹೊಟ್ಟೆಗೆಲ್ಲ;
ಕಾವರಿಲ್ಲದ ಕರುಣನಂದನರ ಬಾಳಿನಲಿ
ಯಾವುದೂ ನೆರವಲ್ಲ ಇದ್ದು ಇಲ್ಲ!

ಪುಟ್ಟ ಗಲ್ಲವು ಜೋತುಬಿದ್ದಿರುವುದೇಕಮ್ಮ?
ಕಟ್ಟಕಟುಕನು ನಾನು ಬದುಕಿರುವೆನೆ!
ಹುಟ್ಟಿ ಹುಳವಾದೆ ನಾನಕ್ಕಟಾ ಎದೆವನೆಯ
ಪುಟ್ಟ ಗಿಣಿ ಬಾ, ಅಳಲಿಗಳಲನೀವೆ!

ದೀನ ಲಕ್ಷ್ಮಿಯೆ ಬಾರ, ದಯೆಯ ಭಿಕ್ಷುಕ ಕರೆವ
ಕಾನನವೆ ಗತಿಯೆಮಗೆ ಪೋಪ ಬಾರ;
ಮಾನವಂತರ ಜಗವು ನಮಗಲ್ಲ; ನಮಗಿಲ್ಲ
ಹೀನತೆಯ ತಿರಿದುಂಬ ತಂಗಿ ಬಾರ!

ಅಯ್ಯೋ ನನ್ನ ಮೆಚ್ಚುಗಳಿರ!

೧

ಬನ್ನಿ ಬನ್ನಿ ನಗೆಯ ತನ್ನಿ
ಕಿಸಲಯ ಕೋಮಲೆಯರೇ,
ಮನದ ಬಳ್ಳಿ ಬಿನದವಡೆದ
ಕಾವ್ಯರಸಾಧರೆಯರೇ!

ಏಕೆ ಮೌನವಾಂತಿಹಿರಿ,
ಏನು ಯೋಚಿಸುತ್ತಿಹಿರಿ?
ಎತ್ತ ಚಿತ್ತ, ಎಲ್ಲಿ ದೃಷ್ಟಿ,
ಯಾವ ಸೃಷ್ಟಿ ಯಾಕೃಷ್ಟಿ?

ಸೊಗವೆ ಮುದವೆ ನಿಮಗೆ ಮತ್ತೆ
ಬಿಡುವು ಬೇಕೆ, ಕೆಲಸವಿಹುದೆ?
ಹದವಿಲ್ಲದ ವಿಧವಿಹುದೇ,
ಇದು ಯಾವ ಪರಿ?

೨

ಸುಲಿಪಲ್ಗಳ ನಲವಿಗೆ ಆ
ಎಳಮಿಂಚಿನ ಕೆನ್ನೆಗೆ,
ಪುಳಕೋದ್ಗಮ ಜಲಭರವಹ
ಕಂಗಳ ಕಿರುಸನ್ನೆಗೆ–

ಅರ್ಥವೇನು ಮೂಕಭಾವ
ನಡೆಯದಿಲ್ಲಿ, ಮಾತೆ ಜೀವ;
ಒಡೆಯದಿರೆ ಗುಲಾಬಿ ಮೊಗ್ಗೆ
ತಡೆ ಯಾವುದು, ಏನು ಎಗ್ಗೆ?

ಚಂಚಲದ ದೃಗಂಚಲದಲಿ
ಹೊಂಚುವ ಹಿರಿಯಾಸೆಯೇನು?
ಹೇಳದ ನುಡಿ ಕಾಣದವನ
ಬಯಸುತ್ತಿಹುದೆ?

೩

ಅಮ್ಮನಿಗೆ ಸಹಾಯವಾಗಿ
ನಿಲ್ಲಬೇಕೆ ಮನೆಯಲಿ?
ಗೆಳತಿಯರೇಂ ಕಾದಿರುವರೆ
ಲೀಲೆಗಾಗಿ ಮರೆಯಲಿ?

ಏನು ಮತ್ತೆ ಸಮಾಚಾರ?
ಅಲ್ಲ; ಬೇರೆಯಿದೆ ವಿಚಾರ!
ನಿನ್ನೆ ತಿಳಿದೆ ಸುದ್ದಿಯನ್ನು–
ನಿಮ್ಮೊಳೊಬ್ಬ ಗೆಳತಿಯನ್ನು,

ಬರುವನಂತೆ ನೋಡಲು ವರ;
ಅಯ್ಯೊ ನನ್ನ ಮೆಚ್ಚುಗಳಿರ
ಜೀವನದಲಿ ಇದೇ ಮಧುರ
ಬೇರೊಂದಿಲ್ಲ!

ಮಿತ್ರನಿಗೆ ಪತ್ರ

ನಿನ್ನೆದೆಯಾದರ್ಶದಲ್ಲಿ ಮಿಂಚಲೆನ್ನ ಚಿತ್ರ
ಧನ್ಯನಹೆನು; ಹೊನ್ನಹುದೀ ಬಡಮಿತ್ರನ ಪತ್ರ ॥ಪ॥

ಭಾವ ಭಂಗಿ ನಿನ್ನದೊಲವೆ ಜೀವಸಂಗಿಯಾಯ್ತು,
ನಾವೆ ನೀನೆ ಬಾಳ್ಗೆ, ನಿನ್ನ ನೆನಹೆ ನಿತ್ಯವಾಯ್ತು;
ಹರುಷರಸದ ಲಹರಿಯಾಗಿ ಬಂದು ನನ್ನ ಎದೆಗೆ
ಸ್ಪರುಶವಿತ್ತೆ; ಭಾವವೆನ್ನದೇರಿತು ಮೇಲ್ತುದಿಗೆ!

ಕಣ್ಣಮುಂದೆ ಕುಣಿವ ಮಿತ್ರಜೀವವೆ ನಿನ್ನಾಣೆ
ನಿನ್ನನುಳಿದು ಮತ್ತೊಬ್ಬರ ಕನಸಿನೊಳೂ ಕಾಣೆ!
ಅಂಟಿಗೆ ಅಂಟಾಗಿಹುದೀ ಮನವೆರಡರ ಬೆಸುಗೆ
ನಂಟೇತಕೆ ಮಿಕ್ಕೋಜೆಯ ಬೆಳಕಿರಲೆನ್ನಸುಗೆ!

ರಾಗವೊಂದು ರಸವಿದೊಂದು ತಾಳ ಲಯಗಳೊಂದು
ಮಾಗಿದೊಲುಮೆ ಹದವಿದೊಂದು ಜೀವದೈಕ್ಯವಿಂದು;
ಮಧುರ ಮಧುರ ಮಧುರ ಮಧುರ ಮೈತ್ರಿಯೊಂದೆ ಮಧುರ,
ಅದರ ನುಡಿಯ ಸವಿಯದವನು ಕಿವಿಯಿದ್ದೂ ಬಧಿರ!

ಯುಕ್ತಿಯಿಲ್ಲ ಸಂತಸಕ್ಕೆ ತಪ್ಪಿಸಿಕೊಂಡಿರಲು,
ಶಕ್ತಿಯಿಹುದು ರಕ್ತಿಗಾ ವಿರಕ್ತಿಯ ಮೀರಿಸಲು;
ಕವಿತೆಯನ್ನು ಕಡೆಯೆ ಬಂತು ರಾಗದ ನವನೀತ
ಹವಿಸೃಷ್ಟಿಗೆ ಬಾಳೊಟ್ಟಿನ ಮರ್ಮರ ಸಂಗೀತ!

ಅಲ್ಲಿ ತೆರಳು ರಸಿಕ

ಎಲ್ಲಿ ರಾಗ ಮೇಲವಿಹುದೊ ಫುಲ್ಲ ಕುಸುಮ ವದನವಿಹುದೊ
ಮೆಲ್ಲ ಮೆಲ್ಲನೆಲರು ತಣಿವ ಸೂಸುತಿರುವುದೋ
ಎಲ್ಲಿ ಹೃದಯಕೊಂದು ಹೃದಯ ರಾಗಬಂಧ ಬೆಸೆಯುತಿಹುದೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?

ಸೊಗವ ಹಾಸಿ ಒಲವ ಬೀಸಿ ನಲವ ನುಣಿಸಿ ದಣಿವ ಹರಿಸಿ
ಮೊಗವ ಮಿಂಚಿ ಹೊಂಚಿ ಕಾಂಬ ಕಂಗಳಿರುವೆಡೆ–
ನೆಗೆದು ಹಾರಿ ನಡೆವ ಮನವು ಮುಗಿಲ ಹಾರಬಲ್ಲುದೆಲ್ಲೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?

ತೆರೆಗೆ ತೆರೆಗೆ ಬೇರೆ ಬೇರೆ ಭಾವಭಂಗಿಯಿಂದ ಸುಳಿದು
ಬೆರೆವ ಕಡಲ ದಂಡೆಯನ್ನು ತಬ್ಬಿಕೊಳ್ಳುತ,
ತೆರೆಯ ಸೆರಗ ಹಾಸಿ ಬರುವ ನದಿಯ ತರಳ ಗಮನವೆಲ್ಲೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?

ದಂತಧವಳ, ದಂತಪಂಕ್ತಿಗಿಂತ ಧವಳ ಮುಗುಳುನಗೆ, ನಿ–
ರಂತರಾಯವಾದ ಕೂರ್ಮೆಯದಕು ಧವಳವೋ!
ಅಂತರಂಗ ಕುಂದ ಕುಸುಮವಂತು ಅರಳುತಿರುವುದೆಲ್ಲೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?

ಎಳ್ಳಿನಂತೆ ಚುಕ್ಕೆಯೆದ್ದು ಬೆಳ್ಳಿಯಂತೆ ಬೆಳಕ ಸುರಿಸಿ
ಬಳ್ಳಿಯಂತೆ ಮನವ ಮಾಡಿ ಮಿಳ್ಳನಲೆಯುವ
ಹಳ್ಳಿಯೂರ ಮುಗಿಲು ತೆಳ್ಳತೆಳ್ಳಗಾಡಿ ಬರುವುದೆಲ್ಲೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?

ಹಕ್ಕಿ ತನ್ನ ಪಕ್ಕಬೀಸಿ ಹೊಕ್ಕು ಹಣ್ಣ ರಸವ ಹೀರಿ
ತೆಕ್ಕನೆದ್ದು ನಡೆಯೆ ಕಾಂಬ ಒಕ್ಕಲಾಕೆಯ
ಅಕ್ಕರೆಯಲೆ ಆಕೆಯಾತ ಸಕ್ಕರೆಯನು ಸವಿವನೆಲ್ಲೊ
ಅಲ್ಲಿ ತೆರಳು ರಸಿಕ, ಬರುವೆ ಇಲ್ಲಿಗೇತಕೆ?'

ಭರತ ಮಾತೆ

ಮಂದ ಮಂದ ವಿಳಾಸರಂಜಿತ ಸುಂದರಾಯತ ದೇಹವು
ಚಂದ್ರಬಿಂಬ ಸಮಾನ ಕಾಂತಿಯ ಪೆತ್ತ ದಂತ ಸಮೂಹವು
ಬನದ ದೇವತೆಯಂತಿಹ–ಮುನಿಯ ಜೀವಿತವಾಗಿಹ
ಚೆಲುವಿನಾಗರವಾದ ದೇವಿಗೆ ಒಲವು ಚುಂಬಿಸಿದಾಕೆಗೆ!

ನುಣ್ಣನೆಲ್ಲೆಡೆ ಹರಿದು ಹಾಸಿದ ಕೇಶರಾಶಿಯ ಮಧ್ಯದಿ
ತಣ್ಣಗೊಪ್ಪಿಹ, ಕೊಳದ ತಾಯ್ವನೆಯಲ್ಲಿ ತೂಗುವ ಬಾಗುವ
ಚಿನ್ನದಾವರೆ ಸೊಂಪಿನ–ಕಾಡ ಬಳಗದ ಸೈಪಿನ
ಮೊಗದ ಮಾಟವ ಬಗೆಯ ನೋಟವ ಬಲ್ಲಿರೇ ಸುಕುಮಾರಿಯ?

ತಿದ್ದಿ ನಿಲ್ಲಿಸೆ ಕುಂಕುಮವನಾ ಕೇತಕೀಸಮಭಾಲದಿ
ಮುದ್ದಿಸಲು ಕನ್ನಡಿಯಿನೆಯ್ತರುತಿತ್ತು ಬಿಂಬವು ಉಸಿರಿರೆ!
ಜಡವ ವಿಹ್ವಲಗೊಳಿಸುವ ಬಲವು ಮಾಧವ ಮಿತ್ರಗೆ
ಇರಲು ದರ್ಪಣದರ್ಪವನು ಮುರಿದೊಗೆಯುತ್ತಿದ್ದನು ನಿಮಿಷದಿ!

ಪಂಚಮಸ್ವರದಿಂದ ಹಾಡದೆ ಜವ್ವನವು ಜಡವಾಗಿದೆ
ಮಿಂಚಿನಡೆಯೆ ಹಸಾದ ಲಜ್ಜೆಯು ಮೊಗವ ಬಣ್ಣಿಸದಾಗಿದೆ;
ಚಂಚಲತೆಯಿರದೀಕ್ಷಣ ಒಲವು ಕುದಿಯುವ ಲಕ್ಷಣ,
ಪಂಚಬಾಣವ ಮಾಟದಾಟವ ನೆನೆನೆನೆದು ಹಂಬಲಿಪುದು!

ಭ್ರೂವಿಳಾಸ ವಿಲಕ್ಷಣೇಕ್ಷಣ, ಆವುದೊಂದನು ಅರಿಯಳು,
ಭಾವಹಾವಗಳೊಂದುಗೂಡುತ ಸೆರಗನಾಶ್ರಯಿಸಿರುವುವು;
ಆವಲೋಕದ ಅಮೃತವೋ ಆವಜನ್ಮದ ಸುಕೃತವೋ
ಕಾವುಗೊಂಡುದರರದಲಿ ಹೊಳೆದಿರಲಾದಳವಳಲಸೇಕ್ಷಣೆ!

ಕುಣಿವೆಳವೆ ಕಳೆದೆಯ್ದೆ ಯೌವನಫಲವೆದೆಯೊಳೆರಡಾಗಿದೆ,
    ತಣಿಹವರಸುವ ಬೇಗೆಯೊಡಲೊಳಗೆದ್ದು ಹಾಯ್ದಾವರಿಸಿದೆ
ಅಣಕ ಗಿಣಕಕೆ ಹಿಗ್ಗುವ ಮುನಿಸು ಮೌನಗಳೊಗ್ಗುವ
    ಹೊಸಹರೆಯದುತ್ಸಾಹವಳಿದಾಯಸದಿರಕೆ ನೆಲೆಗೊಟ್ಟಿದೆ!

ಪ್ರೇಮಫಲ ಕಳಿತಿರುವುದೋ ಎನೆ ಕಾಣುವುವು ಚೆಂದುಟಿಗಳು,
    ವಿರಹದಿಂದೆದೆ ಮರುಗಿ ಕರಗಿದೆ ತುಂಬುಗಂಬನಿ ಕಂಗಳು;
ಪ್ರೇಮ ಸುಳಿದೆಡೆಗಾಣದೆ ನಾಯಕನ ಸುಳಿವರಿಯದೆ
    ವಿರಹಗೀತವ ಹಾಡುವುದೊ ಎನೆ ಹಳಹಳಿಸಿ ಬಿಸುಸುಯ್ವಳು!

ಓರಣವು ತನ್ನೊಡತಿಯೊಲಿಯದ ಕಾರಣವ ಕೇಳುತ್ತಿದೆ,
    ಸಾರಣೆಯ ಕಾರಣೆಯ ಕಾಣದೆ ಕದಪುಗಳು ಕಳೆಗುಂದಿವೆ;
ಪಾರಣೆಯ ಬಯಸುವುದೆದೆ ಪ್ರಣಯ ಪಾವಕ ಕೆರಳಿದೆ,
    ಬಾರಿಸುವರಾರಿಲ್ಲದಿರೆ ಮನಕೊರಗಿ ಮೆಯ್ಗರೆಯುತ್ತಿದೆ!

ತಂಬೆಲರ ತೀಟದಲಿ ತೀಡುವ ಹುಲ್ಲೆಯಾಟದ ಮಾಟವು
    ತುಂಬಿದುದು ತುಳುಕಿತು ತಿರೋಗತಿವಿಡಿಯೆ ನಲ್ಲನ ಬೇಟವು;
ಇಂಬುಗಳೆದಿರಲಾಸೆಯು ಅರತು ಹೋದುದು ಬಾಸೆಯು,
    ನಂಬಿಗೆಯು ಹಿಡಿವಗ್ಗತಪ್ಪಿದ ತಂಬಿಗೆಗೆ ಸಮವಾದುದು!

ಪುಣ್ಯ ಪುಳಿನಸ್ಥಳದೊಳಾಡುತ ತರುಲತಾ ಸಂತಾನಕೆ
    ಕಣ್ವಸುತೆ ಕರುಣವನು ಸುರಿದಾದರಿಸಿದಳು ಸಂತಸದಲಿ;
'ಪೆಣ್ಣೆ ಸುಖಿಯಾಗೆನ್ನುವ' ಅವುಗಳಾಶೀರ್ವಚನವ
    ತಣ್ಣಗಾಗಿಸಿತೇನೊ ಬಿದಿ ಅದಕಾವುದೆಣೆಯುರ್ವರೆಯಲಿ?

ಪಾವನಕೆ ಪಾವನವೆನಿಪ್ಪ ತಳೋದರಿಯ ಮೊಗ ಬಾಡಿದೆ,
    ತಾವರೆಯ ತಣ್ಣೆಲೆಯ ಗಾಳಿಯು ತಾಪವಾರಿಸದಾಗಿದೆ;
ಜೀವನವೆ ಜಡವೆನಿಸಿದೆ ಸೊಗವು ಕನಸೆಂದೆನಿಸಿದೆ,
    'ಕಾಣುವೆನೆ ನಲ್ಲನನು?' ಎಂದೆದೆ ಕಳವಳಿಸಿ ಕಂಗೆಡುತಿದೆ!

ಆ ರಿಸಿಗಳೆಲೆವನೆಯೊಳಾಡಿದ ಭಾರತಾಂಬೆಯ ಹೃದಯವು
    ತೋರದೋಳ್ಗಳ ನೀಡಿ ತನ್ನನು ಕಾಯುವಾಹವಮಲ್ಲನ,
ಧೀರತೆಯ ಪೇರಾಳ್ತನ ಮೈದಳೆದ ದುಷ್ಯಂತನ
    ಕೋರುವುದು; ಅವನೆಲ್ಲಿರುವನಾ ವೀರನೆಂಬುದ ಕಾಣಿರೇ?

ಮೂಡಿತ್ತದೊಂದು ದಿವ್ಯ ಪ್ರಭೆ!

'ಪಾರಿವಾಳದ ಕೊರಳ ಕೊಂಕಿನಲಿ ಬಾ ಚೆಲುವೆ,
ನವಿಲುಗಂಗಳ ತೂರಿ ಬರಲಿ ದೃಷ್ಟಿಯೊಳೊಲುಮೆ;
ಹಂಸಗತಿಯಲಿ ಹಾರಿ ಬಾ ನನ್ನ ಕಂಗೊಳಕೆ,
ಹರಿದು ಹರಿಸಾರಾಮದಲ್ಲಿ ವಿಹರಿಸು ಬೆಳಕೆ;
ತಿಳಿಯಾಗಿ ತನಿಯಾಗಿ ಮನವಾಗಿ ಮೈಯಾಗಿ
ಹೊಳೆಯಾಗಿ ನೆರೆಯಾಗಿ ಬಾ ಚೆಲುವೆ ನಡುತೂಗಿ!'

ಎಂದು ನೆನೆಯಲು ಮನದ ಮಂದಿರದಿ ಮಿಂಚೆದ್ದು
ಬಂದಂತೆ ಮೂಡಿತ್ತದೊಂದು ದಿವ್ಯಪ್ರಭೆ! ಮ–
ರಂದ ಜಿನುಗುವ ಹಾಗೆ ಜಿನುಗಿ ಬಂತೊಂದು ರಸ;
ಚಂದ್ರಿಕಾಪ್ಲಾವಸಮ ತಂಪಿನಲಿ ಮೈಮರೆದು
ಅಮಲತೆಯ ಮೈವೆತ್ತು ಮಿನುಗಿ ಸುಪ್ತಿಗೆ ಸಂತು
ಕಮಲ ಕೋಮಲವಾಯ್ತು ಹೃದಯವಾಮಯವಳಿಯೆ!

ತಪ್ತ ಜೀವಕೆ ತಣಿವ ಪಡೆಯ ಹೇಳಿತು ದೀಪ್ತಿ
'ಆಪ್ತ ಜೀವದ ನೆಚ್ಚಿಗಿಂತಮೃತ ಬೇರಿಲ್ಲ;
ಅದನುಂಡು ತಣಿ ಜೀವಿ, ಹಾರಿಲ್ಲದೊಡೆ ಬಾವಿ!
ಅದೆ ಭುಕ್ತಿ ಅದೆ ಶಕ್ತಿ, ಅದೇ ಜೀವನಾಧಾರ,
ಮುದವೀವ ಮಂದಾರ, ಕಮಲಿನೀ ಕಾಸಾರ
ಅದು ಲಭಿಸೆ ಬಾಳು ಹೊಂಬಾಳು; ಕಳೆದೊಡೆ ಹಾಳು!'

ಪ್ರೀತಿಯ ನೆನೆನೆನೆವೆ...

ಪ್ರಾಸಪಂಕ್ತಿಗಳಲ್ಲಿ ಲೇಸಾಗಿ ಎದೆಯೊಲವ
ಹಾಸು ಹೊಕ್ಕಾಗಿ ಹರಿಯಿಸಿದ ನಲ್ನುಡಿಯ
ಬೇಸಾಯದವರು ನೀವಯ್ಯ!

ಅಣ್ಣನಂದದ ನಿಮ್ಮ ಕಣ್ಣನೋಟದಿ ಅಳಲ
ತಿಣ್ಣವನು ಮರೆಸಿ ಮುಗುಳ್ನಗೆಯ ಮೊಗದಲ್ಲಿ
ಬಣ್ಣಿಸಿದ ಸಖರು ನೀವಯ್ಯ!

ಚಿತ್ತ ಚಂಚಲವಾಗಿ ಕತ್ತಲೆಯ ಕಾಡಾಗಿ
ನಿತ್ಯ ನಿರ್ವೇದವೊದಗಿರಲು ಮನಕಮೃತ
ವಿತ್ತು ಪೊರೆದವರು ನೀವಯ್ಯ!

ಹೊಗಳಿಕೆಯು ಹೆಚ್ಚಲ್ಲ ಹಗಲಿರುಳು ನೀವ್ ತೋರ್ದ
ನಗುಮೊಗವ ನೆನೆದು ಇಲ್ಲವಾಯ್ತೆಂದೀಗ
ಮಗುವಾಗಿ ಅಳುವೆ ಸಿರಿಯಾಣ್ಮ!

ಅಚ್ಚನೇಹದ ಮಾತು ಬಿಚ್ಚೆದೆಯ ಕಡೆಯಿಂದ
ಹುಚ್ಚು ಹರಿಹದಲಿ ಬಂದೆನ್ನ ಮೀಯಿಸಿದ
ಸ್ವಚ್ಛತೆಯ ನೆನೆವೆ ಸಿರಿಯಾಣ್ಮ!

ಮಾತಿಂಗೆ ಮೀರಿದೊಳುವಾತಿನಿಂದುಪಚರಿಸಿ
ಓತು ಕರೆದೆನಗೆ ನಲುಮೆವಾಲೀಂಟಿಸಿದ
ಪ್ರೀತಿಯನೆ ನೆನೆವೆ ಸಿರಿಯಾಣ್ಮ!

ಚಂದ್ರಮಲ್ಲಿಗೆ ದಂಡೆ ಮುಡಿದ ಆ ಹರಿಗಂಗೆ
ಮಂದ್ರನಿಸ್ವನದಿ ನುಡಿವಂತೆ ನುಡಿವ
ನಿಮ್ಮಂದವನೆ ನೆನೆವೆ ಸಿರಿಯಾಣ್ಮ!

ಹತ್ತು ಸಾವಿರ ಹೊನ್ನು ತೆತ್ತರೂ ಸಿಗದಯ್ಯ
ಚಿತ್ತವೇ ಮುತ್ತು ನಿಮ್ಮದೋ ನೇಹಿಗರೆ,
ಮತ್ತದನೆ ನೆನೆವೆ ಸಿರಿಯಾಣ್ಮ!

ಅಂಗಡಿಯೆ ಅಮರರಾರಾಮವಾಯ್ತಂದಾವು
ಹಂಗುಹರಿಯಿರದೆ ಟೀಕಿಸುತ್ತಿರೆ ಜನದ
ಜಂಗುಳಿಯನೊಂದೆ ಸಮನಾಗಿ!

ನಾನು ನೀನುಗಳಳಿದು ಜೇನು ಜೇನಾಗಿ ಮ
ತ್ತೇನು ಇರದಾಗ ಚಿತ್ರಪತ್ರಕ್ರೀಡೆ
ತಾನಾಯ್ತು ನಮ್ಮ ಬೆಸೆವಂಟು!

ಸಂಜೆವೆಣ್ಣಿನ ಜೊತೆಗೆ ಮಂಜುಳಾಂತಃಕರಣ
ರಂಜಿಸುವ ಚಿಕ್ಕ ರಮಣಿಯರು ಬರುತಿರಲು
ಭುಂಜಿಸಿದೆವವರ ನಗು–ನಾಣು!

ಆಟ ರಸಿಕರ ಹೂಟವಾಯ್ತಯ್ಯ ಆಗ 'ಜಾ–
ಕೇಟಿಗ'ನ ಜಾಣು ಬದಲಿಸಲು ಸುದತಿಯರ
ನೋಟವನೆ ನಮ್ಮ ಕಡೆಗಾಗಿ!

ಕನ್ನಡದ 'ಹೆಜ್ಜಾಣ' ಮುನ್ನ ಸಾಲೆಗೆ ಬರುವ
ಚೆನ್ನೆಯರ ಬೆಡಗ ಬಣ್ಣಿಸುವ ಬಿನ್ನಾಣ
ಕನ್ನೆಯರೆ ನಾಚುವಂತಿತ್ತು!

ಕಂಪಿಗಾಸರೆಯಾದ ಸಂಪಿಗೆಯ ದೆಸೆಯಿಂದ
ಸೊಂಪು ಸೊಕ್ಕಿತ್ತು, ರಸವಾಕ್ಯ ಸೇವನೆಯ
ತಂಪು ತಲೆಗೇರಿ ನಡೆದಿತ್ತು!
ನಮ್ಮ ಮೂವರ ರಸನೆಗಾಸರೆಯನೊಡರಿಸಿದ
ಗಮ್ಮತ್ತಿನಾಕೆ ಗಮನಿಸುವುದನೇ ಕಾಂಬ
ನಮ್ಮ 'ಸೂಜಿಗ'ನ ಮೊಗಚಂದ!

ಬೆಳಕುಕತ್ತಲಹಾಗೆ ತಿರುಗಲಾಸೆನಿರಾಸೆ
ಅಳುಕದೆಯೆ ಬೆಳಕ ಹುಟ್ಟಿಸುವೆವೆಂದೆಮ್ಮ
ಮಿಳಿರುವಬ್ಬರದ ನುಡಿಚಂದ!

ಚಿತ್ತಜನ ಕಡೆಗೊಮ್ಮೆ ಚಿತ್ತಜಾರಿಯನೊಮ್ಮೆ
ವ್ಯತ್ಯಾಸವಿರದೆ ನೋಡಿದೆವು; ಆಯೋಗ
ಸತ್ವಾಭಿರಾಮವಹುದಯ್ಯ!

ಆ ಬಗೆಯನಾಸೊಗವನಾರೀತಿ ನೀತಿಗಳ–
ನಾಬಾಲವೃದ್ಧರುಚಿರೋಕ್ತಿ ವೈಖರಿಯ–
ನೇ ಬಣ್ಣಿಸುವೆನು ನುಡಿಯಿಂದ!

ಅಂದಿನಂದವನೆಲ್ಲ ಇಂದು ನಿತ್ಯವು ನೆನೆದು
ಅಂದೆಲ್ಲ ಅಳಿದು ಇಂದಾದುದೇಕೆಂದು
ಚಂದ್ರಶೇಖರಗೆ ಮೊರೆಯೀವೆ!

ಆ ಕಾಲವೇ ಮತ್ತೆ ಮೂಡಿ 'ಸೂಜಿಗ' ರಾಯ
ರಾಕೆಯೊಡಗೊಂಡ ಶಶಿಯಾಗಲಯ್ಯ ತ–
ನ್ನಾಕೆಯನು ಕೂಡಿ ನಲವಿಂದ!

ಬಾನುಬಯಲುಗಳಳತೆಮಾಡಿ ಮುಂದಕೆ ಹಾರಿ
ಏನು ಮತ್ತೆಂದು ಜಿಗಿದುನಿಂದುತ್ಸಾಹ
ತಾನೊಮ್ಮೆ ಬರಲಿ ದಯಮಾಡಿ!

ಹೊತ್ತು ಹೋಯ್ತೇಕೆಂದು ಮತ್ತೆ ಮತ್ತೆಡಬಲಕೆ
ಕತ್ತೆತ್ತಿನೋಡಿ ಮಾತು ಪೂರೈಸದಿರೆ
ಚಿತ್ತೈಸದಾತ ದಯಮಾಡಿ!
ನಿನ್ನೆತಳಪಾಯದಲಿ ಮುನ್ನಿನಶ್ಮಗಳಿಟ್ಟು
ಚೆನ್ನಾಗಿ ಇಂದನಳವಡಿಸಿ ಕಟ್ಟಿದಾ
ಚೆನ್ನಿಗರೆ ಬನ್ನಿ ಮನೆಗಾಗಿ!

ಹೃದಯ ವೇದಿಕೆಯಲ್ಲಿ ಮೃದುಮಧುರ ಭಾವಗಳ
ಹದನಾದ ಪಾಕ ನಿಮಗಾಗಿ ಕಾದಿಹುದು
ಚದುರರೇ ಬನ್ನಿ ಮನೆಗಾಗಿ!

ಮಿತ್ರಯುಗಳವೆ ನಿಮ್ಮ ಪತ್ರಕ್ಕೆ ಕಾದಿರುವೆ
ಹೃತ್ಕಮಲವನ್ನೆ ಬಾನಾಗಿ ಹಿಗ್ಗಿಸಿಹೆ
ನಿತ್ಯ ಸ್ವಾಗತವು ನಿಮಗೆಲ್ಲ!

ವಿಗ್ರಹಭೇದನ

ಎಲೆಮನ ನಿನ್ನೆಳೆದಾಟವು ಕೊನೆಗಿಲ್ಲಿಗೆ ಬಂತೆ,
ಚೆಲುವೊಲವೆಂಬೊಳುನುಡಿಗುಡಿ ಹುಲುಕಸವೇ ಆಯ್ತೆ?
ಬಲು ನೆಚ್ಚಿದೆ ಹುರುಪನು, ಹುರುಪೆಲ್ಲಿದೆ? ಹುಸಿಕಂತೆ!
ಕಲುಗುಂಡನು ತೆಗೆದಪ್ಪುವ ಕಠಿನತೆ ಶರಣಾಯ್ತೆ?

ಹಾಲೀಜಗ, ಬೆಳುದಿಂಗಳ ನಲ್ಮೊಗವೆಂದರಿದು
ಬಾಲಿಶತನದಿಂ ಬಹುದಿನ ಕನಸಲಿ ಕಣ್ಮುಗಿದು,
ಕಾಲನ ವಂಚಿಸ ಹೋದೆಯ? ಅಕ್ಕಟ ನಿನಗೀಗ–
ಪಾಲಿಗೆ ಬಂತೇ ಶಿವಶಿವ ಹಾಲಾಹಲ ಯೋಗ!

ನಶ್ವರ ಕಹಿ ಬಾಳೆಂಬಾ ರಿಸಿಗಳನಬ್ಬರಿಸಿ
ಚಿಶ್ಛಾಂದಸ ಗೊಡ್ಡುಗಳೆಂದವದಿರ ಧಿಕ್ಕರಿಸಿ–
ವಿಶ್ವದೊಳಾಶಾಬಂಧವೆ ಸಂಜೀವನಿಯೆಂದೆ;
ಆಃ ಶಿವ ಶಿವ ಕೊನೆಗೀಪರಿ ಶೂನ್ಯವೆ ಗತಿಮುಂದೆ?

ಹೊಂಗನಸಿನ ಗೋಪುರಗಳ ಹುಡಿಮಾಡಿದೊ ಮನವೆ,
ಅಂಗಾಂಗವ ಭರ್ಚಿಗಳಿಂದಿರಿದುಕೊ ನಡೆ ಮನವೆ;
ಕಂಗಳ ಕವಡೆಯ ಕಿತ್ತಿಡು, ಕಲ್ಲದು ಕಣ್ಣಲ್ಲ,
ಮಂಗಳವನು ಮನೆಯಾಚೆಗೆ ಹೊಡೆದೋಡಿಸು ಹೊಲ್ಲ!

ನಿಷ್ಫಲ ನಿಷ್ಫಲ ನಿನ್ನೀ ಬಾಳಿನ ಹೋರಾಟ,
ದುಷ್ಪ್ರಾಪ್ಯವ ಬಯಸಿದೆನೀ ಸಲ್ಲದು ಆ ಹೂಟ;
ಬಾಷ್ಪವ ಹರಿಯಿಸಲೇತಕೆ? ಸೊನ್ನೆಯ ಸಂಸಾರ

ವಿಸ್ಫಾಲಿಸಿ ಪಕ್ಷಂಗಳ ಸೇರಿತು ತನ್ನೂರ!
    ಫಡಫಡ ಬಯಲಾಸೆಗಳೇ ತೊಲಗಿರಿ ಸಾಲಾಗಿ,
ಜಡಿವೆನಮರ್ಷದ ಕೊಡಲಿಯ ನಡೆಯಿರಿ ಪಾಲಾಗಿ;
ಜಡಭಾವದ ಹುಸಿನಾದವ ಮೆಚ್ಚಿದ ಮುಗ್ಧತೆಯೇ
ನಡೆ ಸಾರೀಯೆಡೆ ಸುಡುವುದು ನಿಜದೀ ನಗ್ನತೆಯೇ!

ಬಲ್ಲೆಯ ಆ ನಲ್ಲೆಯ?

ಹಾಡುತಿರಲು ಅರುಣಗೀತ
ಹರಿಸದ ಹರಿಕಾರರು,
ಎಲರನೇರಿ ಮಲರ ಸಾರಿ
ಬರಲು ಮಧುಪ ವೀರರು;
ಮುಗಿಲ ತೆರೆಯ ಸರಿಸಿ ಹೊರಗೆ
ಉಷೆಯು ಮೊಗವ ತೋರಲು,
ಕತ್ತಲನ್ನು ಗುಡಿಸಲೆಂದು
ಮೂಡು ಹೊಸಿಲ ಮೀರಲು;
ಬಂದಳಲ್ಲಿ
ಬಾಗಿಲಲ್ಲಿ

ನವವಧು ನಿರಿಗಳನು ಚೆಲ್ಲಿ–
ಮುನ್ನ ತೋಳ ಸೆರೆಯೊಳಿದ್ದು
ಉಂಡ ಸೊಗವ ನೆನೆದು ನಕ್ಕು
ಇಹದ ಬೆಳಗನೊಮ್ಮೆ ಅಲ್ಲಿ
ಮರೆಯೆ ಭಾವದುದಯದಲ್ಲಿ,
ಉಷೆಯಣಕಿಸಿದಂತಾಗಲು
ಬೆಚ್ಚಿ ನಾಚಿ ನಿಂದಳು!

ಒಲಿದಧರವ ಕದ್ದು ಮೆದ್ದು
ಕನಸಿನೊಳಗೆ ಮಲಗಿದೆ
ನವಚುಂಬನಕಾರ ಬೆಳಗು
ಬೀಸಲೊಮ್ಮೆ ಅಲುಗಿದೆ;
ತೆರೆತೆರೆಯಲಿ ಕುಸುಮ ಸಾರ–
ವೆಬ್ಬಿಸ ಬರೆ ತಣ್ಣನೆ,
ಸರಿದೆನುಪ್ಪವಡಿಸಿ ಚೆಲುವಿ–

ನುಸಿರ ಹೀರಿ ಮಿಣ್ಣನೆ!
ಬಂದೆನಲ್ಲಿ
ಬಾಗಿಲಲ್ಲಿ
ಮಧುರ ಮನೋವೃತ್ತಿಯಲ್ಲಿ
ಮೊದಲು ನೆಟ್ಟ ಸೊಗದ ಬೆದೆಯ
ಕಂಡ ಹಾಗೆ ಕಳೆದ ಎದೆಯ
ಬಂದು ಜೀವನ್ಮೈಕಸುಧೆಯ
ಕೆನ್ನೆಯಲ್ಲೆ ಅರುಣೋದಯ
ಸೆರೆಹಿಡಿದೆನು, ಬಲ್ಲೆಯೇನು
ಪ್ರೇಮದ ಆ ನಲ್ಲೆಯ?

ಮತಿ ಕೆಂಡವಾಯ್ತು

ಬಾಹ್ಯ ರಣರಂಗ ರಕ್ತೋತ್ಪಾತದುಬ್ಬರವು
ಮೆದುಳ ಕಾಯಿಸಿತು ಮರಳಿ,
ಆವ ಸಿದ್ಧಿಗೆ ತೊಡರಿ ಕಾದುವರೊ ಅದ ತಿಳಿದು
ಮತಿಕೆಂಡವಾಯ್ತು ಕೆರಳಿ!

ಕೊಂದು ತಿನ್ನುವ ಹುಲಿಗೆ ದಯೆಯನುಪದೇಶಿಸಲು
ಫಲವೇನು? ಫಾಲನೇತ್ರ
ಬಂದು ಕೆಂಗಣ್ಣುರಿಯ ಭುಗಿಲೆಂದು ಬಿಡೆ ತಿಳಿಗು
ಸೀದು ಸುಡುತಿರಲು ಗಾತ್ರ!

ದಂತವಳಿದರು ದರ್ಪವಳಿದೀತೆ ಸರ್ಪಕ್ಕೆ?
ದುರ್ನಯವು ದೂರಗಾಮಿ;
ಮಂತ್ರಕ್ಕು ಮುಗ್ಧವಾಗದು, ಮಾತ್ರನಿಲೆದೇಹ
ಯಂತ್ರ ಬದುಕೀತು ಭೂಮಿ!

ತಾವು ಸಾಕಿದ ಕುರಿಯ ತಾವೆ ಕಡಿದುಂಬಂತೆ
ಕಡಿದುಂಬ ನರರ ನರವ
ಬೇರು ಬೇರಗೆದು ಸುಡಬಾರದೇಕೆನಿಸುತಿದೆ
ಕತ್ತರಿಸಿ ಅವರ ಶಿರವ!

ಯಾವ ಕಾಲದೊಳೂ ಸ್ವಭಾವದುರತಿಕ್ರಮವು
ಅದಕಿರುವುದೊಂದೆ ಅಗದ,
ಭಾವಕ್ಕೆ ಸಾಧನಾಭಾವನೆಸಪುದು, ಮಿಕ್ಕ
ಯಾವುದೂ ವ್ಯರ್ಥ ಜಗದೆ!
ಕೊಲ್ಲಬಹ ಕುನ್ನಿಗಳ ಕೊರಳನರಿವುದೆ ಧರ್ಮ
ತಿಳಿಯಿರಿದು ವೀರಯೋಗ;
ಅಲ್ಲದೊಡೆ ಈ ನರನ ಬಾಳು ಮಸಣದ ಹಾಳು;
ಕಿಡಿಗೊಡಲಿ ಖಡ್ಗವೇಗ!

ಸೊಗಸುಗಾರ

ಹೃದಯ ಕುಮುದ ಚಂದ್ರಮಾ–
ಮುಗಿಲ ಮೊಗದ ತಿಲಕವೆನಿಪ ಸೊಗಸುಗಾರನೀತ,
ನಗೆಯ ಹಾಲ ಮೇಲೆ ನಿಂತ ನಿರ್ಮಲಕೆನೆಯೀತ;
ಗಗನದಾಕೆಯಿಟ್ಟ ಬೆಳ್ಳಿಗಡಗವೆನ್ನು, ರೂಪ
ಹಗಲ ಮರೆಸಿ ಸೊಗವನರಸಿ ಕೊಡುವ ಪುಣ್ಯದೀಪ!

ಅಂದಚಂದದಮೃತವೀಂಟಿ ತೊಳಗುತಿರುವ ರಾಜ,
ಸುಂದರಾಂಗ ಸುಜನ ಹೃದಯ ಪೆತ್ತ ಶಾಂತ ತೇಜ;
ಶಿವನ ಜಡೆಯ ಕುಂದ ಕುಸುಮ ಮಾಲೆಯಿವನೆ, ಬಾಲ
ಕವಿಯ ಕೆಣಕಿ ಕೆಣಕಿಹಾಡಿಸುವ ವಿನೋದ ಶೀಲ!

ಹೃದಯ ಮಧುರ ಚಂದ್ರಮಾ
ಶಾಂತನನಿಶ ಶಶಿ, ನಿಶಾವಿಹಾರ, ಸೌಖ್ಯಸಾರ,
ಕಾಂತಿಕಲಶ, ಕುಮುದದರಸನಮೃತಮಯ ಶರೀರ;
ರಸಿಕ ಮನದ ಹರುಷ ನೀರನಿಧಿಗೆ ಚಂದ್ರಚಂದ್ರ,
ದೆಸೆಯ ಪೆಣ್ಗೆ ದುಗುಲಮಪ್ಪ ವಿಶದಕಾಂತಿ ಸಾಂದ್ರ!

ವಿರಹಿಮನಕೆ ತಂಪನಿತ್ತು ಕುದಿಸಬಲ್ಲ ಜಾಣ,
ತರುಣತೆಯೆದೆಯೊಳಗೆ ಬಿಡದೆ ನೆಡುವ ಪ್ರೇಮಬಾಣ;
ತಾರೆಯೆರೆದು ತಂಪಿಗೊಡೆಯ ತುಹಿನಧವಳ ಬಿಂಬ,
ಬಾರಿ ಬಾರಿಗೊಂದು ನುತಿಸುತಿದೆ ಜನ ನಿಕುರುಂಬ!

ಹೃದಯ ಗಗನ ಚಂದ್ರಮಾ
ಚಂದ್ರ ಚಂದ್ರಿಕೆಯರ ಹಾಗೆ ನೀನು ನಾನು ಕಾಂತ,
ಚಂದ್ರಲೋಕಕೇರಿ ನಡೆವ ಬರಲು ಬಾಳಿನಂತ;
ಬಂಧ ಬೆಸುಗೆ–ಪ್ರೀತಿನೀತಿಗೆರೆವ ನೀರ ನೀತ,
ಚಂದಗಾರ ಕೇಳು ನನ್ನ ಹೃದ್ವಿಪಂಚಿ ಗೀತ!

ಸಿಡಿವುದೆನ್ನೀತಲೆಯು!

ಮನದ ಮುತ್ತಿನ ಮಣಿಯುಮಿಗೆ ನುಚ್ಚು ನೂರಾಯ್ತು,
ಹೃದಯಕ್ಕೆ ಸಿಡಿಲೆರಗಿಸುಟ್ಟು ಬಿಸುಟಂತಾಯ್ತು,
ಧಮನಿಧಮನಿಗಳಲ್ಲಿ ವಿಕಟ ನಾದೋತ್ಪಾತ
ಸಮನಿಸಿತು, ಆಹ ನೆತ್ತರನೆ ಕುದಿಸಿತು; ಜೀವ
ತಳಮಳಿಸಿ ತಡವರಿಸಿ ಕಕ್ಕುಬೆಕ್ಕಾದುದುಪ–
ಟಳವ ತಡೆಯುವುದೆಂತು? ಕಲಿಗೈಯ ಕಡುವರಸೆ
ಕಿವಿಯನೊಡೆವುದೊ ಎನೆ ಪಿಟೀಲಿನಲಿ ಮರುಳಂತೆ
ತಿರುಗಿ ತಾಂಡವವಾಡುತಿಹುದು–ತಾಳಲಸಾಧ್ಯ!

ಎಲೆಲೆ ಸರಸತಿ, ನಿನ್ನ ಗೋಣ ಮುರಿವರೆ ಅಕಟ
ಕಲೆಗಾರರಲ್ಲಿವರು–ಕೊಲೆಗಾರರೇ ದಿಟವು!
ಕರ್ಣಕುಹರದೊಳುಕ್ಕು ಕಾದು ಹೊಕ್ಕಂತಾಯ್ತು,
ಮೆದುಳುಗೆರೆಯೊಳು ಸಲಗ ದಾಳಿಯಿಟ್ಟಂತಾಯ್ತು;
ಚೆಲುವಿನೆದೆಯಲಿ ವಿಷಕಠಾರಿಯಿಡುವುದನೆಂತು
ಸಹಿಸುವೆನು? ಮೃತ್ಯುಬಾ–ಸಿಡಿವುದೆನ್ನೀತಲೆಯು!

ಹೃದಯ ಪರೀಕ್ಷೆ

ನಿನ್ನ ಹೃದಯ ಪರೀಕ್ಷೆಮಾಡಿದೆ
ನೆಂದು ಬಗೆದೆನು ಸುಮ್ಮನೆ;
ನನ್ನ ಹೃದಯ ಪರೀಕ್ಷೆಯಾಯಿತು
ಇಂದು ಕೆಳ ಸುಲೋಚನೆ!

ತಿಳಿದೆನೆಂದೆನು ತಿಳಿಯದೆಯೆ ಮೋ–
ಹಕ್ಕೆ ಪ್ರೇಮವನೆಣಿಸಿದೆ;
ಉಳಿದೆನೆಂದಳಿದೆನು, ಮಹಾಮತಿ
ಯೆಂದು ಮಂದತೆಗೂಡಿದೆ!

ವಿಷವನಮರ್ದೆಂದೊಂದು ಹುರುಪಿನ
ಬಟ್ಟಲಲಿ ಕುಡಿದಾಡಿದೆ,
ತೃಷೆಗೆ ದೈವದ ಕರೆಯಿದೆಂದುರೆ
ನಂಬಿ ನಾ ಹರಿದಾಡಿದೆ!

ಜಡವು ಜೀವವಿದೆಂದು ಭ್ರಮಿಸಿದೆ
ಬಳ್ಳವಳ್ಳಿಯ ಹೂಗಳ
ನುಡಿಯನರ್ಥವ ಮಾಡಿಕೊಳ್ಳದೆ
ಕೊಯ್ದೆನೆನಗೆಂದವುಗಳ!

ದೈವಮಾಯೆಯನಿದಿರಿಸುವೆನೆಂ
ದೆನ್ನ ಮಾಯೆಯಬೀರಿದೆ;
ಏವೆನದರಲಿ ಬೆರೆದು ನನ್ನದು
ನನಗೆ ಕತ್ತಲ ಕಾರಿದೆ!

ಕಟ್ಟಿದಾಪಂಜರವನೊಳಗಡೆ
    ನಿಂದು ಕೀಲಿಸಿ ನೋಡಿದೆ;
ಮೆಟ್ಟಿದರು ಮುರಿಯದು, ಅದೆನ್ನನೆ
    ಕಟ್ಟಿ ಒಳಗಡೆ ಕೂಡಿದೆ;

ಎದೆಯ ದೇಗುಲದೊಳಗೆ ದೀವಿಗೆ
    ಇರುವುದೆನಗೇ ಎಂದೆನು;
ಬಿದಿಯು ಗೂಢವ ಬಯಲಿಗೆಳೆಯಲು
    ಅಲ್ಲವೆಂದುರೆ ನೊಂದೆನು!

ಮನವ ಮಾನಿನಿ ಮನನಮಾಡಿದೆ,
    ಮಾಯೆಯನು ಈಡಾಡಿದೆ;
ಕನಸುಗಳ ಕುಡಿವೆನ್ನ ಮನವನು
    ಕನಸಿಗೇ ಜೊತೆಮಾಡಿದೆ;

ನಿಜದ ನುಡಿ

ಪರಿಪರಿಯ ಲೋಕದಲಿ ಪರಿದು ಪಲವಿಷಯಗಳ
ತಿರುಹಿನಲಿ ತೂರಿ ತಿಗ್ಮಾಂಶು ಬಾಧಿತನಂತೆ
ಬರಮಾಡಿಕೊಂಬೆಯೆಂಬೊಂದು ಬಯಕೆಯೊಳಿಂದು
ಕರುತಾಯಕಾಂಬತೆರದಿ,

ತಿರುಗಿ ನಿನ್ನಯ ನೆಳಲನಾಶ್ರಯಿಸ ಬಂದೆನಿದೊ
ತೆರೆದೆದೆಯೊಳೆಲೆ ಗೆಳೆಯ ಹಸಿದು ನೇಹದ ನುಡಿಗೆ,
ಹೆರರ ಹಾರೈಸಿದೊಡೆ ಬರಿನೀರ ಕಡೆದಂತೆ
ಎಂಬ ಸೊಲ್ಲೆನ್ನದಾಯ್ತು!

ಆಳಿನಂಟು ಬೇಕೆಂದೊಡೆಲ್ಲೆಲ್ಲಿಯೂ ಉಂಟು,
ಉಳಿನಂಟು ದಿವಿಜರಿಗು ವಿರಳವೈ; ಕರಣಗಳು
ಕಳವಳಿಸಿ ಕತ್ತಲೆಯೊಳಾಳುತಿರೆ ಬಂದೆನಿದೊ
ಜೀವನಾಧಾರಕಾಗಿ;

ಚೆಲುವು ಗೆಲುವುಗಳೆಲ್ಲ ದೊರೆಕೊಂಡರಿಲ್ಲಿ ತಿಂ–
ಗಳವೊಲಾತ್ಮಕೆ ಶಾಂತಿಯೀವ ಸಹೃದಯಭಾವ
ದೊಳುವಾತು ಕಾಣದಾಯ್ತಯ್ಯ ನೇಹಿಗರರಸ
ಹುಡುಕಿ ಹುಚ್ಚಾಗಿ ಹೋದೆ!

ಅರಸಿದರು ನನ್ನೆದೆಯ ಮಿಡಿತಗನುಗುಣವಪ್ಪ
ಸರಸಿ ಕಾಣನು ನಿನ್ನನುಳಿದು, ಜೀವಕೆ ಜೀವ
ಬೆರಸಿ ಮಾತಾಡಲೆಂದಿತ್ತ ಹರಿದೆಯ್ತಂದೆ
ಬಾ ಗೆಳೆಯ ಕರೆವೆನೊಲಿದು;

ನೆರವೆನಗೆ ನೀನು ನಿನಗಾನೆಂದು ಬಗೆದು ಬಂ–
ಧುರವಾಗಿ 'ಸಂಸೃಷ್ಟಿ'ಯಂತೆ ಬಾಳುವ ಬಾರ
ಧರೆ ಮುಗಿಲು ರವಿಚಂದ್ರತಾರೆಗಳನೊಡಗೊಂಡು
ಹರ್ಷಸಂಫುಲ್ಲರಾಗಿ!

ಧೀರ

ಸೃಷ್ಟಿಯಲಿ ಸಮಷ್ಟಿಯೊಳೆಲ್ಲದಕು
ತುಷ್ಟಿಯನೊಡರಿಸಲುಳಿಯದು ತೊಡಕು
ದುಷ್ಟಾತ್ಮರ ಮುಷ್ಟಿಯೊಳಡಗಿಸದೆ
ಎಷ್ಟಾದರು ಬಿಡೆ ಮುಳಿದಬ್ಬರದೆ!

ಸಾಗರವನೆ ಮೊಗೆವೆನು ಇದೆಯದಟು,
ಯೋಗದಿ ಕಳೆವುದು ಈ ಜಗದೊಗಟು;
ಆಗಸದಲಿ ಅರಸುವುದೇಂ ಗೊರಟು?
ರಾಗರಸದೊಳಿದೆ ಜೀವದ ಜಿಗುಟು!

ತರ್ಜನಿಯಲೆ ತಿರೆಯನು ತಿರುಗಿಪೆನೆ,
ಅರ್ಜುನನನೆ ಬಿಲುವಿಡಿದೆದುರಿಪೆನೆ!
ಗರ್ಜನೆಯಲೆ ದುರುಳರನುರುಳಿಪೆನೆ,
ಪರ್ಜನ್ಯನ ಪರಿ ತಡೆಗಟ್ಟುವೆನೆ!

ದಿಗ್ದಂತಿಗಳೆಲುಬನು ಪುಡಿಮಾಡಿ,
ಮುಗ್ಧಾಂತಃಕರಣಕೆ ದಯಗೂಡಿ,–
ಶ್ರದ್ಧಾವಂತರ ಬಳಗದೊಳಾಡಿ,
'ಇದ್ದನು ಮಾನವ' ಎನ್ನುವೆ ಪಾಡಿ!

ಪಾಳ್ಮಸಗಿದ ದೇಗುಲಗಳ ಕಂಡು
ಬಾಳ್ನಶ್ವರ ಎಂಬೀನುಡಿಗೊಂಡು,–
ಪಾಳ್ಮೊಗವನು ತೋರ್ಪನ್ನರ ಕಂಡು
ತೋಳ್ಚಪ್ಪರಿಸುವೆ ನಾನೇ ಗಂಡು!

ಪುರುಷತ್ವದ ಹಿರಿಮೆಯ ಮೆಯ್ಗೊಂಡು
ಹರುಷದಿ ಮಾನವತೆಯ ಫಲವುಂಡು,
ಧರೆಯಿರವಿನ ಸಾರ್ಥಕ್ಯವ ಕಂಡು
ಮೆರೆಯುವೆ ತಾರುಣ್ಯದ ಕಲಿಗಂಡು!

ಎಲ್ಲಿದೆ ಹೆಂಬೇಡಿಗಳಿಗೆ ಬಾಳು?
ಎಲ್ಲಿದೆ ಸೋಮಾರಿಗಳಿಗೆ ಕೂಳು?
ಕಲ್ಲೆದೆಯಿಲ್ಲದ ನರನಿಗೆ ಗೋಳು
ಎಲ್ಲಿದ್ದರು ತಪ್ಪೀತೇ ಹೇಳು?

ಸಾರಸ್ವತ ಪರಿಣತಿಯಿರದಿರಲಿ,
ಊರನು ಕೊಳಬಹ ಧನವಿರದಿರಲಿ
'ಆರೆನು' ಎಂಬೀ ನೆವ ಬರಿ ಕುಂಟು!
ಧೀರತ್ವದ ಹಿರಿನಂಟೇ ನಂಟು!

ಈಶನ ಮಾಟದೊಳುಳಿದಿರುವೆಲ್ಲ
ದೋಷವ ತಿದ್ದದೆ ಬಿಡುವವನಲ್ಲ;
ಕಾಷಾಯದ ಯತಿ ನಾನೇನಲ್ಲ
ರೋಷದೊಳೆದ್ದಿಹೆ ನಾಹವಮಲ್ಲ!

ಧಗಧಗಿಸುವ ಕೆಚ್ಚೆದೆಯೊಳಗುರಿಯೆ,
ಮಘಮಘಿಸುವ ನೇಹದ ನೆಯ್‌ಸುರಿಯೆ
ಮುಗಿಲೋಳಿಯ ಮುಟ್ಟಿದೆ ಮನದಾಸೆ;
ಜಗದಗಲಕೆ ಬಗೆ ಹಬ್ಬಿಹುದೈಸೆ!

ಜನ್ಮ ಕಥೆ

'ಬಂದೆನಾನೆಲ್ಲಿಂದ, ಎಲ್ಲಿಂದ ನೀಯೆನ್ನ
ನೆತ್ತಿಕೊಂಡ್ಯೆ ತಾಯೆ ಹೇಳು' ಎಂದು
ಒಂದು ಸಲ ಕೇಳಿದನು ತಾಯ ಸೆರಗನುಹಿಡಿದು
ಮಗು ಚಿನ್ನ ನಿಂದವಳ ಬೆನ್ನಹಿಂದೆ;
ಹಸುಳೆಯನು ಎದೆಗಪ್ಪಿ ಹರುಷದಿಂದ
ನುಡಿದಳಳುನಗುಗಳರೆಬೆರೆದ ಕಂಠದಿಂದ:
"ಮಗುವೆ ಮುದ್ದಿನ ಕಣಿಯೆ ನನ್ನೆದೆಯ ಬಯಕೆ ನೀ–
ನಾಗಿದ್ದೆ ನನ್ನ ಬಾಳ್ಮೊದಲಿನಿಂದ!

"ನನ್ನೆಳಮೆಯೊಳಗಾಡುತಿದ್ದ ಬೊಂಬೆಗಳಲ್ಲಿ
ನೀನಡಗಿ ನಿಂತಿದ್ದೆ, ಬಳಿಕ ನಾನು.
ಮಣ್ಣಿನಲಿ ಶಿವಮೂರ್ತಿಯನು ರಚಿಸುತಿರುವಾಗ
ನಿನ್ನಮಾಡಿದೆನಳಿಯಿಸಿದೆನು ಮಗುವೆ;
ನನ್ನ ಕುಲದೇವತೆಯ ಜೊತೆಗೆ ನಿನ್ನ
ಮುದ್ದು ಮೂರ್ತಿಯನು ಪೀಠದಲಿ ಕುಳ್ಳಿಸಿದ್ದೆ
ಕಂದಯ್ಯ ಆಕೆಯರ್ಹಣವೆಸಗುತಿರುವಾಗ
ನಿನ್ನ ಪೂಜಿಸುತ್ತಿದ್ದೆನೊಲವಿನಿಂದ!

"ನನ್ನವೆಂದೆನಿಸಿದ್ದ ಚೆಲುವನಲ್ಗನಸುಗಳ
ತಳ್ಳಂಕದಲಿ ಕುಳಿತು ನೋಡುತಿದ್ದೆ;
ನನ್ನಾಸೆ ಕೂರ್ಮೆಗಳ ತಲ್ಪದಲಿ ತಣಿವಿಂದ
ಒರಗಿ ಮುಗುಳ್ನಗೆ ನಕ್ಕು ನಲಿಯುತಿದ್ದೆ;
ತಾಯಿ ಮುತ್ತಾಯಂದಿರಿರದೊಳಿದ್ದೆ;
ನೀನು ಮನೆಯನಾಳುವ ದೇವಿಯಂಕದಲ್ಲಿ
ಅಡಗಿದ್ದೆ ಪ್ರೇಮದರಗಿಳಿಯೆ ಮೋಹದ ಮುಗುಳೆ
ಯುಗದಾದಿಯಿಂದ ಮನೆಮಾಡಿಕೊಂಡು!

"ಚಿಕ್ಕಂದಿನೊಳಗೆನ್ನ ಹೃದಯ ಹೂವಿನಹಾಗೆ
ಅರಳುತ್ತಲಿರೆ ಮೆಲ್ಲಮೆಲ್ಲನೊಸೆದು,
ಹಕ್ಕೆಮಾಡಿದೆಯಲ್ಲಿ ಪರಿಮಳದ ರೂಹಿನಲಿ
ಹಸುಳೆ ಹರ್ಷದ ಹೊನಲೆ ಆಗ ನೀನು:
ನಿನ್ನ ಕೋಮಲ ಮಾರ್ದವವನು ಕೊಟ್ಟೆ
ನನ್ನ । ತರುಣಗಾತ್ರಕೆ ನನಗೆ ಅರಿಯದಂತೆ;
ಕರುಳೆ ಕರುಳಿಂದೊಗೆದ ವಾತ್ಸಲ್ಯದೊಳ್ಳೂಗೆ
ಮರೆವು ಬಂದಾವರಿಸಿ ಮುಚ್ಚಿತದನು!

"ಹೊಳೆವ ಹೊನ್ನೊಡವೆಗಳ ಮುದ್ದುಕುವರನೆ ನೀನು
ನಿತ್ಯನವಿಕಾರನುಷೆಗೋರಗೆಯಹೆ,
ಇಳೆಯ ಬರಿ ಕನಸುವಾಳ್ಮಡುವಿಂದ ಮಿಂಚೆದ್ದು
ಆನಂದವರ್ಷಿಸಲು ಹುಟ್ಟಿಬಂದೆ;
ಮಗುವೆ ಮಾಣಿಕವೆ ನನ್ನೆದೆಯ ಜೊತೆಗೆ
ಆಡ।ಬಂದೆ ನಿಜವಸ್ತುವೊಂದಾಗಿ ಕಡೆಗೆ
ಮನವ ಹೊಕ್ಕೆನ್ನನುರೆ ಮೋಹಗೊಳಿಸದೆ ಮುದ್ದು
ಮೋಹನನೆ ಮಂಜುಳಾಕಾರದಿಂದ!

"ನೋಡನೋಡುತ ನಿನ್ನ ಮುಗ್ಧ ಮುಖದಲಿ ನಲಿವ
ಅದ್ಭುತ ವಿಳಾಸವನು ಅರಿಯದಾದೆ;
ಎಲ್ಲರಿಗೆ ಸೇರಿದವನಂತಿರಲದೆಂತು ನೀ
ನೆನ್ನವನೆನಿಪ್ಪೆ ಎಲೆಮಗನೆ? ನಾನು
ನಿನ್ನದರೊಳೆನ್ನೊಡಲ ಮುದ್ದಿಸುತಿಹೆ
ನೀನು।ಉದಯಿಸಿರೆ ತಾಯ್ಗೊಬ್ಬ ಪುತ್ರನೆನಿಸಿ,
ನಗುನಗುತ ಹಗುರವಾಗೆಯ್ತರಲು ಈ ಜಗಕೆ
ಮಗುವೆ ನೀನೊಮ್ಮೆ ನನ್ನುದರದಿಂದ!

“ಕಳೆದುಕೊಂಡೇನೆಂಬ ಬೆದರಿಕೆಯ ಭರದೊಳಗೆ
ಎದೆಗೊತ್ತಿಕೊಂಡಿಹೆನು ಕಂದನಿನ್ನ;
ಅತ್ತುಕೂಗುವೆನೊಂದುಗಳಿಗೆ ಪುತ್ಥಳಿ ನಿನ್ನ
ಮುದ್ದುಮೊಗವನು ಕಾಣಲಾರದಿರಲು;
ಈ ನನ್ನ ಸುಕುಮಾರ ಹಸ್ತಗಳಲಿ
ಜಗದ।ಐಶ್ವರ್ಯಸಾರವನು ಸೆರೆಯಿಟ್ಟುದು
ಅವಮಾಯೆಯೊ, ಅದರ ಹುಟ್ಟುಗುಟ್ಟುಗಳಿರವು
ಮಗುವೆ ಎದೆಯೊಲವೆ ನನಗರಿಯದಿಹುದು!”

ಅನುಭವ

ಕವಿಯಿರಲಿ ರವಿಯಿರಲಿ ಭವಿಯಿರಲಿ ಬುವಿಯೊಳನು
ಭವದ ಮಾತೇಮಾತು ಅರಿಯ;
ಸವಿಯಿರಲಿ ಕಹಿಯಿರಲಿ ಅದನೊಪ್ಪದಿರಲಹುದೆ
ಸವಿದಹಣ್ಣಿನ ತಿರುಳರುಚಿಯ?

ಕಲ್ಪನೆಯತಲ್ಪದಲಿ ಪವಡಿಸಿಹ ನುಡಿಗಳಿಗೆ
ಬಲ್ಪು ತಿಳಿದೀತೆ ಅನುಭವದ?
ಸ್ವಲ್ಪವಾದರು ಒಲಿದ ತೋಳ ತೊಟ್ಟಿಲೊಳಿರದ
ಅಲ್ಪಮತಿಗರಿವೆ ಹೆಣ್ಬಿನದ?

ಎವೆಯಿಕ್ಕದೆಳನೀರ ನೋಡೆ ರುಚಿ ತಿಳಿದೀತೆ,
ಕವಿಯಾದರವನ ಹೆಚ್ಚೇನು?
ನವನವೋನ್ಮೇಷಶಾಲಿಗಳಿಗೂ ಅನುಭವದ
ಕವನಕಾರರ ಮಾತೆ ಜೇನು!

ತಾನೀಂಟಿ ತಿಳಿದ ಮೊಲೆವಾಲ ಸವಿಯನು ಕಂದ
ಮೌನಹಾಸದಿ ತಿಳಿಸನೇನು?
ತಾನಳೆದ ಅನುಭವದ ಸಾರವನು ಕಬ್ಬಿಗನು
ಹೇಳಲದು ರಸಕಾಮಧೇನು!

ಬಿದಿಬರೆದುದೊಮ್ಮೆ ಬದಲಾಗಬಹುದೆಂದರೂ
ಎದೆಯೊರೆದುದೆರಡಾಗದಿಹುದು;
ಚದುರನುಡಿಸಾಸಿರವ ಪೇಳಿದರೆ ಫಲವೇನು?
ಎದೆಯಮಾತೊಂದೆ ದಿಟವಿಹುದು!

ಕದನದಿಂದಂಜಿಬಂದವನ ಬೆಳ್ನುಡಿಗಿಂತ
ಅದನೋಡದವನ ನುಡಿಕೀಳು;
ಉದದಧಿಯಾಳದೊಳಿರುವ ನವರತ್ನಗಳಿಗಿಂತ
ಎದೆಯಾಳದನುಭವವೆ ಮೇಲು!

ಬೆಟ್ಟ ಕುಳಿ

೧

ಹಸಿರ ಹಾಸಿನಲಿ ಹರಿದುಹೋದ ಮನ ಬಾರದಕ್ಕ ಹಿಂದೆ,
ಕಣ್ಣೆಸುಗೆ ಕಾಣದಾಯ್ತನ್ಯ ವರ್ಣವನು ಬೆಟ್ಟಕುಳಿಯ ಮುಂದೆ।
ತಂಪ ತಣಿಸಿ ಕೊಡುವಂಥ ಚಮತ್ಕಾರಿ
ಹಸಿರನುಟ್ಟ ದಾರಿ,
ಹೂಗಂಪನೆನಸು ಸೂಸುತ್ತ ಸುಳಿವಗಾಳಿ
ತುಸೂ ಇಲ್ಲ ಧೂಳಿ;
ಚಿಕ್ಕ ಚಿಗುರುಗಣ್ಣರಳಿಸಿ ನಿಂದಿರೆ
ಬೆಟ್ಟದರಸನೊಡನಾ ಕುಳಿಯಿಂದಿರೆ,
ಮುಟ್ಟಿ ನಡೆವ ಮೆಲ್ಲೆಲರೆಯ್ತಂದಿರೆ,
ಎಷ್ಟು ಸೊಗಸು ನೋಡಕ್ಕ
ಹುಟ್ಟು ಕುರುಡನೀನೆಲದಲಿ ನಿಂದಿರೆ
ದಿಟ್ಟಿ ಪಡೆಯದಿರನಕ್ಕ!

೨

ಕಡಲಿನಿಂದ ಧಡಲೆಂದು ತೆರೆಗಳಪ್ಪಳಿಸೆ ಸಪ್ಪಳಿತ್ತ
ಬೆಂಬಿಡಿದು ಬಂದರೂ ಬೆದರದಿದರ ಈ ಶಾಂತವೀರ ಚಿತ್ತ।
ಅಲ್ಲಿ ಸಿಂಧುತಟದಲ್ಲಿರೆ ಹೌಹಾರಿ
ಧೈರ್ಯ ಹೋಯ್ತು ಜಾರಿ;
ಈ ಮಲ್ಲಿಗೆಗಂಪಿನ ತಾವನೀಗ ಸೇರಿ
ತಣಿದನೀವಿಹಾರಿ
ದನದ, ಧನದ ಜನ ಮನದ, ವನದ ಚಂ–
ದನದ, ಚೆಲುವ ಚಪ್ಪರದ, ತಳಿರ ತೋ–
ರಣದ, ಬಸದಿ ಬಾವುಟದ ಮೈಸಿರಿಯ
ಕುರುಹು ತೋರುತಿಹುದಕ್ಕ
ಹಿಂದಿನ ವಿಭೂತಿಯವಶೇಷದಿಂದ ಕ–
ಲ್ಪನೆಗೆ ಮೂಡಿತೇ ಪಕ್ಕ!

೩

ಕೃತಕ ಪೇಟೆಯಲಿ ಕೃತಕ ಜೀವಿಗಳ ಕೃತಿಯ ಕಂಡರೇನು?
ಸರlಕೃತ ವಿಶಾಲ ವಿಪಣಿಯನು ನೋಡು; ಸೌಂದರ್ಯಧೇನು
ಸಾನು!
ರಾಜ ರಾಣಿಯರ ರತ್ನ ಮಂಟಪಕ್ಕೆ
ಹಾಕಿದ ಯಮತೆಕ್ಕೆ;
ನಿlರ್ವ್ಯಾಜರಮ್ಯ ಭೂರಮೆಯ ಸೌಂದರಕ್ಕೆ
ಆಗಲಿಲ್ಲ ಧಕ್ಕೆ!
ಹೊಳೆಯ ಹಳ್ಳಗಳ, ಮಳೆಯ ಕೊಳ್ಳಗಳ
ಗಿರಿಯ ಮೋಡಗಳ, ದರಿಯ ಗೂಢಗಳ
ಮೆರೆವ ನೋಟದಲಿ ಹಸಿರ ತೋಟದಲಿ
ಹಾಯಲೆಷ್ಟು ಸೊಗಸಕ್ಕ–
ಇಳೆಯೆ ಸಾಕು ಮತ್ತಿದರ ಸುತ್ತ ಆ
ಸಗ್ಗವನ್ನುಸುಳಿದಿಕ್ಕs!

೪

ಹಗಲಿನಲ್ಲಿಯೂ ಸೊಗಯಿಸುವೆನುಯೆಂದಾ ಸುಧಾಂಶುವಿಲ್ಲಿ
ಬಾlನಗಲಿ ಗುಡ್ಡಮೆಯ್ಗೊಂಡು ಬಂದನಿದೊ ಹರಿತವರ್ಣದಲ್ಲಿ;
ಜಲಧಿಯಲ್ಲಿ ಜಲರೂಪ ಬೇಸರಾಗಿ
ತೆರೆಗಳಿತ್ತ ಸಾಗಿ
ತlಣ್ಣೆಲದ ಮೇಲೆ ಮಲಗಿಹವು ಬೆಟ್ಟವಾಗಿ
ಹಸಿರು ತಲೆಯ ತೂಗಿ
ಆತ್ಮ ಆತ್ಮ ಮಾತಾಡುವ ಮನೆಯಿದು,
ಪ್ರೀತಿ ಪ್ರೀತಿಯಲಿ ಬಿಟ್ಟಿಹ ತೆನೆಯಿದು,
ಧಾತ್ರಿದೇವಿಯೆದೆ ಸೊಬಗಿನ ಕೆನೆಯಿದು,
ಚೊಕ್ಕದಲ್ಲಿ ಬಲು ಚೊಕ್ಕ–
ಪರlಮಾತ್ಮನೆಡೆಗೆ ಸೋಪಾನ ಪಂಕ್ತಿಯಿದು
ನೋಡ ಬಾರ ನನ್ನಕ್ಕ!

“ಏೀ”ಮಾತು, ತಿಳಿದೆನಿಂದು!

ಕನ್ನಡಿಗರೆ ಸಂಗಡಿಗರೆ
ನೋಡುವುದಿನ್ನೇನು?
ಕನ್ನಡತಾಯ್ ಕರೆವಳು ನಡೆ
ನಡೆಯಿರಿ ನೀವಿನ್ನು!

ಏಳಿರಿ ಎದೆಗೆಚ್ಚಿನ ಗಂ
ಡಾಳುಗಳೆ ಪರಾಕು;
ನಾಳೆಯ ನೆಚ್ಚದೆ ಕಜ್ಜದೊ
ಳುಜ್ಜುಗಿಸಲೆ ಬೇಕು!

ಒಂದೇ ಬೆಳ್ಗೊಡೆಯಲಿ ಬೆಳೆ
ದೀ ಕನ್ನಡನಾಡು
ಇಂದೆಂತಿದೆ? ಎತ್ತಲು ಹರಿ
ಹಂಚಾಗಿಹ ಪಾಡು!

ಜಡರಂದದಿ ಸುಮ್ಮನಿರ
ಲ್ಕಿದು ಸಮಯವೆ ಅಲ್ಲ;
ತಡಮಾಡುವುದೊಳ್ಳಿತೆ, ಕ
ನ್ನಡಿಗರೆ ಅದು ಸಲ್ಲ!

ಒಂದೇ ನಡೆ ಒಂದೇ ನುಡಿ
ಇಂತಿರಲಿನ್ನೇನು?
ಒಂದಾಗಿರಲಾರೆವೆ, ನಾ
ಡೊಂದಾಗದೆ ತಾನು?

ಒಂದಾಳಿಕೆ ಒಂದಿರುವಿಕೆ
ಒಂದೊಡನಾಟಗಳ
ಇಂದೇ ಹೊಂದುವ ನಡೆಯಿರಿ
ಮುಂದಕೆ ಬಂಧುಗಳೇ!

ಮತಿಗೆಟ್ಟವರೊಬ್ಬಿಬ್ಬರು
ತಡೆದರೆ ನಿಲ್ಲುವುದೇ?
ಗತಿಯಿನ್ನೇಂ? ಚಲದಿಂದು
ನ್ನತಿಯನು ಸಾಧಿಪುದೆ!

ಸ್ವಾಯತ್ತದ ಪೌರುಷವನು
ಮೆರೆಯಿಸಲಿದೆ ಕಾಲ;
ತಾಯ್ನಾಡಿನ ಸೇವೆಗೆ ಮುಂ
ದಡಿಯಿಡುವುದೆ ಶೀಲ!

ಎಣ್ದೆಸೆಯಲಿ 'ಬಂದೆವಿದೋ'
ಎನ್ನಿರಿ; ತಾಯಡಿಯ
ಕಣ್ದೆರೆದೆರಗುತ ಗೆಳೆಯರೆ
ತೊಡಿ ನೀವ್ ಗಂಡುಡೆಯ!

ತಡೆಗಟ್ಟಲಿ ದೈವವು, ಹಿಂ
ದಡಿಯಿಡದಿರಿ; ಯುದ್ಧ
ಕಡೆಗಾಣಲಿ ಬಲ್ಮೆಯ ಕ
ನ್ನಡಿಗರೆ ಜಯ ಸಿದ್ಧ!

ಸೌಂದರ್ಯಸೂಕ್ತ

ಬಾರಾ ನವಸುಮಕೋಮಲ ಯುವತಿ,
ಸಾರಸ್ವತ ಸೌಂದರ್ಯದ ಮೂರ್ತಿ ॥ಪ॥

ಬನಗಳ ಹೂಗಳಲಿಹ ಸಿಂಗಾರ,
ತನುಗೊಂಡೆನ್ನೆದೆಯಲಿ ಮೆಯ್ದೋರ!
ಎಣಿಸಿದೊಡನೆ; ಸೌಂದರ್ಯದಪೂರ,
ತಣಿವಿನ ತವರೇ ತಳುವದೆ ಬಾರ!

ಸುಗುಣದ ಸುಂದರ ಚಿತ್ರವತಾರ,
ಜಗದ ಜನದ ಜೀವನಸುಖಸಾರ!
ಮುಗಿಲಿನ ಮುಸುಕಿಂ ಮೊಗವನು ತೋರ
ಬಗೆದಲ್ಲಿಯೆ; ತವಮಹಿಮೆಯಪಾರ!

ಬೆಡಗಿನ ಲೀಲೆಯನೊಪ್ಪಿದ ಹಾಸ,
ತಡೆಯಿಲ್ಲದ ಸರಳತೆಯ ವಿಳಾಸ
ಚೆಲುವೇ ನಿನ್ನದು; ನಿನ್ನಾವಾಸ
ಒಳಗಿದೆ; ಆಯ್ತಿಂದಾತ್ಮವಿಕಾಸ!

ಕೋಗಿಲೆ ಕೊರಳಲಿ ಮೃದುತರ ಸರವೇ
ಬಾಗಿದ ಮೇಘದ ಘನತರ ಸರವೇ
ತೂಗುತ ತೆರೆ ತೆರೆತೆರೆಯುತ ಬಾರ
ರಾಗರಸದ ರಂಗೇ ಬಳಿಸಾರ!

ಚೆಲ್ವಿಕೆಯನು ಚೆಲ್ಲುತನಡೆತಂದೆ,
ಎಲ್ಲೆಲ್ಲಿಯು ನಿಲ್ಲದೆ ನೀ ಬಂದೆ;
ಮೆಲ್ಲಗೆ ಮಲ್ಲಿಗೆಗಂಪನು ತಂದೆ,
ಮೆಲ್ಲೆಲರಲಿ ಮಾತಾಡುತ ನಿಂದೆ!

ಮಗುವಿನಯೆದೆಯಲಿ ಮುಗುದತೆಯಾದೆ
ಚಿಗುರುವ ಪ್ರಾಯದಿ ಪ್ರೇಮದ ಬಾಧೆ;
ಮಗುಳುನ್ನತ ನಿಷ್ಕಾಮವು ಆದೆ,
ಜಗದಂತರ್ಧ್ವನಿ, ದೇವನಿರಾದೆ!

ಅಂಬರದಲ್ಲಿ ದಿಗಂಬರವಸ್ತು,
ನಂಬಿದರಲ್ಲಿ ಮುದಂಬರ ಚಿತ್ತು;
ಹಂಬಲಿಸುವರಲಿ ಹಾಡಿನ ಬಿತ್ತು,
ತುಂಬಿದ ನೇಹವು ತೂರುವ ಮುತ್ತು!

ಹಳ್ಳಿಯ ಬಳ್ಳಿಯ ತಳ್ಳಿಯ ತೂಗೇ,
ಒಳ್ಳೆಯ ಜೀವದ ಒಳಗಿನ ಕೂಗೇ,
ನೀಲಾಭ್ರದಿ ನಲಿದಾಡುವ ಮಿಂಚೇ,
ತೂಲಾವಿದ್ಯೆಯ ತೊಲಗಿಸ ಸಂಚೇ!

ಜೀವಕೆ ಜೀವವ ಬೆಸೆಯುವ ಗತ್ತೇ,
ಭಾವಿಕವುಣ್ಣುವ ತನಿರಸದುತ್ತೇ,
ನಾನೆಂಬುದ ನುಂಗಿದನುಡಿ ರನ್ನ,
ಜಾನಿಸಿ ಜಾನಿಸಿ ಪಡೆದೆನು ನಿನ್ನ!

ಅಂತಃಕರಣ ಸಮುದ್ರಜ ವಿಧುವೇ,
ಚಿಂತಾರತ್ನಜ ನೂತನ ವಧುವೇ,
ಚಿಂತಿಸಿದೆನ್ನೆದೆಗೊದಗಿದ ಮಧುವೇ,
ಸಂತಸಸೌಜನ್ಯಂಗಳ ಮದುವೇ,

ಎಳೆಮನವರಳಿಪ ವಿಷಯದ ಶೋಧ,
ಅಳಿಮನವುಳಿಸುವ ಬಲುಹಿನ ಬೋಧ,
ಇಳಿಮನವೇರಿಪ ಉತ್ಸವನಾದ,
ಕೆಳಮನಕುಣಿಸುವ ವಾಕ್ಯ ವಿನೋದ!

ಬಾರಾ ಭಾವನ–ದಂಡಿಗೆಯಲ್ಲಿ,
ಬಾರಾ ಪ್ರೇಮದ ಗುಂಡಿಗೆಗಿಲ್ಲಿ;
ಸಾರಸ್ವತ ಕಾಂತಾರದ ವಲ್ಲಿ,
ಧೀರತ್ವಕೆ ಮೆಚ್ಚನು ನೀಡಿಲ್ಲಿ!

ಮನಸಲಿ ಕನಸಲಿ ಮನೆಯನು ಮಾಡ,
ಜನುಮಜನುಮಬಾಂಧವ್ಯವ ಬೇಡ;
ಅನುಮಾನಿಸದೊಲ್ಮೆಯ ಮೆಯ್ಗೂಡ,
ತನುಮನದೀ ತಾರುಣ್ಯವ ಕೂಡ!

ಮುದ್ದುಮಾತಿನರಗಿಣಿಯವತಾರ,
ಸದ್ದುಮಾಡದಡಿಯಿಡುವುದದಾರ?
ಗದ್ದವ ಹಿಡಿದಾಡುವ ಕೈತಾರ,
ಮುದ್ದಿನಕಣಿ ಸೌಂದರ್ಯವೆ ಬಾರ!

ಮುತ್ತಿನಮಣಿಗಳ ಮಾಲೆಯ ಧರಿಸಿ,
ಹತ್ತಿರ ಮಂಗಲವಾದ್ಯವ ಕರೆಸಿ,
ಎತ್ತಿದ ಹಾರವನೆದೆಗೇ ತಾರ,
ಮತ್ತೇನಿದೆ ಸಂತಸದ ವಿಚಾರ!

ಶರತ್ಕಾಲ

೧

ಮಂದಾನಿಲನಕೂಡ ಮಾತಾಡುತಿರುವಂತೆ
ತೆಂಗು ಕೌಂಗುಗಳು ತಲೆಯಾಡಿಸುತಿವೆ;
ಅರಳಿಯೆಲೆ ಮರಮರಳಿ 'ಶ್ರಾವಣದ ಸಿರಿಬೆಳಗು
ಹರಳು ಹರಳೆಂದು' ಹಂದಾಡುತ್ತಿದೆ!
ಇದಿರ ಗುಡ್ಡವು ಕೂಡ ಅಹುದೆನ್ನುವಂತಲ್ಲಿ
ಮರ–ಮಕುಟವನ್ನು ತೂಗಾಡಿಸುತಿದೆ;
ತೆಂಗುಗಳ ನಡುವಿರುವ ಪೇರಿಳೆಯು ಮಾತಿಂಗೆ
ಹೂಂಗುಟ್ಟಿ ಕೊಂಬೆಗೈ ಬೀಸುತಲಿದೆ!

೨

ಹಸಿರುಟ್ಟ ಭೂದೇವಿ ಹಾಯಾಗಿ ಮಲಗಿಹಳು
ದಣಿವುಗಳೆಯಲು ಧೇನು ಮಲಗಿದಂತೆ:
ಅಳಿಗಿಳಿಗಳತ್ತಿತ್ತ ಹೂ ಹಣ್ಣ ಹುಡುಕುತಿವೆ
ಬಂದು ಪಶ್ಚಿಮ ಘಟ್ಟದತ್ತಣಿಂದೆ!
ಎಳಬಿಸಲ ಹೊಳಪನ್ನು ಪಡಿಗೊಡುವ ನದಿ ನದಗ
ಳಿಳಿದೆಯ್ದುತಿವೆ ಮೆಲ್ಲನಬ್ಧಿಯತ್ತ;
ಚಳಿಗಾಲ ತುದಿಗಾಲನೂರಿಹುದು; ಅರೆಮಾಗಿ
ಕೆಳಗೆ ತಲೆ ಹಾಕಿಹುದು ಗದ್ದೆ ಬತ್ತ!

ಇಂಥ ಕಾಲದ ಸೊಬಗನಿಂಥ ದೇಶದ ಬೆಡಗ
ಕಂಡೆ; ಕಂಡಾಗುವುದೆ ಸುಖವ ಪಡಲು?
ಎಂಥ ಚಂದವೆ ಇರಲಿ ಬುವಿಬಾನು ಸೊಗಯಿಸದು
ಅಂತರಂಗದಿ ದಾಸ್ಯದಗ್ನಿ ಸುಡಲು!

ಶರದ ಕಾಲವೆ ಇಂದು ಬರದ ಕಾಲವೊ, ಬೀದಿ
ತುರುಗಳಿಗು ಕಡೆ ನರರಹಿಂಡು; ಭೂಮಿ
ಕರೆವ ಸುಖ ಸಾಧನವನುಣಬಿಡನು ಪಶ್ಚಿಮದ
ದೊರೆ ರಾಜ್ಯ ತೃಷ್ಣಾತರಂಗಗಾಮಿ!

ಮಕ್ಕಳಿಗೆ ಕರೆ

ಮಕ್ಕಳೆ ಎದೆವನೆಯೊಕ್ಕಲೆ ಬನ್ನಿ
ಓಡಿ ಓಡಿ ಬನ್ನಿ;
ಅಕ್ಕರೆಯೆನ್ನುವ ಸಕ್ಕರೆಯಿದಕೋ
ತಕ್ಕೊಳ್ಳಿರಿ ಬನ್ನಿ! ॥ಪ॥

ಮುಗಿಲಿನ ಮಕ್ಕಳೆ ಮಸಗುತ ಬನ್ನಿ,
ಹಗಲಿನ ಮಕ್ಕಳೆ ಹೊಗರನು ತನ್ನಿ,
ನಗಗಳ ಮಕ್ಕಳೆ ನೆಗೆಯುತ ಬನ್ನಿ
ರಗಳೆಯ ಮಕ್ಕಳೆ ರಾಗವ ತನ್ನಿ!

ಜಾರಿ ಬನ್ನಿರೋ,
ಹಾರಿ ಬನ್ನಿರೋ,
ಓಡಿ ಬನ್ನಿರೋ,
ಕೂಡಿ ಬನ್ನಿರೋ!

ಕುಣಿಯುತ ಬನ್ನಿ,
ಮಣಿಯುತ ಬನ್ನಿ,
ಉಲಿಯುತ ಬನ್ನಿ,
ನಲಿಯುತ ಬನ್ನಿ!

ಅಂಬೆಗಾಲನಾಡಿಸಿ ಬನ್ನಿ,
ತುಂಬೆಗಾಲ ನೀಡಿಸಿ ಬನ್ನಿ,
ತಪ್ಪುಗಾಲ ತಾಗಿಸಿ ಬನ್ನಿ,
ತಿಪ್ಪುಗಾಲ ಬಾಗಿಸಿ ಬನ್ನಿ ॥ಮಕ್ಕಳೆ...

ಸಣ್ಣ ಹೆಣ್ಣೆ ನೀಸಾಗಿತ್ತ,
ಬಣ್ಣದವೊನಕೆಯ ತಾಯಿತ್ತ;
ಬೆಣ್ಣೆಯ ಕೊಡುವೆನು ಬಾಯೆತ್ತ,
ತಿನ್ನು ತಿರುಗು ಬೇಕಾದತ್ತ!

ಚಿಕ್ಕಪೋರ ಚಂಚಲ ಗುಣಹಾರ,
ಚೊಕ್ಕ ಚಂದ್ರ ಚಲುವಿನ ಚಿತ್ತಾರ!
ರೊಕ್ಕ ಝಣರೆನುತ್ತಿದೆ ಹಿಡಿಬಾರ,
ತಕ್ಕೊಡುವೆನುಬಾ ಬಣ್ಣದ 'ಕಾರ'!

ಅಲ್ಲಿ ಇಲ್ಲಿ ಬಂದಾಡುವ ಹಾಡುವ
ನೋಡುವ ಮರಿಯಾರು?
ಬೆಲ್ಲ ಕೊಬ್ಬರಿಯ ಮೆಲ್ಲಗೆ ಮೆಲ್ಲಗೆ
ಮೆಲ್ಲುವವರು ಯಾರು?

ಎತ್ತಲು ಜಗದಲಿ ಸಾವೋ ನೋವೋ,
ಚಿತ್ತದೊಳೆಲ್ಲೂ ಕಾವೋ ಬೇವೋ!

ಮುಗ್ಧತೆವೆತ್ತಿಹ ಮಣಿಗಳಿರಾ,
ಸ್ನಿಗ್ಧತೆ ತುಂಬಿದ ಖಣಿಗಳಿರಾ!
ಪಾಪವನರಿಯದ ತಾಪವ ತಿಳಿಯದ
ಆ ಪರಮೇಶ್ವರ ರೂಪವ ಹೋಲುವ

ಮೃದುಮಧುರಾತ್ಮದ ಯತಿವರರೇ,
ಅಧರಾಮೃತವನು ಕೊಡಿ ಸುರರೇ ॥ಮಕ್ಕಳೆ...

ನೀವೇ ಚಿನ್ನದ ಬೊಂಬೆಯರು,
ನೀವೇ ರತ್ನದ ರಂಭೆಯರು,
ನೀವೇ ಗಣ್ಯ,
ನೀವೇ ಪುಣ್ಯ!

ಜೀವನವನದಲಿ ನೀವೇ ಹೂವು,
ಭಾವನೆಯಲಿ ಬರಿ ನಿಮಗೇ ಠಾವು;
ಸಣ್ಣವರಾಗಿಹ ನರರೇ ಚೆನ್ನ,
ದೊಡ್ಡವರಾದರೆ ಹೊಯ್ವರು ಕನ್ನ!
ನಂದನವನದರವಿಂದಗಳೇ,
ಮಂದಾರದ ಮಕರಂದಗಳೇ,
ರಸರೂಪಗಳೇ,
ಹೊಸ ದೀಪಗಳೇ,

ದೆಸೆದೆಸೆಗೋಡುವ ಚಿಟ್ಟೆಗಳೇ,
ಮಿಸುನಿಯರಾಗದ 'ಮಿಟ್ಟೆ'ಗಳೇ,
ಆನಂದಾಂಭೋರಾಶಿಯ ತೆರೆಗಳೆ
ತೇಲಿತೇಲಿ ಬನ್ನಿ;
ಚೀನಾಂಬರವನು ತೊಡಿಸುವೆ, ತಲೆಯನು
ತೂಗಿ ತೂಗಿ ಬನ್ನಿ!
ತೆಕ್ಕನೆ ಬನ್ನಿ,
ಫಕ್ಕನೆ ಬನ್ನಿ–

ಮಂಗಲಮಯ ಜಲ್ಪನೆಗಳಿರಾ,
ತಂಗಾಲದ ಕಲ್ಪನೆಗಳಿರಾ,
ತಾವರೆಗಳಿರಾ ದೇವತೆಗಳಿರಾ,
ನೀವೇ ನನ್ನುಸಿರು;
ನಾನೇ ಕರೆಯಲು ನೀವೇ ನೆರೆಯಲು
ಲೀಲೆಗೆ ಮತ್ತೆ ಶುರು! ॥ಮಕ್ಕಳೆ...

ಯುದ್ಧಾಯ ಯುಜ್ಯಸ್ವ

ಎಲೆ ಹೃದಯ ನಿನ್ನ ಕಳವಳವಕಂಡು ನಗೆ
ಬರುವುದೆನಗೆ ಬಹಳ;
ಎಲೆಲೇ ಎಂಥ ಮೃದು ಕುಸುಮವಾದೆ, ನೀ
ನಹಹ! ಏನು ಸರಳ!

ಇದು ಏನು ದುಗುಡ ಮತ್ತೇನು ಮರುಕ, ಇದು
ಯಾವ ಬಗೆಯ ನಡುಕ?
ಹೆಣ್ಣಾದೆಯೇನು, ಹುಣ್ಣಾದೆಯೇನು? ತೆಗೆ
ನೂಕು ಇಂಥ ತೊಡಕ!

ಹುಲ್ಲಿಂಗೆ ಹೆದರುವರೆ ಸಾಕು ಸಾಕು; ಮೇ
ಲೆತ್ತು ವಜ್ರಹಸ್ತ
ಕಲ್ಲನ್ನೆ ನುಂಗಿ ನೀರ್ಕುಡಿದ ಬಂಟನಿಗು
ಕಲಿಸಬಹುದು ಶಿಸ್ತ!

ಮೂರ್ಖರಿಗೆ ಎತ್ತದಿರೆ ಮತ್ತೆ ದೇವ ನಿನ
ಗೇಕೆ ಮುಷ್ಟಿಯಿತ್ತ?
ನೂರ್ಕಾಲ ಬದುಕಿ ಫಲವೇನು, ಹೇಡಿ ತಾ
ನಿದ್ದು ಯಿದ್ದು ಸತ್ತ!

ಬದುಕಿನಲ್ಲಿ ಬದುಕಬೇಕೆಂಬ ಬಯಕೆಯಿರೆ
ಆಗು ಶೂಲಪಾಣಿ
ಎದುರಿಸುವ ಕುಜ್ಞತಾಮಸರನಿರಿದು ಕೊ–
ಲ್ಲೆಂಬುದಮರವಾಣಿ!

ವಿಧಿವಾದ ಶರಣತೆಯ ನಂಬಬೇಡ, ನಡೆ
ತಿಳಿವನೀಂಟಿ ತೇಗು–
ಅಧಿಕಾರದಿಂದ ಭಯವೃತ್ರನನ್ನು ಅರಿ
ದೊಗೆದು ಇಂದ್ರನಾಗು!

ಈ ಆತ್ಮ ತಾನು ಬಲಹೀನಲಭ್ಯನ
ಲ್ಲೆಂಬುದರಿಯೆಯೇನು?
ಕ್ಷುದ್ರಾತ್ಮರೆಂದುದಕೆ ಹೆದರಿ ನಡೆಯೆ
ಧೀಶಕ್ತಿ ಸತ್ತಿತೇನು?

ಶ್ರೀಮಂತಗಿಂತ ದುರ್ದಾಂತ ದೇಹಬಲ
ವಂತನಾದರೇನು?
ಧೀಮಂತನಾಗಿ ವಿಕ್ರಾಂತ ಪಾದದಿಂ
ಮೆಟ್ಟಿ ಆಗು ಭಾನು!

ಬಲು ಹೆದರಿ ಹೆದರಿ ನಡೆವಾತ ಸಾವನಕ
ಹೆದರಿ ಸಾಯಬೇಕು;
ಮೈಮುದುರಿ ಕುಳಿತವನು ಮದುರಿ ಮುದುರಿ ಮ–
ಣ್ಣಾಗಿ ಹೋಗಬೇಕು!

ಈ ಪ್ರಕೃತಿಯನ್ನು ಗೆದ್ದಾಳಬಯಸುವಗೆ
ಪುರುಷಕಾರಬೇಕು;
ಸ್ವಪ್ರಕೃತಿಯಾದ ದುರ್ದಮ್ಯ ತೇಜವನು
ಬೆಳಗಿ ತೋರಬೇಕು!

ಓ ಎದೆಯೆ ಚಂದ್ರಹಾಸವನು ತುಡುಕು, ತಡ
ಮಾಡಬೇಡ ಹೂಡು–
ಸಿಡಿದೆದ್ದು ಕಾಲದಿ ವಿರುದ್ಧ ಶಕ್ತಿಗಳ
ಕಡಿದು ಚಂಡನಾಡು!

ಪೈಶುನ್ಯ ಪಶುವನಾಶ್ರಯಿಸಲೇನು ಶನಿ
ತಾಗಿತೇನು ನಿನಗೆ?
ಬರಿಶೂನ್ಯವಲ್ಲದಿನ್ನೇನು ಸಿಕ್ಕದೈ
ಮಾಡಲಂತು ಕೊನೆಗೆ!

ಹಿಡಿ ಕೊಡುವೆ ವೀಳ್ಯ "ಯುದ್ಧಾಯ" ಹೃದಯ "ಯು–
ಜ್ಯಸ್ವ" ದೈನ್ಯ ಬೇಡ
ನಡೆ ಇರುವೆ ನಾನು ಮತಿಕೃಷ್ಣ ಕಾರ್ಯರಥ
ನಡೆಸಲೀಗ ನೋಡ!

ಕನ್ನಡ ಕಡಲು ಸೀಮೆ

ಸಿರಿಯೆಂಬೆನು ಸರಿಯೆಂಬೆನು ಕನ್ನಡ ಕಲ್ಪದ್ರುಮಗಳೇ
ಹೊಳೆಯೆಂಬೆನು ನೆರೆಯೆಂಬೆನು ಕನ್ನಡ ಕಡಲೇ;
ಹಸಿರೆಂಬೆನು ಹೊಸತೆಂಬೆನು ಕನ್ನಡ ಜಗವೇ! ॥ಪ॥

೧

ಹೆಜ್ಜೆ ಹೆಜ್ಜೆಗೊಂದು ಹೊಳೆ,
ಗೆಜ್ಜೆಗಾತಿಯೊಂದು ಕಳೆ;
ಹಚ್ಚಹಸಿರು ತುಂಬು ಬೆಳೆ,
ಬೆಟ್ಟದಟ್ಟಹಾಸ–ಮಳೆ!

ದೋಣಿಸೇಣಿ ಹಡಗಗಿಡಗ
ಹತ್ತಿಬರುವ ಕಡಲ ಗುಡುಗ
ಕೇಳಿ ಕೇಳಿ ನುಡಿಯ ಬೆಡಗ
ಕಲಿತ ಜನವ ನೋಡು ಹುಡುಗ

ಕರ್ನಾಟಕ ನಂದನವನ–
ಪ್ರಕೃತಿಗಿಲ್ಲಿ ಚಿರಯೌವನ;
ನೆಲಜಲಗಳ ಸಮಜೀವನ
ಮೂಡಿದ ಜನಮನ ಭಾವನ!

೨

ಎತ್ತೆತ್ತಲು ತೆಂಗು,
ನೀ। ಮತ್ತೆ ಮತ್ತೆ ತಂಗು;
ಪಚ್ಚೆ ಪಯಿರ ರಂಗು...
ಅದ।ರಲ್ಲಿ ತೃಪ್ತಿ–ಗುಂಗು!

ಕನ್ನಡಿತಿಯ ಪಾಡು
ಎಂತಿಹುದು ಕೇಳಿನೋಡು
ನಿನ್ನ ನುಡಿಗೆ ಜೋಡು
ಉತ್ತರದ ರೂಪ ಹಾಡು!

ಕೆಯ್ವೊಲದಲಿ ನೋಡೆ 'ನಟ್ಟಿ'
ಅವಳ ಕೈಯ ಕಮಲಗಟ್ಟಿ;
ಕರೆದು ನೋಡು ಕೈಯ ತಟ್ಟಿ;
'ಗುರುಬಿ'ನಿಂದ ಬರ್ಕು ದಿಟ್ಟಿ;

೩

ಆ ನೀರಲಿ ನಿಂತ ನೀರೆ–
ಗಿರುವುದು ಬರಿ ಸೀರೆ;
ಆಯೆದೆಯಾ ಕಾವ್ಯಧಾರೆ–
ಗಿಲ್ಲ ಮರೆಯು ಬೇರೆ!

ಅವಳೂರಿನ ಅರೆನುಡಿ
ಕನ್ನಡನುಡಿ ಮುಂಗಿಡಿ;
ಕನ್ನಡ ಮೊದಲಿಗರಡಿ
ಮೂಡಿದ ನೆಲವದು ಮಡಿ!

ಯಕ್ಷಗಾನ ಲಕ್ಷ್ಮೀಸ್ವರ
ಧಿತ್ತೋಂತಕ ತರಿಕಿಟತರ
ನರ್ತನ ಕೌಶಲ ನಿರ್ಭರ,
ಸಹೃದಯ ಹೃದಯೋತ್ಸವಕರ!

೪

ತೆಂಗಿನುದ್ಧ ತೆರೆ
ಕಾನ್ನಡದ ವೀರ ಕರೆ;
ಮುಗಿಲ ತಡೆವ ನರೆ–
ಮೈಲುದ್ದ ಬೆಟ್ಟದೊರೆ!

ಇಂದ್ರ ಪೂಜೆ ಜೋರು,
ಅದಾಕಿಹುದು ತೆರೆಯ ತೇರು;
ಕಡಲ ನಟನ ಸಾರು,
ಆಕುಣಿತದಲ್ಲಿ ಸೇರು!

ಧೊಪ್ಪೆನ್ನುವ ಧುಳುಮೆನ್ನುವ
ಅಪ್ಪಳಿಸುವ ನೀರ್ಗೈಗಳ
ಸಪ್ಪುಳ ಮದ್ದಳೆ ಹೊಡೆತವು
ಕುಪ್ಪಳಕನುಗುಣವಿದೆಯಲ!

೫

ಮಲೆನಾಡಿನ ಮಲೆತ ಕಾಡು,
ಬಯಲು ಸೀಮೆ ಬಯಲು ಬೀಡು
ಇಲ್ಲಿಲ್ಲ; ಇದೊಂದು ನಾಡು
ಹಿತಮಿತ ಮೃದುಮಧ್ಯ ಜಾಡು!

ರತ್ನಾಕರವರ್ಣಿಯ ರಸ
ರತ್ನಾಕರವಿಲ್ಲಿದೆ; ಹೊಸ
ಮುದ್ದಣರೊಟ್ಟಿಕ್ಕಿದ ಜಸ
ಹೊನಲಾಗಿದೆ, ಅಲ್ಲಿದು ತುಸ!

ಎರಡು ಪಯಿರ ಹೊಲವೆ ಬಾಳ್,
ಕರಡಿ ಹರಿವ ಜಲವೆ ಬಾಳ್;
ತೆಂಗಿನ ತವರೂರೆ ಬಾಳ್
ತೆಂಗನ್ನಡ ನೀರೆ ಬಾಳ್!

ಹರಿಯಲೆಳಸುತಿಹುದು ಚಿತ್ತ

೧

ಹರಿಯಲೆಳಸುತಿಹುದು ಚಿತ್ತ
 ಹತ್ತಿರಕೆ
 ಹತ್ತಿರಕೆ
ಅರಳಿದರಳ ಕಂಪಿನೊಳಗೆ,
ತೆರೆದ ಬೆಳರ ತಂಪಿನೊಳಗೆ,
ತರಳ ತೆರೆಯಲಂಪಿನೊಳಗೆ,
 ತಿರುಳು ತಿರುಳಿಗೆ!
ಅಳುವಿನರೆಯ ತರಿದು ಮೋಹ
ಕೊಳೆಯ ತೊಳೆದು ತನ್ನತನದ
ಪರಿಗೆ ಭಂಗ ಬಾರದಂತೆ
ದಮದ ಕೈಯ ಚಾಚಿಯೆದೆಯ
ಸರಳಗತಿಯೊಳೆನ್ನ ಮನದ
ಮೂರ್ತಿಯಿರುವ ದೇಗುಲಕ್ಕೆ
 ಹರಿಯಲೆಳಸುತಿಹುದು ಚಿತ್ತ
 ಏಕಭಾವದಿ!

೨

ಪ್ರೇಮ ಶರಧಿ ತಲದಿ ರನ್ನದಂತೆ ತೊಳಗಲೆಳಸಿ ಸತ್ಯ
ಧಾಮದೆರೆಯನನ್ನು ಹುಡುಕಿ ನಡೆವೆನೆಂದು ನೆನಸಿ ನಿತ್ಯ
 ನೇಮದಗ್ನಿಯಲ್ಲಿ ತಪಿಸಿ
 ಶುದ್ಧ ಭಾವವೆನ್ನದಿಂದು
 ಕಲಹ ವಿರದ ಕಪಟ ಬರದ
 ಕುದಿತ ಕಳೆದ ಮಿದಿತವಿಳಿದ
 ತಿಳಿತನವನು ತೋರಿದೆ;

ಒಲವು ನಲವು ಸರಸ ಹಾಸ,
ಬೆರಕೆಯೆರಕ ರಸವಿಲಾಸ
ಇದೋ ಇವನು ಕೋರಿದೆ!

ಹರಿಯಲೆಳಸುತಿಹುದು ಚಿತ್ತ
ಎದೆಯ ಸಿರಿಯ ಸೂರೆ ಮಾಡಿ
ಮಧುವಿಗಿಂತ ಮಧುರವಾದ
ಮುದವ ಸವಿಯಲು!

೩

ಹಗುರವೆನಿಸುತಿಹುದು ನೇಮ,
ಚಿಗುರುತಿಹುದು ಒಳಗೆ ಪ್ರೇಮ;
ಬೆಳೆಯುತಿಹುದು ಮನದ ಆಸೆ,
ಒಳಿತ ಕಂಡೊಡನೆ ಪಿಪಾಸೆ

ಇಲ್ಲಿ ಬಾಳಿ ಇಲ್ಲಿ ತಾಳಿ
ಕೇಡನೆಲ್ಲ ಕಳಚಿ ಹೂಳಿ,
ನೇಹ–ನಿಧಿಯ ಸೂರೆಗೊಟ್ಟು
ಎದೆಗೆ ಎದೆಯ ಜೋಡಿಸಿಟ್ಟು,
ಅಂತರಾತ್ಮವನ್ನು ಕೂಡಿ
ಪ್ರಣಯಕಲಹವನ್ನು ಹೂಡಿ,
ಒಗೆಯುವಮೃತಬಿಂದುವ
ಕಂಡದರಾನಂದವ–
ಕೆಳೆಯರೊಡನೆ ತೆಗೆದು ಹಂಚಿ
ಹೀರಿಹಾಡಿ ನೋಡಲೇ?
ಈ ಕ್ಷಣವೇ ನಡೆಯಲೆ?

೪

ಬಾಳ ಹೂವು ಬಾಡುತಿರಲು, ಮನದ ಆಸೆ ಮಸುಳುತಿರಲು,
ಕನಸು ಕಂದಿ ಕರಗುತಿರಲು, ಪ್ರಾಯ ಹೋಗಿ ಮುಪ್ಪು ಬರಲು
ಏನಿದ್ದರು ವ್ಯರ್ಥವೆ!
ಅದಕೆ ಮೊದಲೆ ಏಳಬೇಕು,
ಮನವ ಮಡಿಯ ಮಾಡಬೇಕು,
ಒಳಗಿನಾತ್ಮದೊಳಗ ಕಂಡು
ಅಲ್ಲಿ ಮುಳುಗಿ ಮಿಾಯಬೇಕು;
ಹರಿಯಲೆಳಸುತಿಹುದು ಚಿತ್ತ
ಅದಕಾಗಿಯೆ ಹತ್ತಿರಕೆ–

ಹತ್ತಿರಿದ್ದು ದೂರವಾದ
ದೂರವಿದ್ದು ಸಣ್ಣದಾದ
ನೀರಗಡಲ ನೀರಮುಗಿಲ
ವಿಪುಲಬಾನ ವಿಸ್ತಾರದ
ಕಾಲಗತಿಯ ಕಾಣದಂಥ
ವಿಶ್ವಚುಂಬನೋತ್ಸಾಹದ
ಪ್ರೇಮಮೂರ್ತಿ ಇರುವೆಡೆ!

ಕಿನ್ನರ ಗೀತ

(ನಾಲ್ಕು ಕಥಾಕವನಗಳ ಸಂಗ್ರಹ)

ಕಿನ್ನರ ಗೀತ

"ಉದಿತ ದಿನ ಮುದಿತ ವನ
ವಿಧ ವಿಧ ವಿಹಗಸ್ವನ
ಇದುವೆ ಜೀವ ಇದು ಜೀವನ
ಪವನದಂತೆ ಪಾವನ"

ಎಂಬ ಕವಿಯ ನುಡಿಯ ಸವಿಯ
ಸವಿದೆನಿಂದು ಸಖಿಯರೇ
ತುಂಬಿದೊಲುಮೆ ಬಿಂಬಿಸಿರಲು
ಮುಖದಿ ಚಂದ್ರಮುಖಿಯರೇ!

[೧]ರವಿಯ ಸಂಜೆ ಹೆಜ್ಜೆಯಿಡಲು
ಕವಿಯ 'ಬೆಳಗು'ಕಾಣಿರೇ!
ರವಿಯ ಮಾಯೆ ಕವಿಯ ಛಾಯೆ,
ಇದರ ಮರ್ಮ ಬಲ್ಲಿರೆ?

ಇರುಳ ಹಗಲು ಮಾಡುವಂತೆ
ಮಿರುಗಿ ಮನವ [೨]ಬಳಸುವ
ತರಳದೃಷ್ಟಿ ನನಗೆ ಸಾಕು
ಅಮರನಾಗಲೆಳಸುವ!

---

೧. (ಕತೆಗಾರನಾದ) ಕಿನ್ನರನು ಇತರ ವ್ಯಕ್ತಿಗಳನ್ನು ಸಂಧಿಸುವುದು ನಿತ್ಯವೂ ಮಧ್ಯಾಹ್ನ ಮೂರು ಗಂಟೆಗೆಂಬುದು ಇಲ್ಲಿ ಸೂಚಿತವಾಗಿದೆ.

೨. ಬಳಸುವ, ಎಳಸುವ ಎಂಬ ಮಾತುಗಳು ಇಲ್ಲಿ ಬಳಸುವಂಥ ಎಳಸುವಂಥ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ; ಮುಂದೆ ಸಂದರ್ಭಾನುಸಾರ ಇಂತಹ ಶಬ್ದಗಳಿಗೆ ಬಳಸೋಣ, ಎಳಸೋಣ
ಎಂಬ ಅರ್ಥವನ್ನು ಕೊಡಲಾಗಿದೆ.

ಎಳೆಯ ಕೆಳೆಯ ಹುರುಪು ಗುಳ್ಳೆ–
    ಗುಳ್ಳೆಯಾಗಿ ಕಣ್ಣಿನ
ಕೊಳದಿ ತೇಲಿಬರಲು ಕಂಡೆ
    ಮೆಲುಪನಿಂದು ಹೆಣ್ಣಿನ!

ಇಂದು ವಯವು ಮೀರಲೆನ್ನ
    ಬಾಲ್ಯ ತನ್ನ ತೋರದು;
ಬಂಧವಿರದ ಬಂಧುರತೆಯ
    ಬಿಡಲು ಮನವು ಬಾರದು!

ಓದುವವರು ನೀವು ನಿಮ್ಮ
    ನೋದಿಸುವುದು ನನ್ನದು;
ಓದುಬರಹದೊಡನೆ ಸೊಗವ–
    ನೂಡಿಸುವುದು ನಿಮ್ಮದು!

ಒಂದು ಹಕ್ಕಿ, ಒಂದು ಹಾಡು
    ಒಂದು ಮಿಂಚು–ಗೊಂಚಲು–
ಎಂದು ಬಯಸಿದವನಿಗಿಹುದು
    ಇಂದು ಸೊಬಗು ಹಂಚಲು!

ಮಳೆಯ ಬಿಲ್ಲ ಬಣ್ಣಿಸುತ್ತ
    ಕಳೆದ ಕಾಲ ವ್ಯರ್ಥವು;
ನಲುಮೆ ಬೆರೆದ ನಿಮ್ಮ ಕದಪ
    ಕಾಂಬುದೊಂದೆ ಅರ್ಥವು!

ಏನು ಸಹಜ, ಏನು ಸರಳ
    ಎನಿಪ ಬಣ್ಣದೋಕುಳಿ
ನಾಣು ಮೊಗವನೇರಿದಾಗ
    ನನ್ನ ನಗೆಯ ಹಾವಳಿ!

ಎತ್ತ ಬಾನು ಎಲ್ಲಿ ನಾನು,
ಯಾವ ಲೋಕದೀಕ್ಷಣ?
ಮತ್ತರಿಂಗೆ ಎತ್ತಲೇನು,
ಎಲ್ಲ ಮತ್ತವಾಕ್ಷಣ!

ಬೆನ್ನಿಗಿದ್ದ ತಮ್ಮನೊಲವು
ನಿಮ್ಮ ಕಣ್ಣು ಹೊಕ್ಕಿತೋ,
ಅಮ್ಮನೀವ ಮುದ್ದುನಗೆಯು
ನಿಮ್ಮ ಮುಖದಿ ಸಿಕ್ಕಿತೋ!

ನುಣುಪು–ಹೊಳಪು [೩]ಜೊನ್ನದೊಡಲ
ನಿಮ್ಮ ಬಿಡದೆ ಅಪ್ಪಿದೆ;
ತೆಳಪು ತಾನೆ ಮೆಚ್ಚಿ ಬಂದು
ನಡುವಿನಲ್ಲಿ ಒಪ್ಪಿದೆ!

ತರಗತಿಯಲಿ 'ತರಗತಿ'ಯನು
ಕಾಣಲಾರೆನೊಲುಮೆಯು
ಕುರುಡು ಬಾಹ್ಯಭೇದಗಳಿಗೆ;
ಬಾರದಿಲ್ಲಿ ಜುಲುಮೆಯು!

ಸೈತೆವೆತ್ತ ಸೀತೆ ಬಾರ,
ಸಣ್ಣ ದ್ರುಪದನಂದನೇ,
ಓತು ಕರೆವೆ ಓಡಿ ಬಾರ
ಕಮಲನಾಭನಂಗನೇ!

ಚಲ್ಲಗಾರ್ತಿ ಚಾರುಮೂರ್ತಿ
ಬಲ್ಲೆ ನಿನ್ನ ಬಗೆಯನು;
ನಲ್ಲನಿರುವ, ನಲ್ಲ ಬರದ
ಎಲ್ಲರನ್ನು ಬಲ್ಲೆನು!

---

೩. ನುಣುಪಾದ ಹೊಳಪು ಜೊನ್ನದೊಡಲುಳ್ಳ ನಿಮ್ಮನ್ನು ಬಿಡದೆ ಅಪ್ಪಿದೆ.

ಬಣ್ಣವಿಟ್ಟ [೪]ಸಾಳಿಗೆಯಲಿ
ಬರುವ ನಿಮ್ಮ ಚಿತ್ತದ
ಬಣ್ಣ ಬೆಳಸುತಿಹುದು ಬಿನದ[೫]
ನನ್ನ ಗುರುವು ಬಿತ್ತಿದ!

ಮುಗದ–ಮೋಡಿ, ನಗೆಯ ಕೋಡಿ,
ನೇಹ ಬೆರೆದ ಸವಿ–ನುಡಿ–
ಜಗದ ತೊಡರೊಳಿಳಿದ ಮನವ
ಹಿಡಿಯಲಿರುವ ಗಾರುಡಿ!

ಗಳಿಗೆಗೊಮ್ಮೆ ಕರುಳನಿರಿವ
ಬಾಳಿನುಗ್ರ ಶಾಸನ
ಸುಳಿದರಿಲ್ಲಿ ಮಾಣದಿಹುದು
ಅದಕೆ ಕಂಟಕಾಸನ!

[೬]ಸರಳಿನಂಥ ಮಾತುಕಥೆಗೆ
ನೆರಳಿನಂಥ ರೂಪಿದೆ;
ಅರಳಿನಂಥ ನಿಮ್ಮ ಮನದಿ
ತೆರೆದ ಹಾಗು ತೆರಪಿದೆ!

ದುಂಡುಮಲ್ಲಿಗೆಯಲಿ ತೋರ್ಪ
ಮುಗ್ಧಭಾವವಿಲ್ಲಿದೆ;
ಕೆಂಡ ಸಂಪಿಗೆಯಲಿ ಕಾಂಬ
ಮುನಿಸು–ವಣ್ಣ ಚೆಲ್ಲಿದೆ!

---

೪. ಉಡುಗೆ,

೫. ವಿನೋದವನ್ನು.

೬. ಬಿಚ್ಚು ಮಾತುಗಳಾದರೂ ಚುಚ್ಚುಮಾತುಗಳಲ್ಲ; ಕಿವಿಗಿಂಪೂ ಬಗೆಗೆ ತಂಪೂ ಆಗಿವೆ ಎಂದರ್ಥ. ಪದ್ಯದ ಉದ್ದಕ್ಕೂ ಅಡಗಿರುವ ಇಂತಹ ಸೂಕ್ಷ್ಮಾರ್ಥಗಳ ವಿವರಣೆಗೆ ಸಹೃದಯರೆ ಮಲ್ಲಿನಾಥತನವನ್ನು ವಹಿಸಬೇಕು.

ಪಾರಿಜಾತ ಕೋಮಲತೆಯ
    ಕಳಚಿ ಕೊಟ್ಟ ಹಾಗಿದೆ;
ಏರು–ನಗೆಯ ಕಮಲವಿಲ್ಲಿ
    ನೂರುಮಡಿಯೊಳರಳಿದೆ!

ಸೂರ್ಯಕಾಂತಿ ಕಾಯಕಾಂತಿ–
    ಯನ್ನು ಕಳುಹಿಕೊಟ್ಟಿದೆ;
ಧೈರ್ಯವಾಗಿ ಎದೆಯ ತೆರೆದು
    ಅಸುಗೆ ನಿಂತುಬಿಟ್ಟಿದೆ!

ಕವನದೊಡವೆ ಮೆಚ್ಚನೀವೆ
    ಬನ್ನಿ ಒಲಿದ ಗಿಣಿಗಳೇ
ಅವನಿಗಿಳಿದ ಅಪ್ಸರೆಯರೆ
    ಮಧುರ ವಾಕ್ಯ ಖಣಿಗಳೇ!

ಅಳುಕು, ಥಳುಕು, ಅನ್ಯಭಾವ
    ಹತ್ತಿರಕ್ಕೆ ಸೇರದು;
ಬೆಳಕೆ ಬೆಳುಕು; ಭಾವ ಭಂಗಿ
    ಒಂದನೊಂದು ಮೀರದು!

ನಿಮಿಷಮಾತ್ರದಲ್ಲಿ ಜೀವ
    ಸ್ವಪ್ನ ಲೋಕಕೇರಿತು;
ಭ್ರಮರಲೋಚನೆಯರೆ ನಿಮ್ಮ
    ಅಳ್ತಿಯೆದೆಯು ಹೀರಿತು!

ಸ್ಥಾನಮಾನ ಬರುವ ಹೋಹ
    ಪ್ರಶ್ನೆಯಿತರ ಜನರಿಗೆ;
ಜ್ಞಾನದಾನವೆತ್ತ ನಿಮ್ಮ
    ಪ್ರೇಮದಾನದೆದುರಿಗೆ?

ಜೀವಿಕೆಯನು ಪಡೆವ ಚಿಂತೆ
      ಜೀವಕೀಗ ತಂಗಳು;
ತೀವಿದಳಲ ತಣಿಸಲಿಹುದು
      ನೀವು ನಕ್ಕ ತಿಂಗಳು!

ಬಾಗಿ ನಡೆದು ಬೀಗಿದೆಲುಬು
      ನೆಟ್ಟಗಾಯ್ತು ಪೆಣ್ಗಳೇ;
ಸೋಗು–ಬಾಳನುಳಿದೆನಿಲ್ಲಿ
      ದಿಟ್ಟಬಗೆಯ ಪೊನ್ಗಳೇ!

ಕಡಲ ತೆರೆಯ ಮಿರ್ರುವದೊಮ್ಮೆ
      ನನ್ನ ನಿಮ್ಮ ಭಾವದ
ಮಿಡಿತದೇರು ಮೂಡಿಬರುವ
      ಗುರಿಯ ಕಂಡು ಜೀವದ!

"ಮಿಗದ ಹಾಗೆ ಸ್ವೈರವಾಗಿ
      ನೆಗೆದು ಚಿಮ್ಮಿ ಬಾಳುವ;
ಹಗಲ ಹಾಗೆ ಮುಗಿಲನೇರಿ
      ಬೆಳಕ ಹಾಡಿ ಕೇಳುವ!

ಸೋಗೆಯಂತೆ ಲಲಿತಲಾಸ್ಯ
      ನಮ್ಮ ಗೆಜ್ಜೆ ಹೂಡಲಿ;
ಯೋಗಿಯಂತೆ ಹರಿಸವಡೆದು
      ದಿವ್ಯಗಾನ ಮಾಡಲಿ!"

ಎಂದು ಬಗೆಯೆ ನಿಯಮ–ಬಂಧ
      ಒಂದು ಗಳಿಗೆ ಮರೆವುದು;
ನೊಂದ ಜೀವ ನಿಮಿರಿ ನಿಂದು
      ಧನ್ಯವೆಂದು ಮೆರೆವುದು!

[೭]ಸಾಲೆಯೆದುರು ಹಸುರಿನಲ್ಲಿ
ಉಲಿವ ನಿಮ್ಮ ತುಟಿಗಳ
ಲೀಲೆಯಿಂದ ಮುಗುದವಾಯ್ತು
ನೆರಳು ವೃಕ್ಷ ಕಟಿಗಳ!

ಕಣ್ಣು ನನ್ನ ಪ್ರಾಸ ಪಂಕ್ತಿ
ಚೆಲ್ಲಿ ಬಲೆಯ ಬೀಸಲು–
ಹೆಣ್ಣುತನದ [೮]ಮಧುರ ಭಾವ
ಅಹುದು ನನಗೆ ಮೀಸಲು!

ಚಂಪೆ ನಿನ್ನ ಮುಗುಳು–ನಗೆಯು
ಬಿರಿಯೆ, ದಂತವಿಭ್ರಮ
ಕೆಂಪು–ಬಿಗಿದ ವಜ್ರದೋಡೆ–
ಯಿಂದ ಹೊಳೆವ ಸಂಭ್ರಮ!

.

ಭ್ರೂವಿಳಾಸ–ತಜ್ಞೆಯಾದ
ಸೀತೆ ನಿನ್ನ ನೋಟವು
ಭಾವಚುಂಬಿ; ಇಹುದು ನಿನಗೆ
ಪುಟ್ಟ ರತಿಯ ಮಾಟವು!

ಎಲ್ಲಿ ಮೊಗವನೆತ್ತು ಎಲೆಲೆ
ಚಿನ್ನದಂಥ ಮಾಲತಿ,
ಎಲ್ಲ ನಾಣು ನೀನೆ ಅದೆ;
ಇದಕೆ ಏನು ಹೇಳುತಿ?

---

೭. ಈ ಎರಡನೆ ಭಾಗವು ಕಥಾನಾಯಕನೂ ಇತರ ಪಾತ್ರಗಳೂ ಶಾಲೆಯ ತರಗತಿ ಕೋಣೆಯಲ್ಲಿ ಸೇರಿದಾಗ ನಡೆವ ವಿದ್ಯಮಾನಗಳನ್ನು ವಿವರಿಸಹೊರಟಿದೆ.

೮. ಮಾಧುರ್ಯ

೯. ಪುಟ ಏಳು ಮತ್ತು ಎಂಟರಲ್ಲಿ ಕಾಕು ಭೇದಗಳು ಹೇರಳವಾಗಿವೆ. ಅವುಗಳಲ್ಲಿ ಥಟ್ಟನೆ ಬದಲಾಗುವುದನ್ನು ಮಾತ್ರ ಇಲ್ಲಿ ಸೂಚಿಸಿದೆ. ಮೊದಲನೆಯದು ಗದ್ದರಿಕೆ.

ಅರಳಿನಂತೆ ಕಂಗಳೆರಡು
    ಸ್ನಿಗ್ಧ ಮಧುರವಾಗಿವೆ;
ತರಳೆ ಇತ್ತ ತಿರುಗು ಮುನಿಸು
    ಹೋಯ್ತೊ ಇಹುದೊ ನೋಡುವೆ!

[೯]ಗೆಳೆಯನಂತೆ ನಾನು ನಿನಗೆ;
    ನೀನು ಚಿಕ್ಕ ಹುಡುಗಿಯೇ
ತಿಳಿಯದೊಂದು ನುಡಿಯಬೇಡ;
    [೧೦]ಇಲ್ಲ ಪ್ರೀತಿಯಣುಗಿಯೇ!

ಅಳದಿರೆಲ್ಲ ಹುಸಿಯ ಮಾತು
    ಎಂದು ತಿಳಿಯಬಾರದೆ?
ತಳಿಕೆಯಿಲ್ಲ ಮನಕು ವಯಕು
    ನಿನ್ನೊಳಿಲ್ಲಿ ಶಾರದೇ!

[೧೧]ನನ್ನ ಹಣೆಯ ಮೇಲೆ ಬರೆಯ–
    ಲಿಲ್ಲ ಲಲಿತೆ ತಿಳಿಯಿತೆ?
ಇನ್ನು ಕೋಪ ಬರುವುದೆನಗೆ;
    ಪುಟದೊಳಿಹುದು ಹೊಳೆಯಿತೆ?

[೧೨]ನಿನ್ನ ಮೇಲೆ ಮುಳಿವೆನೇಕೆ,
    ಇಲ್ಲ; ಮಾನ ಹೋಯಿತೇ?
ರನ್ನದಂಥ ಕುವರಿ ನೀನು
    ಬನ್ನ ಬಡದಿರಾಯಿತೇ?

'ಒಂದು ಊರಿನಲ್ಲಿ ಒಬ್ಬ
    ಮುದುಕನಿದ್ದನಾತಗೆ
ಬಂಧು ಬಳಗವಿಲ್ಲ; ಹೋಗ
    ಲಾರನವನು ಭಿಕ್ಷೆಗೆ'

---

೧೦. ಸಾಂತ್ವನ ಪ್ರಾರಂಭ

೧೧. ಪುನಃ ಗದ್ದರಿಕೆ; (ಪುಸ್ತಕವನ್ನು ನೋಡುವುದನ್ನು ಬಿಟ್ಟು ನಾಯಕನ ಮುಖವನ್ನೇ ನೋಡುತ್ತಿರುವಾಗ).

೧೨. ಸಾಂತ್ವನ.

[೧೩]ಏನಿದಯ್ಯೋ ಪಾಪ'! ಬಾಯಿ
    ಮುಚ್ಚಿ ಬರೆಯಲಾರಿರೇ?
ನಾನು ಬಲ್ಲೆ ನಿಮ್ಮ ಪರಿಯ
    ಸಲಿಗೆ ನೆತ್ತಿಗೇರಿರೆ!

ಅಬ್ಬ ಮತ್ತೆ ಮಾತು ಮಾತು!
    ತಿಳಿಯಿರಾನೆ ಇಂಗಳ;
ಒಬ್ಬರೊಬ್ಬರಾಗಿ ತನ್ನಿ
    ಮುತ್ತಿನಕ್ಕರಂಗಳ!

[೧೪]ಹೆಸರು ನಿಮ್ಮದೆಲ್ಲ ಚೆಲುವು;
    ನೋಡೆ ಲಿಪಿಯ ನೇರ್ಪಿದು–
ಕೆಸರಿನಲ್ಲಿ ಕಾಕಪಾದ
    ಒತ್ತಿದಂತೆ ತೋರ್ಪುದು;

[೧೫]ಅಹಹ ನಿಮ್ಮ ದೋಷಗಳನು
    ಮರೆಸಿ ನನ್ನ ನಗಿಸಲು
ಕುಹಕಯುಕ್ತಿ ನಡೆಯದಿಲ್ಲಿ;
    ತಿದ್ದಿ ಮೊದಲಿನಿಂದಲು!

[೧೬]ಏನು, ಗಂಟೆಸದ್ದು ಕಿವಿಗೆ
    ಮುದ್ದನಿಟ್ಟು ಹೋದರೂ
ಏಳದಿರುವಿರೇಕೆ ಮುಗುದ
    ಬಾಲಿಕೆಯರೆ ಎಲ್ಲರೂ?

---

೧೩. ಗದರಿಕೆ
೧೪. ಅಣಕ ಅಥವಾ ಮೂದಲಿಕೆಯಿಂದ ಆಡುವುದು.
೧೫. ಕೋಪಬೆರೆದ ಅಧಿಕಾರವಾಣಿ
೧೬. ಪ್ರಸನ್ನ ಮೃದು ವಾಣಿ

[೧೭]ಬನ್ನಿರೀಗ ಸಂಜೆಬಿಸಿಲ
ಅರುಣ ಕಿರಣ ಜಾಲದಿ
ನಿರ್ಣಯಿಸುವ ಜಗದ ಬೆಲೆಯ
ನಿಮಿಷಮಾತ್ರ ಕಾಲದಿ!

ಹಾಸಕೀಗ ಹಾಸುಮಣೆಯು,
ಬೇಸರಕ್ಕೆ ಬಿಡುಗಡೆ;
ಬಾಸೆಗಿಲ್ಲ ನೇಮ; ಹೊತ್ತು
ಮುಳುಗುತಿರಲು ಪಡುಗಡೆ!

ರೆಕ್ಕೆಯೆಸೆವ ಹಕ್ಕಿಯನ್ನು
ಮೀರಿ ನಮ್ಮ ಹುರುಪಿನ
ಪಕ್ಕ ಬೀಸಿ ಹಾರಿ ನಡೆವ
ಹೊಳೆಯ ಹರಿಸಿ ಮೆಲುಪಿನ!

ಬನ್ನಿ ಬನ್ನಿ ನಂದನದಲಿ
ಅರಳಿ ನಲಿವ ಅರಳ್ಗಳೇ,
ನನ್ನ ಬಿನದ–ಚಿಕ್ಕೆ ಮುಡಿದ
ಕುಳಿರುವೆಳಗನಿರುರ್ಗಳೇ!

ಹೃದಯಮುಕುಲದಿಂದ ಹೊರಗೆ
ನುಗ್ಗಿ ಬರಲು ಯೌವನ,
ಎಳವೆಗಟ್ಟು ಸಡಿಲುತಿಹುದು;
ಕಾಮಗಾಯಿತೌತಣ!

ಹಣಿಕಿ ಮಿಣಿಕಿ ಕಣ್ಣಿ ಹೊಕ್ಕು
ನೋಡುತಿದೆ ವಿಳಾಸವು;
ಕುಣಿದು ಮಣಿದು ತಣಿಯದರ್ಥ
ಮೂಕ ಮಂದಹಾಸವು!

---

೧೭. ತರಗತಿ ಮುಗಿದನಂತರ ವಿಹಾರಾದಿಗಳಿಂದ ಉತ್ಸಾಹ, ಹರ್ಷ ಇವುಗಳ ವೃದ್ಧಿಯು ಈ ಭಾಗದಲ್ಲಿ ವರ್ಣಿಸಿದೆ.

[೧೮]ತಾರೆಗಡ್ಡಿ ಸಿಡಿವ ಹಾಗೆ
  ದಂತಪಂಕ್ತಿಯಿಂದಲಿ
ನೂರು ಮಾತು ಹಾರುತಿಹುದ
  ಕೇಳಿ ಹಿಗ್ಗು ಹಿಗ್ಗಲಿ!

ವಿಮಲಮುಖದ ಗಗನವೇರಿ
  ಬರುವ ನೋಟ–ಮಿಂಚಿಗೆ
ಭ್ರಮಿಸದಿರರು ಸುರರು ಕೂಡ
  ನಿಮ್ಮ ಕೊರಳ್–ವಿಪಂಚಿಗೆ!

ಬಯಲ, ಬಾನ, ಹಕ್ಕಿಹಾಡ,
  ಹೂವು ಹಣ್ಣು ಹಂಪಲ
ನಿಯತಿನಿಯಮರಹಿತರಾಗಿ
  ಕಂಡು ನಲಿವ [೧೯]ಸೊಂಪಲಾ!

ಅಮರ ವರುಷಗಳನು ಕಾಂಬೆ–
  ವಿಂದು ಬಾಳ ನಿಮಿಷದಿ!
ಭ್ರಮರದಂತೆ ಗುಂಜಿಸೋಣ;
  ಬುವಿಯೆ ಸಗ್ಗ ಹರುಷದಿ!

ತಳಿರ ಬನದ ತಿಳಿಯ ಜಲದ
  ಮೇಲೆ ಬರುವ ಪವನನ
ಎಳೆಯ ನಗೆಯನೀಂಟೆ ಬರುವ
  ಕುಣಿದು ಹಾಡಿ ತನನ!

---

೧೮. ಪಟಾಕಿ ಮೊದಲಾದ ಸಿಡಿಮದ್ದುಗಳ ಜಾತಿಗೆ ಸೇರಿದ 'ನಕ್ಷತ್ರದ ಕಡ್ಡಿ' ಎಂದು ಕರೆಯಲ್ಪಡುವ ಪದಾರ್ಥ.

೧೯. ಸೊಂಪು+ಅಲ್ಲವೆ=ಸೊಂಪಲ! 'ಅಲ' ಎಂಬುದು ಒಂದು ಉತ್ಸಾಹ ಸೂಚಕವಾದ "interjection" ಶಬ್ದವೆಂದು ತಿಳಿಯತಕ್ಕದ್ದು ಎರಡನೆ ಬಗೆ.

ಹಳೆಯ ನೆನಪುಗಳನು ಕೋದು
    ಕವನ ಕಟ್ಟಿ ಹರಿಸುವ;
ಚಳಿಗೆ ಚಳಿಯು ಹುಟ್ಟುವಂಥ
    ಭಯದ ಕತೆಯನುಸಿರುವ!

ಮನಕೆ ಬಂದ ಹಾಗೆ ಮಿನುಗಿ
    ತಾರೆಗಳನು ಕೆಣಕುವ;
ದಿನಕೆ ತಾಸುಗಳನು ಕಡಿಮೆ
    ಮಾಡಿ ಅಣಕವಾಡುವ!

ಬುಗುರಿಯಂತೆ ನಿಗುರಿ ನಲಿವ,
    ಗಾಳಿಯಲ್ಲೆ ತೇಲುವ;
ಹೊಗರ ಹಬ್ಬಿಸುತ್ತ ಕಳೆಯ,
    ಕಳೆವ ಅಮೃತ ಕಾಲವ!

ನಕ್ಕ ನಗೆಯು ಪಕ್ಕ ಪಡೆದು
    ದಿಕ್ಕುದಿಕ್ಕಿಗೆಯ್ದಲಿ;
ಹಕ್ಕಲಲ್ಲಿ ಒಕ್ಕಲಿರುವ
    ಹಕ್ಕಿಗಳನು ಕರೆಯಲಿ!

ಒಲವು ನಲವು ಅಮಳ್ಗಳಂತೆ
    ಒಂದನೊಂದು ಸೇರದೆ,
ಗೆಲವು ಬರೆದ ಚೆಲುವ ತರದೆ
    ಕವನವಿಲ್ಲ ಶಾರದೇ!

ರೊಕ್ಕವಿಲ್ಲವೆಂಬ ಜಗದ
    ದುಕ್ಕವಿತ್ತ ಬಾರದು;
ಲೆಕ್ಕವಿಟ್ಟು ಕೊಂಡು ಕೊಡುವ
    ತಲೆಗೆ ಜಾಗ ತೋರದು!

ಪೊಂಪುಳಿಯಲಿ ಮುಳುಗಿ ಮಿಂದು
    ತೇಲಿಸುತ್ತ ಕಂಗಳ,
ಗುಂಪುಗೂಡಿ ಹೆಜ್ಜೆಯಿಡುವ
    ಕಾಲದಲ್ಲಿ ತಿಂಗಳ!

ನಿಂದೆ ಭೀತಿ ನಾಣು ಗೀಣು
    ಸಂದೆಯಂಗಳಿಲ್ಲದ
ಸುಂದರಿಯರೆ ಇಲ್ಲ ಜಗದ
    ರೀತಿ ನೀತಿ ಸಲ್ಲದ!

ಬೆಳ್ಳಿ ಬೆಳಕಿನೋಕುಳಿಯನು
    ಚೆಲ್ಲಿ ನಡೆವ; ಬಾಳಿನ
ತಲ್ಲಣವನು ತಡೆವ ಶಕ್ತಿ
    ಪಡೆವ ಬರುವ ನಾಳಿನ!

ಹಾಲು ಮೊಸರು ಬುತ್ತಿಗಿತ್ತಿ
    ಯಾವುದೇಕೆ? ಮೋದದ
ಹಾಲುಗಡಲೊಳಾಳಿದೆಮಗೆ
    ಲೆಕ್ಕವಿಲ್ಲ ಲೋಕದ!

ಸೀತೆ, ವಿನುತೆ, ಲಲಿತೆ ಎಲ್ಲ
    ಬನ್ನಿ ಬನ್ನಿ ಲಲ್ಲೆಯ
ಔತಣಕ್ಕೆ; ದಿನವು ಕೊನೆಯ
    ಕಂಡುದೀಗಳಿಲ್ಲಿಯ!

ಜಕ್ಕುಲಿಸುವ ಲೋಕವನ್ನು
    ತಳ್ಳಿ ನಿಂದು ನೋಡುವ
ಹಕ್ಕು ನಮ್ಮದೀಗ ಬಿದಿಯ
    ಸಿಕ್ಕದಂತೆ ಕಾಡುವ!

ಮೌನಜಲವ ಬಿರಿದು ಕನಸಿ–
ನಲೆಗಳೆದ್ದು ತೊಳಗಲಿ;
ಜ್ಞಾನಚಂದ್ರ ಮೂಡಿ ಬಗೆಯ
ಆಗಸವನು ಬೆಳಗಲಿ;

ಕೋಪತಾಪವೊಂದು ಇರದೆ
ಹರಿಸವನ್ನೆ ಚೆಲ್ಲುವ
ರೂಪವಾಗಿ ನಾದ–ಬಿಂದು–
ಕಲೆಗಳಾಚೆ ನಿಲ್ಲುವ!

ಮುದಿತ ದಿನವೆ ಉದಿತ ದಿನವು
ಎಂದು ಜಗಕೆ ಸಾರುವ!
ಪವನಗಿರುವ ಪಾವನತೆಯ–
ನಿಂದು ಜಗಕೆ ತೋರುವ!

ಹೂ ಬಾಳು

(ಸಂದರ್ಭ: ೨೦ನೆಯ ಶತಮಾನದ ಮಧ್ಯಮವರ್ಗದ ವಿನಯನೆಂಬ ವಿದ್ಯಾಧರನು (Graduate) ತನ್ನ ಬಾಳಿನಲ್ಲಿ ಆಕಸ್ಮಿಕವಾಗಿ ಬಂದೊದಗಿದ ಒಂದು ವಿಷಾದಾಂತ ಘಟನೆಯನ್ನು ತಾನೇ ಹೇಳತೊಡಗಿದ್ದಾನೆ.)

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂಬಿಸಿಲಿನಾಟ!

ಕನ್ನಡದ ಕಣ್ಣು ಕಳಕಳಿಸುವಂಥ ಕಡು
ಪುಣ್ಯ ಭೂಮಿಯಲ್ಲಿ–
ಕಾಲಿಟ್ಟೆನೊಮ್ಮೆ ಕಣ್ದೆರೆಯೆ ಹೆಮ್ಮೆ ಹೊಸ
ಹರೆಯದೇರಿನಲ್ಲಿ!
ಹಳೆಬಾಳ ದೀನಹಾಡೆಲ್ಲ ಹೀನ ವೆಂ–
ದಟ್ಟಿಬಿಟ್ಟೆ ಕಂಡು
ಹೊಸಕಾಲದಲರ, ಹೊಸಭಾವದೆಲರ ತಂ–
ಪಾದ ಸೋಂಕುಗೊಂಡು!

ಅಲ್ಲಿತ್ತು ನಂದನದ ನೋಟ, ನಲ್ಮೆಯಲೆ–
ದಾಟ ವೊಲ್ಮೆಯೂಟ;
ಅಲ್ಲಿತ್ತು ಹುರುಪಿನುಸುರಾಟ, ಹೊಚ್ಚಹೊಸ
ಕನಸಿನೊಂದು ಕೂಟ!
ಅಲ್ಲಿತ್ತು ಗೆಳೆಯರೊಡನಾಟ, ಗೆಳತಿಯರ
ಮಧುರವಾಕ್ಯ ಪಾತ,
ಅಲ್ಲಿತ್ತು ಮನದ ಹಸಿವಿಂಗುವಂಥ ಹಲ–
ವಾರು ಭೋಗವಾಟ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂಬಿಸಿಲಿನಾಟ!

ಕೊಪ್ಪರಿಗೆ ಕಂಡ ಹಳ್ಳಿಗನ ಹಾಗೆ "ಅದು
ಸತ್ಯಲೋಕವೊಂದೆ–
ಮುಪ್ಪಡಸಿದಾತನೂ ಜರಿರುಮಾಲು ಸು–
ತ್ತಿರುವ ರಾಜ್ಯ" ವೆಂದೆ;
ಒಪ್ಪತ್ತು ಹಸಿವ ಹಿಂಗಿಸುವ ಶಕ್ತಿಯೇ
ಹರಿಸವಿತ್ತುದಾಗ;
ಕಪ್ಪಿನಲಿ ಮಿಂಚುಹುಳ ರವಿಸಮಾನ ತಂ–
ಗದಿರನಿಲ್ಲದಾಗ!

ಸಿರಿ ನಿರಿಯಚೆಲ್ಲಿ ನರ್ತಿಸುವಳೆಂಬವೊಲು
ನಿಂತ ಮನೆಯ ಹೊಕ್ಕೆ;
ತೆರೆದಂತೆ ಭಾಗ್ಯ ಬರಮಾಡಿ ಕೊಳಲು ನಾ–
ನೊಮ್ಮೆ ನೋಡಿ ನಕ್ಕೆ!
ಅನುಕೂಲ ಕಾಲದಲಿ ಬಿಟ್ಟಕಲ್ಲು ತನಿ–
ವಣ್ಣ ತಾರದಿಹುದೇ?
ಮನದಲ್ಲಿ ಬೀಗಿ ಮುದದಲ್ಲಿ ಬಾಗಿ, ನಿಂ–
ತೆನಗೆ ಸದೃಶವಿಹುದೇ?

ಅಲ್ಲಿತ್ತು ನಂದನದ ನೋಟ,
–ಅದರಲ್ಲಿ ಹೂಬಿಸಿಲಿನಾಟ!

ಅಹ ದಿವಸ ನಿಮಿಷವಾಗಿತ್ತು ಪರರ ಕೈ–
ಗಾವ ಕಾಲ ನಿಲಲು,
ಸ್ವಾತಂತ್ರವೆಂಬ ಪದ ದಿವ್ಯವಲ್ತೆ? ಸ–
ಗ್ಗಕ್ಕು ತೀರ ಮಿಗಿಲು!
ಅಮೃತಾಬ್ಧಿ ಮಥನದಲಿ ಹೊರಟ ದಿವ್ಯರಸ–
ವೆಂದೆನದಕೆ ನಾನು;

ಅದು ಜೀವಕಾಯ್ತು ಸಂಜೀವನೈಕ ಮಧು!
ಅಹಹ ಹೇಳಲೇನು?

ಆನಂದದಿಂದ ಆರಾಮಧಾಮದಾ
ರಾಮರಾಯರಲ್ಲಿ
ಶ್ರೀಮಂತನಡೆಯೊಳಿರುತಿದ್ದೆ, ಮನೆಯಮರೆ–
ತಿದ್ದೆ, ಬಾಗಿಲಲ್ಲಿ–
ಆ ಲಲಿತೆಯೆಂಬ ಕಣ್ಗೊಂಬೆ ಕಣ್ಗೆ ಕಣ್
ಬೆಸೆದು ಕರೆಯುವಾಗ
ಅಲೆಯಾಗಿ ಹೋದೆ, ಕಲೆಯಾಗಿ ಹೋದೆ ಬೆಲೆ
ಬಂದು ಸೇರುವಾಗ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂಬಿಸಿಲಿನಾಟ!

ಅವಳೆಂಥ ಹುಡುಗಿ! ಬಂಗಾರದಂಥ ಗುಣ,
ಮಗುವಿನಂಥ ಸರಳೆ;
ನಕ್ಷತ್ರದಂತೆನಗೆ, ನೀಲಮಣಿಯ ಲೋ–
ಲಾಕಿನಷ್ಟು ತರಳೆ!
ಆ ಪ್ರೀತಿ ಅವಳ ನಿರ್ಭೀತಿ, ನಡೆಯನಯ–
ನೀತಿ ನವ್ಯ ರೀತಿ;
ಆ ಕೃತಿಯೆ ಚಂದ, ಆಗತಿಯೆಛಂದ, ಅದು
ಮೂರ್ತಿವೆತ್ತ ಗೀತಿ!

ಆ ಸಲುಗೆಯೇನು, ಆ ನಿಲುಗೆಯೇನು, ಅವ–
ಳೆದೆಯ ಮೆಲುಗೆಯೇನು!
ಅದರಲ್ಲಿ ನಾನು ಮತ್ತೇನು? ಜೇನು ಮು–
ಗ್ಧಾಬ್ಧಿಯೊಂದೆ ಮೀನು!!
ಸಭ್ಯತ್ವಧರ್ಮರತ್ನ ಪ್ರದೀಪ, ಸೌ–
ಮ್ಯತ್ವಗಂಧ ಕುಸುಮ,

ಅವಳವಳ ಹಾಗೆ, ಮಿಕ್ಕವರು ಮಿಕ್ಕವರು,
ಹೆಸರಿಗಷ್ಟೇ ಕುಸುಮ!
ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂಬಿಸಿಲಿನಾಟ!

ಬೆಳುದಿಂಗಳಂತೆ ಮತ್ತವಳ ಪ್ರೀತಿ ಬೆಳೆ–
ಬೆಳೆದು ಹತ್ತಿರಾಗಿ,
ಪೂರ್ಣತೆಯ ದಾರಿಯಲಿ ನಡೆದು
ಪೂರ್ಣಿಮೆಯ
ಬಯಸುತಿತ್ತು ಮಾಗಿ!
ಸೋದರರ ಸಂಗಡೆನ್ನೊಡನೆ ವಿಹರಿಸಲು
ಬರಲು ಮೊದಲುಮಾಡಿ,
ಆದರವು ಹೆಚ್ಚಿ ನನ್ನನ್ನು ನೆಚ್ಚಿ ಬರು–
ತಿದ್ದಳೊಬ್ಬಳೋಡಿ!

ನಾನೆಂದೆ "ನಿಂಥ ಹಿತಮಧುರ ಭಾವ ದೊ–
ಳ್ವಾತಿನಪ್ಸರೆಯನು
ಕಂಡಿಲ್ಲ, ಕಾಣಲಳವಲ್ಲ, ಸಗ್ಗದಿಂ–
ದಿಳೆಗೆ ಬಂದಳೇನು!"
ಹೃತ್ಕಮಲದಲ್ಲಿ ಸಂಸುಪ್ತವಾದ ಹಳೆ–
ನೆನಹುಗಳನು ಹೇಳಿ
ಮಾತಾಡುತಿದ್ದೆವರಗಿಳಿಗಳಂತೆ ನಡೆ–
ದಿತ್ತು ಪ್ರೇಮ ಕೇಳಿ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂ ಬಿಸಿಲಿನಾಟ!

ಒಮ್ಮೊಮ್ಮೆ ಹಿಂದೆ ಹತಭಾಗ್ಯನಾಗಿ ಹಲ–
ತೆರದ ಕಷ್ಟಬಂದು
ದಮ್ಮಿಡಿದು ದಾನಿಗಳ ದರ್ಪದಗ್ನಿಯಲಿ
ನುಸುಳಿ ನೊಂದು ಬೆಂದು

ನಾ ನರಳುತಿದ್ದ ಕತೆಕೇಳಿ ಕಂಬನಿಯ
ಸುರಿಸಿ ಬಿಡುವಳಾಕೆ!
ಸಂಕಟಕೆ ಕರಗುವಾ ದೇವಗುಣವಿರಲು
ಬೇರೆಯಾವುದೇಕೆ?

"ಆ ಹುಟ್ಟುಹಬ್ಬ, ಈ ಜುಟ್ಟುಹಬ್ಬ, ಸಂ–
ಭ್ರಮದ ಮೆಚ್ಚುಮಾಟ,
ಅವರೆತ್ತಿ ಹೊರುವರಿವರೊತ್ತಿ ಕರೆವರೆಂ–
ಬೊಲುಮೆ ಜೇನಿನೂಟ–
ಈ ಹೊತ್ತು ಭಕ್ಷ್ಯ, ಮತ್ತೊಂದು ಲಕ್ಷ್ಯವೆಂ–
ಒಟ್ಟಹಾಸವಿಲ್ಲ,
ಔನ್ನತ್ಯವೇರಿ ತೇರೆಳೆಸಿಕೊಂಬುದನು
ಬಲ್ಲ ಜೀವವಲ್ಲ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂ ಬಿಸಿಲಿನಾಟ!

"ಕಡಲಾಳದಿಂದ ಸಿಡಿದೆದ್ದನೊರೆಯ ಕಣ
ತೀರ ಸೇರಿ ತನ್ನ
ಒಡಲಾಳದಿಂದ ತನ್ನನ್ನು ತಾನೆವಿರ–
ಚಿಸುವ ಹಾಗೆ ಮುನ್ನ–
ಅಡಿನೆಲದ ಮೇಲೆ ಮುಡಿದೋರಿಮೂಡಿ ಮಲ–
ಮಲಿಸುತಿದ್ದೆ, ಹಸಿರ
ಕುಡಿಯೇಳುವಂತೆ ನಸುನಕ್ಕು ನಿಮಿರಿ ಹೀ–
ರುತ್ತ ಸುಗ್ಗಿಯುಸಿರ!
"ಸುಂದರನೆ? ಅಲ್ಲ; ಸುರುಚಿರನೆ? ಅಲ್ಲ; ಸುಮ–
ಧುರನೆ? ಬಲ್ಲರಾರು?
ವರಮತಿಯೆ? ಅಲ್ಲ; ತರಗತಿಯೊಳೆಲ್ಲರೊಳ–
ಗೊಬ್ಬ; ಕೇಳ್ವರಾರು?

ಹರಿದಿತ್ತು ಬಾಲ್ಯಕೌಮಾರವೆಲ್ಲ "ಬೇ–
ಕೆ"ಂಬ ಮರಳುಗಾಡ
ಉರಿಯಲ್ಲಿ, ನಿತ್ಯಚರಿಯಲ್ಲಿ ಪೂರ ಬರಿ–
ಯಲ್ಲಿ ಬಾಳ ಗೂಢ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂ ಬಿಸಿಲಿನಾಟ!

"ಕಣ್ಣೆತ್ತಿ ಕಂಡರದು ಪಾಪ, ಕೊರಲ ಸರಿ–
ಸಿದರೆ ಕೋಪ ತಾಪ!
ಕಾಲೆತ್ತಿ ನಡೆಯಲಿದೆಶಾಪ, ಮೆಲುನಡಿಗೆ
ಕಳ್ಳತನದ ರೂಪ!!
ಧನಹೀನದೀನ ತೃಣಮಾನಮಾನವ ವಿ–
ಮಾನ ವಿಮನನಾಗೆ,
ದಿನಮಾನಹಾಗೆ; ಮತ್ತೇನು ಬೇಗೆ ಹಣೆ–
ಬರಹವಿರಲು ಮೇಗೆ?

ಲಕುಮಿಯ ಕುಮಾರ ಮಲಗಿದರೆ ಶೀತತಿರು–
ಗಿದರೆ ವಾತಭೂತ;
ಅಂಗಾಲಕೆಂಪಿಗೈವತ್ತು ಮದ್ದು, ಕನಿ–
ಕರಿಸುವಶ್ರುಪಾತ!
ಅದೆ ದೀನಗೇನು ನೋವಿಲ್ಲ, ಹಸಿದರಾ–
ರೋಗ್ಯಭಾಗ್ಯಲಾಭ;
ನರಳಿದರೆ ಪಾಪದಪವಾಪ, ಬೇಡಿದರೆ
ಬೆಟ್ಟದಂಥ ಲೋಭ!
ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂ ಬಿಸಿಲಿನಾಟ!

"ಇದ ಕಂಡೆನುಂಡೆನನುಭವಿಸಿ ಸವೆದೆ, ರಸ–
ಗವಳವೆಂದೆ ನಿದನೆ
ಇದರಿಂದ ಹೊರೆದೆ ನಿದರಲ್ಲಿ ಬೆರೆದೆ, ಕೃಮಿ–
ಯಾಗಿ ಬಂದುದನ್ನೆ–
ಕೊರೆಕೊರೆದೆ, ನಂಥ ಆ ಬಾಳ ಕುಲುಮೆಯಲಿ
ಕುದಿದು ಕೆಂಡವಾಗಿ
ಹರೆಯವನು ಕಂಡೆ ಹೊಂಗನಸು ಹಿಗ್ಗಿ ಬರೆ
ತಂಡ ತಂಡವಾಗಿ!"

–ಎಂಬೆನ್ನ ಬಾಳ ಬಗೆಬಗೆಯ ಬನ್ನಗಳ
ಬಣ್ಣಿಸುತ್ತಲಿದ್ದೆ
ತುಂತುಂಬಿ ಬಂದ ಕಣ್ಣೀರಿನಿಂದೆದೆಯ
ಮಾಡುತ್ತಿದ್ದಳೊದ್ದೆ!
ಎದೆಗೆದೆಯ ಕೊಟ್ಟು ಮತ್ತೆನ್ನುತಿದ್ದ "ಳೆಲೆ
ಪ್ರೇಮದೇವ, ಇನ್ನು
ಬಿಡುವೆತೆಯ, ನೋಡು ಹೊಸಬಾಳ ಹಂದರವ
ಕಟ್ಟಿ ಕೊಡುವುದನ್ನು"!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಹೂ ಬಿಸಿಲಿನಾಟ!

ಅಂತಿರಲು ಸೊಗದ ತಿರುತಿರುಳ ಕಡೆಗೆ ಹರಿ,
ಯುತ್ತಲಿರಲು ಚಿತ್ತ,
ಬಂತೊಂದುಮಾಸ ಮತ್ತೆಲ್ಲಮಾಸಗಳ
ಮಕುಟವಾಗುವಂಥ;
ಆ ಸಮಯದಲ್ಲಿ ಹಡೆದಾತ ವರನ ನಿ–
ಶ್ಚಯಿಸಿ ಬಿಟ್ಟ ಸುತೆಗೆ–
ಕೈ ಹಿಡಿದು ಬಾಳನಡೆಯಲ್ಲಿ ನಡೆಯಿಸಲು
ನೆರವನಿತ್ತು ಜೊತೆಗೆ!
ಅನುರೂಪನಂತೆ, ಗುಣವಂತನಂತೆ, ಧನ–
ಪಾಲಪುತ್ರನಂತೆ–

ಬಂಗಾರವೀವ, ಸಿಂಗಾರ ಗೈವ ನೇ–
ನೇನೊಮಾಳ್ಪನಂತೆ;
ಆ ಯುವತಿಗಲ್ಲಿ ವರವರಣದಲ್ಲಿ ಹೊಣೆ
ಬಹಳವಿಲ್ಲದಂತೆ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಉರಿಬಿಸಿಲ ಕಾಟ!

ಏನೇನೊಮಾಡಿ ಎಂತೆಂತೊತನ್ನ ಹಡೆ–
ದವಳಿಗರುಹಲಾಗಿ

ಅವ "ಳವರ" ಕಿವಿಗೆ ಬೀಳಿಸಲು ಬೆಂಕಿಯೇ
ನೆಗೆದಹಾಗೆ ಹೋಗಿ
"ಅವಜಾತಿಯಲ್ಲ, ಧನವಾತಗಿಲ್ಲ, ಬರಿ
ವಿದ್ಯೆಯಿಂದಲೇನು?
ಬಿಡುಸಾಕು" ಎಂದು ನನ್ನಾಯ್ಕೆಯನ್ನು ಕೊಡ–
ಹಿದರು; ಹೇಳಲೇನು?

ಮರುಮರುಗಿ ಬಾಲೆ ಹೂ ಮಾಲೆಯಂತೆ ಕಳೆ–
ಗಳೆದು ಬಾಡಿ ಬಳಲಿ,
ತಿರುತಿರುಗಿ ನನ್ನ ಬೇಡಿದಳು ರಕ್ಷಿಸೆಂ–
ದವಳು ಬಹಳ ಅಳಲಿ;
ಆಜಾತಿಧನವ ಪಡೆದಿಲ್ಲವಾಗಿ ಧನ–
ಜಾತನಲ್ಲವಾಗಿ
ಬರಿಮಾತಿನಿಂದ ಸಂತೈಸ ಹೋಗಿ ಕೈ–
ಸೋತೆ ಕಾಣದಾಗಿ!

ಅಲ್ಲಿತ್ತು ನಂದನದ ನೋಟ
ಅದರಲ್ಲಿ ಉರಿಬಿಸಿಲ ಕಾಟ!

ಈ ವಿದ್ಯೆಯಿಂದ, ಸಂಸ್ಕಾರದಿಂದ, ಈ
ಬುದ್ಧಿಯಿಂದ, ದುಡಿವ
ಈ ಶ್ರದ್ಧೆಯಿಂದ, ಸಂಕಲ್ಪದಿಂದ ಮೆ–
ಚ್ಚಿಸಲಶಕ್ತ ಬಡವ–
ಧನಜಾತಿಗೋಪ ಹಿಂದೀಯ ತಂದೆವಿರ
ಕುರುಡನೆನೆದು ಮುಳಿದು
ಮನಬೀತುಹೋಯ್ತು, ಮರುಗಿತ್ತುಮತ್ತೆ ಬಿದಿ–
ಯನ್ನೆ ಕಡೆಗೆ ಹಳಿದು!

ವರಶುಲ್ಕ ಹೇಯವೆಂದೊದರುವಾತನೂ
ಜಾತಿದಾಸನಾಗಿ
ಕರಕರಗಿ ಕನ್ನೆಯರ ಬಾಳ ಬಾಡಿಸುವು–
ದಿರಲು ಧನಿಕನಾಗಿ
ಇರುವಂಥ ರಾಮರಾಜರಿಗೆ ಮಗಳ ಮನ–
ದಾಳವರಿಯಲಳವೆ?
ಅಧಿಕಾರವಿರಲು ಪಿತೃದೇವನಾಜ್ಞೆ ಮ–
ತ್ತಾರಿಗಾದರೊಳವೆ?

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಉರಿಬಿಸಿಲ ಕಾಟ!

ಇದು ಧೀರಜೀವವಿದು ಬುದ್ಧಜೀವ, ದಾ–
ಸ್ಯಕ್ಕೆ ಮಣಿಯದಿರುವ
ಉದ್ದಾಮ ಜೀವವಾದರೂ ಒಂದು! ಬಹು–
ಸಂಖ್ಯೆಯನ್ನು ಮುರಿವ
ಸಾಹಸವ ಸಾಧ್ಯವಿತ್ತಲ್ಲದವಳ ತಾ–
ಯ್ತಂದೆವಿರನು ಗೆದ್ದು
ನೋಯಿಸಲು ಲಲಿತೆಯೆಳವಗೆಯ ಬರದೆಮನ
ದೂರ ಹೋದೆನೆದ್ದು!

ಆ ಕಾಲಬಂತು, ವಧುಲಲಿತೆ ಮತ್ತು ವರ
        ಕೃಷ್ಣಮೂರ್ತಿರಾಯ–
ಜಡಧರ್ಮದಂಕುಶದ ತಿವಿತದಿಂದ ಆ–
        ಯ್ತವಳ ಮನಕೆ ಗಾಯ;
ಕತ್ತಲಿಸಿ ಕಣ್ಣು ತತ್ತರಿಸಿ ಹೆಣ್ಣು ಗತ–
        ಜೀವೆಯಾದಳೆನಲು
ಮತ್ತೇನ ಹೇಳಲೀ ಕತೆಯ ಬರೆಯುತಿರೆ
        ನಡುಗುತಿಹುದು ಬೆರಳು!

        ಅಲ್ಲಿತ್ತು ನಂದನದ ನೋಟ,
        ಅದರಲ್ಲಿ ಉರಿಬಿಸಿಲ ಕಾಟ!

ನಳನಳಿಸಿ ಬೆಳೆದ ನಮ್ಮನೆಯ ಬಿಳಿಯ ಮಂ–
        ದಾರಗಿಡವ ಕಂಡು
ಲಲಿತೆಯೇ ಮುಂದೆ ನಿಂದಿರುವಳೆಂದು ಮೈ–
        ಮರೆವೆ ಸೊಬಗನುಂಡು;
ಮನೆಯೆದುರಿಗಿರುವ ಮಲ್ಲಿಗೆಯ ಮೊಗ್ಗೆಯರ–
        ಳುವುದ ಕಂಡು ನಾನು
ಲಲಿತೆಯೇ ನಗುವಳೆಂದತ್ತ ನೋಡಿ ನಿಡು–
        ಸುಯ್ವೆನೀಗಲೂನು!

ನಡುರಾತ್ರಿಯೆದ್ದು ನಿಟ್ಟಿಸುತ "ತಾರೆಗಳು
        ಲಲಿತೆ ಮಧುರವಾಗಿ
ಕರೆಗೊಡುವ ನೋಟಗಳು, ಪ್ರೀತಿಯಾಟಗಳು"
        ಎಂಬೆ ಮರುಳನಾಗಿ;
ನಾ ಮತ್ತೆ ಕನಸು ಹೋಳಾಗಿ ನಿಜವನೆನೆ–
        "ದಯ್ಯೋ" ಎಂದು ಹಲುಬಿ–
ದಿನದಿನವು ಮಲಿನಮನನಾಗಿ ಬಾಳುತಿಹೆ
        ದುಃಖವನ್ನು ತರುಬಿ!

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಉರಿಬಿಸಿಲ ಕಾಟ!

ಮಾನವನು ತನ್ನ ಮಸಣವನು ತಾನೆ ರಚಿ–
ಸುವುದು ಹೀಗೆಯಲ್ತೆ?
ನಿಷ್ಪುತ್ರವಿಧವೆ ಜೀವಿದ್ದ ಹಾಗೆ "ತಿಥಿ"
ಮಾಡಿಕೊಂಬಳಲ್ತೆ?
ಆ ರಾಯ ತನ್ನ ಮಗಳನ್ನು ಕೊಂದು ತಾ
ಸತ್ತು ಬಾಳ್ವನಂತೆ–
ಈ ಜೀವ ತನ್ನ ನಿಧಿ ಕಳೆದುಕೊಂಡು ಬಳ–
ಲುತ್ತ ಬಾಳುವಂತೆ!

ಈ ವಿಶ್ವದಾಳದಲ್ಲಡಗಿ ನಿಂತ ಸೂ–
ತ್ರಾಧಿಕಾರಿ, ಕೇಳು–
ನೀ ನಕ್ಕು ಹೇಳಬಹು"ದೆಲ್ಲ ಬಾಳು ಬರಿ
ಬಂಜೆ"ಯೆಂದು "ಹಾಳು";
ಆ ಮಧುರಭಾವ ಮೈವೆತ್ತ ಜೀವ ನ–
ನ್ನೊಡನೆಬಾಳುತಿರಲು
ನಾ ಹೇಳುತ್ತಿದ್ದೆ "ನೀಮುಗ್ಧ"ನೆಂದು; ಹೀ–
ಗಾಗಲೇಕೆ ಹೇಳು?

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಉರಿಬಿಸಿಲ ಕಾಟ!

ಅಕಟಕಟ ವಿರಹವೀಬಾಳ ಸಾರ ವಿದ–
ಕಂತವಿಲ್ಲದಾಯ್ತೆ?
ಅಕುಟಿಲರ ಹೃದಯದೆಳಮೊಗ್ಗು ಕೃತಕ ವಿಧಿ–
ಯಿಂದ ಕೃತ್ರವಾಯ್ತೆ?
ಅಜ್ಞಾತ ದಾನವತೆಯಿಂದ ಮಾನವನು
ಮೂಢನಪ್ಪನೇಕೆ?
ಸುಜ್ಞಾನವಿದ್ದರೂ ದುರ್ವಿನೀತತೆಯ
ಮುರಿಯಲಾರನೇಕೆ?

ಓ ಲಲಿತೆ, ಮೋಡದಲಿ ಹೊಕ್ಕು ಕಂಬನಿಯ
ಕರೆಯುತಿರುವೆಯೇನು?
ನನ್ನವಳೆ, ಬೆಟ್ಟದಲಿ ಹುಟ್ಟಿ ನನ್ನ ಕಡೆ
ಹರಿಯುತಿರುವೆಯೇನು?
ಕಾದಲ್ಮೆ, ಹತ್ತಿ ತಂಗಾಳಿಗುದುರೆಯನು
ಕೂಡಬರುವೆಯೇನು?
ನನ್ನಾತ್ಮದಲ್ಲಿ ಸರ್ವಾಧಿಕಾರ ನಿನ–
ಗೀವೆ ಬಾರೆಯೇನು?

ಅಲ್ಲಿತ್ತು ನಂದನದ ನೋಟ,
ಅದರಲ್ಲಿ ಉರಿಬಿಸಿಲ ಕಾಟ!

ಖಗ್ರಾಸ ಖಂಡ

ಸಂದರ್ಭ: ಭರತ ದೇಶದಿಂದ ಓಡಿಹೋಗಿ ಸಿಂಹದ್ವೀಪದಲ್ಲಿ ಪ್ರಚ್ಛನ್ನನಾಗಿದ್ದವನು ದೊರೆಯಾದ ಹರಿಕುಮಾರನು. ಸಿಂಹದ್ವೀಪದ ಕಾಡುಮೇಡುಗಳ ನಡುವಣ ಸಿಂಹಪುರದಲ್ಲಿ ಭಾರತದಿಂದ ತನ್ನೊಡನೆ ಓಡಿ ಬಂದ ಜನರ ಮತ್ತು ಸ್ಥಳೀಯರ ಒಂದು ದಂಡನ್ನು ಅವಿಶ್ರಾಂತ ಶ್ರಮದಿಂದ ಕಟ್ಟಿದನು. ತನ್ನ ಸ್ವಾತಂತ್ರ್ಯವನ್ನು ಅಪಹರಿಸಿದ ಪಡುವಣ ಸಮ್ರಾಟನ ಸೊಕ್ಕನ್ನು ಮುರಿಯಲು ಭಾರತದ ಜನ ಭರತ ದೇಶಕ್ಕೂ ಸಿಂಹದ್ವೀಪಕ್ಕೂ ನಡುವಣ ಬ್ರಹ್ಮದೇಶದಲ್ಲಿ ಎದುರಾಯಿತು, ಹೇಗೆಂದರೆ:–

೧

ಸಿಂಹಪುರದಲ್ಲಿ
ಕಟ್ಟಡವಿಯಲ್ಲಿ
ನೆರೆದ ಪಡೆಯಲ್ಲಿ–ಸಿಡಿಲು ಮೂಡಿತ್ತು!
ಬೆಳಗು ಹೊತ್ತಲ್ಲಿ
ಗಾಳಿ ಮತ್ತಲ್ಲಿ
ನಿಂತು ನೆರೆಯಲ್ಲಿ–ನೋಡಿ ನಡುಗಿತ್ತು!

೨

ಮಿಂಚು ಮರೆಯಾಗಿ
ಬಾನು ಬರಿದಾಗಿ
ಸದ್ದು ಸೆರೆಯಾಗಿ–ಸ್ತಬ್ಧವಾಗಿತ್ತು;
ಸಿಡಿಲು ಹೆಚ್ಚಿತ್ತು
ತೊಳಗ ತೊಡಗಿತ್ತು
ನಿಂತು ನೀಡಿತ್ತು–ನೀಡಿ ಉರಿದಿತ್ತು!

೩

ಕಣ್ಣು ಪಡೆದಮಮ
ಕಿಡಿಯ ಹಾರಿಸಿತು!
ಬಾಯತೆರೆದಮಮ–ಗರ್ಜಿಸಿತ್ತಂದು!
ಮಣ್ಣು ಕಣಗಳೊಳು
ಕೆಚ್ಚು ಕೂಡಿದೊಲು
ಕಂಡಿತೋ ನಿಲಲು–ವೀರರೆಯ್ತಂದು!

೪

ಭರತ ಖಂಡದಲಿ
ದಾಸ್ಯಕುಂಡದಲಿ
ಸುಟ್ಟು ಕೆಂಡದಲಿ–ಕೆಂಡವೇ ಆಗಿ
ಇತ್ತ ಬಂದ ಸೋ–
ದರರೆ, ನೀವು ಸೋ–
ತಿಲ್ಲ; ಇದೆ ಲೇಸೋ–ಕಾದಲೊಂದಾಗಿ!

೫

ಅಗ್ನಿಪಿಂಡಗಳೆ
ಕಾಲದಂಡಗಳೆ
ಶಸ್ತ್ರಖಂಡಗಳೇ–ನಿಲ್ಲಿರದೆ ಚಾಚಿ!
ಕಡುಗ ಕಳೆದ ಹೆಂ–
ಬೇಡಿ ಪಡೆವನೇಂ
ಬೇಡಿ?ಎತ್ತುವನೇ–ಬಿಡುಗಡೆಯ ಬಾಚಿ?

೬

ಪರನ ನೆತ್ತಿಯನು
ಕುಕ್ಕಿ ಕತ್ತಿಯನು
ಬಣ್ಣಿಸಲು ಮಾತ್ರ–ಲಭ್ಯವಾವಸ್ತು;
ಎಲೆಲೆ ಗಂಡರೇ
ಸಮರಶೌಂಡರೇ
ಆಗುವಿರೆ ಪಾತ್ರ?–ಬೇಕದಕೆ ಶಿಸ್ತು!

೭

ಲಕ್ಷ ಕಂಠಗಳು
ಗಜರಿ ಹೇಳಿದವು
"ಕೊಡುವುದಾಣತಿಯ–ಕಾದಲೆಮಗೀಗ;
ನಮ್ಮ ನಾಯಕರೆ
ನಿಮ್ಮ ವೀರಕರೆ
ಎದೆಯ ಹಿಗ್ಗಿಸಿದೆ–ಶೌರ್ಯವೇ ಯೋಗ!"

೮

ಎಂದು ಪಡೆವಳರು
ನಿಂದು ನಿಮಿರಿದರು
ಸೇನೆ ಸರಿದಿತ್ತು–ಭೂಮಿ ಬಿರಿದಿತ್ತು!
ಠೀವಿಯಿಂದ ಹೆ–
ಗ್ಗೋವಿ ಹೊತ್ತು ಹೇ
ವೀರಗಣವೆಲ್ಲ–ಏರಿ ನಡೆದಿತ್ತು!

೯

ಅರಿಕುಠಾರ ನೇ–
ತಾರನವರ ನೇ–
ಕಾರ ಹಾರಿದ್ದ – ನಭದಿ ನಿಂತಿದ್ದ!
ಗಾಳಿದೇರ ಕರೆ–
ಯಿಂದ ಕೇಳಿಬರೆ
ಕಹಳೆ, ದುರ್ದಮನ–ಹೂಡಿದರು ಕದನ!

೧೦

ಅಗ್ನಿಗೋಲಗಳ–
ನುಗುಳ್ವ ಶೂಲಗಳ
ಗಗನದಿಂದಿಳೆಗೆ–ಕರೆದರೇನೆಂಬೆ!
ವಿಘ್ನವೊಂದೆ? ನೂ–
ರಾರು; ತಡೆಯನೂ
ತಡೆದು ಜಡಿಯುತ್ತ–ಸಾಗಿದರು ಮುಂದೆ!

೧೧

ಬ್ರಹ್ಮದೇಶದ–
ಬ್ರಹ್ಮವೇಷದಾ
ರಿಪುಗಳನು ಮೆಟ್ಟಿ–ನಿಂದರೆದೆತಟ್ಟಿ!
ದೇವತೆಗಳು ಆ–
ನಂದದಿಂದ ಈ
ಸೇನೆಗೆರಚಿದರು–ಹೂವುಗಳ ಕಟ್ಟಿ!

೧೨

ಕತ್ತಿಗಿತ್ತಿಗಳ
ಮಿರ್ದಕೋವಿಗಳ
ಹತ್ತುಪಟ್ಟಿದ್ದ–ಭೂತಬಂದೂಕು
ತುತ್ತ ಬಂದರೂ
ತಾಳಿ ನಿಂದರೋ
ದೇಶಸೇವಕರು–ಸಾವಿಗೂ ತೊಡಕು!

೧೩

ನೆಪೋಲಿಯನ್ನನ
ಹಿಟ್ಲರನನ್ನ
ಮಿರಿದೆದೆಯಾತ–ಸಿಂಹಪುರರಾಜ;
ಅರಿಗಳರಿಯೆ ರಣ–
ದಲ್ಲಿ ನುಗ್ಗಿ ಚಣ–
ಚಣಕೆ ಹುರುಪುಣಿಸಿ–ಬಂದ ರವಿತೇಜ;

೧೪

ಪಡುವಣಾಳುಗಳ
ಪಡೆಯ ದಾಳಿಗಳ
ತಡೆದ ಸೀಸರನೋ–ಎನ್ನುವಂಥವನು
ಅರಿಕುಠಾರ ತಾ–
ರುಣ್ಯಸಾರ ತಾ–
ಯ್ಗರಗಿ ನಿಲ್ಲಿಸಿದ – ತನ್ನ ಜನರನ್ನು!

೧೫

ವೀರನಾದ ವೃಂ–
ದಾರ ವಂದ್ಯ 'ವಂ–
ದೇsಮಾತರಂ' – ಎಂದು ಹಾಡಿಸಿದ;
ಕಾಡು ಮೇಡು ಗಿರಿ
ಗುಹೆಗಳಲ್ಲಿ ಸರಿ
ತುಂಬಿತಾನಾದ–ಭಕ್ತಿಸಮ್ಮೋದ!

೧೬

ಬಂಡವಾಲಶಹ
ತಂಡಚೀರಿತಹ–
ಗಂಡ ಸತ್ತಂಥ–ಅಬಲೆಯಂತಾಯ್ತು!
ಹಿಂಡು ಹಿಂಡು ಜನ
ಹಿಗ್ಗಿತಾಗ; ವನ
ಭಾರತದ ಬದಿಗೆ–ಹೂತು ನಕ್ಕಿತ್ತು!

೧೭

ಒಂದೆ ವರುಷದಲಿ
ಪಡೆದ ವಿಜಯದಲಿ
ಉಂಡು ತೇಂಕಿತ್ತು ಭಾರತಿಯ ಹೃದಯ;
'ಗಂಡುಸೆಂದ ರೀ
ಹರಿಕುಮಾರ ರಾ–
ಜನ್ಯ ಕುಲರಾಜ' – ಎಂದಳಿರಲಭಯ!

೧೮

ಬಿದಿಗದೇಕೊ ಸರಿ–
ಯೆನಿಸಲಿಲ್ಲ, ಹಿರಿ
ಯೆಂದ ಖಡ್ಗವನು–ಮತ್ತೆ ಮರುವರುಷ;
ಹೊಗಲೆಬೇಕು ಭಾ–
ರತವ, ಹೊಕ್ಕು ಬಾ–
ಗಿಲನು ಬಿಡುಗಡೆಯ–ತೆರೆಯುವವ ಪುರುಷ;

೧೯

ಮಿತ್ರ ರಾಜರೊಲಿ–
ದಿತ್ರ ಶಸ್ತ್ರದಲಿ
ಅರ್ಧ ಮುಗಿದಿತ್ತು–ಆದರೆದೆಗೆಡದೆ
ಮತ್ತೆ ಗಂಡ ರೌ–
ಡೊತ್ತಿ ಧುಮುಕಿದರೊ
ಕಣವ, ರಣದಲ್ಲಿ–ಕುಶಲತೆಯ ಬಿಡದೆ!

೨೦

ರಿಪುಗಳೆಲ್ಲ ಸಂ–
ಘಟಿಸಿ ಬಂದು ಸಂ–
ಗ್ರಾಮಭೂಮಿಯಲಿ–ಇದಿರಿಸಿದರಂದು:
ಪ್ರತಿಭಟಂಗೆ ಭಟ–
ನಂತೆ ತಾಗಿ ನಟ–
ರಾಜಶೀವಿಯಲಿ–ಕಾದಿದರು ನಿಂದು!

೨೧

ಟಾಂಕುಗೀಂಕುಗಳ
ತರುಬಿ ಗುಂಡುಗಳ
ಮಳೆಯ ಸುರಿಸಿದರು–ಭಾರತೀ ಸುತರು!
ಅರಿಗಳುರಿದು ಸರಿ
ಸರಿದು ನಡೆಯೆ ಸರಿ
ಸುರಿದು ಬಿಟ್ಟಿತ್ತು–ಬಿದಿಗೆ ಮೈಬೆವರು!

೨೨

ಶಸ್ತ್ರಶಾಸ್ತ್ರಹಿಂ
ದಾಯ್ತು; ಪಡುಗರಿಂ
ದದ್ಭುತದ ಬಾಂಬು–ಬಂದು ಸಿಡಿದಿತ್ತು!
ಉಟ್ಟ ಧೋತ್ರವನೆ
ಕಾಚಕಟ್ಟೆ ಸೆಣ–
ಸಿದರು ಕಡೆತನಕ–ನೆತ್ತರುರಿದಿತ್ತು!

೨೩

ವ್ಯೋಮಯಾನದಲಿ
ಭೀಮ ವೇಗದಲಿ
ಸಾಗಿದಾ ಧೀರ–ಭಾರತೋದ್ಧಾರ
ಆಗದಾಗೆ ಕಂ–
ಗೆಟ್ಟ ಕತ್ತಲಂ–
ಬೋಧಿಯಲಿ ಬಿದ್ದ–ಸಿಂಹನೇತಾರ!

೨೪

ಹಾ ವಿದೇಶಿಯೋ–
ಧಾಳಿ ನುಗ್ಗಿ ಹೋ–
ಗಿರಿದು ಕೊಂದಿತ್ತು–ಭಾರತದ ಬಲವ;
ಹಾ ವಿವರ್ಣಮುಖ
ಭಾರತಕ್ಕೆ ಸಖ!
ಮುರಿದು ಕೊಟ್ಟಿತ್ತು–ಭಾರತವು ಎಲುವ!

೨೫

ಅತ್ತು ಅತ್ತು ನಾ
ಸತ್ತು ಹೋದೆನಾ
ಹೊತ್ತು ಸುದ್ದಿಯನು–ಕೇಳಿ ಹೃದಯದಲಿ
ಬಿತ್ತು ಕಾದ ಕ–
ಬ್ಬಿಣದ ಗೋಲಕ!
ಗ್ರಸ್ತವಾಗಿತ್ತು–ಆತ್ಮಕತ್ತಲಲಿ!

೨೬

ಸುಲಿದು ಸಮ್ಮವನು
ಹಿಳಿದು ನೆತ್ತರನು
ತನಿಖೆ ನಡೆಸಿತ್ತು–ಪರರ ಸರಕಾರ!
ಮರಣದಂಡನೆಗೆ
ತೆರವೆ ಇಲ್ಲ; ಹಗೆ
ತೀರಿಸುವುದಿತ್ತು–ಅದರ ದರಬಾರ!

೨೭

ತರುಣ ತರುಣಿಯರ
ಹುರುಪು ಸತ್ತದರ
ಮೇಲೆ ಶತಗೋರಿ–ಕಟ್ಟಿದಂತಾಗಿ
ಕರುಳಿಗಿರದ ಹಾ–
ಗಾಗಿ ದೇಶ 'ಹಾ'
ಎಂದು ಬಸವಳಿದು–ಬಿತ್ತು ಹೆಣವಾಗಿ!

೨೮

ಬರದ ಮೇಲೆ ಬರ
ಬರೆಯ ಮೇಲೆ ಬರೆ
ಹೊರೆಯ ಮೇಲೆ ಹೊರೆ–ಹೇರಿದರು ಪರರು;
ತೆರದ ಮೇಲೆ ತೆರ
ಕರದ ಮೇಲೆ ಕರ
ಹಾಕಿದರು ಪರರು–ಮನುಜದಾನವರು!

೨೯

ಎಲುಬಿನೋಡುಗಳ
ಬೀಡು, ಕೀಲುಗಳ
ಯಂತ್ರವಾದತ್ತು–ಭಾರತನ ದೇಹ
ಎಲೆಲೆ ಪ್ರೇತಗಳ
ಕೂಸು ಕುನ್ನಿಗಳ
ಮರಣವಾದತ್ತು–ಭಾರತನ ಗೇಹ!

೩೦

ಸಹರದಂತೆ ನಾ–
ಡೆಲ್ಲ ರುದ್ರನಾ–
ಟಕದ ಬಯಲಾಯ್ತು–ಚಿತೆಯು ಹೊತ್ತಿತ್ತು;
ಅಹರಹದಲೂ
ಅನ್ನದಗಳೂ
ಇಲ್ಲವಾದತ್ತು–ದೇಶವತ್ತಿತ್ತು!

೩೧

ಕಾಲಭೈರವನ
ಲೀಲೆಯಲ್ಲಿ ಜನ
ಮಣ್ಣು ಕಚ್ಚಿತ್ತು–ಸುಣ್ಣವಾಗಿತ್ತು;
ಅರಿಗಳೆಂಬ ರಣ
ಹದ್ದು ಕಾಗೆ ಬಣ
ತಿಂದು ತೇಗಿತ್ತು–ಕೊಂದು ಕೂಗಿತ್ತು!

೩೨

ಬಾನು ಬಯಲು ಬೆಂ–
ಗಾಡು ಗುಡ್ಡ ವನ
'ಬೆಕೋ' ಎಂದಿತ್ತು–ಶೂನ್ಯವಾಗಿತ್ತು;
'ನಾನು ಎಂಬ ನರ–
ಹುಳದ ಕೊರಳ ಸರ
ಕೇಳದಾಗಿತ್ತು–ದೈನ್ಯ ಬಾಗಿತ್ತು!

೩೩

ತಮದ ಗೂಢ ಗವಿ–
ಯಲ್ಲಿ ಬಾಳ ಛವಿ
ಮುಳುಗಿ ಹೋಗಿತ್ತು – ಮೂಡದಾಗಿತ್ತು;
ಸಮರ ರಾಕ್ಷಸರ
ಕಾಲಕರ್ಕಶರ
ಕಣ್ಣು ಕೆರಳಿತ್ತು–ಉರಿಯುಗುಳುತಿತ್ತು!

೩೪

ಹರಿಕುಮಾರನಿವ
ಹರಕುಮಾರನವ
ಎಂದು ಬಿಟ್ಟಿತೇ–ಕೇಡು ಕೆರಳಿರಲು?
ದೊರಕಲಹುದೆ ಜಯ
ಸತ್ಯಕಿಲ್ಲ ಭಯ
ಸಾವು ಬಹುದೆಂದು–ಸಾವನಪ್ಪಿರಲು!

೩೫

ಸೊನ್ನೆ ಸೊನ್ನೆಗಳ
ಸಾಲು ಸಾಲುಗಳ
ಕಂಡು ನಕ್ಕಿತ್ತು–ಗೆದ್ದವರ ಕಿಚ್ಚು!
ತನ್ನ ಕಾಲ ಕೆಳ
ಗಿದ್ದ ದೇಹಗಳ
ಮೆಟ್ಟಿ ಬಿಕ್ಕಿತ್ತು–ಅವರ ರಣಹುಚ್ಚು

೩೬

ಸಮರದಾಸೆ ಸಾ–
ಹಸದ ಬಾಸೆ ಸಾ–
ರಿತ್ತು ಕೆಳ ಕೆಳಗೆ ಬಿತ್ತತಲದೊಳಗೆ;
ಭರತ ಖಂಡವೇ
ಚರಿತೆಯಿಂದಲೇ
ಕಳಚಿಹೋದತ್ತು–ಇಲ್ಲದೊಳವೊಳಗೆ!

೩೭

ಪ್ರಳಯವಲ್ಲ, ಖ–
ಗ್ರಾಸ! ರಾಹುಮುಖ
ನುಂಗಿಬಿಟ್ಟಿತ್ತು–ಭಾರತವನೆತ್ತಿ!
ಅಳಿವಿನಾಳದಲಿ
ಮರೆತ ಕಾಳದಲಿ
ಹೂತುಹೋಗಿತ್ತು–ಬೆಂಕಿಯನು ಬಿತ್ತಿ!

೩೮

ಕಡೆಗೆ ಅರ್ಧ ಭಾ–
ರತಕೆ ಬಂತು ಭಾ–
ಗ್ಯೋದಯದ ಕಾಲ ಆದರಿಡಿಯಿಲ್ಲ
ಇಡಿಯು ಕಾಲದಲಿ
ಕಾಲವಾಯ್ತು; ಕಲಿ
ಕತ್ತರಿಸಿಯೆಬಿಟ್ಟ–ಕೈಗಳೇ ಇಲ್ಲ!

ಮಲ್ಲಿಕಾ ಮಾಧವೀಯ

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

ಮಾವಿನ ಮರಗಳ ಮಲ್ಲಿಗೆ ಗಿಡಗಳ
ತೋಹಿಗೆ ಆದಿನ ನಡೆದೆ–
ವಾರುಣಿ ವಾರಿಜ ನೇತ್ರದೆ ಸೆಳೆದಿರೆ
ವಾರಿಧಿರಾಯನ ಬಿಡದೆ;
ದೂರದಿ ರವಿ ಕದ್ದಿವರನು ನೋಡುತ
ಮೋಡದೆರೆಯ ಮರೆಯಲ್ಲಿ
ಬೀರಿರೆ ಮುಗುಳ್ನಗೆ ಚಿನ್ನದ ಗೆರೆಗಳು
ಮೂಡಿದ್ದವು ಮರದಲ್ಲಿ!

ಮರಕುಟುಕನು ಅಲ್ಲೆಲ್ಲೋ ಒಂದೆಡೆ
"ಕುಟುಕುಟು" ವೊಸಗೆಯ ಕೊರೆದು
ಮನದನ್ನೆಗೆ ತಂತಿಸುತಿರೆ ರಾಗದೆ;
ಕೆಂಪಿನ ಕೊಕ್ಕನು ತೆರೆದು
ಕರೆಯುತ್ತಿರೆ ಸಾರಿಕೆಯನು ಗಿಳಿಗಳ
ಅರಸ ರಸಾಲವ ಹಿರಿದು–
ತೆರಳಿದೆನೊಬ್ಬಳೆ ತೋಟಕೆ ತಂಪಿನ
ಸುಳಿಗಾಳಿಯ ಸೊಲ್ಲರಿದು.

ಹಣ್ಣನು ಹೆಕ್ಕಲು ಮೆಲ್ಲಗೆ ಬಾಗಿದೆ
ಗಿಣಿಗಡಕವ ಕಂಡೆಂದೆ:
"ಬಣ್ಣಿಸಿ ಸಮೆದಾ ಬೊಮ್ಮನ ಗೈಮೆಯು

ಹೆಣ್ಣಿಗೆ ಕುಂಕುಮದಂತೆ
ಹಣ್ಣನು ಕೊರೆದಿಹ ನೀ ಶುಕಶೇಖರ
ಶಿಲ್ಪಿಯ ಕಡೆತದ ಹಾಗೆ;
ಹಾರಿತೆ ಬಳಿಕಾ ಶುಕ–ಶುಕಿಯಿರುವೆಡೆ
ಹರುಷದ ಬುದ್ಬುದವಾಗೆ?"

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!
ಅತ್ತಿತ್ತರಸುತ ದರಲೆಯ ಸರಿಸುತ
ಹಣ್ಣಾರಿಸಿ ಹಣ್ಣಾದೆ;
ಫಕ್ಕನೆ ಮುಳುಗಿದ ಭಾಸ್ಕರನಿದಿರಲಿ
ಹೊಕ್ಕನು ಚಂದ್ರಮನೆಂದೆ!
ಆದರೆ ತಿಂಗಳ ಬಹುಳದೊಳೇನಿದು
ತುಂಬಿದ ಬಿದುಮೊಗವೆಂದು–
ನೋಡುತ್ತಿರೆ ಕೈಕೊಡೆಯನು ಬೀಸಿದ
ತರುಣದೊಬ್ಬನು ಬಂದು!

ನಾಚಿದೆ, ಚಾಚಿದೆ ಮೊಗವನು ಕೆಳಗಡೆ,
ಬೆಚ್ಚಿದೆದೆಯ ಸಂತೈಸಿ
ನೋಡಿದೆ; ನೋಡಿದ ಮಾಧವನೆಳನಗೆ
ಮಾತಾಡಿತು ಹೊರಸೂಸಿ:
"ಒಬ್ಬಳೆ, ಮಲ್ಲಿಗೆ, ಏನಿದು, ಎಲ್ಲಿಗೆ,
ಏತಕೆ?" ಎನ್ನಲು ಹೃದಯ
ತಬ್ಬಿಬ್ಬಾಯಿತು, ಎಡಹಿತು, ತಡಹಿತು–
ಮೌನವೆ ಬೆಳಸಿತು ಕೆಳೆಯ–

ಹರೆಯದ ಹೊಸ್ತಿಲ ಹತ್ತಿದ ಹೃದಯವು
ಬಳಸುವ ಭಾಷೆಯೆ ಬೇರೆ;
ಬರಿನುಡಿಯಾಡಂಬರ ವಿರದಳತಿಯ
ಅಕ್ಷರದಕ್ಷರ ಧಾರೆ!

ತೆರಗಣ್ಣಲಿ ಆ ಮೂರ್ತಿಯ ಬಿಂಬಿಸಿ
ಹೇಳಿದೆ, "ಮಾಧವ, ನನ್ನ
ಕರೆಯಲು ಬಂದೆಯ? ಅಯ್ಯೋ, ಮರಳದೆ
ಹೋದೆನು ಕತ್ತಲ ಮುನ್ನ!

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

"ಆಗಲೆ ಮನೆಯಲಿ ಕಾದಿಹರೊಬ್ಬರು
ನಿನ್ನನು ನೋಡಲು ಬಂದು;
ಬೇಗನೆ ನಡೆ" ಎನಲೆತ್ತಿದ ಕಾಲಿಗೆ
ಎಡಹಿತು ಬೇರಲ್ಲೊಂದು;
"ಹಾ" ಎಂದರಚುವುದರ್ಧದೊಳಿರೆ ಬಂ–
ದೆತ್ತಿದ ತೋಳುಗಳಲ್ಲಿ
ಗರುಡನದಲ್ಲ ಮನೋಜನ ಗೆರೆಯೊಂ–
ದಿದ್ದಿತು ಸಖಿ ಕೇಳಿಲ್ಲಿ!

ಮಾನಸಶಾಸ್ತ್ರವ ಕಲಿತೂ ಮತ್ತನು–
ಮಾನಿಸಿ ಮಾನಿಸ ಕೆಟ್ಟ;
ಧೇನಿಸಿ ಧೇನಿಸಿ ಪಡೆಯುವನೇನನು?
ಪರಲೋಕಕೆ ಮನೆಸುಟ್ಟ!
ಮಾಧವನನ್ನೆದೆಗಾದವ ಪ್ರೀತಿಯ
ವೇದವನರುಹಿದನಾಗ:
"ಹೌದೋ ಅಲ್ಲವೋ ಹೇಳಾವರನಲಿ
ಹುಟ್ಟದು ನಿನಗನುರಾಗ".

ಕೇಳಿದ್ದೆನು ಬಂದೆರಗಿದವರು ವಿ–
ಜ್ಞಾನದಿ ಬಹಳ ಹುಶಾರಿ;
ಮಾಳಿಗೆಯಲಿ ಕುಳಿತೋದುತಲಿದ್ದರೆ
ಕೇಳಿಸದವಗೆ ನಗಾರಿ!
ಇಂತಹ ಸರಸಿಯ ವರಿಸಿದೆನಾದರೆ

ಎಂತಹ ಸರಸಿಯ ಸಾರಿ
ಚಿಂತೆಯ ದೂರಿಕರಿಸಲಿ ಎಂಬೀ
ಚಿಂತೆಗೆ ತೆರೆಯದೆ ದಾರಿ?

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

ನಡುಗಿತು ತನು, ಝುಲ್ಲೆಂದಿತ್ತೆದೆ ಆ
ಒಣಬದುಕನು ನೆನೆದಲ್ಲಿ;
ಮಿಡುಕಿತ್ತಾತ್ಮ, ವಿಚಾರ ವಿರೋಧಿಸಿ
ಗುಡುಗಿತು ನಿಟ್ಟುಸಿರಲ್ಲಿ:

"ಮಾಧವ ಮೋದರಮಾಧವ, ರಸವಾ–
ಣೀಧವ! ಸಹೃದಯಭಾವ–
ಆದರ ತುಂಬಿದ ಮೇದುರಮುಖ ವಿ–
ದ್ಯಾಧರ, ಬಲುಮಿದು ಜೀವ!"
ನೆನೆದೇ ನೆನೆದೆನು ನಡೆದೇ ನಡೆದೆನು
ಕತ್ತಲ ಕಪ್ಪನು ಬೆಳಸಿ;
ಬೆಮರಿತು ಮುಖಮೈ–"ಮಾಧವ ನೀನೇ"
ಎಂದೆನು ಗದ್ಗದವೆರಸಿ

ಉಸುರಿದ ಮಾಧವ ನನ್ನವನಾದವ
ಪ್ರಣಯ ಪ್ರಣವವ ನಿಂತು:
"ಮನದನ್ನೆಯೆ, ಮಕರಂದವೆ, ಮಧುರವೆ,
ಮಲ್ಲಿಗೆಯೇ ಕೇಳ್ನಿಂತು–
"ಮಾಟದ ಕುವರಿಯೆ, ಮುದ್ದಿನ ಅಮರಿಯೆ,
ಮನೆ ಹೊಸ್ತಿಲ ಹೊಗುವಾಗ
ದಾಟದೆ ಬೀಳಪಶಕುನವ ದೆಂಬರು
ತಪ್ಪುವುದೀ ದುರ್ಯೋಗ."
ನಾಣಡಗಿತು, ನಗೆಮೂಡಿತು ಮನದಲಿ

ಮೆಚ್ಚಿದೆ ರಸಿಕನೆ ಎಂದು,
ಏನೋ ಮಾಡಿದೆ; ನೋಡಲು ಕಣ್ದೆರೆ–
ದೆನ್ನೆದೆಯಿದಿರಿನ್ನೊಂದು!

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

ನಾಚಿದೆ ನಾಚಿದೆನಾದರೆ ಕತ್ತಲು
ಕಣ್ಣಿಗೆ ಬೆಳಕಿತ್ತಿತ್ತು;
ಯೋಚನೆ ಮಾಡದೆ ನಡೆದೆನು ಮನೆಯಲಿ
ಮುಗ್ಗರಿಸಿದೆ ಮೈತೆತ್ತು.
ಅಮ್ಮನು "ಅಯ್ಯೋ" ಎಂದಳು, ಆದರೆ
ತಂದೆಯು ಪಿಟ್ಟೆನಲಿಲ್ಲ;
ಗಾಯಕೆ ಬರೆಬಿದ್ದಂತೆನಗೆನಿಸಿತು–
"ಸಾಯದೆ ಬದುಕಿದೆನಲ್ಲ!"

ಎಂಟೇ ದಿನದಲಿ ಪರಿಣಯ ನಿರ್ಣಯ;
ಬೇಡದ ಕೈಹಿಡಿವಂಥ
ಕಂಟಕಕಿಂತಲು ಹೆಚ್ಚಿನ ಕಂಟಕ
ಉಂಟೇ? ಹೆಣ್ಣೆದೆಗಂತ!
ಮಂಗಲವಾರವಮಂಗಲವೆನಿಸಿತು
ವರಪೂಜೆಯು ನಡೆವಾಗ;
ತಂಗೂಳನು ತಿಂದಂತೆದೆ ಹೇಸಿತು–
ಅಯ್ಯೋ ಎಂತಹ ಭೋಗ!

ಧಾರೆಯ ನೀರಿನಧಾರೆಗೆ ಕಂಬನಿ–
ಧಾರೆಯು ಬೆರೆವುದ ಕಂಡು
ಕಾರಿದಕೆಂಡವ ಹೆತ್ತವ ಮತ್ತವ
ಹೋಮದ ಕರ್ಬೊಗೆಯುಂಡು;
ಯಾರಾದರು ನನ್ನವರಿರುವರೆ ಈ
ಘೋರಾನ್ಯಾಯದಿನೆನ್ನ

ಪಾರಾಗಿಸುವವರೆಂದೆದೆಯೊಡೆದಿರೆ
ಕತ್ತಲುಕವಿದಿತು ಕಣ್ಣ!

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

ಎಚ್ಚತ್ತೆನು ಗೋಧೂಳಿಯ ಕಾಲವು
ಬ್ರಾಹ್ಮೀಸ್ಥಿತಿಗಿಳಿದಿತ್ತು;
ನಚ್ಚಿನ ಮಾಧವರಾಯರ ನೋಟವು
ಕತೆಯನು ಕನ್ನಡಿಸಿತ್ತು:
ವರನನ್ನಿರವನು ಗಮನಿಸಿ ಥಟ್ಟನೆ
ಅರಿತನು ಮೂರ್ಛೆಯಪರಿಯ;
ಹರಿವಶ್ರುವನೊರಸಿದ ನೆಮ್ಮಮ್ಮನ
ಮರುಕವ ಕಳೆದನು ಹಿರಿಯ.

"ಬೇಸರಪಡದಿರಿ, ಬಾಲಿಕೆಯೆದೆ ಹೂ–
ಮಾಲಿಕೆಯೇ ಸರಿ! ಅದನು
ಕೇಸುರಿಯಲಿ ಹಿಡಿವರೆ? ನೀವವಳನು
ಕೇಳದೆ ಮಾಡಿದಿರಿದನು;
ಆಸುರಿಯೀ ವಿಧ, ಧರ್ಮದ ಪಟ್ಟೆಯು
ಮಾಸಿದೆ ಹಿಂದೂಕುಲದ;
ಏಸೆಂದರು ಲೇಸೆನ್ನರು ಯಾರೂ;
ತಿರುಗುವೆ ನಾನೆಂ"ದೊರೆದ!

ಉಷೆ ಕುಂಕುಮ ಕರಡಿಗೆಯನು ತಂದಳು
ಮೂಡಲ ಮನೆಯೊಳಗಿಂದ:
ತೃಷಿತೇಕ್ಷಣದಲಿ ನೋಡಿದೆನವರಾ
ಮುಖವನು ಸೆರಗೊಳಗಿಂದ;
ಕುಂಕುಮವಿಟ್ಟರು, ಪ್ರೀತಿಯ ಕೊಟ್ಟರು

ಮಂದಸ್ಮಿತ ಮುಖದಿಂದ–
ಮಂಟಪದಲಿ ಮಂಗಲರವ ಮೊಳಗಿತು;
ಕೈಹಿಡಿದೆನು ಕೈಯಿಂದ!

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

ಮಾಧವ ಮಲ್ಲಿಗೆ, ಮಲ್ಲಿಗೆ ಮಾಧವ
ಆದೆವು ನಾವಂದಿಂದ;
ಪ್ರೇಮಾನಂದಗಳೊಂದಾದಂದದಿ
ಕೂಡಿರುವುದೆ ಬಲುಚಂದ
ಪ್ರಭೆ ನೀನೆಂಥವಳಿನ್ನೂ ತಿಳಿಯದ
ಸನ್ಯಾಸಿನಿಯರ ಹಾಗೆ
ಅಭಿಲಾಷೆಯನೊತ್ತಾಯದೊಳೊತ್ತಿಹೆ;
ಹಗೆಯಾದೀತದು ಕಡೆಗೆ!

ಆಸುರಯಜ್ಞಕೆ ಬಲಿಯಾಗದೆ ನಿಜ–
ಭಾಸುರ ಹೃದಯವ, ಗೆಳತಿ,
ದೇಶಾಂತರದಲ್ಲಾದರು ಕಾದಿಡು;
ಧೈರ್ಯವನುಳಿದರೆ ಕೆಡುತಿ–
ಮಾನಸಜಲ ಕಲಹಂಸಕುಲಕ್ಕೆವಿ–
ಹಾರಕೆ ತಕ್ಕುದು ಮಾತ್ರ;
ಮಾನಿಸದಿದ್ದರೆ ಮಾಹಿಷಯೂಥದ
ದಾಳಿಗೆ ಕೂಡಲೆ ಪಾತ್ರ!

ಮುಗುಳ್ನಗೆ ಮೂಡಿದ ನಿನ್ನೀಮೊಗ ವಿ*
ದ್ಯಾಧರನಾವನ ಎದೆಯ
ಹದಗೆಡಿಸದು–ಹೇಳರಗಿಳಿ, ಬಾರೇ
ಬಲ್ಲೆನು ನಿನ್ನೊಳವಗೆಯ;

ಪ್ರಭೆ, ಹರ್ಷಪ್ರಭೆಯಾಗುವೆ ಬುದ್ಧಿ–
ಪ್ರಭೆ ಗೆಳೆಯನ ಹುಡುಕಿದರೆ–
ನಭ ನೀರಾಜನ ಹಿಡಿವುದು ತಾರಗೆ–
ಯಳಗೊಂಡೆಲೆಲೇ ಚದುರೆ!

ನಾ–ಹೇಳುವೆ ಕೇಳೇ ಗೆಳತಿ,
ಬಂ–ದಿರುವುದು ನಿನ್ನದು ಸರತಿ!

–ಶ್ರೀ "ಬಾಲಪುರಂದರ",
ಭಟಿಕಲ್

(ಈಚೆಗೆ ಮಧ್ಯ ಪ್ರಾಂತದಲ್ಲಿ ಈ ಕಥನ ಕವನದಲ್ಲುಸುರಿರುವ ಕತೆಯಂತೆ ಒಂದು ಘಟನೆ ನಡೆದಿರುವುದು ಪತ್ರಿಕೆಗಳಲ್ಲಿ ವರದಿಯಾಗಿವೆ. ಅದರ ಹಿನ್ನೆಲೆಯಲ್ಲಿ ಇದನ್ನು ಓದಿದರೆ ಕತೆಯ ಸತ್ಯತೆಗೊಂದು ಮೆರಗು.)

ಅಮೃತಬಿಂದು

ಭಾರತಸ್ವಾತಂತ್ರ್ಯ

ಸ್ವಾತಂತ್ರ್ಯ ಭಾರತಕೆ ಬಂದಿತೋ ಬಂದಿತೆಂ–
ದಾಸೇತುಹಿಮಗಿರಿಯ ವರೆಗೆ ಹರಿದ
ಘೋಷಣೆಗೆ ಕರ್ಣ ಗಡುಚಿಕ್ಕಿದುದು, ಭಾರತರ
ಶೋಕವಿಂದಿಗೆ ಮುಗಿಯಿತೆಂದು ತಿಳಿದೆ!

ಆದರರೆ ನಿಮಿಷದಲಿ ಮರುನುಡಿಯಿತೆನ್ನ ಮನ–
ಸ್ವಾತಂತ್ರ್ಯವೆಂದರೇನರ್ಥ? ಅದರ
ಸೌಂದರ್ಯವೆಂತಹದು? ಯಾರಿಗದರಧಿಕಾರ?
ಎಲ್ಲಿ ದೊರಕುವುದು? ಅದಕಾವ ಫಲವು?

ಅರರೆ ಸೌರವ್ಯೂಹಸಂತತಿಯನೆಲ್ಲ ನೆರೆ
ಮರೆಯಿಸುವ ಗಾಢಾಂಧಕಾರವೊಮ್ಮೆ
ಕವಿದಂತೆ ಕಾಣಿಸಿತು! ಮಿತಮನೀಷೆಯ ನರನ
ಮತಿ ಬೆಳಕ ಕಾಣಲಿನ್ನೆಂತೆನಿಸಿತು!

ಧನಶಕ್ತಿ, ಶಾರೀರಶಕ್ತಿ, ಧೀಶಕ್ತಿಗಳ
ಪಡೆದಲ್ಪಸಂಖ್ಯರನವರತ ತಮ್ಮ
ಬಲುಮೆಯಿಂದೂನಬಲರನ್ನಾಳಲೆಸುತಿಹ
ಕಲುಷ ಚಿತ್ರವ ಕಂಡೆ ಭಾರತದಲಿ!

ವಂಚನಾವೈದಗ್ಧ್ಯವಿದ್ದವಗೆ ಸರ್ವಸುಖ,
ಮಿಕ್ಕವಗೆ ಮುಕ್ಕು ಮಣ್ಣೆಂದು ನಿತ್ಯ
ಹೊಕ್ಕರೀ ವ್ಯವಹಾರಜಗವ ಹೃತ್ಕುಹರದಲಿ
ನಕ್ಕು ಸೈತಾನ ಗುಡುಗುಡಿಸುತಿಹನು!

ಮಂಕುಕವಿಗಳು, ಮಂಕುಹಿಡಿಯಿಸುವ ವಾಗ್ಮಿಗಳು
ಶಂಖವಾದ್ಯವ ಮಾಡಿ ಸ್ವಾತಂತ್ರ್ಯದ;
ಕಂಕಾಲದೇಹಿಗಳ ಕಣ್ಗೆ ಧೂಳೆರಚುವುದು
ಮಂಕಾಗಿಸಿತು ಮತಿಯ ಮೂರ್ಛೆಗೊಳಿಸಿ!

ಮಂದಮತಿಭೀರ್‍ವಲಸರೊಂದಾಗಿ ಬಾಳಬರ–
ದಂಧಕೂಪಾರಪತಿತಾತ್ಮರೆನಿಪ
ಹಿಂದಾಳುಗಳು ಕೋಟಿಸಂಖ್ಯರಿದ್ದರು ಕೂಡ
ಹೊಂದರೆಂದೆಂದಿಗೂ ಸ್ವಾತಂತ್ರ್ಯವ!

ಭಾರತಸ್ವಾತಂತ್ರ್ಯ ಮಿಂಚಿ ಮೆರೆಯಲು ಜನತೆ
ವೀರಧರ್ಮವ ಹಿಡಿದು ನಿಲ್ಲಬೇಕು;
ಆ ರಿಸಿಗಳೆಂದುದರಗಿಸಿಕೊಳ್ಳಬೇಕು, ಮಾ–
ಯಾವಿಗಳ ಮಾಯೆಯನು ಗೆಲ್ಲಬೇಕು!

ಕವಿ

ಅವನೆಂಥ ಕವಿಯೊ, ಅವನೆಂಥ ಕವಿಯೊ, ಅವ
ನೆಂಥ ಕವಿಯೊ ಎಂದೆ–
ಜಗದಂತರಂಗ ಸೌಂದರ್ಯಮೂರ್ತಿಯನು
ಕಡೆದ ಕಲೆಯ ತಂದೆ!

ಆ ಮನದ ಚೆಲುವನಾ ಪ್ರತಿಭೆಯೊಲವನಾ
ಕಲೆಯ ಬಲಕೆ ಮಣಿದು,
ಆನಂದಸಾಗರದ ಆಳದಲ್ಲಿ ಹೊ–
ಕ್ಕೆದ್ದು ತಣಿದು ಕುಣಿದು!

ಹೆಜ್ಜೆಡೆಯ ಚಂದ್ರಮನ ಬೆಳ್ಳಿಬೆಳಕ ನಡು–
ವೆದ್ದು ಚಿಮ್ಮಿ ಹರಿವ
ಸುಜ್ಞಾನಗಂಗೆಯನು ಹೊತ್ತ ಶಿರಕೆ ಮನ
ಸೋತೆ ಚೆಲುವ ಸುರಿವ!

ಹಣೆಗಣ್ಣಿನಪ್ರತಿಮ ವೀರಭಾವದಲಿ
ರುದ್ರನಾದರಿತ್ತ
ಎದೆವಣ್ಣ ಕರುಣೆ ಕಂಗಳಲಿ ಸೂಸುತಿದೆ–
ಏನಿದೀ ವಿಚಿತ್ರ!

ಜಗದಗಲ ಹರಹಿದುರವನ್ನು ಶಕ್ತಿಶಿರ
ಮೆಚ್ಚಿ ಸಿಂಗರಿಸಿದೆ;
ಸೊಗಯಿಸುವ ಸಿಂಹಕಟಿ ನೃತ್ಯಭಂಗಿಯಲಿ
ಬಳುಕಿ ಕೊಕ್ಕರಿಸಿದೆ!

ಹಿರಿವಜ್ರಸಂಪುಟಗಳೆರಡ ಕವಚಿದಂ
ತಿರುವ ಉಕ್ಕಿನೆದೆಯ
ಸ್ಫುರದಬ್ಜಕೋಟಿಕಾಂತಿಯನು ಕಂಡ ಕವಿ
ಧನ್ಯ ಧನ್ಯ ಗೆಳೆಯ!

ಕೋದಂಡದಂಡದಂತೆತ್ತಿ ಹಿಡಿದ ಭುಜ
ದಂಡದೊಲೆತವೇನು!
ಆದರ್ಶದರ್ಶನೋದಾತ್ತತಾಂಡವದ
ಕೆಳೆಯ ಸೆಳೆತವೇನು!

ನೆಲಮುಗಿಲುಸಪ್ತಪಾತಾಳದಾಳಗಳ–
ನಳತೆ ಮಾಡಿ ನಿಂತ
ಛಲದಂಕಮಲ್ಲನುತ್ತುಂಗಮೂರ್ತಿಯಾ
ಕಲ್ಪನೆಯೆ ಅನಂತ!

ಭಾರತದ ದುರ್ಗವೆನಿಸಿರುವ ರಕ್ಷಣಾ
ದಕ್ಷ ಶೈಲರಾಜ
ತನ್ನುಣುಗಿಯನ್ನು ಕೊಟ್ಟೆದೆಯ ಮೇಲೆ
ಹೊತ್ತಿರುವ ಭೋಗಭೋಜ!

ಕೈಲಾಸದಲ್ಲಿ ಸ್ವಚ್ಛಂದ ಛಂದದಲಿ
ಕುಳಿತು ನಕ್ಕ ಬಗೆಗೆ
ಕೈಕಾಲು ಬಿಟ್ಟು ತಲ್ಲಣಿಸಿ ಮೃತ್ಯು ತಾ
ಸರಿದ ದೂರದೆಡೆಗೆ!

ಆ ಶಾಂತಯೋಗಿ, ಗೌರಾಂಗ, ಗೌರಿಗೇ
ಶಿಖರವಾಗಿ ನಿಲುವ
ಈಶಾಂತರಂಗವನು ಕೆತ್ತಿಕಡೆದ ಕವಿ
ಚೆಲುವರಲ್ಲಿ ಚೆಲುವ!

ಆ ಚೆಲುವೆ ಸರ್ಗ, ಸುಸ್ಥಿತಿ, ಲಯಂಗಳಿಗೆ
ಬೀಜ, ಸಾಜದೋಜ!
ಆ ನಿಲುವೆ ದಿವ್ಯಕಲೆಗೆಲ್ಲ ನಲ್ಲ, ನಿ–
ರ್ವ್ಯಾಜರಮ್ಯ ತೇಜ!

ಅವಳು–ಅವನು

ನಕ್ಕು ನಲಿಯಲಿಂದು ಕುಣಿವ,
ಬಾ ಕೈಯ ತಾ–ತಣಿವ
ತಾ ತ್ತೈಯ ಥಾ ॥ಪಲ್ಲ॥

"ಹಕ್ಕಿ ಹಾರಿದಂತೆ ಹಾರಿ,
ದುಕ್ಕ ಸುಖಗಳನ್ನು ಮೀರಿ,
ಅಕ್ಕರನ್ನು ಬೀರಿ ತೂರಿ, ಕುಣಿಯೊ ತೈಯ ಥಾ, ಬಾ..."

"ರಾಧೆ, ರನ್ನೆ, ನನ್ನ ತನದ
ಬಳ್ಳಿಯಲ್ಲಿ ನಿನ್ನ ತನದ
ಬಳ್ಳಿ ಹೆಣೆದುಕೊಂಡ ಬಿನದ–ಕುಣಿಯೆ..."

"ಎದೆಯ ತುಳಸಿ ನಿನ್ನ ದಿನಿಯ
ಹೂವಿಗಿಂತ ನೇಹವಿನಿಯ–
ದೆಂದು ಎತ್ತಿರುವುದು ದನಿಯ–ಕುಣಿಯೊ..."

"ನಾನು ರಾಧೆ, ನೀನು ರಂಗ,
ಅದಲು ಬದಲಿನೊಂದು ಅಂಗ!
ತೋರಿಸೋಣ ಅದರ ರಂಗ–ಕುಣಿಯೆ..."

"ನಿನ್ನ ರೂಪ ನನ್ನ ದೀಪ!
ಚಿನ್ನ ಬಣ್ಣವೇಕೆ ಗೋಪ?
ಬಗೆಯ ಕದ್ದ ನೀನೆ ಭೂಪ! ಕುಣಿಯೊ..."

"ಪುರುಷಪ್ರಕೃತಿ ನಾವು ಜಾಣೆ,
ಅರ್ಧನಾರಿನಟರು ಕಾಣೆ–
ನನ್ನ ನಿನ್ನ ನೇಹದಾಣೆ! ಕುಣಿಯೆ..."

"ಮುಗುಳುನಗೆಯ ಚೆಲುವ, ನಾವು
ಹೂವುದುಂಬಿ ದುಂಬಿಹೂವು!
ಹೃದಯವಾಯ್ತು ಮಾಗಿ ಮಾವು ಕುಣಿಯೊ..."

"ಅರಿವುಗಣ್ಣಿನಮಳನೇಹ
ಬೆರೆಸಿ ನಮ್ಮನಿಂದು ಸೋಹ–
ಮೆನಿಸಿತಲ್ಲೆ ಹರಿಯೆ ಮೋಹ–ಕುಣಿಯೆ..."

"ಬೆಣ್ಣೆಯೆದೆಯ ಕಣ್ಣನಗೆಯ,
ಹೆಣ್ಣುಹಿಡುಕ! ನನ್ನ ಬಗೆಯ
ಕಣ್ಣತೆರೆಸಿ ಬಿಟ್ಟ ಗೆಳೆಯ! ಕುಣಿಯೊ..."

ಸಖ್ಯಕಿಂತ ಸೌಖ್ಯವಿಲ್ಲೆ;
ಮುಖ್ಯವೆಲ್ಲ ಮುಖ್ಯನಲ್ಲೆ!
ಮುಖಕೆ ಮುಖವನಿಟ್ಟು ನಿಲ್ಲೆ ಕುಣಿಯೆ..."

ನನ್ನಿಗಿಂತ ನಗ್ನವಿಲ್ಲ!
ನಲ್ಲಗಿಂತ ಚೆಲುವನಿಲ್ಲ!
ನೇಹಕಿಂತ ಸಿಹಿಯೆ ಇಲ್ಲ! ಕುಣಿಯೊ..."

"ಅರಿವೆ ಬೆಳಕು, ನೇಹವೆಣ್ಣೆ,
ಒಲಿದೆದೆಗಳೆ ಬತ್ತಿ, ಹೆಣ್ಣೆ!
ಬೆರೆದ ಮೇಲೆ ಬಗೆಯೆ ಬೆಣ್ಣೆ! ಕುಣಿಯೆ..."

ಎರಡನೆಯ ಬಿತ್ತಿಗೆ

ಯಾರಿಗೆ ಮೊಲೆವಾಲಿದು ನನ್ನೊಡೆಯನೆ
ಮಗು ತೀರಿದ ಮೇಲೆ?
ಯಾರಿಗೆ ಹೃದ್ಭರ ಸುಪ್ರೇಮಾಮೃತ
ಏಕಾಕಿನಿಯಾಗೆ?

ಸುಗ್ಗಿಯ ಕಾಲದಿ ಸಂಗ್ರಹಿಸಿದೆನಿದೊ
ಕಾಳುಕಡಿಗಳನ್ನು–
ಬಂಗಾರದ ಹಾಗಿರುವೀ ಬೆಳೆಯನು
ಯಾರಿಗೆ ಕೊಡಲಿನ್ನು?

ಮುಚ್ಚಿದ ಬಾಗಿಲಿನಗುಳಿಯ ನೀ ತೆರೆ–
ಹರಗೆಲೆ ಸುರಿ ಒಡೆಯ!
ಬಂಜೆ ನೆಲದ ಹುಲ್ಮುಚ್ಚಿದ ಹೆಂಟೆಯ
ಬಿರುಕಿನಲ್ಲಿ ಗೆಳೆಯ!

ಒಂಟೆದೆಗೆಲ್ಲಿದೆ ಸುಗ್ಗಿಯ ಸಡಗರ?
ಪ್ರೇಮದ ಬೀಜವನು–
ನೆಡಬೇಕನುದಿನ ಎಡೆವಿಡದರಸಾ,
ಇದೆ ನನ್ನೆದೆಯಾಸೆ!

(ಆ್ಯನ್ ಮಾರೋ ಲಿಂಡ್‌ಬರ್ಗ್‌ಳ ಕವನದ ಭಾವ)

ತೀರ್ಪು

ಇಡಕೂಡದು ಇಡಕೂಡದು ನಿಜಕೂರ್ಮೆಯನೆಂದೂ,
ನಿಜನಂಬಿಗೆಯೆಂದೂ;
ಬಡಮಾನವನೆದೆ ತಾಳದು ಆ ಕೂರ್ಪನ್ನೆಂದೂ,
ಆ ತೀರ್ಪನ್ನೆಂದೂ!

ಹರಿದಾರಿಯ ಹರಿದಾರಿಯ ಹರಿದಾರಿಯ ದೂರ,
ಅಂತರವೊ ಅಪಾರ!
ಅಚಲತೆಗೂ ವಿಚಲತೆಗೂ ಕಡಿಮೆಯೆ ವಿಸ್ತಾರ?
ಕಣ್ಣಿಗೆ ಕಣ್ ತೀರ!

ಮುಗ್ಧಾತ್ಮರ ಮುಗ್ಧತ್ವವು ಸೌಂದರ್ಯವೆ ಹೇಳು–
ಔದಾರ್ಯವೆ ಹೇಳು?
ಎಲ್ಲಕ್ಕೂ ಎಲ್ಲೆ ಕಣೋ, ಸ್ನಿಗ್ಧತೆಗೂ ಕೇಳು
ಇದೆ ಬಾಳಿನ ಬೋಳು!

ಅರೆವೀಕ್ಷಣ, ಅರೆಶಿಕ್ಷಣ, ಅರೆವಗೆ, ಅರೆವಾತು,
ಅರೆಗಜ್ಜದ ಸೇತು
ಅಮರತೆಗೂ ಮೃತಿಗೂ ನಡುವಿರುವನು ತಾ ನೇತು
ಮಾನವ ಕೈಯಾತು!

ಬರ್ದಿಲವನು ಬಯಸುವನವ ನರಕಕೆ ಮುಖಮಾಡಿ,
ನರರೊಡನುಂಡಾಡಿ;
ಬಿದ್ದೋಡುವ ಸಂಭಾವ್ಯವ ಮರೆದಾ ರಣಹೇಡಿ,
ಗೆಲವಪ್ಪುವ ನೋಡಿ!

ತನ್ನೊಡಲಿನ ಮೇಲೆ ತನಗೆಲ್ಲಿದೆಯಧಿಕಾರ?
ಬರಿಯ ಅಹಂಕಾರ!
ತನ್ನೆದೆಯನು ತನಗಳೆಯಲು ಬಾರದ ಕುಂಬಾರ–
ಅವನಿಗೆ ಧಿಕ್ಕಾರ!

ತನ್ನಾಜ್ಞೆಯ ಪಾಲಿಸಲೂ ತನಗೇ ಬಲವಿಲ್ಲ,
ತನಗೇ ಛಲವಿಲ್ಲ–
ತನ್ನಾತ್ಮವ ಕಾಣಲು ಸಹ ತನಗೇ ಕಣ್ಣಿಲ್ಲ,
ತಾನೇ ಮಣ್ಣೆಲ್ಲ!

ನಂಬಿಗೆಗವ ನಂಬಿಗೆಯನು ಕೊಡಬಲ್ಲನೆ ಹೇಳು?
ಇಡಬಲ್ಲನೆ ಹೇಳು?
ನಂಬದ ಕೂರ್ಮೆಯು ಕೂರ್ಮೆಯೆ? ಅದಕೀವೆಯ ತಾಣ?
ಅದೆ ಗಂಟಲ ಗಾಣ!

ನಾಕ

ತನ್ನ ತಾನು ಗೆಲಬೇಕು ಎಂಬುದಾ–
ದರ್ಶ ಸಿದ್ಧಿಯಣ್ಣ;
ಈ ನನ್ನಿಯನ್ನು ಸಾಧಿಸಲು ಬಾರದವ
ಕಾಣಬೇಕು ಮಣ್ಣ!
ಜಗುಲಿ ಹಾರಿ ಗಗನವನು ಹಾರುವದ
ಕಲಿತ ಮೇಲೆ ಮನುಜ
ಕಣ್ಣಗಲದಲ್ಲಿ ವಿಶ್ವವನೆ ಕಂಡು ತಾ
ನಾಗದಿಹನು ದಿವಿಜ!

ಅಗಲ ಅಗಲ ಮುಗಿಲಗಲ ಮತ್ತು ಮ–
ತ್ತಗಲ ಸೊಬಗು ಭವ್ಯ!
ಎದೆಯಗಲವಲ್ಲದಿನ್ನೊಂದು ಕಾಣದದ
ಪೂಜಿಸುವದೆ ದಿವ್ಯ!
ದೇಹ–ಬುದ್ಧಿ–ಮನ ಸಣ್ಣ ಸಣ್ಣವೋ
ಕಾಣಬಲ್ಲವಲ್ಲ–
ನಿರ್ಬಂಧಮುಕ್ತ ಯುಕ್ತಾತ್ಮ ಬಯಸಿದೊಡ–
ನೆದ್ದು ಬರುವದೆಲ್ಲ!

ಅಳತೆಯೊಳಗೆ ಸಿಗಬಲ್ಲುದೆಲ್ಲವೂ
ಕ್ಷುದ್ರ ಕಾರ್ಯರೂಪ,
ತನ್ನಳತೆಯಿಂದ ಜಗವಳೆಯುವಾತನ–
ಜ್ಞಾನದೊಂದು ಕೂಪ!
ಅರಿವಿನಿಂದ ಮುಂಬಂದು ದಿವ್ಯದೌ–
ದಾರ್ಯವೇರಿ, ಸುಳ್ಳ
ಧಿಕ್ಕರಿಸಿ ನಿಲ್ಲಬಲ್ಲಾತ್ಮ ವಿಶ್ವವ–
ನ್ನಳೆವ ದೊಡ್ಡ ಬಳ್ಳ!

ತನ್ನ ಗಡಿಯ ತಾ ದಾಟಿಹೋದ ಮೇ–
ಲಿಲ್ಲವಯ್ಯ ಎಲ್ಲೆ!
ನೀನನ್ಯನಲ್ಲದಿರಲೆಲ್ಲ ನಿನ್ನವಶ–
ವಕ್ಕು ದಾರಿಯಲ್ಲೆ!
ತನ್ನದೆಂಬುದಿರದವನ ತಮ್ಮವನೆ
ಎಂಬುದೆಲ್ಲ ಲೋಕ–
ತನ್ನನ್ನರೆಲ್ಲ ಹಗೆಯೆಂಬರಿಲ್ಲದಾ–
ದಲ್ಲಿ ನಿತ್ಯನಾಕ!

ಒಲವಿನ ಹಕ್ಕಿಗಳು

ಒಲವನುಂಡು ಉಲಿಯುವ
ಹಕ್ಕಿ ನಾವು ನಲಿಯುವಟ ॥ಪ॥

೧

ನಾವು ದೇವ ಹರಸಿ ಹಾರಬಿಟ್ಟ ಗಿಣಿಗಳು;
ನಾವು ದೇವಲೋಕ ಕಾಣದೊಲುಮೆಗಣಿಗಳು!

೨

ಸುಧೆಯನೊಮ್ಮೆ ಕುಡಿದ ಸುರರು ಮತ್ತೆ ಕುಡಿಯರು;
ಕುಡಿದು ಬಾಳ್ವೆವಾವು ನಿತ್ಯ ಒಲುಮೆಗುಡಿಕರು!

೩

ಕಣ್ಣುಮುಚ್ಚದಮರ ಕಂಡು ಕಂಡು ಚೆಲುವನು,
ಕುರುಡನಾಗಿ ಕಳೆಯಬೇಕು ತನ್ನ ಬಾಳನು!

೪

ಕಂಡ ಚೆಲುವ ಮತ್ತೆ ಮತ್ತೆ ಕಾಣಬಲ್ಲೆವು;
ಮುಚ್ಚಿತೆರೆವ ಕಣ್ಗೆ ಹೊಸತು ಹಳೆಯದೆಲ್ಲವು!

೫

ದೇವಗಾನದೇಕತಾನ ಬೇಸರಲ್ಲವೆ?
ವಿವಿಧ ರಾಗವೆಮ್ಮಪೂರ್ಣ ಗೀತಕಲ್ಲವೆ?

೬

ಮಡಿಯದಿರುವ ರಾಗಕೆಲ್ಲಿ ವಿರಹ, ಸೇರಿಕೆ?
ಮಡಿದು ಮತ್ತೆ ಸೇರಲಿರುವುದೆಮ್ಮ ಕೋರಿಕೆ!

೭

ಸುಸ್ಥಿರತೆಯ ಸುರರ ನೇಹ ಸಡಿಲ ಸಡಿಲವೋ;
ಅಸ್ಥಿರತೆಗೆ ಬೆದರಿ ನಿತ್ಯ ಹತ್ತರಿಸುವೆವೋ!

೮

ಭೋಗ ವಿವಿಧವಿರಲು ಒಲುಮೆಗಲ್ಪ ತಾಣವೋ;
ಎಲ್ಲ ಭೋಗವೆದೆಯ ರಾಗ–ಬೇರೆ ಕಾಣೆವೋ!

ಪ್ರೇಮವ್ರತ

ಪ್ರೀತಿಯೆ ದೇವರು ಎಂದಾರಾಧಿಸ–
ಹೋದೆನು ಬಡಪಾಯಿ–
ಆರಾಧನೆಗಪ್ರೀತಿಯು ಫಲಿಸಲು
ಪೆಚ್ಚಾದೆ ಶಿಪಾಯಿ!
ಮುಗುದತೆಯದು ಎಂದಾದರದೋರಿದೆ,
ಕ್ಷಮಿಸಿದೆನವಿನಯವ;
ಹಗಲಿರುಳೂ ಸುಪ್ರೇಮಾಮೃತ ಕೊ–
ಟ್ಟರುಹಿದೆ ನಿಜ ನಯವ!

ಸಾಮವ ಹೇಳಿದೆ, ದಾನವ ಬಳಸಿದೆ,
ಭೇದವ ಮುಂದಿಟ್ಟೆ;
ತಾಮಸ ಹೋಗದು ಬೆದರಿಸಿದರು, ಹಾಯ್
ಪ್ರೀತಿಸಿಯೇ ಕೆಟ್ಟೆ!
ಹೇಳದೆ ಹೋದರೆ ಮೂಗನವೋಲುಣ–
ಬೇಹುದನಾದರವ–
ಹೇಳಿದರರದೆ ಹೆಚ್ಚಯ್ಯೋ ರಮಿಸಲು
ಕಳೆವುದು ಇಡಿ ದಿನವ!

ತಾನೇ ತಾನಾಗೆಸಗುವ ಕೆಲಸಗ–
ಳಲ್ಲೇ ತಲ್ಲೀನೆ–
ಏನೆಂದರು ಹೌದೆಂಬಳು, ಕೃತಿಯಲಿ
ತಾ ಕಂಡದ್ದೇನೆ!
ಅಜ್ಞಾನವೊ, ಶಠಭಾವವೊ, ಸಲಿಗೆಯ–
ನುಂಡರಗಿಸಿಕೊಳದ
ಪ್ರಜ್ಞಾಹೀನ ಮನಸ್ಕತೆಯೋ, ಇದು
ನ್ಯೂನತೆಯೋ ಒಲಿದ?

ಅರಸಲು ಕಾಣದು ಕಾರಣ, ಕನ್ನೆಯ
    ಶಿಕ್ಷಣವೇ ಇಂತೋ?
ಸ್ಮರಿಸಿದರೆದೆ ಭುಗ್ಗೆಂದುರಿದೇಳ್ವುದು
    ಎಂತಹ ಗತಿ ಬಂತೋ!
ಹಿಡಿಯಲು ಬಾರದು, ಬಿಡಲೂ ಬಾರದು,
    ಹೇಗಾದರು ಕಷ್ಟ!
ಪ್ರೇಮವ್ರತದೀ ಇಕ್ಕುಳೊಳಡಗಿರೆ
    ಜೀವನವೇ ನಷ್ಟ!

ಕವಿವಿಡಂಬನ

ಹಳ್ಳಕೊಳ್ಳಗಳಲಿ
ಜಾರಿ ಜರುಗಿ ಬಳಲಿ
ಹೆಜ್ಜೆ ಹೆಜ್ಜೆಗೂನೂ
ಎಡವಿದರೂ ತಾನು
ತಡೆದ ಕಲ್ಲ ನೋಡಿ,
"ತಾಯ್ಮೊಲೆಗಿದು ಜೋಡಿ"
ಬಿದ್ದ ನೆಲದಿ ನಿಂದು,
"ತಾಯ ತೊಡೆಯಿದೆಂ"ದು
ಹಾಡಿ ಸವಿವ ಸವಿಯ
ಮೋಡಿಯೇನು ಕವಿಯ?

ಮುಗಿಲು ಮೇಲೆ ಬಿದ್ದು
ಕೊಡಲು ಸಿಡಿಲು–ಗುದ್ದು
"ಅಯ್ಯೊ" ಎಂದುಕೊಂಡೂ
ಅದನೆ ಅಪ್ಪಿಕೊಂಡು
ಮುದ್ದನಿತ್ತು, "ಮಗುವೇ
ಆಹಾ ನಿನ್ನ ನಗುವೇ!"
ಎಂದು ರಮಿಸಲೇನು,
ಅಹುದೆ ಗುದ್ದು ಜೇನು?
ತಿಳಿದು ತಿಳಿದು ಆತ
ಬಿಡನು ತನ್ನ ಮಾತ!

ಅಹಿಯ ಹಡೆದ ತಾಯಿ,
ಕಹಿಯ ಕುಡಿದ ಬಾಯಿ
ನೇಹರುಚಿಯ ನೆನೆಯೆ
ಮೋಹಕೇನು ಕೊನೆಯೆ?

ಅತ್ತು ಅತ್ತು ಬಹಳ
ನಕ್ಕೆನೆಂದು ಮರುಳ
ತಿಳಿದರುಂಟೆ ತಣಿವು
ಒಳಗೆ ಇರಲು ದಣಿವು?
ಯಾವ ದೃಷ್ಟಿಯೊ ಇದು–
ಅರಿವಿಗಂತು ಅರಿದು!

ಸೊಳ್ಳೆ ಕಡಿತವನ್ನು
ಪ್ರಿಯೆಯ ಮುತ್ತು ಎನ್ನು
ಎಂಬ ಕವಿಯ ಮಾತು
ಒಡಕು ಮಡಕೆ ತೂತು!
ಎಲ್ಲ ಚೆಲುವೆ ಎಂದು
ಕಾಗೆಗೆ ಗಿಳಿ ತಂದು
ಮದುವೆ ಮಾಡಲಹುದೆ–
ಕಲೆಯಿದೆನ್ನ ಬಹುದೆ?
ಇಂಥ ದೃಷ್ಟಿಯಲ್ಲಿ
ಸಾಜ ಸೊಬಗದೆಲ್ಲಿ?

ಇಲ್ಲದಲ್ಲಿ ಇರವ
ರೂಪಿಸುತ್ತ ಬರೆವ
ಕುರುಡು ಕಲ್ಪನೆಯನು
ಪ್ರತಿಭೆಯೆಂಬರೇನು?
ಕಂಡುದೆಲ್ಲ ಕಾಣ್ಕೆ
ಎಂಬುದಾವ ಪೊಣ್ಕೆ?
ನಿಜಕೆ ನಿಲ್ಲದೂಹೆ
ಬಿಸಿಲು ಕುದುರೆ ರೂಹೇ!
ಕಚ್ಚುತಿರುವ ಇಹವ
ದಿವ್ಯವೆಂಬ ವಹವಾ!

ದ್ವಂದ್ವದಲ್ಲಿ ನಡೆವ
ಪ್ರಕೃತಿಯೊಗಟನೊಡೆವ
ಹಟದ ಕವಿಯ ಕಣ್ಣು–
ಪಕ್ಷಪಾತ ಹುಣ್ಣು!
"ಹೀಗೆ" ಎಂದು ನುಡಿದು
ನಿಜವ ಬಿಟ್ಟು ನಡೆದು
ಊಹೆಯಲ್ಲೆ ತಣಿದು
ಬಂದಹಾಗೆ ಕುಣಿದು
ಕವಿಯು ಕಂಡುದೇನು?
ರಸಿಕನುಂಡುದೇನು?

ಒಂದ ನೆನೆ

ಹಲವ ಮರೆದೊಂದ ನೆನೆ–ಮನವೆ ಸುಮನೋಘನವೆ,
ಆನಂದನಂದನೋನ್ಮಾದಧುನಿಯ
ಆ ಲಾಸ್ಯಮೋಹನಿಯನಮರಸಂಜೀವನಿಯ–
ನಾ ಜೀವನೈಕಮಾಧುರ್ಯಖನಿಯ!

ಜಗದ ಜನದಂತರಂಗೋತ್ಥಭಾವತರಂಗ
ಮಗುಚಿ ಷಣ್ಮುಖದಿಂದ ಬಿದ್ದರೇನು?
ಅಗಣಿತಾರಾತಿಗಳ ಚೆಂಡಾಡಿದಭಿಮನ್ಯು–
ವಿಗೆ ಧೈರ್ಯ ಕೊನೆವರೆಗೆ ಕುಂದಿತೇನು?

ಮಂದರದ ತೆರ ಬೇಡ, ಮೇರುವಾಗೆಲೆ ಮನವೆ,
ಸೌಂದರ್ಯಸಾರಸರ್ವಸ್ವವಾಗಿ–
ಹೆಂದದಗಣಿತ ಯುಗಪ್ರಲಯಪ್ರವಾಹಗಳ
ಸಂಧಿಸಿಯು ನಿಲ್ಲು ನೀನಲುಗದಾಗಿ!

ಮಾನವ್ಯ ಪೌರುಷದ ಹಸ್ತದಾಚೆಗೆ ನಿಂತ
ದೇವಪೌರುಷಸಿದ್ಧಿಯೊಂದೆ ಸಿದ್ಧಿ!
ಜ್ಞಾನನಿಃಶ್ರೇಣಿಯಲಿ ಸಾಗತ್ತಲೇಕನ್ಯ
ಮಾನಮಿತಿಗಳ ಪಡೆವ ಮುಗ್ಧಬುದ್ಧಿ?

ಬೆಂಗದಿರ, ತಂಗದಿರ, ತಾರೆ, ಜಲಧಾರೆಗಳು
ಮಂಗಲದನಂಗನ ಮನೋರಮೆಯರು–
ತಂಗಾಳಿ, ತಲ್ಪಗಳ ಸೌಖ್ಯಸಂಕಲ್ಪಗಳ
ಸಂಗತಿಗಳಲ್ಪವಾ ದಿವ್ಯದಿದಿರು!

ಸಾವಗೆದ್ದರು ಷಡ್ರಿಪುಗಳ ಗೆಲದಾದರಾ
    ದೇವತೆಗಳವರ ಗೆಲುವೆಂಥ ಗೆಲುವು?
ದೇವತ್ವ ಸಾಧಿಸಿ "ಶಿವೋಹಂ ಶಿವೋಹಮೆಂ"
    ದಾವನೆಂದನೊ ಅವನ ಬಲವೆ ಬಲವು!

ಎತ್ತರಕ್ಕೆತ್ತರವಿದೆನಿಸುವುತ್ತುಂಗಧೃತಿ–
ಯುತ್ತಮಾಂಗವನೇರಿ ನಿಂತು ನೋಡು–
ಪ್ರತ್ಯುತ್ತರದ ಮೇರೆ ಮೀರ್ದ ಸತ್ವೋದ್ರೇಕ
ದುತ್ಪಾತದಲ್ಲಿ ನೀನೊಂದುಗೂಡು!

ಏಳು ನೀನೇಳಬುಧಿಯಾಳದಲಿ ಹೊಕ್ಕರೂ
ಬಾಳ ಜಂಜಡ ಬಾರದಿರದು ಕರೆಯೆ!
ತಾಳೆಯಂದದಿ ತಲೆಯನೆತ್ತಿ ಹತ್ತಂಗುಲದ
ಮೇಲೆ ನಿಲ್ಲದು ನಿನ್ನ ರಾಜ್ಯ ದೊರೆಯೆ!

ಇರಿತವೋ ದುರಿತವೋ?

ಆವ ಗಾಳಿಯೊಳೇನೊ ನಾ ನಂ–
ದನದ ಮಧ್ಯಕ್ಕೆದ್ದೆನೋ!
ಆವ ಮಾಯೆಯೊಳೇನೊ ನಾ ನ–
ನ್ನವಳ ಕಾಣುತಲಿದ್ದೆನೋ!

ಚಂದ್ರಿಕೆಯೆ ಕರಕರಗಿ ಹರಿವಂ–
ತಿತ್ತು ಮುಖದಿಂದೆನ್ನೆಡೆ–
ಸುಂದರಿಯು ನಸು ಬಿರಿಯೆ ತುಟಿಯನು
ಮಂದಹಾಸದ ಮುನ್ನಡೆ!

ಜೇನುದುಂಬಿದ ನೋಟವೆನ್ನನು
ಮೋನಗೊಳಿಸಿತು ತಣ್ಣಗೆ;
ಮಾನಿನಿಯ ನಸುಮ್ಮಾನವೊಯ್ದಿ–
ತ್ತೆದೆಯ ಶಾಂತಿಯ ದಿಣ್ಣೆಗೆ!

ಏನು ಮುಗ್ಧಮನೋಹರಾಕೃತಿ–
ಯೆಂದು ತೃಪ್ತಿಯನುಂಡೆನೋ!
ಧೇನಿಸುತ್ತವಳೊಮ್ಮೆ ಮಿಂಚೆ–
ದ್ದರಳಿದುದ ನಾ ಕಂಡೆನೋ!

ಆರತಿಯನೆತ್ತಲೊಯೆನಿಸಿತೆನ–
ಗಾರತಿಯ ಮೊಗ ನೋಡಲು!
ಸೂರೆಗೊಳಿಸಿತ್ತೆನ್ನರಾಗದ
ತಿಲಕ ಹಣೆಯಲಿ ಮೂಡಲು!

ಅಮೃತಗಿಮೃತದ ಕಲ್ಪನೆಗಳನು
    ಬಿಸುಟು ಧೈರ್ಯವ ತೊಟ್ಟೆನೋ;
ಸುಮನಸಳ ಚುಂಬನವನಾಶಿಸಿ
    ನನ್ನ ನೆನಹನೆ ಬಿಟ್ಟೆನೋ!

ಅವಳ ನಿಶ್ಚಲ ನೋಟವೀಯೆದೆ–
    ಯನ್ನು ಕವಳಿಸಿಬಿಟ್ಟಿತೋ!
ಅವಳ ನಿರ್ಮಲ ಭಾವ ಕಂಡಿದು
    ಕವನವನ್ನೇ ಕಟ್ಟಿತೋ!

ಬಳಿಯೊಳವಳಾ ಪ್ರೇಮಕಾಂತಿ ಕ–
    ಡಂಗಿ ಕರೆಗೊಡಲೆದ್ದಿರೆ–
ತಿಳಿಯದಾದೆನದಾವ ರಸವೆಂ–
    ದದರೊಳೇ ನಾನದ್ದಿರೆ!

ಕರದ ಕಂಕಣ ಕಿಂಕಿಣೀರವ
    ಪ್ರೇಮನಾಡಿಯ ಮಿಡಿಯಿತೋ!
ವರ ಕಪೋಲದ ನಗೆಯ ಗೆರೆ ಜು–
    ಮ್ಮೆನಿಸಿ ಹೃದಯವ ಹಿಡಿಯಿತೋ!

ಪ್ರಣಯವೋ, ಅದು ಪ್ರಣವವೋ, ಹೃ–
    ದ್ಯೋಗಸಾಧನಮಂತ್ರವೋ!
ವಿನಯವೋ, ಅವಿನಯವೊ ಅರಿಯೆನ–
    ದಾವಶಕ್ತಿಯ ತಂತ್ರವೋ–

ಎದೆಯ ಹಸಿವಿನದಮ್ಯ ಕೂಗಿನ
    ಮಾಧುರೀಪರಿಣಾಮದ
ವಿಧಿಗೆ ಬಾಗಿದೆ; ನೀತಿಭೀತಿಯ–
    ನೊಡನೆ ನೀಗಿದೆ ಲೋಕದ!

ಆ ಚೆಲುವು ಮೈದುಂಬಿ ಬರೆ ನಾ
ತೋಳ ಸೆರೆಯನ್ನೊಡ್ಡಿದೆ–
ಆಚೆ ನೋಡಿದೆನೊಮ್ಮೆ ಪುರುಷನ
ನೋಟವೆನ್ನೆದೆಗೊಡ್ಡಿದೆ!

***

ಆವ ಗಾಳಿಯೊಳೇನೊ ನಾ ನಂ–
ದನದ ಕೆಳಗುರುಳಿದ್ದೆನೋ!
ಆವ ಮಾಯೆಯೊಳೇನೊ ಬಂದೀ
ಭೂಮಿಯಲಿ ಬಿದ್ದಿದ್ದೆನೋ!

ನನ್ನವಳ ನಾ ನೋಡುತಿದ್ದ–
ದ್ದನ್ನೆಯವದೆಂತಾಯಿತೋ?
ನನ್ನೆದೆಯಲಂಪುಕ್ಕಿ ಹರಿದುದು
ಚೆನ್ನೆಯೆಡೆ ತಪ್ಪಾಯಿತೋ?

ದೇವಲೋಕದ ಪುರುಷರಾದರು
ಮಚ್ಚರವ ಬಿಡದಿರುವರೆ?
ಜೀವಿಗಳ ಹಾಗವರು ಕೃಪಣರೆ?
ಮೆಚ್ಚಿದುದ ಕೊಡದಿರುವರೆ?

ಒಲವ ಸವಿವುದು ಪಾಪವೆನಿಪುದೆ?
ದೇವರಾಜ್ಯದ ನೀತಿಗೆ?
ಚೆಲುವು ಸುಳ್ಳೇನೆಲ್ಲ ಮೋಹವೆ?
ತಳವಿದೇನಾ ಭೀತಿಗೆ?

ಮನದೊಲುಮೆ ಮೆಯ್ಯೊಲುಮೆಯಾದರೆ–
ಮಚ್ಚರವು ಬೇರಪ್ಪುದೆ?
ಅನಿಮಿಷನ ಮನ ಮಾನವನ ಮನ–
ಕಿಂತ ಹೆಚ್ಚೆನಬರ್ಪುದೆ?

ಒಲವಿಗಿಂತಲು ಚೆಲುವದಾವುದು?
    ದಿವಿಜ ಹೇಳಲು ಬಲ್ಲನೇ?
ಒಲಿದವರನೊಂದಾಗಗೊಡದಿರೆ
    ಚೆಲುವ ಕೊಂದಂತಲ್ಲವೆ?

ತಿಂದು ಮೂಸಿದ ಕಂಡು ಕೇಳಿದ
    ಕರ್ಮಗಳೆ ಬರಿ ವಂದ್ಯವೇ?
ಅಂದಿನನುರಕ್ತತೆಯು ಕಾಮವೆ?
    ಕಾಮವೆಂದೂ ನಿಂದ್ಯವೆ?

ಒಂದಿಕೆಯದಿಂತೇಕೆ ಶಾಸನ–
    ವಾಯ್ತು ಪುಂಸ್ತ್ರೀಯರ್ಕಳ?
ನಿಂದೆಗೇನುಂಟವರ ಬೆಸುಗೆಯೊ–
    ಳರಿಯೆ ಬುದ್ಧಿಯ ಜನಗಳ?

ನಾನೆ ದೀನನೆ? ಭಾಗ್ಯಹೀನನೆ?
    ನನ್ನವೋಲಿನ್ನನ್ಯರು–
ಹಾನಿಗೀಡಾಗಿಹರೆ ಮಚ್ಚರ–
    ದುರಿಗೆ ಸಿಕ್ಕಿ 'ಜಘನ್ಯರು'!

ಪಂಚಮೇಂದ್ರಿಯವಧಮವೆನಿಸಿತೆ?
    ಮುಟ್ಟಿದರೆ ಕೇಡೊದವಿತೆ?
ವಂಚಿಸಲು ನನ್ನಂಥ ಮುಗ್ಧರ
    ಸಂಚುಹೂಡುವುದೊಳ್ಳಿತೆ?

ಸ್ಪರ್ಶವಿಲ್ಲದ ರಾಗರಸ ರಂ–
    ಜಿಸುವುದೇನದು ದಿವ್ಯವೇ?
ಹರ್ಷವೇನಿದೆ ನಾಚಿ ನಡೆದರೆ?–
    ಕದ್ದು ಮಾಳ್ಪುದು ಭವ್ಯವೇ?

ನಾಗರಿಕತೆಯ ರೋಗವಲ್ಲದೆ
 ಯೋಗ್ಯವೇನೀ ನಾಟಕ?
ಸೋಗು ಮಾನ್ಯವೆ? ನಾಗರಿಕವೇ–
 ನೀಯಸೂಯಾಸ್ಫೋಟಕ?

***

ಆವ ಗಾಳಿಯೊಳೇನೊ ನಾ ನಂ–
 ದನದ ಮಧ್ಯಕ್ಕೆದ್ದೆನೋ!
ಆವ ಮಾಯೆಯೊಳೇನೊ ಬಂದೀ
 ಭೂಮಿಯಲಿ ಬಿದ್ದಿದ್ದೆನೋ!

ದುಂಬಿ ಮಲ್ಲಿಗೆಗೆ

ನಾನು ನೀನೇನೆಂದರೂ ಜಗ
ಮಾನಿಸುವುದೇ ಮಲ್ಲಿಗೆ?
ಕಾಣುವರ ಕಣ್ಣಳತೆ ಬೇರೆಯ–
ದೇನೆನುವೆಯೀ ಸೊಲ್ಲಿಗೆ?

ದೇವ ಬೇಡದೆ ಹೋದರೂ ಎಲೆ
ಹೂವೆ, ಜನ ಕೊಯ್ದೊಯ್ಯದೇ?
ಯಾವ ನಿಮಿಷಕ್ಕೆಮ್ಮ ವಿರಹವೊ!
ಭಾವಿಸಿದರೆದೆ ಬಿರಿಯದೇ

ಬುದ್ಧಿವಂತರ ಕುಲದಿ ಹುಟ್ಟಿದ
ತಪ್ಪಿಗೈನ್‌ಸ್ಟೀನ್ ಪಂಡಿತ–
ಇದ್ದ ನಾಡಿಂದೋಡಬೇಕಾ
ಯ್ತಲ್ಲವೇನಿದು ಖಂಡಿತ?

ಸತ್ಯವಾದವ ಹಿಡಿದು ಹೊರಟರೆ
ರಾಜಕುಲ ವಿಷವೂಡಿಸಿ
ಸ್ತುತ್ಯನಾದಾ ಸಾಕ್ರೇಟೀಸನ
ಕೊಂದಿತಲ್ಲವೆ ಕಾಡಿಸಿ?

ಪದ್ಮಿನಿಯು ತಾ ಮುಗ್ಧಪದ್ಮಿನಿ
ಯಾಗಿ ಜನಿಸಿದ ಪಾಪಕೆ
ಇಧ್ಮವಾದಳು ಕಾಮಿಯಾದ–
ಲ್ಲಾವುದೀನನ ಕೋಪಕೆ!

ಘೋರಿಗನುಕಂಪವನು ತೋರಿದ
ವೀರ ಪೃಥ್ವೀರಾಜನ
ಕ್ರೂರಿ ಕಂಗಳ ಕಿತ್ತನಲ್ಲವೆ?
ಬೇರೆಯೇನೆಮ್ಮೀ ಜನ?

ನಲ್ಲುಲಿಯೆ ಗಿಳಿಗಾಯ್ತು ಬಂಧವ–
ದೆಲ್ಲಿ ನುಡಿದರು ಹಿಡಿಯರೇ?
ಕಲ್ಲಿಗೂ ಸ್ವಾತಂತ್ರ್ಯವಿಲ್ಲ ಗೃ–
ಹಾದಿ ರಚನೆಗೆ ಕಡಿಯರೇ?

ಸಾಯಲಭ್ಯಸಿಸಿದ್ದನಂದ–
ರ್ಣಂತನಿದನರಿದಿಲ್ಲಿಯ
ಮಾಯೆಯನು ನಂಬುವರೆ? ಹೋಹೆ ಬಿ–
ಡಲ್ಲ ನಾ ಮೃತ್ಯುಂಜಯ!

ಗುಣಕೆ ಮತ್ಸರವಿಲ್ಲವೆಂಬುದು
ರಾಮರಾಜ್ಯದ ಪಾಲಿಗೆ;
ಹಣವೆ ದೈವತವಾದ ಲೋಕದಿ
ಬೇಡಿ ನಮ್ಮೀ ಕಾಲಿಗೆ!

ಸುಮನ ಸುಮ್ಮನೆ ಬಾಡಲೇತಕೆ
ಕೇಳಿ ನನ್ನೀ ನನ್ನಿಯ?
ಯಮಗೆ ಶರಣಾದಲ್ಲದೆಂದೂ
ತಪ್ಪದೆಮಗೀಯನ್ನೆಯ!

ಅಂದ ವಿಷ ನಿನಗಾದುದೀ ಮಕ–
ರಂದ ಹಗೆ ನನಗಾಯ್ತಲ!
ಬಂಧಿಸಿಟ್ಟರೆ ಮನೆಯೊಳೆನ್ನನು,
ನಿನಗೆ ಸೆರೆ ತಲೆಗೂದಲ!

ಚುಂಬಿಸೊಮ್ಮೆ ಸದಾನುರಾಗಿಣಿ
ಸಾಕು; ಮತ್ತೀ ಹರ್ಷದ
ಹಂಬಲೇ ಕೇಡಕ್ಕು ತಿಳಿ, ನಾ
ಬಡವ ಭಾರತ ವರ್ಷದ!

ಕುರುಡು ದೀಪ

ಕುರುಡು ಭಾವನೆಯೆ
ನಿನ್ನ ನಂಬಿ ನಾ
ದಾರಿ ನಡೆವೆನಲ್ಲೆ;

ಎರಡು ಕವಲುಗಳು
ಕಂಡ ಕೂಡಲೇ
ನಿನ್ನ ನೆನೆವೆನಲ್ಲೆ!

ಗೆದ್ದ ಕಾಲದಲಿ
ಹೇಗೊ ಸಾಗುವುದು
ಕಣ್ಣು ಮುಚ್ಚಿದೊಡೆಯು;

ಬಿದ್ದ ಕೂಡಲೇ
ಬೇಕು ನೀನೆ ತೋ–
ರದಿರೆ ಬುದ್ಧಿಗೆಡೆಯು!

ನಡೆಯುತಿರಲು ಹೆ–
ದ್ದಾರಿಯಲ್ಲಿ ಕಡೆ–
ಗಣಿಸಿ ಬಿಟ್ಟೆ ನಿನ್ನ;

ಕೆಡೆಯೆ ಹಳ್ಳದಲಿ
ಕಾಡು ಹಾದಿಯಲಿ
ಆದೆ ದೇವರನ್ನ!

ಕಂಡಮೇಲೆಯೂ
ಸ್ಪಷ್ಟವಿಲ್ಲ, ಕಾ–
ಣದೆಯು ಇಲ್ಲ ರೂಪ!

ಕಂಡು ಕಾಣಿಸದ
ದೀನಬಂಧುವೇ
ಶರಣು ಕುರುಡು ದೀಪ!

ನಿನ್ನ ಹಿಡಿದು ಜೀ–
ವನದ ಕಂಟಕಗ–
ಳೆಷ್ಟೊ ದಾಟಿ ಬಂದೆ–

ನಿನ್ನ ನೆನೆದು ಬಗೆ–
ಹರಿಯದಾಗಿ ಕೈ
ಕಟ್ಟಿಕೊಂಡು ನಿಂದೆ!

ನಸುಕೊ ಕತ್ತಲಿನ
ಮಸುಕೊ ಎಂದು ಕಂ–
ಗಾಣದಾಗಿ ನಿನ್ನ

ದೆಸೆಗೆ ಮತ್ತೆ ಕೈ
ನೀಡಿ ಕರೆಯುತಿಹೆ
ಕಾಯೊ ನನ್ನ ಚಿನ್ನ!

ನಾಳ್ಗಾಗಿಹಿಗೆ

ಬಿಡುಗಡೆಯ ಸಡಗರವನಡಿಗಡಿಗೆ ಕಂಡಾಯ್ತು
ನಾಡುದ್ದ ನಿನ್ನೆಯಿಂದು;
ಬಿಡುಗಡೆಯ ಪಡೆದ ಭಾರತದ ಬಡ ಜೀವಿಗಳ
ಬಡತನಕೆ ಮುಕ್ತಿಯೆಂದು?

ನಾಡೋಜ ಗಾಂಧೀಜಿ, ಮೂಕಕೋಟಿಯ ದೇವ
ಕಂಡ ಕನಸೆಲ್ಲಿ ಹೋಯ್ತು?
ನಾಡಿಗರ ನಾಡಾಡಿತನದ ಬಾಳುವೆಯಲ್ಲಿ
ಬದಲೇನು ಇಲ್ಲವಾಯ್ತು!

ನಾಡ ಹಂಚಿದುದಾಯ್ತು, ಬೇಡಿದುದನಿತ್ತಾಯ್ತು,
ಕಾಡುವುದು ತಪ್ಪಲಿಲ್ಲ;
ಬೇಡವಾದುದೆ ಜನಕೆ ಬೇಕಾಗುತಿರಲಿಂದು,
ಓಡಾಟ ನಿತ್ಯವೆಲ್ಲ!

ಹೆತ್ತವರ ಹೊತ್ತವರ ಮಸ್ತಕವ ತೆತ್ತವರ
ಚೀತ್ಕಾರ ಕೇಳು ಅಲ್ಲಿ–
ಎತ್ತ ಬಿಡುಗಡೆ? ಮತ್ತದೇನಿದೆಡಬಲದಲ್ಲಿ
ಕಾಣುವುದು ದೇಶದಲ್ಲಿ?

ಸತ್ವಹೀನರ ನಾಡಿದಾಯಿತಕ್ಕಟಯೆಂದು
ಹೃತ್ತಾಪದಿಂದ ಮರುಗಿ,
ಸತ್ತಂತೆ ಮಲಗಿದರು ತಾಯಿ ಮತ್ತೊಮ್ಮೊಮ್ಮೆ
ಕಿತ್ತೆದ್ದು ಕಾಳಿಯಾಗಿ–

ರಕ್ತದಾಹದ ರಕ್ಕಸರ ರಕ್ತ ಸೂರೆಗೊಳ–
ಲೇಳೆಂದನುಜ್ಞೆಯಿತ್ತು,
ಶಕ್ತಿ ನೀಡುತ್ತಿಹಳು ಕೊಳ್ಳದೋ ಕಂದೆರೆದು
ನಾಳ್ಗಾಗಿ ತಲೆಯನೆತ್ತು!

ಕಾಲಕಾಲಕೆ ತನ್ನ ನಾಲಗೆಯ ಚಾಚುವೀ
ಮ್ಲೇಚ್ಛತ್ವವನ್ನು ಕಡಿದು
ಮೂಲವನೆ ಕಿತ್ತೊಮ್ಮೆ ಪಾಕಶಾಸನನಂತೆ
ಎಸೆಯದರ ಬುಡವ ಹಿಡಿದು!

ಪಾಲುಗಾರಿಕೆಯಿಂದ ಪಾಲಾದ ನಾಡಿನ 'ಕ–
ಪಾಲಿ' ಸಿಡಿದೇಳು ನಿನ್ನ
ಹಾಳುಗೈದತ್ಯುದಾರತೆಯ ಬಿಡು, ಬೇಳ್ಪ ಭ–
ಸ್ಮಾಸುರರನಿಕ್ಕು ಮುನ್ನ!

ಏನು ಬಿಡುಗಡೆಯುದಯವೀ ರಕ್ತಪಂಕಿಲತೆ–
ಯೆಂಥದೀ ಕಲಹಕಾರ್ಯ?
ಕಾನನದ ನಾಗರಿಕ ನೃತ್ಯಕೇನಿದು ಮೂಡು
ಪಡುದೆಸೆಗಳಲ್ಲಿ ತೂರ್ಯ?

ಏಳು ಭಾರತದಾಳೆ ಗಂಡುಡೆಯ ಬಿಗಿದು ನೀ
ಕಾಳುಗೆಡೆವವರ ಹಮ್ಮ
ಏಳಬುಧಿಯಾಳದಲಿ ಹೂಳಿಬರದಿದ್ದರಿದೊ
ಹಿಡಿವರವರೆಮ್ಮ ದಮ್ಮ!

ರಾಷ್ಟ್ರಪಿತಾಮಹ

ಈತನಭಿನವಬುದ್ಧನೀತಕಾರಣಪುರುಷ,
ಸೋತು ಗೆಲುವ ವಿದಗ್ಧ ಸಂಪ್ರಬುದ್ಧ;
ಭೀತರನು ಕಾವ ನಿರ್ಭೀತಾತ್ಮನೀತ ನವ–
ನೀತ ಕೋಮಲ ಹೃದಯ, ನವ್ಯಸಿದ್ಧ!

ಸ್ವಾತಂತ್ರ್ಯಸಮರಪಂಡಿತ, ಸರ್ವಧರ್ಮಸಹ–
ನಾತತ್ವಮಂಡಿತ, ವದಾನ್ಯವರ್ಯ;
ಭೂತ ಭೌತಿಕ ಕಾರ್ಯಕಾರಣಕಲಾವೇತ್ತ,
ನೂತನ ವಿಭೂತಿ, ನರಲೋಕದಾರ್ಯ!

ಭಾರತದ ಭಾಗ್ಯಚಕ್ರವ ತಿರುಗಿಸಿದ ತಂತ್ರ–
ಸಾರ, ಸರ್ವೋದ್ಧಾರ, ಸತ್ಯಪೂರ;
ದೂರದರ್ಶನ, ದುಗ್ಧಹಾಸ, ಮೋಹನದಾಸ,
ಆರು ಹಗೆಗಳ ಗೆದ್ದ ಶಾಂತವೀರ!

ಹಿಡಿದು ಸತ್ಯಾಹಿಂಸೆಯಸ್ತ್ರಗಳ ದುರ್ಮನರ
ಕೆಡೆದ ಕದನಕಪಾಲಿ, ಕರ್ಮಯೋಗಿ;
ನುಡಿದಂತೆ ನಡೆವ ನವ ದೇವಮಾನವ, ನಮ್ಮ
ಜಡೆಯಿರದ ತವಸಿ, ದಿವ್ಯಾನುರಾಗಿ!

ಈತ ಯುಗಪುರುಷನೆಂದೆನಿಸಿ ಬಾಳಿದ, ದೇವ–
ಗೀತಯಶನಾಗಿ ಭಾರತವಿಧಾತ;
ನೀತಿನಭದುತ್ಪ್ರಭ ದಿವಾಕರ, ನವೀನಮನು–
ವೀತ ಪಾವನಚರಿತ, ಶಾಂತಿದೂತ!

(ಗಾಂಧಿಯವರ ೭೯ನೆಯ ಹುಟ್ಟುಹಬ್ಬದಲ್ಲಿ)

ಬೇರೆ ಬೇರೆ

ಅಮೃತಸಿದ್ಧಿಯ ಕಂಡ ಯೋಗೀಂದ್ರನದೆ ಬೇರೆ,
ಹಾಲಾಹಲವನುಂಡ ಬಗೆಯೆ ಬೇರೆ;
ಸುಮನರಾಶಾಬಂಧ ಕೋದ ಮಾಲೆಯೆ ಬೇರೆ,
ವಿಮನರೆದೆಯಾಳದುಗ್ರತೆಯೆ ಬೇರೆ!

ಉಂಡುಟ್ಟು ನಲಿದ ನರ ಕಂಡ ಕಾಣ್ಕೆಯೆ ಬೇರೆ,
ಖಂಡಮಾಂಸವು ಕರಗಿದವನದನ್ಯ;
ಗಂಡನುಳ್ಳವಳ ಹಸದನದ ಸಂಭ್ರಮ ಬೇರೆ,
ಮುಂಡನಕೆ ತಲೆಗೊಡುವ ಸಮಯವನ್ಯ!

ಕಾಳಿದಾಸನ ಕಾವ್ಯದುಲ್ಲಾಸವೇ ಬೇರೆ,
ಬಾಳಾಳ ಕಂಡ ಭವಭೂತಿ ಬೇರೆ;
ನಾಳಿನೇಳಿಗೆಯ ನಿಶ್ಚಯವ ಕಂಡವ ಬೇರೆ,
ಗಾಳಿಗೋಪುರ ಕಂಡ ಕತೆಯೆ ಬೇರೆ!

ಸ್ವರ್ಗಸೀಮೆಗೆ ಸೇರಿದವನ ಹಾಡೊಂದು ಬಗೆ,
ದುರ್ಗಮಾರಣ್ಯಸ್ಥನುಕ್ತಿ ಬೇರೆ;
ಸ್ವರ್ಗದಪ್ಸರೆಯ ವಿರಹಾಲಾಪ, ಬಡ ಕೂಲಿ
ವರ್ಗದವಳೆದೆಗಾಯ–ಬೇರೆ ಬೇರೆ!

ಧನಿಕ ರಸಿಕನ ಕಾವ್ಯರುಚಿವಿಲಾಸವೆ ಬೇರೆ
ದಲಿತ ದೀನನ ದೃಷ್ಟಿಧಾರೆಯನ್ಯ;
ತಿಳಿದು ತಿರುಳುಂಬವನ ತರವೊಂದಪಕ್ವಮತಿ
ಸುಲಿದು ಸಾರವನೆಸೆವ ರೀತಿ ಭಿನ್ನ!

ಹಸುಳೆ ಹಾಲೆಂದೀತು, ಬಸವಳಿದ ಪಯಣಿಗನು
ತುಸು ನೀರುಮಜ್ಜಿಗೆಯ ತನ್ನಿರೆಂಬ;
ಕಸುವಿರಲು ರಸವೂಟ, ಕಾಹಿಲೆಯೊಳಿರೆ ಕೊಟ್ಟ
ವಿಷವನ್ನೆ ಯೋಗಜ್ಞ ರಸ್ಯವೆಂಬ!

ಕನ್ನಡ ಗುಡಿ

ಹಾರು ಕನ್ನಡದ ಬೀರ ಗುಡಿಯೆ! ತಲೆ–
ಮಾರು ಮಾರಿನಿಂದ
ತಪಿಸೆ ದೇವ ಕಂದೆರೆದು ಕನ್ನಡದ
ಜಯಕೆ "ಅಸ್ತು" ಎಂದ;

ಇಂದು ಜನತೆಯೆಚ್ಚತ್ತು ದೈವಕೃಪೆ
ಬಳಸಿಕೊಳ್ಳಬೇಕು;
ಮಂದ ಗಮನವನು ಬಿಟ್ಟು ಗಾಳಿದೇ–
ರೇರಿ ಸಾಗಬೇಕು!

'ಕನ್ನಡಮ್ಮ' ಯೆಂದಂದಿನಿಂದ ಕ–
ಣ್ಣೀರುಗರೆದ ನಮ್ಮ
ಅಣ್ಣ ತಮ್ಮದಿರ ಕಾಯ್ಪು ಕಡುಗಿ ಕರ–
ವಾಳವಾಗಲೆಮ್ಮ!

ದೇವದಾನವರು ಅಡ್ಡ ಬಂದರೂ
ಕೇಳಲೊಲ್ಲೆವಿನ್ನು;
ಜಾವಜಾವಕೂ ಉರಿಯುತಿರುವುದು–
ತ್ಕಂಠೆ ತೆರೆದ ಕಣ್ಣು!

ನಾಡಹಬ್ಬವೀ ನಾಡಿನೇಳಿಗೆಯ
ನಾಂದಿಯಾಗಿ ನಿಲಲಿ;
ಮೂಡಿ ಬರಲಿ ಮಿಂಚಂತೆ ಹುರುಪು ನರ–
ನಾಡಿನಾಡಿಗಳಲಿ!

‘ಉಧೋ’ಯೆಂದು ಕನ್ನಡದ ನೋಂಪಿಯನು
 ಹೊತ್ತ ನಾಡದಳವೇ;
ಇದೋ ಎತ್ತಿ ಹಿಡಿದೆಮ್ಮ ಬಾವುಟವ
 ನಡೆಯಿರಿನ್ನು ತಡವೇ?

ಪ್ರಾರ್ಥನೆ

ಕರೆಯೊ ಹೇ ಗುರು, ಕರೆಯೊ ಪುಣ್ಯ–
ಪ್ರಾತರುದಯದೊಳಿಂದು; ನೀ
ಕರೆದ ವಿಶ್ವವಿಶಾಲ ಮೇಲಕೆ
ತೆರೆದ ನಿನ್ನ ದ್ವಾರದೆ!

ಉದಯಗಿರಿಯುತ್ತುಂಗ ಶಿಖರದೆ
ಎನ್ನ ಕರೆ ದನಿಯೆತ್ತಿ ನೀ;
"ಹುದುಗಿತಂಧತಮಸ್ಸು ನೋಡಿದೊ,
ಬೆಳರುಗಡಲಿನ ತಳದಲಿ!

"ಏಳು ಮಗು ನೀ ಸ್ವಾರ್ಥದಿಂದೆ–
ದ್ದೇಳು ಹೀನತೆಯಿಂದ ನೀ;
ಏಳು ಜಾಡ್ಯವ ಕೊಡಹಿ ಧೀರೋ–
ದಾತ್ತವೃತ್ತಿಯೊಳಿಂದು ನೀ!"

(ರವೀಂದ್ರರ ಕಾವ್ಯದ ಭಾವಾನುವಾದ)

ತುಂಬಿ ಬಾರ

ಅಂಬರದಿ ವಿಜೃಂಭಿಸಿರುವ
ರಂಭೆ ಬೆಳಕಿನಿಂದಿರೇ,
ನಂಬಿದೆದೆಯ ತುಂಬಿಬಾರ
ಚಿತ್ಕಲೈಕಮಂದಿರೇ ॥ಪಲ್ಲ॥
ಅಂಧಕಾರವಿಂದು ಕವಿದು ಮನ್ಮನವನು ನುಂಗಿದೆ;
ಸಂಧಿಸಾಧಕತ್ವ ಕಾರ್ಯಕಂದರದಲಿ ತಂಗಿದೆ.
ಕೋಪತಾಪ ಕಜ್ಜಲ
ಕೂಡಿ ನನ್ನ ಕಂಗಳ
ದೀಪವನ್ನೆ ಲೋಪ ಮಾಡಿ
ಬೆಳೆಯುತಿಹುದು ನೋಡಲ!
ಈ ಪ್ರಕಾರ ಕೇವಲ
ಹರಿದು ಬಂದು ಕಾವಳ
ಆತ್ಮವನ್ನೆ ನೂಕಿರುವುದು
ಮಾಯೆಯಲ್ಲಿದಸದಳ!
ಏಕೆ ಬಾರದಿರುವೆ ಬೆಳಕೆ ಭುಗ್ಗನೆದ್ದು ಚಿತ್ತದ
ವ್ಯಾಕುಲಾಂಧತೆಯನು ಕಳೆಯೆ ಕಣ್ಣ ತೆರೆಸಿ ಸತ್ವದ?
ಸತ್ವ ರಜ ತಮಸ್ಸು ಬೆರೆದ ಹೃತ್ಸಮುದ್ರ ಮಧ್ಯಕೆ
ಅತ್ಯುದಗ್ರ ಸೂರ್ಯನಾಗಿ ಉದಯಿಸರಿವೆ ಸದ್ಯಕೆ–
ಉಪ್ಪನುಳಿಸಿ ತಳದಲಿ
ವಿಮಲ ಜಲವ ದಿವದಲಿ
ಒಪ್ಪುವಂತೆ ಮಾಳ್ಪ ತೇಜ–
ವಾಗು ನನ್ನ ಬಾಳಲಿ;
ಕಪ್ಪು ಕಪ್ಪು ಸುತ್ತಲು,
ಮೈಮನಕ್ಕೆ ಹತ್ತಲು,
ಹುತ್ತದಲ್ಲೆ ಸತ್ತು ಬಿದ್ದ
ಹಾವಿನೊಂದು ತೆರೆದೊಳು

ಮಿತ್ತು ಮೆಟ್ಟಿದಂತೆ ಎದೆಯ ಕುಗ್ಗಿತಾತ್ಮಕೋರಕ;
ತುತ್ತು ಕುತ್ತು ತರುವ ಹಾಗೆ ಇಲ್ಲದಾಗೆ ಜೀರಕ!
ಮೇಘಪರ್ವತಾಗ್ರದಿಂದ ಧುಮುಧುಮುಕುವ ಧಬಧಬೆ,
ಯೋಗಿ ಚಿತ್ತದಲ್ಲಿ ಬುಗ್ಗೆಯೇಳ್ವ ಸತ್ಯಚಿತ್ಪ್ರಭೆ!
ಸುರಿ ಸುರಮ್ಯ ರಸಧುನಿ
ಹರಶಿರಸ್ಥ ಪಾವನಿ
ಮಿಂಚಿನಲೆಗಳೆಬ್ಬಿಸುತ್ತ
ಬೆಳಕಿನಮ್ಮ ಮೋಹನಿ!
ಸೂರ್ಯಚಂದ್ರರಂಗಳ
ಮುಟ್ಟಿಬರಲಿ ಮಂಗಳ;
ದಿವ್ಯ ದೀಪ ಭವ್ಯವಾಗಿ
ಬೆಳಗಲಿ ಕಿರಣಂಗಳ!
ಸಪ್ತ ನಾಕ ಸಪ್ತ ನರಕಗಳನು ತುಂಬಿ ತುಳುಕುವ
ಸುಪ್ತಶಕ್ತಿರೂಪೆ ಬಾರ ತಾಮಸವನು ಕಳೆಯುವ!

ಉದಯರಾಗ

ಏಳು ರಮೇ ಏಳು ಸುಪ್ರ–
ಭಾತ ವಾತ ಬೀಸಿದೆ,
ಏಳು ರಮೇ ಏಳು ಕುಸುಮ–
ಸಾರ ಮತ್ತು ಸೂಸಿದೆ॥ಪ॥

ಏಳು ಮುಸುಕು ತೆರೆದು ರನ್ನೆ
ಏಳು ಮನ್ಮನೋನ್ಮನಿ,
ಏಳು ಮೂರು ಲೋಕವನ್ನೆ
ತುಂಬಿ ಹರಿವ ರಸಧುನಿ!

ಚೆನ್ನೆ ಚಿತ್ತರಂಗದಲ್ಲಿ
ಚೆಲುವ ಚೆಲ್ಲಿ ಬಾ ರಮೇ,
ನನ್ನ ಹೃದಯವನ್ನು ಸೂರೆ–
ಗೊಂಡ ಪ್ರೇಮವಿಭ್ರಮೇ!

ಅಮರ ಪಾರಿಜಾತದಂಥ
ಮೃದು ಹೃದಂತರಾಳದ
ವಿಮಲಭಾವ ನೀಡ ಬಾರ
ಉಂಡು ಜೀವ ದಣಿಯದ!

ನಿದ್ದೆಯನ್ನು ಗೆಲ್ಲಬೇಹು–
ದದು ಜಗಕ್ಕೆ ತಾಮಸ,
ಬುದ್ಧರಾಗಬೇಕು ನಾವು
ಬುದ್ಧಿಯಹುದು ತೈಜಸ!

ಗೆಲ್ಲಲಾರದೇನನೊಲವೆ,
ಒಲವಿನಮೃತಚುಂಬನ?
ಎಲ್ಲ ಸೋಗು ಮಿಕ್ಕ ಸೊಬಗು–
ನಿಜದ ನಿಜವಿಡಂಬನ!

ಸ್ನಿಗ್ಧೆ ಏಳು ಮುಗ್ಧೆ ಏಳು,
ಏಳು ಬಾಳ ಬೆಳಗಿನ
ದುಗ್ಧವೀಂಟಲೇಳು ಕೊಡಹಿ
ಕತ್ತಲನ್ನು ಒಳಗಿನ!

ಕಣ್ಣು ತೆರೆ ಗುಲಾಬಿಯಂತೆ
ಕಣ್ಣ ಮಣಿ ಸುಹಾಸಿನಿ,
ಕಣ್ಣಿನಲ್ಲೆ ಕಬ್ಬವುಂಟು
ನೋಡು ಮಧುರಭಾಷಿಣಿ!

ಅಕ್ಷಿಯಲ್ಲೆ ಕುಳಿತು ಪ್ರೇಮ
ಪಕ್ಷಿ ಕುಕಿಲ ಕಲಿವುದು!
ಅಕ್ಷಿ ನಮ್ಮ ಹೃದಯಕಿಹ ಗ–
ವಾಕ್ಷ, ಬೆಳಗನುಲಿವುದು!

ಕಣ್ಣ ಸೊಲ್ಲಿಗಿಂತ ಮಧುರ–
ವಿನ್ನದಾವ ಸೊಲ್ಲಿದೆ?
ಕಣ್ಣ ಮುಚ್ಚೆ ಭೇದ ಮಸಣ
ಮನಗಳಿಂಗದೆಲ್ಲಿದೆ?

ಇಂದ್ರಿಯಂಗಳೈದರಲ್ಲಿ
ಕೇಂದ್ರವಾತ್ಮಶಕ್ತಿಯ
ತಂದ್ರತೆಯನು ಕಳೆದ ಕಣ್ಣು–
ಹರಿದು ನೋಡು ಸುಪ್ತಿಯ!

ಏಳು ಕಣ್ಣ ತೆರೆದು, ಏಳು
ಕಡಲ ತುಂಬಿ ತುಳುಕುವ
ಬಾಳ ಬೆಳ್ಳಿ ಬೆಳರ ಸೂಸಿ
ಒಡಲನೆರಡ ಮರೆಸುವ!

ಸಪ್ತವರ್ಣದಿಂದ ಕವಿಯ
ಸಪ್ತಬಾವವೆದ್ದಿದೆ;
ವ್ಯಾಪ್ತವಾಯ್ತು ನಲ್ಮೆರಂಗು
ಹರೆಯವದನು ಹೊದ್ದಿದೆ!

ದೇವ ತೆರೆದ ಕಣ್ಣಿದಲ್ತೆ–
ನನ್ನ ಹೃದಯದರುಣತೆ!
ನಿನ್ನ ಕಣ್ಣು ಹೀರಲದನು
ಬರ್ಕು ನಿನಗೆ ಚೆಲ್ವಿಕೆ!

ನನ್ನ ಎದೆಗೆ ಮಿಗಿಲು ಮುಕುರ–
ವುಂಟೆ ನಿನ್ನ ಆತ್ಮಕೆ–
ತನ್ನ ತಾನೆ ನೋಡಿಕೊಳಲು
ಕಣ್ಣು ತೆರೆದ ಮಾತ್ರಕೆ!

ಅಲ್ಲಿ ಕಾಂಬುದೇನು? ಹಿಗ್ಗು–
ದೇವಹೃದಯದೊಪ್ಪವು!
ಚೆಲ್ಲಿ ಸೂಸಿ ಹರಿವ ನೇಹ
ಕುಳಿತು ಹೋಹ ತೆಪ್ಪವು!

ಅಲ್ಲಿ ಮುಳುಗಿ ಮಿಂದ "ನಾನು,
ನೀನು" ಏಕವಪ್ಪವು!
ಅಲ್ಲಿ ಹೊಕ್ಕ ಮೇಲೆ ಹೊರಗೆ
ಹೊರಡಲೆಂದು ಒಪ್ಪವು!

ಅಲ್ಲಿ ನೋಡು–ಎದ್ದು ಕೂಡು
ಕೇಳು ಪ್ರೇಮವಚನವ;
ಎಲ್ಲಿ, ಹೃತ್ಕವಾಟಪುಟವ
ತೆರೆ–ನಿಮೇಷನಿಚಯವ!

ದೇವಗಂಗೆಯಂತೆ ಹರಿದು
ಹೃದಯವನ್ನು ಸೇರಿದ
ಪ್ರೇಮಧಾರೆ ನೀರೆ, ಏಳು
ಜನ್ಮದಿಂದ ಕೋರಿದ!

ಶ್ರವಣಮಧುರ ನನ್ನ ಮಾತು,
ನಯನ ಮಧುರವಾಕೃತಿ!
ಅಧರಮಧುರ ಮುದ್ದು, ಹೃದಯ–
ಮಧುರ ರತಿಚಮತ್ಕೃತಿ!

ನಾನು ನೀನು ನಾವೆ ನಾವು
ಬರಿಯ ಜೇನು ಮೋಹಿನಿ
ಕಾಣದಂಥ ಕಾವ್ಯದಲ್ಲಿ
ಹರಿವ ರಸತರಂಗಿಣಿ!

ಉಷೆ ದಿನೇಶಗಿತ್ತು ಮುತ್ತ–
ನೆಬ್ಬಿಸಿಹಳು ಕಾದಲೆ;
ದಿಶೆಗಳೆಲ್ಲ ಕಮಲವಾಗಿ
ತೂಗುತಿಹವು ಹೊಂದಲೆ!

ನೇಸರರಸಿ ಪತಿಯನೆಚ್ಚ–
ರಿಸುವುದಲ್ಲಿ ಹೊಂದಿದೆ;
ಸೂಸುನೇಹದರಸಗಿಲ್ಲಿ
ಬೇರೆ ನಿಯಮ ಬಂದಿದೆ!

ಅರಳು ಅರಳಿನಂತೆ ಸರಳೆ
ಕಣ್ಣ ತೆರೆದು ಹೃದಯದ,
ಮರಳು ನನ್ನ ಪ್ರೇಮಗೃಹಕೆ
ಅಮರಲೋಕವರಿಯದ!

ಏಳು ಶಕ್ತಿ ಏಳು ಮೇಲಿ–
ನೇಳು ಲೋಕ ಕೇಳುವ,
ತೋಳುಗಾಹಿನಲ್ಲಿ ಬಯಸಿ
ಪಡೆದ ರಾಜ್ಯವಾಳುವ!

ಅಂದು–ಇಂದು

ಅಂದು ವಿಜಯದಶಮಿ ವಿಜಯ
ತಂದುದೆಮ್ಮ ನಾಡಿಗೆ;
ಸಂದ ವೀರಯೋಧವರ್ಗ
ತಂಗಿದಂಥ ಬೀಡಿಗೆ!
ಚಂದ್ರಹಾಸವಿತ್ತು ವಿಜಯ
ನಗರ ರಸಿಕರೆಡೆಯಲಿ;
ಚಂದಕಿಟ್ಟು ಚೆಂದದೊಡವೆ
ಗಳನು ನೋಳ್ಪ ಕಡೆಯಲಿ!

ಕನ್ನಡಿಗರ ಕೀರ್ತಿ ದಕ್ಷಿ–
ಣಾಪಥವನು ಬೆಳಗಿತು.
ಕನ್ನಡಪ್ರಭಾವ ಭಾರ–
ತದಲಿ ಬಿಡದೆ ಮೊಳಗಿತು.
ಹೊನ್ನ ತೊಟ್ಟು ಹೊನ್ನ ಕೊಟ್ಟು
ಬಾಳಿ ಬದುಕಿತೀ ಜನ;
ಉಣ್ಣಲಿಂದು ಉಳಿದುದೇನು–
ಬರಿ ದರಿದ್ರತಾಧನ!

ಗಂಡುತನವಡಂಗಿ ಷಂಡ–
ತನಕೆ ದಾರಿ ಬಿಟ್ಟಿತು.
ಪುಂಡ ಹಗೆ ನುಸುಳ್ದು ನಾಡ
ಹರಿದು ಹಂಚಿ ಕೊಟ್ಟಿತು.
ಕಂಡ ಕಂಡವರಿಗೆ ಕಾಲು
ಬಿದ್ದು ಕಳೆದು ಸಂಪದ;
ಉಂಡು ಕಂಬನಿಗಳ ಕೂಳ
ಬಾಳಿತೆಮ್ಮ ಜನಪದ

ಇಂದು ನಾಡ ಹಬ್ಬ ಹಿರಿಯ–
ರಂದು ಪಡೆದ ವೈಭವ
ನಂದಿ ಹೋದುದನ್ನು ನೆನೆದು
ನೊಂದು ಮೇಣ್ಣವೋನವ
ಚಂದ್ರಹಾಸ ಹಿಡಿದು ನಾಡ
ಕಟ್ಟುವ ಪ್ರತಿಜ್ಞೆಯ
ತಂದು ಬಗೆಗೆ, ಕಳೆಯಬೇಕು
ಕನ್ನಡಿಗರವಜ್ಞೆಯ!

ಏಳಬೇಕು, ಮಿದುಳ ಮಾಂದ್ಯ
ಹೂಳಬೇಕು; ಒಮ್ಮತ
ಹೇಳಬೇಕು; ನಾಡಿದೊಂದು
ಎಂದು ಹುರುಪು ಚಿಮ್ಮುತ!
ಆಳುಬಾಳ ಕೀಳುತನವ
ಕಳೆದು ದಿವ್ಯ ಭಾವವ,
ತಾಳಬೇಕು, ತೋರಬೇಕು
ನಮ್ಮ ನಮ್ಮೊಳೈಕ್ಯವ

ಆಳಬೇಕು ನಾವೆ ನಮ್ಮ
ನಾಡನೆಲ್ಲ. ಭಾರತ
ಕೇಳಬೇಕು ನಮ್ಮ ಪ್ರಾಂತ–
ದೊಸಗೆ ಸೂಕ್ತವೆನ್ನುತ
ಹೇಳಬೇಕು ನಾಕದಲ್ಲಿ
ಕುಳಿತ ನಮ್ಮ ಹಿರಿಯರು–
"ತೋಳು ಬಲಿದ ಮಕ್ಕಳಿವರು
ಅಂಜಿಕೆಯನೆ ಅರಿಯರು!"
(೧೯೪೭ರ ನಾಡಹಬ್ಬದಲ್ಲಿ ಹುಬ್ಬಳ್ಳಿಯಲ್ಲಿ ಅಂದದ್ದು)

ಉತ್ತರ ರಾಗ

ಮಲಗು ಚೆನ್ನ, ಮಲಗು ರನ್ನ
ಮಲಗು ಮುದ್ದು ಮೋಹನ;
ಮಲಗು ನನ್ನ ಮನದ ಜೇನೆ
ಮಲಗು ನನ್ನ ಜೀವನ! ॥ಪ॥

ಏಳು ಜನುಮದಿಂದ ಬೇಡಿ
ಪಡೆದ ಪ್ರೇಮಭಾವನ!
ಏಳು ಲೋಕವಾಳಬಲ್ಲ
ನಿನ್ನ ಚರಿತ ಪಾವನ!

ಮಲಗು ಕಾಂತ, ಮಲಗು ಶಾಂತ,
ಮಲಗು ಸೌಖ್ಯಸಾಧನ!
ಮಲಗು ಒಲವಿನರಸ, ನನ್ನ
ಹೃದಯಹರ್ಷವರ್ಧನ!

ಆರು ವೈರಿಗಡಣಗಳನು
ತೂರಿ ಸೆಣಸುವೀ ಜಗ
ಗಾರುಗೆಡಿಸಿತೇನು? ಮಲಗು
ವೀರ, ನನ್ನ ಮುದ್ದುಗ!

ನನ್ನ ಕೊರಳ ಮಣಿಯೆ, ವಿಮಲ
ಪುಣ್ಯರೂಪ, ನಿರ್ಮಲ!
ನನ್ನ ಸುಪ್ತಹೃದಯಕೆರೆದೆ
ಬೆಳಕ ನಿನ್ನದುಜ್ವಲ!

ಪ್ರಾಣಪದಕ, ಪ್ರೇಮದೇರಕ–
ದಿಂದ ನಿನ್ನ ನಲ್ಮೆಗೆ–
ಮಾಣದೆಂದು ಸೇವೆಗೈವೆ,
ಒಲಿಯೊ ನನ್ನ ಒಲ್ಮೆಗೆ!

ತಪ್ಪು ತಡೆಯ ತೊಡೆದು ಕರುಣ–
ದೃಷ್ಟಿಯಿಂದ ನೋಡಿದೋ!
ಒಪ್ಪದೊಡೆಯ ಒಪ್ಪಿಕೊಳ್ಳೊ
ನನ್ನದೆಲ್ಲ ನಿನ್ನದೋ!

ನನ್ನ ಪಂಚಬಾಣ, ಮಲಗು
ನನ್ನ ಹೃದಯಸುಂದರ–
ನನ್ನ ಚಿತ್ತರಂಗನಟ, ಸ–
ಮುಲ್ಲಸತ್ಸುಧಾಧರ!

ಮಲಗು ನೇಹದೂಟವಿತ್ತ
ಮೃದುಹೃದಂತರಾಳನೇ!
ಮಲಗು ನಲ್ಮೆದೋಟಕೆನ್ನ–
ನೊಯ್ದ ಮನ್ಮರಾಳನೇ!

ಆಯಸಕ್ಕೆ ಜೀವಸಕ್ಕೆ
ರಾಮಬಾಣ ಮುದ್ದಿದು;
ನೋಯಬೇಡ, ದುಗುಡಕೆಲ್ಲ
ಅಮೃತದಂಥ ಮದ್ದಿದು!

ಎದೆಯು ನಿನ್ನ ಮೂರ್ತಿಯನ್ನು
ಧೇನಿಸುವುದು ಮದ್ಗತ!
ಮುದದಿ ವದನ ನಿನ್ನ ಹೆಸರ–
ನೆಂದು ಬಾಳ್ಗು–ಸಂತತ!

ದೇವಭಾವ ಬಿತ್ತಿ ಮನವ
ಹೂವ ಮಾಡಿಬಿಟ್ಟೆಯೋ!
ಜೀವವೆರಡನೊಂದುಮಾಡಿ
ನಂಬಿಗೆಯನು ನಟ್ಟೆಯೋ!

ನನ್ನ ನಲ್ಲ ಹೊಲ್ಲದೆಲ್ಲ
ಜಂಜಡಗಳ ಬಿಸುಟು ಬಾ!
ನನ್ನ ತೋಳ ತೊಟ್ಟಿಲಲ್ಲಿ
ವಿರಮಿಸಿತ್ತಲೆದ್ದು ಬಾ!

ದಣಿದ ಜೀವ ನಿನ್ನ ದೆನ್ನ
ರಮಣ, ಚಿತ್ತರಂಜನ!
ತಣಿವನೀಂಟು ಹೃದಯಶಯನ–
ನಾಗ ದುಃಖಭಂಜನ!

ಪ್ರೇಮರಸದ ಬಾನಗಂಗೆ
ನಿನ್ನ ಹೃದಯದಲ್ಲಿದೆ;
ಮೌನದಿಂದ ಮಿಂದು ಪಡೆದ
ನಲವನಿಲ್ಲಿ ಚೆಲ್ಲಿದೆ!

ನನ್ನ ಬಾಳ ಬೆಳಕೆ, ಭಾಗ್ಯ
ಕುಂಕುಮಪ್ರಸಾಧನ!
ನನ್ನ ಜೀವ, ನನ್ನ ಭಾವ,
ಆತ್ಮಶಕ್ತಿಚೋದನ!

ಮಲಗು ಇಂದ್ರ, ಮಲಗು ಚಂದ್ರ,
ಮಲಗು ಭೀಮಚೇತನ!
ಮಲಗು ಬುದ್ಧ, ಮಲಗು ಸಿದ್ಧ,
ಮಲಗು ಪ್ರೇಮಕೇತನ!

ನೀಲ ನೀರದಾಂತರಾಳ–
ದಲ್ಲಿ ಮಿಡಿವ ಮಿಂಚೆ, ಬಾ;
ಕಾಲಕಾಲ, ಸತ್ಯ ಸುಂದ–
ರಾತ್ಮ ಮಲಗಲಿತ್ತ ಬಾ!

ಅರಸಿ ಕಾಣದರಸ ಮಲಗು
ತಣಿಸಿ ನನ್ನ ಪ್ರೇಮವ;
ಹರಸಿ ಹೊಕ್ಕು ಮಡಿಯ ಮಾಡು
ನನ್ನ ಹೃದಯಧಾಮವ!

ಅಮರ ವಸ್ತು

ಕೆಂದುಟಿಯು ಮಾಸೀತು,
ಕೌಶೇಯ ಹರಿದೀತು,
ಮಣ್ಣಾಗಿ ಹೋದೀತು ಕಾಲ ಕೆಳಗೆ;
ಬೀಣೆತಂತಿಗಳೆಲ್ಲ
ಹರಿದಾವು, ಸುಸ್ವರವು–
ತೊದಲಾಗಿ ಪೈಶಾಚ ಕೇಕೆಯಕ್ಕು!

ರತ್ನ ಪಾತ್ರಗಳೆಲ್ಲ
ಚೂರು ಚೂರಾದಾವು,
ಬೆಳ್ಳಿಹಾವುಗೆ ಹರಿದು ಮೂಲೆ ಕಾಣ್ಗು!
ರನ್ನವಿಡಿಕೆಯ ಹೂಜಿ–
ಯೊಡೆದು ಪುಡಿ ಪುಡಿಯಕ್ಕು,
ಹಳೆಯದಾವುದೊ ರಾಜಗೃಹದ ಹಿಂದೆ!

ಹಾಲ್ಗಲ್ಲು ಬಿರಿದೀತು,
ಪರಿಮಳವು ಪರಿದೀತು,
ಬಂಗಾರಸೀರೆ ಹುಡಿಯಾಗಿ ಹೋಕು!
ಚೆಂಗುಲಾಬಿಯು ಬಾಡಿ
ಹೋಗಿ ಇಲ್ಲಾದೀತು,
ಉಳಿದೀತು ವಾಸನೆಯ ಸಿಪ್ಪೆ ಮಾತ್ರ!

ಯುಗ ಯುಗಗಳಳಿದಾವು,
ಸೊಬಗಳಿಯದೆಂದಿಗೂ,
ರಂಗು ದಂಗುಗಳಿಂದ ಕಂಗೊಳಿಸುಗು!

ಚಂದ್ರ ತಾರೆಗಳೆಲ್ಲ
ಕರಗಿಯೇ ಹೋದಾವು–
ಮೂಡದಿದ್ದಾವು ಆ ಬಾನ್ಮಣಿಗಳು!

ಈ ಮತ್ತಿನೆಲ್ಲ ಸಿರಿ–
ಗಳು ಮಾಯವಾದಾವು!
ಈ ನಶ್ವರಗಳೊಡನೆ ಸೊಬಗಳಿಯದು!
ಹೀಗೆಂದಿಗೂ ಚೆಲುವು
ನಮ್ಮಿಂದ ಹೋಗದೋ–
ಅದುವೆ ಮತ್ತೆಯ್ತುಹುದು ಪಕ್ಕ ಬೀಸಿ!

ನೀನಾದ ಸೌಂದರ್ಯ
ನಿನ್ನದೆಂದೆಂದಿಗೂ,
ಮತ್ತೆ ಮತ್ತುದಯಿಸುಗು ನೋಡು ತಿಳಿದು!
ದೇವನೇ ಸೌಂದರ್ಯ,
ಅವ ಬಾಳ್ವನೆಂದಿಗೂ;
ಅವನ ಪೂಜಿಪ ನೀನು, ಅವನ ಒಡತಿ!

ಏನ ಹೇಳಲಿ ಆ ವಿ–
ಚಿತ್ರವನು ಮುದ್ದು ರಮೆ!
ಆಲಿಸುವ ಕಿವಿ ತುಂಬಿ, ಹೊಳೆವ ಕಣ್ಣ
ಆಲಿಗಳ ತುಂಬಿ ನಿಂ–
ತಿಹನನಾವೃತನಾಗಿ–
ಪ್ರೇಮವಾತನ ಮುಸುಕ ತೆರೆಯೆ ಕೂಗಿ!

(ಶ್ರೀ.ಜೆ.ಜೆ. ಅವರ ಕವನದ ಅನುವಾದ)

ನನಗೆ ನಾನೇ

ಅನ್ನದಾಳ ನಿದ್ರೆಯಾಳ ನೋಟ ಬೇಟದಾಳವೋ,
ಅನ್ಯ ವಸ್ತುವಿಲ್ಲದಾಗ ಮಾತ್ರ ನನ್ನೊಳಾಟವೋ;
ತನ್ನ ಹೊಗಳಿದಾಗ ಹರ್ಷವರ್ಷಕಳತೆಯಿಲ್ಲವೋ,
ತನ್ನ ತಾಳದಂತೆ ಹೆಜ್ಜೆ ಇಟ್ಟರೆಲ್ಲ ಚೆಲ್ಲವೋ!

ಅಲ್ಲಿ ಇಲ್ಲಿ ಕಂಡು ಕೇಳಿ ಇಲ್ಲವೆಂದು ನೊಂದೆನೋ
ಅಂತೆ ದಿನವು ಸಾಗುತಿರಲು ಚೆನ್ನ ವಿತ್ತು ಗೆಳೆಯನೇ–
ಹರೆಯದಂಧತಮದೊಳೊಮ್ಮೆ ಪ್ರೀತಿಯೆಂದು ಕರೆದೆನೋ,
ಪ್ರೀತಿ ಬರಿಯ ಮೋಹವಾಯ್ತು, ಇದನು ತಾಳಲಾರೆನೋ!

ನನ್ನ ಹೃದಯದಾಳವನ್ನು ಕಂಡ ಹೃದಯವಿಲ್ಲವೋ;
ನನ್ನ ಕೂರ್ಮೆಯಿಂಪನಳೆದು ಮೆಚ್ಚುವವರ ಕಾಣೆನೋ!
ಚರ್ಮದಾಳ ನೇಹ ಹಗೆತನಕ್ಕು ಹೆಚ್ಚು ಘೋರವೋ,
ಬಿಟ್ಟು ಬಿಡದೆ ಮುಟ್ಟಿ ಮುಟ್ಟದೊಲವು ವಿಷದ ಸಾರವೋ!

ಹಿಂದಿನವರು ದೇವಶರಣರಾದರೇಕೆ? ಹುಚ್ಚರು–
ಎಂದು ಹಾಸ್ಯಗೈದ ಬುದ್ಧಿಗಿಂದು ಬರೆಯು ಬಿದ್ದಿತೋ!
ಪ್ರೇಮದೀಪ್ತ ಹೃದಯ ತಣಿಯದಾಗೆ, ಲೋಕದೊಲ್ಮೆಯ
ಕಾಮವೆಂದು ಕೆಳಗೆ ತುಳಿದು ಮೇಲೆ ಮೇಲೆ ಹಾರಿತೋ!

ಇಲ್ಲಿ ನೇಹವೆಲ್ಲ ಮೋಹ ತನ್ನ ಸೊಗಕೆ ವಿಡ್ಡುರ
ಬರುವವರೆಗೆ, ಬಂದರಾಗ ತಾನೆ ತಾನು, ನಿಷ್ಠುರ!
ಎಲ್ಲ ಮಾಯೆಯೆಂದು ತತ್ವವೇತ್ತರೆಂದುದಿಂತಹ
ಕಲ್ಲುತನವ ಕಂಡೆ, ಬಂದಿತೆನಗು ದುಃಖವಿಂತಹ!

"ಅಷ್ಟು ನೇಹವಿಷ್ಟು ಚಾಗ ಬೇಕು ಯೆನ್ನಲಾರು ನೀ?
ಅವಳಿಗವಳ ಚಿಂತೆಯಿರದೆ–ನಿನಗೆ ನಿನ್ನ ದೆಂತುಟೋ?
ಆತ್ಮ ತನ್ನ ತಾನೆ ಮೇಲಕೊಯ್ಯಬಲ್ಲುದಲ್ಲವೆ?
ಗೀತೆ ಹೇಳಲಿಲ್ಲವೇನು–ನಿನಗೆ ನೀನೆಯೆಂಬುದ!

ಅಳಲುಬಳಲು, ತಾಪಶಾಪ ಎಲ್ಲ ಪಕ್ವವಾಗದ
ನಿನ್ನ ಮನದ ಎಣ್ಣೆಗುದಿತ–ಅನ್ಯರೆಂತು ಕಾರಣ?
ಎಲೆಲೆ ಜೀವ ತಾಳು ತಾಳು, ನಿನಗದೇಕೆ ತಲ್ಲಣ?
ತಂದುದೇನು, ಒಯ್ವುದೇನು? ನಿನಗೆ ನಿನ್ನ ರೋದನ!"

ನನ್ನ ಭಾವನೆಗಳೆ ನನಗೆ ಬೇಡಿಯಾಗಿ ಹಿಡಿದವೋ,
ನನ್ನ ಕಲ್ಪನೆಗಳೆ ನನ್ನ ಮೈಯ ಕಟ್ಟಿ ಕೆಡೆದವೋ!
ನನ್ನ ಮನೆಯ ಬೋದಿಗೆಗಳೆ ನನ್ನ ಸಿಟ್ಟಿಗಿಂಧನ,
ನನ್ನ ಮನದ ಮೋಹ, ನೇಹ, ನನಗೆ ನಾನೆ ಬಂಧನ!

ನನಗೆ ನಾನೆ ಅಹುದು ಗೆಳೆಯ ನಿನ್ನ ಮಾತು ನಿಚ್ಚಳ;
ಮನದ ಮೋಹವನ್ನು ಹರಿವ ವಜ್ರಸೂಚಿ ನಿಷ್ಠುರ!
ಸತ್ಯಕಿರುವ ರಮ್ಯತೆಯಿದು ಸತ್ಯವಾಗಿ ದುರ್ಧರ–
ಸತ್ಯಕಾಮನಾದೆನಿದಕೊ ಹಿಡಿದೆ ತಪದ ವಿಷ್ಟರ!

ಗಾಂಧೀಮಹಾರಾಜ

ಗುರುಗಾಂಧಿಯನ್ನು ನಂಬಿರುವ ನಮಗೆ ಸಾ–
        ಧನವಿದೊಂದೆ ಧೀರ,
ಬಡಜನರ ಸುಲಿದು ನಮಗಿಲ್ಲ ಬೊಕ್ಕಸವ
        ಕೊಬ್ಬಿಸುವ ವಿಚಾರ!
ಧನಿಕರಿಗೆ ಬಾಗುವವರಲ್ಲ ನಾವು ಬರ–
        ಲವರು ಮುಷ್ಟಿಯೆತ್ತಿ,
ಬಲ್ಗೋಲಿನಿಂದ ಬೆದರಿಸಲು ನಸುನಗುವೆ
        ವೆಂದು "ನಿಮ್ಮ ಜುತ್ತಿ–
ಕೆಂಗಣ್ಣ ದಿಟ್ಟಿ ಕೂಸನ್ನು ನಿದ್ದೆಯಿಂ–
        ದೊಮ್ಮೆ ಬೆಚ್ಚಿಸೀತು
ಭಯಕಂಜಲೊಲ್ಲೆವೆಂಬೆಮ್ಮನೆಂತು ಆ
        ಸಿಟ್ಟು ನಡುಗಿಸೀತು?
ಅತಿ ಸರಳ ಮಾತುಕತೆ ನಮ್ಮದಯ್ಯ, ಅ–
        ಲ್ಲಿಲ್ಲ ವಕ್ರತಂತ್ರ–
ಅಲ್ಲಿಲ್ಲ ಕೈದಿಗಳ ಸೆರೆಗೆ ತರುವ ಶಾ–
        ಸನದ ಜಟಿಲ ಯಂತ್ರ!
ಬಂದಿಗಳು ನೆರೆಯೆ ಸೆರೆಮನೆಯ ಬಾಗಿಲಲಿ
        ದೋಷಲೇಪವಳಿಗು;
ಕಾಲ್ಬೇಡಿ ಸಡಿಲಿ ಗಾಂಧೀಜಿ ಹರಕೆ ಹಣೆ–
        ಯಲ್ಲಿ ಮೂಡಿ ಬೆಳಗು!"

(ದಿ.ರವೀಂದ್ರರ ಕವನದ ಅನುವಾದ)

ದುಃಖಾಷ್ಟಕ

ಭಾರತದ ಶುಭ್ರಾಭ್ರ ಕೀರ್ತಿ ಕ–
ರಂಡವೊಡೆದಿತೆ ಸೋದರ!
ಭಾರತದ ಸತ್ವಪ್ರದೀಪಕ
ನಂದಿತೇ ಹಾಯ್ ಸೋದರ!
ಭಾರತದ ದಿವ್ಯಾತ್ಮ ತನ್ನವ–
ತಾರ ಮುಗಿಸಿತೆ ಸೋದರ!
ಭಾರತದ ಸತ್ಯಾದ್ರಿಶೃಂಗವು–
ರುಳ್ದುದೇ ಹೇ ಸೋದರ!

ಸತ್ಯವೇ ಸರ್ವಸ್ವವೆಂದ ಯ–
ತೀಶ್ವರನ ಕೊಲೆಗೆಯ್ದನೆ!
ಸತ್ಯರಂಗದದಮ್ಯ ಸತ್ಯಾ–
ಗ್ರಹಿಯ ಜೀವವನೊಯ್ದನೆ!
ಸತ್ಯಧರ್ಮದ ವೀರ ಯೋಧನ
ಷಂಢತನದಲಿ ಕೊಂದನೆ!
ಸತ್ಯದಮರಜ್ಯೋತಿಯೆತ್ತಿದ
ಕೈಗೆ ಸಾವನು ತಂದನೆ!

ಭಾರತದ ಚಾರಿತ್ರ ಕಿಂತಾ
ದ್ವಿಜಹತಕ ಮಸಿ ಬಳಿದನೆ!
ಭಾರತೀಯರ ಹೃದಯಕಮಲವ
ಚಿವುಟಿ ಥಟ್ಟನೆ ಹಿಳಿದನೆ!
ಭಾರತೋದ್ಧಾರಕನನನ್ಯಾ–
ಯಾಗ್ನಿ ಗಾಹುತಿಯಿತ್ತನೆ!
ಭಾರತಸ್ವಾತಂತ್ರ್ಯವೀರನ
ಕೊಂದು ಬದುಕಿಯು ಸತ್ತನೆ!

ಹಿಡಿದಹಿಂಸೆಯ ಜೀವಕೋಟಿಯ
ಹೊರೆದ ಜನಕನು ಶತ್ರುವೆ?
ಬಿಡದಹಿಂಸೆಯ ಪಾಪಿಗಳನು–
ದ್ಧರಿಸಿದಾತನು ಶತ್ರುವೆ?
ದುಡಿದಹಿಂಸೆಗೆ ಸರ್ವವನ್ನ–
ರ್ಪಿಸಿದ ಚಾಗಿಯು ಶತ್ರುವೆ?
ನಡೆದ ಹಿಂಸೆಯ ಹಾದಿಯಲಿ ದೇ
ವತ್ವಕೇರ್ದವ ಶತ್ರುವೆ?

ಹಿಂದುಮುಸ್ಲಿಮರೊಂದುಗೂಡಿಸಿ
ನೇಹವೆರೆದವ ದುಷ್ಟನೆ?
ಹಿಂದಕಟ್ಟಿ ಸಶಸ್ತ್ರರಿಪುಗಳ
ನಾಡ ಕಾಯ್ದವ ದುಷ್ಟನೆ?
ಹಿಂದುಧರ್ಮದ ಶಾಂತಿದೂತ್ಯವ
ವಹಿಸಿದಾತನರಿಷ್ಟನೆ?
ಹಿಂದುಗಳ ಹಿರಿಮಣಿ ದಯಾಘನ
ಗಾಂಧಿ ಹಿಂದುಗನಿಷ್ಟನೆ?

ಹಿಂದುಗಳ ದುರ್ಭಾಗ್ಯಕಿತಿಮಿತಿ–
ಯುಂಟೆ ಹೇಳೈ ಸೋದರ?
ಹಿಂದುಳಿದವರ ತಬ್ಬಲಿತನ–
ಕ್ಕೆಲ್ಲೆಯುಂಟೇ ಸೋದರ?
ಹಿಂದೆ ಕುರುಶಾರ್ದೂಲ ಭೀಷ್ಮನ
ಕೊಂದ ಷಂಡನ ಮೀರಿಸಿ,
ಇಂದು ಭಾರತಪಿತನ ಕೊಂದನೆ
ಪಾಪಿ ಗುಂಡನು ಹಾರಿಸಿ?

ಅಕಟಕಟ ದುಃಖಾಬ್ಧಿವೀಚಿಹೃ–
ದಂತರಾಳವ ಹೊಕ್ಕಿತೋ!
ಅಕಟ ಸಂತಾಪಾಗ್ನಿ ಕೇಸುರಿ–
ಗೊಂಡು ದೆಸೆಗಳ ನೆಕ್ಕಿತೋ!
ವಿಕಟಚರಿತನನೆಣಿಸಿ ರೋಮಗ–
ಳೆದ್ದು ತಿಸುಳಗಳಾದುವೋ!
ಅಕುಟಿಲನ ಮರಣಕ್ಕೆ ಮರುಗಿದ
ಕರಣ ಹಸುಳೆಗಳಾದುವೋ!

ಸತ್ತು ಬದುಕಿದ ದಿವ್ಯಮಾನವ–
ನಾತ್ಮ ಪಜ್ವಳಿಸುತ್ತಿದೆ!
ಸತ್ತು ಸಾಯದ ಕೀರ್ತಿಕಾಯದ
ಕಾಂತಿ ಕಜ್ಜಳ ಕಳೆದಿದೆ!
ಸತ್ಯಮತ್ತಮಹಿಂಸೆ ಮಂತ್ರಗ–
ಳುಲಿಯಲೈ ದಶದಿಶೆಯಲಿ!
ಸತ್ಪಥಧ್ರುವತಾರೆಯಾದ ಮ–
ಹಾತ್ಮ ತಣಿವನು ಕಾಣಲಿ!

ಸುಂದರಿಯ ಸಂಕಟ

ನಾ–ನಕ್ಕರು ಚೆಂದ
ಅತ್ತರು ಚೆಂದ
ಎಂಬನಲ್ಲ ನಲ್ಲ! ॥ಪಲ್ಲ॥

ದುಃಖಿಸುತಿದ್ದರು ದೂರದಿ ನಿಲುವನು
ರಸದಾಸ್ವಾದವದಂತೆ!
ಹಸ್ತವನೀಯನು ಬಿದ್ದರೆ, ನೋಡುತ
ಚಿತ್ರವ ಬರೆದಪನಂತೆ!

ಮಾತಿಗೆ ಮಾತಾಡದೆ ಮುಖ ನೋಡುತ
ಕೂತಿರುವನು ಕೇಳಿದರೆ–
ನಾ ತೆರೆದರೆ ಬಾಯರಳುವ ತಾವರೆ
ಕಂಡಂತಾಗುವುದಂತೆ!

ಮುದ್ದಿಗೆ ಮುದ್ದನು ಕೊಡದೆ ಥಟಕ್ಕನೆ
ಮಾಯಾಬದ್ಧನ ಹಾಗೆ
ಮುಗ್ಧಾಕ್ಷಿಗಳನು ಬಿರಿವನು ಪ್ರಣಯವಿ–
ದಗ್ಧತೆಯೇನಿದು ಹೇಗೆ?

ಒಲವನು ತೋರಲದೇ ಹೆಚ್ಚೆಂಬನು
ಪೂಜಿಸಬಂದಪನಯ್ಯೋ!
ಈ ತೆರದೀ ದೇವತೆಯಾಗಲು ನಾ–
ನೀತನ ವರಿಸಿದೆನೇನು?
ನನ್ನೀ ಹೃದಯದ ಕರೆಗೋಗೊಡದೀ–

ಯನ್ಯಾಯಕ್ಕೇನೆಂಬೆ!
ನನ್ನೆಲ್ಲವು ಚೆನ್ನಾದುದು ನಿಜವೇ?
ಆದರದೆನ್ನಯ ತಪ್ಪೆ?

ನಕ್ಕರೆ ಹಾಸ, ವಿಲಪಿಸಲು ಶೋಕ, ಅ–
ದಚ್ಚರಿ ಕಣ್ದೆರೆದೊಡನೆ;
ನಿಶ್ವಸಿಸಲು ನಿರ್ವೇದವುಸಿರ್ ನಿಲೆ
ಮೋಹದಶಾವಿಧವಂತೆ!

ನಡೆದರೆ ತಡೆಯುವ, ನಿಲೆ ಕೂರೆನ್ನುವ,
ಕುಳಿತರೆ ವಿಶ್ರಮಿಸೆಂಬ
ಅತ್ಯಾದರದುಪಚಾರದೆ ಬಳಲಿದೆ–
ನಯ್ಯೋ ಬಾರಿಪರಿಲ್ಲ!

ನಿಜವಿರಬಹುದಾತನ ಸೊಬಗುಣಿತನ,
ಅದು ನನಗುರುಳಾಯ್ತಿಂದು;
ಭಜಕನು ನಲ್ಲನೆ? ಭಕ್ತಿ ಪ್ರೇಮವೆ?
ಪೂಜ್ಯವೆ ರಮ್ಯತೆಯೆಲ್ಲ?

ಸತಿಯಾಗಿರಲೆಳಸಿದ ನನಗೀ ಪೂ–
ಜ್ಯತೆಯುರುಳಿನ ಸೆರೆ ಸಾಕೋ–
ಇತಿಮಿತಿಯಿರದೀ ನಾಟಕರಾಜ್ಯದ
ಅತಿಸುಖ ಸೇರದೊ ನನಗೆ!

ಹಾ ಹೃದಯವೆ, ಹಾ ಪ್ರೇಮವ ಕಾಣದೆ
ಕಂಗೆಟ್ಟೆಯ ಬಡವಸ್ತು?
ಹಾ ಹಾ ರೂಪವೆ, ಮೃತ್ಯುವೆನಿಸಿತೇ?
ಬಾಳೇ ನೀರಸವಾಯ್ತೇ?

ನೀನಿಲ್ಲ ಅಲ್ಲಿ

ಎಲ್ಲೆಲ್ಲು ಇರುವೆಯೆಂದರಸಿ ಸುರಿಸಿದೆನು ಬೆವರನಷ್ಟು ಬರಿದೆ
ಅಲ್ಲಿಲ್ಲ ನೀನು ಸಚ್ಚಿದಾನಂದದಲ್ಲಷ್ಟೆ ಮೂಡಿ ಹರಿವೆ ॥ಪಲ್ಲ॥

ನೀನಿಲ್ಲ ಅಲ್ಲಿ ಕುತ್ಸಿತ ವಾಕ್ಯಂಗಳ ಬಳಸುವಲ್ಲಿ ಗುರುವೇ
ಅಲ್ಲಿಲ್ಲ ನೀನು ನಾಣಿಲಿಗಳ ಕುಹಕದ ಕೂಟದಲ್ಲಿ ಗುರುವೇ;
ಇಹನಲ್ಲ ನೀನು ಮಾತ್ಸರ್ಯದ ಸರಿ ಸುರಿವಲ್ಲಿ ದಿವ್ಯಹೃದಯಾ
ಬಹನಲ್ಲ ಬುದ್ಧಿಗೇಡಿಗಳು ಬಹಳ ಮಾತಾಡುವಲ್ಲಿ ಸದಯಾ!

ಕಲಹಗಳ ಹೂಡುವಲಸಿಗರ ತಂಡದಲಿ ಕಾಣಲಾರೆ ನಿನ್ನ
ಕಪಟಿಗಳು ಪರಭೃತರು ಕಾಕಪೋಕರೆಲ್ಲಲ್ಲಿ ಸಿಕ್ಕದನ್ನ;
ಅತಿ ಶುದ್ಧ ಬುದ್ಧ ಪರಿಪೂರ್ಣ ಸಚ್ಚಿದಾನಂದರೂಪದೊಲವೇ
ಸ್ಥಿತಿಗತಿಗಳರಿತು ಸಜ್ಜನರ ಕೈಯ ಹಿಡಿದೊಯ್ವ ದೇವಬಲವೇ!

ಹರಿಹರ ಬ್ರಹ್ಮರಾಧಾರ ಶಕ್ತಿ ಓನ್ನಮೋ ವಿಶ್ವಸೂತ್ರ
ನರಹೃದಯದಲ್ಲಿ ಕಾರುಣ್ಯವಾಗಿ ಕೆಲವೊಮ್ಮೆ ಬರುವ ಪಾತ್ರ;
ರಿಸಿಮುನಿಗಳೆಂಬರೆಲ್ಲೆಲ್ಲು ಇರುವೆ ನೀನೆಂದು ಸುಳ್ಳೆಸುಳ್ಳೆ
ಕಸ ಕಡ್ಡಿ ಕನಕ ಕಲ್ಹಾರ–ಒಂದೆಯೇ–ನೀರು ನೀರುಗುಳ್ಳೆ?

ಮನಬುದ್ಧ್ಯಹಂಕೃತಿಗಳಿರುವ ವರೆಗೆ ಬೇರಿಲ್ಲ ನೋಟ ನಿನ್ನ;
ಜನರೇನು ಹೇಳಿದರು ದಿವ್ಯದರ್ಶನವೆ? ಕಂಡನಾವನದನ?
ಆಕಾಶದಗಲದರವಿಂದದಂತೆ ನಿನ್ನೆದೆಯೊ ವಿಶ್ವ ದೇವಾ
ಆಕಾಶಶುಭ್ರದೆದೆಗನ್ನಡಿಯಲಿ ಚುಂಬಿಸು ಮಹಾತ್ಮಭಾವ!

ನರನಾದೆನೇಕೆ?

ನರನಾದೆನೇಕೆ ಅಯ್ಯಯ್ಯೊ ನಾನು ಹರನಾಗಲಿಲ್ಲವೇಕೆ?
ಶರಶಾಪಶಕ್ತಿಗಳನಲ್ಲೆ ಬಿಟ್ಟು ನಾ ಬರಿದೆ ಬಂದೆನೇಕೆ? ॥ಪಲ್ಲ॥

ನೌಖಾಲಿಯಲ್ಲಿ ಕಣ್ಣಾಲಿಯಲ್ಲಿ ಪಡಿಮೂಡಿದಳಲ ಕಂಡು
ಬೊಂಬಾಯಿಯಲ್ಲಿ ಬಡಹೃದಯ ದುಃಖಿಸುವ ಬಗೆಯ ನೋಡಿಕೊಂಡು;
ಜಿನತತ್ತ್ವ ಬೆಳಗಿದೀ ಭರತಖಂಡದಲ್ಲನ್ಯ ತತ್ತ್ವ ಬಂದು
ಕೊನೆಯಿರದ ನರಕವೆಸಗಿಹುದ ತಿಳಿದು ನಾ ಬದುಕಲೇತಕೆಂದು?
ಬಿಂಗಿಯಾಪನೇ
ಸಿಂಗಿಯಾಪನೇ

ಆ ಹರನ ಹಣೆಯ ಹೊಸ ಹಗ್ಗಿಯಾಗಿ ಭುಗ್ಗೆಂದು ನಿಲ್ಲಲೇನು?
ಈ ದುರುಳತನವ ಸುಟ್ಟೊಗೆಯುವುಲ್ಕವನು ನಭದಿ ಎತ್ತಲೇನು?
ಎಂಟು ಗೇಣಿನೀ ದೇಹ ಸಾಲದೋ
ಕುಂಟು ಕೈಗಳಿವು ಬಂಟರಾಗವೋ
ಅಲ್ಪವಾಯ್ತು ನರಶಕ್ತಿಯಿಂದು ಹಾ!
ಜಲ್ಪಿಸುವರ ಬಾಯ್ಬಡಿವ ಶಕ್ತಿ ಬಾ!
ತಡವೆ, ತಡವೆ, ತಡವೆ?
ನಾ ತಡೆಯೆ, ತಡೆಯೆ, ತಡೆಯೆ!

ಅಹ! ಮಾನಧನರ ಅಭಿಮಾನಮಣಿಯ ಕಿತ್ತೆಸೆದು ತುಳಿಯುವಂಥ
ಆ ಹೀನ ಛಲವ ಬಣ್ಣಿಸಲು ಬರದು ಸೈತಾನ ನಾಚುವಂಥ!
ಹಸುಗೂಸು ಹಡೆದ ತಾಯಂದಿರೆಳೆದು ಮೊಲೆ ತರಿವ ಹೀನ ಬಗೆಯ
ಹಸಿ ಪುಂಡತನದ ಘೋರ ಪ್ರಕಾರಗಳ ಕೇಳಿ ಬಿಟ್ಟೆ ಡಗೆಯ!
ನೆತ್ತರುರಿಯಿತೋ
ರೋಮ ನಿಮಿರಿತೋ

ಧಮನಿ ಧಮನಿಯಲಿ ಧೂಮಕೇತುಗಳು ದಾಳಿಯಿಟ್ಟಹಾಗೆ
ಸಮನಿಸಿತ್ತು ಸರ್ವಾಂಗದಲ್ಲಿ ಸುಟ್ಟುರಿಯುವಂಥ ಬೇಗೆ!
ಗಗನದಗಲ ಹೊತ್ತಗೆಯು ಸಾಲದೋ
ಬರೆಯೆ, ನಗ್ನಭೂತಪ್ರಕೋಪವೋ!
ಬರಿ ನರತ್ವವಿದ ನಿಲಿಸಲಾರದೋ
ತೆರೆಯದೇಕೆ ಬಾಯ್ ತಿರೆಯು ನಿಂದುದೋ?
ಸಹಿಸೆ, ಸಹಿಸೆ, ಸಹಿಸೆ–
ಹಾಯ್ ದುರ್ಮದಾಗ್ನಿ ದಹಿಸೆ!

ಯಮಲೀಲೆಯಲ್ಲ, ನರಕಕ್ಕು ಹೊಲ್ಲದನ್ಯಾಯ ನಡೆಯಿತಣ್ಣ!
ಸುಮಕೋಮಲೆಯರ ಮರ್ಮಗಳ ಭೇದಿಪರ ಸುಡಿಸಬೇಕು ಕಣ್ಣ!
ಮನುಜತ್ವವಿರದ ಕಲ್ಲೆದೆಯ ಕಾಳತನ ಕಂಡಿತೀಗ ಲೋಕ;
ಮನದಲ್ಲಿ ಚಿತ್ರಿಸಲಶಕ್ಯ ಕವಿಗು ಈ ದುರ್ನಿವಾರ್ಯ ಶೋಕ!
ವಿಷವ ನುಂಗಲೇ
ವಿಲಯವೆಸಗಲೇ

ಕ್ಷುದ್ರನಾಗಿ ಅವತರಿಸಿ ಬಂದ ನಾ ರುದ್ರನಾಗಲೆಂತು?
ಅದ್ರಿಯನ್ನೆ ಪುಡಿಯೆಸಗುವಂಥ ವರ ವಜ್ರ ದೊರೆವುದೆಂತು?
ಮಾವಿನಂಥ ಈ ಹೃದಯ ಸಾಲದೋ
ಸಾವಿಗಂಜುವೀ ಬುದ್ಧಿ ಬೇಡವೋ–
ಏಳಬೇಕು ಪಾತಾಳ ಸಗ್ಗಗಳ
ಮೇಳವಿಟ್ಟು ದೀರ್ಘಸ್ವರೂಪದೊಳ್!
ಏಕೆ ತಡವು, ತಡವು?
ನಿನಗಿಲ್ಲ ಆತ್ಮ ಬಿಡುವು!

ಕಡೆಯ ಉತ್ತರ

ಬಂದೆ ಬಂದಾಗ ಹಾಡಿದೆ
ನಾ । ಹೋದೆ ಹೋದಾಗ ನೋಡಿದೆ ॥ಪ॥
ನಿ । ನ್ನಿಷ್ಟವೇನೆಂದು ಕೇಳಿದೆ
ನನ । ಗಿಷ್ಟವಿಲ್ಲವೆಂದುಸುರಿದೆ;

ದೃಷ್ಟಿಶಲ್ಯವೆದೆಗಿಟ್ಟು ಬಸವಳಿಸಿ
ಕುಟ್ಟಿ ನನ್ನ ಕನಸುಗಳ ಚೆಲ್ಲಿ, ಹಸಿ–
ದೆಷ್ಟು ಬೇಡಿದರು ಇಕ್ಕದೊಲವ, ಕಸಿ–
ದೊಕ್ಕಲಿಕ್ಕಿದರಗುವರಿ ನಿನಗೆ ನಮೊ– ಬಂದೆ...

ನಾ । ಬಂದ ಬರವ ಸ್ವಾಗತಿಸಿದೆ
ನ । ನ್ನೆದೆಯ ಬಳಿಕ ನೀ ಮಥಿಸಿದೆ;
ಕಂದನಂಥ ಮನ ನಿನ್ನದೆಂದು ಮೇ–
ಣೊಂದು ನಿಮಿಷ ಮೈಮರೆದು ನೋಡಿ ಹೌ–
ದೆಂದೆನಾದರರೆಗಳಿಗೆಯಲ್ಲೆ ನಾ
ಮಂದಬುದ್ಧಿಯೆಂಬರಿವನಿತ್ತೆಯಹ– ಬಂದೆ...

ಕರೆ । ಸಿಯೂ ಕರೆಯ ನೀ ಮರೆಸಿದೆ
ಬೆರ । ಸುವುದಕಾಗ ಬೇಸರಿಸಿದೆ;
ಬರೆಸಿದೋಲೆಯನು ಸ್ಮರಿಸದಾದೆ ವಿ–
ಸ್ತರಿಸಲೇನನರವಿಂದವದನ ಪಾ–
ದರಿಯ ಬೆಡಗನೊಡಗೊಂಡು ಬೇರೆ ಮಾ–
ದರಿಯ ಸೊವಡ ಸೂಸಿತ್ತು ಭಲೆರೆ ಭಲೆ– ಬಂದೆ...

ಆ । ಮಾನವೀಗೆಲ್ಲಿ ಕಳಿಸಿದೆ?
ಅಹು । ದಹುದು ನೀನೆಮ್ಮನುಳಿಸಿದೆ!
ಚಂಚಲೆಯರ ಚೆಲುವಿಕೆಯ ಮೋಹಕತೆ
ಮಿಂಚಿನಂತೆಯೆಂಬರಿವನಿತ್ತ ಗುರು
ಮುಂಚಿನುದ್ಯದಭಿಮಾನಹೇಮ ಬರಿ
ಕಂಚಿನಷ್ಟು ಬೆಲೆಗಿಳಿಯಿತೇಕುಸಿರೇ?– ಬಂದೆ...

ಬೇ । ಕೆನ್ನದಾದೆ ಕರೆದಿರೆ ಸುಧೆ
ಬಡ । ತನವ ಜರೆದೆ ಗುಣವರಿಯದೆ
ಮುತ್ತು ರತ್ನ ಮಾಣಿಕ್ಯದೊಡೆಯನನು
ಮೆಚ್ಚಿ ಕೈಯ ಹಿಡಿದಿರುವ ಭಾಗ್ಯವತಿ
ಇಚ್ಚೆ ಪೂರಯಿಸಿದಾಗ ಹೃದಯದಾ
ಹುಚ್ಚುಪ್ರೀತಿ ಬೇಕೆಂದು ನೆನೆಸುವರೆ? ಬಂದೆ...

ಕ । ಣ್ಣೀರ ಕರೆಯದಿರು ತಡೆ ತಡೆ
ನೆನೆ । ದೇನು ನಾನು ಹಿಡಿವೆನು ಕೊಡೆ!
ಬಡವ ನಾನು ಬಯಲಪ್ಪ ಶೀತ ನನ–
ಗಡಸಿತೆಂದರಾರೈವರಾರಕಟ!
ಸಿರಿಯ ಕಣಜದಧಿದೇವಿ ಕಾಯೆ ನಾ
ಶರಣು ಬಂದೆ ಸೆರಗೊಡ್ಡಿ ಬೇಡುವೆನು ಬಂದೆ...

ವರಿ । ಸಿದನ ಹಿಂದೆ ನೀ ನಡೆ ನಡೆ
ಮ । ತ್ತೇನು ನಿನಗದೆಲ್ಲಿಯ ತಡೆ?
ಉತ್ಸವೋತ್ಸವಗಳುತ್ಸದಲ್ಲಿ ಮಿಂ
ದುಚ್ಚಪೀಠದಲಿ ಕುಳಿತು ಕೈಯ ಹಿಡಿ–
ದಚ್ಚ ಭಕ್ತನರ್ಹಣೆಯ ಪಡೆಯಲಿಹ
ಅಚ್ಚರಸೆಯ ವೈಭವಕೆ ದೊರೆಯಿಹುದೆ? ಬಂದೆ...

ಕೈ । ಹಿಡಿದು ನಾ ನಿನ್ನ ಬೇಡಿದೆ
ಮುಳಿ । ದಬ್ಬ ನೀ ನೋಡದೋಡಿದೆ!
ಸಿರಿಯ ನಗರದಟ್ಟಾಲಿಕೆಯಲಿ ನಿಂ–
ದಿರಿಯೆ ತರುಣ ಜನರೆದೆಯ ನಕ್ಕು ಗೆಳ–
ತಿಯರ ಕೂಡ ಪರಿಹಾಸ ಗೈದ ಸುಖ–
ದಮಲನೊಮ್ಮೆ ನೆನೆ ಕಮಲಗಂಧಿ ನೀ ಬಂದೆ...

ಆ । ನಾಚ ನೀನೆಷ್ಟು ನಡೆಸಿದೆ
ನ । ನ್ನಾಸೆಯನ್ನು ಕುಡಿಚಿವುಟಿದೆ
ತಿರುಕನಾಗಿ ಮನೆಮುರುಕನಾಗಿ ಕಲೆ–
ಯೆರಕವೊಂದ ಸಾಧಿಸಿದ ಜೀರ್ಣ ಮುಖ–
ದೆರಕೆಯಿಲ್ಲದೆಳಗಿಳಿಯ ಕಟ್ಟಿಕೊಂ–
ಡಿರುವ ಪರನಿಗೆನಗೇಕೆ ಮೊರೆಯಿಡುವೆ? ಬಂದೆ...

ಹಾ । ನೆನೆದೊಡೆದೆಯೆ ಬಿರಿದೊಡೆವುದು
ಸಂ । ತಾಪದಂಗಾರ ಸುಡುವುದು!
ತರುಣಯೌವನಕುಠಾರ ತರುಣಿಯೆಂ–
ದುರಿದು ನುಡಿದ ಬಿಂಕಕ್ಕೆ ವಂದಿಸುವೆ
ಹರಿಹರಾದಿಗಳ ಹಿಡಿದ ಮಾಯೆ ನೀ–
ನರಿಯದವರ ಹಾಗೇಕೆ ರೋದಿಸುವೆ? ಬಂದೆ...

ಚಿಃ । ಶ್ರೇಯವಿಲ್ಲ ನಾ ನಿಂತರೆ
ಕ್ಷಮಿ । ಸಿನ್ನು ನಿನಗೇಕೆ ತೊಂದರೆ?
ರಮಣಿ ನಡೆವೆ ಕೊಡು ಹೋಗಲಪ್ಪಣೆಯ
ರಮಿಸಲೇನು ನಿನ್ನವನೆ ನಾನು? ಕೃಪೆ–
ಯಿರಲಿ ದೀನನಲಿ ನಮೋ ಕ್ಷೀರಸಾ–
ಗರದಿ ನೀರ ಹನಿಗಿಂಬನಿತ್ತು ಪೊರೆ!– ಬಂದೆ...

ಸೌಂದರ್ಯಪೂರ

ಸೌಂದರ್ಯಪೂರವ
ಕಂಡೆ ಕಾರವಾರವ ॥ಪ॥

ಕರಿಗುದುರೆಯ ಮರಿಗಳಂಥ
ಸಾಲು ಸಾಲು ಗಿರಿಗಳ
ಹರೆಯವ ಮೋಹಿಸುವ ಪಶ್ಚಿ–
ಮಾಬ್ಧಿಯ ಮೆಲ್ದೆರೆಗಳ
ನರ್ಮಸಚಿವತನದ ಸನ್ನೆ–
ಸೂಕ್ಷ್ಮದುಲಿಯನರಿತು ನಡೆವ

ಚೆಲ್ಲಗಾರ್ತಿಯರನು ಬಲ್ಲ
ರಸಿಕರಂಗರ
ಒಲ್ಲೆ ಒಲ್ಲೆ ಎಂದರೂನು
ಒಲಿಸಿಕೊಳ್ಳಲನುವಾಗುವ
'ಸಹ–ಗಮನ' ಸಮಾಗಮಗಳೊ
ನಿತ್ಯ ಸುಂದರ!

ಬಾರೊ ಬಾರೊ ಮೈಸನೂರ
ರಸಿಕಸಿಂಧುರ!
ಸಾಗರವೇ ಕೆರೆಯಾಗಿದೆ
ಕಾರವಾರದೂರಿಗೆ
ಆ ಕನ್ನಡಿಯಲಿ ಕಾಣುವ
ರಸಿಕ ಜನರ ಸೊಬಗಿಗೆ

ಅಂತಃಪಟ ಹಿಡಿದ ಹಾಗೆ
ಹಬ್ಬಿ ಬೆಳೆದ ಹಸಿರ ಮೇಗೆ
ಕಂಚುಕಿಗಳ ಕಜ್ಜಗೈವ
ಭೂಧರನಿಕರ!
ಅಂತರಂಗದಲ್ಲಿ ತಣಿವ
ಬೇಡಿದಷ್ಟು ತುಂಬಿಕೊಡುವ

ಶಾಂತವಾದ ರೂಪಶ್ರೀ–
ಮಂತ ಬಂದರ!
ನೋಡ ಬಾರೊ ಧಾರವಾಡ–
ದೂರ ಸುಂದರ!
ಹಗಲಿರುಳೂ ಮಂದ ಮಂದ
ಪವನನಾಟ ಪಾಠವೊ

ಚಂದ್ರಕಾಂತಿ ತೆರೆದೆದ್ದಿರೆ
ಪ್ರೇಮಿಜನರ ಬೇಟವೊ!
ಸಗ್ಗವೆಂಬುದಿದ್ದರೂನು
ಹೆಚ್ಚು ಕಿಚ್ಚನದಕೆಂಬೆನು;
ಮಚ್ಚರಿಸದ ರಸಿಕರುಂಟೆ
ರಸಜೀವನಕೆ?

ಶಾಂತಿರಸದ ತವರು ಕಣೋ–
ಜೊತೆಗೆ ಪ್ರೀತಿಯಿರಲು ಬಾಳು
ನೂರು ವರುಷ ಕಡಿಮೆಯಕ್ಕು!
ನೋಡದೆ ಬದುಕೆ?
ಮಂಗಳೂರ ಗೆಳೆಯ ಹೊರಡು
ತಡವದೇತಕೆ?

ಮಧುರಾವಟಿ

ಮಧುರಾವಟಿಯನು ಮಾರುವ ವೈದ್ಯನು
ಬಂದಿಹೆ ನೋಡಿದಿರಾ?
ಮಧುರಾಧರದ ಕುಮಾರರೆ ಮುಗ್ಧರೆ
ಕೊಳ್ಳಿರಿ ಸುಲಭ ದರ! ॥ಪ॥

ಮಧುರಾವಟಿಯನು ಮಾರುವ ವೈದ್ಯನು
ಎದೆನೋವನು ಪರಿಹರಿಸುವ ಭಿಷಜನು
ಬಂದಿಹೆ, ಹಾಕಿಸಿ ಯೋಗಾಸನಗಳ
ಹೊಂದಿಸುವೆನು ಆನಂದದ ಪದಗಳ!
ಮಕ್ಕಳೆ ಬನ್ನಿರಿ ಮರಿಗಳೆ ಬನ್ನಿರಿ
ಬೇಕಾದವರೆಲ್ಲ;
ಸಿಕ್ಕದಿದಿನ್ನೆಲ್ಲಿಯು, ಇದರೆದುರಿಗೆ
ಸಕ್ಕರೆ ಸಿಹಿಯಲ್ಲ!

ಪ್ರೇಮಿಗಳೆನ್ನುವ ದೇವತೆಗಳ ನಾ
ಧೇನಿಸಿ ಧೇನಿಸಿ ಪಡೆದಿಹೆನಿದನನು–
ಮಾನಕೆ ಸಿಗದಿದು 'ನಾನೋ ನಾನೆ' ೦
ದೋಡುತ ಬಂದಿದ ಬೇಡುವ ಚೆನ್ನಗೆ–
ತಿಂದೊಡನೆಯೆ ಹಾಲೂಡಿಸಿದರೊ ಎನೆ
ಸುಖ ಸಂಭವಿಸುವುದು;
ನಿಂದೊಡನೆಯೆ ಚಟುವಟಿಕೆಯು ಬರುವುದು
ಮುಖ ತಾನರಳುವುದು!

ಮುನಿಸಾಂತವರಿಗೆ ಮೊದಲನೆ ಮದ್ದಿದು,
ಅಸಮಾಧಿಗಸಾಮಾನ್ಯದ ಔಷಧ!
ಬೆಂಣ್ಣೆಯ ತಿಂದಂತಿರುವುದಿದರ ಸವಿ;
ನುಣ್ಣಗೆ ತಣ್ಣಗೆ ಮೆಲ್ಲಗೆ ತಿಂದರೆ!
ವಿಜ್ಞಾನಿಯು ಸಂಶೋಧಿಸಿ ಕಾಣದ
ರಾಸಾಯನ ಪಾಕ,
ಅಜ್ಞನು ಮೂಸಿದರೂ ಸಹ ಅವನಿಗೆ
ತೆರೆಯದಿರದು ನಾಕ!

ಕಣ್ಣಿಗೆ ಕಾಣದ ಕಮಲದ ಮುಗುಳನು
ಬಣ್ಣಿಸಲಾಗದ ಬಣ್ಣದಿ ಸೇರಿಸಿ
ಪ್ರೇಮೋದಧಿಯಲಿ ಸಿಕ್ಕಿದ ಸುಧೆಯಲಿ
ಬತ್ತಿಸಿ ಮಾಡಿದ ಮಧುರಾವಟಿಯಿದು!
ಕನ್ನಡ ಹಳ್ಳಿಗ 'ರೊಲುಮೆಯ ಗುಳಿಗೆ' ಯಿ–
ದೆಂಬರು, ಹೆಚ್ಚೇನು–
ಬಲ್ಲವ ಬಲ್ಲನು, ಮಾಧುರ್ಯಾಂಶದಿ
ಕಡಿಮೆಯು ಹೆಜ್ಜೇನೂ!

ರಮಣೀಯತೆಯುದ್ಯಾನದ ಲತೆಗಳೆ,
ರಮಣೀರಮಣರ ಪ್ರೇಮದ ಫಲಗಳೆ,
ನಿತ್ಯವು ಒಂದೊಂದೀವೆನು ಬನ್ನಿರಿ,
ಮತ್ತೇತಕೆ ತಡ? ಕೊಳ್ಳಿರಿ, ಕೊಳ್ಳಿರಿ!
ಅಂಕಾಸನದಲಿ ಕುಳ್ಳಿರಲೊಪ್ಪುವು–
ದೊಳ್ಳಿತು; ಕಡೆಗೆಲ್ಲ
ತಕ್ಕೊಂಬರ ತುಟಿ ಥಟ್ಟನೆ ನಾಲ್ಕಹು–
ದಂಜಿಕೆಗೆಡೆಯಿಲ್ಲ!

ಆಸೆ

ಆಸೆ, ಪ್ರೀತಿಯ ಆಸೆ, ಹಿರಿಯಾಸೆ, ಸಿರಿಯಾಸೆ,
ಬಸಿರಾಸೆ, ಉಸಿರಿನಾಸೆ;
ಆಸೆ ಕಣ್ಣಾಸೆ, ಕಿವಿಮೂಗುನಾಲಗೆಯಾಸೆ,
ಮೈಯಾಸೆ, ಮನದ ಆಸೆ;

ಆಸೆ ಮತ್ತೆನ್ನಮನ ಹಾಸುಹೊಕ್ಕಾಗಿಹವು
ಹುಟ್ಟುದಂಪತಿಗಳೆನಿಸಿ;
ಆಸೆಯೆನ್ನಂತರಾತ್ಮನ ಬಾಸೆಯಾಗಿಹುದು
ವಿಶ್ವವನೆ ತನ್ನದೆನಿಸಿ!

ಭವಿತವ್ಯತೆಯು ತೆರೆವ ಭಂಡಾರದಧಿಕಾರಿ
ಹೊಂಗನಸುಹೂವಿನ ವನ!
ನವನವೋನ್ಮೇಷತಾರೆಗಳ ತವರೂರಕ್ಕು,
ಸಂತೋಷರತ್ನಸದನ!

ಕಲ್ಪನೆಯ ನೆಲಗಟ್ಟು, ಪದೆಪಿನಾ ತಲೆಗಟ್ಟು,
ಸಮಚಿತ್ತಕಿರುವ ಮಟ್ಟು;
ಜೀವನದ ಜೀವವದು, ಭಾವನೆಯ ಕಣ್ಣಹುದು–
ಉಸಿರಿನೊಡನದರ ಹುಟ್ಟು!

ಯುಗ ಮುಗಿದರೂ ಮತ್ತೆ ಬದುಕಿ ಆಳುವ ಎನಿಸಿ
ಆತ್ಮ ತಾನಮರವಾಯ್ತು;
ಸೊಗ ಬೇಕು ಎಂದೆನಿಸಿ ನಿನ್ನಿಂದ ಅಮರಾತ್ಮ
ಆನಂದರೂಪವಾಯ್ತು!
ನಿನ್ನಲ್ಲಿ ಪರಮಾತ್ಮ ಬಿತ್ತಿ ತನ್ನನು ಜಗವ–

ನೊಂದು ದಿನ ಪಡೆದನಂತೆ!
ನಿನ್ನಲ್ಲೆ ಲೀನನಾದೊಂದು ದಿನ ಜಗವೆ ಬ್ರ–
ಹ್ಮಾನಂದಲೀನವಂತೆ!

ಬಾರ ಬಾ ನನ್ನಾಸೆ, ಚೆನ್ನಾಸೆ, ಹೊನ್ನಾಸೆ–
ತೋರಾಸೆ, ಮೊಗವ ತೋರ!
ರಸವಾಗಿ ರುಚಿಯಾಗಿ ಮೃದುವಾಗಿ ಮಧುವಾಗಿ
ಹೊಸತಾಗಿ ಮಾಗಿ ಬಾರ!

ಹಾಡಾಗಿ ಹರಿದು ಬಾ, ಹರಣದಲಿ ತುಂಬಿ ಬಾ
ಮೂಡಿ ಮುನ್ನಡೆದು ಬಾರ!
ಸರಸಿ ಬಾ, ಅರಸಿ ಬಾ, ಕರೆಸಿ ಬಾ ಕಲ್ಪನೆಯ,
ಅಪ್ಪಿಗೆಯನೊಪ್ಪಿ ಸೇರ!

ಉಷಾಸೂಕ್ತ

ಮೂಡಲದ ಗಿರಿಯಿಂದ ಮೂಡಿ ಬಂದೆ–ದೇವಿ
ನಾಡಗಲ ನಿನ್ನ ಸಿರಿ ನೋಡಿ ನಿಂದೆ ॥ಪ॥

ಮೂಡಲದ ಮಲ್ಲಿಗೆಯ ಮುಡಿದಿರುವ ನಲ್ವೆಳಗೆ,
ಪಡುಮುಗಿಲುಗನ್ನಡಿಯ ನೋಡುವವಳೇ!
ತಾರೆಗಳ ಹಾರವನು ಕಳಚಿರುವೆಯಾ–ಮಂಜು
ನೀರಿಂದ ಮೊಗದೊಳೆದು ನಿಂದಿರುವೆಯಾ?
ಅರುಣಕುಂಕುಮವನ್ನು ಧರಿಸಿರುವೆಯಾ ಹಗಲು
ಗೊರಳಿಂದ ಬೆಳಕನ್ನು ಹಾಡುತಿಹೆಯಾ?

ಏರುತಿರೆ ನೀ ಬಾನ ಗದ್ದುಗೆಯನುಷೆ, ಭೃಂಗ–
ವಾರ ಸಂಗೀತವಂಗೀಕರಿಸಿದೆ!
ತೀರಜೀವಿಗಳು ಸುವ್ವಿಯ ಕೊಡುತಿವೆ–ನಿಂತ
ನೀರಜೀವಿಗಳರಳನೇರಿಸುತಿವೆ!
ಆರತಿಗೆ ಬೆಳಕನ್ನು ಹುಡುಕಿ ಹುಡುಕಿ ಮಹಾ
ರಾಯತೀ ಸೋತೆ, ನಗಬೇಡ ಕುಲುಕಿ!

ಹುಟ್ಟು ಕಲೆಗಾರ್ತಿ ನೀ ಹಿಡಿದ ಕಿರಣದ ಕುಂಚ–
ವಿಟ್ಟ ಬಣ್ಣಕೆ ಸಾಟಿಯೆಂಬುದುಂಟೇ?
ಮುಟ್ಟಿಮುಟ್ಟಿದುದೆಲ್ಲ ರನ್ನವಾಯ್ತು–ಹೂವು
ಚಿಟ್ಟೆಗಳಿಗೆಲ್ಲ ಮೈದುಂಬಿ ಹೋಯ್ತು!
ಕಟ್ಟೆಯೊಡೆದಿತು ಹರ್ಷಜಲಧಿಯುಕ್ಕಿ–ಹರಣ
ಸೊಕ್ಕಿಹೋಯಿತು ಹೊನಲಿನಲ್ಲಿ ಸಿಕ್ಕಿ!

ತಂಗಾಳಿ ತೆನೆಯೆ, ತಂಪಿನ ತವರೆ, ತನ್ವಂಗಿ,
ತಾರುಣ್ಯದೀಧಿತಿಯೆ, ತುಂಗಸ್ತನಿ!
ಷಟ್ಪದ ಚತುಷ್ಪದ ದ್ವಿಪದಗಳನು–ನೀನು
ಎಚ್ಚರಿಸಿ ಬೆಳಕನೂಡಿಸುವುದೇನು!
ಷಟ್ಕರಣಗಳು ಮಿಂಚುವಾಲಿನಲ್ಲಿ–ಮಿಂದು
ನಿಷ್ಪಾಪವಾಗುತಿವೆ ಬೆಳಕುಬಳ್ಳಿ!

ಯಜ್ಞವೇದಿಕೆಯಗ್ನಿಶಿಖೆಯಂತೆ, ಯಾಜಕನು
ನೆಟ್ಟ ಯಜ್ಞಸ್ತಂಭದಂತೆ ನಿಂತೆ!
ಸಜ್ಜನಿಕೆಯೆಂಬ ಸುಧೆ ಹೆಚ್ಚಿದಂತೆ–ಪುಣ್ಯ
ಪಜ್ಜಳಿಸಿ ಕುಡಿಗೊಂಡು ಬಿಚ್ಚಿದಂತೆ!
ಗೆಜ್ಜೆಗಾಲೆತ್ತಿರುವ ಗೌರಿಯಂತೆ–ಮನದ
ಕಜ್ಜಲವು ತೊಳೆತೊಳೆದು ಜಾರುವಂತೆ!

ಪಾವನತ್ವದ ಪುಷ್ಪ, ದೇವಶಿಲ್ಪಪ್ರತಿಭೆ,
ಜೀವನದ ಸಂಜೀವನೈಕಸಿದ್ಧಿ!
ಸಾವಿರಕೆ ಹುಡುಕಿದರೆ ಸಿಕ್ಕಳೆಂದೂ–ಇಂಥ
ಸಾವಿರದ ರಸಿಕಹೃದಯಾಪ್ತಬಂಧು!
ಧಾವಿಸುವುದೆದೆ ನಿನ್ನ ಬಳಿಗೆ ಚೆಲುವೇ–ಪ್ರೇಮ–
ಭಾವ ನಿನ್ನಲ್ಲೆಷ್ಟದೆಷ್ಟು ಮಿದುವೇ!

ಹೂವನರಳಿಸುವವಳೆ, ಹಸಿರ ಹೊಳೆಯಿಸುವವಳೆ,
ಬರಿದೆ ರಿಸಿ ಕರೆದನೆ “ಅಜುರ್ಯೆ” ಎಂದು?
ಅಂಗಿರನವಗ್ವರಿಗೆ ಸಿರಿಯನಿತ್ತು–ವಿಶ್ವ
ಮಂಗಲೆ “ಮಘೋನಿ” ನೀನಾದೆಯಂದು!
ಭಂಗಾರಗೆರೆ ಸೀರೆಯುಟ್ಟ ಸೂರ್ಯೆ ಹೃದಯ–
ದಂಗಣವ ನಿರ್ಮಲಿಸು ದೇವಧುರ್ಯೆ!
ನಿಶೆಮಾಯೆ; ನಿಸದ ನೀ ನಿತ್ಯನೂತನೆ, ದಿವ್ಯೆ,

ನೀರಂಧ್ರಬಂಧುರಶರೀರೆ, ಮಧುರೇ!
ಕಾಣಿಸುವ ನಿಶೆ ನಿಶೆಯೆ ಅಲ್ಲವಲ್ಲೇ ಮತ್ತೆ
ಕಾಣಿಸದ ನಿಶೆಯಿಂಬುದಿಲ್ಲವಲ್ಲೇ!
ಕಾಣುವಿಂದ್ರಿಯಕರ್ಥ ಕೊಟ್ಟೆಯಲ್ಲೇ ನಿನ್ನ
ಕಾಣದವ ಕಣ್ಣಿದ್ದು ಕುರುಡನಲ್ಲೇ!

ಓ ಬೆಳಕಿನರಗಿಣಿಯೆ, ಮೂಲೋಕ ಕಣ್ಮಣಿಯೆ,
ಚೆಲುವಿನುತ್ಸವೆ, ನನ್ನಿಯುನ್ಮಾದವೇ!
ಬೆಳಕನೊಳಗಿಟ್ಟುಕೊಂಡರಸುವರಲಾ–ತಾಯಿ
ಎತ್ತಿಕೊಂಡೇ ಮಗುವ ಹುಡುಕುವಳಲಾ!
ಬೆಳಕಿಲ್ಲದೆಡೆಯಿಲ್ಲ ಕಾಲವಿಲ್ಲ – ಬೆಳಕು
ಬೆಳಕು ಒಳಹೊರಗೆಲ್ಲ–ನೋಡಿರೆಲ್ಲ!

ಏನ ಕೊಡಲಿ ಎಂದೆನದಿರು ಗೆಳತೀ!

ಏನ ಕೊಡಲಿ ಎಂದೆನದಿರು ಗೆಳತೀ
  ಏನನು ಕೊಟ್ಟರು ಎಲ್ಲವದು ॥ಪಲ್ಲ॥

ಕಮಲನಯನಗೆ ಕುಚೇಲನು ಕೊಟ್ಟುದು
  ಕಮಲೆಯನೇ ಕರೆತಂದುದಲಾ!
ಅಮಲ ಮನವು ಅಮರತ್ವವ ಪಡೆವುದು;
  ಶ್ರಮದ ಕೊಡುಗೆಯಿಂದೇನು ಫಲ?
  ಅರ್ಥದ ಭಾವದೆ ಪ್ರೀತಿಯ ಆಳವ
  ಅಳೆವುದು ಲೋಕದ ಪದ್ಧತಿಯು;
ಆರ್ಥದಭಾವದೆ ಪ್ರೀತಿಗೆ ಆಳವೆ
  ಇರದೆನ್ನದು ಕಬ್ಬಿಗನೆದೆಯು!
ಒಡವೆಯ ಕೊಡುವುದು ಕೊಳುವುದು ನೇಹದ
  ಮೊದಲಂತಸ್ತಿನ ಪರಿಪಾಠ;
ಒಡವೆಯ ಮೀರ್ದೊಳುನುಡಿಕೊಡುಕೊಳು ಮ–
  ತ್ತೆರಡನೆಯೇರಿಕೆ, ಮುಂದೋಟ!
ನುಡಿಯನು ಭಂಗಿಸಿ ಆತ್ಮವ ಹೊಗುವುದು
  ಕಡೆಘಟ್ಟವು; ಆ ಮೈತ್ರಿಯಲಿ
  ನಡೆನುಡಿಯಲ್ಲಿಯದೆಯಲ್ಲಿಯು ಸಿಕ್ಕದು
  ಒಡಕು ಬಿರುಕು–ಆ ಬೆಸುಗೆಯಲಿ!

ಏನನು ಕೊಟ್ಟರು ನೇಹದ ಬಟ್ಟಲೊ–
ಳಮೃತವೆ, ಅದು ಮಧು ಮಾಕ್ಷಿಕವೇ;
  ಏನಾಡಿದರದು ಕೊಂಡಾಟವೆ ಸರಿ,
  ಇಲ್ಲವೆ ಅದರಲಿ ಪಾಕ್ಷಿಕವೇ!

ಸಕ್ಕರೆಘಟ್ಟಿಯೊಳೆಲ್ಲರಸಿದರೂ
ಸಿಕ್ಕುವುದೇ ಬೇಡದ ಭಾಗ?
ಅಕ್ಕರೆಯಲಿ ಸಾಯುಜ್ಯದ ಸುಖವಿದೆ;
ಅದು ಎಲ್ಲಾ ಯೋಗದ ಯೋಗ!

ಜಂಗಮ

ಜಂಗಮಃ ಚಿದ್ವಿಹಂಗಮಃ
ಹೃದಯ ಗಮಗಮಃ ಪ್ರೀತಿಕುಸುಮ
ನಮೊ ನಮಃ ಪ್ರಾಣ ಸಂಗಮಃ
ಮೋದ ಸಂಭ್ರಮಃ ರಸದ ಉಗಮ!

ಅವ್ಯಕ್ತ ಶಿವನ, ಅನಿರುದ್ಧ ಭವನ
ಸುವ್ಯಕ್ತವಾದ ಕವನ–
ಆ ಮುಕ್ತಜೀವ ಈ ಸಕ್ತದೇಹ–
ದೊಳಹೊಗಲು ಬಂತು ಜನನ!

ಬೆಳ್‌ಬೆಳಕಿನಲ್ಲಿ ಏಳ್‌ಬಣ್ಣ ಚೆಲ್ಲಿ
ಬಂದಂತೆ ಚಿತ್ರಭಾನು
ಆನಂದದಲ್ಲಿ ಸುಖದುಃಖ ಚೆಲ್ಲಿ
ಅವತರಿಸಿ ಬಂದೆ ನೀನು!

ಹೆಸರಿತ್ತದಾಗಿ ರೂಪಕ್ಕೆ ತಾಗಿ
ಒಂದಾದ ನೀನು ಮೊದಲು
ನೂರಾಗಿ ದೃಷ್ಟಿ ಮೂರಾಗಿ ಸೃಷ್ಟಿ
ಹಲವಾಗಿ ತೋರ್ದೆ ಬದಲು!

ವಿಜ್ಞಾನದಲ್ಲಿ ಅಜ್ಞಾನ ಹೆತ್ತು
ಅಡಗಿಸುವ ಲೀಲೆಯೇನು
ಆನಂದ ಬಿಟ್ಟು ಅಲ್ಲಲ್ಲಿ ತಿರುಗಿ
ಮತ್ತಲ್ಲೆ ಲೀನ ನೀನು!

ನಿನ್ನೊಳಗಣಿಂದ ನನ್ನಿತ್ತ ತಂದು
    ಕುಣಿಸುತ್ತಲಿರ್ಪ ದೇವ,
ನನ್ನೊಳಗೆ ನೀನು ಕುಳಿತಿಂತು ಹರಿಯಿಸುವೆ
    ನಿನ್ನ ದಿವ್ಯ ಕಾವ!

ಕಣ್ಕಿವಿಗಳಿಂದ ಬಹಿರಂಗದಲ್ಲಿ
    ಆಸ್ವಾದ್ಯನಾದ ಪುರುಷ,
ಬರಿಬೆಳಕು ಕಣ್ಣ ಚುಚ್ಚೀತು ಎಂದು
    ಕರೆದಿರ್ಪ ತಮದ ವರುಷ!

ಅಲ್ಲಲ್ಲಿ ಸೋಸಿ ಒಂದೊಂದೆ ಮೂಸಿ
    ಮನದಣಿದೆ, ನಿನ್ನ ಸೃಷ್ಟಿ–
ಹುಲ್ಲಾಗಿ ಹುಟ್ಟಿ ಹೂವಾಗಿ ಬೆಳೆದು
    ಕೊಟ್ಟಿತ್ತು ನಿನ್ನ ದೃಷ್ಟಿ!

    ಜಂಗಮಃ ದಿವ್ಯಹೃದ್ಗಮಃ
ಕಾವ್ಯವಿಭ್ರಮಃ ಕಾಲ ಹಿಡಿವೆ,
ನಮೊ ನಮಃ ವಿಶ್ವತೋಭ್ರಮಃ
ಕರ್ಮಸಂಕ್ರಮಃ ಧೂಳ ಮುಡಿವೆ!

ಎದುರಿಸದಿರೆ ನಾಶ ಸತ್ಯ!

ಕಾಲಕಾಲನಾಗಿ ನಂಜ ನುಂಗು ಜೀವ! ಭಯದ
ಮೂಲವನ್ನೆ ಮುರಿಯೆ ಬರ್ಕು ಧೀರಭಾವ!

ನೂರು ದೇವರುಗಳಿಗೆರಗಿ ನೂರು ದಾರಿ ತುಳಿಯಲೇಕೆ?
ನೂರು ಗುರಿಗಳೆಂದರಲ್ಲ ಗುರಿಗಳವು; ಬಿಸಾಡು ಹೊಲ್ಲ!
ಅರಸಿ ಅದನು ಇದನು ದುಃಖ–
ಸರಸಿಯಲ್ಲಿ ಬೀಳಲೇಕೆ?
ತರಿಸಿಕೊಳುವ ಶಕ್ತಿ ಬೇಕು;
ಬರಿದೆ ಬೇಡಲೆಲ್ಲ ಹೋಕು!

ಎಲೆಲೆ ಜೀವ, ನಿಂತ ಕಡೆಯೆ ನಿಲಲು ಕೂಡ ನೀ ವಿರುದ್ಧ–
ಬಲದ ಹತಿಯನಾಂತು ತಡೆಯೆ ಬಲವ ಪಡೆಯದಿರಲು ಬದ್ಧ!
ಸೂರ್ಯ–ಚಂದ್ರರಿಂದ ಹಿಡಿದು
ಜೀವ, ಜಡ, ಸಮಸ್ತ ನಿತ್ಯ
ಧಾವಿಸುತಿದೆ ನಿನ್ನ ಮೇಲೆ–
ಎದುರಿಸದಿರೆ ನಾಶ ಸತ್ಯ!

ತಾಯಿ ತಂದೆ ಮೊದಲುಗೊಂಡು ಅನ್ನ–ಚಿನ್ನ–ದೈವವೆಲ್ಲ
ಕಾಯಕಷ್ಟದಿಂದ ಪಡೆವ ಪ್ರಗತಿಗಾಗಿ–ಪ್ರಗತಿಯಲ್ಲ!
ಜಗವ ತಿದ್ದಲೆಂದು ಹೊರಟು
ಗೆದ್ದ ವೀರನೊಬ್ಬನಿಲ್ಲ;
ದೃಷ್ಟಿಯಂತೆ ಸೃಷ್ಟಿಯಿಹುದು;
ಸೃಷ್ಟಿಯೊಂದೆ, ದೃಷ್ಟಿಯಲ್ಲ!

ದೊಡ್ಡ ತಾರೆಯೆರಡರೆಳೆತಕಡ್ಡ ಸಿಕ್ಕಿ ನರಳ್ವ ಗ್ರಹಕೆ
ಸದೃಶವೀ ಸಮಾಜ ಮಂದ–ಶೀಘ್ರವಾದದಲ್ಲಿ ಸಿಲುಕೆ–
ಎಲ್ಲ ಜನದ ಹರುಷ ತನ್ನ–
ದೆಂಬ ಭಾವ ಮೂಡಲಿಲ್ಲ;
ಎಲ್ಲದಲ್ಲಿ ತನ್ನ ತಳವ
ಗುರುತು ಮಾಡಿಕೊಳ್ಳಲಿಲ್ಲ!

ಅದರಿನಿಂದ್ರ ಚಂದ್ರ ನಾನು, ವಿಗಡಬಲ ಕೃಶಾನು ಭಾನು–
ಎಂದು ತನ್ನ ತಾನೆ ನುತಿಸಿ ಕುರುಡನಾದ ಮರ್ತ್ಯಸೂನು!
ಮುಳುಗಿದಿನನು ಮೂಡದಿರನು–
ಕತ್ತಲೆಷ್ಟು ತಡೆದರೇನು?
ಬೆಳೆವುದೆಮಗೆ ಜನ್ಮಸಿದ್ಧ–
ಬಿದ್ದ ಮನುಜನೇಳದಿರನು!

'ಸ್ವಸ್ತಿಪಂಥದಲ್ಲಿ ಸೂರ್ಯ–ಚಂದ್ರರಂತೆ ನಡೆವೆ'ವೆಂದ
ಸ್ತುತ್ಯ ಪೂರ್ವಜರನು ನೋಡು, ಅತ್ತುಕರೆಯಲೇನು ಚೆಂದ?
ಹರುಷರೂಪ! ಸತ್ತ್ವಭಾವ–
ಕೆರಗಿ ಯೋಧನಂತೆ ತಾಮ–
ಸರನು ತಡೆಯಲಾತ್ಮಬಲವ
ಪಡೆವ ಬಯಕೆ ದಿವ್ಯಕಾಮ!

ಅದನು ತಳೆದದಮ್ಯ ಯತ್ನವೆಸಗು ಧೀರಜೀವ, ಮನದ
ಪಿಶುನಭಾವದೆದೆಯ ಮೆಟ್ಟಿ ಅಡಿಯಿಡು ಪ್ರತಾಪ ಬೆರೆದ!
ಇರಿದು ಕೆಡಹು ತಡೆಗಳನ್ನು,
ನಿಜವ ಮೊಳಗು ಒಳಗು ಹೊರಗು;
ಅಹ ನವೋನವಪ್ರಭಾವಿ
ಆತ್ಮತೇಜವದನು ಬೆಳಗು!

ಕಾಲಕಾಲನಾಗಿ ನಂಜ ನುಂಗು ಜೀವ! ಭಯದ
ಮೂಲವನ್ನೆ ಮುರಿಯೆ ಬರ್ಕು ಧೀರಭಾವ!

ದೀನೆ

ಎನಗಿದು ತಿಳಿಯದು ಎನಗಿದು ಹೊಳೆಯದು,
ಎನಗಿದರರಿವಿನಿತೂ ಇಲ್ಲ!
ಅನುಮಾನಿಸಿ ಅನುಮಾನಿಸಿ ಮಾನಿಗ–
ಳನುನಯಗೈದೆನು ಬಹುಬಲ್ಲ

ಬೆಳಗಿನ ಮಲಮಲ ಮಲರುವ ಮಲ್ಲಿಗೆ–
ಯೊಳಗೂ ವಿಷವಿರಬಹುದೆಂದೆ?
ಸೆಳವಿಲ್ಲದ ತಿಳಿವೊನಲೂ ತಮ್ಮನು
ಸೆಳದೀತಂತರ್ಹ್ರದಕೆಂದೆ?

ಅರಿಯದ ಮುಗುದೆಯ ಬೆರಗಿನ ನೋಟದಿ
ಇನಿಸಾದರು ನಂಜಿದ್ದೀತೆ?
ಹರೆಯದ ಹೂನಗೆಯರಳಿದ ಮಾತ್ರಕೆ
ಹೆರವರ ಎದೆಗದು ಗುದ್ದೀತೆ?

ನನ್ನೆದೆವಾತಿಗೆ ತಮ್ಮೆದೆವಾತನು
ಕೊಡದೇತಕೆ ಜನ ತಡೆಯುವರು?
ಎನ್ನೊಲವಿಗೆ ಒಲವೀಯದೆ ಚಣಚಣ–
ದಲ್ಲೇತಕೆ ಮೊಗದಿರುಹುವರು?

ಎಳೆದಳಿರಿನ ಎಳಗೆಂಪಿನ ಮಾಮರ–
ದೆಳಮೆಗೆ ಮಚ್ಚರ ಹುಟ್ಟೀತೆ?
ಕಳವೆಯ ತೆನೆಗಳ ಮೇಲುಲಿದಾಡುವ
ಎಳಗಿಳಿ ಪಾಪವ ಮುಟ್ಟೀತೆ?

ಹಾಲಲಿ ಹುಳಿಯಿದೆಯೆನ್ನುವ ಲೋಕದ
ಕಾಲಿನ ತುಳಿತಕೆ ಪುಡಿಯಾದೆ,
ಕಾಲಕೆ ನಮ, ಕಂಕಾಲಕೆ ಸಮವೀ
ಬಾಲೆಯ ತನು–ಬರಿ ಹಿಡಿಯಾದೆ

ಬಾಲಕ ಬಾಯಲಿ ಬೆರಳನುಂಡು ಮೊಲೆ–
ವಾಲ ಕುಡಿದೆನೆನ್ನುವ ತೆರದಿ,
ತಾಳ ಹಾಕಿ ನನ್ನಷ್ಟಕೆ ಕುಣಿದದ
ಮೆಚ್ಚುವರೆಂದುಬ್ಬಿದೆ ಭರದಿ!

ಕುಂಕುಮವಿಡೆ ಕುಂದೆಂಬರು, ಬರಿಹಣೆ
ಕಂಡರೆ ಕಿಡಿಯುಗುಳ್ವರು ಬಿಡದೆ;
ಲಂಕೆಯ ತುಳಿದಾ ಪಾಪಕೆ ಸೀತೆಯ
ಬೆಂಕಿಯು ತಾ ಬಿಟ್ಟಿತು ಸುಡದೆ!

ಒಲವೋ ಒಲವೆಂದುಲಿದುಲಿದರಗಿಳಿ
ಬಲಗುಂದಿತು ಪಂಜರದಲ್ಲಿ,
ಚೆಲುವೋ ಚೆಲುವೆಂದೀ ಜಗವಳಲನೆ
ನಲವೆಂದಿತು ಸುಖಮದದಲ್ಲಿ!

ನಾಥರ ಕಾಣದನಾಥೆಯ ಒಡಲಿನ
ಪ್ರೀತಿಯ ಹಸಿವಿಂಗಿಪರಾರು?
ಪೂತಾತ್ಮರ ಸುಖಕೀ ರಟ್ಟೆಗಳನು
ಸವೆದ ದಿನವ ಲೆಕ್ಕಿಪರಾರು?

ಹಾ ಹೃದಯವೆ ಹಾ! ಹಸುಳೆಯೆ ಹಾಹಾ!
ಅಕರುಣವಾದ ಸಮಾಜದಲಿ,
ಹಾ ಹೆಂದಿದೆ, ಹಾ ಕುಂದಿದೆ, ಕಂದಿದೆ,
ನೊಂದೆ ಬೆಂದೆ ನಿಂದಾಗ್ನಿಯಲಿ!

ಕುಂದದ ಕಂದಳಿಯಂದದ ಮೃದುಮಧು–
ಬಂಧದ ಕರುಣಾಕ್ರಂದನವ,
ಒಂದಿನಿತೂ ಲೆಕ್ಕಿಸದಿಹರೇತಕೆ
ಬಂಧುಗಳೂ? ತಿಳಿಯೆನು ನಿಜವ!

ಕರುಣವೆ ರಸವೆಂದೋ ಕರುಣಾರ್ಣವ–
ಕವಿ ನಿನ್ನುಲಿ ಇಂದಿಗೆ ಸುಳ್ಳು!
ಶರಣೆಂದರು ಎದೆಗರಗದ ಜನವಿರೆ
ಮರಣವೆ ಶರಣಲ್ಲವೆ ಹೇಳು?

ಹೃದಯದ ಹಕ್ಕಿಯು ಹಾಡುವುದು!

ಹೃದಯದ ಹಕ್ಕಿಯು ಹಾಡುವುದೊಡಲಲಿ
ಹುದುಗಿದ ಭಾವದ ಗೀತೆಗಳ;
ಹೃದಯದೊಳಡಗಿದ ರಾಗದ್ವೇಷವ
ಕೆದರಿ ನೋಡುವುದು ಜೀವಿಗಳ!

ಮನಸಿಗೆ ಮುಸುಕಿದ ಮಾಯೆಯ ತೂಂತಿನೊ–
ಳಿಣುಕಿ ನೋಡುವುದು, ಜೀವನದ
ಘನತೆಯನರಿದೀ ಜನತೆಗೆ ಸಾರ್ವುದು
ವಿನಿಯೋಗವ ತನುಮನಧನದ!

ಮುಕುರದಿ ಮುಖವನು ಕಾಣುವ ತೆರದಲಿ
ಮುಖದಲಿ ಹೃದಯವ ಕಾಣುವುದು;
ಬಕುತರಿಗೊಲಿವುದು, ಬಲುಹಿನ ಗಂಡರ
ಶಕುತಿಯ ದೂರದಿನಳೆಯುವುದು!

ಭಾವದ ಬಹುವಿಧ ರಾಗಕೆ ದನಿಗೊ–
ಟ್ಟೇರಿಪುದಿದೆಂಬುದ ತಿಳಿದಿಹಿರಾ?
ಭಾವರಸವನುಕ್ಕಿಸಿ ಜನಹೃದ್ಗತ
ಭಾವವ ಬಯಲಿಗೆ ತರುವುದಲಾ!

ಎಂಟೂ ದಿಕ್ಕಿನ ಯಜಮಾನರಿಗಹ
ಸಂಕಟ ಶುಭಸಂದೇಶಗಳ
ಬಂಟನವೊಲು ಬಹಿರಂಗವ ಮಾಳ್ಪುದು–
ಎಂಟೆದೆಯೇ ಇದಕೆಂಥ ಚಲ!

ಎಲ್ಲರ ಮನದಲಿ ವಿಹರಿಪ ಭಾವವ–
ನೆಲ್ಲವ ಸೆರೆಹಿಡಿದೆರೆಯನಿಗೆ
"ಎಲ್ಲವು ನಿನ್ನದೆ" ಎಂದೀ ಜೀವನ–
ದೆಲ್ಲೆಯ ತೋರ್ಪುದು ಜನಗಳಿಗೆ!

ಏಕನಾದವೆ ಬರಲಿ!

ಅಷ್ಟದಿಕ್ಕುಗಳಿಂದೆ ತಂದಿರುವ ಮೆಯ್ಗೊಂಡ
ಬುರುಡೆಯೊಳನಿಟ್ಟಿಂದ, ತಂತಿಯಿಂದ
ನೆಟ್ಟಕೋಲ್ ಕಟ್ಟುಸಮ್ಮಂಗಳಂಗಾಂಗದಿಂ–
ದೇಕನಾದವೆ ಬರಲಿ ಏಕನಾದ!

ಗಿರಿಗಿರಿಗಳನು ಸುತ್ತಿ, ವನವನಗಳನು ಬಳಸಿ,
ನದಿ–ನದಿಗಳೆಡೆನಿಂದು, ದಾರಿಯಲ್ಲಿ
ತರತರದ ಹಳ್ಳಿಗಳನಲೆದ ಕಿಂದರಿಯಿಂದ
ಏಕನಾದವೆ ಬರಲಿ ಏಕನಾದ!

'ಕರುನಾಡಿನಲಿ ಮಣ್ಣುಕರಿದು ಕೆಲವೆಡೆ, ಮನವು
ಕರಿದಲ್ಲ, ಸಿರಿ–ಬಾಣಿಯರಿಗೆ ತವರು
ಕರುನಾಡು' ಎಂದು ಗೋಸಣೆಗರೆವ ಕಸುವುಳ್ಳ
ಏಕನಾದವೆ ಬರಲಿ ಏಕನಾದ!

ಭಾಷೆಯಿಂದೊದಗಿಸಿದ, ಭಾಷಣದೊಳೇರಿದಾ–
ವೇಶದಿಂದುಸುರಿದೇಕತೆಯ ನುಡಿಯ
ತಾಸುತಾಸಿಂಗೊಂದು ಮನೆಗೆ ಸಾರುವ ಜೋಗಿ–
ಯೇಕನಾದವೆ ಬರಲಿ ಏಕನಾದ!

ವೀರರಿಗೆ ವೀರರಹ 'ನಾಡವರ' ನಾಡಿದೆಂ–
ಬೈತಿಹಾಸಿಕ ತತ್ವವೆರೆದು ನಮ್ಮ
ವೀರ ತರುಣರ ಕೆಚ್ಚ ಕೆರಳಿಸುವ ಪಣತೊಟ್ಟ
ಏಕನಾದವೆ ಬರಲಿ ಏಕನಾದ!
ಕನ್ನಡದ ತಾಯಂದಿರೊಲಿದಿತ್ತ ದವಸಕ್ಕೆ

'ಹೊನ್ನಾಗಲವ್ವ ನಿನ್ನಿಂದ ಬಂದ
ಚೆನ್ನಿಗನು ನಾಡ ಬಂಟರೊಳೆ' ಂದು ಹರಸುವಾ
ಏಕನಾದವೆ ಬರಲಿ ಏಕನಾದ!

ನಡೆ–ನುಡಿಗಳಲಿ ಓದು–ಬರೆಹದಲಿ ಮೇಣ್ ನಮ್ಮ
'ಕೊಡು–ತರು' ಗಳಲಿ ಚಿತ್ತವೃತ್ತಿಗಳನು
ಹಿಡಿದೊಂದುಗೂಡಿಸುವ ದೇವಮಾಯೆಯ ಬಲ್ಲ
ಏಕನಾದವೆ ಬರಲಿ ಏಕನಾದ!

ಮಂದಹಾಸ

ಮಂದಹಾಸದ ಜೊನ್ನ ಮನವನಾವರಿಸಿಹುದು
ಕಂದನಾ ಚಂದಿರನ ಪೋಲ್ವಮೊಗದ!
ಒಂದು ನಿಮಿಷದಿ ಹರುಷಸಿಂಧುವಿನೊಳವಗಾಹ
ಹೊಂದುವುದೆ ತಲೆಬೆಲೆಯು ನರರ ಸೊಗದ!

ಕಾರಣವು ಸಿಗದು ಕಿರುಬಾಲನಾ ಸ್ಮಿತಕೆ, ಸೊಗ–
ಸೇ ರಮಿಸುತಿಹುದು ತನ್ನೊಳಗೆ ತಾನೇ;
ಭೂರಮಣಿ ಪಡೆದ ಪ್ರೇಮದ ಮುಗುಳಿದಲ್ತೆ, ಸೊಗ–
ದೇರುವಿಕೆಗಾಯ್ತಿದೇ ಚರಮಸೀಮೆ!

ಅಂದದುದಧಿಯ ಅಮೃತಬಿಂದುವೊಗೆತಂದುದೆನೆ
ಬಂದು ಹರಹುತ್ತಿಹುದು ನಗುವು ಸುತ್ತ;
ಒಂದನರಿಯದ ಹಸುಳೆಯಂದು ಪೇಳುವೆವು ಆ–
ನಂದಲಹರಿಯನರಿಯಲಾರದತ್ತ!

ರಾಗರಸವೊಸರುತಿರೆ ಮುಗುಳ್ನಗೆಯೊಳಲ್ಲಿ ಮು–
ದ್ದಾಗಿ ತೋರುವದು ದೈವೀವಿಳಾಸ;
ಆಗು ಹೋಗುಗಳ ಚಿಂತೆಗೆ ಸಿಲುಕದಿರುವುದಾ
ಯೋಗ ನಿರ್ಮಳ ಚಿತ್ತದೊಂದು ಹಾಸ!

ಭಾಸ್ಕರನ ಕಂಡು ಕಮಲಿನಿಯು ವಿಕಸಿಸುವಂತೆ
ಈ ಸಕಲ ಜಗವ ಕಂಡೊಂದುಬಗೆಯ
ದೋಷವಿಲ್ಲದ ಮಂದಹಾಸವರಳುತಿದೆ; ತಿಳಿ
ಬಾಸೆಯನು ಆ ತುಂಬುಮೊಗದ ನಗೆಯ!

ಉಸಿರುವುದು ಮೆಲುನಗೆಯು ಕವಿಹೃದಯವನು ಕುರಿತು
"ಹುಸಿಯಲ್ತೆ ಈ ಸಿರಿಯ ನಟನೆಯೆಲ್ಲ!
ಹೊಸಬ ನಾನಿದೊ ಬಂದೆ ಜನರ ಕಣ್ಮನಗಳನು
ಮುಸುಕಿದಜ್ಞಾನವನು ಕಳೆಯಬಲ್ಲೆ!"

ಪ್ರೇಮಿಯ ದೂರು

ಹೊಳೆವ ತಾರಗೆ, ನಿನ್ನ ನಿಶ್ಚಲತೆಯಿರಲೆನಗೆ–
ಏಕಾಕಿಯಾಗಿ ನಿಶೆಯಾಂತು ಜೋಲ್ತಿರಲಾರೆ,
ಹರಿವ ನೀರರ್ಚಕನ ತೆರದೆ ಮಾನವಕುಲದ
ತಟಕೆ ಸಮ್ಮಾರ್ಜನವ ಮಾಡಿಸುತ್ತಿರುವುದನು
ಪ್ರಕೃತಿದೇವಿಯ ಬಳಿಯ ರೋಗಿಯಹ ಜೋಗಿವೊಲು
ನಿದ್ದೆಯಿಲ್ಲದೆ ನಿತ್ಯ ಹೆಪ್ಪಳಿಸುತಿರಲಾರೆ,
ಅಲ್ಲದೊಡೆ ಗಿರಿವನಪ್ರಸ್ಥಂಗಳನು ಕವಿದ
ನುಣ್ಣನೆಯ ನವ ಹಿಮಚ್ಛದವ ದಿಟ್ಟಿಸುತಿರೆನು;

ಇಲ್ಲ–ನಿಶ್ಚಲತೆಯಲಿ ನಿನ್ನನೂ ಮೀರಿಸುತ
ಎನ್ನ ಚೆನ್ನೊಲವಿಗಿಹ ಮಾಗಿದೆದೆದಿಂಬಿನಲಿ
ತಲೆಯಿಟ್ಟು ಮೆಲ್ಲನದರೇರಿಳಿತವನುಭವಿಸಿ
ಮಧುರ ವಿಭ್ರಮದಿಂದ ಕಣ್ದೆರೆದು ನೋಡುತ್ತ
ಅವಳ ಕೋಮಲವಾದ ಉಸಿರಿಂಗೆ ದನಿಗೊಡುತ
ಎಂದೆಂದು ಜೀವಿಸುವೆನಂತೆ ಇಲ್ಲವೆ ಸಾವೆ!

(ಕೀಟ್ಸ್ ಕವಿಯ ಸುನೀತವೊಂದರ ಭಾವಾನುವಾದ)

ಅಭೇದ

ಕಾಡಿನಲಿ ಬೆಳೆದ ಕುಸುಮವು ಚೆಲುವಿನಲಿ ಕೀಳೆ
ನಾಡಿನಲಿ ಬೆಳೆದುದಕೆ? ಸೌಂದರ್ಯಕೆ–
ಕಾಡುನಾಡೆಂಬುದೇನುಂಟು, ಪರಿಕಿಸೆ ಹಳ್ಳಿ–
ಗಾಡಿನಲೆ ನಿಜನಿಸರ್ಗದ ನರ್ತನ!

ಸಿರಿವಂತನೇನು ಬಡವರಿಗಿಂತ ಗುಣಯುತನೆ?
ಸಿರಿಯೇನು ದಾರಿದ್ರ್ಯವೇನು ಗುಣಕೆ?
ಅರಿತವನು ಜಗದ ಪರಿಭೇದಗಳನೆಣಿಸುವನೆ?
ಹರಿಯೇನು ಹರನೇನು ಜ್ಞಾನಿಗಳಿಗೆ?

ಬಾಲ ನುಡಿದೊಡೆಯು ವೃದ್ಧನು ನುಡಿದೊಡಂ ಸತ್ಯ,
ಬಾಲವೃದ್ಧರಿಗದೇಂ ಬೇರಪ್ಪುದೆ?
ಹಾಲು ಹಾಲೇ ವಿವಿಧ ಪಾತ್ರೆಯೊಳಗಿರ್ದೊಡಂ,
ಕಾಲದೇಶಗಳುಂಟೆ ಪರತತ್ವಕೆ?

ಉರಿವ ಕಿಚ್ಚಿಗೆ ದೊಡ್ಡ ಚಿಕ್ಕ ಮರಗಳ ಪರಿವೆ?
ಹರಿವ ನೀರಿಗೆ ಹಳ್ಳಹೊಳೆಗಳೇನು?
ಪುರುಷನೇಂ ಸ್ತ್ರೀಯೇನು ಕರ್ಮಪಾಶಕ್ಕೆ? ಜರೆ
ಮರಣಗಳಿಗೇನು ಜೀವಿಗಳ ಭೇದ?

ಆವ ಗಿರಿಶಿಖರದಲಿ ಹುಟ್ಟಿರಲಿ ನದಿನದಗ–
ಳಾವೆಡೆಯೊಳುದಧಿಯಿರ್ದಪುದೊ ಅಲ್ಲಿ
ತಾವೆ ತಾವಾಗಿ ನೆರೆವಂತೆ, ಬಹು ಮತಗಳೆ–
ಲ್ಲಾ ವಿಶ್ವ ಶಕ್ತಿಯಿರ್ದೆಡೆಗೊಯ್ವುವು!

ಜ್ಞಾನವಿಜ್ಞಾನಸತ್ಕರ್ಮ ನಿಷ್ಕರ್ಮಗಳು
ಮಾನವಗೆ ತಂದು ತೋರ್ಪವು ಸತ್ಯವ;
ಯಾನ ಬೇರಾದೊಡೇನಲ್ಲಿ ನಾವ್ ಸೇರುವ
ಸ್ಥಾನ ಬೇರಾಗುವುದೆ ಬಗೆದು ನೋಡೆ?

ಜನನೀಜನಕರಿಂಗೆ ಭೇದಭಾವನೆಯುಂಟೆ
ಜನಿಸಿರುವ ಮಕ್ಕಳಲಿ? ಸೃಷ್ಟಿಗೆಲ್ಲ
ಜನನೀಜನಕರಪ್ಪ ಜಗದಾದಿದೇವನಿಗೆ
ಜನಮೆಲ್ಲಮೊಂದೆ ವ್ಯತ್ಯಾಸವಿಲ್ಲ!

ವಸ್ತುಭೇದವೆ ಕವಿಗೆ? ರಸೆಯೊಳೆಸೆಯುವ ಸರ್ವ
ವಸ್ತುಗಳೊಳೊಂದೊಂದು ಗುಣವ ಕಂಡು,
ಚಿತ್ತದೊಳಗುದಿಸಿರುವ ಭಾವರಸದುತ್ಸವ ಸ–
ಮಸ್ತರಿಂಗಿತ್ತು ಸಂತೋಷಿಸುವನು!

ಮೂಲೆಮೂಲೆಗಳಿಂದ

ಈರೇಳು ಲೋಕಗಳ ಮೂಲೆಮೂಲೆಗಳಿಂದ
ಕೇಳಬರುತಿರುವುದೀಗ–
ಆರೆಮ್ಮನಾಳುವರು ಆರೆಮಗೆ ಬೆಸಸುವರು?
ನಾವೆ ನಮ್ಮರಸರಲ್ತೆ!

ಅರಳಿ ಮಗಮಗಿಪ ಮಲ್ಲಿಗೆಗೆ ಮುಡಿವವರಲ್ಲಿ
ಇರುವದೇ ಪಕ್ಷಪಾತ?
ತರಳತರವಾದ ತಂಬೆಲರೊಬ್ಬನುಳಿದೊಬ್ಬ–
ನರಸಿ ಬೀಸುವದು ಉಂಟೆ?

ಆ ಗಂಗೆ ಆ ಪುಣ್ಯತೀರ್ಥರೂಪಿಣಿ ದೇವಿ–
ಗಾಗದವರಿಹರೆ? ಬರಲಿ,
ಯೋಗಿಗಳು ಭೋಗಿಗಳು ಆರಾದರೇಂ ಮುಳುಗಿ
ಮಿಂದು ಸಂತೋಷಪಡಲಿ!

ಜಗದ ಕಂಗಳೆನಿಪ್ಪ ತರಣಿಚಂದ್ರಮರಿಂಗೆ
ಹಿಂದು ಮಹಮದಿಯರೆಂದು
ಬಗೆದು ಬೆಳಕನು ಕೊಡುವ ಶೀಲವುಂಟೇ? ಎಲ್ಲ
ನಗೆಗೇಡಿತನವಿದಲ್ತೆ!

ಬಿಳಿಯರಿವರಿವರು ಕರಿಯರು, ಹೊನ್ನ ಬಣ್ಣದವ
ರಿವರು ಎಂದೆಣಿಸಿ ಜನರ
ಕೆಳ–ಮೇಲುತನವನ್ನು ದೇವನಿಳೆಗಿಳಿದು ಬಂ–
ದೊರಲಿದನೆ ಕೇಳಿರೆಂದು?

ಇವರಾಳ್ಗಳಿವರರಸರಿವರು ತೊತ್ತಿನ ಮಕ್ಕ–
ಳೆಂದು ಪರಿಗಣಿಪರಾರು?
ಅವರಿವರ ಆಸ್ತಿಗಳ ನುಂಗಿ ನೀರ್ಗುಡಿದು ಕೊ–
ಬ್ಬಿರುವ ಹಣಗಾರನೊಬ್ಬ!

ಕೋಟಿಗಟ್ಟಲೆಯ ಬಡ ಜನರು ಜೀವನದ ಕಿಡು–
ಗೋಟಲೆಗೆ ಸಿಲುಕಿ ನೊಂದು
ಊಟಕಿಲ್ಲದೆ ಹಸಿದು ಬಳಲುತಿರೆ ಸಿರಿವಂತ
ನಾಟಕವ ನೋಡುತಿಹುದೇ?

ಈ ವಿಶ್ವವನು ಸೃಜಿಸಿ ಪೊರೆವಾತನಿದಿರಿನಲಿ
ಆರು ಕೀಳಾರು ಮೇಲು?
ನಾವೆಲ್ಲರೊಂದೆ, ನಮ್ಮೊಳಗೇನು ಭೇದ? ಈ
ಭಾವನೆಯ ಬಿಡಲೆ ಬೇಕು!

ಅಕ್ಕನ ನೆನಹು

(ಸಾಂಗತ್ಯ)

ಅಕ್ಕ ನಿನ್ನೊಡನಿರ್ದ ದಿನಗಳ ಚರಿತೆಯ–
ನಕ್ಕರದಲಿ ಪೇಳಲಳವೆ?
ಸಕ್ಕರೆಯಂತಹ ಸವಿಗತೆಗಳನೆನ್ನ
ಚಿಕ್ಕಂದಿನಲಿ ಪೇಳ್ದೆಯಲ್ತೆ!

ಆಳುವ ಬಾಳುವ ಹಿರಿಯಾಸೆಯೆಳೆಯೆದೆ–
ಯಾಳವಾಳದಿ ಹರಿಯಿಸಿದೆ;
ಬಾಳಿನ ಬಳ್ಳಿಯ ಬೆಳವಣಿಗೆಗೆ ಕತೆ–
ವಾಲನೆರೆದೆಯಳ್ಕರೆಯಲಿ!

ಕುಳಗಿರಿಕೂಟದಿಂದಿಳಿದು ಹರಿವ ನದಿ–
ಗಳು ಬುವಿಯನು ಹದಗೊಳಿಪ
ಅಳವಿಯನಲ್ಲಗಳೆವುವು ನೀನೊರೆದಿರು–
ವೊಳುನುಡಿಗಳು ಬಾಲ್ಯದೊಳಗೆ!

ದೇಶ ದೇಶದ ರಾಜಮಂತ್ರಿಭಟರ ಬಲು
ಸಾಸದ ಹರಿವೊನಲುಗಳು
ಆಸೆಯ ಹೃದಯದೊಳೆಬ್ಬಿಸುತಿರ್ದವು
ಆ ಸಮಯದೊಳೆಡೆವಿಡದೆ!

ರಾಮರ ಗುಣವಂಜನಾತ್ಮಜನೊಲುಮೆ ವಿ–
ರಾಮವಿಲ್ಲದೆ ಮನದೊಳಗೆ
ಭೀಮಾರ್ಜುನರ ಬಲ್ಪನೊಡಗೂಡಿ ಬಂದು ನಿ–
ಸ್ಸೀಮ ಹರ್ಷವನುಣಿಸಿಹವು!

ಅಕ್ಬರದೊರೆ ಬೀರಬಲ್ಲನ ಜುತ್ತಿಗೆ
ಸಿಕ್ಕಿದ ಪರಿಯ, ತೆನ್ನಾಲಿ
ಬೆಕ್ಕು ಪಾಲ್ಗಂಜುವ ತೆರನಾಗಿಸಿದ ಜಾಣ್ಮೆ–
ಯಳ್ಕಜವನು ಪುಟ್ಟಿಸಿಹವು!

ಬೀರರ ಬೀರ ಶಿವಪ್ರಭು ನಾಡಿಗೆ
ಹೋರಾಡಿ ದುಡಿದುದೆನ್ನೊಡಲ
ಏರುವುತ್ಸಾಹದ ಹಗ್ಗಿಯ ಕೆದರಿ ಮೇ–
ಲೇರಿಸಿಹುದು ಮುಗಿಲೆಡೆಗೆ!

ಕನ್ನಾಡ ಸಿರಿವೆಣ್ಣು ಬಂಗಾರದೊಡ್ಯಾಣ–
ವನ್ನು ಧರಿಸಿ ಕಾಲಂದುಗೆಯ
ಖಣ್ಣೆನಿಸುತ ಕುಣಿದಾಡಿದ ಕಾಲವ
ಬಣ್ಣಿಸಿ ಪೇಳ್ದೆ ನೀನೆನಗೆ!

ಕೆಚ್ಚಹೆಚ್ಚಿಸಿಯೆನ್ನ ಮನದೊಳಗಾಗ ಪ–
ಳಚ್ಚನೆ ಹುರುಪು ಮೂಡಿಸುವ
ಮೆಚ್ಚುಗತೆಯ ತಿನಿಸುಣಿಸುಗಳಿತ್ತೆ ನೀ–
ನಿಚ್ಚಮೆನಗೆ ನಲಿದೊಲಿದು!

ತಿಳಿಯದ ತಿಳಿಯೆದೆಯೊಳಗುಚ್ಚ ಧ್ಯೇಯದ
ಸುಳಿವಾಗಿ, ಬಹುಕಲ್ಪನೆಗಳ
ಬೆಳೆಯ ಬೆಳೆದು ಭಾವಸಾಮ್ರಾಜ್ಯವಾಳುತ
ಕಳೆದೆನೆಳವೆಯ ನಾನಂದು!

ನಿನ್ನ ನಣ್ಪಿನ ನಂದನದೊಳಾಗ ಕೇಳಿಕೆ–
ಯನ್ನೆಸಗಿದ ದಿವಸಗಳು
ಕಣ್ಣಮುಂದೈತಂದು ಕುಣಿವುದು, ತೋಷವ
ದಿಣ್ಣೆಯೊಡೆದು ಹರಿಸುವುದು!
ಅಕ್ಕ 'ಮಾಚಕ್ಕ' ಸೋದರಿಯಾಗು ಜನ್ಮ ಜ–
ನ್ಮಕ್ಕು, ಈಗಲ್ಲದೊಡೇನು?
ಪಕ್ಕರೆಯಿಲ್ಲದ ಹಯವಕ್ಕು ಬಾಳ್ವೆಯೆ–
ನ್ನಕ್ಕ ನೀನಿಲ್ಲದೊಡೆನಗೆ!

ವೀರಘೋಷ

ಸಮಬಲ ಸಪತ್ನರುಪಟಳವ ಸಹಿಸುವನಾಗಿ
ದಹಿಸುವವನಾಗಿ ನೀನೆನ್ನ ಮಾಡು;
ಅರಿಮಥನನೆನಿಸು, ಧನಪತಿಯಾಗಿಸೆನ್ನ ನೀಂ
ಜನವಂದ್ಯ ಜನಪಾಲನಾಗಿ ಮಾಡು!

ಆದೆ ನಾ ರಿಪುಕುಲಾಂತಕನಾದೆನಿಂದ್ರನೊಲು
ಅಕ್ಷತನರಿಷ್ಟನಹೊ ಲೋಕದೊಳಗೆ!
ಈ ವೈರಿಸಮುದಾಯ ಬಾಗಿ ನಿಂದಿದೆಯೀಗ
ರಾಯ ಜೀಯಯೆನುತ್ತ ಕಾಲಕೆಳಗೆ!

ನಿಮ್ಮ ಹುಟ್ಟಡಗಿಸುವೆನಿಲ್ಲೆ, ಬಗ್ಗಿಸಿ ಬಿಲ್ಲಿ–
ನೆರಡು ತುದಿಗಳ ಹಿಡಿವ ಹಗ್ಗದಂತೆ;
ವಾಚಸ್ಪತಿಯೆ, ಇವರನೆನ್ನ ಕೆಳಗಡೆ ನಿಂತು
ಮಾತಾಡುವವರಾಗಿ ಮಾಡು ಮುಂತೆ!

ಬಂದೆನಿದೊ ವೀರಕರ್ಮವ್ಯಕ್ತ ತೇಜದಿಂ
ಬಂದೆನಿದೊ ಜಯಶಾಲಿಯಾಗಿ ಬಂದೆ;
ನಿಮ್ಮ ಮತಿ, ನಿಮ್ಮ ಕೃತಿ ನಿಮ್ಮ ಸಮಿತಿಗಳನ್ನು
ಹಿಡಿದೆನಿದೊ ಹಿಡಿದೆನೀಯೆಲ್ಲವಿಂದೆ!

ನಿಮ್ಮ ಯೋಗಕ್ಷೇಮಪಾಲನೆಯ ಹೊರೆಹೊತ್ತು
ನಿಂದ ನಾನುತ್ತಮೋತ್ತಮನು ನೋಡಿ,
ನಿಮ್ಮ ತಲೆಗಳ ಮೆಟ್ಟಿನಿಂದೆನಿದೊ ಮಾತಾಡಿ
ಕೆಳಗೆ ನಿಂದಿರ್ದು ಮೇಲ್ಮುಖವ ಮಾಡಿ;

ಕೆಳನಿಂದು ಮೇಲೆ ಮುಖಮಾಡಿ ಮಾತಾಡಿರೆಂ–
ದೆನ್ನ ಕಟ್ಟಾಣತಿಯಿದರಿದು ನೋಡಿ;
ಕೆರೆಯ ಕಪ್ಪೆಗಳಂತೆ, ಕೆರೆಯ ಕಪ್ಪೆಗಳಂತೆ,
ಮಾತಾಡಬೇಕು ಮುಖ ಮೇಲುಮಾಡಿ!

(ಋಗ್ವೇದದ ೧೦ನೆಯ ಮಂಡಲ, ೮ನೆಯ ಅಷ್ಟಕದ 'ವೃಷಭಂ ಮಾ ಸಮಾನಾನಾಂ' ಎಂಬುದರ ಭಾವಾನುವಾದ)

ರಕ್ತರಹಿತ ಕ್ರಾಂತಿ

ಆವುದದು ಮುಗಿಲಂಚ ಬಗೆದು ಬಹ ಉಲ್ಕವೆನೆ
ಧಾವಿಸುತ ಬರುತಿಹುದು, ರಿಪುಗಳೆದೆ ಬಿರಿವಂತೆ
ಭೂವಳಯ ನಡುಗಿ ಜೀವಿಗಳು ದೆಸೆಗೆಡುವಂತೆ
ಮುಳಿದು ಖಣಿಖಣಿಲೆನ್ನುತ
ಸಾವುವೆಂದರಚುವಂತೆ ಕಾಕಸಮೂಹ
ಶೀವಿಯಿಂದೆಯ್ತುಹುದು ಸತ್ಯವಾದಿಗಳ ಧೃಢ–
ಭಾವದಿಂ ಜಿಗಿದು ಹೊಳೆಹೊಳೆವುತ್ತ ಬಳುಕುತ್ತ–
ಲಾಹವದ ಬಯಲ ಬಳಿಗೆ!

ನಾಡ ಬಲ್ಗಂಡುಗಳ ನಾಡಿ ನಾಡಿಯ ಬೀರ
ಕೂಡಿ ಮೆಯ್ವೆತ್ತುದೋ, ದಾಸ್ಯಭಿತ್ತಿಯನೆತ್ತಿ
ದೂಡೆ ಮದವೃಷಭ ಕೋಡೆತ್ತಿದುದೊ, ಕೆರಳ್ದು ಹೂಂ–
ಕರಿಸಿ ದೆಸೆದೆಸೆಗೆ ಮಸಗಿ–
ಕಾಡಾನೆ ಕೆಡ್ಡದಿಂದೆದ್ದು ಬರಲೆಳಸಿ ಕರ
ನೀಡಿದುದೊ? ಎಂಬ ಸಂದೆಯವ ಪುಟ್ಟಿಸುಗುಮಿೊ
ನಾಡ ಹಲವೆಡೆಯ ಜನಸಂದಣಿಯ ಸನ್ನಣದ
ಕೂರಸಿಯದೇನೆಂಬೆನು!

ಆಳರಸರಧಿಕಾರಮಂ ಕೆದರಿ ಕಿತ್ತು ಮುಂ–
ದಾಳ್ವರಸರಕ್ಕು ಜನಪದಮೆಂದು ಬೊಬ್ಬಿರಿದು
ಕಾಳೆಗವನೆಸಗುತಿದೆ; ಪಿಂತಣಂತಲ್ಲ ಬಿಸಿ
ನೆತ್ತರನು ಬಸಿಯಿಸದಿದು–

ಜ್ವಾಳಾಮುಖಿಯ ಗಳದ ಕಿಚ್ಚೆ ಕೆಂಕಂ ರೂಹು–
ದಾಳಿ ಸತ್ಯದ ಬಿಚ್ಚುಗತ್ತಿಯಾಯ್ತೀಗಳೆನೆ
ಪಾಳಿಯಂ ಪೊರೆಯೆ ಮುನ್ನುಗ್ಗುತಿದೆ ಹರಿಚಕ್ರ–
ವೇಗಮಂ ಕಡೆಗಣಿಸುತ!

ಹಚ್ಚುವೆ ತಾ ನಿನ್ನ ಹಣತಿಯ!

(ಸಾಂಗತ್ಯ)

ಹಚ್ಚುವೆ ತಾ ನಿನ್ನ ಹಣತಿಯನೆಲೆ ಗೆಳತಿ,
ಅಚ್ಚ ನೇಹವ ತುಂಬಿ ಕೊಡುವೆನು ಬಾ!
ನಿಚ್ಚ ನಿರ್ಮಲವಿಹ ನೇರುರಿಮಿಂಚಿನ
    ಉಚ್ಚ ಜ್ಞಾನಜ್ಯೋತಿ ಹಿಡಿದಿಹೆ ಬಾ!

ಹೂವಾಗಿ ಅರಳಿಹೆ, ಹಣ್ಣಾಗಿ ಕಳಿತಿಹೆ,
ಗಿಣಿ ಬಾರೆ, ತುಂತುಂಬಿ ತುಂಬಿ ಬಾರೆ!
ಮಲ್ಲಿಗೆಯಾಗಿಹೆ, ಮಾಧುರ್ಯವಾಗಿಹೆ
    ಭೋಗವತಿಯೆ ಬಂದು ನೋಡಿಲ್ಲಿ ಬಾ!

ರಸಗಂಗೆಯಾಗಿ ಈಯೆದೆ ಹರಿಯುತ್ತಿದೆ,
ಹೊಸ ದೇವತೆಯೆ ಬಂದು ಮೀಯಿಲ್ಲಿ ಬಾ!
ಹಸಿರು ಮನದ ಮೈದಾನದಿ ವಿಹರಿಸು,
    ಜಸವೆಣ್ಣೆ ಕಸವರವೇಕಿಲ್ಲಿ ಬಾ!

ಬಿಗುವಿಲ್ಲ, ಲಗುವೆಲ್ಲ, ಹಗರಣವಿಲ್ಲಿಲ್ಲ,
ಸೊಗಯಿಸುವೊಲುಮೆಯ ಮಂಟಪದಿ–
ಹೊಗಬಾರೆ ಮೈದೋರೆ, ಮಮತೆಯ ಮಾಸತಿ,
    ಜಗ ಕಾಣದಿರುವಂಥ ಜಯರಂಗದಿ!

ಮರುಳುಗೊಳಿಸುವಂಥ ಹುಸಿವೆಡಗಿಲ್ಲಿಲ್ಲ,
ಕಪಟಾಭಿನಯನೇತ್ರದುರಿಮಿಂಚಿಲ್ಲ,
ಹರಳುಂಗುರವ ತೋರಿ ಮೋಸಮಾಡುವುದಿಲ್ಲ,
    ಒಲಿದರಿವಿನ ಮೋದ ಮನಮೈಯೆಲ್ಲ!

ಪೊಳ್ಳು ನಾಚಿಕೆಯಿಲ್ಲ, ಸುಳ್ಳು ಸಂಭ್ರಮವಿಲ್ಲ,
ಕಳ್ಳ ಮನದ ಕುಡಿನೋಟವಿಲ್ಲ;
ಜೊಳ್ಳು ಸಿಂಗಾರದ ಸಿರಿವಂತಿಕೆಯ ಠೀವಿ
ಇಲ್ಲಿಲ್ಲ– ತಿಳಿವಿನ ಚೆಲುವೆಲ್ಲ!

ಮುಚ್ಚಿ ತೆರೆವ ಮಾಯೆ ಮಾಟಗಳಿಲ್ಲಿಲ್ಲ,
ನೆಚ್ಚದೆ ನೆಚ್ಚಿಸುವರೆಮಾತಿಲ್ಲ;
ಹುಚ್ಚಂಜಿಕೆಯ ತೋರುವರಸಿಕ ನಡೆಯಿಲ್ಲ,
ಹಚ್ಚಿದ ದೀಪದ ಪ್ರಭೆಯೆಲ್ಲ!

ಹಚ್ಚುವೆ ತಾ ನಿನ್ನ ಹಣತಿಯನೆಲೆ ಗೆಳತಿ,
ನೆಚ್ಚಿಕೆ ನೇಹವ ತುಂಬಿ ನನ್ನ
ಹೊಚ್ಚ ಹೊಸ ಪ್ರಭೆ ಬೀರುವ ನೀಳುರಿ–
ಯುಚ್ಚ ಜ್ಞಾನದ ನಂದಾದೀಪದಿಂದ!

ನನ್ನ ತಪ

ನನಗಾಗಿ–ನನ್ನ ನಯನೋತ್ಸವದ ಸಲುವಾಗಿ–
ನವಚೂತಪಲ್ಲವವ ಚಿವುಟಿದೆನೆ ಹಾ!
ಕೆನೆವಾಲು ಘನವಾಗಿ ಮೆಯ್ವೆತ್ತಹಾಗಿರುವ
ಎಳಮಲ್ಲಿಗೆಯ ಮುಗುಳ ಕೊಯ್ದೆನೇನು!

ನನ್ನ ಮೈಗಿಂಪಾಗಲೆಂದು ಚಂದನಲತೆಯ
ಮುರಿದು ತಂದೆನೆ, ನನ್ನ ಮೂಗಿಗಾಗಿ
ಚಿನ್ನದಂತಿರುವ ಚಂಪಕವ ಕಿತ್ತಾರಯ್ದು
ಮಣ್ಣು ಬಣ್ಣಕೆ ತಂದು ನಿಲ್ಲಿಸಿದೆನೆ!

ನಾಲಗೆಯ ನಲುಮೆಯನು ಬೆಳೆಸಬಗೆದೆಳಗಬ್ಬ
ಸೀಳಿದೆನೆ, ಕೆಯ್‌ಹೊಡೆಯ ಸೆಳೆದು ಚೀಪಿ,
ಹಾಳುಗೈದೆನೆ ಮುಂದೆ ಪೂರ್ಣವಾಗುವ ಫಲವ,
ಬೀಳುಗಳೆದೆನೆ ಅನ್ಯರಳಿಪನಕಟ!

ನನಗೆ ಕರ್ಣಾಮೃತವದೆಂದು ತಿಳಿದೋರಂತೆ
ಬಿನದದೊಂದರೆಮಾಯೆಯಿಂದ ಮಸಗಿ
ನನೆಯ ಹನಿಯಂತಿರುವ ನಿರ್ಮಲಾಂತಃಕರಣ–
ದೆಳಗೂಸುಗಳ ನುಡಿಸಿ ದಣಿಸಿರುವೆನೆ!

ನನ್ನ ಬಗೆ ಬಗೆಗೊಳಲಿ, ನನ್ನ ನಗೆ ಮಿಗೆ ಮಿನುಗ–
ಲೆನ್ನೊಡಲು ಸುಖಿಸಲೆಂಬಾಶೆಯಿಂದ–
ಅನ್ಯವನು ಹಿಂಸಿಸಿದೆನರರೆ, ನನಗೆಂದು ನಾ
ಬ್ರಹ್ಮವನೆ ಹರಿದು ಹಂಚಲು ಹೋದೆನೆ!

ನನ್ನ ದಲ್ಲದುದಿಲ್ಲವೆನ್ನುವರಿವಿರದೆ, 'ಓ
ನನ್ನ ದದು ನನ್ನದಿದು' ಎಂದು ಕೂಗಿ,
ಬನ್ನ ಬಟ್ಟೆನು ಬನ್ನ ಬಡಿಸಿ ಬಡ ಜೀವಿಗಳ
ಕಣ್ಣೊಳಗೆ ಕೈಯಿಟ್ಟು ಕಾಣದಾಗಿ

ಉಪವಾಸ

ಬಂದಿತೋ ಬಂದಿತುಪವಾಸ
ಬಡವರಿಗೆ ತ್ರಾಸ,
ಮಾಡಲುಪಹಾಸ
ಯಮನಿಗುಲ್ಲಾಸ! ॥ಪಲ್ಲ॥

ಉಪವಾಸ ಬಂತು ವನವಾಸ ಬಂತು–ಬಂತು;
ಮಿಡುಕಾಡಹತ್ತಿತೀ ಜಗದ ಜೀವತಂತು;
ಅನ್ನಕ್ಕೆ ಬಂತು ಬ್ರಹ್ಮತ್ವವೆಂಬುದಿಂತು;
ಬೇಕಾದ ವಸ್ತು ಬೆಲೆಯೇರಿ ದೂರ ಸಂತು!
ಸಾವಿಂಗೆ ಸರಸ ಬಂತು,
ನಕ್ಕೊಮ್ಮೆ ಹೇಳಿತಿಂತು:
"ಕೊಡಿರಿಂದು ನನ್ನ ಕಂತು"
ಎಂದೆದ್ದು ಕಳುಹಲಿಂತು–

ಕೈಲಾಸಗಿರಿಯಿನಿತ್ತಿತ್ತ ಬೀಸಿ ಬಂದಿತ್ತು,
ಹಾಸಿಬಂದಿತ್ತು, ಒತ್ತಿಬಂದಿತ್ತು, ಮುತ್ತಿಬಂದಿತ್ತು,
ಮುನಿದು ಬಂದಿತ್ತು–ಬಂದಿತುಪವಾಸ!
ಕಣ್ಣು ಬೆಳ್ಪುಗೂಡಿತ್ತು, ಮೋರೆ ಬಾಡಿತ್ತು,
ಕಾಲು ಕುಸಿದಿತ್ತು, ಕರುಳು ಹೊಸೆದಿತ್ತು,
ಕ್ಷುದ್ಬಾಧೆ ಜೀವ ಹಿಸುಕಿತ್ತೋ–ಜೀವ ಹಿಸುಕಿತ್ತು!

ವಂಗಕ್ಕೆ ಬಂತು, ಅಂಗಕ್ಕೆ ಬಂತು,
ಅಂಗಾಂsಗಕ್ಕೆ ಬಂತು,
ನರನರಗೆ ಬಂತು ನರನರಕೆ ಬಂತು
ಬಸಿರಾಳ ಕಂಡುಬಂತೋ–
ಬಂದಿತುಪವಾಸ!

ಉಪವಾಸ ಬಂತು, ವನವಾಸ ಬಂತು–ಬಂತು;
ಮಿಡುಕಾಡಹತ್ತಿತೀ ಜಗದ ಜೀವತಂತು!
ಉಳಿಗಾಲ ಸಂತು ಅಳಿಗಾಲ ಬಂತು ಅಕಟಾ,
ಮೃತ್ಯುವಿನ ಮೋರೆ ಕಾಣಿಸಿತು ಉಗ್ರ ವಿಕಟಾ!
ಪ್ರಾಣವನು ಮಿಡುಮಿಡುಕಿಸುತ್ತ ಬಂತು,
ತ್ರಾಣವನು ತುಡುತುಡುಕಿ ಬಂತು,

ಚಿತ್ತಾಪ ತಂತು, ಹೃತ್ತಾಪ ತಂತು,
ಸಂತಾಪರಾಶಿ ತಂತು!
ಜ್ವರತಾಪ ತಂತು, ಹರಶಾಪ ತಂತು,
ಯಮಚಾಪವೆತ್ತಿತಿಂತು!
ಹಸಿವ ಹಚ್ಚಿ ಹೊಟ್ಟೆಂಬ ಲಂಕೆಯನು
ಸುಟ್ಟೇ ಬಂತು;

ಹಸುಳೆಯೆಂದು ಬಿಡದೊಂದು ಜೀವವನು
ತಿಂದೇ ತಿಂತು!
ಕಂಡಕಂಡವರ ಹಿಂಡಿಹಿಂಡಿ ಹೀರುತ್ತ ಬಂತು,
ಬಂತೋ ಬಂತು–
ಬಂದಿತುಪವಾಸ!

ಉಪವಾಸ ಬಂತು, ವನವಾಸ ಬಂತು–ಬಂತು
ಮಿಡುಕಾಡಹತ್ತಿತೀ ಜಗದ ಜೀವತಂತು!
ಹೊರೆವವರು ಹೊರಗೆ ನಿಂತದ್ದು ಆಯ್ತು ಪ್ರಕಟಾ;
ದಾಸ್ಯಕ್ಕೆ ದೊರೆಯೆ ಪೈಶುನ್ಯವಜ್ರಮಕುಟಾ!
ಪ್ರೀತಿಯನು ಕೊಂದು ಭೀತಿಯನು ತಂದು
ನೀತಿಯನು ಬಿಟ್ಟು ಖಾತಿಯನು ತೊಟ್ಟು–
ಮುದುಕರನು ಮುರಿದು, ಹುಡುಗರನು ತರಿದು,
ಹೆಂಗಳೆಯರನ್ನು ಹಿಳಿದು–
ಮಕ್ಕಳನು ಮುಗಿಸಿ, ಮಾರಿಯನು ನಗಿಸಿ,
ರಣಹದ್ದಿನಂತೆ ಸುಳಿದು–

ಧನದರ್ಪವಾಜಿಯನು ಹತ್ತಿ, ಹೆಣವ ಮುಂದೊತ್ತಿ
ಬಡವರನು ಮುತ್ತಿ ರೋಗ–ರುಜೆ ಬಿತ್ತಿ
ದೇಶವನು ಸುತ್ತಿ–ಬಂದಿತುಪವಾಸ!
ಕೋಟ್ಯಧಿಕಮಾನವರ ಸುಟ್ಟು, ಕೆರಳಿ ಕಣ್ಬಿಟ್ಟು
ಭಸಿತದುಡೆಯುಟ್ಟು, ಭರದಿನಡಿಯಿಟ್ಟು,
ದಯೆಯ ದೂರಿಟ್ಟು–ಬಂದಿತುಪವಾಸ!

ಅಕೋ ಅಲ್ಲಿ ಬಂತು, ಇಕೊ ಇಲ್ಲಿ ಬಂತು, ಮಲಬಾರಿನಲ್ಲಿ ಬಂತು!
ವೃಕವಾಗಿ ಬಂತು; ಬಕವಾಗಿ ಬಂತು, ಬಂದಲ್ಲಿ ಬಂತು, ಬಂತೋ
ಬಂದಿತುಪವಾಸ!

ಅಮೃತಬಿಂದು

ಶಾಂತ ದಾಂತ ಸುಗುಣಾಭರಣನ ಹೃ–
ತ್ಕಮಲಮೂಲದಿಂದ
ಸಾಂತ್ವನಕ್ಕೆ ದುಃಖಿಗಳ ತಾನೆ ತಾ–
ನುಕ್ಕಿ ದೀಪ್ತಿಯಿಂದ–
ಹಾಲುಗಡಲ ಹೆದ್ದೆರೆಯ ಹಾಗೆ ಮುಗಿ–
ಲಂಚ ಮುಟ್ಟಿ ನಿಂದು
ಬಾಳ ಬೆಳಗಬಹ ಕರುಣವಕ್ಕು ತಾ–
ನಮೃತಬಿಂದುವೊಂದು!

ಮಲ್ಲಿಕಾವನದ ಮೊಲ್ಲೆಯೊಂದು ಬೆಳ–
ಗ್ಗೊಪ್ಪವನ್ನು ತಂದ,
ಒಲ್ಮೆ ಸೂಸಿ ಮೊಗವೆತ್ತಿ ತಾನೆ ತಾ–
ಯ್ವಳ್ಳಿ ಮಗ್ಗುಲಿಂದ
ಎಲ್ಲ ಲೋಕದಾರಾಧ್ಯಮೂರ್ತಿ ರವಿ
ಬಂದನೆಂದು ಹಿಗ್ಗಿ
ಚೆಲ್ವ ಮಧುವದೊಂದಮೃತಬಿಂದುವೆದೆ–
ದುಂಬಿ ಹೊರಗೆ ನುಗ್ಗಿ!

ಬ್ರಹ್ಮಪಟ್ಟದಲಿ ಕುಳಿತು ಸೃಷ್ಟಿಯಲಿ
ಕಂಡ ಕೊರತೆಗಳನು,
ಬ್ರಹ್ಮನೇತಕಿಂತೆಸಗಿಬಿಟ್ಟ ಚಿಃ
ತಾಳಲಾರೆನಿದನು–

ಅಲ್ಲ ಹೀಗೆಯೆಂದೊಲುಮೆಗುಂಚದಿಂ–
ದಿಳೆಯತಿದ್ದಲೇಳೆ
ಚೆಲ್ಲಿ ಹರಿವ ಕವಿಮನದ ನಲ್ಮೆಯೊಂ–
ದಮೃತಬಿಂದು ಕೇಳೆ!

–ಜಯ ಹಿಂದ್–

ರಸಯಜ್ಞ

ಕಾಣ್ಕೆ

ಕಂಡೆನೋ ಕಂಡೆ ಕವಿರಾಯ ॥ಪ॥
'ಮಿಸ್ಟೇಕು' ಮಾಡಿ 'ಮಿಸ್ಟಿಕ್ ಪೊಯಟ್ಸು' ಎಂದೆನಿಸಿದವರ ಕಂಡೆ
ಅಷ್ಟೇಕೆ ಎಂದು ಎಷ್ಟೆಷ್ಟೊ ಹೇಳಿ ಕೊಳೆ ಬೆಳೆಸಿದವರ ಕಂಡೆ
ಬರಿ ಧಾಟಿಗಾಗಿ ಒಳತೋಟಿಯಲ್ಲಿ ಒದ್ದಾಡುವವರ ಕಂಡೆ
ಛಂದಕ್ಕೆ ಶರಣು ಹೊಡೆದವರ ಕಂಡೆ ನಿರ್ಬಂಧ ಬಂಧ ಕಂಡೆ

ಪ್ರಾಸವನು ಬಿಟ್ಟು ತ್ರಾಸವನು ಪಟ್ಟವರ ಹಿಂಡು ಹಿಂಡು ಕಂಡೆ
ಬರಿ ನಕಲು ಮಾಡಿ ನಲ್ಗತೆಯ ಶಿಕಲು ಎಂದೋದಿದವರ ಕಂಡೆ
ಒಣ ಹುಸಿಯ ಹೊಟ್ಟೆ ಕಸವಿಸಿಯ ಹಡೆದು ಹೆಣ್ಣೆಂಬರನ್ನು ಕಂಡೆ
ಬಸಿರಲ್ಲೆ ಭಾವವನ್ನಿಟ್ಟುಕೊಂಡು ಗಂಡೆಂಬರನ್ನು ಕಂಡೆ

ಕನ್ನಡದ ಮರುಳು ಸಂಸ್ಕೃತದ ತಿರುಳನೇ ಮರೆತುದನ್ನು ಕಂಡೆ
ಆಂಗ್ಲಾಕ್ಷರಾಗಿ 'ಲಾಂಗ್‌ಲೈಫು ಕನ್ನಡಕೆ' ಎಂದರನ್ನು ಕಂಡೆ
ಬರಿ ಗಾಳಿ ಗುದ್ದಿ ಹೊಸ ಹಾಡ ಗೈದು ಗೆದ್ದವರ ಎದೆಯ ಕಂಡೆ
ಅಲ್ಲಲ್ಲಿ ಕದ್ದು ಇಡಿ ವಾಕ್ಯವನ್ನೆ ಸೈಗೊಂಡರನ್ನು ಕಂಡೆ

ಕತೆ ಕವಿತೆ ನಾಟ್ಯ ಎಲ್ಲೆಲ್ಲು ಕುಣಿವ ಗಜಪತಿಗಳನ್ನು ಕಂಡೆ
ವ್ಯಥೆಪಡದೆ ಕನ್ನಡಾಯತನ ಸಂಸ್ಕೃತಿಯ ಕಳೆದರನ್ನು ಕಂಡೆ
ಅದು ಹಾಗೆ ಹೀಗೆ ಎಂಬಲ್ಪ ಜಲ್ಪಕರ ಜಂಭವನ್ನು ಕಂಡೆ
ಥುಃ ಕಂಡು ಕಾಣದಾಲಸ್ಯ ಪಿಂಡಗಳ ಕುಕ್ಷಿಯನ್ನು ಕಂಡೆ

ಕೀರ್ತಿಯನ್ನು 'ತೊಲಗು ಶನಿ' ಎಂದು ಮೆಲ್ಲನೊಳಗೆಳೆವರನ್ನು ಕಂಡೆ
ತಂತಮ್ಮರನ್ನು ತಮ್ಮೊಳಗೆ ತಂತಮಿಸಿ ಮೆರೆವರನ್ನು ಕಂಡೆ
'ಅರಸಾಗು' ಎಂದು ಸರಸೋಕ್ತಿಯಾಡಿ ಕೇಡೆಣಿಸುವವರ ಕಂಡೆ
ತುರಿಸೆಂದು ತುರಿಸಿನಿಂದಾಳ ಕಣ್ಗೆ ಧೂಳೆರಚುವವರ ಕಂಡೆ

ಅಲ್ಲೊಂದು ಮತ್ತೆ ಇಲ್ಲೊಂದು ಸೂರ್ಯಮುಖ ಹುಟ್ಟಿದುದನು ಕಂಡೆ
ಆದರೂ ಮಿಣುಕುಹುಳು ಮುಖಕೆ ಪೃಷ್ಠವನು ಹಿಡಿಯುತಿಹುದ ಕಂಡೆ
ಶೃಂಗಾರವೆಂದು ಬೀಭತ್ಸವನ್ನು ಜನ ಕೊಳ್ಳುತಿಹುದ ಕಂಡೆ
ಭಂಗಾರವನ್ನು ಇದ್ದಲಿಯ ಜೊತೆಗೆ ತೂಗೆಸೆವುದನ್ನು ಕಂಡೆ ॥೬॥

ಭಾವಯೋಗ

I

ಕಾಡಿಗೆಯ ಗುಡ್ಡಗಳು ಸುತ್ತಮುತ್ತ ನಿಂ–
ತಿರುವದನ್ನು ಕಂಡೆ,
ಮೋಡಗಳ ಕೋಟೆಗಳು ಮೇಲೆ ನೋಡಲೆದು–
ರಾದುದರನ್ನು ಕಂಡೆ;

ಕಾಡಾನೆವಿಂಡು ನೂರಾರು ಸುತ್ತ ಹೋ–
ರಾಡುವುದನು ಕಂಡೆ,
ತೀಡುತ್ತ ತಿಗರಿಗಳ ಹಾಗೆ ನೆಗೆವ ಹೊಗೆ–
ಗಂಬಗಳನ್ನು ಕಂಡೆ!

ಇರುಳ ತಿರುಳಿನಂತಿರುವ ಎಲೆಯ ಮರ–
ಮಟ್ಟುಗಳಲಿ ನಿಂದೆ,
ಕರುಳ ಕೊರೆವ ನಿರ್ಜನತೆ ಮೆರೆವ ಹೆ–
ಬ್ಬಕ್ಕಲಲ್ಲಿ ನಿಂದೆ;

ತಲೆಯ ಬಿರಿವ ಬಿರುಬಿಸಿಲ ಬೆಂಗದಿರ
ದಾಳಿಗೊಡ್ಡಿ ನಿಂದೆ,
ಮಳೆಯ ಮುಸಲಧಾರಾಪ್ರಪಾತಗಳ
ನಡುವೆ ನಡೆದೆ, ನಿಂದೆ!

ಬಾಡಿಗೆಯ ಮನೆಗಳಲಿ
ಹೊಕ್ಕೆ ಹೊರಟೆ,
ಬಾಡಿಗೆಯ ಮನಗಳಾ–
ತಿಥ್ಯ ಪಡೆದೆ;

ಬಾಡಿಗೆಯ ಬಾಯಿ ಕೈ–
    ಗಳಲಿ ಸುಳಿದೆ,
        ಬಾಡಿಗೆಯ ವಿದ್ಯೆಯನು
            ಗಳಿಸಿ ಬೆಳೆದೆ

ಮೇಘನಾದದಿಂ
    ದೆದ್ದು ಕೊಡಹಿ ಪರ–
        ಪೋಷಣೆಗಳ ಪೂರ,
            ನಾಗರಾಜನಂ–

ತೆವೊಲ್ ಪ್ರತಿಭಟಿಸಿ
    ಬೀರೆ ಪುರುಷಕಾರ–
        ಯೋಗ ಬಗೆದುದೆರ–
            ಡಾಗಲೆಡರುಗಳ

ಸೆಜ್ಜೆಯಲ್ಲಿ ಬೀಷ್ಮ
    ಬಾಗದೊರಗಿದೊಲು
        ಬಿಲ್ಲ ಬಿಸುಟು ನೆಲೆ–
            ನಿಂತೆನರಸಿ ಧರ್ಮ!

ಅರ್ಕ ಚಂದ್ರತಾ–
    ರೆಗಳು ಮೂಡಿದವು
        ಮನೋಗಗನದಲ್ಲಿ
            ಉಕ್ಕಿಧೂಮ ಕೇ–

ತುಗಳು ರಾಹು ಕೇ–
    ತುಗಳ ಕಪ್ಪುಚೆಲ್ಲಿ
        ಕಲ್ಕಿಗೊಳಿಸಿದವು
            ಬಾಳಿನಮೃತ ಬಿಂ–

ದುಗಳ; ಮಂಜುಭಾವ
ಸಿಕ್ಕಿ ಮಂದ ಮಂ–
ಗಲ ರೊಳಾಯ್ತು ನಿಸ್–
ಶ್ರುತೋದಾತ್ತರಾವ

ನಮೋ ಎಂದು
ಗುರುಚರಣಕಂದು
ಪ್ರಾರಬ್ಧವಾದ ಹೃದ್–
ರಸದ ಸಿಂಧು

ನಿಸ್ತುಲ ದ್ವಂದ್ವಗಳ
ತೀರಗಳಲಿ
ಹರಿದೆಡಹಿ ಬಿದ್ದು ವಿ–
ಘ್ನಾಶ್ಮಗಳಲಿ,

ಕಂಡಾಯ್ತು ಮುಗ್ಧ
ಗುರು ಕರ್ಮಸಾಗರವ
ಇದೋ ಬಂದೆ ನೆನುಗೇರಿ ಯೋಗ ಜವ!
ಚಿದಾನಂದ ಸತ್,

ಸದಾನಂದ ತತ್!
ಓಂ ತತ್ ಸತ್!

ಕಲಾವಿದ

೧

ಉಣ್ಣಲು ಬದುಕುವ ಮಾನವ ಕೋಟಿಯ
ಕಣ್ ಕುರುಡೋ ಕುರುಡು;
ತಿನ್ನಲು ತೌರುವ ಪಶುಶಿಶುಗಳ ಬಾಳ್
ಬರಿ ಬರೋ ಬರಡು!
ಅನ್ನಸಮಸ್ಯೆಯ ಪರಿಹರಿಸುವ ವಿ–
ಜ್ಞಾನಿಗಳೆಂದೂ ಹುಟ್ಟರಲಾ;
ವರ್ಣಿಸಿ ಲೋಕೋತ್ತರ ಸಂತುಷ್ಟಿಯ
ಕಲೆಗಾರರು ತಾವ್ ಕೊಟ್ಟರಲಾ!

೨

ನೀತಿಯ ನಾತವ ಹರಡುವ ಧಾರ್ಮಿಕ
ನಿನಗೆ ನಮಸ್ಕಾರ;
ಪ್ರೀತಾತ್ಮರ ಸಂಗಮವನು ತಡೆವ ಸ–
ಮಾಜಕೆ ಧಿಕ್ಕಾರ!
ಮನುಕುಲವೆಂಬುದು ದನುಕುಲವಾಯಿತು
ಲಾಭಕೆ ಲೋಭಿಸಿ ದಿನವೆಲ್ಲ;
ಕನಸಿಗತನದೀ ದಿವ್ಯೇಕ್ಷಣಕೃತ
ಚಿತ್ರಕೆ ಬೆಲೆಯಿರದಾಯ್ತಲ್ಲ!

೩

ಆ ಕಾದಂಬರಿ, ಆ ಕತೆ, ಅಲ್ಲಿಯ
ಆ ನಾಯಿಕೆ, ಆ ರೂಪರಸ–
ಅದ ಪಡೆಯಲು ಹಾತೊರೆಯುವ ವೀರರ
ಆಪತ್, ಸಾಹಸ, ಸೋಲು, ಯಶ!
ಅಂತಃಕರಣದ ತಾಂಡವ, ತುಮುಲೋ

ತ್ಸಾಹ, ದುರಂತಪ್ರಣಯಗತ
ಚಿಂತೆ, ಚಮತ್ಕೃತಿ, ಚಂಚಲತೆಗಳನು
ಕಾಣುವುದೆ ಕೈವಲ್ಯಪಥ!

೪

ದುಂಡಗೆ, ತೆಳ್ಳಗೆ, ಬೆಳ್ಳಗೆ ನಿಂತು ಶಿ–
ಲಾಬಾಲಿಕೆಯರ ಮೀರಿಸುವ
ಮಂಡಿತತನ್ವಿಯರುಲ್ಲಾಸೋತ್ಥ ಸು–
ಲೋಚನನರ್ತನ ತೋರಿಸುವ
ರೂಪಕ ರಾಜ್ಯದ ರಸಸಲ್ಲಾಪದ
ನರ್ಮದ ಕರ್ಮಕಲಾಪಗಳ
ರೂಪಿಸಿ ನನ್ನನುಭವರಸಪಾಕವ
ಬಡಿಸುವೆ ಕೊಡಿ ಸದುಹೃದಯಗಳ!

೫

ಸಂಸ್ಕೃತಿ, ನಾಗರಿಕತೆಗಳು ಕಲೆ ಹಡೆ–
ದಾ ಕೃತಿಗಳು ಎಂಬುದನರಿತು
ಸಂಸ್ಕಾರಾನ್ನವ ಕೊಳ್ಳಿರಿ ಜನಗಳ
ವಿತ್ತಾರ್ಜನಪರತೆಯ ಮರೆತು
ನಿಮ್ಮೀ ಜೀವನ ಯಜ್ಞಪುರೋಹಿತ
ನಾನೇ ಅಘಟಿತಘಟಕನಲಾ;
ಜನ್ಮಪವಿತ್ರೀಕರಣ, ಕಲಾಕೃತಿ
ಕೊಳ್ಳಲು ನೀವೇ ಧನ್ಯರಲಾ!

ಆತ ಹೆಗ್ಗಲೆಗಾರ!

ಅನ್ನ ಕೋಶದ ಬದಿಗೆ ಮಲಕೋಶವನ್ನಿಟ್ಟು,
ನುಣ್ಣನೆಯ ಪೊರೆಯಿಂದ ಹೊಟ್ಟೆಯೆದೆ ಬೇರ್ಪಡಿಸಿ,
ಕಣ್ಣಿಗದು ಗೊತ್ತಾಗದಂತೆ ಚರ್ಮವ ಹೊದಿಸಿ,
ಬಣ್ಣಗಾರಿಕೆ ತೋರಿದಾತ ಹೆಗ್ಗಲೆಗಾರ–
ಆತ ಹೆಗ್ಗಲೆಗಾರ, ಆತ ಹೆಗ್ಗಲೆಗಾರ!

ನಿಯತಾವಧಿಕವಾಗಿ ಒಳಗಿರುವ ಮಲವಮೃತ;
ಅವಧಿ ಮೀರಿದರೆ ಇಲ್ಲವೆ ಹೊರಗೆ ಹಾಕಿದರೆ
ದೇವಲೋಕದ ಅಮೃತ ಕೂಡ ಮಲ, ವಿಷ, ದೂಷ್ಯ;
ಎಲ್ಲ ದುರ್ವಾಸನೆಗೆ ಹೇಸುವಾ ಮೂಗು ತ–
ನ್ನಲ್ಲೆ ಅಡಗಿರುವ, ಹೊರಹರಿವ ನಾಸಾದ್ರವದ
ಹೊಲ್ಲಗಂಪನು ಕಾಣದಿರುವಂತೆ ಮಾಡಿ; ಮೈ
ಯಲ್ಲೆ ಮನವಿಟ್ಟು ತೋರಿಸಿದ ಮನಕಾಮ್ಯೆಯ,
ತನ್ನ ತಾ ಕಾಣದಂತದರ ಮೈ ಕದ್ದೊಯ್ದ – ಆತ...

ತನ್ನದನ್ಯಕ್ಕಿತ್ತು ಅನ್ಯದಲಿ ತನ್ನನ್ನೆ
ಭಿನ್ನವಪ್ಪಂತೆ ಹಡೆವಂತೆ ಮಾನವನನ್ನು–
ತನ್ನತನವನ್ನಿತ್ತು ಸುಖದುಃಖಗಳನುಣಿಸಿ,
ಇನ್ನು ಸಾಕೆನ್ನಿಸುತ ತನ್ನ ತಾ ಮೀರಬೇಕೆ–
ನ್ನುವಾಸೆಯ ಹೊತ್ತಿಸುತ ತನ್ನ ಕಡೆಗೊಯ್ದು
ಇನ್ನಿಲ್ಲವೆನ್ನಿಸುವ ಮಾಯಗಾರಿಕೆಯಿಂದ,
ತನ್ನಲ್ಲಿ ತಾ ಸಮಾಹಿತನಾಗುತಿರುವಂಥ
ನನ್ನಿಯ ಅಲಂಪಾಗಿ ತೊಳಗಿ ಬೆಳಗುತ್ತಿರುವ ಆತ...

ಆಸೆಗನುಕೂಲಂಗಳಿದ್ದಾಗ ಮಾನವಗೆ
ಲೇಸೆಲ್ಲವೆಂಬಂತೆ ತೋರಿಸುತ ಮತ್ತೆ ನೈ–
ರಾಶ್ಯದಶೆಗೊಟ್ಟು ಮುಟ್ಟದ್ದೆಲ್ಲ ಮಣ್ಣೆನಿಸಿ
ವಾಸನಾಬಲವಿತ್ತು ದೇಹಂಗಳಲಿ ಹೊಗಿಸಿ,
ಬಾಸೆ ಬಣ್ಣಿಸಲಾರದಷ್ಟವಸ್ಥೆಗಳಲ್ಲಿ
ಕೂಸಾಡಿಸುವ ಹಾಗೆ ಸೂಸಾಡಿ ಬೀಸಾಡಿ
ದಾಸತ್ವವನು ಕಳೆದು ಈಶತ್ವವನ್ನೀವ,
ಮೋಸಗಾರಿಕೆಯಿಂದ ಲೇಸುಗಾರಿಕೆ ತೋರ್ಪ– ಆತ...

ಅಳಿಸಿ ಬರೆವಕ್ಷರದ ಅಕ್ಷರತೆಯನ್ನಿತ್ತು
ಗಳಿಸಿ ಕಳೆವೈಶ್ವರ್ಯದೈಶ್ವರ್ಯವನ್ನಿತ್ತು
ಬೆಳೆಸಿ ಬಳಸುವ ಹಾಗೆ ಕಳಿಸಿ ಕೊಂಡೊಯ್ಯುತ್ತ
ಮರೆಸಿ ಮೆರೆಸುತ ಮಾನವಾತ್ಮರನು ಬಾಳಲ್ಲಿ
ಬೆರೆಸಿ ಶೋಧಿಸಿ, ಹಳಿದು ಹರಸಿ, ಕೈಕಟ್ಟಿ ಹೊ
ಕ್ಕರಿಣಿಗೊಯ್ವವ ತನ್ನ ಸಚ್ಚಿದಾನಂದಮಯ ಆತ...

ಪ್ರಶ್ನಶೇಷನ ಅನಂತಬಾಲ

ಕಂಡದ್ದ ಬಣ್ಣಿಸಲಸಾಧ್ಯ–

ದ್ರವ್ಯದರ್ಥವದೇನು? ಮನದ ಮಾತಿನ್ನೇನು?
ಬುಡತಳಗಳಾವುವೀ ಜಡಶಕ್ತಿಚೋದನೆಗೆ?

ಅಚ್ಚವೋ? ತುಚ್ಛವೋ ಮಾಯೆಯೋ? ನಶ್ವರವೊ?
ಹೊತ್ತು ಹೊತ್ತಿಗೆ ರೂಪ ಬದಲಾಗುವೀ ಇಂಥ
ಜಂಗಮಾಣುಗಳಂಗ ನಿರ್ವಚನಕೊಳವಕ್ಕೆ?

ತತ್ವ ವಿಜ್ಞಾನದರೆಗಪ್ಪಳಿಸಿದರು ಮಿದುಳ
ಸತ್ಯ ಹೊರಡದು, ಶಬ್ದಸಂಕೇತವಷ್ಟೆ ಸರಿ!

ಅಪರಿಚಿತನನ್ನೊಬ್ಬ ಅಪರಿಚಿತನುಸಿರುವೊಲ್
ಪರಿಚಯದ ಬಲೆಯೊಳಗೆ ಸಿಗದ ಸಂದಿಗ್ಧನಾ–
ಶಬ್ದ ಈ ಶಬ್ದಕ್ಕೆ ಪರ್ಯಾಯವಷ್ಟೆ–ಈ
ಶಬ್ದಸಾಗರದಿಂದ ತಂದ ಕೊಡಗಳ ಸುರುವಿ
ಗತನೂತನಾಚಾರ್ಯರೆಷ್ಟೊ ಬೆವರಿಳಿಸಿದರ್!

ಕಾಣದ್ದ ಬಣ್ಣಿಸದು ಸುಲಭ–

ಎಂದುಸಿರಲೊಳದನಿಯು ತನ್ನ ತಾನೇ ಒಬ್ಬ
ಬಣ್ಣಿಸುವೊಲೀ ಜಗದ ಪಂಚಾಂಗವಿದೆ ಎಂದು
ಮಂಕುಬೂದಿಯ ತಳಿವ ಪಾರಿಭಾಷಿಕ ವೃಷ್ಟಿ
ಕರೆದರೆಷ್ಟೋ ಕವಿ ಮನೀಷಿ ಮುನಿ ಯೋಗಿಗಳ್,

ಇಂದಿಗೂ ಜಗಜಗಿಪ ಜಗ, ಅದರ ಪಂಚಾಂಗ
ಪ್ರಶ್ನಶೇಷನನಂತ ಬಾಲವಾಪ್ರಶ್ನೆಯೋ
ನಾಮ ಮಾನದೆ ದೇವ ವೇದವಳೆಯಲು ಹೊರಟ
ವಾಮ ಮಾವನ ಮಗಳ ರೂಪಪೂರ ಕಣಯ್ಯ!

‘ಗಗನಾರವಿಂದ ಪರಿಮಳ’
ಹೌದು ಹೌದು ಹೋ!
ವಾಗಿಂದ್ರಜಾಲ ಪಾರಾವಾರ; ಮುಳುಗಿ ತಳ
ಕಂಡಿರೇ? ಅಲ್ಲಿ ಸಿಕ್ಕಿದ್ದೇನು?

ನೀರ್‌ಬರೆಹ, ಮಣ್ಣೋದು, ಕಲ್ಲರಿವು!
ಬುವಿಬಾನುಗಳ ನಡುವೆ ಮೂಡಿ ಮುಳುಗುವ ಬುರುಗು
ಬಣ್ಣಗಳ ಬೆರಕೆಯಿರವು!

ಕಾಂತಾರದೆಡೆಗೆ

ನಾ ನುಡಿದ ನುಡಿಯಲ್ಲೆ ನನಗೆ ನಿರ್ವೃತಿಯಿಲ್ಲ
ನಾನೆಂದುದನು ನಾನೆ ನಂಬೆನೆಂದೆ;
ನಾ ಕೊಂಡುದನು ನಾನೆ ಮೆಚ್ಚಲಾರದೆ ಹೋದೆ
ನಾನಾಗಿ ನಾನಲ್ಲವಾಗಿ ನಿಂದೆ!

ಅಂತಾಗಿ ಇಂತಾಗಿ ಕಾಂತಾರದಲಿ ಸಾಗಿ
ಬೆಳಕಾಗಿ ಕಂಡದ್ದು ಬೇರೆಯಾಗಿ,
ನೆಳಲಾಗಿ ನೆಲಸಿದ್ದು ಮಳಲಾಗಿ ಸುಡತೊಡಗಿ
ಮನವಾಯ್ತು ಮರುಗಿ ಮರುಭೂಮಿಯಾಗಿ!

ಸೌಂದರ್ಯ ಸಾಧಕರ ಸಡಗರದ ಸೋಗೇನು,
ಸುಧೆಯರಸಿ ಹೊರಟಂಥಸುರರದೇನು!
ವಿಧವೆಯರ ಕತೆಯೊರೆವ ಗಾಂಧರ್ವ ಹೃದಯಗಳ
ವಿಧ ವಿಧ ವಿಲಾಪಗಳ ವಿಕೃತಿಯೇನು!

ಬರಗಾಲ ಬವರಗಳ ಬರೆಬರೆದು ರಾಶಿಸುವ
ತಿರುಲೇಖನಿಯ ತೀವ್ರ ಗತಿಯ ಕಂಡು
ಬರುಬರುತ ಪಂಚನದ ಹಬೆಗಾಡಿ ಹೆಜ್ಜೆಗಳ
ಸರಿಸಿತ್ತು ಹಿಂದಕ್ಕೆ ಹೆದರಿಕೊಂಡು!

ಅತ್ತಿತ್ತ ಅರಸುಗಳ ಕಾಳೆಗದ ಸ್ವಾತಂತ್ರ್ಯ
ಮುತ್ತುಮುಗುದೆ ಪುರಾಣ ಇತ್ಯಾದಿಯ
ಹೊತ್ತು ಹೊಗಳುವ ಹರಕು ಲೇಖವೋದಿದ ಚಿತ್ತ
ಹೊತ್ತಿ ಬೈದಿತ್ತು ಸಾಹಿತ್ಯಾದಿಯ

ಚಿತ್ತಚೋದನವಿಲ್ಲ ಭಾವಮೋಹನವಿಲ್ಲ
ಸತ್ಯಜೀವನದೊಂದು ಚಿತ್ರವಿಲ್ಲ;
ಎತ್ತ ಅರಸಿದರತ್ತ ಶಬ್ದಾರ್ಥಗತಿಯ ಸ್ವ–
ಲತ್ವವಲ್ಲದೆ ಬೇರೆ ಕಾಣೆನಲ್ಲ!

ಅರರೆ ಕಲೆ ನಿನ್ನ ಕೊಲೆಗಾಗಿ ರಣರಂಗದಲಿ
ಹಿರಿಕಿರಿಯ ಮರಿಮಂದಿಯೆಲ್ಲ ಕೂಡಿ
ಹರಿಯ ಬಿಡುತಿಹರಲ್ಲ ಹಾರುವ ಫಿರಂಗಿಗಳ
ಸರಿ ನಿಲ್ಲದಿರು ಓಡಿಬಾರ ಜೋಡಿ!

ಅಂತೆನಲು ಎಂತೇನೊ ಗೀತೆಯೊಂದಲೆಯೆಂತು
ಸಂತೆಯನು ಬಿಟ್ಟು ಕಾಂತಾರದೆಡೆಗೆ
ಸಂತ ಸಾಗು ಸಮಾಧಿ ಹೊಂದು ನನ್ನೊಡನಿಂದು
ನಿಂತಲ್ಲೆ ಬೆಳಕು ಕಂಡೀತು ಕಡೆಗೆ!

ಅತಿ–ರಾಮರಾಜ್ಯ

I

ರಾಮಾಯಣದಿ ರಾಮನೊಬ್ಬನಾದರೆ ಇಲ್ಲಿ
ಮೈಲಿಗೈದಾರ್‌ನೂರು ರಾಮರಿಹರು;
ರಾವಣನೊ? ಒಬ್ಬನೂ ಇಲ್ಲ! ಸೀತೆಯರೆಲ್ಲ
ರಾಮ–ಕೌಸಲ್ಯೆಯರನಾಳುತಿಹರು!
ಬಡತನವು ಶಬ್ದಕೋಶದೊಳಷ್ಟೆ ನೆಲೆಸಿಹುದು,
ಉಡುವ ಸಿರಿ ಸಗ್ಗವನು ನಾಚಿಸುವದು;
ಕೆಡುಕೆಂಬುದೇ ಇಲ್ಲ, ಹುಡುಕಿ ನೋಡಿದರೂನು,
ಕೊಡುಗೈಯು ಬೇಡುವರ ಯಾಚಿಸುವದು!
ಸತ್ಯದಡಿಗಟ್ಟಿನಲಿ ಸೌಂದರ್ಯಸೌಧಗಳ
ಕಟ್ಟುತಿಹ ಕಲೆಗಾರ ಸರ್ವಪೂಜ್ಯ;
ಮೆಟ್ಟು–ಮೆಟ್ಟಿಗೆ ಒಳಿತಿನುಚ್ಚಾಸನಗಳಿಲ್ಲಿ–
ಬಟ್ಟಲಲಿ ತುಂಬಿದುಪಯೋಗದಾಜ್ಯ!
ಹುಟ್ಟು ಬಡವರು ಕೂಡ ವೈಕುಂಠಪತಿಯಂತೆ
ಲಕ್ಷ್ಮಿಯರ ಸೇವೆಯಲಿ ನಲಿಯುತಿಹರು;
ಬುಟ್ಟಿ–ಬುಟ್ಟಿಯೊಳೆಷ್ಟೊ ಬಿರುದುಗಳ ಹಂಚುವರು,
ನಷ್ಟವರಿಯದ ಜನರು ಬಲಿಯುತಿಹರು!

II

ವಿಜ್ಞಾನಿ–ನಿರ್ಮಿಸಿದ ಕೃತಕ ಹೂ–ಹಸಿರ್ದೋಟ
ಹೆಜ್ಜೆ–ಹೆಜ್ಜೆಗೆ ಪಾಂಥಗೆದುರಾದರೆ,
ಮಜ್ಜಿಗೆಯ ಕಡೆಯದಲೆ ಬರುವ ಬೆಣ್ಣೆಯ ಹಾಗೆ
ಸಜ್ಜಾಗಿ ಒಲಿದು ಬಹಳವಗೆ ಚದುರೆ;

ಪ್ರೇಮ–ಕಾಮಾದ್ವೈತ ಧೋರಣದ ವೈಶ್ಯಜನ
ಕೊಳಗಗಟ್ಟಲೆ ರಸವ ನಾಕಕಾಗಿ
ನಿರ್ಯಾತ ಮಾಡುತಿದೆ ಭೋಗಯೋಗಸಮಾಧಿ
ಉತ್ಪಾದಿಸುತಿದೆ ಮಾರಾಟಕಾಗಿ!

III

ಕುಡಿಯುವುದು ನೀರನ್ನೆ? ಅಲ್ಲಲ್ಲ–ಜೇನನ್ನು
ಕೈತೊಳೆಯುವುದೊ? ಶುದ್ಧ ಹಾಲಿನಿಂದ!
ದಿನದೆಂಟು ಜಾವಂಗಳಲ್ಲಿಯೂ ಬಿಗಿದಪ್ಪಿ
ಆಧರಪಾನವ ಮಾಳ್ಪ ದಾಂಪತ್ಯದ
ಅರಮನೆಗಳೆಲ್ಲವೂ; ಮುರುಕು ಗುಡಿಸಲ ಬಿಡಿಸೆ
ಕಲೆಗಾರ ಪರದೇಶಕ್ಕೈದಬೇಕು!
ಸೆರೆಮನೆಯನೂಹಿಸಲು ಕೂಡ ಬಾರದು ಜನಕೆ
ಹಳಗತೆಯೊಳಷ್ಟೆ ಅದು ಉಳಿಯಬೇಕು!

IV

ಲಂಚ ಶತ್ರುಗಳೆಲ್ಲ ವಂಚನೆಯ ವೈರಿಗಳು
ಪಂಚೇಂದ್ರಿಯಗಳೆಲ್ಲವನ್ನು ನಾಡ
ಸಂಚಿತಯಶಸ್ಸನ್ನು ಸಂವರ್ಧಿಸಲು ಸವೆವ
ಪಂಚವಾರ್ಷಿಕ ದೇಶಭಕ್ತಿ ಗಾಢ;
ವೈರಾಗ್ಯ, ನಿರ್ವೇದ, ಸಂನ್ಯಾಸ, ಯುದ್ಧ ತಾ
ಕಾವ್ಯದಲ್ಲೂ ಕೂಡ ಕಾಣಬರದು;
ಬೀಭತ್ಸಕೆಲ್ಲಕಡೆ ಬಿದ್ದಿದೆ ಬಹಿಷ್ಕಾರ,
*ವ್ಯಂಗ್ಯವೆಲ್ಲೂ ವ್ಯಂಗವಾಗಿರುವುದು!

V

* ವ್ಯಂಗ್ಯ = ವಿಡಂಬನ, ಅಣಕ; ಅಣಕವೇ ಅಣಕಿಸಲ್ಪಡುತ್ತದೆ ಇಲ್ಲಿ; ವಿಡಂಬನಗಳು ವಿಡಂಬಿಸಲ್ಪಡುತ್ತವೆ; ವಿಡಂಬನೀಯಗಳೋ? ಆ ಮಾತು ಬೇರೆ!

ಶೋಕ ಬಾಯ್ದೆರೆಯಲಾರದೆ ಮೂಕವಾಗಿಹುದು,
ಭಯವು ಬಾಗಿಲ ಹೊರಗೆ ಬರಲಾರದು;
ಕ್ರೋಧವನು ನೆನೆಸಿಕೊಳ್ಳಲು ಕೂಡ ಕೆಂಪಿಲ್ಲ–
ಕವಳ ಕೂಡಾ ತೀರ ಕೆಂಪಾಗದು!
ಉಲ್ಲಾಸ–ಬಲ್ಮೆಗೆ–ಬೆಡಂಗು–ಮಂಗಲವಾಣಿ
ಚೆಲ್ಲಿ ಸೂಸುವ ಗೃಹಸ್ಥಾಶ್ರಮಿಗಳ
ಸಲ್ಲಲಿತ ಆಧ್ಯಾತ್ಮದನುಭಾವ ಹೊಸದಯ್ಯ,
ಬಣ್ಣಿಸಲು ಬರದಾತ್ಮ ವಿಕ್ರಮಿಗಳ!

VI

ಸರ್ವ ಸಮತಾಸೌಖ್ಯ ಸರ್ವತ್ರ ವಿಕಸಿಸಿರೆ
ಸರ್ವೋದಯದ ಸೂರ್ಯ ಸೊಗಯಿಸುವನು;
ಪರ್ವತೋಪಮ ಮಹಾದರ್ಶಗಳ ಸಾಧಿಸಿದ
ಕರ್ಮವೀರರ ಹೊಗಳಿ ಹಾಡಿಸುವನು!
ನೆಲ–ನೀರು–ಗಾಳಿ–ಬಾನ್–ಮೀನ್–ಮೋಡಗಳ ದಾರಿ
ಹಿಡಿದು ವಿಹರಿಸಿ ಬಾಳ್ವ ಸತ್ಪ್ರಜೆಗಳ
ನವನೀತ ಸಂಸ್ಕೃತಿಯ ಸಂಭಾರಗಳ ತೂಕ
ಮೀರಿಹುದು ನೂರಷ್ಟದಿಗ್ಗಜಗಳ!

VII

ಒತ್ತು ಗುಂಡಿಗಳೊತ್ತಿ ಪಂಚೇಂದ್ರಿಯಾತ್ಮ ಮನ
ನಿತ್ಯಸುಖವುಣ್ಣುತಿದೆ, ಸ್ತ್ರೀ ಪುರುಷರ
[೧]ಮತ್ತೇಭನೃತ್ಯ ಮಾಹಾತ್ಮ್ಯದಪ್ಪಟತನವ
ಹತ್ತು ಮಾರಿಗದೊಮ್ಮೆ ಕಾಣಬಹುದು!
ಮಿಥ್ಯೆಯಾದನು ಬೊಮ್ಮ, ಸತ್ಯವಾಯಿತು ಲೋಕ;
ಅಪ್ಸರೆಯರಿಲ್ಲಿಗೇ ವಲಸೆ ಬಂದು
ಸಪ್ಪೆಬಾಳಿನ ಸದೆಯ ಗುಡಿಸಿ ಸಂತಸವೀಯೆ
ಮುಪ್ಪು ಕೂಡಾ ಯೌವನಿಸಿಹುದಿಂದು!

೧ ಸ್ವಚ್ಛಂದ, ವಿಹಾರ, ಸಾಹಸ,

VIII

ಪ್ರತಿಯೊಬ್ಬನೂ ತಜ್ಞ, ಪ್ರತಿಯೊಬ್ಬಳೂ ಚೆಲುವೆ,
ಪ್ರತಿಯೊಂದು ವಸ್ತುವೂ ಸುಖಸಾಧನ;
ಪ್ರತಿಮಾತು ಕಾವ್ಯಕೃತಿ, ಸಂವಾದ ಸಂಗೀತ,
ಪ್ರತಿಯಿಲ್ಲದಪ್ರತಿಮ ರಸಜೀವನ!
ಅತಿನವ್ಯ ದಿವ್ಯತೆಯ ಪ್ರತಿಯೊಂದರಲ್ಲಿಯೂ
ನುತಿಸಿ ನೂರ್ಮಡಿಗೊಳಿಸುವೊಳ್ಬಿಗೆಣೆಯೆ?
ಅತಿಮಾನಸಾರಾಮ ಸಂಚಾರ ಜೀವಿಗಳ
ಕತೆಯೆಲ್ಲಿಯೂ ಇಲ್ಲ–ಓದ ನೆನೆಯೆ!
ಪೀತ್ವಾ ಪೀತ್ವಾ ಪುನಃ ಪೀತ್ವಾ ನೃತ್ಯನ್ ಗಾಯನ್ ಪುನಃ ಪುನಃ
ಸ್ಥಿತ್ವಾ ಗತ್ವಾ ಹಸನ್ ಜಲ್ಪನ್ ಸರ್ವಂ ಸಮ್ರಾಡಿವಾಟತಿ!

ಉಪಮೆ

ಅರಿವವನನು ಅರಸಿಕೊಂಡು ಅರಿವು ಬರುವುದಂತೆ,
ಬರೆವವನನು ಬಯಸಿ ಸುದ್ದಿ ಹರಿದು ಬರುವದಂತೆ;
ದುಡಿಯುವವನನರಸಿಕೊಂಡು ದುಡ್ಡು ಬಾರದಂತೆ;
ಹಿಡಿಯುವವನ ಹುಡುಕಿಕೊಂಡು ಕಳ್ಳ ಬಾರನಂತೆ!
ಗಂಧವಿರುವ ಹೂವನರಸಿ ಮುಡಿದುಕೊಂಬರಂತೆ,
*ಬಂಧವಿರುವ ಕಾವ್ಯವನ್ನು ಕಲಿತುಕೊಂಬರಂತೆ;
ಅಂಧನನ್ನು ಕಣ್ಣಿದ್ದವಳಾರಿಸಿ ಕೊಳದಂತೆ,
ಮಂದನನ್ನು ಸದ್ಗುರು ಒಳ ಸೇರಿಸಿಕೊಳನಂತೆ!

ಅದರಂತೆ ಅದು ಮತ್ತೆ ಇದರಂತೆ ಇದು ಜಗದಿ–
ಪದಪದಕೆ ಬೇರೆ ಪದ, ಅರ್ಥ ಅರ್ಥಕೆ ಬೇರೆ
ಗುಣ, ಬೇರೆ ಸಂದರ್ಭ ಸಂದರ್ಭಗಳಿಗೆ ರಸ;
ವಿಧವಿಧದ ವಸ್ತುಗಳಿಗುಪಮೆ ವಿಧವಿಧವಾಯ್ತು;
ಸ್ವಾಮಿಭಕ್ತಿಗೆ ಸೊಣಗ ಹೆಸರಾಯ್ತದೇ ಸೊಣಗ
ಬಾಲ ಬಡಿಯುವ ಹೀನ ವೃತ್ತಿಗೂ ಹೆಸರಾಯ್ತು!

---

* Diction, ಆಕರ್ಷಕ ಛಂದೊಬಂಧ.

ಶಕುನ ಸಾಕ್ಷಿ

"ಅರ್ಹನಲ್ಲವೆ ಅಲ್ಲ ಈತ ಸಾಲಿಗ್ರಾಮ–
ದಲ್ಲಿರುವ ಹರಿ ಎಂಬ ಮಡಿಯನರ್ಚಿಸಲು; ಉಹು
ಸಲ್ಲ; ಕಾಮ ಕ್ರೋಧ ಪಂಕದೊಳಗುರುಳುತಿಹ
ಹುಲ್ಲು ಹುಳು ಪೂಜೆ ಮಾಳ್ಪುದೆ ದೇವ ದೇವನನು?
ಆರು ಹಗೆಗಳಿಗೆದೆಯ ಮಾರಿಕೊಟ್ಟಿರುವಾತ
ಪಾರಾಯಣವ ಮಾಡಲರ್ಹನೇ ಪರಶಿವನ
ಸಾರವತ್ತಾದ ನಾಮಗಳ ನೆಂ"ದೊರೆದಾಗ*
ಆರು ಸಾಕ್ಷಿಗಳೊಮ್ಮೆ ನುಡಿಗೊಟ್ಟವೇನೆಂಬೆ–

ಬೆಕ್ಕು ಶೀನಿತು, ನಾಯಿ ಕೆಮ್ಮಿತ್ತು, ಹೆಗ್ಗಣವು
ರಕ್ಕಸ ಧ್ವನಿಯನೆತ್ತಿತ್ತು, ಹಲ್ಲಿಯು ದೆವ್ವ–
ದಕ್ಕರವ ಲೊಚಗುಡುತಿತ್ತು, ಜಿರಳೆಯು ಹಾರಿ
ಕುಕ್ಕರಿಸುತ್ತಿತ್ತು ಮೈಮೇಲೆ; ಮತ್ತಷ್ಟರಲಿ
"ಹಕ್ಕೆ ಹುವ್ವೇ" ಎಂದು ಬಳ್ಳು ಸಹ ಸಾರಿತ್ತು–
ನಕ್ಕೆ ನಾಕ್ಷಣದಲ್ಲಿ ಭಗವಂತನಂತೆ ನಾ!

* ಅಪವಿತ್ರನಾದ ಭವಿ, ಅದರಿಂದವನು ಶಿವಪೂಜೆಗನರ್ಹ, ಏಕೆ?
ಕಾಮಾದಿಗಳು ಅಪವಿತ್ರಗುಣಗಳು; ಭವಿ ಅವಕ್ಕಾಕರ!

ಎಸ್.ಟಿ.ಬಸ್

I

ಎಸ್.ಟಿ.ಬಸ್, ಎಸ್.ಟಿ.ಬಸ್,
ಗಲಗಲ ಸದ್ದಿನ ಸರ್ಕಸ್!
ಬ್ರಹ್ಮಾಂಡವ ಪ್ರತಿನಿಧಿಸುವ
ಪಿಂಡಾಂಡದ ಚಲನದ ರಷ್!

ನೂರ್ ಮೀರಿದ ವೃದ್ಧಾಪ್ಯದ ಗೂಡೊಳಗಿನ ಮೂಳೆಗಳೋ
ಕಡಲಾಳದ ಜಲಚರಗಳ ಹಿಡಿದೆಳೆದಿಹ ಜಾಲಗಳೋ
ತುಂಬಿರಬೇಕಿದರಲ್ಲೆನೆ ಕಿವಿಯಾಳವ ಸೀಳುತ್ತಿದೆ,
ಆಂತರಯಂತ್ರ ಧ್ವನಿ ಮಿದುಳಲೆಗಳನೊಡೆದಾಳುತ್ತಿದೆ!

ಜೀವಿಗಿಂತ ಜೋರೊದರುವ
ಜಡವಾಹನ ರಾವಣಾ;
ಜೀವಿಗಳನು ಗಡಗುಡಿಸುವ
ಜಂಪಿಂಗ್ ಹೃದ್ದಾರಣಾ!

ರಶಿಯ ಅಮೇರಿಕಗಳಲ್ಲಿ ಕಾಳಗ ಸುರುವಾಯಿತೋ,
ಜ್ವಾಲಾಮುಖಿಧಬಧಬೆಗಳು ಕಲಹಿಕ್ಕಿದಿರಾದವೋ!
ನರಕದ ಆಸ್ಪತ್ರೆಯಲ್ಲಿ ಹೊಸ ಮಕ್ಕಳು ಹುಟ್ಟಿದವೋ
ವಿಶ್ವರಾಷ್ಟ್ರ ಸಂಮೇಳನ ಕಂಬಳಗಳ ನಡೆಸಿತೋ!

–ಏನಿದೇನಿದೆಂಬ ಹಾಗೆ
ಮೈತುಂಬಾ ನಾದವಾಗೆ–
ನರನಾಡಿಗಳಲ್ಲಿ ಹೊಕ್ಕು ಮಾಡುವದರ ದಾಳಿಯ
ದುರ್ನಿವಾರ್ಯ ಪಾಳಿಯ!

ಗಲಿಬಿಲಿ, ಗದ್ದಲ, ಗೊಂದಲ ಗಲಗಲಿಸಲು ಕಾಯವ
ಮುರಿದೊಗೆವುದೊ ಎನಲಲುಗಿಸಿ ಬಿಡುವುದು ತಳಪಾಯವ!
ನಿನ್ನಾರ್ಭಟ ನವ್ಯಧ್ವನಿ; ಮಹಾಯಂತ್ರ ಭೈರವ–
ನೀನೆ ಕಾಯಬೇಕು ಕಡ್ಡಿ ಪೈಲವಾನ್ ಶರೀರವ–

II

ಹಳ್ಳಿಗಳಿಗೆ ನಾಗರಿಕತೆ ಹೊತ್ತು ತಂದ ವೀರ,
ಧೂಲೀಧರ, ದುರ್ವಾದವ ಮುಳುಗಿಸುವ ಸಮೀರ
ನಿನ್ನೊಂದಿಗ! ಎಸ್.ಟಿ.ರಾಜ, ನಿನಗೆ ನಮಸ್ಕಾರ–
ಕನ್ನಡ ಸೀಮೆಯನಳೆಯುವ ಹೊಸ ಕಲ್ಕ್ಯವತಾರ!

ರೋಡಂಜಿನ್ ಬೆಳೆದು ಬೆಳೆದು ನೀನಾಯಿತೊ ಹೇಗೆ?
ರಾಡಿಯಲ್ಲಿ ಓಡಾಡುವ ನಿನಗೆಲ್ಲಿದೆ ಬೇಗೆ?
ಕೋಡಿಲ್ಲದ ಶರಭ! ನಾಯಿ ಬೆಕ್ಕು ಕೋಳಿ ಎಲ್ಲಾ
ರೋಡಿನಲ್ಲೆ ಭೂಗತ ನಿನಗಿದಿರಾದರೆ ಮಲ್ಲ!

ಎಸ್.ಟಿ.ಬಸ್, ಎಸ್.ಟಿ.ಬಸ್,
ಪ್ರಜಾರಾಜ್ಯಕ್ಕೇ ಯಶಸ್
ತಂದು ಕೊಟ್ಟ ಮಹಾಕಾಯ, ಕಾಲದರ್ಪಭಂಜನಾ!
ಹಳ್ಳಿಯೂರ ಬಾಲಬಂಧು ಜಾಲಮನೋರಂಜನಾ!
ನಿನ್ನಧೂಳು ಕಣ್ಣಿದ್ದವರೆಲ್ಲರಿಗೂ ಅಂಜನ!
ನಿನ್ನನಾದ ಪ್ರಗತಿವಾದ ವಿಹಾರಿ ಹೃದ್ವ್ಯಂಜನ!

*ಭಾರತೀಯ ಜೀವನಸುಂದರಿಗೆ–

I

ಹವಳದ ಮೊಗ, ಮುತ್ತಿನ ನಗೆ, ವಜ್ರದ ಕುಡಿನೋಟ,
ಕಾಮನಬಿಲ್ಲಿನ ಕುಪ್ಪಸ ತೋರುವ ಮೊಲೆಮಾಟ–
ತಿಂಗಳ ಜೊತೆ, ತೋಳ್‌ತೊಡೆಗಳು ಬಾಳೆಯ ಸುಳಿದೋಟ,
ಮಂಗಳೆ, ಬಾಯಂಗಳದಲಿ ಮಂತ್ರಗಳುಲಿದಾಟ!

II

ಸೀತೆ, ಶಕುಂತಲೆ, ನರ್ಗಿಸ್, ಪದ್ಮಿನಿ
ನೂತನ ಮಿಡಿನಾಗರೆ ಮೇಣ್ ಮಂತ್ರಿಣಿ,
ಖ್ಯಾತಾನಾಥಸಮುದ್ಧರಣ ಪ್ರತಿಜಾಗರೆಯರಿಗಿರುವ
ಭೂತಳನಾಕಸ್ತುತ್ಯಗುಣಂಗಳ
ನೀತಳೆದಿಹೆಯೆನೆ ನಿನ್ನನ್ನರ ಕವಿ–
ಜಾತಿಯದೆಂದೂ ಚಿತ್ರಿಸದಿಹುದಾಶ್ಚರ್ಯವೆ ಹೇಳು ಸಖಿ?

III

ರತ್ನಗಳ ಹಾಗೆ ನೀ ತುಟ್ಟಿಯಲ್ಲವೆ ಅಲ್ಲ
ನಿತ್ಯವೂ ಗಾಳಿಬೆಳಕುಗಳಂತೆ ಸಿಗುವೆ ನಲ–
ವತ್ತು ಕೋಟಿಗಳಿಗೀ ದೇಶದಲಿ ಜನಮುಖರ
ಜಿಹ್ವಾಗ್ರದಲ್ಲಿ ನಿಂತು
ಹತ್ತು ಲಕ್ಷಶ್ಲೋಕವಾಗಿ ಪೌರಾಣಿಕರ,
ಹತ್ತು ಸಾವಿರ ಹೊತ್ತಗೆಗಳಾಗಿ ಇತಿಹಾಸ
ವಸ್ತುವಾದಿಗಳ, ಭಾಷಣ ಚಕ್ರವರ್ತಿಗಳ
ನಿತ್ಯಾಬ್ಜಪದಗಳಾಗಿ!

---

* ಪ್ರೊ. ಡಿ.ಡಿ. ಕೋಶಾಂಬಿಯವರ "An Introduction to the study of Indian History'' ಎಂಬ ಪುಸ್ತಕವನ್ನೋದಿ ಬರೆದುದು.

IV

ಪಾಣಿನಿಗಳ ಹಿಂದಿನಿಂದ ನಡೆದುಬಂದ ನಾರಿ,
ನಾಣಿಲಿಗಳು ನರ್ತಿಸಿದಿತಿಹಾಸದ ಹೆದ್ದಾರಿ;
ಗೊಮ್ಮಟಿಸಿದ ಕವಿದಂಡಿಯದೊಮ್ಮೆ ಸಮಾಚಾರಿ
ಚಮ್ಮಟಿಗೆಯ ಪೂಜೆಗೈದು ನಿನ್ನನು ವೈಯಾರಿ!
ಪ್ರಾಧ್ಯಾಪಕ ಕೋಶಾಂಬಿಗೆ ಕೆಲಸವಿಲ್ಲವೇನು
ವಾದ್ಯಮಾಡಿ ಜನರ ಕರೆಯೆ ನೋಡಲು ನಿನ್ನನ್ನು?
ವೇಷಧರಿಸಿ ಹೊರಬರಲವ ಸಮಯವ ಕೊಡಲಿಲ್ಲ;
ಮೋಸಗಾರನಾಬ್ರಾಹ್ಮಣ ಶಪಿಸವನದನೆಲ್ಲ!

V

ನೀನದಾವಳೆಂದು ಕೇಳಿ
ಮಾನ ಕಳೆದುಕೊಂಬ ಹುಂಬ
ಈ ನವೀನ ರಾಷ್ಟ್ರದಲ್ಲಿ ದೊರಕಬಲ್ಲನೆ?
ಪಾನಮಾಡಿ ಸೊಗದ ರಸವ
ಜೇನಿನಂತೆ ಹುಡುಕಿ ಹೊಸವ
ಜ್ಞಾನಬೋಧ ಮಾಳ್ಪ ಜಸವ ತೊರೆವನಾರವ?

VI

ನೀರು, ನೆಲ್, ಹಸು, ಹಸುಳೆ, ಚಿನ್ನ, ಸೌಧಾಟ್ಟ ಮೇಣ್
ಮಾರುದ್ದ ಬಿರುದು, ಚತುರಂಗ ಬಲ ದಿಂದೆಂಟ
ಮಿೂರಿದೈಶ್ವರ್ಯಗಳ್ ದೊರಕಲೆಂದೆಡೆವಿಡದೆ
ಹೋರುವರಸರ ಪಾದಸೇವೆಗೈದುಂಡುಟ್ಟು
ಮಾರಿಕೊಂಡಾತ್ಮಾಭಿಮಾನವನು ಬೊಮ್ಮತನ–
ಕೇರಿಸಿದ ತತ್ವಚಿಂತಾಮಣಿಗಳಿಂದ ನಿ–
ನ್ನಾರಯಿಕೆಗೈದು ಬೆಳಸಿದ ಶಾಸ್ತ್ರ–ಕಾವ್ಯ–ಧ–
ರ್ಮಾರಣ್ಯದಿಂದ ಹೊರದೆಗೆದು ಜನರಿಗೆ ನಿನ್ನ
ಮೋರೆಯಾಳ ಬಣ್ಣವನು ತೋರಿಸಿದ ಕೌಶಾಂಬಿ
ವಾರಾಂಗನಾ ಸದೃಶನಲ್ಲವೇ? ನೀ ಹೇಳು;

ತಾರತಮ್ಯದ ರಮ್ಯತೆಯ ಕಾಣದಾ ಕುರುಡ
ತೋರಿಸಲು ಹೊರಡಬಹುದೇನನ್ನದಿಂದ ಸ–
ರ್ವಾರಂಭವೆಂಬ ಗೀತೋಕ್ತಿಯನು ವೇದದಾ
ವಾರಿಯುದ್ಧದ ಬಗೆಯೊಳೇನೆಂಬೆ! ಹಳ್ಳಿಗರ
ಬಾರಿಬಾರಿಗೆ ಕೊಳ್ಳೆಹೊಡೆದೆ ನಾಗರಿಕತೆಯ
      ತೇರುದ್ದ ಶೃಂಗಾರ ತಲೆಯೆತ್ತಿತ್ತೈದಾರು
      ನೂರಲ್ಲ, ಸಾವಿರಗಳಳಿದಿಂದಿನೀ ವರೆಗೆ
ಭೂರಿಜನ–ನಿಃ ಶಸ್ತ್ರತೆಯ ನೆಲವನಾಧರಿಸಿ–
ಏನೆಂಬನವನ ಮೇಲ್ಕಾರುಕಿಡಿ, ಸುಂದರಿಯೆ,
ದಾನವಾಂತಕ ನಿನ್ನ ಕಡೆಗಿರುವ, ನೀನರಿಯೆ!

ಪಟ್ಟದಕಲ್ಲು

I

ಪುಲಿಕೇಶಿಯ ಮಹಾರಾಜ್ಯ
ಕೇಂದ್ರವಾದ ದಿಬ್ಬ;
ಬಾದಾಮಿಯ ಕ್ಷಾತ್ರ ತೇಜ
ನಡೆಯಿಸಿದಾ ಹಬ್ಬ!
ಪಂಚಕಲಾ ಮಂದಿರಗಳ
ಮಹಾದೇವರಸ;
ಕನ್ನಡ ಸತ್ವೋದ್ರೇಕದ
ಬಾನೆತ್ತರ ಜಸ!

II

ಬಂಡುಣಿವೆದೆಯನ ಗೆಳೆಯ ಗೆಳತಿಯರೊ
ಎಂಬ ಹಾಗೆ ಬಾಗಿಲಿನೆದುರು
ಯಕ್ಷಯಕ್ಷಿಯರು ಮಂದಹಾಸದೆಳ
ಬಿಸಿಲ ಕಾಂತಿಯನು ಸೂಸುವರು;
ಶೃಂಗಾರದ ವಿಧವಿಧದ ಭಂಗಿಯಲಿ
ಬಂದವರನು ಸ್ವಾಗತಿಸುವರು;
ಯೋಗವಿಲ್ಲದೆಯೆ ಭೋಗವಿಲ್ಲ–ಎಂ–
ದನುದಿನವೂ ಪ್ರಧ್ವನಿಸುವರು!

III

ಅಂಚೆದೇರನೂ ಕಂಡು ಕೊಂಚ ಅನು
ಮಾನಿಸಬಹುದೀ ಮಂಗಲವ
ಸಂಚುಮಾಡುವೈಹಿಕ ಸೌಂದರ್ಯದ
ಮದನಮೂರ್ತಿಗಳ ಕಣ್ಗೆಲವ!

ತನ್ನ ಕಾಮವೀ ಕಲ್ಲಿನಲ್ಲಿಯೂ
ಅಮರವಾಗಿ ಕಣ್‌ಕೆಣಕೀತೇ?
ಎನ್ನುವಂತೆ ಮೈದಾಳಿದಗ್ರರಸ
ಕನ್ನಡ ಬಣ್ಣವ ಬಿಟ್ಟಿತೇ?

IV

ಈ ನಯದಾವಾರದ ಒಳಗೇನಿದೆ?
ಭೀಮವಿಗ್ರಹ ಸ್ತೋಮ ಗಡ!
ಹರಿ–ಹರ–ಬೊಮ್ಮನ ದಿವ್ಯರಾಜ್ಯಗಳ
ಪ್ರಜೆಗಳಾದ ವೀರರ ವಿಗಡ
ಶೃಂಗಾರದ, ಸಾಹಸದ ಧರ್ಮಫಲ–
ಚಿತ್ರ–ಚಿತ್ರ ಸುತ್ತೂಮುತ್ತೂ
ದಂಗುಬಡಿಯಿಸುಗು ಗೋಡೆಗಳಲ್ಲೇ
ಮೂರ್ತವಾದ ಮತಿಸಂಪತ್ತು!

V

ಚರಾಚರಗಳೆಲ್ಲವೂ ಮಾನವರ
ಸರಿಕರಾಗಿ ವರ್ತಿಸುವ ಜಗ;
ಧರಾಧರ್ಮದಿಂದಲೇ ವರ್ತಿಸುವ
ದಿವ್ಯಜೀವಿಗಳ ದೀರ್ಘಯುಗ!
ಯುದ್ಧ–ಶಾಂತಿಗಳ ಒಲುಮೆ–ಬಲುಮೆಗಳ
ಒಳಿತು–ಕೆಡಕುಗಳ ತೇರಾಟ
ಎದ್ದು ಕಾಂಬ ವೈವಿಧ್ಯರಾಶಿಯನು
ನಿಯಂತ್ರಿಸುವ ಕನ್ನಡ ಮಾಟ!

VI

ನಿಸರ್ಗದೊಳಗಡಗಿ ಹರಿವ
ಸಂಸ್ಕೃತಿಯನು ಹೀರಿ
ಕಲ್ಲಿನಲ್ಲಿ ಚೆಲ್ಲಿ ಜೇನ
ಶಿಲ್ಪಕಲಾಚಾರಿ
ನಿಲ್ಲಿಸಿರುವ ಪಂಚಲಿಂಗ
ಮಹಾಬಲದ ಶೃಂಗ
ಸಾಮ್ರಾಜ್ಯದ ಸೌಜನ್ಯದ
ಸೌಂದರ್ಯದ ರಂಗ!

ಬಡವರ ಬಾಳು

I

ಬಂಗಾರದ ಯುಗ ಬರುವುದು ಕಾದಿರಿ ಕಾದಿರಿ ಕಾದಿರಿ,
ಕಾದಾಡದೆ ಕಾಯುತ್ತಿರಿ ಕಾಡಿನ ಸಹನೆಯ ಮಕ್ಕಳೆ!
ಜನ್ಮಾಂತರ–ಕರ್ಮಾಂತರ–ಮನ್ವಂತರದಲ್ಲಾದರು
ಬಂಗಾರದ ಮಳೆ ಬರುವುದು ಆಸೆಯ ಬಿಡಬೇಡಿರಿ ನೀವ್
ನೈರಾಶ್ಯದೆ ಲಾಭವಿಲ್ಲ ಆಶೆಯಿಂದ ಭಾವಿಲಾಭ
ಬಹುದುಗಿಹುದಿನಲ್ಲಾದರು ಗರ್ಭೀಕೃತವಾಗಿದೆಯಲ!
ಮರ್ಯಾದೆಯು ಪಶು–ಪಶುಪತಿ ಇಬ್ಬರಿಗೂ ಇಲ್ಲವಾಗೆ
ಮೂರನೆಯವರೇತಕ್ಕದಕಂಟಿಕೊಳ್ಳಬೇಕಯ್ಯಾ?
        ಹೊಗಳಿರಿ ಹೊಗಳಿರಿ ಆಶಾವಾದದ ಉದ್ಯಾನಂಗಳ,
        ಕನಸಿನ ಮಂಡಿಗೆಗಳ ಹಂಚುತ್ತಿಹ ನೇತೃಗಳ;
        ಹೊಗಳಿಕೆ ಮಂಗಲವದರಿಂದೆಲ್ಲರಿಗೂ ಲಾಭಾವಹ
        ಜಗಳವನಧಿಕಾರಕ್ಕೆಂದಾಡಿದ್ದೂ ಮಾಫಿ!
"ದೇವಾಸುರ–ರಾಮದಶಾನನ–ಕಂಸಾಚ್ಯುತಗಳು
ವೇದಕಾಲದಿಂದಾಂಗ್ಲರ ಶಾಸನ ಮುಗಿದೀಗ
ನೆಹರುಗಳಾಳಿಕೆ ನಡೆಯುತ್ತಿರುವಾಗಲು ಕೂಡ
ಪುನರವತರಿಸುತ್ತಿವೆ: ಸತ್ಪ್ರಜೆಗಶ್ರುವಿಭಾಗ!"

II

        ಏನಯ್ಯಾ ಏನೆನ್ನುವೆ, ಬೌದ್ಧರ ಅನುಯಾಯಿ?
        ಆಶೆ ನಿರಾಶೆಯ ಪೂರ್ವಜ; ಅದೇ ಚಿರಸ್ಥಾಯಿ;
        ಭಾವದ ಬಲವಲ್ಲದೆ ಇಲ್ಲಿಲ್ಲ ಕರ್ಮಶೌರ್ಯ
        ಅಂತ್ಯದೊಳಾದರು ಅಳುವವನಿಲ್ಲಿ ಪುರಸ್ಕಾರ್ಯ!
ಹಾರಯಿಸೋ ಆ ದಿನವನು ನಿನ್ನ ಧರ್ಮಕೀರ್ತಿಯನ್ನು
ಸುಭಾಷ್‌ಚಂದ್ರರನು ಕೆಲವರು ಕೊಂಡಾಡಿದ ಹಾಗೆ ಮುಂದೆ
ಅಜರಾಮರಿಸುವ ಅವಧಿಯ; ಮೇಷ ವೃಷಭ ರಾಶಿಯವರು
ತುಂಬಿದ ಈ ದೇಶದಲ್ಲಿ ವಿಧಿವಿಲಾಸ ಮೆರೆಯುವಲ್ಲಿ!

ದ್ರೌಪದಿಭೀಮಾರ್ಜುನರಿಗೆ ಪೌರುಷವನ್ನುಸಿರಿದುದಕೆ
ಸ್ವರ್ಗಕ್ಕರ್ಹತೆಯಿೀಯದೆ ವಿಧಿಬಲವನ್ನೆತ್ತಿ ಹಿಡಿದ
ಧರ್ಮರಾಯನೆಂಬ ಜೂಜುಖೋರನಿಗಷ್ಟೇ ಸಗ್ಗದ
ಬಾಗಿಲತೆರೆಯಿಸಿದನಲ್ತೆ ಪರಾಶರನ ಪರಮಪುತ್ರ!
ಹಾರಯಿಸೋ ಆ ದಿನವನು ಸಂತುಷ್ಟದ್ವಿಜತೆಯಿಂದ
ಮರದ ಕೊರಡಿನಂಥ ಮನದ ಸಹವಾಸಿಗಳೊಡನೆ ತಾಳಿ
ಬಂಜೆಬಾಳ ಬಂಧನವ
ಹಾಕಿ ಅದಕೆ ವಂದನ;
ಅನುಕ್ರೋಶದಿಂಧನ
ಬರಿದಾಗಲು, ನಂದನ
ಸಿಗುವುದೆಂಬ ಆಶೆಯ
ಒಣಕಲಾದ ಭಾಷೆಯ
ಆಡು ಆಡು, ಶುಭ–ಮಂಗಲ–ಭದ್ರಂಗಳ ಬೊಗಳು,
ಹೊಟ್ಟೆ ಹೊರೆದುಕೊಳ್ಳಲೆಂದು ವೇದಾಂತವನುಗುಳು;
ಭಾರತದಾಚಾರದಿಂಥ ಬ್ಲೇಡು ಮೊಗದ ಕಳೆಯ
ದಿನದಿನವೂ ಬೆಳೆಯಿಸೀತು; ಅದೆ ಅದ್ಭುತ ಗೆಳೆಯ!
"ಹಾರಯಿಸೋ ಹಾರಯಿಸಾ ಕೋಟಿಸೂರ್ಯ ತೇಜವ,
ಮೊಗದ ಕಾಜವೆನಿಸುವಂಥ ಕಂಗಳ ಕೀಳ್ ವ್ಯಾಜವ"
ಎಂದು ರೊಕ್ಕ ರೂಪರಸಿಕರೆದುರಿಡು ನಿನ್ನಾಜ್ಯವ
ಕೀರ್ತಿಶೇಷರೆನಿಸಿ ಬದುಕುವವರ ಯಜ್ಞಭೋಜ್ಯವ!
ಎಂಜಲದಾನಿಗಳ ಹೊಗಳು–
ಅವರದ್ದೀ ಹಬ್ಬ;
*ಸಿಕ್ಕಿದಷ್ಟೆ ಸೈಪುಯೆಂದು
ಸವೆ ಬಡವಾ ಡುಬ್ಬ!

* ಸಿಕ್ಕಿದಷ್ಟೇ (ಮಕ್ಕಳ ಪುಣ್ಯ ಎಂದು) ದುಡಿ, ದುಡಿ, ದುಡಿ ಮತ್ತು ಮಡಿ!

ಗಂಡತ್ತೆ

I

ಬಾಸುಂದಿಗಾಗಿ ಕಾದಿರುವಂತೆ ಪೂರಿ
ಹೊಗಳಿಕೆ–ಹಸಾದಳಿಗಾಗಿ ಕುಳವಾರಿ
ಕಾದಿಹನು ಖರನೀತ ಸ್ಮರ ವಸ್ತ್ರಧಾರಿ
ಮೂಗನುದ್ದಯಿಸುತ್ತ ನಿಂತಿಹ ಪುಢಾರಿ!
ನೌಕರರೊ ಊರವರೊ ಯಾರಾದರೂ ಬರಲಿ,
ಜೀಪಿದ್ದರವರಲ್ಲಿ ಅದನು ತರಲಿ;
ಹತ್ತಿರದುಪಾಹಾರ ಮಂದಿರಕೆ ಜನ ಕಳಿಸಿ
ಏನಾದರೂ ತಿನಲು ತರಿಸಿ ಕೊಡಲಿ!
ಕ್ಯಾಂಪೊ ಸೆಮಿನಾರೊ ಸರ್ವೆಯೊ? ಅದೇನಿಲ್ಲದೊಡೆ
ಸಂದರ್ಶನವೊ ವಿಚಾರಣ ಕಾರ್ಯವೋ–
ಏನಾದರೊಂದುಂಟು ಬಂಗಲೆಯೊಳಿಳಿದಿರಲು
ಭೆಟ್ಟಿಯಾಗಲು ಜನರು ಬರಬೇಡವೋ?
ಅತ್ತೆ ತಾನಾಗಿರಲು ಜನರು–ನೌಕರರೆಲ್ಲ
ಸೊಸೆಯಂದಿರಾಗಿ ಸೇವಿಸಬೇಡವೆ?
ಸರಕಾರ–ಜನತೆ ಎಂಬೆರಡಕೂ ತಾನೆ ಮುಖ
ಎಂಬುದನ್ನೂ ಅರಿತುಕೊಳ್ಳಬೇಡವೇ?
ಇವರಿಗೆ ಪ್ರಜಾಸತ್ತೆಯರಿವೆಂಬುದೇ ಇಲ್ಲ,
ಸಹಕಾರ ಜೀವನವು ಗೊತ್ತೆ ಇಲ್ಲ;
ತಾನುಸಿರ್ದಂತೆ ತಾವ್ ಮಾಡಬೇಕೆಂಬುದೂ
ತಿಳಿಯದೀ ನೌಕರರು ಯೋಗ್ಯರಲ್ಲ!
ಪಕ್ಷಾಧಿಪತಿಯ ಭಾಷಣದ ಹಳೆಮಾತೆರಡ
ಲಕ್ಷಾಶ್ವಶಕ್ತಿಯುತ ಯಂತ್ರದಂತೆ
ಮತ್ತೆ ಮತ್ತೆ ಪ್ರಸಾರವ ಮಾಳ್ಪ ಬಾನುಲಿಯ
ನಿತ್ಯ ತಿರುಗಾಟಕೊಂದೆರಡೆ ಚಿಂತೆ?

II

ವಿಶ್ವಶಾಂತಿಗಾಗಿ ವಿದೇಶಗಳಿಗೈದಬೇಕು,
ದಾಸರಾಷ್ಟ್ರವಿಮೋಚನೆಗೆ ಮಾತನಾಡಬೇಕು;
ಅಭಿವೃದ್ಧಿಯ ಯೋಜನೆಗಳ ಪ್ರಚುರಪಡಿಸಬೇಕು,
ಭತ್ಯದ ಮೊತ್ತವ ಬೆಳೆಯಿಸಿ ಪಡೆದುಕೊಳ್ಳಬೇಕು!
ಯಾರೇನೇ ಹೇಳಿದರೂ ಅಲ್ಲವೆನ್ನ ಬೇಕು,
ಮೇಜ್ವಾನಿಯು ಸರಿಯಾದರೆ ಅಹುದಹುದೆನಬೇಕು!
ನಗರಕಾಕರೆಡಬಲದಲಿ ಗೋಣ್‌ಗುಡುತಿರಬೇಕು,
*ಉಚಿತ ಮನೋರಂಜನೆಗಳ ನೋಡುತ್ತಿರಬೇಕು!
ಯಾರಯ್ಯ ಯಾರೋ ಅದು?
ಜನಜಂಗುಳಿಯುಸ್ತಾದ್!
ಅತಿರಥ ಅಪ್ರತಿಮ ಪ್ರತಿಮೆ
+ಉತ್ತರ ವಿಶ್ವಸ್ಮಾತ್!
ಭಯವಿಲ್ಲದೆ ಜಯವೆನ್ನಿರಿ,
ತಟ್ಟಿರಿ ಚಪ್ಪಾಳೆ!
ಬರಕೊಳ್ಳಿರಿ ಮಾತನಿವನ,
ತೆರೆಯಿರಿ ಬಿಳಿಹಾಳೆ!
ಪತ್ರಿಕೆಗಳಿಗನ್ನ ಹಾಕಿ ಸಾಕುವಾತನಾರು?
ವ್ಯಯವಿಲ್ಲದೆ ವ್ಯವಹರಿಸುವ ನಾರದ ಮತ್ತಾರು?
ಸರ್ವಾತಿಥಿ, ಸರ್ವಗ್ರಹ, ಸರ್ವೋದಯ ಪಾತ್ರೆ–
ಗ್ರಾಮೀಣರ–ನಗರೀಣರನಾಳುವ ಗಂಡತ್ತೆ!

---

* Free. +ಇಂದ್ರ, ದೇವ ದೇವ, Lord of the Gods

ನನ್ನ ಠೀವಿ

ಎಲೆಯಡಿಕೆ ಬೀಡಿ ಸಿನೆಮಾದಿ ಚಟಗಳ ದಾಸ
ಹುಲು ಹರಟೆ ಹೊಡೆವ ಗೆಳೆಯರ ನಿತ್ಯಸಹವಾಸ
ಮಲಿನ ತನು ಹೊದೆದ ಮಲಿನಾಂಬರಂಗಳ ವೇಷ
ಮಲಿನ ಭಾಷಾವಿಶೇಷ

ಎಲೆಲೆ ನನ್ನೊಳ್ ಮೆರೆವುವುಂಡು ಮಲಗುವ ಸುಲಭ
ಕಲೆಯ ನಳವಡಿಸಿಕೊಂಡಿರುವ ಗಜಗಮನನಾ
ನಲೆವಗೆಯ ಶಿಲೆದಲೆಯ ಬಿಲುನಗೆಯ ಬಿರಿಬಾಯ
ಕಲಿಕಾಮಕರ್ಮಶೇಷ

ಮನೆತನದ ಜಂಭದಿಂ ಕಂಭದಿಂ ಕುಂಭದಿಂ
ಘನವಂತಿಕೆಯ ಹುಚ್ಚು ಹಾವದಿಂ ಭಾವದಿಂ
ತಿನಿಸಿ ಮೆಚ್ಚುಗೆ ಪಡೆವ ಬಿಂಕದಿಂ ಪಂಕದಿಂ
ಮೆರೆವ ಕಾಲ್ದಾರಿಯಿಂದ

ಮನೆದಾಟಿ ಬಸ್ಸೇರಿ ಪಣ್ಯಗೃಹಗಳ ಸಾರಿ
ಗಣಿಸದೇನನೊ ಕೊಂಡು ಹೋಟೆಲುಗಳಲ್ಲುಂಡು
ದಿನತೆಗೆವ ದಿವ್ಯಸಂಸ್ಕೃತಿಯ ಬೆಳೆಸುತ್ತಿರುವೆ
ಪಡೆದಾಳಗೈಮೆಯಿಂದ

ಕಲಹ ಕೋವಿದನಾಗಿ ಪಿಸುಣ ಪಸರಿಗ ನೆನಿಸಿ
ಕೆಲ ಕತೆಗಳನ್ನೋದಿ ಪಾಂಡಿತ್ಯವನು ಗಳಿಸಿ
ಛಲತಾಳಿ ನನ್ನವರ ಬಣಕಟ್ಟಿ ನನ್ನನ್ನು
ಹೊಗಳದವರನು ಮೆಟ್ಟುವೆ

ಬಲವಂತರೆದುರು ನಾ ಬಾಲವಲ್ಲಾಡಿಸುವೆ
ಕಲಿಯುಗವ ನಿಂದಿಸುವೆ ಕೈಸೋತ ಕಾಲದಲಿ
ಹಲವು ಕಂದಾಚಾರಗಳ ವೇದವೆಂದು ಸಿರಿ
ಮಠ–ಪುರೋಹಿತರ ಹೊರೆವೆ

ಪಂಚೇಂದ್ರಿಯಗಳಿಗಾರೋಗಣೆಯ ಮಾಡಿಸುವ
ಹೊಂಚೆಂದಿಗೂ ತಪ್ಪದಂತೆ ಅದಕಾಗಿಯೇ
ಸಂಚಿಯಿಸುವಾಗ ಹತ್ತಾರು ಶಾಸ್ತ್ರಗಳಾಣೆ ಮಾಡಿ
ಸಹಜೀವಿಗಳನು

ವಂಚಿಸುವುದೇ ಬುದ್ಧಿಮತ್ತೆ ಎಂದರಿವೆ ಸರ್
ಪಂಚಾದಿ ಪದಗಳನ್ನದಕೆ ಸಾಧನ ಮಾಡಿ
ಲಂಚಾಧಿಕಾರಿಗಳಿಗೋ ಎಂಬೆ ಜೀಯೆಂಬೆ
ಪಂಚ ಭಕ್ಷ್ಯವ ಬಡಿಸುವೆ

ನಾಮಧೇಯವನುಳ್ಳ ದೊಡ್ಡವರ ನಡುವೆ ನಾ
ನಾಮಧೇಯವನುಳ್ಳ ಕುಳವಾರಿಯೆನಿಸಿರ್ದ–
ನಾಮಧೇಯರ ನಡುವೆ ಬೇಕು ಬೇಕಾದುದನು
ಮಾಡಲಂಜದ ವೀರನು

ಕಾಮಕಾನನನಾಗಿ ಧರ್ಮಧ್ವಜವ ಹಿಡಿದು
ನೇಮ–ನಿಷ್ಠೆಗಳನ್ನು ನಟಿಸಿ ಬಾವಿಯೊಳಿರುವ
ಕೂರ್ಮನಂತಿರುವ ಸರ್ವಜ್ಞಾನಮುಕ್ತಾತ್ಮ
ನಾನೆನ್ನ ಠೀವಿಗೆಣೆಯೆ?

ಆಸ್ಥಾನ ವಿದೂಷಕ

I

ಯಾರಿವನು? ಸಂಸ್ಕೃತವಿದೂಷಕನ ಕನ್ನಡಿಸಿ
ಯಕ್ಷನಾಟಕದಲ್ಲಿ ಬಿಟ್ಟ *ನಾಯಕನೇನು?
ಇತಿಹಾಸಗರ್ಭದಲ್ಲಿ ಮತ್ತೆ ಬೆಳೆದೆದ್ದಿಹನು
ಆಧುನಿಕ ಮೊಗವಾಡ, ನಾಗರಿಕ, ಹೊದ್ದಿಹನು!
ಆಚಾರ್ಯವಾಣಿಯಿಂದುಲಿಯುವನು ಕಂಡಲ್ಲಿ
ಸರ್ವೋಪದೇಶಾಧಿಕಾರಿ ಎಲ್ಲಿದ್ದರೂ;
ತಲೆಮಾತ್ರ ಹೊಟ್ಟೆಯಲ್ಲಡಗಿಯೇ ಕುಳಿತಿಹುದು!
'ಮತದಾನೇಽಧಿಕಾರಸ್ತೇ
ಮತೇನಾಸ್ತಿ ಕದಾಚನ
ಮದರ್ಥೇಕುರು ಕರ್ಮಾಣಿ
ತವ ಮತ್ವಾ ಚ ಮನ್ಮತಂ'
ಎಂದು ಧ್ವನಿಸುವ ಅವನ ಮಾತು, ಮೈ, ಮನ ಡೊಂಕು,
ಮಾತಿನರ್ಥಕ್ಕೇ ಸ್ವಕಾರ ವಕ್ರತೆಯುಂಟು!
ಕಾರ್ಯರಂಗ ಸ್ಥಳಗಳಿವನಿಗೊಂದೆರಡಲ್ಲ;
ವಿಷ್ಣು ಹತ್ತವತಾರ ತಾಳಿದರೆ ಅವನಿಂದ
'ಶಿಷ್ಯಾದಿಚ್ಛೇತ್ ಪರಾಜಯಂ'
ಎನ್ನಿಸಿದ ತಾಳಿ ಶತಕೋಟಿ ಅವತಾರಗಳ;
ಆದರಾ ಎಲ್ಲ ಅವತಾರದಲ್ಲೂ ಇವನ
ಕಣ್‌ಡೊಂಕು, ಕೈಡೊಂಕು, ನಾಲಿಗೆಯೊ? ಅತಿಡೊಂಕು!
ಡೊಂಕುಗಳ ಬಳೆಯೊ ಸರಪಳಿಯೊ ಎಂದೆನ್ನಿಸುವ
ಸಂಕರನ ತಲೆತುಂಬ ಡೊಂಕು ಹೊಟ್ಟೆಗಳಬ್ಬ!
ಒಂದು ಬಾಯ್‌ತೆರೆಯುವುದು

ಹಣ ಕಂಡ ಕೂಡಲೇ;
ಇನ್ನೊಂದು ಹೊಗಳಿಕೆಯ
ಹಾಡ ಕೇಳ್ದೊಡನೆಯೇ!
ಮತ್ತೊಂದು ಹೆಣ್ಣ ಮೊಗ
ಮಿಂಚಿನಿಂದಾಕ್ಷಣದಿ;
ಮಗುದೊಂದು ಅಧಿಕಾರ
ದೃಷ್ಟಿಗತವಾದೊಡನೆ!

II

ಅಗಸನಿಸ್ತ್ರಿಯ ಮಾಡಿಬಿಟ್ಟ ಸಂಸ್ಥಾಧ್ವರ್ಯು
ಒಮ್ಮೆ ಮ್ಯಾಜಿಸ್ಟ್ರೇಟನಿನ್ಸ್‌ಪೆಕ್ಟರಿನ್ನೊಮ್ಮೆ,
ಶಿಕ್ಷಣಾಧೀಶ್ವರನು, ರಾಜಕೀಯಾಧ್ಯಕ್ಷ
ಕಲೆಯೊವಜ, ಮಗುದೊಮ್ಮೆ ಸಾಹಿತ್ಯದಾಚಾರ್ಯ
ನ್ಯೂಸ್‌ಪೇಪರೊಡೆಯ, ಮೇಣಿನ್ನೊಮ್ಮೆ ಇನ್ನೊಬ್ಬ–
ಹಗಲು ವೇಷಗಳಲ್ಲಿ
ಮಿಗಿಲಾದ ಪಾಂಡಿತ್ಯ
ಜಗಜಗಿಸುತಿಹುದಿವನ
ಡೊಂಕು ಸತ್ಯದ ಸತ್ಯ;
ಸರ್ಪದರ್ಪದ ಮೊಗಕ್ಕೇರಿಸಿದ ಹೂನಗೆಯ
ಕರ್ಪೂರ ಸೌಂದರ್ಯ ಹಾಲಾಹಲಾಬ್ಧಿಯಲಿ
ತೇಲಿ ಬಹ ಹಾಲ್ನೊರೆಯ ಹಾಗೆ ಹೊಳೆಯುತ್ತಿಹುದು!

III

ಇವ ಲಂಕಾಸುಂದರನಿವ ಮಯಕೃತ
ಭವನದ ಪುತ್ತಲಿ; ಜನಜಾತ್ರೆಗಳಲಿ
ಇವನುತ್ಸವ ಮೂರುತಿ, ನಾಗರಿಕರ
ಕವನದ ವಸ್ತು, ಕಟಾಕ್ಷಾಯುಧನಿವ!
ಗುಂಡಯ್ಯನ ಕಂಡಭವನೆ ಸುಳ್ಳು,

ಅವನಾಕೃತಿ ಇವನೆದುರಿಗೆ ಕುಳ್ಳು;
ಹರನೇನಿವ? ಅಪಹರ ಪರರೊಡವೆಯ
ಕರಕೊಡದೆಯೆ ಕರಗಿಸುವೊಳಗುಲುಮೆಯ
ಕಿಸೆಯಲ್ಲಿಟ್ಟೇ ತಿರುಗುವ ನಾಯಕ,
ಜಾತೀಯತೆ ಇವ ಬಿಡುತಿಹ ಸಾಯಕ!

IV

ವಿಜ್ಞಾನದ ಕಾಲಕ್ಕಿವ ಕಾಲಂ,
ಕುಜ್ಞಾನದ ವಟವೃಕ್ಷದ ಮೂಲಂ;
ಸ್ವಸ್ಥಾನದ ಕಟ್ಟಿಡುವ ಕುಲಾಲಂ,
ದುಃಶೀಲದ ದವಸಕ್ಕೆ ದಲಾಲಂ!
ಆಸ್ಥಾನದೊಳಡಿಯಿಟ್ಟಿಹ ಭೂಪಂ,
ಭಾರತಧರ್ಮ–ವಿದೂಷಕ–ರೂಪಂ,
    ಕೃತ್ಯಾಕೃತ್ಯ–ವಿವೇಕ–ವಿದೂರಂ,
    ವರ್ತಕ–ನರ್ತನ–ಕೌಶಲಪೂರಂ;
    ಕಸಬರಿಗೆಯ ಹಾರಕ್ಕಿವನರ್ಹಂ,
    ಕಸಬರಿಯದ ಪದವೀಪದಬರ್ಹಂ!

* ಯಕ್ಷಗಾನ ಆಟದ ಹನುಮನಾಯಕ.

ಹುರಿಯಾಳಿನ ಹೇಳಿಕೆ

ಹತ್ತರ ಸೇವೆಗೆ ಎತ್ತಿ ನಿಲ್ಲಿಸಿದ ಉಸ್ತಾದ್ ಎಂದರೆ ನಾನಯ್ಯಾ!
ನಿಧಿಯೆಲ್ಲಿರುವುದೊ ಅಲ್ಲೇ ನೆಲಸುವ ಪ್ರತಿನಿಧಿ ನಾನೇ ಕಾಣಯ್ಯಾ!

I

ಸಾವಿರ ವ್ಯಯಿಸಿ
ವೈರಿಯ ಜಯಿಸಿ
ಪ್ರಜಾಸತ್ತೆಗೇ ನಿಧಿಯಾಗಿ,
ನಾನೇ ಜನತೆಯ
ಬಾಳಿನ ಖರ್ಚಿನ
ವಿವರವ ಬರೆಯುವ ವಿಧಿಯಾಗಿ;
ಪಕ್ಷದ ರೆಕ್ಕೆಯ
ಭರಭರ ಬೀಸಿ,
ನೆಲದಿಂದಾಗಸಕೇರುವೆನು!
ಅಲ್ಪದಿಂದ ತಲ್–
ಪಕ್ಕೆ ತಲುಪಲೀ
ಜಲ್ಪ ಸಾಕದನು ತೂರುವೆನು!
ಕಾಲು ನಡೆಯ ಈ
ರಾಜ್ಯದಲ್ಲಿದೋ
ಕಾರುನಡೆಯ ರೂಢಿಗೆ ತರುವೆ;
ಭಾರವಿಲ್ಲದೀ
ಭಾರತ ಭೂಮಿಯ
ಭಾರಧಡೆಯ ಹೆಚ್ಚಿಸಲಿರುವೆ!
ಸರಕಾರದ ದ–
ಲ್ಲಾಲಿಯ ಹಿಡಿದೀ

ನರಕುಲ ಕಾಣದ ವಸ್ತುಗಳ
    ತರಿಸಿ ಹಂಚಿಸುವೆ,
    ಜಾರಿಗೆ ತರುವೆನು
ಹೊಸ ಆಡಳಿತದ ಶಿಸ್ತುಗಳ!

II

*ಮಾನ ಮೋಹವಿರಬಾರದು
    ನೌಕರರಲ್ಲಾರಿಗೂ
ಸಂಗಞುಣವೆ ಇಲ್ಲವಯ್ಯ
ನೋಡಲು ಯಾರ‍್ಯಾರಿಗೂ
ದೇಹಹಿತವೆ ದೇಶಹಿತವು
    ನೌಕರಿಯಲಿ ನಿತ್ಯವೂ
ವರದಿ ಬರೆದು ತುಂಬ ಬೇಕು
ಬರಲು ಬರುವ ಭತ್ಯವು!

III

ಹಿಂದಿನ ಪ್ರತಿನಿಧಿಭೂಪನು
    ಆಯ್ಕೆಹೊಂದಿ ಹೀಗೆ
ಮಾಡೆಂದುಪದೇಶಿಸಿದುದ–
    ನುಸಿರುವೆನೊಳಿತಾಗೆ:
ಮಲಗು, ಇಲ್ಲದೊಡೆ ಸಿನೆಮ ನೋಡು, ಕ್ಲ–
    ಬ್ಬನ್ನು ಹುಡುಕಿ ಓಡು;
ಫ್ಯಾನ್ಸಿಮಾಲುಗಳ ಕೊಳ್ಳಹೋಗು, ಕಾ–
    ದಂಬರಿಗಳ ಬೇಡು!
ಹರಟೆ ಹೊಡೆದು, ಚಾ ಕುಡಿದು ಕಾಲಕಳೆ
    ಷೋಕಿಗಾಗಿ ಕಾಡು
ಹಂಗಿನಲ್ಲಿ ಸಿಕ್ಕವರ ದುಡಿತವನು
    ಕದ್ದು ಮೀಸೆ ತೀಡು;
        ಕಂಡರೆ

* Self-respect, ಸ್ವಾಭಿಮಾನ; ಅದರ ಆಸೆ.

ಹುಬ್ಬು ಸೊಟ್ಟಮಾಡು
ಅಥವಾ
ತಪ್ಪಿಸಿಕೊಂಡೋಡು!
ಮಂದಿ ಮಾಡಬೇಕಾದುದನೆಂದೂ
ಮರೆಯಬೇಡ ಪೋರ;
ನೀನು ಮಾಡಬೇಕಾದುದ ಮರೆತೇ
ಬಾಳಬೇಕು ಶೂರ!

IV

ನಿಧಿಯಯ್ಯಾ ನಾ ಪ್ರತಿನಿಧಿ,
ಮೂಲವಲ್ಲ ಬದಲಿಯ ವಿಧಿ;
ನಕಲು ಮಾಲೆ ನಕಲಿ ಮಾಲು
ಭೇದವೇನು ಅವುಗಳಲ್ಲಿ?
ಎರಡನೆಯದು ಎರಡನೆಯದೆ?
ಮೊದಲಿನದಕೆ ತೊದಲೆ ಬದಲ್?
ಗಂಡಿಗೆ ಹೆಣ್ಣಾಯ್ತೆ ತೊದಲ್?
ದಕ್ಷಿಣೆ ಇಲ್ಲಿತ್ತು ಮೊದಲ್–
ಲಂಚ ಅದಕ್ಕೀಗ ಬದಲ್!

ಪರಾಕ್ರಮ

ಕಳ್ಳರ ಮನೆಯಲ್ಲಿ ಕದ್ದು ಗೆಲ್ಲುವುದು
ಪೋಲಿಸ್ ವರ್ಗದ ಪರಾಕ್ರಮ;
ಪೋಲೀಸ್ ಪೊಗಡೆಯ ಹಾರಿಸಿ ಗೆದ್ದವ
ಕಳ್ಳರಲ್ಲಿಯೇ ಕುಲೋತ್ತಮ!

ಮಂತ್ರೀಶ್ವರನನು ಮಾತು ಕೇಳಿಸಿದ
ಕಾರ್ಯದರ್ಶಿಯೇ ಕಡುವೀರ;
ಕಾರ್ಯದರ್ಶಿಗಳ ಕೈಯಾಸೆಯ ದಂ–
ಡಿಸಿದ ಸಚಿವ ಶಾಸನಶೂರ!

ಕಾಯಿದೆಗೇ ಅಮಲೇರಿಸಿ ಹೆಂಡದ
ಭಟ್ಟಿ ಇಳಿಸುವವ ಧನಂಜಯ;
ಭಟ್ಟಿಗಾರರನು ಕಟ್ಟಿ ಹೊಡೆಯಿಸುವ
ದಿಟ್ಟ ಶಾಸಕನು ಮಹಾಶಯ!

ರಾಷ್ಟ್ರೀಯತೆಯನು ಭೋಧಿಸುವಂಥ ಆ–
ರಾಷ್ಟ್ರೀಯನ ಕೆಡವವನು ಕಲಿ;
ಕಾಷ್ಠ–ಲೋಷ್ಟಸನ್ನಿಭ ರಾಷ್ಟ್ರೀಯನ
ಕದಲಿಸಿದಾತನು ಮಹಾಬಲ!

ತನ್ನ ಪಾಪವನ್ನೊಪ್ಪದ ಮೂರ್ಖನ
ಬಹಿಷ್ಕರಿಸುವವ ವೀರವರ;
ಅನ್ಯರ ಪಾಪಕೆ ನೀರೆರೆವಾತನ
ಹೊರನೂಕಿಸುವವ ಧುರಂಧರ!

ಗಾಳಿಗೆ ಗಾಳಿ ಕಡಲ್ಗೆ ಕಡಲ್ ವಡ–
ವಾಗ್ನಿಗಗ್ನಿಯಾದವ ಧೀರ;
ಬಾಳಿಗೆ ಬಾಳ್ ಸಾವಿಗೆ ಸಾವಾದವ
ಪರಾಕ್ರಮದ ವಜ್ರಾವಾರ!

ಅಪರಾಕ್ರಮಿಗಾತ್ಮವೇ ಇಲ್ಲ ಬರಿ
ಪ್ರಾಣವಾಯುವಿನ ಪೊಳ್ಳುನಡೆ;
ಕೃಪಣನಂತೆ ಹಿಡಿದಿರುವನದನೆ ನಿಸ್–
ತ್ರಪಾಜೀವ ಜಡಕಿಂತ ಕಡೆ!

ಅಕ್ರಮವನ್ನೇ ವಿಕ್ರಮವೆನ್ನುವ
ಶುಕ್ರನೇತ್ರರಧಿಕಾರವಿರೆ
ವಿಕ್ರಯವಾದೀತಿಡೀ ದೇಶವೂ
ವಿದೇಶೀಯರಿಗೆ ಬಡ್ಡಿತೆರೆ!

ಬೆರಕೆ ಸರಕುಗಳ ತುಂಬಿಕೊಂಡಿರುವ
ತಲೆಗೆ ಹೊಳೆವ ತತ್ವಾರ್ಥಗಳ
ಪೊರಕೆಯಿಂದ ಬಡಿದಾಚೆಗೆಸೆಯದಿರೆ
ಹೊರೆ ಹೇರುಗು ದಾರಿದ್ರ್ಯಗಳ!

ಗ್ರಾಮಸಿಂಹ ಘೋಷಣೆ

೧

ಏರಂಡವೊಂದೆವೊಂದೆಂದು ಸಾರುವೆನು ಮಹಾ ವೃಕ್ಷವಿಲ್ಲಿ,
ನೀರುಳ್ಳಿಯೊಂದೆ ಸರ್ವೋತ್ತಮವಲ ಪರಿಮಳ–ಸ್ಪರ್ಧೆಯಲ್ಲಿ;
ಭೇರುಂಡವಲ್ಲ ಈ ಚಟಕ ಚಿಹ್ನವೇ ವಂದ್ಯವಪ್ಪುದಿಲ್ಲಿ,
ಕಾರುಣ್ಯವಲ್ಲ, ತಾರುಣ್ಯದ ತೆರೆವಲ್ ರಮ್ಯ ಸಭೆಗಳಲ್ಲಿ!

೨

ಮತ್ಸ್ಯದಿಂದ ಕಲ್ಕಿಯವರೆಗಾದವತಾರವೆಲ್ಲ ಬರಡು,
ಕೃತ್ಸ್ನವಲ್ಲವೀ ಶ್ವಾನುಭವದ ಯುಗದಲ್ಲಿ; ನಮ್ಮ ಹುರುಡು
ವಿಶ್ವಕೆಲ್ಲ ಸನ್ಮಾನ್ಯ; ನಮ್ಮ ಊರೊಂದೆ ರಸಿಕರೂರು
ಅಶ್ವ, ಹಸ್ತಿ, ಸಿಂಹಗಳ ರಾಜ್ಯಗಳು ಮೂಕತನದ ತವರು!

೩

ಭಷಣ ನನ್ನ ರಾಜ್ಯದಲಿ ಭಾಷಣ, ಸಮಾಜವೆಲ್ಲ ಸಮಜ,
ವೃಷಭಕಿಲ್ಲ ಹೂಂಕರಿಸಿ ನಡೆವ ಹಕ್ಕಿಲ್ಲಿ; ವಿನಯ ಸಹಜ;
ಹಸಿದ ನಾಯಿ ಹೇಳುವುದೆ ಧರ್ಮ, ಒಣ ರೊಟ್ಟಿ ತುಣುಕಿಗಾಗಿ
ಮಸೆದು ದಂತಗಳ ಕಿಸಿದು ಬಾಯ ಬೌಗುಟ್ಟಬೇಕು ತಾಗಿ!

೪

ದೊಡ್ಡ ಮಂಡೆಗಳ ಗಂಟಲಂಗಳವೆ ಗಗನ ನನ್ನಿಯಿಳಿವ,
ಗುಡ್ಡದಂಥ ಕಣ್‌ಗುಡ್ಡೆ ಸಾರುವುದು ತರ್ಕಶಕ್ತಿಯಳವ;
ಸೊಡ್ಡು ಸೊಟ್ಟ ಮಾಡುವುದೆ ಸಭ್ಯಗುಣ ಹೆರರ ಹೊಗಳಿದಾಗ,
ಅಡ್ಡಗಟ್ಟಿ ಒಂಟಿಗರ ಕಚ್ಚಿ ಹೀರುವುದು ಕರ್ಮಯೋಗ!

೫

ಗ್ರಾಮಸಿಂಹ–ಗೌಜರಸನಾಳ್ಕೆಯಲಿ ಬಾಲ ಬಡಿಯದವರ
ಕ್ಷೇಮಚಿಂತನಕೆ ಮೃತ್ಯುನಿಯತ, ಅಭಿಮಾನ ತಾಳುವವರ
ವಾಮವರ್ತನೆಯು ದಂಡನೀಯ, ಇಕೊ ಕೇಳಿ ಬೊಗಳುವುದನು;
'ಸ್ವಾಮಿ, ಕಲಿಯಿರಿಡುವುದನು ಕಾಲ ಸಂದಿಯಲಿ ಬಾಲಗಳನು!'

೬

ದೊಡ್ಡ ನಾಲಿಗೆಯ ಕೂಗು ಸರ್ವಥಾ ಗ್ರಾಹ್ಯವಕ್ಕು, ಎಲ್ಲೂ
ಕಡ್ಡಿ ಕಡ್ಡಿಗಳ ಹೆಕ್ಕಿ ಕಚ್ಚುವವ ಮಾನ್ಯನೆಲ್ಲರಲ್ಲೂ;
ದಡ್ಡ ಚಾಡಿ ಕುಯ್ಗುಡಲು ಬಾರದವ, ಬಹಿಷ್ಕಾರ ಯೋಗ್ಯ–
ಅಡ್ಡಹಾದಿ ಹಿಡಿದೋಡಬಲ್ಲವರಿಗಕ್ಕು ಸರ್ವ ಭಾಗ್ಯ!

೭

ಐಕ್ಯವೆಂಬುದಾಜನ್ಮ ಶತ್ರು ಈ ಕ್ಷೇತ್ರವಾಸಿಗಳಿಗೆ,
ಮೌರ್ಖ್ಯವೊಂದೆ ಮತ; ಮದ್ದು ಕಾಣಿರೋ ಸರ್ವ ಕೊರತೆಗಳಿಗೆ!
ಬಾಲಲೀಲೆ ಆಬಾಲವೃದ್ಧರಿಗೆ ಗೌರವಾರ್ಹವಕ್ಕು;
ನಾಲಿಗೆ ಕೂಡಾ ಬಾಲದ ಲೀಲೆಯ ಹಿಡಿಯದಿರದು ನಕ್ಕು!

೮

ಉದರರಾಗ ಸಂಗೀತಸಾರಸುಧೆ ನನ್ನ ರಾಜ್ಯದಲ್ಲಿ,
ಅದನು ಮೀರುವಾದರ್ಶ ನಾದಲಯಕಿಲ್ಲ ತಾಣವಿಲ್ಲಿ;
ಜಾತಿಕಲಹ ಕೈವಲ್ಯವಾಯ್ತು, ತಾ ನಿಕಷ ಶೌರ್ಯದಲ್ಲಿ,
ಮಾತಿಗಲ್ಲೆ ಬಾಯ್ಹಾಕಿ ಬೊಗಳುವುದು ಭ್ರಾತೃಕಾರ್ಯವಿಲ್ಲಿ!

೯

ಮೂಳೆ ಮುರಿದು ನೆಣ ನೆಕ್ಕಿ ಸವಿಯುವುದು ಷಡ್ರಸಾನ್ನವಿಲ್ಲಿ,
ಕೂಳು ಸಿಕ್ಕದವರಳುವಗೋಳು ಜನಪದದ ಗೀತವಿಲ್ಲಿ;
ತೋಳುಗೊಬ್ಬಿನವ ನಡೆಸುವಂಥ ದರ್ಬಾರು ರಸ್ಯಮಾನ
ಹಾಳು ಮಾಡಿ ಉದ್ಧಾರವೆನ್ನುವುದು ನಿತ್ಯವಿದ್ಯಮಾನ!

೧೦

ಏರಂಡವೊಂದೆವೊಂದೆಂದು ಸಾರುವೆನು ಮಹಾವೃಕ್ಷವಿಲ್ಲಿ,
ನೀರುಳ್ಳಿಯೊಂದೆವೊಂದೆಂದು ಸಾರುವೆನು ಮಹಾಗಂಧದಲ್ಲಿ!
ನನ್ನೂರ ಕವಿಗಳೊದರಿದ್ದೆ ಪದ್ಯ; ಮತ್ತೆಲ್ಲ ವಧ್ಯ, ವಧ್ಯ;
ನನ್ನನ್ನು ಹೊಗಳಿ ಬರೆದದ್ದೆ ಹೃದ್ಯ; ಮಿಕ್ಕೆಲ್ಲ ಶುಷ್ಕ ಗದ್ಯ!

ಪಾರ್ಲಿಮೆಂಟು

ಸೇರಲಿಂದು ಸೇರಲಿಂದು
 ನಮ್ಮ ಪಾರ್ಲಿಮೆಂಟು;
ಆರು ಪಕ್ಷದವರ ಮೇಳ
 ನಮ್ಮಲ್ಲೇ ಉಂಟು!

ಸಿಹಿ ಪ್ರಿಯರ ಪಕ್ಷವೊಂದು;
 ಹುಳಿಪ್ರಿಯರದೊಂದು;
ಕಹಿ ಪ್ರಿಯರದಲ್ಪ ಸಂಖ್ಯ–
 ಖಾರದವರದೊಂದು!

ಉಪ್ಪಿನವರ ಪಕ್ಷಕೂಡ
 ಉಂಟು ಕೊಂಚ ದೊಡ್ಡದು;
ತಪ್ಪೇ ನೊಗರು–ಪ್ರಿಯರದು
 ಬಂದರೆ? ತಡೆಯೊಡ್ಡದು!

ಸೇರಲೆಮ್ಮ ಪಾರ್ಲಿಮೆಂಟು
 ನಿರ್ಣಯಿಸಲಿ ತಿಂಡಿಯ;
ಆರರ ಮೇಲೊಂದ ಹೇರಿ
 ಬಿಡುವ ನಮ್ಮ ಬಂಡಿಯ!

ಒಂದು ತಿಂಡಿ ಎಲ್ಲರಿಗೂ
 ಬಹುಮತ ಸರ್ವಮತ!
ಒಂದು ಮಾತು ಎಲ್ಲರಿಗೂ
 ಐಕ್ಯಕ್ಕಿದೆ ಸಂಮತ!

ಹೆಣ್–ಗಂಡುಗಳೆರಡಕ್ಕೂ
ಒಂದೆ ವೇಷ ಸಾಕು;
ಹೊನ್–ಮಣ್ಣುಗಳೆರಡರ ದರ
ಸಮವಾಗಲೆ ಬೇಕು!

ಅಣುಬಾಂಬಿನ ಯುಗದೊಳಿಂದು
ಬದುಕಬೇಕೊ? ಹೇಳಿ–
ತೃಣವೆಂದೊಗೆಯಿರಿ ಹಳೆಯದ;
ಹೊಸ ವಿಚಾರ ಕೇಳಿ!

ಬಹುಮತವನು ಸಂಘಟಿಸುವ
ಕಲೆಯ ಕಲಿಯಲೇಳಿ;
ಬಹುಮಾನವು ಬಹುಮತಕ್ಕೆ
ಪ್ರಜಾರಾಜ್ಯಕೇಳಿ!

ಹಂಚಿರಿ ಚಾಕ್ಲೇಟುಗಳನು
ಮತದಾನದ ಮುನ್ನ;
ಚಂಚಲಮತಿಗಳು ನಿಮಗೇ
ಕೊಡುವರು ಮತವನ್ನ!

ನನ್ನದಾವ ರಾಶಿ?

೧

ಕುರಿಗಳಿರುವ ವರೆಗೆ ತೋಳ
ಬರಲದೆಂತು ತಪ್ಪು?
ನರಿಗಳಿರುವ ವರೆಗೆ ನಾಯ
ದರ್ಪಕೆಲ್ಲಿ ಮುಪ್ಪು?

ದುಡಿದವರೂ ದುಡಿದುದನುಣ–
ವಡೆದಿರಬೇಕಲ್ಲಾ!
*"ದುಡಿ, ದುಡಿದುದ ಬಯಸದೆ" ಎಂ
ದೊಡೆಯನುಸಿರಲಿಲ್ಲಾ?

೨

ಆಡಳಿತ ವ್ಯಾಪಾರಕೆ
ಬಡವರ ತಲೆ ಬಂಡ;
ಕೋಡಗ ಮೆದುಳಿರುವ ಬುರುಡೆ
ತೆಂಗಿನ ಹೊಸ ಬೊಂಡ!

+ಶಕುಂತಲೆಯ ಹಿತವ ಸಾಕಿ–
ದಪ್ಪನೊಬ್ಬ ಬಲ್ಲ;
ಸಕಲರ ಹಿತ ನನಗಲ್ಲದೆ
ಅವರಿಗೆ ಗೊತ್ತಿಲ್ಲ!

---

* ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕವಾಚನ–ಗೀತಾ

\+ ಯದಿಚ್ಛಾಮಿ ತೇ ತದಸ್ತು–'ಶಾಕುಂತಲ'.

೩

ಹಸಿದವರಿಗೆ ಅವರ ಮುಷ್ಟಿ–
ಗಳನೆ ಬಾಯೊಳಿಕ್ಕಿ
ಹಸಿವಿಂಗಿಸಿ, ಉಂಡವರಿಗೆ
ಸುರಿವೆ ಚೆಲ್ಲಿ ಬಿಕ್ಕಿ!

ಲಕ್ಷಗಳನು ಹೋಳಿಮಾಡಿ
ಹಬ್ಬವನ್ನು ನಡೆಸುವೆ,
ಲಕ್ಷದಾತರರಿಗಳನ್ನು
ಬಿಗಿದು ಕಟ್ಟಿ ಕೆಡಹುವೆ!

೪

ಛಲವಂತರೆ ಯಶವಂತಿಕೆ–
ಗರ್ಹರೆಂದು ಗಳಹುವೆ,
ಛಲಹೀನರ ಕೈಬಾಯ್ಗಳ
*ವಿಧಿಯಿಂದೇ ಕಳೆಯುವೆ!

ಜಾತೀಯತೆಯನ್ನು ಬೈದು
ಜಾತೀಯರ ಕೂಡಿ–
ಬೇತುಮಾಡಿ ಮತಗಿಟ್ಟಿಸಿ
ಗೆಲುವುದೆನ್ನ ಮೋಡಿ!

೫

ರಾಜನೀತಿಯೇತಕಿಂಥ
ವೈರಾಜ್ಯಗಳಲ್ಲಿ?
ರಾಜದರ್ಪವಿರಲು ಸಾಕು
ನನ್ನ ಮಾತಿನಲ್ಲಿ!

---

* ಕಾಯಿದೆಯಿಂದಲೇ

ಮಾತೆ ನನ್ನ ಕಲ್ ಇಟ್ಟಿಗೆ;
    ಮಾತಿನ ಮನೆಕಟ್ಟಿ,
ಹೋತ ಜನರೆ ಹೊಗ್ಗಿರೆಂಬೆ
    ವಸತಿರಚನೆ ಬಿಟ್ಟೆ!

೬

*ಹಲಿಯ ಹಾಗೆ ಕೈಯನೆತ್ತಿ
    ಉತ್ತರನಂತೋಡುವೆ;
ಹುಲಿಯ ಹಾಗೆ ಗರ್ಜಿಸುತ್ತ
    ಇಲಿಯ ಹಾಗೆ ತೋಡುವೆ!

ಗಂಡಿನಂಥ ಉಡುಪ ಧರಿಸಿ
    ಹೆಣ್ಣಿನಂತೆ ಆಡುವೆ;
ಹೆಣ್ಣಿನಂಥ ಬೆಡಗಿನಿಂದ
    ಮಕ್ಕಳಂತೆ ಮಾಡುವೆ!

೭

ಭಾವಿಕರಿಗೆ ಭಾವ ನಾನು,
    ಜಾಣ ಜನರ ನೆಂಟ;
ನೋವ್ ಮಾಡದೆ ಹಲ್ಲುಗಳೆದು
    ಗಳಿಸಿ ಬಿಡುವೆ ಗಂಟ!

“ಜನಗಳಲ್ಲಿ ಎರಡೆ ರಾಶಿ–
    ವೃಷಭ ಮತ್ತು ಮೇಷ//
ಎನಿಸಿರೆ, ಹಾಯುವುದೆ ಧರ್ಮ–
    ಇದರೊಳಾವ ದೋಷ?

* ನೇಗಿಲಮಲ್ಲನಾದ ಬಲರಾಮ

ಆ

ನನ್ನ ಪಕ್ಷ ನನಗೆ ರೆಕ್ಕೆ,
ನಾನು ರೆಕ್ಕೆ ಪಕ್ಷಕೆ;
*ನನ್ನ ವಿಭಕ್ತಿಗಳು ಏಳು–
ತನ್ನಿರವನು ಲಕ್ಷ್ಯಕೆ!
ನಾನದಾವ ಪಕ್ಷದವನು?
ನನ್ನದಾವ ರಾಶಿ?
ಮೌನವೇಕೆ? ಹೇಳಿ; ಸೊಪ್ಪ
ಹಾಕುವೆ ಕೈ ಬೀಸಿ!

---

* ನಾನು, ನನ್ನನ್ನು, ನನ್ನಿಂದ ಇತ್ಯಾದಿ; ನಾನಿಲ್ಲದೆ ಏನೂ ಆಗದು ಎಂಬನು.

ಕ್ಷೋಭೆ

ಸತ್ತ ಕರುವನು ನೆಕ್ಕಿ ಹಾಲುಕೊಡುವೆಮ್ಮವೊಲು
ಸತ್ಪ್ರಜೆಗಳೊಲಿದು ಮಾಡುವರೆಂದು ತಿಳಿದು,
ಶುಷ್ಕ ಪ್ರಚಾರವನು ಮುಂದಿಡುವ ನಾಯಕರ
ದುಷ್ಕಲ್ಪನೆಯ ಕಂಡು ಹರನಂತೆ ಮುಳಿದು–
ಅಂತರಂಗಾಬ್ಧಿಯಲ್ಲೋಲ ಕಲ್ಲೋಲಗಳ
ಬೀಸುತಿದೆ ಜನ ರಾಷ್ಟ್ರದೆಲ್ಲೆಡೆಗಳಲ್ಲಿ!

ರಾಜಕೀಯದ ಪಾಪ ಸಾಹಿತ್ಯಕೂ ಅಂಟಿ
ವಿಕಟ ವಿಕ್ಷೇಪಗಳು ಹುಟ್ಟುತಿಹವು;
ಕಾಳ್ತೊಂಡೆ ಬೆಂಡೆಗಳ ಹಾಗೆ ಹೆಬ್ಬೊತ್ತಗೆಗ–
ಳಾಳ್ತನವ ಮತಿಯ ಹೊರಗೆಡಹುತಿಹವು!
ಶುಷ್ಕಸ್ತನಿಯ ಮಾತೃದೃಷ್ಟಿಯಿಂದಧಿಕೃತರು
ರಕ್ಷಿಸುವರಂಥ ದುಷ್ಕೃತರನೊಲಿದು!

ಇತಿಹಾಸಕಿಂದು ದುರ್ವಾಸ ಕೊಟ್ಟೀ ಶಾಪ
ಪಾಪದ ಪ್ರಾಬಲ್ಯಕಾಯ್ತು ಧೂಪ!
ಪಣ್ಯಪುಣ್ಯ ಪ್ರಕಾಶಕರ ನೇತೃತ್ವದಲಿ
ಕನ್ನಡೋದ್ಧಾರಕ್ಕೆ ವಿಷದ ಲೇಪ!
ಯಾವುದೋ ಕಾಲದಲ್ಲಿದ್ದ ವಿಭವದ ನೆನಹ
ಚಪ್ಪರಿಸಿ ಸಪ್ಪೆಬಾಳ್ ನೀಗಬೇಕೇ?
ಕಾಲರಾಯನ ಕಾಲಿನಡಿ ಬಿದ್ದು ನರಳುತಿಹ
ಸತ್ವವಂತಗೆ ಕಣ್ಣುಮುಗಿಯಬೇಕೇ?

ಕಡಲೊಡಲ ಕಸವಿಸಿಯ ಕಂಡು ಹೆದರುವುದೇಕೆ?
ಜಡದ ಜಂಜಾಟವದು; ಕ್ರೂರಜೀವಸ್ತೋಮ
ಪಡೆದಾಳುತಿಹುದು ಸರ್ವಾತಿರಿಕ್ತ ಅಸಹ್ಯ;
ಬಸವರನು ವಂಚಿಸುವ ಔದರ್ಯನಾಟಕವ
ನಡೆಯಿಸುವ ಶತಮಾನಗಳ ಸೊಕ್ಕು ಬೆಂಕಿವೊಲ್
ಸುಡುವುದಂಗಾಂಗಗಳ; ನೆತ್ತರಿನ ಕಣವೆಲ್ಲ
ಕುದಿದು ಕೇಕೇ ಹಾಕುವುವು; ಜಗತ್ಕರ್ತೃವಿನ
ಬುಡವನಲ್ಲಾಡಿಸುವ ಸಿಡಿಲಾಗಿ ಸಿಡಿಯುವುವು!

ನಾನೆಂಬ ನೆನಪು ತಾನಾಗಿ ತಲೆದೋರಿರಲು
ಹೀನ ತಾನದರಿಂದ ಎನ್ನಲೇಕೆ ಮನುಷ್ಯ?
ತಾನಲ್ಲವಾಗಲತಿ ಯತ್ನ ಮಾಡೆಂಬ ದಿ-
ವ್ಯಾನಂದ-ಮಾಯೋಪದೇಶಕರ ಬಲೆಗೆ ಬಿ-
ದ್ದೇನೆಲ್ಲ ಅನುಭವಿಸಿತೀ ದರಿದ್ರಸಮೂಹ!
ರೌದ್ರವೊಂದೇ ಸ್ವಾದುರಸ, ಕರುಣವಲ್ಲ ನಿ-
ರ್ಭಾಗ್ಯರಿಗೆ-ಕಣ್ತೆರೆದು ನೋಡದವಿಮುಗ್ಧರಿಗೆ
ಭಾಗ್ಯವಂತರ ಕೃಪೋಚ್ಛಿಷ್ಟಜಲದಭಿಷೇಕ-
ಯೋಗದಮಲಾತ್ಮವಂಚನೆ ಯತಿಮತಪ್ರಚುರ;
ಭೋಗಚೋರರ ಮಾಂಸಸವಂವರ್ಧನೋದ್ಯಮಕೆ
ಬಾಗುವುದು ಮೋಕ್ಷವೇ-ದಿವ್ಯಾನುಭೂತಿಯೇ?
ಹೋಗು ಹೋಗೋ ಹುಚ್ಚ ಲುಚ್ಚ ಉಚ್ಚ!

ವೇದಾಂತದಿಂದ ವಾದಾಂತವಾಗಿಲ್ಲ; ನಿರ್-
ವೇದೋಪಗೂಢ ಪ್ರಬೋಧವೂ ಪ್ರೌಢವೇ?
ಶ್ರೀದೇವರೆಂದು ಶೂನ್ಯವ ಭಜಿಸುತಿದ್ದ ದುರ್-
ಬೋಧಹತಮಾನಸರ ಕಂಡು ಮನ ಮರುಗಿ ಈ-
ರೈದು ಬಾಯ್ಗಳ ತಾಳಿ ಗರ್ಜಿಸುವುದಿದೊ ಕೇಳಿ-
ಹೋದಲ್ಲಿ ನಿಂತೆದುರು ಸಾಮಾನ್ಯರ!

ರಸಯಜ್ಞ

I

ಕುದಿವ ಕಬ್ಬಿನ ಹಾಲು ಉಕ್ಕುತಿದೆ ಸೊಕ್ಕುತಿದೆ
ಗುಳುಗುಳನೆ ನೊರೆಯೆದ್ದು ಉಬ್ಬುತಿದೆ ಹಬ್ಬುತಿದೆ;
ಬೆಂಕಿಯಂತದರಾವಿ ಏರುತಿದೆ ಹಾರುತಿದೆ
ಕೊಪ್ಪರಿಗೆ ಹೊಟ್ಟೆಯಿಂದೇಳುತಿದೆ ಬೀಳುತಿದೆ!
ಹೊಟ್ಟೆನೋಯುತ್ತಿಹುದು ಕೊಪ್ಪರಿಗೆಗೀ ಹೊತ್ತು
ಪ್ರಾಮಾಣಿಕ ಪ್ರಜೆಯ ಮಿದುಳಾಲಿಮನೆಯಲ್ಲಿ!
ಏಕೆಂದು ಗೊತ್ತೇನು?

ಬಾನಿಗಳೊಳತ್ತ ಕಡೆ ಕೊಳೆಯುತಿದೆ ಹುಳಿಯುತಿದೆ
ಗೊಬ್ಬರದ ರಾಜ್ಯದಲಿ ತೆಂಗು–ಬೆಲ್ಲಗಳ ರಸ–
ರಂಭಾಫಲಗಳ, ಭತ್ತದ, ಗೋವೆಹಣ್ಣುಗಳ
ಸಾರ ಸಹ ಹುಳುವಾಗಿ ನೊಳವಾಗಿ ನಾರುತಿದೆ!
ಪಾತಾಳದಲಿ ರಸಾಯನಶಾಸ್ತ್ರ ಒಸರುತಿದೆ
ಕುದಿಸಿ, ಗಾಳಿಸಿ, ಹನಿಸಿ ಸೋಮತ್ವಕೇರುತಿದೆ;
ಬಡವರಿಗೆ ಸಗ್ಗವನ್ನಗ್ಗಕ್ಕೆ ಕೊಡಿಸುತಿದೆ–
ಅಧಿಕಾರಿವೇಷದಲಿ ಬಂದರಷ್ಟೇ ಸಾಕು!
ಸೋಮಯಾಗವಿದಲ್ತೆ?

ದಕ್ಷಿಣೆಯ ಕೈತುಂಬ ಪಡೆದ ಋಷಿಗಳು ಹಿಂದೆ
ಮಾಡಿಸುತ್ತಿದ್ದುದೀ ಯಾಗವನೆ–ಅಲ್ಲವೇ?
ಇಂದ್ರಾದಿ ದೇವರ್ಕಳಿಗೆ ಪಾಲು ಮೊದಲಿತ್ತು;
ರಸಸಮಾಧಿಯ ಸಿದ್ಧಿ ಯಜಮಾನಗಲ್ಲಿತ್ತು!
"ಶಂ ನೋ ಭವ ಹೃದ ಆಪೀತ ಇಂದೋ"

ಅಮರತ್ವ ಕಲ್ಲಿಂದ ಮೂರು ಗೇಣಿರುತಿತ್ತು;
ಮರವಾನಿಸರ ಲೋಕವನ್ನು ಮರೆಯಿಸುತಿತ್ತು
ಕುಡಿದ ಇನಿವನಿದುಂಬಿದಂಥ ಬಟ್ಟಲು! ಆದೀ
ಗುಡಿಲುಗುಡಿಲುಗಳಲ್ಲಿ ಕಾಣಬರುತಿದೆ ಬಹಳ!
ಕಾಯದೆಯ ಚಾಲಕರ ಮಿದುಳೊಂದು ಕೊಪ್ಪರಿಗೆ
ಅಲ್ಲಿ ಹುಟ್ಟಿದ ಹಬೆ ಹಠಾತ್ತಾಗಿ ಹಳ್ಳಿಗಳ
ಚೆಲ್ಲಗಾರರ ಮಿದುಳ ಹೊಕ್ಕು ಹೊಸ ರಸಯಜ್ಞ
ಕಿಲ್ಲಿಂಬನೊದಗಿಸಿದೆ; ಪಟ್ಟಣಗಳಲ್ಲಿ ಸಹ
ಚೆಲ್ಲಿ ಸೂಸುಗು ರಾತ್ರಿಯಲ್ಲಿ; ಮೋಹನದಾಸ
ಬಲ್ಲನೇನೀ ಸ್ವತಂತ್ರೋದ್ಯಮದ ವೈಭವವ?
“ಸೋಮಂ ಪೀತ್ವಾ ರಸೋ ಭವ”

II

“ಸುಖೀರಾಜ್ಯ”ದಲ್ಲಿ ರಸೋಲ್ಲಾಸ ಬಹಳ ಜನರಿಗೆ
ದುಃಖಿಯೊಬ್ಬ ಮಿದುಳುಳ್ಳವ ರಸಸ್ಪರ್ಶವಾಗದ;
ರಸವಾರಿದ ಒಣಕಬ್ಬಿನ ಸಿಪ್ಪೆಯಾಗಿ ಬಾಳುವ,
ಅಧರ್ಮವನ್ನನುದಿನವೂ ವಿಧಿಯಿಲ್ಲದೆ ತಾಳುವ!

ತಪ್ಪಿನ ಸರಿ ಅಥವಾ ಮುದ್ದು ತಪ್ಪು

೧

ಓಃ ಓಃ ನನ್ನ ತಪ್ಪೆ,
ಈಃ ಬ್ರಹ್ಮನಪ್ಪಿದಪ್ಪೆ,
ದಿವ್ಯದೊಂದು ದೊಡ್ಡ ತೊಪ್ಪೆ,
ಸರಸ್ವತಿಯ ಸವತಿಯೆ!

ಆಃಬ್ರಹ್ಮನಂತೆ ನಾನು
ನಿನ್ನ ಹಡೆದು ಮದುವೆಯಾದೆ;
ನೀನೆ ಸುತೆ, ನೀನೆ ಸತಿ,
ಸೌಂದರ್ಯದ ದವತಿಯೇ!

ನನ್ನ ಪೆನ್ನನದ್ದಿ ಅದ್ದಿ
ಬರೆದೆ ಬರೆದೆ ಬರೆದೆ ಬರೆದೆ;
ಏನು ಮಸಿ, ಎಂಥ ಬಿಸಿ,
ಭಾವದೀಪ್ತಿ ಬರಲು ಸುಪ್ತಿ
ಮತಿಯ ಪೂರ ಹಿಡಿಯಿತು!
ಏನೊಯೇನೋ ನಡೆಯಿತು!

೨

ಈಃ ನನ್ನ ತಪ್ಪನಂದು
ಆದಿಶಕ್ತಿ ಆದಿಮಾಯೆ
ಎಂದರಲ್ತೆರಿಸಿಗಳು!
ಜಗತ್ಕರ್ತ ಸತ್ವರಜ–

ಸ್ತಮಸ್ಸುಗಳ ಕಲಕಿದಾಗ
ನನ್ನ ಕಂಡು ನನ್ನಿಂದಲೆ
ಹುಟ್ಟಿಬಂದ ರೂಪಸಿ–
ಪ್ರಕೃತಿಯೆಂಬ ಪ್ರೇಯಸಿ!

೩

ಆದಿಯಂಥ ತಮಸ್ಸೆಂದ–
ರಿದೇ ತಪ್ಪು ತೀರ ಕಪ್ಪು;
ಅದರಿಂದಲೆ ಎತ್ತಿ ಬರೆಯೆ
ಹುಟ್ಟಿ ಬಂದಿತೀ ಜಗ–
ಕಲಾವಂತನುಜ್ಜುಗ!

ಬೊಮ್ಮನಾಗಿ ಬ್ರಹ್ಮನನ್ನು
ತದ್ಭವಿಸಿದ ಹಾಗೆ ಸಾಗಿ
ಒಂದಕೊಂದು ಅಕ್ಕರಗಳ
ಗಲಿಬಿಲಿಸಿತು ನೋಡಲು–
ವಕ್ರಿಮೆ ತಾ ಮೂಡಲು!

೪

ಅರ್ಧಚಂದ್ರನಂತೆ ನನ್ನ
ಮುದ್ದು ತಪ್ಪು ಹೊಗೆಯ ಸೊಪ್ಪು!
ಹೆತ್ತ ನನ್ನ ಹೆಗ್ಗಣವೇ–
"ಎಣ್ಣೆ, ಬೆಣ್ಣೆ, ಡೊಣ್ಣೆ"ಯಾಗಿ
ಎತ್ವವನ್ನು ನುಂಗಿರುವೆ;

"ಟೆಂಗು, ಡೋಣಿ"ಯಾಗಿ ದಂತ್ಯ
ದಕ್ಕರಗಳ ಕಬಳಿಸಿಹೆ!
"ಉಚ್ಚಾರಣೆ"ಯಾಗಿ ಮಹಾ
ಪ್ರಾಣಗೊಂಡು ಮೆರೆದಿರುವೆ;

ಹೆಸರು ಬರೆಯುವಾಗ ಸಹ
“ಹನುಮಂತ”ನ ತೆಗೆದು ನೀನು
“ಹಣಮಂತ”ನ ಮಾಡಿಹೆ–
ಮೂರ್ಧನ್ಯದಿ ಮೂಡಿಹೆ!

೫

ತಪ್ಪಿಲ್ಲದೆ ಲೋಕವಿಲ್ಲ,
ತಪ್ಪೆಂಬುದಪೂರ್ಣ ರೂಪ;
ಪೂರ್ಣವೆನಲು ದೊಡ್ಡ ಸೊನ್ನೆ–
ಆऽದರ್ಶವೇನು ಚೆನ್ನೆ?
ವಾಸ್ತವತೆಯ ಮುದ್ದು ಕನ್ನೆ
ತಪ್ಪೆ ತಮಃಸುಂದರಿ!

ಸುರಿ, ಹರಿ, ಚೆಲ್ಲವರಿ,
ಪುಸ್ತಕದಲಿ ಹರಡಿ ಸರಿ;
ಬಿಳಿ ಕಾಗದವಿಲ್ಲದಂತೆ
ಎಲ್ಲವನ್ನು ಕಪ್ಪು ಮಾಡು–
ನನ್ನ ಮುದ್ದು ಕಾಳಿಯೇ,
ಸ್ಖಲದ್ಗತಿಯ ದಾಳಿಯೇ!

ಮೇಷ್ಟ್ರು ಪಂಡಿತರುಗಳೆದೆಯ
ಮುಚ್ಚಿಬಿಡುವ ಧೂಳಿಯೇ,
ಇಲ್ಲ ಬರಿಯ ಹಾಳಿಯೇ–
ಎನಿಸು ಮಾರ್ಜಿನಲ್ಲಿಯೂ
ಹರಿದು ಕೆಳಗು ಮೇಲೆಯೂ!

೬

ಮುಗಿಲಿನಲ್ಲಿ ಬೀಡು ಬಿಟ್ಟೆ
ಕಾರ್ಗತ್ತಲೆ ಕಣ್ಣಮಣಿ,
ನನ್ನ ಮೆದುಳಿನಲ್ಲಿ ಕುಣಿ,
ಹಸ್ತದಲ್ಲಿ ಹರಿದು ತಣಿ–
ಪೆನ್ನು ಹಿಡಿದು ಬರೆದು ದಣಿ!

ಪರೀಕ್ಷಕರ ತಲೆಯ ಕೆಡಿಸಿ,
ನಿರೀಕ್ಷಕರ ನೆಲೆಯ ಬಿಡಿಸಿ,
ನಾಪಾಸಿನ ವರವ ಕೊಡು–

ಸೋಮಾರಿಗಳರಸಿಯೇ,
ಉಂಡಾಡಿಗಳೊಪ್ಪವೇ,
ಗುರುವಿಗೀವ ಕಪ್ಪವೇ!

ಕಳ್ಳಭಟ್ಟಿ ಶಿಷ್ಯರನ್ನು ಬೀಳ್ಕೊಡುವಾಗ

ನೀವೆಲ್ಲಿ ಹೋದರೂ ಒಂದೆ ಜಾತಿ ಓ ಕಳ್ಳಭಟ್ಟಿಯವರೇ
ನೋಟ್ಸುಗಳ ತೂರಿ ಗೈಡುಗಳ ಕಾರಿ ಪಾಸನ್ನು ಮಾಡಿದವರೇ ॥ಪ॥

ಹಾದಿಬೀದಿಯಲೆದಾಡಿ ಕಾಡಿ ಸಂಗಾಡಿಗಳನು ಕರೆದು
ಹೋದ ಹೋದ ಕಡೆ ಕುಡಿದು ತಿಂದು ಉಂಡಾಡಿತನವ ಮೆರೆದು।
ಓದು ನೂರು ಹರದಾರಿಯಾಚೆ ಎಂದೋಡಿ ಬಂದ ಸುರರೇ
ಬಯ್ದು ಬಡಿದು ನಕ್ಕಾಡಿ ಹಾಡಿ ಕಾಲವನು ಕೊಂದ ಹರರೇ॥ ॥೧॥

ನನ್ನ ನಚ್ಚಿನರೆಗಲಿಕೆಯಾಳುಗಳೆ ಪಾಠ ಹೇಳಿ ಹೇಳಿ
ಬೆಣ್ಣೆಯಂಥ ಆ ನಿಮ್ಮ ಮಿದುಳ ನೋಯಿಸಿದೆ ಪ್ರಶ್ನೆ ಕೇಳಿ
ಗುಲ್ಲುಗಾರರೇ ಗೊರಕೆಯೊಡೆಯರೇ ಗುಳ್ಳಗಲ್ಲದವರೇ
ಅಲ್ಲದಹುದು ಎಂಬೆಲ್ಲವನ್ನು ಮರೆದೇಳಿ ಹರೆಯದವರೇ॥ ॥೨॥

ಬಲು ದೊಡ್ಡ ದೊಡ್ಡ ಹೊತ್ತಗೆಗಳನ್ನು ನಿಮ್ಮೆದುರು ಹೆಸರಿಸಿದೆನು
ಕಲು ಗುಡ್ಡದಂಥ ಶಬ್ದಗಳ ತೂರಿ ನಿಮ್ಮಗಳ ಹೆದರಿಸಿದೆನು।
ಅಲುಗಾಡದಂತೆ ಕುಳಿತೆಲ್ಲ ಲಕ್ಷ್ಯವನು ಬೇರೆ ಕಡೆಗೆ ಹಾಕಿ
ಕಲಿಕಾಲ ನೀಲಕಂಠಂದಿರಾದವರೆ ಬಿಟ್ಟೆ ನಿಮ್ಮ ಸಾಕಿ॥ ॥೩॥

ಎಂಟು ದಿಕ್ಕು ಸಾಕಾಗದೆಂಬವೊಲು ಹಾರಿನಡೆಯಿರಿನ್ನು
ಗಂಟು ಮಾಡಲೆಲ್ಲುಂಟು ನೌಕರಿಗಳೆಂದು ದೃಷ್ಟಿಯನ್ನು!
ನೆಂಟರಿದ್ದ ಕಡೆಯೆಲ್ಲ ಬೀರಿ ಮೇಣ್ ಗಂಟು ಹಾಕಿಕೊಂಡು
ಒಂಟಿ ಹೋಗಿ ಎರಡಾಗಿ ಸಾಗಿರೋ ತಲೆಯ ತುರಿಸಿಕೊಂಡು ॥೪॥

ಉದರನೀತಿ ಹಿಡಿಯಿರಿ ಉದಾರತೆಯ ತೋರಿರಲ್ಲಿ ನಿತ್ಯ
ಸದರ ಮೀನುಗಳ ನುಂಗಿ ದೊಡ್ಡ ಮೀನ್ ಬೆಳೆವುದೆಂಬ ಸತ್ಯ।
ಕದಲದಿರಲಿ ಎದೆಯಲ್ಲಿ ಸಕಲ ಕೌಟಿಲ್ಯತಂತ್ರದಿಂದ
ಸಧನರಾಗಿ ಮೊಗ ಮಿನುಗಿಸುತ್ತ ತಿರುಗುವುದು ನಿಮಗೆ ಚೆಂದ॥ ॥೫॥

ಕಳಬೇಡಿರಣ್ಣ ಕೊಲಬೇಡಿರಣ್ಣ ಪೋಲೀಸ ಕಾಂಬ ಹಾಗೆ
ನಿಲ ಬೇಡಿರಣ್ಣ ನಿಂತಲ್ಲಿ ಲಂಚವನು ಜೇಬಿಗಿಟ್ಟ ಮೇಗೆ
ಹಲ ಮಾತನಾಡಿ ವಾದಕ್ಕೆ ಸಿಲುಕದಿರಿ ಬುದ್ಧಿವಂತರಲ್ಲಿ
ಹುಲು ಶೀಲವಂತಿಕೆಗೆ ಸಿಲುಕಬೇಡಿ ಈ ಸುಳ್ಳು ಬದುಕಿನಲ್ಲಿ॥ ॥೬॥

ಅವರಿವರು ನಕ್ಕಕಡೆ ನಕ್ಕು ಬೈದಕಡೆ ಬೈದು ಗೇಲಿ ಮಾಡಿ
ಅವರಿವರ ಮಾತನುರುಹೊಡೆದು ಭಾಷಣಿಸಿ ಜನತೆಯೊಲವ ನೋಡಿ।
ಅವರಷ್ಟಕವರು ನಮಗಷ್ಟೆ ನಾವು ಎಂಬುಚ್ಚಧೋರಣದಲಿ
ಅವರಿವರಹಾಗೆ ಉಂಡಾಡಿ ಬಾಳಿರೋ ರಾಜಕಾರಣದಲಿ॥ ॥೭॥

ಉಳಿವೆ ನಾನು ಹೊತ್ತಗೆಯ ಹೊಂಡದಲಿ ಮತ್ತೆ ಮತ್ತೆ ಬರುವ
ಎಳೆಯರೆದುರು ಉಸಿರನ್ನು ಖರ್ಚುಮಾಡುತ್ತ ರೊಕ್ಕ ತೆರುವ।
ಹಳೆಯ ತಂದೆತಾಯಿಗಳ ನಂಬಿಸುವ ಹಗಲುವೇಷದಲ್ಲಿ
ಮಳಲಿನಿಂದ ತೈಲವನು ತೆಗೆವ ಈ ವ್ಯರ್ಥಯತ್ನದಲ್ಲಿ॥ ॥೮॥

ಹಣ ಪ್ರಪಂಚ*

ನಾಣ್ಯ ೧

ಕಾಮರ್ಸಿನಿಂದಲೇ ಕಾವ್ಯಗಳ ಸಿದ್ಧಿ ಕೇಳ್
ಮಾಯಾಘಟೋತ್ಕಚರು ನರರೆಲ್ಲ ಮಗುವೆ; ಆ
ನಂಬುಗೆಯ ಹಂಬುಗೆಯ ಹೃದ್ ಭೂಮಿಯಂ ಕಿತ್ತು
ಹಂಬಲಾಚೆಗೆ ಎಸೆದು ಬಾ ನನ್ನ ಅಂಗಡಿಗೆ–
ಮಾತಿನಲಿ ಪಾರದದ ಚುರುಕು ನನ್ನದು, ನನ್ನ
ಸ್ಟೇಶನರಿ ವೈವಿಧ್ಯವದಕೆ ಸಮ: ಕತ್ತರಿಯ
ಚಿತ್ತ, ಚಾಕುವಿನಷ್ಟು ಸೂಜಿವೊಲ್ ಸೂಕ್ಷ್ಮಮತಿ
ಹೊಕ್ಕು ವಿಕ್ರಯಿಯ ಹೃತ್ಕುಸುಮೋದರದ ಬುಡವ
ಲೆಕ್ಕಿಸುಗು ಪಟಲ–ಕೇಸರ–ಪರಾಗ ಪ್ರಕರ–
ವೆಷ್ಟೆಂದು ನಿಮಿಷಾರ್ಧದಲ್ಲರ್ಥವೇದದ ರ–
ಹಸ್ಯ ದರ್ಶನ ಪಡೆದು ನನ್ನೆದುರು ಕೊಂಬಾತ
ಚಿಕ್ಕಮಗು, ಹೆಮ್ಮಾರಿಯೆಡೆಗೆಸೆದ ಮೂಕ ಪಶು!
ಮಾರಬಾರದ ವಸ್ತುವೆಂಬುದೆನಗುಂಟೇನು?
ಮಾತುಕತೆ, ನಗೆ–ನಮನ, ದಾನ–ದಯೆ, ದಾಕ್ಷಿಣ್ಯ,
ವೇದ ವಾದ ವಿನೋದ, ವಿಜ್ಞಾನ ವಿಷಯರತಿ–
ಎಲ್ಲವೂ ವಿಕ್ರೇಯ ಪಣ್ಯತನಪುಣ್ಯರಿಗೆ!
ದೇವ–ದಾನವರ ಮಾರಿಯೆ ಪುರಾಣಿಕ ತನ್ನ
ಜೀವಿತವ ಹೊರೆದುಕೊಂಡಿಲ್ಲವೇ? ಶಾಸ್ತ್ರದಲಿ
ಕೋವಿದನು ಘಟಪಟಾದಿಗಳ ಪಠಿಸಿಯೆ ನಿತ್ಯ

* ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಥವಾ ಮುಷೈರದಲ್ಲಿ ಹಾಡಿದುದು.

ಜೀವಿಸನೆ? ಕವಿ ಗಮಕಿ ವಾದಿ ವಾಗ್ಮಿಗಳೆಲ್ಲ
ಸಾವಿರವನಾಡಿ ಸಾವನಕ ಗಳಿಸರೆ ಜಗದ
ಭಾವಿಕರಿಗಿತ್ತು ಬರಿ ರೂಪಕೋಪಮೆ, ಕುರುಡು
ರಾಗ, ಕುತ್ಸಿತ ತರ್ಕ, ಕುವಿಚಾರದೊಡವೆಗಳ?
ನಿತ್ಯಮುಕ್ತೈದೆ ಜಡಕಾಯವಷ್ಟೇ ಮಾರಿ
ತುತ್ತಿಗೆಡೆಮಾಡಿಕೊಂಡರೆ ಹೆಚ್ಚಿಗೆಯದೇನು?
ಮಾರಲಿದೆ ಷಟ್ಕರಣ; ಕಾಯ, ಕಾರ್ಯಗಳೊಡನೆ
ಹೃದ್ವಿಪಣಿಯಲ್ಲಿಟ್ಟ ಕೆಲಸಕ್ಕೆ ಬರದಾತ್ಮ–
ವೆಂಬ ಸಪ್ತಮ ಪದಾರ್ಥವು ಕೂಡ–ಮತ್ತೇನು?
ಕನಕವೆಲ್ಲವ ಕೊಂಬುದೆಂಬುದಾದರೆ ನಾನು
ಕನಕವನ್ನೇ ಕೊಂಬ ಕಲಿ ವೀರ ಕಾಣಯ್ಯ!
ನಾನೆಂಬ ಸುಪ್ರಿಯ ಪದಾರ್ಥವೊಂದನು ಮಾತ್ರ
ನಿತ್ಯ ಬ್ಯಾಂಕಿನ ಲೆಕ್ಕಪತ್ರಗಳ ನಡುವಿಟ್ಟು
ಕಪಟ ಕಾರ್ಕೂನನಾರಯಿಕೆಯಲಿ ಪೋಷಿಸುವೆ!
ಕನಕ ಕೊಡುವವನೆನ್ನ ಶುನಕನೆಂದರು ಸರಿಯೆ:
ಗುಣ ಮಾರಿಕೊಂಡವಗೆ ಗೌರವದ ಗೊಡವೆಯೇ?
ಆ ದ್ವಂದ್ವವನು ಮೀರಿ ನಿಂತ ಕನಕಬ್ರಹ್ಮ
ನಾನನಿರ್ವಚನೀಯನವ್ಯಕ್ತಲಾಭದೃಕ್!
ವೇಶ್ಯೆಯೇಕಾರ ಗುಣ, ವೈಶ್ಯನೈಕಾರ ಧನ;
ವೃದ್ಧಿ ಸಂಧಿಯಿದಕ್ಕೆ–ಮೋಹೇಶ್ವರೀ ಸೂತ್ರ–
ಪಾಣಿ–ಪಾಣಿನಿಪಾಲನೀಯವಾಗಿದೆ, ಮಗುವೆ–
ಅರಿತು ಅರಗಿಸಿಕೊಳದೆ ಬಾಳಿದರದೇಂ ಸೊಗವೆ?

ನಾಣ್ಯ ೨

ಮುನ್ನೂರ ಮೂವತ್ತು ಪುಸ್ತಕದಿ ಹಣದೊಟ್ಟ ಬರೆದಿಟ್ಟ ನಾ ಕುಬೇರ!
ಹನ್ನೆರಡು ಬ್ಯಾಂಕಿನಲ್ಲಸಲು ಕೋಟಿಯನುಳಿಸಿ ಬಿಟ್ಟಿರುವೆ ನನ್ನ ಬೇರ!!

ದಲ್ಲಾಲಗಿರಿ ಹಿಡಿದು ಗೋಣಿಚೀಲಗಳಲ್ಲಿ ಅಳೆದ ನೋಟುಗಳ ಲೆಕ್ಕ
ಬಲ್ಲವರೆ ಬಲ್ಲರೋ ಬಡವರಾ ಬಡತಲೆಯ ಹಿಡಿಸೀತೆ ಅಷ್ಟು ರೊಕ್ಕ?
ಈವೂರ ಕಲ್ಲುಗಳನೆಲ್ಲವನ್ನೂ ಎಣಿಸಿ ಲಾರಿಗಳ ಮೇಲೆ ಹೇರಿ
ನೀವೀಗ ನೂರುಸಲ ರಾಶಿಹಾಕಿದರೊಮ್ಮೆ ಅಂದಾಜು ಮಾಡಲಿಹಿರಿ!
ಹತ್ತಾರು ಗಿರಣಿಗಳು ಮತ್ತಾರು ಕಾರ್ಖಾನೆ ಸುತ್ತೆಂಟು ಷಾಪು ಹಾಕಿ
ಕತ್ತು ಬಗ್ಗಿಸಿ ದುಡಿವ ಕೂಲಿಕೋಟೆಯನಿರಿಸಿ ಮೆತ್ತೆಯಲಿ ಕಾಲು ನೂಕಿ
ಹೊತ್ತು ಹೊತ್ತಿಗೆ ಕಾರು ಹತ್ತಿ ಹನ್ನೆರಡೂರ ಮತ್ತೆ ತಿರುಗಾಡಿ ಬಂದು
ಗುತ್ತಿಗೆಯ ಹಿಡಿದೆನು ಧರಿತ್ರಿಯಲ್ಲಿಹ ಸಕಲ ವಸ್ತುಗಳ ಕೊಂಡು ತಂದು

ರಾಜ ಪುರುಷರ ಹಿಡಿದು ಕೈಬಿಸಿಯ ಮಾಡಿಸಲು ಲಕ್ಷವೂ ಲಕ್ಷ್ಯವೇನು?
ವ್ಯಾಜಾಂತರವನೊಡ್ಡಿ ಕಂಪೆನಿಯ ಕಬಳಿಸದೆ ಗಳಿಸುವುದು ಶಕ್ಯವೇನು?
ಕಳ್ಳಮಾಲುಗಳಿರಲಿ ಸುಳ್ಳುಮಾಲುಗಳಿರಲಿ ದಲ್ಲಾಲಗೇನು ಚಿಂತೆ?
ಒಳ್ಳಿದರೊ ಕೆಟ್ಟವರೊ ನೋಡುವೆನೆ? ನಾಮವನು ಹಚ್ಚುವುದೆ ಕಾಯ್ದೆಯಂತೆ

ನೂರು ಜನ ಗಾವಿಲರು ನೂರುವರ್ಷದ ಕಾಲ ಹಗಲಿರುಳು ದುಡಿದರೂನೂ
ಈ ರಾಯನೊಂದು ದಿನದೆಲೆಯಡಕೆ ಖರ್ಚಿಗದು ಸಾಲದೋ ಸಾಲದೇನೂ
ನೂರುಗೋದಿಯ ಚೀಲ ನಾರಿದರೆ ನದಿಗೆಸೆವೆ ನನ್ನ ಗಂಟೇನು ಹೋಯ್ತು?
ಊರ ಜನ ಉಂಡರೇನುಣದಿದ್ದರೇನೆನಗೆ ಹಣ ಮಾತ್ರ ಬಂದರಾಯ್ತು;

ಹಕ್ಕುದಾರಿಕೆಗಾಗಿ ಹೊಡೆದಾಡುವರ ಕಂಡು ನಕ್ಕೆ ಬಾಯ್ತುಂಬ ನೋಡಿ
ನೆಕ್ಕುವುವು ಹಕ್ಕುಗಳು ಪಾದರಕ್ಷೆಯನೆನ್ನ ಲೆಕ್ಕವಿರದಷ್ಟು ಕೂಡಿ;
ಮುಕ್ಕಾಲು ಸೇರನ್ನು ಸೇರೆಂದು ಮಾರುವುದ ಚಿಕ್ಕಂದಿನಲ್ಲೆ ಹಿಡಿದು
ರೊಕ್ಕವನಮೇರಿಕದ ಬ್ಯಾಂಕಿನಲಿ ಬೆಳೆಸುತಿಹೆ ಚೆಕ್ಕುಗಳರಾಶಿ ಪಡೆದು!

ನಾಕುದೇಶವ ಕೊಂಬ ಠಾಕು ಠೀಕಿನ ಮಾತೆ ನಾಗರಿಕ, ಶುದ್ಧ ನನಗೆ
ವ್ಯಾಕರಣದಲಿ ಬರೆದ ಶುಷ್ಕಪದಪಂಕ್ತಿಗಳು ಯಾತಕೂ ಬಾರದವಗೆ!
ನನ್ನ ಮನೆ ಹೆಂಗಸರು ಹೊತ್ತ ಚಿನ್ನದ ಹೊರೆಯೆ ಹೇಳುತಿದೆ ನನ್ನ ಬೆಲೆಯ
ಇನ್ನಾವ ಕವಿ ಬೇಕು? ಬಣ್ಣಿಸಲು ಬಂದರವಮಾಳ್ಪನಕ್ಷರದ ಕೊಲೆಯ!

ದಿಲ್ಲೀಶ್ವರ–ದಿನಚರಿ ಅಥವಾ ದಿವ್ಯ ಜೀವನ

೧

ರಾತ್ರಿಯ ರಾಣಿಯ ಹೂವಿನ ಸೌಸವ ಹರಹಿದ ಹಂದರದಲಿ ಕುಳಿತಿದ್ದೆವು,
ಧಾತ್ರಿಯರಿಕ್ಕಡೆ ಕೇಳಿದ್ದನು ತರಲೆಂದೇ ಕಾದಿರೆ ಹಾಯಾಗಿದ್ದೆವು;
ಫ್ರಾನ್ಸಿನ ಗುಲಾಬಿ, ಲಂಡನ್ ಜಸ್ಮೈನ್, ರೋಮಿನ ಕ್ರಿಸ್‌ಮಸ್ ಫ್ಲವರ್ ಬಂಚಿದ್ದವು–
ಹಾಲೀವುಡ್ಡಿನ ಜಾಲೀ ಸಾಂಗ್ಸಿನ ಮೆಲೋಡಿ ಕಿವಿಗಳ ಹಾಯುತ್ತಿದ್ದವು!
ರಾಣೀ ಸಾಹೇಬ್ ಹುಸಿಯೆಂದೆನಿಸುವ ನಿಜ ಮುನಿಸನ್ನು ಪ್ರದರ್ಶಿಸುತ್ತಿದ್ದಳು,
ಅವಳುಟ್ಟಿದ್ದೆಪ್ಪತ್ತೈದ್ ಪೌಂಡಿನ ವಾಯ್ಲಿನ ಸೆರಗೆನ್ನೆದೆ ಮುಟ್ಟಿದ್ದಿತು.
ಸುತ್ತಲು ಕಾಣುವ ಗಾರ್ಡನ್ ರಮ್ಯತೆ ಮರೆತೇ ಹೋಯಿತು ಅವಳನು ನೋಡಲ್–
ಜೀವನವನದಲಿ ಕುಣಿಯುವ ಕಲರ್‌ಫುಲ್ ಮಯೂರಿಯಲ್ಲೇ ಮನನಟ್ಟಿದ್ದಿತು.
ಅವಳಾ ಚಂಚಲ ಚಟುವಟಿಕೆಯ ಸುಖ ಮೋಕ್ಷಕ್ಕೂ ಮಿಗಿಲೆಂದೆನಿಸಿದ್ದಿತು!
ಹೋ ಆನಂದಂ ಪೇರಾನಂದಂ ಆನಂದಂ ಬ್ರಹ್ಮೇತಿ ವ್ಯಜಾನಾತ್!
ಬ್ರಹ್ಮರ್ಷಿಗಳೇಂ ಬಲ್ಲರೆ ಇಂತಹ ರೋಮಾಂಚಕ ಸೌಂದರ್ಯಾಸ್ವಾದವ?
ದಿಲ್ಲೀಶ್ವರನೇ ಬಲ್ಲಿದನಲ್ಲವೆ? ಕಲ್ಲೂ ಹಾಡೀತಿಲ್ಲವತರಿಸಲ್!

೨

"ರಾಮೇಶ್ವರದಾಚೆಗೆ ಹಣವಿಲ್ಲದೆ ಯಾವನೊ ಬಾವಿಯ ಹಾರಿದನಂತೆ,
"ಹೊಟ್ಟೆಗೆ ಹಾಲಿರದೆಳಮಗು ಯಾವುದೊ ಮೂರೇ ದಿನದಲಿ ಮೃತವಾಯ್ತಂತೆ,
"ಕೆಲಸ ಸಿಕ್ಕದಲೆದಾವನೊ ತರುಣನು ಕಳ್ಳನಾಗಿ ಸೆರೆಸಿಕ್ಕಿದನಂತೆ.
"ದುಡಿದು ಬಳಲಿ ಕೂಲಿಯ ಹೆಣ್ಣೊಬ್ಬಳು ಬೀದಿಯಲ್ಲೆ ಕಣ್ಮುಚ್ಚಿದಳಂತೆ.
"ಕಳ್ಳಪೇಟೆಗರ ಕೈಯಲಿ ಕುಟುಂಬಿ ಸಾಲಮಾಡಿ ವಿಷವೀಂಟಿದನಂತೆ.
"ಹಾಳುಕಾಳ ತಿಂದೆಲ್ಲೋ ಎಲ್ಲರು ರೋಗದಿಂದ ನೇತಾಡಿದರಂತೆ.
"ಲಂಚಕೊಡಲು ಕಾಸಿಲ್ಲದೆ ಬಡವನು ಕೋರ್ಟು ಕೇಸಿನಲಿ ಕರಗಿದನಂತೆ.
"ಮದುವೆಗಿಲ್ಲದಿರೆ ರೊಕ್ಕ ಯಾವಳೋ ನಿತ್ಯ ಸುಮಂಗಲಿಯಾಗಿಹಳಂತೆ.
"ಪ್ರಾಮಾಣಿಕನನದೆಲ್ಲೊ ಮಾನತೆಗೆದೆಲುಬುಮುರಿವವೊಲು ಥಳಿಸಿದರಂತೆ"
"ಏನೀ ಸುದ್ದಿಗಳೇತಕೆ ತಲೆಯನು ಹೊಕ್ಕು ದಾಳಿಡುತ್ತಿವೆ ಛಿ: ತೊಲಗಲಿ,
ಎಲ್ಲ ಸುಳ್ಳು ಪತ್ರಿಕೆಗಳ ಪುಡಿನುಡಿ, ಅಲ್ಲೇ ಸತ್ತು ಅವೆಲ್ಲಾ ಮಲಗಲಿ–
ಇಲ್ಲಿ ಸುಳಿಯದಿರಲವುಗಳ ನೆರಳೂ ಕೊಡಹಿಬಿಟ್ಟೆ ತಲೆ ಹೋಗಲಿ ಹೋಗಲಿ!

೩

ಊರಿದ್ದೆಡೆ ಹೊಲಗೇರಿಯು ಕಾಣು
ಎಲ್ಲೋ ಯಾರೋ ನರಳಿದರೇನು?
ಎನ್ನರಸಿಯನೊಲಿಸುವ ಈ ಕಾಲ
ಎಲ್ಲಾ ಸೌಖ್ಯೋತ್ಸಾಹದ ಮೂಲ!
"ಡಾರ್ಲಿಂಗ್–ದೌಸ್ವೀಟ್" ಎಂಬೀ ಮಂತ್ರವ–
ನೇತಕೆ ಮರೆತೆನು? ಈಕೆಯ ತಂತ್ರವ
ಸರ್ವ ಸಮರ್ಪಣೆಯಿಲ್ಲದೆ ಗೆಲ್ಲಲು
ಸಾಧ್ಯವೆ ಹೇಳಿರಿ, ಸಗ್ಗವ ಮೆಲ್ಲಲು?
ಊರಿನ ವೇಲೂರ್ ಬಿದ್ದರದೇನು?
ಊರುಣದಿದ್ದರೆ ನನಗುರಿಯೇನು?
ಸುಪ್ಪತ್ತಿಗೆಗೂ ಫುಟ್‌ಪಾತಿಂಗೂ
ಪ್ಯಾರಿಸ್ಸಮರ್ದಿಗು ತಾಳಿಯ ಗಂಜಿಗು
ಅರಸಗು ಆಳಿಗು ಹೋಲಿಕೆಯೇನು?
ದಿಲ್ಲಿಗು ಹಳ್ಳಿಗು ಜೊತೆ ಹೇಳೇನು?

೪

ಸಮನರಸರನು ಸೂರೆಗೊಂಬ ಸುಮುಖಿಯನ್ನು ಪಡೆದ ನಾ
ಸುಮಸ್ವಪ್ನಮಗ್ನ, ನನ್ನ ಡಿಸ್ಟರ್ಬ್ ಮಾಳ್ಪನ್ನನ
ಯಮನೂರಿಗೆ ಡಿಸ್ಪ್ಯಾಚ್ ಮಾಡಿಸುವುದೊಂದೆ ತತ್‌ಕ್ಷಣ–
ನಮನಮಗೇ ನಾವಲ್ಲವೆ? ಇದೆ ಸಿವಿಲೈಜ್ಡ್ ಶಿಕ್ಷಣ!
ಹತ್ತು ಜನರು ಸಿಟಿಗಳಲ್ಲಿ ನನ್ನ ಹಾಗೆ ಬಾಳಲು,
ಹತ್ತೂರಿನ ಹೊರಜನ ಟೂರ್ ಮಾಡಿ ಹೋಗಿ ಹೇಳಲು,
ಖಂಡಖಂಡಗಳಲಿ ನಮ್ಮ ಆಡಳತೆಯ ಹೊಗಳಲು
ಕೃತಕೃತ್ಯತೆಯಕ್ಕು! ತಾನದಕ್ಕೆ ಬಡವ ಬೊಗಳಲು?
ಹಾಡು ಕವಿಯೆ ಹಾಡು
        ಸ್ವಲ್ಪ ಬಂದು ನೋಡು–
        ಅರವಿಂದರ 'ಲೈಫ್ ಡಿವೈನ್'ನಲ್ಲಿ ಅರ್ಥವುಂಟೇ?

ವರ್ಧಾವೇದಾಂತದಲ್ಲಿ ಮಾಡರ್ನಿಟಿಯುಂಟೇ?
ಕವಿ ರೀಂದ್ರ ಕಂಡ ಕನಸು ವೈಜ್ಞಾನಿಕವಹುದೇ?
ಹಾಲೀವುಡ್ ಹರಸಿದಂಥ ಬಾಳ್ಕೆಗೆ ಸರಿಯಿಹುದೇ?
ಇಂದ್ರಸ್ತ್ವಂ ವರುಣಸ್ತ್ವಂ ಕುಬೇರಸ್ತ್ವಮೆಂದು
ಕವನ ಕಟ್ಟು ಕಲೆಯ ಬೆಳೆಸು ನನ್ನ ಮುಂದೆ ನಿಂದು,
ನನ್ನವಳೇ ನನಗಿಂತಲು ಉತ್ತಮಾಂಗಿಯೆಂದು
ಹಾಡು ಇಂಡಿಯನ್ ಲಾರ್ಕೇ ಹೈಡ್‌ಪಾರ್ಕಿದೆಯೆಂದು!
ಬೈರನ್ನಿಸು, ತ್ರೈರನ್ನಿಸು ಅಥವಾ ಕಂ ಫಿಲ್ಡ್ ಕಪ್
ಎಂದು ಉಮರ್ ಖಯ್ಯಾಮಿಸು; ಉಳಿದೆಲ್ಲಾ ರೀತಿ ರಫ್!
ಎಸೆಯಾಚೆಗೆ ಪೇಪರ್
ಅದ ಬರೆದವ ಲೋಫರ್!

ಗದ್ದಲವ್ಯಾಪಾರ

I

ಅಕ್ಕಿಗಿರಣಿ ಕೂಗುತಿದೆ
ರೈಲು ಬಂಡಿಯರಚುತಿದೆ;
ವಿಮಾನ ಭೋರ್ಗರೆಯುತಿದೆ
ಅರಣ್ಯ ರೋದಿಸುತಿದೆ!

ಸಾಗರವಾರ್ಭಟಿಸುತ್ತಿದೆ
ಮೇಘನಾದ ಮಾಡುತ್ತಿದೆ;
ಜಠರವಾಯು ಬೆಕ್ಕಿನಂತೆ
ಗುರುಗುಟ್ಟುತ್ತಿದೆ!

ಗೊಣಗುತ್ತಿದೆ ಹೆಬ್ಬೊತ್ತಿಗೆ
ಭಣಗುಟ್ಟುತ್ತಿದೆ ಬಡಬಗೆ;
ಹೆಣದ ಮೇಲೆ ಕುಣಿವ ಹಗೆ
ಹೊಗೆಯುಗುಳುತ್ತಿದೆ!

ಭೂಕಂಪ–ಜ್ವಾಲಾಮುಖಿ
ಕೆಲ ಮಾನಿಸರೆದೆಗಳಲ್ಲಿ
ಹುಟ್ಟಿ ಜಗವನಲುಗಿಸುತಿದೆ
ಪ್ರಾಮಾಣಿಕರ!

ಮೌನ ಕೂಡ ಸದ್ದಾಗಿದೆ
ಮಾತಿನ ಮಾತಲ್ಲಿರಲಿ–
ಗದ್ದಲವೇ ಜೀವನ, ಬರಿ
ಮದ್ದೇ ಅನ್ನ!

II

ಯುದ್ಧಕ್ಕಿಂತ ಶಾಂತಿ ಬಿಸಿ
ಒದ್ದೆಗಿಂತ ಒಣಕು ಹಸಿ;
ಮಧ್ಯಾಹ್ನದ ಊಟಕಿಂತ
ಫಲಾಹಾರ ಬಲ!

ಯದ್ವಾತದ್ವ ವಿಚಾರ–
ವ್ಯಭಿಚಾರ ವಿದಗ್ಧತೆಯಲ;
ಗದ್ಯ ಪದ್ಯ; ಪದ್ಯ ಗದ್ಯ
ಮಾಯೆಯೆ ಬೊಮ್ಮ–

ಎಲಲ ಯಕ್ಷಗಾನ ವೀರ
ನಿಲು ನಿಲು ಈ ನಗರಂಗಳ
ಧ್ವನಿವರ್ಧಕ ಭಾಷಣಗಳ
ಮುಂದೆ ನಿನ್ನ ಕೇಕೆಯೆ?

ಹೋಗು ಹಳೆಯ ಹಾಳ ಹೊತ್ತ
ಭೂಗರ್ಭದ ಮೌನದೊಳಗೆ
'ಸ್ಫುಟ್ನಿಕ್' ಯುಗದರ್ಶನ ನಿನ–
ಗಾಗಿಹುದೇನು?

ಬದಲುತ್ತಿಹ ಮಾತುಗಳೇ
ಕದಲುವ ಭೂಮಿಗೆ ಸಹಜ;
ಹೃದಯಕ್ಕೆ ಸಮಾಧಿ ಕಟ್ಟಿ
ಹೊರಟಿದೆ ಮತಿನಾವೆ–

ಲಂಗರಿಲ್ಲ ಬಂದರಿಲ್ಲ
ತೆರೆಗಳೊಡನೆ ಹೋರಾಡುವ
ಬರಿ ಗುಲ್ಲಿನ ಬಂಡವಾಳ ವ್ಯಾಪಾರಕ್ಕೆ!
ಮರಳಿನಿಂದ ಮರಳಿ ಮರಳಿ

ಕಟ್ಟಿ ಕೆಡೆವ ಮನೆಯಹಾಗೆ
ನಶ್ವರದಲ್ಲತಿ ನಶ್ವರ
ಸುಂದರತಮ ಮಗೂ!
ಲಾಲಿ ಲಾಲಿ ತಮ್ಮಣ್ಣಾ
ತೌಡಿನುಂಡ ನುಂಗಣ್ಣಾ
'ನ್ಯೂಟ್ರಾ' ನಾಗುವೆ ಬದಲುವ
ಹೊಸ ಮಾದರಿಯ;
ವಿಕಾಸ ಮುಖವನ್ನು ತಾಳಿ
ಹೊರೆಯೊ ಹೊಟ್ಟೆಯ!

ಮಾ ನವೋ ಭವ!

ಜಲಜನಕ ಆಮ್ಲಜನಕಗಳ ಬೆರೆಸುತ್ತಿರುವರೊಂದು ಕಡೆ;
ಒಂದು ಕಡೆ ಜಲವ ವಿದ್ಯುತ್ತಿಂದ ಭೇದಿಸುವ ಕಬೆಗೊಳವೆ ಕೆಲಸಮಾಡುತ್ತಿಹುದು;
ನವಿಲುತುತ್ಯದ ಹರಳು ಹೆರೆಯಾಗಿ ಕೂಡುತಿದೆ;
ದ್ವಿಜಗಂಧಕಾಮ್ಲ, ಕ್ಲೋರೀನ್, ಅಗೋ ಹೈಡ್ರೊಜನ್ ಸಲ್ಫೈಡು ಸುರುಳಿ
ಹೊಗೆಯೇಳುತಿದೆ!
ಅಂಗವಸ್ತ್ರವನೆತ್ತಿ ಮೂಗೊತ್ತಿಕೊಂಡಿಹನು ಕನ್ನಡಕದೊವಜ;
ಫಟ್ ಫಟೆನ್ನುತಿದೆ ಪೊಟಾಸಿಯಮಹಾಕಿವಿಯ ಕುರುಡಿಸಿ!
ಕಣ್ಣ ಕೋರೈಸಿ ಬೆಳಗುತಿದೆ ರಂಜಕಜ್ವಾಲೆ ಮೈಮೇಲೆ ಹಾರುವ ಹಾಗೆ
ಸೋಡಿಯಂ ಚೂರು ಟಿಸ್ಸೆನ್ನುತಿದೆ ನೀರೇರಿ ನಾಗಪ್ಪನಂತೆ.
ಮತ್ತೊಂದು ಮಂದಿರದಲ್ಲಿ ನಡೆವುದು ಯುರೇನಿಯಮ್ಮಿನ ಕಣದ
ಮೇಲ್ಚಾರ್ಜು–
ನೂರಾರು ಸಿಡಿಲುಗಳು, ಗುಡುಗುಗಳು, ಮಿಂಚುಗಳು, ಪಂಚೇಂದ್ರಿಯಗಳನ್ನು
ಮುದ್ರಿಸಿವೆ, ರುದ್ರಿಸಿವೆ!
ಹೃದಯವನ್ನೆಸೆದು ಕೋಲ್ಡ್‌ಸ್ಟೋರೇಜಿನಲ್ಲಿ ಕಂದೆರೆದಲುಗುಮಿದುಳು ನೋಳ್ಪಂದ
ಬಲು ನಿಷ್ಪಂದ
ಎಚ್ಚರದ ಎಚ್ಚರವೆ ಇಲ್ಲ ವಿಜ್ಞಾನಂ ಬ್ರಹ್ಮ!
ವಿಶ್ವೋದ್ಧರಣ ಸಮಾಧಿಯ ಗರ್ಭದಲಿ ಗುಮ್ಮ ಗುಣುಗುಣಿಸುವುದನೇನು
ಬಲ್ಲನಾ ಕುರಿತಿಮ್ಮ!

II

ಮಾನವ ಸ್ವರದ ಸುಳಿವಿಲ್ಲ, ಸುದ್ದಿಯೇ ಇಲ್ಲ, ಗಾಳಿಗೂ ಗೊತ್ತಿಲ್ಲ, ಬೆಳಕಿಗರಿವೇ
ಇಲ್ಲ–
ಯಾವ ದೆಸೆಯಿಂದಗ್ನಿಪಿಂಡಮಂಡಲ ಗಗನವೇರಿ ಬರುತಿಹುದೆಂದು!
ಮಾಯಾವಿ ವಿಜ್ಞಾನಿ ಬರಿ ಬುರುಡರೂಪದಲ್ಲಡಗಿ ಕುಳಿತಿಹನೆಲ್ಲೊ ನೂರಾರು
ಯೋಜನಗಳಾಚೆ,
ನಿಷ್ಪಾಪ ನಾನೆಂದು ರಾಜನ್ಯರಿಡುಗೂಳಿಗೊಡ್ಡುತ ಬಾಯಿ;

ವಿಶ್ವದಗಲಕೆ, ಚಂದ್ರಸೂರ್ಯರೆತ್ತರಕೆ ತನ್ನುತ್ತಮಾಂಗದ ವಿದ್ಯುದಂಶ
ಮುಟ್ಟುವುದೆಂಬ ಬಕರಸಾವೇಶದ ನಿರೀಕ್ಷೆಯಲಿ!
ಕಾಳ್ತೊಂಡಬೆಂಡೆಗಳ ನಿರ್ಮಿಸಿದ ರಾಜವಿಶ್ವಾಮಿತ್ರನಭಿನವ್ಯ ಶಿಷ್ಯರೀ
ಧೂಮಕೇತುಕ್ರೀಡೆಯಿಂದೆನ್ನಬೇಕು, "ಶಿಷ್ಯಾಧಿಚ್ಛೇತ್ವರಾಜಯಂ"!
ಹಾಲಾಹಲದ ಹೊಗೆಯೆ ಮೋಡ, ಮಿಂಚೇ ವೃಷ್ಟಿ, ಸಾಲಾಗಿ ಕೆಡೆದುರುಳುತಿಹ
ಚರಾಚರಗಳೇ ಕಾಲಾನುಗುಣ ಸೃಷ್ಟಿ!
ಪುಣ್ಯ ಪಾಪಾದೃಷ್ಟ ಮೇಲುಕೀಳೆಲ್ಲ ಮೊಗಚಿದವೀ ಮಹಾಸಾಮ್ಯಧೋರಣದ
ಜಾಗತಿಕ
ವ್ಯಾಪ್ತಿಯಲಿ, ಸತ್ತೆನೆನ್ನಲು ಕೂಡ ಬಾಯಿಲ್ಲದಂಥ ಈ ಸತ್ತೆಯಲಿ
ಮಾನವ್ಯಗಿನಿಪಿಗ್ಗು ಸಂಸ್ಕೃತಿ ಪ್ರಯೋಗಕ್ಕೆ!

III

ಶಾಂತಿಸಂಧಾನಕ್ಕೆ ಅಣುದೂತನೇ ಮುಂದೆ, ಕ್ರಾಂತಿಸಂತಾನಕ್ಕೆ ತುತ್ತು ಕರಿಯರ
ಮಂದೆ;
ಹಗಲು ವಿಶ್ವಪ್ರೇಮ–ಕಾವ್ಯನಿರ್ಮಿತಿ; ರಾತ್ರಿ ಮುಗಿಲಿಂದ ಕೀಟಗಳ
ಮಳೆಯಿಸುವ ಸಂಚು!
ಅಂಜನೆಯಪ್ಪಿಕೊಳ್ಳಲು ಜುಗುಪ್ಸೆಪಡುವಂಥ ವಾಯ್ವವತಾರ ಮಾರಣದ
ಹೋಮಸಿದ್ಧತೆಗಾಗಿ!
ಡಾಲರಧ್ವರ್ಯುಗಳು, ಸ್ಟರ್ಲಿಂಗು ಹೋತೃಗಳು, ಬೇರೆ ನಾಣ್ಯದ
ಸಾಮಗಾಯಕರು,
ನಾಯಕ–ಬ್ರಹ್ಮ ವಿಜ್ಞಾನ ವಾರಾಂಗನಾ ವಿಟರಾಜ!
ಬಡ ಮಾನಿಸರ ಮಕ್ಕಳೆದೆ ಯಜ್ಞಪಶುವೃಂದ–ನಡೆವುದಂತಾರಾಷ್ಟ್ರದಂತಕಾರಕ
ಪಂತ!
ಏಕೆ? ಪ್ರಕೃತಿಯುಸಿರ್ದುಳಾದಿಯಲಿ, "ಮಾನವಃ, ಮಾ ನವೋ ಭವ!"
ಇದ್ದ ಹಾಗೆ ನಿನ್ನೆದೆಯಿರಲಿ ಆದಿ–ಅಂತ್ಯಗಳಲ್ಲಿ ಅಡವಿ ನಗರಗಳಲ್ಲಿ;
ಮಲಗು ಮಗು ಮುದ್ದೆ, ಹುಟ್ಟಿದೆ ನನ್ನ ಮೋಹದಲ್ಲಿ;
ನಿನ್ನ ಮೋಹದಿ ಬೆಳೆದೆ ನಿನಗೆ ನೀನೇ ಎಂದು.
ಅನ್ನಾದ, ವಸ್ತ್ರಾದ, ಸ್ವರ್ಣಾದನೆಂದೆನಿಸೆ ಜಗಮೋಹ, ಬೆನ್ನಟ್ಟಿ ತಿಂಬ

ಊಟಕ್ಕೆ ವೇಳೆ

ಹಗಲೆಲ್ಲಾ ದುಡಿದು ದಣಿದು ರಾತ್ರಿಯಲ್ಲಿ ಮಿಾಯುವ
ಸೇರುಗಾರಿಕೆಯ ಧರ್ಮವೆ ವಿಶ್ವಧರ್ಮವಾಯಿತು.

ಅತಿಸಂಖ್ಯರಿಗಲ್ಪಸಂಖ್ಯರೂಟದ ಸಿದ್ಧತೆ ಮಾಡುವ
ಮತಿವಂತಿಕೆ ಮೆರೆಯುತ್ತಿರೆ ಬಹುಸಂಖ್ಯರ ಮಿದುಳಿನಲ್ಲಿ
ಪುರುಸೊತ್ತೇ ಇಲ್ಲ ಸ್ವಾಮಿ ಕೇಳಿದಾವ ಕೆಲಸಕ್ಕೂ
ಅತಿಗಡಿಬಿಡಿಯೆಲ್ಲರಿಗೂ ಚಂದ್ರಲೋಕಕೇರಲು.

ಉಪಯೋಗದ ಅರ್ಥವಿಂದು ಗ್ರಹಾಂತರಕ್ಕೆಯ್ದಿತು;
ಊಟಬೇಕು–ಉಳಿದವರದ ತಯಾರಿಸಿದರಾಯಿತು!
ಕವಿ–ವಿಜ್ಞಾನಿಗಳೆಲ್ಲಾ ಕುಟುಂಬಯೋಜನೆಯ ಮರೆತು
ಭೃಂಗ–ವಿಮಾನಗಳನೇರಿ ಬರುವ ಕಲ್ಪನೆಗಳ ನೆನೆವ
ಸಂತತಿಯನು ಸಂವರ್ಧಿಸಿ ಛೂ ಬಿಟ್ಟರೆ ಎತ್ತೆತ್ತಲು–
ಭಾರತದಲ್ಲೂ ನಡುಹಗಲೂಟಕವಧಿಯಿಲ್ಲ.
ಪುರುಸೊತ್ತಿಲ್ಲದೆ ದುಡಿಯುವ ಯಂತ್ರನರರ ಕರ್ಮಫಲ
ಅನ್ನೇತರ, ವಸ್ತ್ರೇತರ ಕಲ್ಪನಾ ವಿಲಾಸ ದುಪಲ–
ನಾಗರಿಕತೆ ಹಡೆದ ಹೊಚ್ಚಹೊಸಾ ಮೌಲ್ಯವುಳ್ಳ ನಾಣ್ಯ
ಅದ ಮುದ್ರಿಸುವುದರೊಳೆಲ್ಲ ವೇಳೆ ವೆಚ್ಚವಾಯಿತು!

ಠಣ ಠಣ ಝಣ ಝಣ ಎಂಬೀ ಸದ್ದೊಂದೇ ಕೇಳಿಸುವುದು
ಕಣ್ಣಿಗೆ ಕಾಣದ ನಾಣ್ಯದ ಥೈಲಿಯನಲುಗಾಡಿಸಿದರೆ;
ಅದರ ಸಾವಿರಗಳ ತೆತ್ತರಾ ಈ ಒಂದೆರಡು ಮಾಲು
ಸಿಗುವುದು ಮಾರ್ಕಟ್ಟೆಯಲ್ಲಿ ಹೋಗಿ ನೋಡಿ ಬೇಕಾದರೆ!

ನಾಣ್ಯದತಿಪ್ರಸರಣಕ್ಕೆ ಕಲ್ಪನಾಪ್ರಯೋಜನ
ಪ್ರೇರಿಸಿದುದ್ಯೋಗಂಗಳ ಹಿಡಿಯುವುದು ಮಹಾಜನ
ಕಾರಣ ಕೇಳಿರಿ ಸ್ವಾಮಿ ಮೊಸಲವಕ್ಕೆಲ್ಲ ವೇಳೆ;
ಸಮಾರಂಭದೂಟಕೀಗ ರಾತ್ರಿ ಬೇಯಿಸುವುದೆ ಬೇಳೆ!

ವೇಷಾಂತರ

ಹಳೆಯ ಒಡೆಯ ಅರಸನಾದ
ಹಳೆಯ ಅರಸ ಮಂತ್ರಿಯಾದ
ಹಳೆಯ ಮಂತ್ರಿ 'ಆಫೀಸ್ ಬಾಸ್' ಎನಿಸಿಹನೀಗ!
ಹಳೆಯ ದಾಸನೊಕ್ಕಲಾದ
ಹಳೆಯೊಕ್ಕಲು ನೌಕರ ನೀ
ಇಳೆಯ ಹಳ್ಳಿಗಳು ಪಟ್ಟಣರೂಪ ತಾಳಿವೆ!
ವೆಂಕ್ಟೇಶಾಚಾರಿಯೀಗ ವೀ.ಎ.ಚಾರಿ
ಪಂಡಿತ ಪರಮೇಶ್ವರ ತಾ ಬಿ.ಎ.ಧಾರಿ
ಶಾಸ್ತ್ರಿಗಳೇ ಲೆಕ್ಚರುಗಳು
ಶಸ್ತ್ರಿಕರೇ ವೈದ್ಯರುಗಳು
ನಾಮರೂಪ ಬದಲಾವಣೆ ಹೊಸತಿನ ದಾರಿ!
ಬುದ್ಧಿ ಭಾವನೆಗಳೊಲವುಗಳಿದ್ದ ಹಾಗೇ;
ಕಾಗೆ ನವಿಲ ಸೋಗೆ ಧರಿಸಿ ಕುಣಿದು ರೇಗೆ
ಬರುವುದೇನೊ ಅದು ಬಂದಿದೆ–
ಭಾರತದಲಿ ರಥದ ಬದಲು
ಅದೇ ವೇಗದಿಂದ ಹೋಹ
ಬಸ್ಸು–ಕಾರುಗಳು ಹೆಚ್ಚಿವೆ!
ರೋಮಾಂಚಕ ಕಾವ್ಯದೊಡನೆ
ನವ್ಯ ಕಾವ್ಯ ಬಂದರೂನು
ರಸ ಜಾತಿಗಳವೇ ಇರುವುವೇನಿದಚ್ಚರಿ?
ಹೊಸ ಪರಿಭಾಷೆಯ ಬಳಸಿದ
ವಿಮರ್ಶೆಗಳ ಹೂರಣ
ಹಳೆಯ ವಿವರಣೆಗಳಿಗಿತ್ತಿದೆ
ಅಲ್ಪಸ್ವಲ್ಪ ಪೂರಣ;

ಶಿಖಾರಹಿತವಾದ ಮುಂಡ
ಎಷ್ಟು ಹೊಸದೊ ಅಷ್ಟೇ ಹೊಸದು
ನವಭಾರತದೀ ನವ್ಯತೆ ಎಂಬುದನೆಮ್ಮ
 ಇತಿಹಾಸ ಸ್ಥಿತಿಗತಿಗಳು
 ಸಾರುತ್ತಿವೆ ಹಳೆಯೆದೆಗಳ
ಹೊಸ ಕೂದಲುಗಳ ಕೆಚ್ಚಿನ ನವನಿರ್ಮಿತಿಯ!
 ನಿನ್ನೆಯ ಹಳ ದೆವ್ವವೀಗ
 ಹೊಸ ಅವತಾರವ ತಾಳಿದೆ
ಅವಗುಂಠನವಷ್ಟೆ ಆಂಗ್ಲ ಮತ್ತೆಲ್ಲಾ ಭಾರತ;
 ಅದರಲ್ಲೂ ನಿನ್ನೆಯದಿದು
 ಮೊನ್ನೆಯ ಭಾರತವಲ್ಲ
ಟೋಪಿ ಬದಲು ತಲೆಯಲ್ಲಿಹುದದೆ ಹಳಮಿದುಳು!
 ಹಳತಾಗಿಯೆ ಇಲ್ಲ ಹಳತು
 ಕೊಳೆತು ನವಾಚ್ಛಾದನವನು
ತಳೆದು ಮಿಂಚಿ ಕೋರಯಿಸುವುದೆರಡು ಕಂಗಳ;
 ನವಭಾರತ ಕೊಳೆ ಭಾರತ
 ಹಳೆ ಭಾರತವಲ್ಲ ಶುದ್ಧ
ಅಳಿಯುತಿರಲು ನೀತಿಮೌಲ್ಯ ದಿನ ದಿನ ಬೇಗ!
 ವಳಿ ಪಾಪಂಗಳು ಜೀವನ–
 ದುಳಿವಿಗಿಲ್ಲಗತ್ಯವೆನಿಸೆ
ಬಳಿಸಾರೀತೇನು ಪುಣ್ಯ ಈ ಅಳಿನೆಲದ?
 ಗಿಳಿಗಳೆ ಕೋಗಿಲೆಗಳೆ ಮೇಣ್
 ಹುಲಿಗಳೆ ಕರಡಿಗಳೆ ಧರ್ಮ
ಉಳಿದಿರುವುದು ನಿಮ್ಮೊಳಷ್ಟೆ ನಿಜಭಾರತದ;
ನಿಮ್ಮೊಳಿರುವ ದೇವ ಬಂದು ನನ್ನ ಕಾಯಲಿ–
ಬೊಮ್ಮನ ಹಳ ಶುದ್ಧ ಹೊಸತು ಬಾಳ ನೇಯಲಿ!

ಆಹುತಿ

ಹಣೆಬರಹವನ್ನು ಶೋಧಿಸಲು ಪುರುಸೊತ್ತಿಂದು
ಮೊದಲಿನಂತೆಯೆ ಸಿಕ್ಕಿದುದು; ಚಿಂತನಾನಂತ್ಯ
ಜೀವನದ ಪಂಚಮದ ದಶಕದಲಿ ಶುರುವಾಯ್ತು!
"ಕಸ್ತ್ವಂ ಕೋಹಂ ಕುತ ಆಯಾತಃ?
ಕಿಂ ಮೇ ಮಿತ್ರಂ ಕ : ಪರಿವಾರ :?"

ನಶ್ವರದಿ ವಿಶ್ವಾಸವಿಡುವುದೂ ನಶ್ವರವೆ–
ಎಂಬುದನುಭವದಿಂದ ಸಿದ್ಧವಾಗಿದ್ದರೂ
ವಿಶ್ವಾಸದಭ್ಯಾಸ ಪರಿವರ್ತನವ ದಂಡೆ
ಯೆಂದು ಭಾವಿಸಿ ಸಾಗುತಿರುವುದೇ ಆಶ್ಚರ್ಯ!
ಮನೆ ಸಂಘ ಸಂಸ್ಥೆ ಪಟ್ಟಣ ನಗರ ಹಳ್ಳಿಗಳು
ಧರ್ಮಶಾಲೆಗಳಂತೆ ನಿಂದಿಹವು; ಭೂಮಿಯೂ
ಕೃಷಿಕ–ವಾಣಿಜ್ಯಕ–ಕ್ಷತ್ರಿಯರ್ಕಳನೇಕ
ಯಜಮಾನಿಕೆಯ ನಡೆಸಿಹೋದರೂ ಸುಮ್ಮನಿದೆ!

ಸನ್ನಿವೇಶಗಳಾಳು ಬಾಳು ಜೀವಿಗಳದೀ
ನಿಮ್ನೋನ್ನತಸ್ತರಗಳಾವರಣ ಕೆಲವೊಮ್ಮೆ
ನಿನ್ನಾಳು ನಾನೆಂದು ನಡೆದರೂ ಕೊನೆಯಲ್ಲಿ
ತನ್ನ ಮುದ್ರೆಯನೊತ್ತಿ ಕಳಿಸುವುದು ಜೀವಿಗಳ
ಸನ್ನೆಯೂ ಸಾಧ್ಯವಾಗದ ಸುಪ್ತಿಲೋಕಕ್ಕೆ!

ಬದಲಾವಣೆಯ ನೆಲದ ಮೇಲೆ ನಿಂದುತ್ಸಾಹ
ವಿಶ್ವಾಸದಂತೆಯೇ ಬದಲಾಗುವುದು ಸಹಜ!
ದೇಶಕಾಲಗಳಲೆಗಳಿಂದ ಚಂಚಲಿಸದಿಹ
ನಿರ್ಲಜ್ಜ ನಿಷ್ಠುರ ನಿಜತ್ವಾಂಶ ಕಡಲತಳ–

ದಂತೆ ಕಾಣಿಸದೆ ಸರ್ವಾಧಾರವಾಗಿಹುದು–
ಚಂಚಲತೆ ಕುಣಿವ ರಂಗಸ್ಥಳ, ನಿರಾಕಾರ
ಸರ್ವಾಕೃತಿಗಳ ನಿರ್ಮಿಸುವ ಕಾರ್ಖಾನೆ, ತಾ–
ನನ್ಯತೆಗಳನು ಹಡೆದನನ್ಯತೆ–ನಿಸರ್ಗವೋ
ಬ್ರಹ್ಮವೋ ಆತ್ಮವೋ ಅಕ್ಷರವೊ ಸಂಜ್ಞೆಯೋ–
ಆಜ್ಞೇಯವಾದರೂ ಅಜ್ಞಾತವಾಗದಿಹ
ಮೇರುಶಕ್ತಿಯ ನೆನೆದರಾಶ್ಚರ್ಯವಾಗುತಿದೆ!

ಗೂಢದಲಿ ಗೂಢವೆನಿಸಿದ ಮೂಲಕಾರಣದ
ಹಾಡಾದ ವಿಶ್ವವನ್ನರ್ಥಯಿಸ ಹೊರಟು ಹಲ–
ವಾದಗಳ ಹಬ್ಬಿಸಿದ ನಾಗರಿಕತೆಯ ಮಸಕ
ಮೋಡ ತೋರುವ ಬಣ್ಣಗಳ ಹಾಗೆ ಚಂಚಲಿಸಿ
ಬುದ್ಧಿಯಕ್ಷಿಗಳೆದುರು ಸುಳಿದೋಡುವುದು ಸತತ
ಹೃದ್ವೇದನೆಯ ಕಡಿಮೆ ಮಾಡದೆಂದೂ! ಪ್ರಶ್ನೆ
ಉದ್ದುದ್ದವಾಗುತ್ತ ಹೋಗುವುದು; ರಿಸಿ ಹಿಂದೆ
ಯಾರೆಂಬ ಪದವನ್ನೆ ಬ್ರಹ್ಮನೆಂದೊರೆದಂತೆ
ಪ್ರಶ್ನೆಯೇ ಸತ್ಯಸ್ಯ ಸತ್ಯ ಎಂದೊರೆಯಲೇ?

ಪ್ರಶ್ನೆಯನ್ನುತ್ತರ ಸ್ಥಾನದಲ್ಲಿಟ್ಟು ನಿಷ್–
ಪ್ರಶ್ನನಾಗುವ ಧೈರ್ಯ ವಜ್ರಾಯುಧಕ್ಕೆ ಸಮ;
ದಯ ಪಾಲಿಸದನಿಂದ್ರ ಸರ್ವೇಂದ್ರಿಯಾಧಾರ,
ಆವರಣಸಂಕೇತನಾದ ವೃತ್ರನ ಹಗೆಯೆ;
ಸಂಶಯಾಹಿಯ ಕೊಂದ ವೀರ ಗಾರುಡಿಗನೇ,
ವಿಶ್ವೋತ್ತರಸ್ಥ ವಿದ್ಯುದ್ದೀಪ್ತಿರೂಪನೇ,
ಪಾರಿವರ್ತನಿಕ ದಸ್ಯುಗಳ ದಮನಿಸಲಿಂದು
ತೋರು ನನ್ನಲಿಜಗದ್ರಕ್ಷಣಾದಕ್ಷನೇ:
ನಿನ್ನ ತೇಜಸ್ತತ್ವ ಶರ್ಮವಾಗಲಿ ನನಗೆ–
ಭೂವ್ಯೋಮ ಚಂದ್ರಾರ್ಕ ತಾರಾ ವಿಹಾರನೇ,
ನನ್ನ ಸ್ವಭಾವ ನಿನ್ನಗ್ನಿಗಾಹುತಿ ದೇವ!

ಲೋಕಾಲೋಕ

ಅಜ್ಞಾತಕೂ ಆಜ್ಞೇಯಕೂ ನಡು–
ವಿರುವ ಲೋಕಾಲೋಕವೇ,
ಸತ್ಯಾನೃತಂಗಳ ಹೊಸ್ತಿಲೇ ಮಿದು–
ಳಾಗಿ ನಿಂದವಿವೇಕವೇ!
ನೂರಾರು ಸಾವಿರ ನೋಟವೇ, ಅ–
ಲ್ಲದುದ ಬೆರಸುವ ಓಟವೇ,
ಇಂದ್ರಾದಿ ದೇವರ ಮಾಟವೇ, ಗೋ–
*ತಮರು ಕೊಡುತಿಹ ಕಾಟವೇ!
ಸದ್ಯಃಕ್ಷಣಪ್ರತಿಭಾಸವೇ, ವಿಧಿ–
ವದನ ಹರಿಸಿದ ಹಾಸವೇ,
ಬುದ್ಧಿಸ್ಥ ಬಹುಕೃತವೇಷವೇ, ದುರ್–
ಹೃದಯ ಕೋಟಿ ವಿಕಾಸವೇ!
ದುರ್ದಮ್ಯ ಲೋಭಾವೇಶವೇ, ಸುಮ–
ನೋ ವಿನಾಶಾಭ್ಯಾಸವೇ,
ಸೌಂದರ್ಯತಂದ್ರಾವಾಸವೇ, ನೀ–
ನಿಲ್ಲದೆಡೆಯೇ ಇಲ್ಲವೇ
ಮಧ್ಯ ಪ್ರಮಾಣದ ಚೆಲ್ಲವೇಮ–
ದ್ಯಾತ್ಮಕೊದಗುವ ಬೆಲ್ಲವೇ!
ಓಡು ನೀ ಸರಿದೋಡು ಆಚೆಗೆ,
+ ಬೆಳಕಿಗೇಕಡ್ಡಾಗುವೆ?
ಆಡಲಾ ಬೆಳಕಾತ್ಮದಲಿ, ನರ–
ನಾಡಿಗಳು ಜಡ್ಡಾಗಿವೆ!

---

* ಗೋತಮರು=ಹೆಚ್ಚಿನ ಗೋಸಂಪತ್ತುಳ್ಳವರು; ಧನಿಕರು; ಪಶುಶೀಲರು ಶ್ವಾಭಿಮಾನ ಉಳ್ಳವರು: ಅಥವಾ ಅಹಲ್ಯೆಯನ್ನು ಗೋತಮರು ಗೋಳುಗುಟ್ಟಿಸಿದ್ದು ಆ ಕಾಟ, ಅಂಥಕಾಟ.

\+ A mythical mountain that divides the visible world from the regions of darkness-
ದೃಶ್ಯಾದೃಶ್ಯ ಲೋಕಗಳ ನಡುವಿರುವ ಪೌರಾಣಿಕ ಪರ್ವತವನ್ನು ಲೋಕಾಲೋಕ ಪರ್ವತ ಎಂಬುದು ಪ್ರಸಿದ್ಧ. ಅದಿಲ್ಲಿ ಪರಮಾಣುವಿಗೂ ಬ್ರಹ್ಮಕ್ಕೂ ನಡುವಿನ ಅಳತೆಗಳುಳ್ಳ ವಿಶ್ವವನ್ನು ಸಂಕೇತಿಸುತ್ತದೆ. ಅದರ ನೋಟ ಅರ್ಧ ಕತ್ತಲು, ಅರ್ಧ ಬೆಳಕು!

ಪ್ರಕೃತಿ

೧

ಮಾವಿಗೆ ಮಲ್ಲಿಗೆಯಾಸೆ,
ಮಲ್ಲಿಗೆ ಮಾವನು ವರಿಸುವ ಆಸೆ;
ಆದರೆ ಅವುಗಳ ಬಾಸೆ
ಅಸಹಜವಾಗೆ ನಿರಾಸೆ!

ಯಾವುದು ಸಹಜ?
ಯಾವುದಸಹಜ?
ಪ್ರಕೃತಿ ಕಾರ್ಯಗಳು
ಸಂಸ್ಕೃತವೆ?
ಸಹಜವೆ ಸಂಸ್ಕೃತ ಬಾಳಿನಲಿ?
ಗೆದ್ದಿತ್ತೇ ಧರ್ಮಪ್ರತಿನಿಧಿಯೆ?
ಧರ್ಮವೆ ಗೆಲುವೇ? ಇತಿಹಾಸ–
ಯಾರ ವಯೋಮಾನಕ್ಕೊಳಗಾಗಿದೆ?
ಕಾಲನು ಮಾಡುವ ಪರಿಹಾಸ!
"ಪಾಂಡವಜಯದಂತೆಯೆ ಸಾತ್ವಿಕಜಯ
ಎಲ್ಲೆಲ್ಲೂ ಕಟ್ಟಿಟ್ಟದ್ದೇ"
ಎನ್ನಲು ಬೆಂಬಲ ಕೊಡದಿತಿಹಾಸವು;
ಧರ್ಮಕೆ ಸಹಜತೆ ಇಟ್ಟದ್ದೇ!

೨

ನಿರಂತರ ನಿಸರ್ಗಕ್ಕಂಕವ–ನಿಡುವವ
ಮಾನವಧರ್ಮಾಧರ್ಮಧುರ!
ಸಹಜ ಸುಮ್ಮನೇ ಸಹಜ; ಜಯಾಜಯ–
ಧರ್ಮಾಧರ್ಮಗಳಿಗೆ ಬಧಿರ!
ಸಾಧಿಸುತಿರುವದೆ ಸಿದ್ಧಿ; ಅವಧಿಯದ–
ಕಿಲ್ಲ; ಸಾಧನೆಯೆ ಬಾಳಾಟ!

ಕಾಲಕ್ಕೆಲ್ಲಿವೆ ಅಂತ–ಪಾರಗಳು?
ಸಿದ್ಧಿಕಲ್ಪನೆಯೆ ಮರುಳಾಟ!
ಅಲ್ಪತೃಪ್ತಿಗಳು ಸಿದ್ಧಿಗಳೆನಿಸವು.
ಪೂರ್ಣತೃಪ್ತಿ ಜಗದೊಳಗಿಲ್ಲ;

ಪೂರ್ಣಕಾಮವಾದರ್ಶ ಮಾನವಗೆ:
ಸಹಜ ಆಸೆಯದು ತಿರೆಗೆಲ್ಲ!
ಅನಂತ ಕಾಲ–
ಅಜ್ಞಾತಕೆ ಮನುಬಾಲ
ಪ್ರೇಮಪತ್ರ ಬರೆವುದೆ ಕುಲಶೀಲ;
ಉತ್ತರ ಅತಿವೇಲ!

ಆಕಾಶಿಸುವಾ ಉತ್ತರದರ್ಥವ
ಬಗೆಬಗೆಯಾಗಿಯೆ ಬಗೆದನು ಮಾನವ;
ಮೂಕ ಪ್ರೇಯಸಿ ತಳೆದಿಹಮೌನವು
ಅರ್ಥಗರ್ಭಿತವೊ ಬರಿ ಬರಡೋ?

ಅಪ್ಪನ ಮನೆ ಹೆಸರಾವುದೊ ಅರಿಯದು,
ಗಂಡ ಇಟ್ಟ ಹೆಸರಿಂದ ಕರೆಯುವನು;
ಅನುಕೂಲೆಯೊ ಪ್ರತಿಕೂಲೆಯೊ ಅರಿಯನು–
ಬೇಕಾದರ್ಥವ ಬರೆಯುವನು!
ಮಾನವಗಿರುವುದು
ಮಾನವಮಾನ;
ಮಂಕುತಿಮ್ಮತನ
ಅವನನುಮಾನ!
ಮುಗ್ಧೆಯೊ ಮೂಢೆಯೊ
ಪ್ರೌಢೆಯೊ ಎಂದು
ಪರಿಕಿಸಲೇತಕೆ
*ತಲೆದಾನ?
ರಸ ರಮ್ಯತೆ, ಆ ಸತ್ಯ ಸಾತ್ವಿಕತೆ
ವಿಷ ಕುರೂಪ, ಆ ಅನೃತ ತಾಮಸಿಕೆ
ಎಲ್ಲ ಮಾನವತೆ ಕಲ್ಪಿತ ಕಲ್ಪನೆ;
ನಿಸರ್ಗಕೆಲ್ಲಿದೆ ಶೈತ್ಯ ಸೆಕೆ?

೩

ಅಜ್ಞಾತದ ಅಡಿಗೆಯ ಸಾಮಾನ
ಅಡಬಂದರೆ ಸಾಕದ ಮತಿಮಾನ;
ಅವನವನಡಿಗೆಯು ಅವಗೆ ರುಚಿ
ಅವನವನರಸಿಯೆ ಅವಗೆ ಶಚಿ!

ಹೋಲಿಸ ಹೊರಡುವ ವಿಜ್ಞಾನ
ಉಪಮಾಪ್ರಿಯ ಕವಿಯಜ್ಞಾನ
ಅಸಹಜ ಆಸೆಯ ಪರಿಣಾಮ
ಅದರಿಂದಲೆ ಸುಖ ನಿರ್ಣಾಮ!

ಅಜ್ಞಾತವ ಕೈಹಿಡಿದಿಹ ಮಗುವೇ,
ಗಂಡತನಕ್ಕದು ಬಗ್ಗದಲಾ!
ಪ್ರಜ್ಞಾನಿಸಲೀ ಬಾಳೇಬಗ್ಗಡ,
ಭಂಡತನಕ್ಕೇ ಮೀಸಲಲಾ!

ಬೆಲೆಕಟ್ಟುವ ಬಗೆ ಮಾನವಗಿದ್ದರೆ
ನಿಸರ್ಗಕೆಲ್ಲಾ ಒಂದೆ ಬೆಲೆ!
"ಸುರೂಪಂ ವಾ ಕುರೂಪಂ ವಾ
ಪುಮಾನಿತ್ಯೇವ ಭುಂಜತೇ!"

* ತಲೆಕೊಡುವುದು, ವಿಚಾರ ಮಾಡುವುದು

ಅವಧೂತ

ಯಾರು, ಯಾರು?
ಗುರುತೆ ಇಲ್ಲ–
ಹೋಗು ನೀನು!
ಕ್ಷಣಿಕ ಬುದ್ಧಿ
ಸಾವಿರಾರು
ಬಂದು ಹೋದ
ಮಿದುಳೊಳಾರು
ನವೆಯ ಬೇಕು
ನಿತ್ಯ ಸತ್ತು?
ನಿರ್ಲಜ್ಜತೆ
ಕೊಡುವ ಮುತ್ತು
ಮರುಳು ಗೊಳಿಸಲದಕೆ ಸೋತು
ಸಂತಾಪದ
ಮೇಲೆ ಕೂತು
ತನ್ನ ತಾನೆ
ಸುಟ್ಟುಕೊಂಬ

ಆಸೆವಾಳ ಬಂಧನ
ಹರಿಯಿತಿದೋ! ಇಂಧನ–

ಈ ಶರೀರ
ಈ ಜಗಕ್ಕೆ;
ಈ ನಗೆ ಬರಿ
ಈ ಮೊಗಕ್ಕೆ
ಕೆರೆಯ ನೀರು ಕೆರೆಗೆ,
ತಿರೆಯ ಬಾಳು ತಿರೆಗೆ!
ಮಹಾಭೋಧ–

ದೆಚ್ಚರಿಕೆಯ
ಮಹತ್ತಾದ
ನಿಚ್ಚಣಿಕೆಯ
ಹತ್ತಿ ದಿಕ್ಕು
ದೆಸೆಗಳನ್ನು
ದೃಶ್ಯದಲ್ಲಿ
ಲಯಿಸೆ, ಪೂರ್ಣ
ಗಗನವಾಗಿ
ನಿಂತ ತೀರ್ಣ
ಮಹಾ ಶಾಂತಿ ಸಾಗರ,
ಮಹಾತ್ಮ ಗುಣದಾಗರ!

೨

ಎಲೆ ಜಗತ್ತೆ,
ಬಿಟ್ಟೆ ನಿನ್ನ
ಬೆನ್ನು ಹತ್ತಿ
ನಡೆವುದನ್ನ;
ದೃಶ್ಯವೆಲ್ಲ ನೀನಾಗಿರೆ,
ನಶ್ವರ ಮದಕಾಳಾಗಿರೆ–
ಹಿಡಿದ ಪಟ್ಟ ಬಿಡದ ನಿನ್ನ

ಪಾದದಲ್ಲಿ ಮಮತೆಯನ್ನ
ಸಮರ್ಪಿಸಿದೆ;
ಇನ್ನು ಮೇಲೆ
ನಾನೆ ನಾ ಸ್ವಲಕ್ಷಣ–
ನಿರ್ವಿಕಲ್ಪ ವೀಕ್ಷಣ–
ವಿಚಾರಗಳ
ಇಲ್ಲೆ ಹುಗಿದು
ಗೋರಿಕಟ್ಟಿ

ಕೈಯ ಮುಗಿದು–
ನಿರ್ವಿಚಾರ
ನಿರ್ವಿಕಾರ
ನಿರ್ವಾಣವನೇರಿದೆ,
ನಿರ್ಬಂಧವ ಮೀರಿದೆ!
ಕಾಸು ಬೆಲೆಯ
ಭಾವರಾಜ್ಯ
ಹೋಗಲಿ, ಇ
ನ್ನಿಲ್ಲ ವ್ಯಾಜ್ಯ!
ನಿನ್ನ ಸಂಗ–
ದಲ್ಲೆ ಕಲಿತೆ
ನಿನ್ನಿಂದೇ
ನಾನು ಬಲಿತೆ
ವೃಕ್ಷದಲ್ಲಿ
ಕಳಿತ ಹಣ್ಣು
ಸಿಡಿದು ದೂರ ಉದುರದೇ?
ಶುಕಾತ್ಮದಲ್ಲಿ ಸೇರದೇ?

೩

ಅವಿಚಾರಿಗಳಾಡುಂಬೊಲ
ಅವಿವೇಕದ ಮೈಯುಂಬಳ
ಕೊಡುವುದೆಲ್ಲ ಬರಿ ಗುಂಬಳ;
ಸೀಟಿ ಒಗೆದೆನಾ ಸಿಂಬಳ!
ಹರಿವ ನೀರು ಉರಿವ ಕಿಚ್ಚು
ಕಾಣದಂಥ ನನ್ನ ಅಚ್ಚು
ಮಹಾದರ್ಶನಸ್ಥಿರ–
ದುಃಖೋತ್ತರ ಸಂಸ್ತರ!

ಏನಾದರು ಏನಾಗದು,
ಎಲ್ಲೆಲ್ಲೂ ಮನ ಹೋಗದು;
ದಯಾ ಕ್ರೌರ್ಯ ಭೇದವಳಿದ
ಸ್ವತಃ ಶುದ್ಧ ಭಾವ ಬೆಳೆದ

ಘನಾನಂದ ರಾಜ್ಯದೀಶ,
ನನಗೆ ನಾನೆ ವಿಶ್ವಕೋಶ!
ನಿರಾವರಣ ಸುಂದರ–
ಧಿಕ್ಕೃತ ಜಗದಾದರ!

ಗೌನಿನ ಹಬ್ಬದ ಬೆಡಗು

ಏನೋ ಗೆಣ್ಯಾ ಎತ್ತಾಗ್ನೋಡ್ತೀ ಗೌನು ಗಿವ್ನೂ ಹಾಕಿಕೊಂಡು
ಶಾಣ್ಯಾರೆಲ್ಲ ಹೋಗತಾರ ಯಾವಽಕಡಿಗೆ।
ಆ ಬೂಟ್ಗಾಲನೆತ್ತಿ ನಡೆಯೊದೆಂಽಥಾ ನಡಿಗೆ
ಅವರ । ಆಟ ಪಾಟ ನೋಟ ಎಲ್ಲಾದ್ರಲ್ಲೂಽ ಬೆಡಗೆ!
ನೋಽಡ್ ಗೆಣ್ಯಾ ಸುತ್ತಿದ್ ಪೇಟ
ಚಂದ್ರಾಮ ನಿಂಥಂಗ ಮಾಟ
ಕರೀ ಕೋಟು ಕತ್ತಲ್ತ್ವಾಟ
ಕಂಬರ್‌ಬನ್ನು ಬಂಗಾರ್ ಥೇಟ
ಬಿಳೀ ಚಡ್ಡಿ ಇಳಿಬಿಟ್ಟು ಹೋಗುವ ಸರ್ದಾಽರ ಮಕ್ಳ
ಅರ್ಬು ಜರ್ಬು ಎಷ್ಟು ಹೇಳ್ಲಿ ಸವಿಗಾರ
ನಿನ್ನ । ತುರ್ಬಿನಂತೆ ಅವ್ರಿಗಿಲ್ಲ ಸಾವಕಾರ
'ಕರ್ಲಿ । ಹೆಡ್ಡು' ಕಾಣೋ ಎಲ್ಲರ್ರೂಗ್ನು ಹಳ್ಳಿಗಮಾರ
ಕೇಳೋ । ಹಳ್ಳಿಗಮಾರ॥
ಜಗನ್ ಮೋಹನ್ ಪ್ಯಾಲೇಸಂತೆ ಜಾತ್ರೀಹಂಗಽ ಜನಸಂತೆ
ಯಾತರ್ ಚಂದ ಎಲ್ಲಿ ಅಂಬೋದ್ಗೊತ್ತೇನೋ ನಿನಗೆ?
ಕುಡಿಯೋ। ದ್ಮಾತ್ರಗೊತ್ತು; ಕಂಡೂ ಕೇಳಿ ಕಲಿಬೇಕೋ ಹುಡುಗ
ಅತ್ತಾಗ್। ಆಪೀಸರ್ಗೋಳ್ ಬರ್ತಾರ್ ದಾರಿ ಬಿಟ್ನಡ್ಯೋ ತುಡುಗ।
ಬಾಽತ್ ಗೀತ್ ಬಂಽದ್ ಮಾಡೋ
ಜೀತದ್ಮಗ್ನೇ ನೋಽಡ್ ಬಾರೋ
ಎಂಥ ಚಂದ ಇವರಂದ
ಇದ್ಯಾ ಓದಿದಾಽನಂದ
ಕನ್ನಡ್ಕಂದರ್ ಕಣ್ಗೇ ಅಂದ
ಕನ್ನಡ್ ನಾಡಿಗಿವ್ರೇ ಮುಂದ
ಬಗ್ನೆಯೋಳೊ ಅವ್ರೋಳ್‌ಗ್ಯಾರ್ನಂ ಸಾಯೇಬ್ರಮಗ
ಕೂಡಿದ್। ಮಂದೀಯವ್ರೊಳಗ
ಅವರ।ದಿರ್ಸು ಝುಗ್ ಭಗ॥

ಶೀಪಾಯ್ ಮಂದಿ ಯೆಡ್ಕಬಲ್ಕ ನೋಡುವಾಗ ನಮ್ಮನ್ನಾಳೋ
ದೊರ್ಗ್ಳೋಳಿತ್ತ ಹಾಯತಾರ ನೋಡ್‌ಬಾರೋ ತಮ್ಮ
ಕೊರ್ಳ । ಮುತ್ತಿನ್ಹಾರ ಕಿವಿಯ ಕಡ್ಕು ಏನು ಸಂಬ್ರಮ
ತುರ್‍ಯಾ । ಕಟ್ಟಿsದ ಕಿರೀಟದ್ ಜರ್ಬಿsಗ್ಯಾವುದು ಸಮ?
ದೇವಲೋಕದಂತ ಸಭೆ
ದೇವೇಂದ್ರ ಇವ್ರ್ ಮುಂದೆ ಗೂಬೆ
ಮಕದಲ್ಲಿ ಇನ್ನೆಂತ ಶೋಬೆ
ಸಾವಿರ್ ಜಲ್ಮದ್ ಪುಣ್ಯಬೇಕು ಇಂತ ದೊರೆಯ ಕಾಂಬೋದಕ್ಕೆ
ಕಂಡ್ ಮ್ಯಾಕಿನ್ನು ಸತ್ರೂ ಮತ್ತೆ ಇಲ್ಲಪ್ಪದುಕ್ಕ
ಶಿರವ। ಬಾಗಿ ಕೈಮುಗ್ದೆಲ್ಲಾರೂನೂ ನಿಲ್ಲೋದೇ ಪಕ್ಕ
ಎಲ್ಲ।ನಿಲ್ಲೋದೇ ಪಕ್ಕ॥
ಕಾಲೇಜ್‌ಕಲ್ತ ಮಂದಿಯೆಲ್ಲ ಸಾsಲ್ ಸಾಲಾಗಿಸ್ಕೊಂತಾರ
ಕಲ್ತಿದ್ದಕ್ಕs ಚೀಟಿವೊಂದ ಬರಾಬರಿ
ಮತ್ತ । ಮುಂದಕ್ಕೂತ ಮಾರಾಯರ್ಗೆ ತರಾತುರಿ
ಪ್ರಬ್ಳೋ!ಳಿಂದ ಪಡ್ಕೋತಾರ ಮೆಡ್ಲ ಸರಾಸರಿ!
ಬುದ್ಧಿವಂತ ಮಂದಿ ಏನ್ಲ
ಬೆದರೀಕಿ ಅಂಬೋದೇ ಇಲ್ಲ
ನಾವೂ ಹುಟ್‌ಕ್ಯಾರ್ ಪರ್ಯೊಜ್ನೇನು?
ಇದ್ರೆ ಇರ್‌ಬೇಕ್ ಇವ್ನಂಗ ತಾನೂ!
ಬಾಸ್ಣ ಮಾಡೋ ಸಾಯೇಬ್ ಮತ್ತೆ ಎದ್ದು ನಿಂದ್ರೋ
ಝೋಕು ನೋಡ್ಲ
ಹಾವಿನ್ ಮದ್ಯ ಸರ್ಪ ಹೆಡಿಯೆತ್ತಿಧಾಂಗ
ಕೆರೆಯ । ಮೀನಿನ್ ಮದ್ಯ ಬೆಳ್ಳಕ್ಕಿ ಕೊಳ್ಪೆತ್ತಿಧಾಂಗ॥
ಗುಲ್ಲು ಗೌಜು ಒಂದೂ ಇಲ್ಲ ಎಲ್ಲ ಸಾಯೇಬ್ ಮಂದಿ ಡೌಲs
ಮೆಲ್ಲ ಮೆಲ್ಲಗೆಲ್ಲ ಜನ ಚದರೀತು
ಕೈಯ । ಕೈಯಹಿಡಿದು ಜಗ್ಗಿ ನಕ್ಕು ನಡೆದೀತು
ಪ್ರಬ್ಳೋ।ಳ್ಗೆಲ್ಲ ದಾರಿಬಿಟ್ಟು ಸುತ್ತ ಸರಿದೀತು!
ಹ್ಯಾಟು ರುಮ್ಮಾಲ್ ಟೋಪಿಭಾರಿ
ಮೋಟಾರ್ ಗೀಟಾರ್ ಸ್ಯಾಕಲ್‌ಸ್ವಾರಿ

ಮಾಽಡ್ತಾವ ಮಝ್ಝಾದಾರಿ
ಚಹಾಗಿಹಾ ಕುಡ್ದು ಪೇರಿ
ದಿಳ್ಳಿದರ್ಬಾರ್ಗಿಲ್ಲಿಂದಾನೆ ಹೋಽಗತಾರ ನೋ ಡೋ ಗೆಣ್ಯಾ
ಒತ್ತಾರ್ ಮಾಡಿ ಯಾಲಕ್ಸೆಟ್ಟಿ ಗಾಡಿಯನೇರಿ
ಶಿಪಾಯ್। ಎತ್ತಿ ಊದುತಾನೆ ಮತ್ತೆ ಹಿಡ್ದು ತುತ್ತೂರಿ?
ಮನೀಗ್। ನಾನೂ ನೀನೂ ನಡಿಯೋದೊಂದಽ ಹರದಾರಿ
ಸಿರಿವರ ಕವಿಕಟ್ಟಿ ಹಾಡಿದ್ದನ್ನಽ ಕೇಳೋದ್ದರ್ಮ
ಅದ್ಕಽ ಚಕ್ಕರ್ ಕೊಟ್ರೆ ನಿನ್ಗೇಮಾಡೇನ್ ಛಿ ಮಾರಿ ।
ನಿನ್ಗೇ ಮಾಡೇನ್ ಛಿಮಾರಿ॥

ಪ್ರಣಯ ಪತ್ರ

ಓ ನಲ್ಲೆ–
ಇಲ್ಲಿಯವರೆಗೂ ನಾನು ಕೊಟ್ಟಿರುವ ಪ್ರಣಯಬಂಧದೊಸಗೆ
ಎಲ್ಲ ಸುಳ್ಳು ಎಂದೆನಿಸಿತೆನ್ನನಾದರಣೆ ನಿನ್ನ ಬಗೆಗೆ
ಬೆಳೆಯುತಿಹುದು ದಿನದಿನಕು; ನಿನ್ನ ನಾ ಕಂಡ ಕಂಡ ಹಾಗೆ
ತೋರಿ ಬರುವೆ ನೀ ನಿಂದ್ಯೆಯಾಗಿ ಕಣ್ಮುಂದೆ ಹೋಗು ಹೋಗೆ।

ಬಹಳ ಗುಣಿಸಿ ಬಲು ತರ್ಕಮಾಡಿದರೆ ತಿಳಿದುಬಂದುದೇನು?
ನೀನು ನನ್ನ ಹಗೆಯೆಂದು; ನಂಬು ನನಗಿಷ್ಟವಿದ್ದುದಿಲ್ಲ
ನಿನ್ನ ಮದುವೆಯಾಗುವುದು, ನಮ್ಮ ಸಂವಾದ ಕೊನೆಗೆ ನಡೆದ
ಬೇಸರವನು ಹುಟ್ಟಿಸಿತದೆಂದು ಪರಿಣಮಿಸಲಿಲ್ಲ ತಾನು
ನಿನ್ನ ಗುಣಕೆ ಮಿಗಿಲಿಲ್ಲವೆನಿಸಿ ನಂಬಿಸಿತು ಎಂಬ ಹಾಗೆ!

ನಿನ್ನ ಮುನಿಸು–ಮಂಗಾಟದಿಂದ ನೆರೆ ದುಃಖಿಯಾದೆ ನಾನು
ನಾವು ಕೂಡಿದರೆ ನನಗೆ ಲಭಿಸುವನುಭವವದೇನು ಗೊತ್ತೆ?
ನನ್ನ ಹಡೆದವರ ಹಗೆತನವೊಂದೇ. ಕಾಣಲಾರದೆಂದೂ
ಹರ್ಷ ನಿನ್ನೊಡನೆ ಬಾಳುತಿರಲು; ಇದೆ ನನಗೆ ಹೃದಯವೊಂದು
ಕೊಡಲು ಕನ್ನೆ! ಮತ್ತಾದರೆಂದಿಗೂ ಎಣಿಸಬೇಡ ನೀನು
ನಿನ್ನ ದಾಸನೆಂದದನು ಕೊಡುವೆನೇ ನಿನಗೆ ತಿಳಿದು ಬಹಳ
ಚಪಲೆ ಚಂಡಿ ವಿಕ್ಷಿಪ್ತೆಯೆನಿಸಿಹಳಿಗೆನ್ನಲಾರೆನೆಂದೂ
ಶಕ್ತಳೆಂದು ಗೌರವವ ತರಲು ಮನೆತನಕು ನನಗು ನೀನು!

ಹೌದು ಹೌದು; ನೀನೆಣಿಸಿದಷ್ಟಕೂ ತೋರದಿರದು ನನ್ನಿ
ನನ್ನ ಮಾತು ನಿಜ ಮಾಡಬೇಕು ಸಾಹಾಯ್ಯವೊಂದನೆನಗೆ
ನನ್ನ ಬಿಡುವುದರೊಳಾಗ ಮನ್ನಿಸುವೆ ಕಷ್ಟಪಟ್ಟ ನಿನ್ನ

ಉತ್ತರಿಸಲು. ನಿನ್ನೋಲೆಯಲ್ಲಿ ತುಂಬಿರುವುದರಸಿ ನೋಡೆ
ಮೂರ್ಖಬುದ್ಧಿ ಮೇಣ್ ನಿನ್ನೊಳಿಲ್ಲ ಕಿರುನೆರಳಿನಷ್ಟು ಕೂಡ
ಸದ್ವಿವೇಕ, ಚಾತುರ್ಯ; ನಿನಗೆ ನಮೊ, ನಂಬು ನನ್ನ ಜಾಣೇ
ನನ್ನ ಸಲಹೆ ನಿನಗಿದೇ–ನಾನು ನಿನ್ನೊಡನೆ ಇರುವನಲ್ಲ
ನಿನ್ನ ಹೃದಯಕಮಲಕ್ಕೆ ಮಿತ್ರ ನಾದೇನೆ ನಮ್ರದಾಸ*!

---

* ಈ ಪತ್ರದಲ್ಲಿ ಒಂದೊಂದು ಸಾಲನ್ನು ಬಿಟ್ಟು ಓದಿದರೆ ಹಾಗೇ ಓದಿದ್ದರ ವಿರುದ್ಧವಾದ ಅರ್ಥ ಬರುವುದು.

ಮೊಹರು ಹೊಡೆದ ಖಜಾನೆ

ಓ ಅದೊಂದು ಪೆಟ್ಟಿಗೆ–
ಸಿದ್ಧೇಶ್ವರ ಕಂಪೆನಿ ಸಮೆದುಕ್ಕಿನ ಹೊಸಪೆಟ್ಟಿಗೆ!
ಆ ತಿಜೋರಿಯಲ್ಲಿಹ ಹಣ ಬ್ಯಾಂಕಿನವರ ಕಟ್ಟಿಗೆ
ಎಂದೆಂದೂ ಸಿಕ್ಕದಲ್ಲೆ ಜಂಗು ತಿಂದು ಹೋದರೂ
ಒರಲೆ ಹಿಡಿದು ಜಿರಲೆ ತಿಂದು ಕಸವಾಗಿಯೆ ಹೋದರೂ
ಪಿರಿಮಿಡ್ಡುಗಳೊಳಗಿಹ ಹಳೆಮಮ್ಮಿಯಂತೆ ಆದರೂ
ಬಾಗಿಲ ತೆರೆಯನು ಮಾಲಕ ಕಳ್ಳರು ಕೊಲ ಬಂದರೂ;
ಪೆಟ್ಟಿಗೆಯೊಳಗಿಟ್ಟುದನ್ನು ತೆಗೆಯಕೂಡದೆಂದಿಗೂ
ಎಂದವರಪ್ಪನ ಆಜ್ಞೆಯ ಪಾಲಿಸುತಿಹನಿಂದಿಗೂ!

ಅದೋ ಅವನು ಭಾರತೀಯ! ಅವನ ಬಗೆ ತಿಜೋರಿಯೇ!
ಅಲ್ಲಿಟ್ಟಿಹ ವಿಚಾರಗಳ ಸುರಕ್ಷಿತತೆಗಾಗಿಯೇ
ಹಗಲಿರುಳೂ ಶ್ರಮಿಸುತಿರುವ ಹೊಸವಿಚಾರ ಸೋಂಕದೆ
ಮಡಿಯಾಗಿಡಲವುಗಳನ್ನು; ಶಾಂತಿ ಸುಖದ ಬಿಂಕದೆ
ಮಿದುಳು–ಪೆಟ್ಟಿಗೆಯ ಹೊರಗೇ ಹರಿಯಗೊಟ್ಟು ಹೊಸದನು,
ಗೊಂಬೆಗಳಂತಾಡಿಸಿ ಮತ್ತೆಸೆವ ಬೀದಿಯಾಚೆಗೆ:
ಹತ್ತು ಜನರ ನಡುವೆ ಮಾತ್ರ ಖರ್ಚಿಗಿವನ್ನಾಡುವ!
ಆಚಾರಕ್ಕಾರಂಭಿಸೆ ಪೆಟ್ಟಿಗೆ ತಡಕಾಡುವ;
ಆ ನಾಣ್ಯಗಳನ್ನೆ ಬಳಸಿ ಸಾವಕಾರನಾಗುವ!

ಆ ಮಿದುಳಿನ ಕೋಟೆಯಲ್ಲಿ ಬಯ್ತಿಟ್ಟಿಹ ನಾಣ್ಯಗಳ್
ದೇಹೇಂದ್ರಿಯ ಸುಖಕ್ಕಷ್ಟೆ ತನ್ನ ಮೇಣ್ ಕುಟುಂಬದ;
ಅವನ್ನೊಮ್ಮೆ ವೇದವೆಂಬ ಹಳಬರೆದುರು ಬಂದರೆ,
ವಿಜ್ಞಾನವದೇನೆ ಎಂಬ ಹೊಸಬರೆದುರು ಬಂದರೆ
ಸೂಚ್ಯವಾಗಿ; ವಾಚ್ಯವಾಗಿ ಅವರದೆ ಸರಿ ಎನ್ನುವ,

ಅದೇ ಮಾನ್ಯವಿದೆ ತನಗೂ ಎಂದು ಗೋಣು ತಿರುಹುವ;
ಮಾತಾಡದೆ ಹೂಂಗುಟ್ಟುವ, ಮೊದಲಿನಂತೆ ಮಾಡುವ–
ದ್ವಿಮುಖ ಯಂತ್ರವಿದು ರೋಬಟ್ಟಿಗೂ ಹೆಚ್ಚು ಕ್ರೂರ:
ಎದೆಯೆಲ್ಲಾ ಬಚ್ಚಲಿಲ್ಲಿ; ಇಲ್ಲ ಇಲ್ಲಿ ವಿವರ!

ಸದಾಭದ್ರ–ಸರ್ವಭದ್ರ ಮುಚ್ಚಿದ ಮನವೆಂಬುದು;
ಹಳೆಯ ಗಾಳಿಯಷ್ಟೆ ಒಳಗೆ, ಹೊಸಗಾಳಿಯು ತುಂಬದು!
ಹೊಸವೇಷದ ಹಳಮೆಬುರುಡೆ ಪ್ರಸನ್ನವಾಕ್ಸುಂದರ;
ಪೆಟ್ಟಿಗೆ ಹೊರಗಡೆ ಸುಳಿವುವು ತತ್ವಮೇರು–ಮಂದರ!
ಬುದ್ಧವಾದ, ಬುದ್ಧಿವಾದ, ಬ್ರಹ್ಮವಾದ ಬೇಕೇ?
ಸಾಕ್ಷರ–ರಾಕ್ಷಸ ಮುಖ ತಾ ಪ್ರಸವಿಸುವುದು 'ಜೋಕೇ'?
ಮಾತು–ಮೌನವೆರಡಕ್ಕೂ ಹಿನ್ನೆಲೆ ಆ ಪೆಟ್ಟಿಗೆ–
ಬಡವರ ಸುಡಲದರೊಳಗಿದೆ ಒಣ ದಿಂಡಿಲ್ ಕಟ್ಟಿಗೆ!
ಮೃದು ಹೃದಯದ ಮರ್ಮಂಗಳ ಮೆಟ್ಟಿ ಮೆಟ್ಟು ಮೆಟ್ಟಿಗೆ
ಅದುಮುವ ಸೈತಾನರನ್ನು ಕೂಡಿಟ್ಟಿಹ ಕೊಟ್ಟಿಗೆ–

ಒಡೆಯದು ಬಡ ಪೆಟ್ಟಿಗೆ,
ಲುಬ್ಧಾಢ್ಯನ ರೊಟ್ಟಿಗೆ–
ಬಾಸುಂದಿಯನೊದಗಿಸುವೀ
ಅವನ ಮಿದುಳು–ಪೆಟ್ಟಿಗೆ!

ವೇಸ್ಟ್‌ಸೂಕ್ತ

ಆ ಅದೂ ವೇಸ್ಟು ಈ ಇದೂ ವೇಸ್ಟು ಯಾವುದೂ ವೇಸ್ಟು ಜಗದ
ಈ ವೇಸ್ಟಿನಿಂದ ವೇಸ್ಟ್ ತೆಗೆದರುಳಿವುದೋ ವೇಸ್ಟು ಬುದ್ಧಿಯೊಗೆದ॥
ಸಂಸಾರ ವೇಸ್ಟು ಸಂನ್ಯಾಸ ವೇಸ್ಟು ವಿಜ್ಞಾನ ವೇಸ್ಟು ನಮ್ಮ
ಸಿನೆಮಗಳು ವೇಸ್ಟು ಹೋಟೆಲೂ ವೇಸ್ಟು ಇಸ್ಪೀಟು ವೇಸ್ಟು
ತಮ್ಮ ॥೧॥

ಕಾಣುವುದು ವೇಸ್ಟು ಕೇಳುವುದು ವೇಸ್ಟು ತಿನ್ನುಣ್ಣುವುದೂ ವೇಸ್ಟು
ಮೂಸುವುದು ವೇಸ್ಟು ಮುಟ್ಟುವುದು ವೇಸ್ಟು ರೇಸಾಡುವುದೂ
ವೇಸ್ಟು ॥
ಉಡಿಗೆಯಲ್ಲಿ ನಮ್ ನಡಿಗೆಯಲ್ಲಿ ಪಡಿನುಡಿಯುವಲ್ಲಿ ವೇಸ್ಟು
ಕುಡಿಯುವಲ್ಲಿ ಕುಣಿದಾಡುವಲ್ಲಿ ಕುಣಿಸ್ಯಾಡುವಲ್ಲಿ ವೇಸ್ಟು ॥೨॥

ಬರುವುದೂ ವೇಸ್ಟು ಹೋಗುವುದು ವೇಸ್ಟು ಇದ್ದಳಿಯುವುದೂ ವೇಸ್ಟು
ತರುವುದೂ ವೇಸ್ಟು ಕೊಡುವುದೂ ವೇಸ್ಟು ತಾಟಸ್ಥ್ಯ ಕೂಡ
ವೇಸ್ಟು॥
ಯೋಗ ವೇಸ್ಟು ಆ ಭೋಗ ವೇಸ್ಟು ಸಂಯೋಗ ವಿಪ್ರಯೋಗ
ರಾಗ ರಮಣಿಯ ವಿರಾಗ ವೇಸ್ಟು ಮನಕಂಟಿದೆಲ್ಲ ರೋಗ ॥೩॥

ಕುಂತಲ್ಲಿ ವೇಸ್ಟು ನಿಂತಲ್ಲಿ ವೇಸ್ಟು ತಿರುಗಾಟದಲ್ಲಿ ವೇಸ್ಟು
ಮಲಗಿದರೆ ವೇಸ್ಟು ಗೊರೆದರೂ ವೇಸ್ಟು ಯೋಜಿಸಿದ್ದೆಲ್ಲ
ವೇಸ್ಟು ॥
ಹುಲುಮಂತ್ರ ತಂತ್ರ ಕಾಂಟ್ರಾಕ್ಟು ಪ್ಯಾಕ್ಟು ಪಂಚಾಯ್ತಿ ಪೂರ ವೇಸ್ಟು
ಇಂಡಸ್ಟ್ರಿ ಹಿಸ್ಟ್ರಿ ಜಾಗರ್ಫಿ ಮೆಥೆಮೆಟಿಕ್ಸ್ ಕಲಿತುದೆಲ್ಲ
ವೇಸ್ಟು ॥೪॥

ಗೊರಟು ಗೆರಟೆ ಮಣ್‌ಪರಟೆ ಪಾತ್ರ–ಪಗಡೆಗಳ ಗಳಿಕೆ ವೇಸ್ಟು
ಶರಟು ಕೋಟು ಬನಿಯನ್ನು ಬೂಟು ಧರಿಸಿರುವ ಹಿರಿಮೆ
ವೇಸ್ಟು॥
ರಿಸ್ಟ್ ವಾಚು ವೇಸ್ಟು ಫಸ್ಟ್‌ಕ್ಲಾಸು ವೇಸ್ಟು ನಕಲ್ ಮಾಡಿದ್ದೂ ವೇಸ್ಟು
ಜುಟ್ ತೆಗೆದು ಕ್ರಾಫು ಬಿಡಿಸಿದ್ದು ವೇಸ್ಟು ಮ್ಯಾರೇಜು ಮೋಜು
ವೇಸ್ಟು ॥೫॥

ನಮ್ ಒಳಗೆ ಹೊರಗೆ ಎರಡಾಗೆ ನೀತಿ ಬುಡತಲೆಗಳಡ್ಡ ತಿಡ್ಡ
ಒಳಹೊರಗೆ ವೇಸ್ಟು ಕಂಪೋಸ್ಟು ಹರವಿದರೆ ಗುಡ್ಡದಷ್ಟು ದೊಡ್ಡ ॥
ಆರುಹಗೆಗಳಾತ್ಮವನು ಬಂಧಿಸಿರಲು ಮಾತಾಡಿ ಕಡಿದ ಗುಡ್ಡ
ಬರೆದೊಟ್ಟಿದೋಲೆಗಳ ರಾಶಿ ಕೂಡ ವೇಸ್ಟ್ ಬ್ರಹ್ಮ ಬಿಟ್ಟ ಗಡ್ಡ ॥೬॥

ಮುತ್ತು ರತ್ನ

(ಶಿಶುಗೀತೆಗಳ ಸಂಕಲನ)

ಅವಿಭಜಿತ ದ.ಕ. ಜಿಲ್ಲೆಯವರಾದ ಪ್ರೊ.ಬಿ.ಎಚ್.ಶ್ರೀಧರರವರು ಕನ್ನಡ, ಸಂಸ್ಕೃತ, ಆಂಗ್ಲ ಭಾಷೆಯ ಮಹಾನ್ ವಿದ್ವಾಂಸರು. ಸಾಹಿತ್ಯ ಕ್ಷೇತ್ರದಲ್ಲಿ ಅವರು ಕೈಯಾಡಿಸದ ಪ್ರಕಾರಗಳಿಲ್ಲ. ತನಗೆ ಸರಿಕಂಡದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳಬಲ್ಲ ಅವರ ಚಿಂತನೆಗಳು ಓದುಗರಿಗೆ ಮಾತ್ರವಲ್ಲ ಬರಹಗಾರರಿಗೂ ಪ್ರಚೋದಕ, ಮಾರ್ಗದರ್ಶನವಾಗಬಲ್ಲುದು. ಇಂತಹ ಮಹಾನ್ ಸಾಹಿತಿಯ ಸಮಗ್ರ ಸಾಹಿತ್ಯ ಹೊರಬರುತ್ತಿರುವುದು ಸಂತೋಷದ ವಿಚಾರ.

ಇದೇ ಸಂದರ್ಭದಲ್ಲಿ ಇವರ ಈ "ಮುತ್ತು ರತ್ನ" ಮಕ್ಕಳ ಕವನ ಸಂಕಲನ ಪ್ರಕಟವಾಗುತ್ತಿರುವುದು ಅರ್ಥಪೂರ್ಣವಾಗಿದೆ. ಇತರ ಸಾಹಿತ್ಯ ರಚನೆಗಿಂತಲೂ "ಮಕ್ಕಳ ಸಾಹಿತ್ಯ" ರಚಿಸುವುದು ಬಹಳ ಕಷ್ಟದ ಕೆಲಸ. ಮಕ್ಕಳ ಮುಗ್ಧ ಮನಸನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವವರಿಗೆ ಮಾತ್ರ ಈ ಕೃಷಿ ಸಾಧ್ಯ. ಪ್ರೊ.ಬಿ.ಎಚ್.ಶ್ರೀಧರ್‌ರವರ ಈ ಶಿಶುಗೀತೆಗಳು ಮಕ್ಕಳ ಮನಸನ್ನು ಬಿಂಬಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ಇಲ್ಲಿಯ ಪ್ರತಿಯೊಂದು ಗೀತೆಗಳಲ್ಲಿ ಮಕ್ಕಳ ಮನಸನ್ನು ಮುಟ್ಟುವ, ತಟ್ಟುವ ಜೀವಂತಿಕೆಯಿದೆ. ಮಾನವೀಯತೆಯ ಸ್ಪರ್ಶವಿದೆ. ಮಕ್ಕಳ ಮುಗ್ಧ ಮನಸಿನ ಕುತೂಹಲವನ್ನು ಪ್ರಚೋದಿಸುವ ವೈಚಾರಿಕ ಚಿಂತನೆಗಳಿವೆ, ಸ್ಪಂದನೆಗಳಿವೆ. ತೊಟ್ಟಿಲ ಮಗುವಿಗೆ ಹಾಡುವ ಲಯ, ರಾಗ, ಪ್ರಾಸ, ಭಾವಗಳಿವೆ. ವೈವಿಧ್ಯತೆಗಳಿವೆ. ಮನೋವಿಕಾಸಕ್ಕೆ ದಾರಿಗಳಿವೆ. ಜೊತೆಗೆ ಇದು ಮಕ್ಕಳಿಗೆ ಹಾಡಿ, ಕುಣಿಯಲು ತಕ್ಕುದಾಗಿದೆ. ಮಕ್ಕಳ ಮನಸನ್ನು ಮಿಡಿಯಲು ಹಾಗೂ ಹೃದಯವನ್ನು ತಣಿಸಲು ಈ ಕೃತಿ ಸಹಕಾರಿಯಾಗಲಿದೆ.

ಮುಹಮ್ಮದ್ ಕುಳಾಯಿ

ಒಡನಾಡಿಗಳ ಓಲಗ

ನನ್ನ ಗೆಳೆಯ ರಾಜ
ನೆಲಗಡಲೆಯ ಬೀಜ
ತಿನ್ನುವಲ್ಲಿ ಮಹಾ ಶೂರ–
ಇದ್ದರೆ ಅದು ತಾಜಾ!

ನನ್ನ ಗೆಳತಿ ಶಾರದೆ
ಕಾಫಿ ಎದುರು ಬಾರದೆ
ಒಂದಕ್ಷರ ಬರೆವಳಲ್ಲ–
ಇದ್ದರೆ ಅದು ಆರದೆ!

ನಮ್ಮ ತಮ್ಮ ಬೋರ
ಇಷ್ಟ ಅವಗೆ ಖಾರ!
ತಿಂದು ಬಿಟ್ಟನೆಂದರವನ
ಮಾತು ಮಹಾಪೂರ!

ನನ್ನ ತಂಗಿ ಲಿಂಗಿ
ಅವಳಿಗೆ ಹೊಸ ಅಂಗಿ
ಕೊಟ್ಟರಾಟ ವಾಡುತಾಳೆ–
ಬೋಲೋ ಬೋಲೋ ಭಂಗಿ!

ನನ್ನ ಅಕ್ಕ ಸಾತಿ
ನಾನೆ ಅವಳ ಸಾಥಿ!
ಹಾಡ ಕುಳಿತರವಳಿಗಿಲ್ಲ
ಅವರ ಇವರ ಭೀತಿ!

ನನ್ನ ಅಣ್ಣ ದೊರೆ
ಕಂಡರವನು ಕರೆ
ಈಸಲೆಂದು ಹಾರದಿರಲು
ಬಂದಿದ್ದರು ನೆರೆ!

ಚಿಟ್ಟೆಯಂಥ ಚಿತ್ತ–
ಉಲ್ಲಾಸದ ಮೊತ್ತ
ತುಂಬಿದಂಥ ಒಡನಾಡಿಗ–
ಳಿಲ್ಲದೆದೆಗೆ ಕುತ್ತ!

ಆಟದಿಂದ ಪಾಠ ಕಲಿತು
ದೊಡ್ಡವರಾದಾಗಲೂ
ಹೂಟ ನಮ್ಮ ದೊಟ್ಟಿನಿಂದ–
ಬಿಟ್ಟಿರೆವಾವಾಗಲೂ!

ಬನ್ನಿರಿ ಒಡನಾಡಿಗಳೇ
ಚಾಚ ನೆಹರುವಾಗುವಾ!
ಅಥವಾ ವಿಜಯ ಲಕ್ಷ್ಮಿಯಾಗಿ
ಪರದೇಶಕೆ ಹೋಗುವಾ!

ಅವರು ಮಾಡಿ ಮುಗಿಸದಿರುವ
ಕೆಲಸ ಬಹಳ ಇದೆ;
ತಾಯಿನಾಡ ಭಕ್ತಿಯಿಂದ
ಮಾಡಲಿ! ಅದನೆದೆ!

ವೀರಗಾನ

ಭಾರತದ
ವೀರಕುಲ
ಎಲ್ಲಿಹುದು?– ಕೇಳು!

ಕನ್ನಡ ನೆಲ–
ದಲ್ಲಿಲ್ಲೆಂ–
ಬಾ ನಾಲಗೆ ಸೀಳು ॥ಪ॥

ಚಾಲುಕ್ಯರ
ಪುಲಕೇಶಿಯ
ಸೇನಾಬಲ ನಾವು!

ಹಕ್ಕ ಬುಕ್ಕ
ಭೂಪಾಲರ
ಮಕ್ಕಳಿದೋ ನಾವು!

ಹೊಯ್ಸಳರಾ
ಹೊಯ್ಗೈಗಳಿ–
ಗಾಗಿತ್ತಿದೆ ಠಾವು!

ಕಂಠೀರವ–
ಗರ್ಜನೆ ಹಗೆ–
ಗಾಗಿತ್ತೋ ಸಾವು?

ಕಿತ್ತೂರಿನ
ಚೆನ್ನಮ್ಮನ
ಕರ ವಾಳಿನ ಝಳಪು!

ಓಬವ್ವನ
   ಒನಕೆಯ ಹಲ್
      ಮಿಂಚಿಸಿದಾ ಹೊಳಪು!

ಮತ್ತೆ ಮತ್ತೆ
   ಹುಟ್ಟುತ್ತಿದೆ
      ಬೆಳೆಯುತ್ತಿದೆ ತೇಜ!

ಸ್ವಾಭಿಮಾನ
   ಸೂಸುತಿಹು–
      ದೀಯೆದೆಗೇ ಸಾಜ!

ಭಂಡರ ದುರ್–
   ಮದವೆಂದೂ
      ಸಭ್ಯತೆಯೆನ್ನಿಸದು!

ಗಂಡರ ನಾ–
   ಡಿದು ಚಿಲ್ಲರೆ–
      ತನವನು ಮನ್ನಿಸದು!

ನರಿತನ ನಾಯ್–
   ತನಕಿಲ್ಲೆಡೆ
      ಎಂದೆಂದೂ ಇಲ್ಲ!

ಕರಿಸಿಂಹಗ–
   ಳೆಮಗೋರಗೆ–
      ಮನೆ ಜಗವೆಮಗೆಲ್ಲ!

ಬಾಳಿನ ಗುಟ್ಟು

ಒಡೆಯನ ಒಳ್ಳೆಯ ಬಾಳು
ಒಳ್ಳೆಯ ಒಕ್ಕಲಿಗಾಳು!

ಒಳ್ಳೆಯ ಮಾಲಕನಾರು?
ಆಳಿಗೆ ಆದವ ಸೂರು!

ಧನಿಕನು ಕಟ್ಟಿದ ಸೂರು
ಬಡವರ ಬಳಕೆಯ ಊರು!

ತಾಯಂದಿರ ಮೊಲೆಹಾಲು
ಮಕ್ಕಳ ಹೊಟ್ಟೆಯ ಪಾಲು!

ಗುರುಗಳ ಹೃದಯದ ಪ್ರೀತಿ
ಶಿಷ್ಯರಿಗುತ್ಸವಗೀತಿ!

ಹರಿಯುವ ಒರತೆಯ ನೀರು
ಮರುತಲದವರಿಗೆ ಕೀರು!

ದೇವರು ಮಾಡಿದ ತ್ಯಾಗ
ಲೋಕಕ್ಕಾಯಿತು ಭೋಗ!

ಬಸವಣ್ಣನ ಹೋರಾಟ
ಜನರಿಗೆ ಕೊಟ್ಟಿದೆ ಊಟ!

ಮಕ್ಕಳು ಕಲಿಯುವ ಪಾಠ
ಹಿರಿಯರ ಹೃದಯಕ್ಕೂಟ!

ಸರಿಯೋದಿನ ವಿಸ್ತಾರ
ನರಲೋಕದ ಉದ್ಧಾರ!

ಆಳಿನ ಬಾಳಿನ ರಕ್ಷೆ
ಒಡೆಯನ ಬಲಕಿಹ ದೀಕ್ಷೆ!

ಪ್ರಜೆಗಳ ಸುಖ ಸಂತೋಷ
ಪ್ರಭು ಚರಿತದ ನಿರ್ದೋಷ!

ಗರತಿತನದ ಗಡಿಕಟ್ಟು
ನಾಗರಿಕತೆ–ನೆಲಗಟ್ಟು!

ಚೊಕ್ಕಟ ಅರಿವಿನ ಮಟ್ಟು
ಒಳ್ಳೆಯ ಬಾಳಿನ ಗುಟ್ಟು!

ಗಂಡನು ದುಡಿದದ್ದೆಲ್ಲಾ
ಹೆಂಡತಿ–ಖರ್ಚಿಗೆ ಖುಲ್ಲಾ!

ಕವಿಗಳು ಕಟ್ಟಿದ ಹಾಡು
ಮಕ್ಕಳ ಬಾಯಿಗೆ ಲಾಡು!

ಉತ್ಸಾಹ

ಏನಾಗಬೇಕಮ್ಮ
        ಏನಾಗಬೇಕು?
ಏನಾಗಲೂ ಬಲ್ಲೆ
        ಹೇಳಿದರೆ ಸಾಕು

ಮೀನಾಗಿ ಕಡಲೇಳ
        ಈಸಿ ಬರಹೇಳು;
ನಾನೀರ ಹಾರುವೆನು–
        ಹಾರುತಿದೆ ತೋಳು!

ಬಾನಾಡಿಯನ್ನೇರಿ
        ಬಾನೇರ ಬೇಕೆ?
ಹೂಂ ನೋಡು ನಾಹಿಂದೆ
        ಬೀಳುವೆನದೇಕೆ?

ಚಿಕ್ಕೆಗಳ ಮುತ್ತಿಟ್ಟು
        ಬರಬೇಕೆ? ಹೇಳು–
ನಕ್ಕು ಮುಗಿಸುವೆನದನು.
        ನೋಡುತಿರು ತಾಳು!

ಹನುಮಪ್ಪ ಕೂಡ
        ಹೋರಿಬಾ– ಎನ್ನು!
ಅನುಮಾನವಿಲ್ಲದೆಯೆ
        ಹೊರಡುವೆನು ಇನ್ನು!

ಆರು ಶಾಸ್ತ್ರಗಳನ್ನು
　　ಅರಿಯಬೇಕೇನು?
ಈರೈದು ದಿನದಲ್ಲಿ
　　ಅರಿತೇನು ನಾನು!

ನವಿಲಂತೆ ನಿನ್ನೆದುರು
　　ಕುಣಿಯಲೂ ಸಿದ್ಧ;
ಅವಿತು ಬೆಲ್ಲವ ತಿನ್ನು–
　　ವಲ್ಲಿ ನಾ ಗೊದ್ದ!

ಅಳಿಯಂತೆ ಹೂವುಗಳ
　　ಮೆಚ್ಚಲೂ ಬಲ್ಲೆ!
ಗಿಳಿಯಂತೆ ಉಲಿವುದಕೆ
　　ನನಗೆಲ್ಲಿ ಎಲ್ಲೆ?

ನಿನ್ನ ಕಾವಲಿನಲ್ಲಿ
　　ವೀರ ಸರದಾರ–
ನನ್ನಮ್ಮ, ಈ ನಿನ್ನ
　　ಮುದ್ದು ಸುಕುಮಾರ!

ನೀನು ಕೈಹಿಡಿ ದೆತ್ತ–
　　ಲಿರುವಾಗ ನನ್ನ,
ಏನಾಗಲಾರೆ ನಾ?
　　ಎಲ್ಲೆನಗೆ ಬನ್ನ?

ಬೆಳಗಿನ ಕರೆ

ಏಳು ಏಳು, ತಂಗಾಳಿ ಕರೆಯುತಿದೆ
ತೀಡಿ ತೀಡಿ ತೀಡಿ–ತೆಳ್ಳಗೆ
ತೀಡಿ ತೀಡಿ ತೀಡಿ!

ಏಳು ಏಳು, ಚೆಂಬೆಳಗು ಹರಿಯುತಿದೆ
ಹಾಡಿ ಹಾಡಿ ಹಾಡಿ–ಮೆಲ್ಲಗೆ
ಹಾಡಿ ಹಾಡಿ ಹಾಡಿ ॥ಪ॥

ಹಕ್ಕಿಪಕ್ಷಿಗಳು ನಕ್ಕು ಕೆಲೆಯುತಿವೆ
ಮಕ್ಕಳಾಡಲೆಂದು–ಎಲ್ಲಾ
ಮಕ್ಕಳಾಡಲೆಂದು.

ರೆಕ್ಕೆಬೀಸಿ ಮರಿದುಂಬಿ ಬರುತಲಿದೆ
ಕುಶಲ ಕೇಳಲೆಂದು– ತಾನೇ
ಕುಶಲ ಕೇಳಲೆಂದು!

ಅದೋ ಮೂಡಲಿನ ಗಿರಿಯ ನೆತ್ತಿಯ–
ನ್ನೇರಿ ನಿಂತ ಭಾನು– ಎತ್ತರ–
ಕೇರಿ ನಿಂತ ಭಾನು!

ಉದಾರೇಕ್ಷಣದೆ ಕರೆಯುವನೆಲ್ಲರ
ಮೈಯತಡವಿ ತಾನು–ಕರಗಳ
ನೀಡಿ ಕಾಂತಿಧೇನು!

ಹಸಿರ ಹಾದಿಯಲಿ ಸೂರ್‍ಯನ ಕುದುರೆ
ಹಾರಿತು ಕುಪ್ಪಳಿಸಿ– ಮೇಲಕೆ
ಹಾರಿತು ಕುಪ್ಪಳಿಸಿ!

ಹಸು ಹಾಲುಣಿಸುತ್ತಿದೆ ನಾಲಿಗೆಯಲಿ
ಕರುವನು ಚಪ್ಪರಿಸಿ– ತಪ್ಪದೆ
ಕರುವನು ಚಪ್ಪರಿಸಿ!

ಬೆಳಗಿನ ಮಲ್ಲಿಗೆ ಮುಗುಳು ನಗೆಯೊಳೇ
ಕರೆವಳು ತನ್ನೆಡೆಗೆ– ಬೆಡಗಿ
ಕರೆವಳು ತನ್ನೆಡೆಗೆ!

ಸುಳಿಗಾಳಿಯ ಮೂಲಕ ಕಳಿಸಿರುವಳು
ನರುಗಂಪಿನ ಕೊಡುಗೆ–ಮೂಗಿಗೆ
ನರುಗಂಪಿನ ಕೊಡುಗೆ!

ಮಾವಿನ ತೋಂಗಲು ಕುಹುಹೂ ರಾಗವ
ಕುಳಿತೇ ಜೀಕುತಿದೆ–ಸುಯ್ಯನೆ
ಕುಳಿತೇ ಜೀಕುತಿದೆ!

ಧಾವಿಸಿ ಸೊಪ್ಪಿಗೆ ಹೋಗುವ ಜನವೂ
ಕೂಹೂ ಹಾಕುತಿದೆ–ಕೂಡಲು
ಕೂಹೂ ಹಾಕುತಿದೆ!

ಬೆಳಗಿನ ಜಾವದ ಅಭ್ಯಾಸದ ದನಿ
ಮನೆಯಿಂ ಕೇಳುತಿದೆ–ಎಲ್ಲರ
ಮನೆಯಿಂ ಕೇಳುತಿದೆ!

ತೊಳೆಯುವ ಬಳಿಯುವ ತಾಯಂದಿರ ಬಳೆ
ಏಳಲು ಹೇಳುತಿದೆ–ಮಕ್ಕಳ
ಏಳಲು ಹೇಳುತಿದೆ!
ಬಂಗಾರಕೆ ರತ್ನಂಗಳ ಸುರಿದರು
ಕಾಣದು ಚೆಲ್ವಾತು–ಲೋಕಕೆ
ಕಾಣದು ಚೆಲ್ವಾತು!

ಮಂಗಲ ಕಾಲದ ರಂಗನು ಕಾಣದ
ಕಣ್ ಕರಟದ ತೂತು–ಟೊಣಪರ
ಕಣ್ ಕರಟದ ತೂತು!

ಏಳು ಬಣ್ಣದಾ ಬಿಲ್ಲನೆತ್ತಿರುವ
ಬಾನಿನೊಡೆಯ ನೋಡು–ಬಹಾದ್ದುರ
ಬಾನಿನೊಡೆಯ ನೋಡು!

ಬೋಳು ಬೇಣವೂ ಕನಸು ಕಾಣುತಿದೆ
ಬೆಳೆಯಿತೆಂದು ಕಾಡು–ತನ್ನಲಿ
ಬೆಳೆಯಿತೆಂದು ಕಾಡು!

ಬೆಳುದಿಂಗಳೂಟ

ಹೂವ ಕೊಯ್ಯುವಾ
        ಹುಡುಗಿಯರೆಲ್ಲಾ

ಬನ್ನಿ ಸೂರ್‍ಯಕಡಲಲ್ಲಿಳಿದ!
ತಮ್ಮ ತಂಗಿಯರು
        ಕಾಯುತಲಿಹರು
ಚಂದ್ರ ಮೆಲ್ಲಮೆಲ್ಲನೆ ಹೊಳೆದ!
ಸಾಲೆ ತೋಟದಲಿ
        ಬೆಳ್ಳಿ ಬೆತ್ತಗಳ
ಚೆಲ್ಲಿದಂತೆ ಬೆಳುದಿಂಗಳಿದೆ!
ಬಾಲ ಬಾಲೆಯರು
        ಕುಳಿತು ಬೆಂಚಿನಲಿ
ಕತೆಯ ಹೇಳುತಿಹರೆಡೆಬಿಡದೆ!
ಗಿಡವು ತನ್ನ ಹ–
        ತ್ತೆಂದು ಕರೆದುದನು
ಹುಡುಗನೊಬ್ಬ ಹೇಳುತ್ತಿರುವ!
ಹೂವು ನಕ್ಕು ಅಣ–
        ಕಿಸಿದುದ ಹೇಳುವ–
ಳೊಬ್ಬಳು ಸಿಡಿದುರಿಯುತ್ತಿರುವ!
ಬೆಳುದಿಂಗಳ ಕೈ–
        ತುತ್ತ ನೀಡಲ–
ಕ್ಕವ್ವ ಇತ್ತಕಡೆ ಬರುತಿಹಳು!
ಮೊದಲ ತುತ್ತನವ–
        ಳಾರಿಗೆ ಕೊಡುವಳೊ
ನೋಡುವ, ತೀಡುತ ಮುಂಗುರುಳು!

ಬೆಳುದಿಂಗಳ ಹಾ–
        ಡನ್ನು ಹಾಡಿ ನಾವ್
ಕುಣಿವ ಕೈಹಿಡಿದು ನಲವಿಂದ!
ನಡುವೆ ಮಾಡಿ ಅ–
        ಕ್ಕವ್ವನನಜ್ಜಿಯ
ಹಿಡಿಯುವಾಟ ಆಡುವುದಂದ!
ನಕ್ಕು ನಲಿದು ಮನೆ–
        ಗೋಡಿ ಅಮ್ಮನಿಗೆ
ನಮ್ಮ ಆಟಗಳ ಹೇಳೋಣ!
ರೆಕ್ಕೆಯಿಲ್ಲ ನಮ–
ಗೇಕೆ? ಎಂದು ನ–
        ಮ್ಮಪ್ಪನ ತಪ್ಪದೆ ಕೇಳೋಣ!

ಗೆಳೆತನ

ಮಲೆನಾಡಿನ ಅಳಿ–
  ಗಿಳಿಗಳ ಬಳಗದ
    ಒಳನುಡಿ ಯಾವುದು?
      ಸಹಕಾರ!

ಚೆಲುವಿನ ಜೋಳದ
  ನೆಲದಲಿ ಬೆಳೆದಿಹ
    ನವಧಾನ್ಯದ ಗುಡಿ?
      ಸಹಕಾರ!

ರವಿ ಶಶಿ ತಾರಾ–
  ಗ್ರಹ ನೀಹಾರಿಕೆ–
    ತಿರುಗುವ ನೀತಿಯೊ?
      ಸಹಕಾರ!

ಕವಿದಡವಿಯೊಳಿಹ
  ಖಗಮೃಗ ಸಂಕುಲ
    ತುರುಗುವ ರೀತಿಯೊ?
      ಸಹಕಾರ!

ಹರಿಯುವ ನದಿನದ
  ಕರೆದೊರೆಯುವುದೂ
    ಸಹಗಮನಾಗತ
      ಸಹಕಾರ!

ಮೆರೆದೆದ್ದಿಹ ಗುರು
ಗಿರಿ ಪಂಕ್ತಿಗಳೂ
ಸುರಿಸುವ ಮಳೆಗಿದೆ
ಸಹಕಾರ!

ಕಡಲಲೆಯೊಂದೂ
ಬಿಡಿಬಿಡಿ ಬಾರದು
ದಡವಪ್ಪಳಿಸಲು
ಸಹಕಾರ!

ಕಡಿವ ಗೊದ್ದವೂ
ನಡೆಯದೊಂದೆ ತಾ
ಅಡಿಯಿಟ್ಟಲ್ಲೇ
ಸಹಕಾರ!

ನಂಬಿ ಪರಸ್ಪರ
ಇಂಬುಗಳಾಗುವ
ಹಂಬಲಿನಲ್ಲೇ
ಸಹಕಾರ!

ತೇರು–ಕಾರು

ಬರುತಿದೆ ಬರುತಿದೆ ಊರಿನ ತೇರು!
  ಕೊಳ್ಳುವೆ ನಾನೊಂದಾಟದ ಕಾರು ॥ಪ॥
ತಿರುಗುವನೊಬ್ಬನು ಹೆಗಲಲಿ ಹೊತ್ತು
  ಸಾವಿರ ಬಣ್ಣದ ಪುಗ್ಗೆಗಳ
ಕುಳಿತಿಹನೊಬ್ಬನು ಪೇರಿಸಿಕೊಂಡು
  ಲಕ್ಷ ಬತಾಸಿನ ಲಗ್ಗೆಗಳ!
ಹಕ್ಕಿಯ, ಹಾವಿನ, ಹುಲಿ, ಹುಲು ನರಿಗಳ
  ಮಕ್ಕಳ ಮಾಟದ ಗೊಂಬೆಗಳ
ಲೆಕ್ಕವೆ ಇರದಷ್ಟಿಟ್ಟಿಹನೊಬ್ಬನು–
  ಹೂಹಣ್ ಚಿಗುರೆಲೆ ರೆಂಬೆಗಳ
ಹೊತ್ತಿಹ ಗಿಡಮರ ಬಳ್ಳಿಗಳೆಷ್ಟು!
  ಕೊಂಡರೆ ಮುಗಿಯುವುದುಂಟೇನು?
ಇತ್ತರೆ ಬಡವರ ಮಕ್ಕಳಿಗವನವ
  ಪುಕ್ಕಟೆ, ಹೋಗುವ ಗಂಟೇನು?
ನಾನಾ ಸ್ವರಗಳ ಪೀಪಿಗಳ
ನಾನಾ ಬಣ್ಣದ ಟೋಪಿಗಳ
  ನಾನಾ ಅಳತೆಯ ಕೋಟಿನ ಷರ್ಟಿನ
  ನಾನಾ ಬೆಡಗಿನ ಸೊಂಟದ ಬೆಲ್ಟಿನ
ಸಾಲಿಗೆ ಸಾಲೇ ತೋರುತಿದೆ!
ಬಾನೆತ್ತರ ಬಗೆ ಏರುತಿದೆ!
ಬಾಂಬು ಫಿರಂಗಿಗಳೊಂದು ಕಡೆ!
ಮೋಟಾರ್ ಬಸ್ಸಿನೊಂದು ಕಡೆ!
ವಿಮಾನ ಜಟಕಾ ರೈಲ್ ಬೇಕಾದರೆ
  ತಿರುಗಿಸು ಮುಖವನ್ನತ್ತಕಡೆ!

ಪುಟಾಣಿ ರಾಜ್ಯದ ಪುಟ್ಟ ಸರಕುಗಳ
  ಒಟ್ಟಿಹನಂಗಡಿಕಾರ, ನಡೆ!
ಹಬ್ಬದ ಖರ್ಚಿಗೆ ಅಪ್ಪನು ಕೊಟ್ಟಿಹ
  ದುಡ್ಡೇನವುಗಳ ಕೊಂಡೀತೇ?
ಅಬ್ಬಬ್ಬಾ ಎದೆಯುಬ್ಬುತ್ತಿದೆ! ಅವ
  ಕೊಳ್ಳದೆ ನಿದ್ದೆಯು ಬಂದೀತೇ?
ಬರುತಿದೆ ಎದುರಿಗೆ ದೇವರ ತೇರು!
  ಎಳೆವವರಲಿ ನಮ್ಮಪ್ಪನ ತೋರು!
ದೊಡ್ಡವನಾಗಲು ಕೊಳ್ಳುವೆ ಕಾರ,
ಹಾಕುವೆನದಕೆ ಪತಾಕೆಯ ಹಾರ
  ತಿರುಗುವೆ ಮಂತ್ರಿಗಳಂದದಲಿ
  ದೊಡ್ಡ ಬಂಗಲೆಗಳೆದುರಿನಲಿ!

ಉಪಮೆ

ತೆಂಗಿನ ಹಾಗಿರಬೇಕು ತಲೆ,
ಮಾವಿನ ಹಾಗಿರಬೇಕು ಎದೆ;
ಕಂಗಿನ ಹಾಗಿರಬೇಕು ಹಿಡಿ,
ಮಲ್ಲಿಗೆಯಂತಿರಬೇಕು ನುಡಿ!

ಕಲ್ಲಿನ ಹಾಗಿರಬೇಕು ಧೃತಿ,
ಬಿಲ್ಲಿನ ಹಾಗಿರಬೇಕು ಮತಿ;
ಮೋಡದ ಹಾಗಿರಬೇಕು ಮಡಿ,
ಮಿಂಚಿನ ಹಾಗಿರಬೇಕು ಅಡಿ!

ಬಾಳೆಯ ಹಾಗಿರುವುದು ಹೆಣ್ಣು,
ತಾಳೆಯ ಹಾಗಿರುವುದು ಗಂಡು;
ಬೆಂಕಿಯ ಹಾಗಿರುವುದು ಮಾನ,
ಗಾಳಿಯ ಹಾಗಿರುವುದು ಪ್ರಾಣ!

ಸಿಹಿಗಡಲು

ಹತ್ತು ದೋಣಿ,
ಹಾಯಿ ಬಿಡು;
ತರಂಗ ಗಿರಿ ಕಂದರ

ಹತ್ತಿ ಇಳಿದು
ಸಾಗುವುದದು
ಬರುವ ವರೆಗೆ ಬಂದರ!

ಕಡಲಿನಲೆಯ
ಕಲೆಯ ಮುಂದೆ
ಮಾನವ ಕಲೆ ಬಡ!

ತಡಿಯ ಚಿತ್ರ–
ಲಿಪಿಯೋದಲು
ಬಲ್ಲನೊಬ್ಬ ಮೃಡ!

ಪ್ರಾಣಿಹಿಂಸೆ
ಪಾಪವೆಂಬ
ನುಡಿಗಿಲ್ಲಿಲ್ಲರ್ಥ!

ಮೀನಿಗೆ ಮೀ–
ನೇ ಭಕ್ಷಕ;
ಮೊಸಳೆಯೇ ಕಲಿಪಾರ್ಥ!

ಅದೆ ಮಾದರಿ
  ಕಾರರವಗೆ;
  ಅವ ಜಲಫಲವಂತ!

ಪರಶೋಷಕ
  ಸಂಸ್ಕೃತಿಗವ–
  ನಾಗಿಹನರುಹಂತ!

ಜಯಧರ್ಮವ
  ಪಾಲಿಸಿಯೇ
  ಜಲವೆಲ್ಲುಪ್ಪಾಯ್ತು;

ನಯ ಸರ್ವೋ–
  ದಯದಲ್ಲಿದೆ;
  ಸಿಹಿ ಅದು–ನೆನಪಾಯ್ತು!

ಅಕಸ್ಮಾತ್ತು

ನಾನು ಅತ್ತಾಗಲೇ
  ಬಾನು ಅತ್ತಿತ್ತು;
ಅದ ಕಂಡು ಮತ್ತತ್ತು
  ನಿದ್ದೆ ಹತ್ತಿತ್ತು!

ನಾನು ನಕ್ಕಾಗಲೇ
  ಚಂದ್ರನೂ ನಕ್ಕ;
ಅದ ಕಂಡು ನಾ ನಕ್ಕು;
  ಮುರಿದಿತ್ತು ಪಕ್ಕ!

ನಾನು ಹೊರಡಲು ತಮ್ಮ
  ಹೊರಟ ಸಂಗಾತ;
ಅದ ಕಂಡು ನಾನೋಡಿ
  ಬಿದ್ದೆ ನಂಗಾತ!

ನಾ ನೋಡುತಿರುವಾಗ
  ನೋಡಿತ್ತು ಚುಕ್ಕೆ;
ಅದ ನೋಡೆ ತಲೆಯಿಂದ
  ಬಿದ್ದಿತ್ತು ಕುಕ್ಕೆ!

ನಾನು ಎಚ್ಚತ್ತಾಗ
  ಎದ್ದ ನಮ್ಮಪ್ಪ;
ಅದ ಕಂಡು ನಾನಾದೆ
  ಬೆದರಿ ಬಲು ಬೆಪ್ಪ!

ಪಾರ್ಲಿಮೆಂಟು

ಸೇರಲಿಂದು ಸೇರಲಿಂದು
  ನಮ್ಮ ಪಾರ್ಲಿಮೆಂಟು;
ಆರು ಪಕ್ಷದವರ ಮೇಳ
  ನಮ್ಮಲ್ಲೇ ಉಂಟು!
ಸಿಹಿಪ್ರಿಯರ ಪಕ್ಷವೊಂದು,
  ಹುಳಿಪ್ರಿಯರದೊಂದು;
ಕಹಿಪ್ರಿಯರದಲ್ಪಸಂಖ್ಯ–
  ಖಾರದವರದೊಂದು!
ಉಪ್ಪಿನವರ ಪಕ್ಷ ಕೂಡ
  ಉಂಟು ಕೊಂಚ ದೊಡ್ಡದು;
ತಪ್ಪೇನೊಗರು ಪ್ರಿಯರದು
  ಬಂದರೆ! ತಡೆಯೊಡ್ಡದು!
ಸೇರಲೆಮ್ಮ ಪಾರ್ಲಿಮೆಂಟು
  ನಿರ್ಣಯಿಸಲಿ ತಿಂಡಿಯ;
ಆರರ ಮೇಲೊಂದ ಹೇರಿ
  ಬಿಡುವ ನಮ್ಮ ಬಂಡಿಯ!
ಒಂದು ತಿಂಡಿ ಎಲ್ಲರಿಗೂ–
  ಬಹುಮತ ಸರ್ವಮತ;
ಒಂದು ಮಾತು ಎಲ್ಲರಿಗೂ–
  ಐಕ್ಯಕ್ಕಿದೆ ಸಮ್ಮತ!
ಹೆಣ್ ಗಂಡುಗಳೆರಡಕ್ಕೂ
  ಒಂದೇ ವೇಷ ಸಾಕು;
ಹೊನ್–ಮಣ್ಣುಗಳೆರಡರ ದರ
  ಸಮವಾಗಲೆ ಬೇಕು!

ಅಣುಬಾಂಬಿನ ಯುಗದೊಳಿಂದು
  ಬದುಕಬೇಕೊ? ಹೇಳಿ–
ತೃಣವೆಂದೊಗೆಯಿರಿ ಹರೆಯದ;
  ಹೊಸ ವಿಚಾರ ಕೇಳಿ!
ಬಹುಮತವನು ಸಂಘಟಿಸುವ
  ಕಲೆಯ ಕಲಿಯಲೇಳಿ;
ಬಹುಮಾನವು ಬಹುಮತಕ್ಕೆ–
  ಪ್ರಜಾರಾಜ್ಯ ಕೇಳಿ!
ಹಂಚಿರಿ ಚಾಕ್ಲೇಟುಗಳನು
  ಮತದಾನದ ಮುನ್ನ;
ಚಂಚಲ ಮತಿಗಳು ನಿಮಗೇ
  ಕೊಡುವರು ಮತವನ್ನ!

ಯಕ್ಷಗಾನ

ತಾಳ ಬಾರಿಸಿ, ತಾಳ ಬಾರಿಸಿ
  ನಾನು ಪದಗಳ ಹೇಳುವೆ!
ಮೇಳ ಕಟ್ಟೋಣಂತೆ ನಾವೂ–
  ಕರೆದು ಗೆಳೆಯರ ಕೇಳುವೆ!
ಪಂಚಪಾಂಡವ ಪಾತ್ರಕೈವರು,
  ಕೌರವರ ಕುಲಕನಿಬರು;
ವಂಚನೆಯ ಜೂಜಿಗೆ ಶಕುನಿ ಬೇ–
  ಕಾರು ವಹಿಸಲು ಬರುವರು?
ಹೆಣ್ಣು ಪಾತ್ರಕ್ಕಾರು ಸಿದ್ಧರು?
  ಬಾಲಪಾತ್ರಕೊ? ಎಲ್ಲರೂ!
ಕಣ್ಣುಕಾಣದ ರಾಜಪಾತ್ರವ
  ಧರಿಸಲಾರೂ ಒಲ್ಲರು!
ಏನು ನಾಚಿಕೆ ಹುಡುಗರಿಗೆ, ಬಿಗು–
  ಮಾನವೇಕೆ? ಚುನಾವಣೆ
ತಾನು ತೋರಿಸಿಕೊಡುವುದಿಲ್ಲವೆ
  ಎಲ್ಲ ಪಾತ್ರದ ಧಾರಣೆ?
"ಯಕ್ಷಗಾನದ ದೊರೆಗಳನ್ನೇ
  ಕಂಡು ಕಲಿತರು ಈವಿಯ
ರಕ್ಷಕರು ಆಳರಸ ವರ್ಗದ–
  ಬಲ್ಲಿರೇನೀ ಕೂಬಿಯ?"
ಎಂದ ಕೂಡಲೆ ಬಂದರೆಲ್ಲರು
  ಪಾತ್ರ ಧರಿಸಲು ಥಟ್ಟನೆ
ಅಂದು ದೀಪಾವಳಿಯ ಇರುಳಲಿ
  ಬನ್ನಿರಿಂದೂ ನೆಟ್ಟನೆ!
ಶ್ರುತಿ ನಿನಗೆ, ಮದ್ದಲೆಯು ಅವನಿಗೆ
  ಭಾಗವತ ನಾನಾಗುವೆ;

ತತಿಕಿಟೋಂತರ ನನ್ನ ತಾಳವ
  ಬಾರಿಸಲು ಮುಂದಾಗುವೆ!
ಉದ್ದನೆಯ ಪಾತ್ರಗಳೊಡನೆ ನಾ
  ಕುಳ್ಳರನ್ನೂ ಕುಣಿಸುವೆ;
ಸದ್ದು ಮಾಡದೆ ಕಟ್ಟಿ ವೇಷವ
  ಹರ್ಷರಸವನ್ನುಣಿಸುವೆ!

ನಾವು

ನಾನು, ನನ್ನ ಅಕ್ಕ, ತಮ್ಮ
  ಉಪ್ಪು, ಹುಳಿ, ಖಾರ!
ತಿರುಗಾಡಲು ಹೊರಟರೆ ನಾವ್
  ತ್ರಿಮೂರ್ತಿಯವತಾರ!
ನಾನು, ನನ್ನ ಅಕ್ಕ, ತಮ್ಮ
  ಕಾಗದ, ಮಸಿ, ಅಕ್ಷರ!
ನಾವ್ ಬರೆದುದ ಕೂಡಿಸಿದರೆ
  ಓದುವುದೇ ದುಷ್ಕರ!
ನಾನು, ನನ್ನ ಅಕ್ಕ, ತಮ್ಮ
  ಬೆಂಕಿ, ಗಾಳಿ, ನೀರು;
ಮೂವರು ಕೂಡಿದೆವೆಂದರೆ
  ಮಳೆಗಾಲದ ಜೋರು!
ನಾನು, ನನ್ನ ಅಕ್ಕ, ತಮ್ಮ
  ಮೂರು ರಾಜ್ಯದವರು;
ಆದರೆ ನಮ್ಮೆಲ್ಲರಿಗೂ
  ಭಾರತವೇ ತವರು!

ಮದುವೆ

ನೀನು ಬ್ರಾಹ್ಮಣ ನಾ ಲಿಂಗಾಯತ
ಅವ ಒಕ್ಕಲುಮಗ ಚಮ್ಮಾರ

ಇವ ಕುಂಬಾರನು ಇವಳು ದೀವಳೀ
ಹುಡುಗಿಯ ಅಪ್ಪನು ಕಮ್ಮಾರ

ಅಕ್ಕಸಾಲಿಗರ ಮಗಳೀ ಸುಂದರಿ
ಹರಿಜನರವಳಿಕೊ ಈ ಬೆಡಗಿ

ಲೆಕ್ಕಾಚಾರವ ಮಾಡಿ ಹೇಳುವೆನು
ಟೋಪಿಯ ತೆಗೆದೀಕಡೆ ಮಡಗಿ

ಈಕೆ ಹಿಂದುಳಿದ ಪೋರಿ ಈತ ಮುಂ–
ಬರಿದ ಪೋರ– ಇವರಿಗೆ ಮದುವೆ

ಮಾಡಿಸಿದನು ಕತೆಗಾರ ಜಾತಿಯವ–
ಹಳೆತನಕ್ಕೆ ಹೊಸತನದೊಡವೆ?

ಕ್ಷತ್ರಿಯ ಹುಡುಗಿಯ ಮದುವೆಯಾಗಿ ತಾ
ಕಾಳಿದಾಸ ಕವಿಯಾದನಲ

ಅರಬ ಜೈನಳನು ಮದುವೆಯಾಗಿ ಭಟ್–
ಕಳ ನವಾಯತಿಕೆ ಪಡೆದ ಭಲಾ?

ಇತಿಹಾಸವ ಪುನರಭಿನಯಿಸುವ ನಾವ್
ಹೊಸ ಸಮಾಜವನು ಕಟ್ಟುವೆವು

ಭಾರತಮಾತೆಯ ಸೇವೆಗೆ ನಿಂತಿಹ
ಹೊಸ ಮಕ್ಕಳ ಬೆನ್ ತಟ್ಟುವೆವು.

ಬೆರಕೆ ಜಾತಿಯೇ ಭಾರತ ಜಾತಿಯು–
ಬೆರಸದೆ ಮಾರುವ ಹಾಲಿಹುದೇ?

ಎರಕದಲ್ಲಿಯೂ ಬೆರಕೆ ಬಣ್ಣಗಳ
ತೋರದಿರುವ ಮೋಡಗಳಿವೆಯೇ?

ನೌಕಾಗೀತ

‘ನೌಕಾಗೀತ’ಕ್ಕೊಂದು ಪ್ರವೇಶಿಕೆ

ರಾಜಶೇಖರ ಹೆಬ್ಬಾರ

‘ನೌಕಾಗೀತ’ದ ಬಗ್ಗೆ ಬರೆಯಬೇಕೆಂದರೆ ೯೦ರ ದಶಕದ ನೆನಪಿನ ಲೋಕಕ್ಕೆ ತೆರಳಬೇಕು. ಆಗ ಬಿ.ಎಚ್.ಶ್ರೀಧರರ ನೆನಪಿನಲ್ಲಿ ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಸಮಿತಿ ಶಿರಸಿಯಲ್ಲಿ ಉದಯಿಸಿ, ಪ್ರತಿ ವರ್ಷ ರಾಜ್ಯಮಟ್ಟದ ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿಯನ್ನು ಘೋಷಿಸಿ, ಬಿ.ಎಚ್.ಶ್ರೀಧರರ ಜನ್ಮದಿನ ಏಪ್ರಿಲ್ ೨೪ ರಂದು ನೀಡಲಾರಂಭಿಸಿತ್ತು. ಜೊತೆಗೆ ‘ಸಾಹಿತ್ಯ ಸಂವಾದ’ ಎಂಬ ತಿಂಗಳ ಕಾರ್ಯಕ್ರಮ, ಬಿ.ಎಚ್.ಶ್ರೀಧರ ಸಾಹಿತ್ಯ ಸಮೀಕ್ಷೆ, ಬಿ.ಎಚ್.ಶ್ರೀಧರರ ಸಾಹಿತ್ಯ ಚಿಂತನದಂಥ ಅನೇಕ ಕಾರ್ಯಕ್ರಮ ಹಮ್ಮಿಕೊಂಡು ರಾಜ್ಯಾದ್ಯಂತ ಸಂಚಲನ ಉಂಟು ಮಾಡಿದ್ದ ಕಾಲ. ಆಗ ಇಂದಿನ ಯುವ ನಿರ್ದೇಶಕ ಡಾ.ಶ್ರೀಪಾದ ಭಟ್ಟರ ಪ್ರವೇಶ ಈ ಸಮಿತಿಯ ಸದಸ್ಯನ ರೂಪದಲ್ಲಾಯ್ತು. ‘ನೌಕಾಗೀತ’ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಕೊನೆಗೆ ಶ್ರೀಪಾದ ಭಟ್ಟರ ನಿರ್ದೇಶನದಲ್ಲಿ ಬೇಸಿಗೆ ಶಿಬಿರದ ಮಕ್ಕಳಿಂದ ಅಭಿನಯಿಸಲ್ಪಟ್ಟು ಅಪಾರ ಜನಮೆಚ್ಚುಗೆ ಗಳಿಸಿತು.

ನೌಕಾಗೀತ

ವೈಜಯಂತಿಪುರ ಅಥವಾ ಇಂದಿನ ಬನವಾಸಿಯಲ್ಲಿ ಮಯೂರವರ್ಮನೆಂಬ ಚಕ್ರವರ್ತಿ ಆಳುತ್ತಿದ್ದನು. ಕಾರವಾರದ ತೆಂಗಿನ ಬನದಲ್ಲಿ ಗುಡಿಸಲೊಂದಿತ್ತು. ಅಲ್ಲಿ ವಾಸವಾಗಿದ್ದ ಜಟ್ಟ ಎಂಬ ನಾವಿಕನಿಗೆ ಆತನ ಕಾರವೀರ ಮನೆತನವನ್ನು ನಡೆಸಿಕೊಂಡು ಹೋಗಲು ಸಂತಾನವಿರುವುದಿಲ್ಲ. ‘ಜಟ್ಟಿಗ’ ದೈವಕ್ಕೆ ಕೋಳಿ ಬಲಿ ನೀಡಿ ಸಂತಾನಕ್ಕಾಗಿ ಜಟ್ಟ ಹರಕೆ ಹೊತ್ತ. ಮುಂದೆ ಹೆಂಡತಿ ನಾಗಿಯಿಂದ ‘ತಿಮ್ಮ’ ಎಂಬ ಪುತ್ರನನ್ನು ಪಡೆಯುತ್ತಾನೆ. ಜಟ್ಟ ಸಾಹಸೀ ನಾವಿಕ. ಹಿಂದೆ ತಿಮ್ಮನ ಅಜ್ಜನು ಮೆಣಸು, ಜಾಯಿಕಾಯಿ, ದಾಲಚಿನ್ನಿ, ಹತ್ತಿಬಟ್ಟೆ, ಲೋಹದ ಪಾತ್ರೆಗಳನ್ನು ವ್ಯಾಪಾರ ನಿಮಿತ್ತ ಹೇರಿಕೊಂಡು ಹಡಗನೇರಿ ಹೊರಟ. ದಾರಿಯಲ್ಲಿ ಅಡ್ಡವಾದ ತಿಮಿಂಗಲವನ್ನು ಕುಂತದಿಂದ ಹೊಡೆದು ಕೊಂದ. ನಂತರ

ಕಡಲ್ಗಳ್ಳರನ್ನೆದುರಿಸಬೇಕಾಯ್ತು. ಕಡಲ್ಗಳ್ಳರ ಮುಖ್ಯಸ್ಥ ಬೀರ ಬೀಸಿದ ಕವಣೆ ಏಟಿಗೆ ಬಲಿಯಾದ.... ಈ ಕಥೆಯನ್ನು ತಿಮ್ಮನಿಗೆ ಅಪ್ಪ ಜಟ್ಟ ಹೇಳಿದ್ದ. ಇದೆಲ್ಲ ಹಿನ್ನೆಲೆಯನ್ನು ತಿಳಿದು ಬೆಳೆದ ತಿಮ್ಮ ಸಾಹಸೀ ನಾವಿಕನಾಗಿ ಅರಳಿದ್ದ. ಹೀಗಿರುವಾಗ ಒಂದು ದಿನ ಕಂಗ ಭೂಪತಿಯ ಧೂತ ಬಂದು ಸಂಬಾರ ಸಾಮಾನುಗಳನ್ನು ರೋಮಿನ ರಾಜ ಸೀಜರನಿಗೆ ತಲುಪಿಸಲು ಹೇಳಿದ. ಅದರಂತೆ ಸಿದ್ಧವಾದ ತಿಮ್ಮ. ಈಗಾಗಲೇ ಅನೇಕ ಯಾನಗಳನ್ನು ನಡೆಸಿ ಅನುಭವಗಳಿಸಿದ್ದ ತಿಮ್ಮ ಅಮಿತೋತ್ಸಾಹದಿಂದ ಹೊರಟ. ಜಿಬ್ರಾಲ್ತ ಜಲಸಂಧಿಯ ಮೂಲಕ ಹಡಗನ್ನು ನಡೆಸಿಕೊಂಡು ಸಾಗಿದ. ಹಡಗಿನಲ್ಲಿ ಕರೆದೊಯ್ದ ಯಕ್ಷಗಾನ ತಂಡ ನಡೆಸಿದ ಪ್ರದರ್ಶನ ಪ್ರೇಕ್ಷಕರನ್ನು ರಂಜಿಸಿತು. ಈ ನಡುವೆ ತಿಮಿಂಗಲ, ಕಡಲ್ಗಳ್ಳರನ್ನೆದುರಿಸಿದ ತಿಮ್ಮನ ತಂಡ ಸಿಸಿಲಿಯನ್ನು ತಲುಪಿತು. ಸಾಂಬಾರ ಸಾಮಾನುಗಳನ್ನು ಇಳಿಸಿದ ನಂತರ ಗ್ಲಾಡಿಯೇಟರ್ ಗಣದಿಂದ ತಿಮ್ಮನ ತಂಡದವರಿಗೆ ಕುಸ್ತಿ ತೋರಿಸಲಾಯ್ತು. ರಾಜಪುತ್ರಿ ಕ್ಲಾಡಿಯೋಂಟೀನೆಗೆ ಗೌರವ ಸಲ್ಲಿಕೆಂದು ಉಂಗುರವ ತಿಮ್ಮ ನೀಡಿದ. ಸೀಜರ ಮುಗುಳ್ನಕ್ಕ. ಬೀಳ್ಕೊಂಡು ತಿಮ್ಮ ರಾಜಮುದ್ರಿಕೆಯ ನಾಣ್ಯಗಳನ್ನು ತೆಗೆದುಕೊಂಡು ಕನ್ನಡಜರಸನ ಓಲೆ ಓದಿದ್ದನ್ನು ನೆನೆಪಿಸಿಕೊಳ್ಳುತ್ತಾ ಹಡಗನ್ನೇರಿದ. ಕ್ರೋಶ ದಾಟಿದ ಮೇಲೆ ದಾಸಿಯೋರ್ವಳು ಕ್ಲಾರಿಯೊಂಟೀನೆ ಬರೆದ ಮಧುರ ಭಾವನೆಯ ಪತ್ರವೊಂದನ್ನು ನೀಡಿದಳು. ನೌಕಾಗೀತ ಗೀತನಾಟಕದಲ್ಲಿ ಈ ಕಿರುಪ್ರೇಮವನ್ನು ಬಹಳ ಚೆನ್ನಾಗಿ ಪ್ರದರ್ಶಿಸಿದ್ದರು. ಆ ಒಕ್ಕಣೆ ಹೀಗಿದೆ –

‘ಓ ಸುರೋಪಮಪರೂಪ ನನ್ನೆದೆ–
ಗಾದೆ ನೀನೇ ಭೂಪನು ।
ಭಾಷೆ ಕೊಡು ಬರೆಯೋಲೆಯನು ಬಹೆ–
ನೆಂದು ದಿನಗಳ ಕಳೆವೆನು
ಸಾಸಿಗನೆ ಹನಿದುಂಬಿ ಕಣ್ಣಲಿ
ಬರೆಯುತಿಹೆ ಸಾಲುಗಳನು ।’

ಅಂತೆಯೇ ಗೀತನಾಟಕದಲ್ಲಿ ಮಕ್ಕಳು ದೋಣಿಯಾಕಾರದಲ್ಲಿ ಕುಳಿತು ಅತ್ತ ಇತ್ತ ಚಲನೆ ಮಾಡುವ ಮೂಲಕ ಸರಳ ದೇಹಭಾಷೆ ಉಪಯೋಗಿಸಿ ಪ್ರಭಾವ ಸೃಷ್ಟಿಸಿ ಯಶಸ್ವಿಯೆನಿಸುವಲ್ಲಿ ಮಹತ್ವದ ಪಾತ್ರವಹಿಸಿದರು. ಬಾನಿನಲ್ಲಿ ಆವರಿಸಿದ ಕಾರ್ಮೋಡ ಕಂಡ ತಿಮ್ಮನಿಗೆ ಅದೇಕೋ ೬ ತಿಂಗಳು ಭೀಕರ ಪ್ರಯಾಣಮಾಡಿ ಕಾರವಾರವನ್ನು ಸೇರುವ ಬಗ್ಗೆ ಅನುಮಾನವಾಯ್ತು. ಅದಕ್ಕೆ ಸರಿಯಾಗಿ ಭೀಕರ ಬಿರುಗಾಳಿಯಿಂದ ಹೆದ್ದೆರೆಗಳೆದ್ದು ತಿಮ್ಮನನ್ನು ಹಡಗಿನೊಂದಿಗೆ ಮುಳುಗಿಸಿದ ಅಂತ್ಯವಿರುವ ನೌಕಾಗೀತ ದುರಂತವುಳ್ಳದ್ದಾದರೂ ಅನೇಕ ಆಕರ್ಷಕ ವರ್ಣನೆ,

ತಿರುವುಗಳಿಂದ ಪ್ರದರ್ಶಿಸುವವರಿಗೆ ವೈವಿಧ್ಯಮಯ ಅವಕಾಶವನ್ನೊದಗಿಸುತ್ತದೆ. ಕಡಲಿನ ಅಲೆಗಳು ತಿಮ್ಮನ ಹೆಣವನ್ನು ಕಾರವಾರದ ಕಡಲತೀರಕ್ಕೆ ಸೇರಿಸುತ್ತದೆ. ತಿಮ್ಮನ ತಂದೆ ತಾಯಿ ವಿಲಪಿಸುತ್ತಾ ಗೋಳಿಟ್ಟರು. ದುಃಖಿತನಾದ ಕುಂತಳೇಶ್ವರ ಸಮುದ್ರಯಾನವನ್ನೇ ನಿಷೇಧಿಸಿದ... ಕೆಲ ಕಾಲ ಉರುಳಿದ ನಂತರ ೪ನೆ ಕೃಷ್ಣರಾಯ ನಿಷೇಧವನ್ನು ತಿದ್ದಿ ಸರಿಪಡಿಸಿದಾಗ ತಿಮ್ಮನ ಮರು ಹುಟ್ಟಾದಂತಾಯ್ತು. ಕಾರವಾರದ ಮೊಗವೀರನ ನಾಯಕನೆನ್ನಿಸಿದ ತಿಮ್ಮನ ಸಾಹಸವನ್ನು ನೆನೆಯುತ್ತಾ ಸುಂದರ ಜಯಗೀತೆಯೊಂದಿಗೆ 'ನೌಕಾಗೀತ' ಚಂದದ ಅರ್ಥಪೂರ್ಣ ಮುಕ್ತಾಯವನ್ನು ಹೊಂದಿದೆ.

ಈ ಕಥಾ ಹಂದರದಲ್ಲಿ 'ನೌಕಾಗೀತ'ವನ್ನು ನಿರ್ದೇಶಕ ತನ್ನ ಕಲ್ಪನಾ ಶಕ್ತಿಯನ್ನು ಸೇರಿಸಿ ಪ್ರದರ್ಶಿಸಿದಾಗ, ಇದೊಂದು ಸಾಹಸ, ಕಿರುಪ್ರೇಮ, ದುರಂತವುಳ್ಳ ರೋಚಕ ಕಥಾನಕವಾಗಿ ಚಿತ್ರಿತವಾಗಿ ಬಹುದಿನ ನೆನಪಿಡುವ ಕೃತಿಯೆನಿಸಿದೆ. ಈ ಕಥನ ಕಾವ್ಯಕ್ಕೆ ೧೯೬೮ರಲ್ಲಿ ಕೇಂದ್ರ ಸರಕಾರದ ಸಂರಕ್ಷಣಾ ಇಲಾಖೆಯ ಬಹುಮಾನ ದೊರಕಿದ್ದು, ನಂತರ ಇತ್ತೀಚೆಗೆ ಗೀತನಾಟಕವಾಗಿ ಯಶಸ್ವಿಯಾಗಿ ಪ್ರಯೋಗಗೊಂಡದ್ದು, ಅಂದಿನಿಂದ ಇಂದಿನವರೆಗೂ ಇದಕ್ಕಿರುವ ಸಾರ್ವಕಾಲಿಕ ಸತ್ವಕ್ಕೆ ನಿದರ್ಶನವಾಗಿದೆ. ಇದಕ್ಕ ೧೯೬೮ರಲ್ಲಿ ರಕ್ಷಣಾ ಇಲಾಖೆಯ ಬಹುಮಾನವೂ ದೊರೆಯಿತು.

ಅಷ್ಟೇನೂ ಮಹತ್ತರವಲ್ಲದ ಸ್ಥಾನದಲ್ಲಿದ್ದ ತಿಮ್ಮನನ್ನು ನಾಯಕನ್ನಾಗಿಸಿ ಆತನ ನಾವಿಕ ಕುಶಲತೆಯನ್ನೂ, ಸಾಹಸಪರತೆಯನ್ನೂ, ತ್ಯಾಗ ಮನೋಭಾವವನ್ನೂ, ದೇಶಪ್ರೇಮವನ್ನೂ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಲ್ಲದೇ, ಆಗಿನ ಕಾಲದಲ್ಲಿ ದೇಶಕ್ಕಾಗಿ, ರಾಜನ ಅಣತಿಯಂತೆ ಭೀಕರವಾದ ದೀರ್ಘವಾದ ಕಡಲಯಾನವನ್ನು ಮಾಡುತ್ತಲೇ ಸೇವೆ ಸಲ್ಲಿಸಿದ ಶ್ರಮಿಕ ಸಾಹಸಿ ತಿಮ್ಮ ತಿಮಿಂಗಲಗಳೊಂದಿಗೆ, ಕಡಲಿನ ಭೀಕರ ಬಿರುಗಾಳಿಯಿಂದುಂಟಾದ ಹೆದ್ದೆರೆಗಳೊಂದಿಗೆ ಹೋರಾಡುತ್ತಲೇ ಮರಣ ಹೊಂದಿದ ತಿಮ್ಮ ಕೇವಲ ದುರಂತನಾಯಕನಲ್ಲ ಆದರ್ಶನಾಯಕನೂ ಹೌದೆಂದು ಚಿತ್ರಿಸಿ ಮನಕಲಕುವುದರ ಜೊತೆಗೆ ಇವನ ಸಾವಿನಿಂದಾಗಿ ಕುಂತಲೇಶ್ವರ ಸಮುದ್ರಯಾನವನ್ನೇ ನಿಷೇಧಿಸುವ ಮೂಲಕ ಶ್ರಮಿಕರಿಗೆ ಮಹತ್ವವನ್ನು ನೀಡಿದ್ದನ್ನು ಸೃಷ್ಟಿಸಿ ಕಥೆಗೊಂದು ಹೊಸ ತಿರುವನ್ನು ಶ್ರೀಧರರು ನೀಡಿದ್ದಾರೆ. ಕೊನೆಗೆ ನಿಷೇಧ-ತೆರವು ೪ನೇ ಕೃಷ್ಣರಾಯರಿಂದ ನಡೆದದ್ದೂ ಅರ್ಥಪೂರ್ಣ.

ಮೂಲತಃ ಕವಿಯಾದ ಶ್ರೀಧರರಿಂದ ಕಥೆಯ ಸಂದರ್ಭಕ್ಕೆ ತಕ್ಕಂತೆ ಸಮುದ್ರ ಕನಲಿದಾಗಿನ ದೃಶ್ಯ, ರಾಜಾಸ್ಥಾನದಲ್ಲಿ ನಡೆದ ಮನರಂಜನೆ, ತಿಮ್ಮ ಹಾಗೂ ಕ್ಲಾರಿಯೊಂಟೀನೆಯ ಪ್ರೇಮ ಪ್ರಸಂಗ, ತಿಮ್ಮನ ಮರಣ ಕಾಲದ ಶೋಕಪದ್ಯ, ಮುಕ್ತಾಯದ ಜಯವನ್ನು ಆಶಿಸುವ ಮಂಗಳ ಪದ್ಯ ಶ್ರೀಧರರ ಕವಿತಾಶಕ್ತಿಯಿಂದಾಗಿ

ಸಹಜವಾಗಿ ಮಿಂಚಿದೆ. ಈ ದೃಷ್ಟಿಯಿಂದ ಕೆಲವು ವಿಶಿಷ್ಟ ಗೀತಗಳನ್ನು ನೋಡಬಹುದು. ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಅಮೃತಬಿಂದು' ಶ್ರೀಧರ ಕಾವ್ಯವಾಚಿಕೆಯಲ್ಲಿ 'ನೌಕಾಗೀತ' ಡಾ.ಎಂ.ಜಿ.ಹೆಗಡೆಯವರ ಸಂಪಾದಕತ್ವದಲ್ಲಿ ಪ್ರಥಮವಾಗಿ ಪ್ರಕಟವಾಯ್ತು. (೨೦೦೭)

'ಆ ಮಯೂರವರ್ಮನಿದ್ದ ವೈಜಯಂತಿ ಪುರದಲ್ಲಿ
ಪಶ್ಚಿಮಾಬ್ದಿತೀರವಿಡೀ ಕುಂತಳ ಆ ದಿನದಲಿ'

ಎಂಬ ಸುಂದರ ಪದ್ಯದೊಂದಿಗೆ ತೆರೆದುಕೊಳ್ಳುವ ಕಥೆ ಮುಗ್ಧ ನಾವಿಕ ಜಟ್ಟನು ಚುಟ್ಟಿಗನಿಗೆ ಹರಕೆ ಹೊತ್ತು ಹಿಟ್ಟಿದ ಕಾರವೀರ ತಿಮ್ಮನ ಸುತ್ತ ಸಾಗುತ್ತದೆ.

'ಕಡಲಿನಲೆಗಳುಲಿಹ ಜೋಗುಳ
ಮಡಲ ಹೆಡೆಗಳೆನಗೆ ಹಯಗಳ
ಬದಲು ಆಡಲಲ್ಲಿ ಉಸುಕಿನ
ಗುಡಿಯ ಕಟ್ಟುತಿದ್ದೆ ಜಿಗಿದು ಗುಡಿಲಿಗೆ
ಬೇಳೆ ಚಟ್ಲಿ ತಿನಲು ಮಡಿಲಿಗೆ'

ಕಡಲಿನ ಅಲೆ, ಗಾಳಿ, ಗಳ ನಡುವೆ ಆರಂಭವಾದ ತಿಮ್ಮನೆಂಬ ಕಡಲ ಕಲಿಯ ಬಾಲ್ಯ ಉಸಿಕಿನಲ್ಲಿ ಕಟ್ಟಿದ ಗುಡಿಯೊಂದಿಗೆ, ಕಡಲುತೀರದ ಆಟಗಳೊಂದಿಗೆ, ಚಟ್ಲಿ ಮೀನಿನ ಊಟದೊಂದಿಗೆ ಸಹಜವಾಗಿ ಅರಳಿದ್ದನ್ನು ಶ್ರೀಧರರ ಸೂಕ್ಷ್ಮ ಮನಸ್ಸು ಕವನದಲ್ಲಿ ಕಟ್ಟಿಕೊಟ್ಟಿದೆ. ಕಡಲಿನ ಮಗನಾಗಿ ಬೆಳೆದದ್ದರಿಂದ ತಿಮ್ಮನಿಗೆ ಹಡಗು ನಡೆಸುವ ಕಲೆ ಹಸ್ತಗತವಾಗಿತ್ತು. ಹೀಗೆ ಕಡಲಿನ ಕಲಿಗಳು ಬೆಳೆದ ಸಂದರ್ಭವನ್ನು ಸಂಯೋಜಿಸಿ ಕಥೆಗೆ ಸಾರ್ಥಕ ಭೂಮಿಕೆಯನ್ನು ಶ್ರೀಧರರು ಒದಗಿಸಿದ್ದಾರೆ. ಸಾಂಬಾರ ಸಾಮಾನುಗಳನ್ನು ಹೊತ್ತು ತಿಮ್ಮ ಹಡಗನ್ನು ನಡೆಸುತ್ತಾ ರೋಮಿನತ್ತ ಸುದೀರ್ಘ ಯಾನ ನಡೆಸುತ್ತಿದ್ದಾಗ, ಯಕ್ಷಗಾನದ ದಟ್ಟ ಹಿನ್ನೆಲೆಯುಳ್ಳ ಶ್ರೀಧರರು ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನವನ್ನು ತಿಮ್ಮ ತಂಡದಿಂದ ಆಡಿಸಿದ್ದನ್ನು ಸೃಷ್ಟಿಸಿ ಬಳಸಿ ಜಾನಪದ ಕಲೆಯ ಸೊಗಡನ್ನು ಪರಿಚಯಿಸಿದ್ದಾರೆ–

'...ತಾಳಮದ್ದಳೆಗಳ ಸದ್ದಿಗೆ। ಚಂಡೆ ಹೊಡೆತ
ಏಳಲಲ್ಲ ಸಾರ್ದಿನೀಯದ
ನೀಳವಾದ ಮುಕುಟ ಹೊತ್ತಕೊಳವೆಯಾಗಿ ಕಾಲಿನವರು
ತೋಳನೆತ್ತಿ ಕೇಳಿ ಬಂದರು । ನೋಡಲೆಂದು
ಬಣ್ಣದುಡುಗೆಯಲ್ಲಿ ಕುಣಿಯುವ । ನಮ್ಮ ನಟರ
ಕಣ್ಣು ಮೋರೆಗಳನು ನಿರುಕಿಸಿ

ಹೆಣ್ಣು ಗಂಡು ಎನ್ನದೆಲ್ಲ ಸಭಿಕ ಲೋಕ ಮೆಚ್ಚಿಕೊಂಡು
ಹೆಣ್ಣು ಗಂಡು ಎನ್ನದೆಲ್ಲ ಸಭಿಕ ಲೋಕ ಮೆಚ್ಚಿಕೊಂಡು
ಚೆಲ್ಲಿ ಕೈಕ ಕೇಕೆ ಹಾಕಿತು ।...'

ಎಂದು ಯಕ್ಷಗಾನದ ಮಟ್ಟುಗಳನ್ನುಪಯೋಗಿಸಿ ಸೃಷ್ಟಿಸಿದ ದೃಶ್ಯದ ಸೊಗಸೇ ಸೊಗಸು.

ನಡುವೆ ಮನುಷ್ಯನಿಗೆ ಮಹತ್ವಾಕಾಂಕ್ಷೆ ಎಷ್ಟೇ ಇದ್ದರೂ ಆತ ಬಡವ ಎಂಬ ಬದುಕಿನ ಕಟುಸತ್ಯವನ್ನು ಕೆಲ ಸಾಲುಗಳಲ್ಲಿ ಹೇಳುವ ದಾರ್ಶನಿಕ ಶ್ರೀಧರರು ಮುಂದಾಗಲಿರುವ ದುರಂತದ ಸೂಚನೆಯನ್ನು ನೀಡಿದಂತಿದೆ. ಕಡಲು ಹಡಗನ್ನು ನುಂಗಿ ನೀರು ಕುಡಿದ ಮಾತೂ ಬರುತ್ತದೆ. ಕೊನೆಗೆ ಬಿರುಗಾಳಿಗೆದ್ದ ಹೆದ್ದೆರೆಗಳ ನಡುವೆ ವ್ಯರ್ಥ ಹೋರಾಟ ನಡೆಸಿದ ತಿಮ್ಮನ ಶವ ತೇಲಿ ಬಂದು ಕಾರವಾರದ ಕಡಲತೀರವನ್ನು ಸೇರಿದಾಗ–

'....ಕೆಲರು ಕನ್ನಡದ ಸಿರಿಯೆ ಹಾ
ಹೋದೆ! ಎಂದು ಅಳಲು
ಚಲುವ ಕಂಗನ್ನೈಪ ತೇರಿನಲ್ಲಿಯೇ
ತಲೆಬಗ್ಗಿಸಿರಲು!...'

ನಡೆದ ದುರಂತ ಚಿತ್ರಣದಲ್ಲಿ ತನ್ಮಯವಾಗಿ ರೋದಿಸುವ ಕವಿ ಮನಸ್ಸಿನಿಂದ ಉಕ್ಕಿದ ಕಾವ್ಯದ ನುಡಿಗಳು ಶ್ರಮಿಕರ ಕಾಯಕಕ್ಕೆ ಅತ್ಯುನ್ನತ ಪದಗೌರವ ಸಲ್ಲಿಸುವ ತನ್ನ ಉದ್ದೇಶವನ್ನು ಸಾಧಿಸಿದೆ.

ಕನ್ನಡ ಕಡಲಂಚಿನ ಹಾಯ್ದೋಣಿಗೆ ಜಯ
ಭಾರತೀಯ ಜಹಜಿನ ಕಪ್ತಾನ ಕುಲಕೆ ಜಯ
ಮುಗಿಲಿಗೆ ಮುತ್ತಿಡುವ ಹಡಗು ಬಾವುಟಕ್ಕೆ ಜಯ
ಕಾರವೀರ ಮೊಗವೀರರ ಕಲಿತನಕ್ಕೆ ಜಯ!

ತಿಮ್ಮನಂಥ ಶ್ರಮಿಕ ಶೂರರ ಕಾಯಕವನ್ನು ನೆನೆಯುತ್ತ ಚಂದದ ಮಂಗಳಗೀತೆ ಒಂದು ದುರಂತದಿಂದ ಪಾಠಕಲಿತು ಕಾರವೀರರು ಸಾಹಸಯಾನವನ್ನು ಮುಂದುವರಿಸಿದ್ದನ್ನು ಹೇಳಿದ ನಂತರ ಜೀವನ–ಪ್ರವಾಹದ ನಿರಂತರತೆಯನ್ನು 'ನೌಕಾಗೀತ' ಸಾರುತ್ತದೆ. ಹಾಗೂ ತನ್ನ ಪ್ರಯೋಗಶೀಲ ರಂಗಸಾಧ್ಯತೆಯ ಸತ್ವದಿಂದ ಗಮನ ಸೆಳೆಯುತ್ತದೆ.

ರೂಪಕ ತರಂಗ

ಆ ಮಯೂರವರ್ಮನಿದ್ದ ವೈಜಯಂತಿಪುರದಲಿ
ಪಶ್ಚಿಮಾಬ್ಧಿತೀರವಿಡೀ ಕುಂತಳ ಆ ದಿನದಲಿ
ನಾರಿಕೇಳ ನಂದನಗಳ ನಡುವೆ ಒಂದು ಗುಡಿಸಲು
ಕಾರವಾರ ಕಾರವೀರ ಮನೆತನವನು ನಡೆಸಲು
ಮಕ್ಕಳಿಲ್ಲದಿರಲು ತಂದೆ ಜಟ್ಟ ಹರಕೆ ಹೊತ್ತನು
ಜಟ್ಟಿಗನಿಗೆ ಕೋಳಿ ಬಲಿಯ ಕೊಟ್ಟು ಮನೆಗೆ ಬಂದನು
ಕಾಲಕಳೆಯೆ ತಾಯಿ ನಾಗಿ ಬಸುರಿಯಾಗಿ ನನ್ನನು
ಭೂಮಿಗಿಳಿಸಿಕೊಟ್ಟಳೆನಗೆ ತಿಮ್ಮನೆಂಬ ಹೆಸರನು!

ಕಡಲಿನಲೆಗಳುಲಿಹ ಜೋಗುಳ
ಮಡಲ ಹೆಡೆಗಳೆನಗೆ ಹಯಗಳ
ಬದಲು ಆಡಲಲ್ಲಿ ಉಸುಕಿನ
ಗುಡಿಯ ಕಟ್ಟುತಿದ್ದೆ ನಸುಕಿನ!
ಗಾಳಿ ಕಡಲಿಗೊಯ್ಯುತಿದ್ದಿತು
ಮೇಲೆ ಮುಗಿಲು ಗುಡುಗುತಿದ್ದಿತು
ಆರುಭಟಿಸುತಿರಲು ತೆರೆಗಳು
ತೂರಿ ಬರಲು ಮಳೆಯ ಕಣೆಗಳು
ಹಾರುತಿದ್ದೆ ಜಿಗಿದು ಗುಡಿಲಿಗೆ
ಬೇಳೆ ಚಟ್ಲಿ ತಿನಲು ಮಡಿಲಿಗೆ
ಹೇಳುತಿದ್ದ ಕತೆಯನಪ್ಪ –
ಏಳು ಕಡಲ ಸಾಲು ದಾಟಿದ
ತೇರಿನಂಥ ಹಡಗನೇರಿ
ಹಾಯಿ ಹಗ್ಗವನ್ನು ಕಟ್ಟಿದ
ಮಾರಲೆಂದು ಮುತ್ತುರತ್ನ

ಸೇರಲೆಂದು ಮನೆಗೆ ಯತ್ನ
ಮಾಡಿ ತೆಂಗು ಕಂಗು ಬಾಳೆ
ಮೆಣಸು ಜಾಯಿಫಲಗಳನ್ನು
ದಾಲಚಿನ್ನಿ ಎಣ್ಣೆಯನ್ನು
ಹತ್ತಿನೂಲು ಬಟ್ಟೆಯನ್ನು
ಸಾವಿರಾರು ಬಗೆಯ ಲೋಹ
ಪಾತ್ರೆಗಳನು ತುಂಬಿಕೊಂಡು
ಹಾಯಿ ಬಿಚ್ಚಿ ಹೊರಟನಂತೆ
ನಮ್ಮ ಅಜ್ಜನು!
ಬಾಯಿಯಲ್ಲಿ ಜಟ್ಟಗನನು
ನೆನೆಯುತ್ತಿದ್ದನು!
ಕಡಲಿನೊಳಗೆ ಹುಲಿಯ ಹಾಗೆ ಅಡಗಿದ
ತಡೆವ ತೋರ ಬಂಡೆಗಳನು ತಡಕಿದ
ಹಿಡಿದು ಕರ್ಣವನ್ನು ಜಾಣ್ಮೆಯಿಂದ ತಿರುಹಿದ
ನಡೆಸಿಕೊಂಡು ಹೋದ ದೂರ ಹಡಗನಗಚಿದ
ಗುಡ್ಡದಂಥ ತಿಮಿಯ ಕೊಂದ ಕುಂತದಿಂದ
ಹೆಡ್ಡನಾಗಿ ಓಡಿಹೋದ ಅಡ್ಡಿತಂದ!
ಕಡಲುಗಳ್ಳರೊಡೆಯ ಬೀರ ಕಣೆಗಳಿಂದ
ಒಡಲಿಗಾಗುತಿರಲು ಗಾಯ ಬಿಟ್ಟು ಹೋದ
ಹಡಗಿನಲ್ಲಿ ತನ್ನ ಮಗಳು ಸುಬ್ಬಿಯನ್ನು
ಅವಳು ನನಗೆ ಅಜ್ಜಿಯಾದಳಂದಿನಿಂದ!
ಹುಲ್ಲು ಬಣಬೆಯಷ್ಟು ಮೀನ ಹಂಚಿ ಬಿಟ್ಟ
ತನ್ನ ಮದುವೆಯಲ್ಲಿ ಅಜ್ಜಿ ಮೆರೆಡನುಟ್ಟ
ಸೆಲ್ಲೆಯಂಥ ಕೋವಣವನು ಕಾರವೀರರ
ಬಲ್ಲ ಮಸೆಗಳೆದುರು ವಾದ್ಯದನಿಯ ಬಿತ್ತರ!

ಝಂಪಾತರಂಗ

ಈ ಪರಿಯೊಳಿರುತಿರಲು ಸುಖದಿಂದ
ಯುವರಾಜ ಕುಂತಳ –
ಭೂಪಕಂಗನ ದೂತ ಬಂದೆಂದ
ಈ ಪಯೋಧಿಯ ದಾಟಿ ಭೂಮ–
ಧ್ಯಾಪಗಾಲಯದಾಚೆ ರೋಮಿನ
ಟಾಪವೀರ ಚಮೂಪರಾಜ್ಯಕೆ
ಪೋಪದೀ ಸಂಭಾರ ಹೊತ್ತಿದೋ
ಎನೆ ಮಹೋತ್ಸಾಹದಲಿ ನಾನೆದ್ದೆ
ಸಂಗಡಿಗರೆಲ್ಲರು
ಕೊನೆದು ಸಿದ್ಧತೆಯಲ್ಲಿ ಮುಂಬರಲು
ಮನೆಯೊಳಂಜಿದಳಬ್ಬೆ ಆದರೆ
ಜನುಮದಾತನು ಮೆಚ್ಚಿ ಹರಸಿದ
ಮನುವಿನಂತಾ ಮೂಗಡಲುಗಳ
ದಣಿಯದೆಯೆ ದಾಟುವೆನು ಎಂದೆನು!

ಮಿಶ್ರ ತರಂಗ

ಮೇರು ಸದೃಶ ನೌಕೆ ಹೊರಟಿತು
ನಮ್ಮದಂದು
ಆರುಭಟಿಸಿ ತೆರೆಯ ತುಡುಕಿತು!
ಚಾರು ಚಂದ್ರಕಿರಣ ಜಾಲ
ಸೂರೆ ಮಾಡುತಿರಲು ಬೆಳರ
ನೀರ ವೀರ ಕುವರರ ಜಯ –
ಕಾರ ನಭವ ಭೇದಿಸಿತ್ತು
ಕಡಲಿನಾನೆ ಕುದುರೆಹರಿಗಳು
ಗಜರುತಿರಲು
ಪೊಡವಿಪಾಲ ಕಳಿಸಿದಧಿಕರು
ನುಡಿದು ಮಂತ್ರಗಳನು ಹರಸೆ
ನಡೆದುದೆಮ್ಮ ನಾವೆ ಮುಂದೆ
ಪಡುವಲಿಂದ ತೆಂಕಣಕ್ಕೆ
ಕಡಲ ಕಡೆದ ಮಂದರದೊಲು
ಆಫ್ರೀಕವನು ಸುತ್ತಿಸಾಗಿತು
ನಮ್ಮ ನೌಕೆ
ಭೂ ಪ್ರದಕ್ಷಿಣೆಯನು ಹಾಕಿತು!
ತಾಪ ತಂಪು ತಳಪು ತಮೋ
ವ್ಯಾಪಕತೆಗಳನ್ನು ಕಳೆದು
ಪಾಪ ಶಿಲೆಯ ಕೋಡ ನುಡಿದು
ದಾಪಿನಿಂದ ವೇಗವಡೆದು
ಅತಲಾಂತಿಕ ಅತಲಾಂತಿಕ ಸಪ್ತಲೋಕ ವಿಸ್ತಾರದ
ಸರಸ್ವತಿ ಸುರೇಜೆ ಬಂತು
ನಾವಿಕರಿಗೆ ರಣಾಹ್ವಾನ ಕೊಡಲು ಎತ್ತಿನಿಂತು
ಪ್ರಯುತ ವೀಚಿ ಹಸ್ತಗಳನು ಕರೆದ ಭೀಷ್ಮಜಂತು!
ವಾರಾಶಿಯ ಒಡೆಯನಾದ ವರುಣನ ನಾಗಾತ್ಮ

ಮಹಾಮೇರು ಶಕ್ತಿ ಯುಕ್ತ ಪ್ರವಾಹಗಳ ವರ್ತ್ಮ
ಕರಾಳಾಶ್ಮದೈತ್ಯಗರ್ಭ ಜಲಪ್ರೇತ ಪೂರ್ಣ
ಬಿಂಬಿಸಿತ್ತು ಎದೆಯೊಳೆನ್ನ ಬಹು ಸ್ವಪ್ನಕೀರ್ಣ!
"ನೆಲದ ಮೇಲೆ ಮನುಜ ಹುಟ್ಟಿದಂದಿನಿಂದಲೂನು
ಹಣದಿ, ಮುತ್ತು ರತುನ ಹೊನ್ನು ಹೆಣ್ಣುಗಳಲಿ ತಾನು
ಬೆಳೆಯಿಸಿಕೊಂಡಾಸೆಯನ್ನು ವಿದೇಶಗಳಿಗೈದಿ
ತುಳಿಲಾಳ್ಗಳ ದಂಡಿನಿಂದ ಬಂದ ಕಾದಿ ಕಾದಿ
ಪರ ದೇಶಗಳನ್ನು ಹೊಕ್ಕು ಹೊಕ್ಕು ದಾಳಿ ಮಾಡಿ
ಸ್ವಸಾಮ್ರಾಜ್ಯವನ್ನು ಕಟ್ಟಿ ಗಳಿಕೆಯಿಂದ ಕೂಡಿ
ಮೆರೆವುದೆ ಸಾಫಲ್ಯವಲ್ತೆ? ನೀನಿದೇನ ಮಾಳ್ಪೆ?
ಸಾಮಾನುಗಳನ್ನು ಮಾರಲೇಕೆ ಬರಿದೆ ಪೋಪೆ?
ನಾನು ಹೊತ್ತು ಸಾಗಿಸಿರುವ ಹಡಗು ಒಂದೆ ಎರಡೆ?
ನುಂಗಿ ನೀರು ಕುಡಿದೆನು ನಾನೆಷ್ಟನೋ ತಲೆ ಕರಡೇ
ಆಗದಿರದು ಎಣಿಸತೊಡಗಲಿತಿಹಾಸದ ಕರ್ತ
ಆದರೇನು ಮನುಜನು ಬಡ, ಆಸೆ ಮಹಾಗರ್ತ!
ಅದೇ ಬಾಳು ಮಹಾಕಾಂಕ್ಷೆ ಮರ್ತ್ಯತ್ವದ ಗೌರವ
ದುಡಿದುಣ್ಣುವ ಬಾಳು ಸಪ್ಪೆ ವೈಶ್ಯ ಕೃಷಿಕ ಭಾರವ
ಹೊರುವಳೆಷ್ಟು ಭೂಮಿತಾಯಿ ಹೇಡಿಗಳುದ್ಯೋಗವ
ಹಿಡಿದು ಬಾಳಲೇನು ಬಂತು ಮೂಗು ಹಿಡಿವಯೋಗವ?
ವನೋದ್ದೇಶ ಜನೋದ್ದೇಶಗಳನು ಬಿಟ್ಟು ಮುಂದಕೆ!
ಜಿಬ್ರಾಲ್ತರ ಜಲಸಂಧಿಯ ಮೂಡಲ ಮುಖವಾಗಿ
ಹೊಕ್ಕಿತು ಹೆದ್ದೇರಿನಂತೆ ನಮ್ಮ ಹಡಗು ಸಾಗಿ
ಭೂದೇವಿಯ ನಾಭಿಯಂತೆ ಭೂಮಧ್ಯ ಸಮುದ್ರ
ಕಡಲ್ಗೆರೆಯಂತೆನಿಸಿ ತೆಮಗೆ ಪ್ರಯಾಣಕ್ಕೆ ಭದ್ರ!
ನಡುಗಡ್ಡೆಗಳೆಡ ಬಲದಲಿ ಜನವಸತಿಗಳಿಂದ
ಚಡಪಡಿಸಿದವೀ ಭಾಗದ ಮಹಾಶ್ವೇತವೃಂದ
ಕಿರುದೋಣಿಗಳನ್ನು ಹತ್ತಿ ಕುತೂಹಲದೆ ಬಂದು
ಪರೀಕಿಸಿ ಹೋಗುತ್ತಲಿದ್ದುದತ್ಯದ್ಭುತವೆಂದು;
ಯುರೋಪಿನ ರೇವುಗಳಲಿ ನಮ್ಮ ಹಡಗಿನಷ್ಟು
ದೊಡ್ಡ ಹಡಗೆ ಇಲ್ಲವಂದು; ಇದೇನಿಂಥ ಬೆಟ್ಟು

ಎಲ್ಲಿ ಮೂಡಿಬಂದಿರಿಲ್ಲಿ ನೀರಿನಿಂದ? ಎಂದು
ಅಲ್ಲಿಯ ಜನ ಹೆಪ್ಪಳಿಸಿತು ಗುಜು ಗುಜಿಸುತ ನಿಂದು!
ನಮ್ಮ ನಾವೆ ಇಂದು ಗೆದ್ದಿತು। ಈ ಅಪೂರ್ವ
ಕರ್ಮ ಹೆಮ್ಮೆಗೀಡುಮಾಡಿತು।
ಧರ್ಮ ದೇವರನ್ನು ನೆನೆದು ಹಡಗಿನಲ್ಲಿ ಯಕ್ಷಗಾನ
ವನ್ನು ಆಡಲಣಿಯ ಮಾಡಿತು। ನಮ್ಮ ಗುಂಪು
ತೀರ್ಥಯಾತ್ರೆಗಾಗಿ ಅರ್ಜುನ; ಹೊರಟು ಮುಂದೆ
ಸ್ಫೂರ್ತಿಯಿಂದ ದೇಶ ದೇಶದ
ಕೀರ್ತಿವಂತ ನಗರಗಳನು ಹೊಕ್ಕು ತಂಗಿ ಕನ್ನಿಕೆಯರು
ಕೂರ್ತು ಬೇಡಲಿಷ್ಟಸಲಿಸಿದ । ಕಥೆಯ ನೆನೆದು
ತಾಳ ಮದ್ದಳೆಗಳ ಸದ್ದಿಗೆ। ಚಂಡೆ ಹೊಡೆತ
ಏಳಲಲ್ಲ ಸಾರ್ದಿನೀಯದ
ನೀಳವಾದ ಮುಕುಟ ಹೊತ್ತ ಕೊಳವೆಯಾಗಿ ಕಾಲಿನವರು
ತೋಳ ನೆತ್ತಿಕೇಳಿ ಬಂದರು । ನೋಡಲೆಂದು
ಬಣ್ಣದುಡುಗೆಯಲ್ಲಿ ಕುಣಿಯುವ । ನಮ್ಮನಟರ
ಕಣ್ಣು ಮೋರೆಗಳನು ನಿರುಕಿಸಿ
ಹೆಣ್ಣು ಗಂಡು ಎನ್ನದೆಲ್ಲ ಸಭಿಕಲೋಕ ಮೆಚ್ಚಿಕೊಂಡು
ಚೆಲ್ಲಿ ಕೈಯ ಕೇಕೆ ಹಾಕಿತು। "ಹುರಾ" ಎಂದು
ತಕಿಟ ಧಿಕಿಟ ತಕ್ಕಧಿಮ್ಮಿಧೇಂ । ಧಿಂ ಕಿಟತಕ
ಧಿಕಿಟ ತಕಿಟ ತೈದ ಥಾ
ನಿಕಟವಾಗಿ ಕಿವಿಗೆ ಬಡಿಯೆ ನರ್ತಿಸಿತ್ತು ಕುಳಿತಲ್ಲಿಯೆ
ಸಕಲ ರಸಿಕವೃಂದ ಸತ್ಕಥಾ। ದೃಶ್ಯದಲ್ಲಿ

"ದೇವ ಸೂತ್ರಧಾರ ಬಾಳಿನ । ನಾಟಕಕ್ಕೆ
ನಾವು ನಟರು ನಾವೆ ನಡೆಸುವ
ಭಾವನಾರಸ ಪ್ರವಾಹ ರಾಶಿ ಕಡಲು ಮನದ ಹರುಷ
ದೇವರೆದುರಿಗಿಡುವ ಸತ್‌ಫಲ। ಅರ್ಪಣೆಯಲಿ"
ಎಂದು ಭಾಗವತರು ಮಂಗಳ । ಹಾಡುತಿರಲು
ಧೋಂ ಧೊಮೆಂದು ಮರ್ದಲಾರವ
ಬಂದವರನು ತಣಿಸಿಬೆಳಗ ಹರಿಯಿಸಿತ್ತು ನಾವೆಯಲ್ಲಿ

ಮುಂದೆ ಹೊರಡಲಾಯ್ತು ಸಿದ್ಧಕೆ। ನಮ್ಮದಾಗ
ಸ್ಥೂಲ ರಾಜ್ಯ ಭೂಮಿ ಮಸ್ತಕ । ಹಿಂದೆ ಬಿಟ್ಟು
ನೀಲ ನೀರಬಗೆದು ವೀಟಿಯ
ಕಾಲುವೆಯನು ತೋಡಿಕೊಂಡು ತೇಲಿತೆಮ್ಮ ನೀರತೇರು
ಕೀಲು ಹುಟ್ಟಿನವರ ಹುರುಪಿನ ಕೂಗಿನೊಡನೆ।
ಘೋರ ನಕ್ರ ಮಕರತಿಮಿಗಳ
ಎದುರು ಬಂದ
ಕ್ರೂರ ಕಡಲುಗಳ್ಳರೆಲ್ಲರ
ಸಾರಿ ಸದೆದು ನಡುಗಡಲನು
ಸೇರಿ ಸಿಸಿಲಿಯಿಂದ ಇಟಲಿ
ಪಾರಕೈದಿ ಧ್ವಜನ ನೆಟ್ಟು
ಹಾರಿಸಿದೆವು ಬಾವುಟವನು ।

ಏಕತಾಲ ತರಂಗ

ಶ್ರೀ ಜರ ದೊರೆಗಳ ರಾಜಪುರೋಹಿತ,
ಬಳಿಯ ಸಂಗಡಿಗರು
ಬಾಜಿಸುತಿರೆ ಮಂಗಲ ಸಂಗೀತವ
ಎದುರುಗೊಂಡು, ಚರರು
ಸೋಜಿಗದಿಂದೆಮ್ಮನು ನೋಡುತ್ತಿರೆ
ಸ್ವಾಗತಿಸಿದ ಹರಸಿ
ಮೂಜಗ ಮೆಚ್ಚಿದ ಕನ್ನಡದರಸನ
ಪತ್ರ ಓದಿ ಮೆರೆಸಿ!
ಜಾಜಿಕಾಯಿ ಮೆಣ ಸೇಲ ಚೀಲಗಳ
ಇಳಿಸಿದೆವಂದಲ್ಲಿ
ರಾಜವರ್ತಕರು ಕೊಂಡರವುಗಳನು
ಹೊನ್ನುಗಳನು ಚೆಲ್ಲಿ
ಗ್ಲಾಡಿಯೇಟರಂಗಣದ ಕುಸ್ತಿಗಳ
ತೋರಿಸಿದರು ನಮಗೆ

ನೋಡಿ ನಗುವ ಹಾಗಾಯ್ತು ಬರ್ಬರರ
ರಸಿಕತನದ ಬಗೆಗೆ।
ರಾಜಸಭೆಗೆ ಆಮಂತ್ರಣವನು ಕೊ–
ಟ್ಟೆಮ್ಮ ಕರೆಯಿಸಿದರು
ರಾಜ ಮುದ್ರಿಕೆಯ ನಾಣಕಗಳ ಸಂ–
ಪುಟವ ಕೊಡಿಯಿಸಿದರು।

ರಾಜಪುತ್ರಿ ಕ್ಲಾಡಿಯೋಂಟೀನೆಯಿಂ
ದವಳಿಗುಂಗುರವನು
ಸಾಜವಾಗಿತೆಗೆದಿತ್ತೆ ಗೌರವಕೆ
ಕೊಡಲು ಗೌರವವನು ।

ಕಾನ್‌ಸ್ಟಾಂಟೈನ್ ಶ್ರೀಜರನ ಮುಗುಳುನಗೆ
ನನ್ನ ಮೇಲೆ ಬಿದ್ದಿತ್ತು ।
ಮೇಗನಾದ ಗಾಂಭೀರ್ಯ ಪರ್ವತದ
ಶಿಖರಶಿರದಿ ಬಿರಿದ
ನಾಗಮಲ್ಲಿಗೆಯ ಹಾಗೆ ಶೋಭಿಸಿತು
ಅವನ ಎದೆಯ ತೆರೆದು ।
ರಾಜಗೌರವದೆ ಕಳಿಸಿಕೊಡಲು ಕ–
ನ್ನಡದ ನಾವಿಕರನು
ಯೋಜಿಸಿದರು ಜೊತೆಗಿಟ್ಟುದಾಸ ದಾ–
ಸಿಯರ ಮುಖ್ಯರನ್ನು
ರಾಜಪುತ್ರಿ ಕ್ಲಾರಿಯೋಂಟೀನೆ ಬೀಳ್–
ಕೊಟ್ಟು ಮೇಲೆ ಹಡಗು
ಓಜೆಯಿಂದ ಹಿಂದಿರುಗಲು ಯತ್ನಿಸೆ
ಅಡಗಿತೆನ್ನ ಅಡಗು ।

ತ್ರಿಪುಟ ತರಂಗ

ಕ್ರೋಶದಾಟಿದ ಮೇಲೆ ಕೊಟ್ಟಳು
ದಾಸಿ ಪತ್ರವನೊಂದನು–
"ಓ ಸುರೋಪಮರೂಪ ನನ್ನೆದೆ–
ಗಾದೆ ನೀನೇ ಭೂಪನು ।
ಭಾಷೆ ಕೊಡು ಬರೆದೋಲೆಯನು ಬಹೆ–
ನೆಂದು ದಿನಗಳ ಕಳೆವೆನು
ಸಾಸಿಗನೆ ಹನಿದುಂಬಿ ಕಣ್ಣಲಿ
ಬರೆಯುತಿಹೆ ಸಾಲುಗಳನು ।"
ಮುಗಿಲು ಮುಟ್ಟುವ ಹಾಗೆ ಮೇಲೆ–
ದ್ದಲೆಗಳೆದೆಯನು ಬಡಿದವು
ದಿಗಿಲುಗೊಂಡೆನು ಮತ್ತೆ ಬಹೆನೆಂ–
ದೆಂದು ಯೋಚಿಸಿ, ನಡೆದವು
ಕರಣಶಕ್ತಿಗಳೆನ್ನ ದೇಹವ
ಬಿಟ್ಟು, ಹಾಯ್ ಮನ ನುಸುಳಿತು ।
ಚರಣ ಮರವಟ್ಟಿತ್ತು ಕಲ್ಲಿನ
ಬೊಂಬೆಯಾದಂತೆನಿಸಿತು ।
ಊರ ಸೇರಲು ಮತ್ತೆ ಬರುವುದನಿಶ್ಚಿತ
ಕಾರ ಮೋಡವು ಕವಿದುದೊಳಹೊರಗದ್ಭುತ ।
ಕಾರವಾರವ ಸೇರುವುದು ಸಹ ಸಂಶಯ
ಆರು ತಿಂಗಳ ದಾರಿ ಕಡಿಮೆಯೇ? ಆಸೆಯ
ಯಾರು ಸಲಿಸುವರೆನ್ನ ರಾಜಾಧೀನನ?
ತಾಯಿತಂದೆಗಳೊಪ್ಪಿಗೆಗೆ ಈ ನಡೆತನ
ಸೇರುವುದೇ? ಎಂದಳಲುತಿರೆ ಬಿರುಗಾಳಿಯು
ಹಾರಿಸಿತು ಹೆಬ್ಬಾಯಿಯನು ಕಣ್ಣಾಲಿಯು
ನೀರ ತುಂತುರ ಬಡಿತದಲಿ ಕಳೆಗೆಟ್ಟಿತು
ಭೋರೆಸುತ್ತಿರೆ ಕಡಲು ನಡುಕವು ಹುಟ್ಟಿತು ।

ಮಟ್ಟತರಂಗ

ಪತ್ರವ ಕಸಿದೋದಿದ ಕಿರಿಯಪ್ಪನು
ಬಿಟ್ಟ ಕಣ್ಣು ಕೆಂಡ
ಹೃತ್ತಲ ಭೇದಿಸಿ ಬೆನ್ನಲಿ ಮೂಡಿತು
ಕತ್ತಿಯಂತೆ ಕಂಡ ।
ಗುಡುಗು ಸಿಡಿಲು ಜಡಿಮಳೆ ಮಿಂಚುಗಳೊಳ
ಸಂಚು ಮಾಡಿದಂತೆ
ಕಡಲಿನೊಳವನಾದ ಮಾಲ್ಪದೆಡೆಗೆ
ಯಮನ ದೂತರಂತೆ
ಚಂದ್ರ ಸೂರ್ಯರನ್ನೇಕ ಕಾಲದಲಿ
ರಾಹು ಹಿಡಿದ ಹಾಗೆ
ತಂದೆಯಿಂದ ಮೈಮನ ಮುದುಡಿದವು
ದಹಿಸಿಬಿಟ್ಟ ಹಾಗೆ
ಮರೆತು ಹೋದುದೇನಾಯ್ತೊ ಮುಂದೆ ನಾ
ಕಾರವಾರದಲ್ಲಿ
ಮರಳ ದಿಣ್ಣೆಯಲಿ ಕಂಡೆ ಶವವ ಹೇ–
ರೀಡು ಕಟ್ಟಿದಲ್ಲಿ
ತಾಯಿ ಬಡಿದು ಕೊಳ್ಳುತ್ತ ಎದೆಯ ಕಣಿ–
ಧಾರೆ ಸುರಿಸುತಿರಲು ।
ತಂದೆ ಸತ್ತವನ ಹಾಗೆ ನಿಂತಿರಲು
ಬೆಂಕಿಯನ್ನು ತರಲು
ತಂಗಿ ಓಡಿದಳು ಊರ ಕೇರಿ ಜನ
ಸುತ್ತುವರಿಯುತಿರಲು
ಚೂರಿ ಹಾಕಿದನು ಚಿಕ್ಕ ತಂದೆ ಮ–
ಚ್ಚರ ದೊಳೆಂದು ಕೆಲರು
ತಾನೆ ತನ್ನ ಪಾಪಕ್ಕೆ ಹೆದರಿ ಬಲು

ಇರಿದುಕೊಂಡ ನೆನಲು ।
ಕೆಲರು ಕನ್ನಡ ಸಿರಿಯೆ ಹಾ
ಹೋದೆ ! ಎಂದು ಅಳಲು
ಚಲುವ ಕಂಗನೃಪ ತೇರಿನಲ್ಲಿಯೇ
ತಲೆಯ ಬಗ್ಗಿಸಿರಲು ।
ಹರ ಹರ ! ಹಗ್ಗಿಯು ಹಬ್ಬಿ ಕಬಳಿಸಿದ
ಕಾರವಾರ ಕುಲದ
ಸರುವ ಶೌರ್ಯವನು ಬೆಳಗಿ ದಿಗ್ದೆಸೆಗೆ
ಅಂದಿನಿಂದ ಜಲದ
ಪರಿಯಟನವ ವರ್ಜಕ್ಕೆ ಸೇರಿಸಿದ
ಧರ್ಮಶಾಸ್ತ್ರದಲ್ಲಿ
ಹಿರಿ ಪುರೋಹಿತನು ಕುಂತಳೇಶ್ವರನ
ತೊಯ್ದು ಕಂಬನಿಯಲಿ !
ಕನ್ನಡರಾಯರ ವಂಶದೊಳಾರೂ
ಪಯಣ ಬೆಳೆಸರೆಂದು
ಅನ್ಯದೇಶಗಳಿಗಂದಿನಿಂದ ಹಡ–
ಗೇರಲಿಲ್ಲ ಬಂದು
ಮಹಿಶೂರಪುರ ದೊಡೆಯ ನಾಲ್ವಡಿಯ
ಕೃಷ್ಣರಾಯನೊಬ್ಬ
ಮಹಾಸಾಹಸಿಕನಾದ ಶಾಸ್ತ್ರವನು
ತಿದ್ದಿದಾಗ । ಹಬ್ಬ
ನನಗೆ, ಸದ್ಗತಿಯ ಪಡೆಯದುಳಿದ ಈ
ನೀರವೀರವರಗೆ
ಪುನರ್ಜನ್ಮವೀಗಾಯ್ತು ಧನ್ಯ ನಾ
ನಮಿಪೆ ವರುಣನಡಿಗೆ ।

ರೂಪಕ ತರಂಗ

ಕನ್ನಡ ಕಡಲಂಚಿನ ಹಾಯ್ದೋಣಿಗಳಿಗೆ ಜಯ
ಭಾರತೀಯ ಜಹಜಿನ ಕಪ್ತಾನ ಕುಲಕೆ ಜಯ !
ಮುಗಿಲಿಗೆ ಮುತ್ತಿಡುವ ಹಡಗು ಬಾವುಟಕ್ಕೆ ಜಯ
ಕಾರವೀರ ಮೊಗವೀರರ ಕಲಿತನಕ್ಕೆ ಜಯ !

‘ಜಯ’ ವಾಯಿತು ‘ಭಾರತ’
ಬಳಿಕ ‘ಮಹಾಭಾರತ’
ಕುಂತಳ ಕರ್ಣಾಟವಾಗಿ
ಮೈಸೂರಾದಂತೆ !

ಅದಕೆ ಪುನರ್ಜಯವಾಗಲಿ ಕಡಲ ಕಸುವಿನಿಂದ
ನೆಲದ ಬಲಕೆ ಗಾಳಿದಳಕೆ ಸಲಿಸುವ ನೆರವಿನಿಂದ
ರಾಷ್ಟ್ರದ ನೌಕೆಯ ನಡೆಸುವ ಕರ್ಣಧಾರಗೆ
ರಾಷ್ಟ್ರಾರ್ಥವ್ಯಾಪಾರದ ಸಚಿವವೀರಗೆ !

ಜಯ !
ಜಯ !
ಜಯ !

ಕದಂಬ ವೈಭವ

ಕದಂಬ ವೈಭವ

ಕನ್ನಡ ನಾಡಿನ ಮೊದಲ ದೊರೆ, ಕೀರ್ತಿವಂತ, ಚಕ್ರವರ್ತಿ ಮಯೂರ ವರ್ಮನಿಂದ ಆರಂಭವಾಗಿರುವಂಥ ಸಾಂಗತ್ಯಕಾವ್ಯ ಕದಂಬ ವೈಭವ. 'ಪ್ರಬುದ್ಧ ಕರ್ನಾಟಕ'ದ ಮೂರು ಸಂಚಿಕೆಯಲ್ಲಿ ಪ್ರಕಟವಾಗಿತ್ತು. ೧೯೪೯ರಲ್ಲಿ ಸಾಹಿತ್ಯ ಮಂದಿರದ ಪ್ರಕಾಶನದಲ್ಲಿ ಒಂದು ಪುಟ್ಟ ಪುಸ್ತಕವಾಗಿ ಹೊರಬಿದ್ದಿತು. ಇದರಲ್ಲಿ ವರ್ಣನೆಯು ಅತೀ ಆಗದೇ, ಒಂದು ಅಚ್ಚುಕಟ್ಟಾದ ಚೌಕಟ್ಟಿನಲ್ಲಿ ಸಾಗುವುದನ್ನು ಕಾಣುತ್ತೇವೆ. ಮಯೂರವರ್ಮನಿಂದ ಆರಂಭವಾಗಿ ಮುಂದೆ ಅವನ ವಂಶಜರು ಸಾರ್ವಭೌಮತ್ವವನ್ನು ಹೊಂದಿ, ಸಾಮಂತರಾಗಿ, ಅವನತಿ ಹೊಂದಿ ಏಳು–ಬೀಳುಗಳ ಹಾದಿಯಲ್ಲಿ ಮುಂದುವರಿದಂಥ ಒಂದು ಕಥೆ ಈ ಸಾಂಗತ್ಯದಲ್ಲಿ ಇದೆ. ಇದು ಇತಿಹಾಸ ಕೊಡುವುದರ ಜೊತೆಗೆ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನೂ ನೀಡುತ್ತದೆ. ಕರ್ನಾಟಕದ ಮೊದಲ ಚಕ್ರವರ್ತಿ ಮಯೂರವರ್ಮ ಕರ್ನಾಟಕ ಹಾಗೂ ನೆರೆ ರಾಜ್ಯಗಳಲ್ಲಿ ಮೆರೆದುದನ್ನು ಕನ್ನಡಿಗರ ಕೀರ್ತಿಯನ್ನು ಹೆಚ್ಚಿಸಿದ್ದನ್ನು ಚಿತ್ರಿಸುತ್ತದೆ. ಮಹಾಕಾವ್ಯದ ಜಾಡಿನಲ್ಲಿ ವರ್ಣನೆಗಳಿದ್ದರೂ ಔಚಿತ್ಯಪೂರ್ಣವಾಗಿವೆ. ಸಂಭಾಷಣೆಗಳು ಆಕರ್ಷಕವಾಗಿವೆ. ಬಿ.ಎಚ್.ಶ್ರೀಧರರಿಗೆ ಯಕ್ಷಗಾನದ ಹಿನ್ನೆಲೆ ಇದ್ದ ಕಾರಣ ಈ ನಾಟಕೀಯ ಕಾವ್ಯ ರಚನೆ ಸುಲಭವಾಯಿತು. ಐತಿಹಾಸಿಕ ಘಟನೆಗಳಿಗೂ ಚ್ಯುತಿ ಬಾರದ ಹಾಗೆ ಶಾಸನಗಳ ಹಿನ್ನೆಲೆಯಲ್ಲಿ ಇಲ್ಲಿ ಚಿತ್ರಿಸಿದ್ದಾರೆ. ಮಹಾಕಾವ್ಯದ ಆರಂಭದ ಹಾಗೆ ಇಲ್ಲಿ ಆರಂಭವಾಗಿದೆ. ಸಾಮಾನ್ಯವಾಗಿ ಮಹಾಕಾವ್ಯಗಳಲ್ಲಿ ಇಂದ್ರನಲ್ಲಿ–ಬ್ರಹ್ಮನಲ್ಲಿ ಮೊರೆ ಇಡುವುದನ್ನು ಕಾಣುವೆವು. ಇಲ್ಲಿ ಪರಶುರಾಮನಿಗೆ ತೆಂಗುಗಳ ಅಧಿಷ್ಠಾನ ದೇವತೆಗಳು ತಮ್ಮಲ್ಲಿ ಕಲಹ ಕಾರ್ಪಣ್ಯ ಉಂಟಾದುದನ್ನು ಮೊರೆ ಇಡುತ್ತವೆ. ಪರಶುರಾಮ ಬ್ರಹ್ಮನನ್ನು ಮೊರೆ ಹೋಗಲು ಹೇಳುತ್ತಾನೆ. ಬ್ರಹ್ಮ ಪರಮೇಶ್ವರನ ಅನುಗ್ರಹವನ್ನು ಸೂಚಿಸುತ್ತಾನೆ. ಬ್ರಹ್ಮ – "ಈಶ್ವರನ ಅಂಶವೇ ಈ ಧರೆಯಲ್ಲಿ ಜನ್ಮ ಎತ್ತಲಿದೆ. ನೀವು ನಿಶ್ಚಿಂತೆಯಿಂದ ಹೋಗಿ, ನಿಮಗೆ ಹೊಸ ರಾಜ್ಯ ಪ್ರಾಪ್ತಿಯಾಗುತ್ತದೆ", ಎಂದು ಆಶ್ವಾಸನೆ ನೀಡುತ್ತಾನೆ. ಹೀಗೆ ಅವು ಆಶ್ವಾಸನೆ ಪಡೆದು ಬಂದಾಗ ಯಾವ ಒಂದು ನಾಡು ಒಬ್ಬ ಮಹಾರಾಜನ ಬಗ್ಗೆ, ಒಳ್ಳೆಯ ಆಡಳಿತಗಾರನ ಬಗ್ಗೆ ಕಾಯುತ್ತಾ ಇತ್ತೋ ಅಂಥವನ ಉದಯದ ಬಗ್ಗೆ ಇಲ್ಲಿ ಅತ್ಯಂತ ನಾಟಕೀಯವಾಗಿ ಆರಂಭ ಮಾಡಿದ್ದಾರೆ. ಜೊತೆಗೆ ಕುಂತಳ ನಾಡನ್ನು ಬಣ್ಣಿಸುವ ರೀತಿಯಲ್ಲಿ ಹೊಸತನವನ್ನು

ಕಾಣುತ್ತೇವೆ. ಸಾಂಗತ್ಯದ ಸಂಪ್ರದಾಯದ ಚೌಕಟ್ಟು, ಐತಿಹಾಸಿಕ ಕಥೆ ಇದ್ದೂ ಇಲ್ಲಿ ಹೊಸತನವನ್ನು ಕಾಣುತ್ತೇವೆ, ಎಂಬುದನ್ನು ನೋಡಬಹುದು. "ಚೆಂದಕ್ಕೆ ಚೆಂದವ ಸೂಡುವ ನಾಡಿದು, ಅಂದು ತೆರೆಯುತಿದೆ ಕಥೆಯ ಕದ" ಎಂಬ ವಿಶೇಷ ಸೊಲ್ಲಿನೊಂದಿಗೆ ನಾಟಕೀಯವಾಗಿ ಆರಂಭವಾಗುತ್ತದೆ. ಮಯೂರವರ್ಮನ ಅಜ್ಜನ ಆಶೋತ್ತರಗಳನ್ನು ಕೂಡ ಸುಂದರವಾಗಿ ಹೇಳಿದ್ದಾರೆ.

"ಮುತ್ತಾತ ಮುಕ್ಕಣ್ಣ ತಾಳಗುಂದದೊಳಿರೆ
ಧುತ್ತೆಂದು ಬೆಳೆದೆದ್ದು ನಿಂದಿರಲು
ಎತ್ತರಕೆತ್ತರವೆನಿಸುವ ಹನೆಮರ
ಸತ್ಯ ಧರ್ಮ ಧ್ವಜವೆಂದೆನಲು"

ಮೊಮ್ಮಗ ನವಿಲಣ್ಣ ತನ್ನಂತೆಯೇ ಎಲ್ಲ
ಹೆಮ್ಮೆಯ ವೇದ ವಾಙ್ಮಯದ ಲೋಕದ
ಸನ್ಮಾನ್ಯ ಸಮ್ರಾಜನಾಗಲೆಂದಟ್ಟಿದ
ಬ್ರಹ್ಮಪುರಿಗೆ ದೊಡ್ಡವನಮುಖದ !"

ಇಲ್ಲಿ ತನ್ನ ವಂಶದವರ ಆಶೋತ್ತರಗಳ ಪ್ರತಿರೂಪವಾಗಿ ಶಿಕ್ಷಣ ಪಡೆಯುತ್ತಾ ಇದ್ದಾನೆ ಎಂಬ ಒಂದು ಹಿನ್ನೆಲೆ ಇದೆ. ಮಯೂರವರ್ಮನಲ್ಲಿದ್ದ ತೇಜಸ್ಸು, ಶಕ್ತಿ, ಸಾಮರ್ಥ್ಯ, ವೇದ ವಾಙ್ಮಯ, ಜೊತೆಗೆ ಈ ನಾಡಿನ ಜನರಿಗೆ ಒಳಿತನ್ನು ಮಾಡುವಂಥ ಸಾಮರ್ಥ್ಯ ಇದನ್ನು ಬಹಳ ಸುಂದರವಾಗಿ ಬಣ್ಣಿಸಿದ್ದಾರೆ.

"ವೀರ ಮಯೂರ ವಿದ್ಯಾರ್ಥಿಯಲ್ಲ
ಅರೆ ದಾಸ್ಯದಂಧಕಾರದೊಳಿಹ ಜನಗಳ
ಪೊರೆವ ಸುದರ್ಶನ ಚಕ್ರವಲಾ"

ಎಂದು ವೀರ ಮಯೂರ ಕೇವಲ ವಿದ್ಯಾರ್ಥಿಯಾಗಿರದೇ ದಾಸ್ಯದಲ್ಲಿರುವ ಜನಗಳನ್ನು ಕಾಪಾಡುವ ಶಕ್ತಿಯಾಗಿದ್ದ ಎಂದು ಹೇಳಿದ್ದಾರೆ.

ಮುಂದೆ ಕಾಂಚಿಯ ಘಟಿಕೆಗೆ ಕೊಂಡೊಯ್ದದ್ದು, ಅಲ್ಲಿಯ ಉತ್ಸವದಲ್ಲಿ ಅವಮಾನಿತವಾದದ್ದು, ಎಲ್ಲವರಿಗೂ ತಿಳಿದ ಸಂಗತಿ. ಆದರೆ ಇಲ್ಲಿ ಕಥೆಯು ಎದುರಿಗೇ ನಡೆಯುತ್ತಿದೆಯೋ ಏನೋ ಎಂಬಂತೆ, ಯಕ್ಷಗಾನದ ದೃಶ್ಯಗಳನ್ನು ಜ್ಞಾಪಿಸುವ, ರಚನೆ ಇಲ್ಲಿಯ ವಿಶೇಷ. ಉತ್ಸವದಲ್ಲಿ ಮಯೂರ ಕುದುರೆಯನ್ನು ಏರಿದಾಗ, ದೊರೆ– "ಏರಿದನೇಕೆ ಹಾರುವ ಕುದುರೆಯ, ಶೂರ ಕ್ಷತ್ರಿಯನಂತೆ ಹುಚ್ಚೆನ್ನರೆ?"

"ವಿಪ್ರಕುಲದ ನೀನು ಅಪ್ರಬುದ್ಧನ ಹಾಗೆ
ಬರ್ಪುದೆ ಹರಿಯೇರಿ ರಣಮೇಧಿಯ
ಉಪ್ಪಿಲ್ಲದುಣಿಸು ವೇದಾಂತ ನಿಮ್ಮದುರಾಜ
ರಿರ್ಪರು ದಂಡಿಸಲಪರಾಧಿಯ
ಬ್ರಹ್ಮವ ಕಾಣುವಿರೆಲ್ಲಿ ನೀವೀದೇಹ
ನಮ್ಮ ರಕ್ಷಣೆಯನು ಪಡೆಯದಿರೆ
ಹಮ್ಮಿಗೇನರ್ಥ – ವಾಜಿಯನೇರಿದಾಕ್ಷಣ
ನಿಮ್ಮಲ್ಲಿ ಕ್ಷಾತ್ರವು ಮೂಡುವುದೇ?"

ಯಕ್ಷಗಾನದ ಆಟದಲ್ಲಿ ಬರುವ ಸಂಭಾಷಣೆಗಳನ್ನು ಇವು ಹೋಲುತ್ತವೆ.

"ಎನಲಲ್ಲ ಕೇಳ್, ಆತ್ಮರಕ್ಷಣೆಯನು ವಿಪ್ರ
ಗಣ ಕೊಳ್ಳಬಲ್ಲುದಯ್ಯ ದೊರೆ
ಅನುಮಾನವೇ ಕಿಡಿ ಪ್ರಥಿವಿ ದೈವಾಧೀನ
ದೈವ ಬ್ರಾಹ್ಮಣ ಪ್ರಾರ್ಥನೀಯ ಖರೆ"

ಪಲ್ಲವನ ಸೊಕ್ಕಿನ ಮಾತಿಗೆ ಮಯೂರಶರ್ಮನು ಹೀಗೆ ಉತ್ತರಿಸಿ, ಮಯೂರವರ್ಮನಾಗಿ, ಶಸ್ತ್ರಗಳನ್ನು ಧರಿಸಿ, ಗುಡ್ಡಬೆಟ್ಟಗಳಲ್ಲಿ ಅವಿತು, ಸೈನ್ಯಕಟ್ಟಿ ನಂತರ ಪಲ್ಲವರನ್ನು ಸೋಲಿಸಿ ಬನವಾಸಿಯಲ್ಲಿ ಪಟ್ಟಾಭಿಷಿಕ್ತನಾದನು.

ಕಥೆಯ ಪ್ರಾರಂಭದಲ್ಲಿ – "ಸಿಂಹಶಾರ್ದೂಲಗಳಾಳಾಗಿ ಬಂದವು ಧರ್ಮವೀರನ ಸಾರಿ

ಬೃಂಹಿತ ದೊಡನಾನೆವಿಂಡು ಬೆಂಬಿಡಿಯಿತು ಮಾರುತಿಕುಲ ಹಾರಿ

ಸುಮ್ಮಾನದಿಂದ ನಾಯಕನಾಜ್ಞೆ ಪಾಲಿಸಕಲಿತಂದು ವನಚಾರಿ"– ಪ್ರಾಣಿಗಳಲ್ಲೂ ಕ್ಷಾತ್ರತೇಜ ತುಂಬಿದ್ದನ್ನು ಬಣ್ಣಿಸುತ್ತಾರೆ.

"ಧ್ವಜದಲ್ಲಿ ಸಿಂಹ, ನಾಣ್ಯಗಳಲಿ ಸಿಂಹ–ರಾಜಾಸನದಲಿ ಸಿಂಹ
ವಿಜಯದ್ವಾರದ ಎಡಬಲದಲ್ಲೂ ಸಿಂಹ ಬಾವುಟ ಪಟ್ಟೆಯಲಿ ಸಿಂಹ
ವಿಜಯಪ್ರತಾಪದ ಸಾರ್ವಭೌಮನ ಸ್ವಪ್ನ ಬಡಿವಂತೆ ಇರುಳಲ್ಲಿ
ಗಜರುವಂತಿದ್ದವು ರಿಪುಗಣದೆದೆಯನ್ನು ಬನವಸೆ ಮನೆಯಲ್ಲಿ"

ಹೀಗೆ ಕದಂಬ ರಾಜ್ಯದಲ್ಲಿ ಮಯೂರಶರ್ಮನು ಮಯೂರವರ್ಮನಾಗಿ ಮಾಡಿದ ರಾಜ್ಯಭಾರದ ವರ್ಣನೆ ಶಕ್ತಿಶಾಲಿಯಾಗಿ ಬರುತ್ತದೆ. ಮಯೂರವರ್ಮನ ಕಾಲಾನಂತರ ಅವನ ಮಗ ಕಂಗವರ್ಮ ಪಲ್ಲವ ದೊರೆಯ ಮಗಳನ್ನು ಮದುವೆಯಾಗಿ,

ಭಗೀರಥವರ್ಮನನ್ನು ಪಡೆದು, ನಾಲ್ಕು ದಶಕಗಳ ಕಾಲ ಯಶಸ್ವಿಯಾಗಿ ರಾಜ್ಯವಾಳಿದನು. ಕಂಗವರ್ಮನ ನಂತರ ಕೆಲಕಾಲ ರಾಜಮಾತೆಯು ರಾಜ್ಯವಾಳಿದಳು. ಈ ನಡುವೆ ಕದಂಬರ ವ್ಯಾಪಾರ ವ್ಯವಹಾರವನ್ನೂ ವರ್ಣಿಸದೇ ಬಿಟ್ಟಿಲ್ಲ!

"ಕಡಲೂರ ರೇವುಗಳು
ಈ ರಾಜ್ಯದ
ಅಡಿಕೆ ಮೆಣಸುಗಳನು।
ಹಡಗುಗಳಿಂದ
ವಿದೇಶಗಳಿಗೆ ಅಟ್ಟಿ
ಪಡೆದವು ಹೊಂಗಳನು ॥

ಯುದ್ಧದಲ್ಲಿ ಗೆಲ್ಲುವುದು, ಸಾಂಸ್ಕೃತಿಕವಾಗಿ ಬೆಳೆಯುವುದು, ಅಲ್ಲದೇ, ವಾಣಿಜ್ಯದಲ್ಲಿ ಹೇಗೆ ರಾಜ್ಯ ಬೆಳೆಯುತ್ತಾ ಇತ್ತು ಎಂದು ಗುರ್ತಿಸಿದ್ದಾರೆ. ಭಗೀರಥನ ಮಕ್ಕಳಾದ ರಘು–ಕಾಕುತಸ್ಥರು ಬೆಳೆದು ಶತ್ರುಗಳನ್ನು ಅಡಗಿಸಿ ರಾಜ್ಯವಾಳುವುದರ ಜೊತೆಗೆ ಜನತೆಗೆ ತಾತ್ವಿಕ ಶಿಕ್ಷಣವನ್ನು ಹೇಗೆ ನೀಡುತ್ತಿದ್ದರು – ಎಂದು ಬರುತ್ತದೆ. ರಾಜ್ಯಗಳ ವೈಭವದ ವರ್ಣನೆ, ಲೌಕಿಕ ಉನ್ನತಿ ಇವುಗಳ ಕುರಿತಾಗಿ ಹೇಳುವುದು ಸಾಮಾನ್ಯ. ಆದರೆ ಶ್ರೀಧರರ ವ್ಯಕ್ತಿತ್ವದ ಹಿನ್ನೆಲೆ ಕುರಿತಾಗಿ ಯೋಚಿಸಿದಾಗ, ಅವರ ಚಿಂತನೆಯನ್ನು ಯೋಚಿಸಿದಾಗ ಇದು ಅತ್ಯಂತ ಸಾರ್ಥಕ ಎನಿಸುತ್ತದೆ. ಅವನು ಜನ ಶಿಕ್ಷಣದ ಪ್ರಯೋಗ ಹೇಗೆ ಮಾಡಿದ ಎಂದು ಸುಮಾರು ೪೮ ಸಾಲುಗಳಲ್ಲಿ ಹೇಳುತ್ತಾರೆ. ಶಾಂತಿವರ್ಮ ಮುಂದೆ ಹೇಗೆ ಉದಾತ್ತವಾದ ಆಡಳಿತ ನೀಡಿದ ಎಂದು ಕಾಣಬಹುದು. ಮುಂದೆ ಮೃಗೇಶ, ರವಿವರ್ಮ, ಹರಿವರ್ಮ ಎಲ್ಲರಿಗೂ ಆಡಳಿತ, ಆಸ್ಥಾನ ವೈಭವ ಅಭಿಮಾನಾಸ್ಪದವಾಗಿತ್ತು.

ಐತಿಹಾಸಿಕ ಕಥೆಯನ್ನು ಹೇಳುತ್ತಾ ಸಂಸ್ಕೃತಿ ಹಿನ್ನೆಲೆಯನ್ನೂ, ಆಧ್ಯಾತ್ಮಿಕ ಆಡಳಿತವನ್ನೂ ಗುರುತಿಸಿದ್ದು ಈ ಸಾಂಗತ್ಯದ ವಿಶೇಷ. ಕನ್ನಡ ನಾಡಿನ ಮೇಲ್ಮೆಯನ್ನು ಕಾವ್ಯದ ಉದ್ದಕ್ಕೂ ಬರೆದಿದ್ದಾರೆ. ಇದು ಉಚಿತವೆನ್ನಿಸಿದೆ. ಎಲ್ಲೆಲ್ಲಿ ಕನ್ನಡ ನಾಡಿನ ಏಳ್ಗೆಯಾಗಿತ್ತೋ, ಕೀರ್ತಿ ಮೆರೆದಿತ್ತೋ ಅಲ್ಲಿ ಕನ್ನಡನಾಡಿನ ಸ್ತುತಿಯಾದದ್ದು ಗಮನಾರ್ಹ. ಕ್ರಿ.ಶ. ೨೮೦೦ರಲ್ಲಿ ಕನ್ನಡ ನಾಡಿನ ಕೀರ್ತಿ ಬೇರೆ ಬೇರೆ ರಾಜ್ಯದಲ್ಲಿ ಹರಡಿದ ಸಂದರ್ಭದಲ್ಲಿ ಈ ಸ್ತುತಿ ಸುಸಂಗತವೆನ್ನಿಸಿದೆ.

ಶೈಲಿಯ ದೃಷ್ಟಿಯಿಂದ ಅತ್ಯಂತ ವಿಶೇಷ ಎನ್ನಿಸುವ ಉಕ್ತಿಗಳು ಇವೆ. ಕುಮಾರ ಕಂಗವರ್ಮನನ್ನು ಹೆಂಗಳೆಯರು ಹುಡುಕುತ್ತಾ ಇದ್ದರು. ಆಗ–

ಕಣ್ಮಾತು ತುಟಿಮಾತು
ಕಿವಿಮಾತು ಮೂಗುಮಾತು
ಬೆನ್ನ ಸೂಕ್ಷ್ಮದ ಮಾತು
ತಲೆಮಾತು ಕೈಯಮಾತು

ಎನ್ನುವ ಸಪ್ತ ವಾಣಿಗಳಿಂದ ಯುವತಿಯರು ಪನ್ನತಿಕೆಯ ಯುವರಾಜನ ಹೊಗಳಿದರು. "ಸಪ್ತವಾಣಿಗಳಿಂದ ಹೊಗಳಿದರು" ಎಂಬುದೊಂದು ಹೊಸ ಪ್ರಯೋಗ ಎನ್ನಬಹುದು.

ಕೆಲವು ತತ್ವಗಳು, ಮಾತುಗಳು ಉಚಿತವಾಗಿ ಪದ್ಯದ ಸಾಲುಗಳ ನಡುವೆ ಬಂದಿರುವುದನ್ನು ಕಾಣಬಹುದು. ಇಲ್ಲಿ ಕಥೆ ಕೇವಲ ಅಲಂಕಾರದಿಂದ ತುಂಬಿರದೇ, ಐತಿಹಾಸಿಕ ಸತ್ಯದೊಂದಿಗೆ, ಸಾಂಗತ್ಯದ ಲಯದೊಂದಿಗೆ, ಸಾಗಿದ್ದನ್ನು ಕಾಣುತ್ತೇವೆ. ಭಾಷೆಯಲ್ಲಿ ಒಂದು ಬಗೆಯ ಹದವನ್ನು ಕಾಣುತ್ತೇವೆ. ಅತಿ ಪ್ರೌಢವಾಗಿ ಸಂಸ್ಕೃತಮಯನಾಗಿಯೂ ಇಲ್ಲದೇ ಅತಿ ಸರಳವಾಗಿ ದೇಶೀ ಭಾಷೆಯು ಆಗಿಲ್ಲದ ಹೊಂದಾಣಿಕೆಯನ್ನು ನಾವು ಕಾಣುತ್ತೇವೆ.

ಬನವಾಸಿ ಕದಂಬರ ಕುರಿತ ಶ್ರೀಧರರ ಈ ಉತ್ಸಾಹದ ಹಿನ್ನೆಲೆಯಲ್ಲಿ ಅವರು ನಡೆಸಿದ ಐತಿಹಾಸಿಕ ಸಂಶೋಧನೆ ಇದೆ. ಉದಾಹರಣೆಗೆ ಎಲ್.ಟಿ.ಶರ್ಮರ ಜೊತೆ ಸೇರಿ ಅವರು ಬರೆದು ಪ್ರಕಟಿಸಿರುವ ಬನವಾಸಿಯ ಕದಂಬರು ಕೃತಿಯನ್ನು ಗಮನಿಸಬಹುದು. ಚಿಕ್ಕದಾದರೂ ಸಾಮಾಜಿಕ, ಭಾಷಾ ಶಾಸ್ತ್ರೀಯ, ಐತಿಹಾಸಿಕ ನೆಲೆಗಳ ಸಮಗ್ರ ಅಧ್ಯಯನವಿದು. ಶಾಸನಗಳು, ಸಾಹಿತ್ಯ ಹಾಗೂ ಶಿಲ್ಪಕಲೆಗಳನ್ನು ವಿವರವಾಗಿ ಗಮನಿಸಿದ ನಡೆಸಿದ ಸಂಶೋಧನೆ. ಇಂದು ಪ್ರಾಚ್ಯ ಇಲಾಖೆಯ ಉತ್ಖನನಗಳು ನಡೆದಿವೆ. ನಾಡಿನ ವಿದ್ವಾಂಸರು ಕದಂಬರ ಕುರಿತು ಬರೆದಿದ್ದಾರೆ. ಶ್ರೀಧರರು ೧೯೬೬ರಷ್ಟು ಹಿಂದೆಯೇ ಇಂತಹ ಸಹಾಯಗಳು ದೊರಕದಿದ್ದರೂ ಅಚ್ಚುಕಟ್ಟಾದ ಸಂಶೋಧನೆ ಪ್ರಕಟಿಸಿದರೆಂಬುದು ಗಮನಾರ್ಹ. ಕದಂಬರ ಇತಿಹಾಸ, ಆ ಕಾಲದ ಜನಜೀವನ, ದೇವಾಲಯಗಳು ಹಾಗೂ ವಾಸ್ತುಶಿಲ್ಪ, ದೇವಾಲಯಗಳ ಖರ್ಚು–ವೆಚ್ಚ, ಪೂಜಾ ವಿಧಾನ, ಪೂಜಾ ನಿಯೋಗಗಳಿಗೆ ಸಂಬಂಧಿಸಿದ ಮನೆತನಗಳ ವಿವರ – ಇವನ್ನೆಲ್ಲ ಒಳಗೊಳ್ಳುತ್ತ ಸಮಗ್ರ ಚಿತ್ರಣ ನೀಡಿದ್ದಾರೆ. ಬನವಾಸಿಯ ಇಂದಿನ ಸ್ಥಿತಿ, ಕದಂಬ ಯುಗದ ಊರುಗಳ ಪರಿಚಯ, ಅಧಿಕಾರ ವರ್ಗದ ಪರಿಚಯ, ಹಲವಾರು ನಕಾಶೆಗಳು – ಇವೆಲ್ಲ ಅನುಬಂಧದಲ್ಲಿ ಬಂದಿವೆ. ಈ ಸಂಶೋಧನಾ ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಶ್ರೀಧರರ 'ಕದಂಬ ವೈಭವ' ಇತಿಹಾಸಕ್ಕೆ ಅದೆಷ್ಟು ನಿಷ್ಠವಾಗಿದೆ ಎಂಬುದು ಅರಿವಾಗುತ್ತದೆ.

–ವಿಜಯನಳಿನಿ ರಮೇಶ

ಕದಂಬ ವೈಭವ

(ಸಾಂಗತ್ಯ)

೧

ಸೂಚನೆ: ಪಡುಗಡಲ ತೀರದ ತೆಂಗುಗಳ ಅಧಿಷ್ಠಾನ ದೇವತೆಗಳು ಶಿಥಿಲ ಪ್ರಶಾಸನದಿಂದ ತಮ್ಮಲ್ಲಿ ಕಲಹ–ಕಾರ್ಪಣ್ಯ ಉಂಟಾದುದನ್ನು ಪರಶುರಾಮನಿಗೆ ನಿವೇದಿಸಿದವು. ಪರಶುಧರ ಅವುಗಳಿಗೆ ಬ್ರಹ್ಮನನ್ನು ಮೊರೆ ಹೊಗಲು ಹೇಳಿದನು. ಬ್ರಹ್ಮ ಪರಮೇಶ್ವರನ ಅನುಗ್ರಹವನ್ನು ಸೂಚಿಸಿ ಮಾಯವಾದನು.

ಅಮರಾರ್ಣವದ ತೀರದಲ್ಲಿ ಭಾರ್ಗವರಾಮ
ಭ್ರಮಿಸುತ್ತಲಿರಲೊಂದು ದಿವಸ
ಕಮನೀಯವಾದ ಕಲ್ಪದ್ರುಮಗಳು ಕಂಡು
ನಮಿಸಿ ನುಡಿದ "ವಾಳುವರಸ
ಇರದಿರೆ ನಮ್ಮೊಳಗಿನ ಕಲಹವ ಪರಿ
ಹರಿಸುವರಾರು? ಈ ವಿರಸ
ಕರಕರೆ ಬೆಳೆಸಿ ಕೊಲ್ಲುವುದೆಮ್ಮ ಕುಲವನು
ಪೊರೆ ಎನೆ ನುಡಿದ ಸತ್ಪುರುಷ:

"ನಾಗಭೂಷಣನಿತ್ತ ಕೊಡಲಿಯ ಬಲದಿಂದ
ಆಗ ಈ ನೆಲವನು ಕಡಲ
ಜೌಗಿನಿಂದೆತ್ತಿಸಿ ನಿಲಿಸಿದೆ ನಾಮೇಲೆ
ವಾಗೀಶ ಕೊಡಹಿದ ಮಡಿಲ
ಉರುಳಿ ಕಲ್ಪದ್ರುಮಗಳೆ ನಿಮ್ಮ ಪಿತೃಗಳು
ತಿರೆಗಿಲ್ಲಿ ವಂಶವರ್ಧನರು
ಬರಲು ನೀವಿಲ್ಲಿ ನಿಂದಿಹಿರಾದ ಕಾರಣ
ಮರೆವೊಗುವುದು ಪಿತಾಮಹನ."
ಎನಲು ಪ್ರಾರ್ಥಿಸಿದವು ಕಲ್ಪವಕ್ಷಗಳಾಗ
ಮುನಿವೇಷದಲಿ ಬಂದು ಬೊಮ್ಮ

ಪ್ರಣಿಧಾನದಿಂದ ನೋಡಿದ ದೇವ ತ್ರ್ಯಂಬಕ
ಅವತರಿಸಲು ಬಯಸಿದುದ;
"ಮುಕ್ಕಣ್ಣನೆಂಬಭಿಧಾನದ ವಿಪ್ರನು
ಸ್ಥಾಣುಗೂಢಾಖ್ಯ ಗ್ರಾಮದಲಿ
ಲೆಕ್ಕಿಸಿ ಮೂಡಿದನೆಂಭತ್ತಬ್ದದ ಹಿಂದೆ
ಪಾರ್ವತೀಪತಿ ಪುಣ್ಯಾಹದಲಿ
ಆತನ ಮಗ ಶಿವಸ್ಕಂದನೆನ್ನುವ ವಿಪ್ರ
ಖ್ಯಾತ ಪಲ್ಲವರಾಶ್ರಯದಲಿ
ನೀತಿಯಿಂದಗ್ರಹಾರವ ನಡೆಸುತ್ತಿಹ
ಪ್ರಾತಃ ಸೂರ್ಯನ ಹಾಗೆ ಅವನ;
ಜ್ಯೇಷ್ಠಪುತ್ರನು ಬೆಳೆಯುತ್ತಿಹ ಕುಂತಳ
ರಾಜ್ಯದ ಬನವಸೆ ಎಂಬ
ಶ್ರೇಷ್ಠನಗರದಲ್ಲಿ ಚಟುರಾಜಗೃಹವಿಹ
ಚಾತುರ್ವಿದ್ಯದ ಧಾಮವಾದ;
ವೀರಶರ್ಮಾಚಾರ್ಯ ಕಲಿಸುತಿರುವನಲ್ಲಿ
ಆರುಶಾಸ್ತ್ರಗಳ ಶಿಷ್ಯನಿಗೆ
ತಾರುಣ್ಯ ತೇಜಃಸ್ವರೂಪ ಮಯೂರ ಮ–
ಹಾರಾಜ ಲಕ್ಷಣಯುತಗೆ
ವೀರಮಯೂರ ಮುಂದಾಗುವ ನೀಯೆಲ್ಲ
ಧಾರಿಣಿಗೊಡೆಯ ಕುಂತಳದ
ಕಾರಭಾರವ ತಹಬಂದಿಗೆ ತರುವನು
ಧೈರ್ಯಗೆಡದಿರೆ"ಂದು ನುಡಿದ.

ಇಂತುಸಿರ್ದಂತರ್ಧಾನಿಸಿದ ಪಿತಾಮಹ
ಚಿಂತೆಯ ಬಿಟ್ಟು ತೆಂಗುಗಳು
ಸಂತಸದಿಂದ ಕಾದಿದ್ದವು ದೊರೆ ಬಂದು
ಸಂತಯಿಸುವನೆಂದು ನಂಬಿ.

೨

ಸೂ: ಮಯೂರಶರ್ಮ ಕದಂಬನು ಬನವಾಸಿಯಲ್ಲಿ ಓದುತ್ತಿದ್ದನು. ಕೆಲಕಾಲಾನಂತರ ಹೆಚ್ಚಿನ ಅಭ್ಯಾಸಕ್ಕಾಗಿ ಗುರುವಿನೊಡನೆ ಕಂಚಿಗೆ ಹೋದನು; ಕಂಚಿಕೆಯ ಘಟಿಕಾಸ್ಥಾನದ ಹೊರವಳಯದಲ್ಲಿ ಭೇಟಿಯಾದ ಪಲ್ಲವದೊರೆ ಶಿವಸ್ಕಂದವರ್ಮನ ಮೂದಲಿಕೆಯಿಂದ ಕೆರಳಿ ಆ ನಗರವನ್ನು ಬಿಟ್ಟು ಗುರುವಿನೊಡನೆ ಸೈನ್ಯವನ್ನು ಸಂಘಟಿಸಿ ಹೋರಾಡಲೆಂದು ಶ್ರೀ ಪರ್ವತದ ಅರಣ್ಯ ಪ್ರದೇಶವನ್ನು ಅವನು ಹೊಕ್ಕನು.

ಪೂಗೀಫಲಗಳಿಗೆ ನಾಗವಲ್ಲಿಗಳಿಗೆ
ಬೀಗಿಬೆಳೆದ ಏಲಾಫಲಗಳಿಗೆ
ಸಾಗುಮಾಡುವ ಕರಿಮೆಣಸು ಬಾಳೆಗಳಿಗೆ
ರಾಗಿಬತ್ತಗಳಿಗೆ ರಸದಾಳಿಗೆ
ಮಾವಿಗೆ ಹಲಸಿಗೆ ತಾಳೆ ತೆಂಗುಗಳಿಗೆ
ಸಾವಿರದಹಿಪುಷ್ಪ ಬಕುಳಗಳ
ಸಾವಿರ ಜಾತಿಯ ಜಾಜಿ ಮಲ್ಲಿಗೆಗಳ
ಹೂವಿನ ತರುಲತಾವನಗಳಿಗೆ–

ಸಹ್ಯಾದ್ರಿಮುನಿಯ ಪುತ್ರಿಯರಾದ ವರದೆ ಶ–
ರಾವತಿ ಶಾಲ್ಮಲೆ ಹೊಳೆಗಳಿಗೆ
ದುಹ್ಯಮಾನಶ್ರೀಯ ತುಂಗಭದ್ರೆಗೆ ದಂಡಾ–
ವತಿಗೆ ಮತ್ತಿನ ಪುಣ್ಯನದಿಗಳಿಗೆ–

ಕೊಲ್ಲೂರು ಗೋಕರ್ಣ ತಾಳಗುಂದಗಳಿಗೆ
ಚಂದ್ರಗುತ್ತಿಗೆ ಬನವಸೆಗುಡಿಗೆ
ಎಲ್ಲವ್ವಗುಡ್ಡಕ್ಕೆ ಮೈಲಾರಲಿಂಗಕ್ಕೆ
ಬಳ್ಳಿಗಾವಿಯ ಬಹುಲಿಂಗನಿಗೆ

ತವರಾಯ್ತು ಕುಂತಳ ಮೂಲಕನ್ನಡ ತಳ
ಕೊಂತಣ ಕೊಂಕಣ ಪಡುಗಡಲ
ಸವಿಗನಸುಗಳೆಲ್ಲ ಘನಿಸಿ ಮೂರ್ತೀಭೂತ
ಅಹಿಖಂಡ ಕೀರ್ತಿಯ ಹಸಿರು ನೆಲ!

ಆದಿನಾರಾಯಣ ಮಧುಕೈಟಭರಿಗಿತ್ತ
ಶ್ರೀಧೇನು ಕೃತಯುಗ ನೆಲೆನಿಂದಿರೆ
ಮೇಧಾವಿ ಚಂದ್ರಹಾಸನ ತಂದೆಯಾಳಿದ
ಭೂಧಾಮ ದ್ವಾಪರಯುಗ ಬಂದಿರೆ
ಕುಂದಕ್ಕೆ ಮಡಿಯಾದ ಚಂದನಕಡಿಯಾದ
ಮಂದಮಲಯನಿಗೆ ಗಡಿಯಾದ
ಚೆಂದಕ್ಕೆ ಚೆಂದವ ಸೂಡುವ ನಾಡಿದು
ಅಂದು ತೆರೆಯುತಿರೆ ಕತೆಯ ಕದ!

ವನದಾಸ್ಯವಾದ ಈ ನಗರಕ್ಕೆ ಜಿನಮುನಿ
ವನವಾಸಿ ತಪಗೈಯಲೆಂದೆಯ್ದಿದ
ನೆನಪಜರಾಮರವಾಯ್ತೂರ ಹೆಸರಾಗಿ
ಘನವಿದ್ಯಾಪೀಠಕ್ಕಾಶ್ರಯ ನೀಡಿದ
ವರದೆಯೊಡ್ಯಾಣವ ಧರಿಸಿದ ನಗರಶ್ರೀ
ವರ ಗಂಧಶಾಲಿಯ ಕ್ಷೇತ್ರಗಳ
ಪರಿಧಿಯೊಳಗೆ ಬೆಳೆದೆದ್ದಳು ಪ್ರಾಯದ
ಕರಿಣಿಯಂದದಿ ತುಂಬಿದುರುಗೊರಳ!

ಮುತ್ತಾತ ಮುಕ್ಕಣ್ಣ ತಾಳಗುಂದದೊಳಿರೆ
ಧುತ್ತೆಂದು ಬೆಳೆದೆದ್ದು ನಿಂದಿರಲು
ಎತ್ತರಕೆತ್ತರವೆನಿಸುವ ಹನೆಮರ
ಸತ್ಯಧರ್ಮಧ್ವಜವೆಂದೆನಲು
ಮೊಮ್ಮಗ ನವಿಲಣ್ಣ ತನ್ನಂತೆಯೇ ಎಲ್ಲ
ಹೆಮ್ಮೆಯ ವೇದವಾಙ್ಮಯ ಲೋಕದ
ಸನ್ಮಾನ್ಯ ಸಮ್ರಾಜನಾಗಲೆಂದಟ್ಟಿದ
ಬ್ರಹ್ಮಪುರಿಗೆ ದೊಡ್ಡ ವನಮುಖದ!

ಚುಟುಕುಲಾನಂದನೆನ್ನಿಸಿ ಶಾತಕರ್ಣಿ ತಾ
ಬನವಸೆಯಲಿ ನೆಲೆನಿಂದಾಳಿದ
ವಟು ಮಯೂರನು ವೀರಶರ್ಮನು ಬಳಿಯಲಿ
ಪ್ರಥಿತ ಶಾಸ್ತ್ರಗಳೆಲ್ಲವನ್ನೋದಿದ

ಬ್ರಹ್ಮವರ್ಚಸ್ಸಲ್ಲಿ ರೂಹದಾಳಿತೊ ಎನೆ
ಕರ್ಮಕಾಂಡವನೆಲ್ಲ ಮುಗಿಸಿರುವ
ಶರ್ಮ ನಿಂತಿದ್ದ ದರ್ಭಾಸಮಿತ್ಪಾಣಿ ಸು–
ಶರ್ಮ ವೇದಾಂತದ ಹುಡುಕುತಿಹ
ಧೀರಕದಂಬ ಕದಂಬಿಸುತ್ತಿದ್ದನು
ಪಾರದರ್ಶನದಿಂದ ಹನೆಯೆತ್ತರ
ಪೇರಿಸಿ ಶಾಸ್ತ್ರದ ತಿಳಿವಳಿಕೆಗಳನು
ವೀರಶರ್ಮನ ಬೋಧೆ ಬಹು ವಿಸ್ತರ
ಯಜ್ಞವನಲ್ಲ ಅಧ್ವರವ ನಡೆಸುತ್ತಿದ್ದ
ಪ್ರಾಜ್ಞಪಿತಾಮಹವರರುಗಳ
ಉಜ್ವಲ ಪುಣ್ಯ ಮೈದಾಳಿತೊ ಎಂದಿತು
ಅಜ್ಞೇಯ ಸಂಖ್ಯೆಯ ಛಾತ್ರದಳ
“ಮೂರಕ್ಕೆ ಮೀರದ ಆರಕ್ಕೆ ಹೆಚ್ಚದ
ಸಾರಾಸಾರ ವಿಚಾರ ಮಾಡಬಲ್ಲ
ಕಾರಣ ಪುರುಷ ಸಮೀರಣ ಪ್ರತಿಭೆಯ
ವೀರ ಮಯೂರ ವಿದ್ಯಾರ್ಥಿಯಲ್ಲ
ಅರೆದಾಸ್ಯದಂಧಕಾರದೊಳಿಹ ಜನಗಳ
ಪೊರೆವ ಸುದರ್ಶನ ಚಕ್ರವಲ
ಅರಿರಾಯಮಸ್ತಕ ಭೇದನಕೆಯ್ತಂದ
ಗಿರಿದೇವ ಹಿಡಿದಿಹ ಹೆದ್ದಿಸುಳ”

ಎಂದು ಮುನ್ನೋಟದಿ ಗುರು ಕಂಡುಕೊಂಡಿದ್ದ
ಬಂದಾಗಲೇ ಶಿಷ್ಯನಾಗಿ ವಟು
ಮುಂದೊಮ್ಮೆ ಕಾಂಚಿಯ ಘಟಿಕೆಗೆ ಕೊಂಡೊಯ್ದ
ಎಂದಾಗಲಿವನು ವೇದಾಂತಪಟು
ಪಲ್ಲವರಾಜಧಾನಿಗೆ ನಡೆದನು ವೀರ
ಮಲ್ಲ ಸಾಹಸ ಭೀಮ ಮಾನಧನ
ಅಲ್ಲಿಯ ಘಟಿಕೆಯ ಹೊಕ್ಕು ಕಲಿಯುತಿರೆ
ಉಲ್ಲಾಸದಿಂದ ಅದೊಂದುದಿನ
ರಾಜವಾಟಿಕೆಯುತ್ಸವಾಚರಣೆಯೊಳೊಮ್ಮೆ

ವಾಜಿಯೇರಿದ ಶಿವಸ್ಕಂದ ದೊರೆ
ಈ ಜನವಾರೆಂದು ನಿಲ್ಲಿಸಿ ಕುದುರೆಯ
ರಾಜಗರ್ವವತೋರಿ ಕೇಳಿದನು
ವೀರಶರ್ಮನ ಶಿಷ್ಯ ಬ್ರಹ್ಮಜಿಜ್ಞಾಸುಮ–
ಯೂರನೆನ್ನಲು ಭಟ, ನಕ್ಕು ದೊರೆ
ಏರಿದನೇಕಿಂಥ ಹಾರುವ ಕುದುರೆಯ
ಶೂರ ಕ್ಷತ್ರಿಯನಂತೆ–ಹುಚ್ಚೆನ್ನರೇ?

"ವಿಪ್ರಕುಲದ ನೀನು ಅಪ್ರಬುದ್ಧನ ಹಾಗೆ
ಬರ್ಪುದೆ ಹರಿಯೇರಿ ರಣಮೇಧಿಯ
ಉಪ್ಪಿಲ್ಲದುಣಿಸು ವೇದಾಂತ ನಿಮ್ಮದು ರಾಜ
ರಿರ್ಪರು ದಂಡಿಸಲಪರಾಧಿಯ
ಬ್ರಹ್ಮವ ಕಾಣುವಿರಲ್ಲಿ ನೀವೀದೇಹ
ನಮ್ಮ ರಕ್ಷಣೆಯನು ಪಡೆಯದಿರೆ
ಹಮ್ಮಿಗೇನರ್ಥ–ವಾಜಿಯನೇರಿದಾಕ್ಷಣ
ನಿಮ್ಮಲ್ಲಿ ಕ್ಷಾತ್ರವು ಮೂಡುವುದೇ?"

"ಎನಲಲ್ಲ ಕೇಳ್, ಆತ್ಮರಕ್ಷಣೆಯನು ವಿಪ್ರ
ಗಣ ಮಾಡಿ ಕೊಳಬಲ್ಲುದಯ್ಯ ದೊರೆ
ಅನುಮಾನವೇಕಿಡಿ ಪೃಥಿವಿ ದೈವಾಧೀನ
ದೈವ ಬ್ರಾಹ್ಮಣಪ್ರಾರ್ಥನೀಯಖರೆ"

ಇದ ಕೇಳಿಖತಿಗೊಂಡು ಪಲ್ಲವನೆಲೆಮಾಣಿ
ಹದಮೀರಿ ಮಾತಾಡುತಿರುವೆಯಲಾ
ಮುದಿ ಹಾರುವರು ನಿನಗಿದ ಹೇಳಿ ಕೊಟ್ಟರೆ
ಇದೊ ಹೋಗು ನಿನ್ನ ಬಿಟ್ಟಿಹೆನೀಸಲ"

ಎಂದ ಮಾತನು ಕೇಳಿ ನೊಂದು ಮಹಾರುದ್ರ
ನಂದನ ಸ್ಕಂದನಂತೆವೊಲುರಿದು
"ನಂದಿಸದಿರೆ ನಿನ್ನ ಹೆಮ್ಮೆಯನೆಲೆನೃಪ"
ಎಂದು ಪೊಣ್ದೆಯ್ದಿದನವ ಸರಿದು

ಶ್ರೀಪರ್ವತಾರಣ್ಯ ಕೈರಾತತಾರುಣ್ಯ
ಶ್ವಾಪದ ದಾರುಣ್ಯ ಕೂಡಿರಲು
ಆಪತ್ತಿಪರಿಹಾರದಾಶ್ರಯವೆಂದಲ್ಲಿ
ತೋಪಿನಂತಡಗಿತ್ತು ನರನವಿಲು

೩

ಸೂ: ಶ್ರೀಪರ್ವತದ ಕಾಡಿನಲ್ಲಿ ಮಯೂರ ಸೈನ್ಯವನ್ನು ಸಂಘಟಿಸಿ ಪಲ್ಲವರ ಗಡಿಗಾಹಿಗಳನ್ನು ಗೆದ್ದು, ಅವರ ರಾಜ್ಯದ ಒಂದೊಂದೇ ಭಾಗವನ್ನು ಆಕ್ರಮಿಸುತ್ತ ಹೋದ ಕೂಡಲೇ ಪಲ್ಲವದೊರೆ ಅವನೊಡನೆ ಒಪ್ಪಂದಕ್ಕೆ ಬಂದು ಬನವಾಸಿಯಲ್ಲಿ ಅವನಿಗೆ ಪಟ್ಟಾಭಿಷೇಕ ಮಾಡಿದನು, ಕ್ರಿಶ ೨೮೦ರ ಆ ಅವಧಿಯಲ್ಲಿ ಮಯೂರ ಶರ್ಮನು ಸುತ್ತು ಮುತ್ತಲಿನ ರಾಜರನ್ನು ಗೆದ್ದು ಅವರಿಂದ ಕಪ್ಪ–ಕಾಣಿಕೆಗಳನ್ನು ಪಡೆದು ಕುಂತಳ ಚಕ್ರವರ್ತಿಯಾದನು. ಕನ್ನಡದ ಸುವರ್ಣಯುಗ ಅಂದು ಆರಂಭವಾಯ್ತು.

ವಿಶ್ವಾಮಿತ್ರನ ಹಾಗೆ ವೀರಶರ್ಮಾಚಾರ್ಯ
  ಅಶ್ವಾದಿಗಳನೇರಿ
ಸುಶ್ರೀಕಯೋಧರಂ ಸೆಣಸುವ ಬಗೆಗಳ
  ಕಲಿಸಿದ ಶರಧಾರಿ
ಪ್ರಕ್ಷಿಪ್ತ ಕಾಡಾಡಿಗಳಿಗೆ ಮಯೂರನ
  ಪಕ್ಷವ ಬಹ ಸೇರಿ
ದಕ್ಷರಾದರು ಬಿಲುಗಲಿಗಳು ಧುರದೀಕ್ಷೆ
  ಹೊತ್ತು ಕ್ಷಾತ್ರವ ಹೀರಿ
ಸಿಂಹ ಶಾರ್ದೂಲಗಳಾಳಾಗಿ ಬಂದವು
  ಧರ್ಮವೀರನ ಸಾರಿ
ಬೃಂಹಿತದೊಡನಾನೆವಿಂಡು ಬೆಂಬಿಡಿಯಿತು
  ಮಾರುತಿಕುಲ ಹಾರಿ
ಸುಮ್ಮಾನದಿಂದ ನಾಯಕನಾಜ್ಞೆಪಾಲಿಸ
  ಕಲಿತುದು ವನಚಾರಿ
ಉನ್ಮನನಾಗಿ ಬೆಂಬತ್ತಿದ ಬಿಲುವಿಡಿ
  ದಮ್ಮಗೆ ಜಯಕೋರಿ
ಪಲ್ಲವನಂತಪಾಲರನೆದುರಿಸಿದನು
  ವರ್ಷಾರ್ಧದಲಿ ಕಡುಗಿ
ಬಿಲ್ಲುಬಾಣಗಳ ಗರಿಲ್ಲರ ಬಲದಿಂದ
    ಕಾಡುಮೇಡೊಳಗಡಗಿ

ಬಲ್ಲಾಳು ಭಾರತದಪರಾಂತ ಪ್ರತಿನಿಧಿ
        ರಾಮರಾಜ್ಯೋದಯದ
ಉಲ್ಲೇಖ ಮಾಡಿದನಂಬಿಂದ ಶಿಲೆಯಲ್ಲಿ
        ಚಂದ್ರವಳ್ಳಿಯೊಳೊಪ್ಪದ
ತ್ರೈಕೂಟಾಭೀರರೀಶ್ವರ ಸೇನ ಮಣಿದನು
        ಬಿಂಜದಾಚೆಯ ರಾಜ
ಮೌಖರಿ ಶರಣುವೊಕ್ಕನು ಬೃಹದ್ಬಾಣನು
        ಸೋತೆನೀತನ ತೇಜ
ಸಾಕುಮಾಡಿತು ಎಂದು ಕಪ್ಪಕಾಣಿಕೆಯಿತ್ತು
        ಕೈಮುಗಿದನು ರಾಜ
ಶೇಖರನಿಚ್ಛೆ ಮಾನವನಲಿ ಬೆರೆದಾಗ
        ಲೋಕಸಿದ್ಧಿಯು ಸಾಜ
ಕದನತ್ರಿಣೇತ್ರ ಸೇಂದ್ರಕನ ಬಗ್ಗಿಸಿದನು
        ಮಧುಮಾಸ ಬಂದೊಡನೆ
ಮದನ ಮೂರುತಿ ನೋಡೆ ಹೊರಗಿಂದ ಏನೀತ
        ಸೇನಾನಿಯವತಾರನೆ?
ಇದು ಮಿಗಿಲಿದುಮಿಗಿಲರರೆ ಭಳಿರೆ ಎಂದು
        ಮೆಚ್ಚಿ ಅಚ್ಚರಿಯಿಂದ
ಪದದಲಿ ತಂದಿಟ್ಟ ಕಾಣಿಕೆಗಳನವ
        ನವಭಕ್ತಿವಿಧದಿಂದ
ಅತ್ಯಭಿಮನ್ಯು ಪರಾಕ್ರಮಿಯೀತನ
        ಎದುರಿಸಿ ಫಲವಿಲ್ಲ
ಮೃತ್ಯುಗೆ ಮೃತ್ಯುವೆಂದರಿದು ವಿನಯದಿಂದ
        ಮಚ್ಚರ ನನಗಿಲ್ಲ
ಇತ್ತೆ ನಿನಗೆ ದಂಡನಾಥನ ಪದವಿಯ
        ಮತ್ತೆನ್ನ ನೆಲದಲ್ಲಿ
ಹತ್ತೂರನೆನೆ ಪಲ್ಲವೇಶ್ವರನ ಬಿಲ್ಲನು
        ಅಸ್ತು ಎಂದನು ಚೆಲ್ಲಿ
ಒಪ್ಪಿ ಶಿಖೀಶ್ವರ ರಾಜ್ಯಗೈಯುತ್ತಿರೆ
        ಪಲ್ಲವ ಚಕ್ರೇಶ

ಒಪ್ಪುವ ಮರ್ಯಾದೆಯಿಂದರಗುವರಿಯ
ಇತ್ತನೀತನ ರೋಷ
ಮುಪ್ಪಾಯ್ತು ಚುಟುಪೌತ್ರ ಕನ್ಯೆ ಮಂಜುಶ್ರೀಯ
ಕೊಟ್ಟಾಗ ವೈಭವದ
ಚಪ್ಪರದಲಿ ಜೋಡುರಾಣಿಯರೊಡನಿಂದ್ರ–
ನಪ್ಪನಂದದೊಳೆಸೆದ
ರಾಜಾಧಿರಾಜ ಮಯೂರನಾದನು ಕನ್ನ–
ಡಾದಿ ಚಕ್ರಾಧೀಶ
ಮೂಜಗ ಹರಸಿತು ಕುಂತಳೇಶ್ವರ ಸರ್ವ–
ರಾಜ ವಿದ್ಯಾವಾಸ
"ವಿಜತಿ ನೈಜತಿ" ಎಂಬೀಶನಂತವ
ಮೂರು ಹೆಬ್ಬೂರೋವ
ಭೋಜ್ಯಕುಂತಳವ ಸಾಮ್ರಾಜ್ಯ ಕರ್ಣಾಟವ
ರಾಷ್ಟ್ರಿಕ ಜನಪದವ
ಹಗೆವರ ಯಮಗಂಡ ಮಲೆವರ ಮಾರ್ತಂಡ
ಮುನಿವರ ಹೆಮ್ಮಾರಿ
ಜಗಳಗಂಟರ ಗೊಂಡ ಜೀವಗಳ್ಳರ ಕೊಂಡ
ತಿರೆಕಂಡ ತ್ರಿಪುರಾರಿ
ಅಗುರುವಿಸುವರ ನವುಂಕಿದ ದೋರ್ದಂಡ
ತಗುಳಾಡುವರ ಹೋರಿ
ಸಗರನಂತೇರಿದ ಕನ್ನಡ ಕೋಯಂಡ
ಗದ್ದುಗೆಯನು ಭಾರಿ

ಯತಿತತಿ ಚಕ್ರವರ್ತಿಗಳು ಶೋಭಿಸಿದರು
ಸಮ್ರಾಜಸಭೆಯಲ್ಲಿ
ಮತಿವಂತ ಸಾಮಂತ ಚೂಡಾಮಣಿಗಳಾಸ–
ನಾಸೀನರಾದಲ್ಲಿ
ಧೃತಿ ಶಮ ದಮಯುಕ್ತ ವ್ರತಿಗಳು ರಾಜಿಸೆ
ಎಡಬಲದಿಸೆಯಲ್ಲಿ
ಭೃತಿಗೊಂಬ ವೀರವಿಕ್ರಮದ ಸೇನಾನಿಗ–
ಳೆಸೆಯೆ ಹಿನ್ನೆಲೆಯಲ್ಲಿ

ಧ್ವಜದಲಿ ಸಿಂಹ ನಾಣ್ಯಗಳಲ್ಲಿ ಸಿಂಹ ರಾ–
ಜಾಸನದಲಿ ಸಿಂಹ
ವಿಜಯದ್ವಾರದ ಎಡಬಲದಲ್ಲೂ ಸಿಂಹ ಬಾ–
ವುಟ ಪಟ್ಟೆಯಲಿ ಸಿಂಹ
ವಿಜಯ ಪ್ರತಾಪದ ಸಾರ್ವಭೌಮನ ಸ್ವಪ್ನ
ಬಡಿವಂತೆ ಇರುಳಲ್ಲಿ
ಗಜರುವಂತಿದ್ದವು ರಿಪುಗಣದೆದೆಯನು
ಬನವಸೆ ಮನೆಯಲ್ಲಿ.
ಬಸದಿ ದೇಗುಲಗಳ ಹೊಸರಚನೆಗಳಾಗಿ
ರಿಸಿಮುನಿಗಳು ಬಂದು
ವಸತಿನಿಂದರು ಪುಣ್ಯಾರಣ್ಯ ವಲಯದಲ್ಲಿ
ಮಲೆನಾಡ ಗಿಳಿ ತಂದು
ರಸಫಲಗಳನರ್ಪಿಸುತ್ತಿರೆ ಯೋಗಿಗ–
ಳುಪವಾಸ ತರಿಸಂದು
ದಶದಶಕಕ್ಕೆ ಹೆಚ್ಚಾಯಿತು ಪಾವಿತ್ರ್ಯ
ಬೆಸಲೆಯಾದುದೊ ಎಂದು
ಅರಮನೆಯುದ್ಯಾನಕಿಳಿದು ಬಂದವು ಬಣ್ಣ–
ದೆರಕೆಯ ನವಿಲೋಳಿ
ಗರಗರ ಕುಣಿವುದನನುಕರಿಸಿದವಲ್ಲಿ
ಮಳೆಗಾಲ ಮೇಘಾಳಿ
ಕೊರಳ ಕೊಳಲ ಬಾರಿಸಿದ ಕೋಗಿಲೆಯ ತಪಃ
ಫಲವಾಯಿತಹ ಮೂರ್ತ
ಸುರಿದು ಹರಿದು ಹರಹಿದ ಹಸಿರಾಯಿತು
ಮಧುಲಿಂಗ ಪೂಜಾರ್ಥ
ನಂದಿವಾಹನ ನಟರಾಜ ವೇಷಗಳಿಂದ
ರಂಗಮಂಟಪದಲ್ಲಿ
ಬಂಧುರಗಾತ್ರದ ನಟಗಣ ಕುಣಿಯಿತು
ಶಿವರಾತ್ರಿಯಿರುಳಲ್ಲಿ
ಮಂದಿ ಮಾರ್ಬಲಗಳ ಮೆರವಣಿಗೆಯ ಕಂಡು
ಸಗ್ಗದಾಸೆಯ ಬಿಟ್ಟು

ಎಂದಿತು ಮಾಯೂರ ಕುಂತಳ ಸುಖಸಾರ
ಹೊರನಾಡು ಬರಿಹೊಟ್ಟು
ಕುಂತಳಪಾಶಕೆ ಹೆಸರಾದ ಕುವರಿಯ–
ರಂಥಿಂಥವರು ಸಾಗೆ
ನಿಂತು ನೋಡರು ಪರಪುರುಷರೆಂದವರನು
ಕೊಂತಣಪುರ ವಾಘೆ
ಬಂತು ಕನ್ನಡಕುಲವೀರನ ಕೈಯಲ್ಲಿ
ಎಂದಾಗ ತಲೆಯೆತ್ತಿ
ಹಂತಿ ಹಂತಿಯೊಳೊಗೆ ದಕ್ಷತೆಗಳ ಹಾಡಿ
ನಲಿಸುತ್ತಿದ್ದರು ಸುತ್ತಿ
ಕರಭಾರದಲಿ ಪ್ರಜೆ ಮರುಗನು ದುರ್ಧರ
ತಲೆಭಾರ ಹೆಚ್ಚಾಗಿ
ಶರಣಾಗತರ ರಕ್ಷಿಸದ ನಾಗರಿಕನಿಲ್ಲ
ದುರಿತಕ್ಕೆ ಪೆಚ್ಚಾಗಿ
ಪರಿಣಯವೇ ಇಲ್ಲ ನಾಡ ಸೇವಿಸದಿಹ
ಬರಡುಗೈಗುವರಂಗೆ
ಕರೆದರೋ ಎನ್ನಳು ಬರಿಹೊಟ್ಟೆ ಹೊರಕರು
ಕುಂತಳ ರಸಗಂಗೆ

೪

ಸೂ: ಮಯೂರ ಶರ್ಮನು ವರ್ಮನಾಗಿ ಕಂಗವರ್ಮನೆಂಬ ಮಗನನ್ನು ಪಡೆದ ಕೆಲಕಾಲದ ಅನಂತರ ಕೀರ್ತಿಶೇಷನಾದನು. ಕೌಮಾರವನ್ನು ಮುಟ್ಟಿದ ಕಂಗವರ್ಮನು ದಂಗೆಯೆದ್ದ ಸಾಮಂತರನ್ನು ಬಗ್ಗು ಬಡಿದು ೩೩೦ ರಿಂದ ೩೭೦ರ ವರೆಗೆ ಜನಪ್ರಿಯವಾಗಿ ರಾಜ್ಯಭಾರವನ್ನು ಮಾಡಿದನು.

ಕಂಗನೆಂದನು ಶಿವಸ್ಕಂದ ಕದಂಬನಿಗೆ
ಮಂಗಲವೇಳೆಯೊಳೊಗೆದಾತ್ಮಬಿಂಬನಿಗೆ
ರಂಗವಾದಾನು ಪ್ರಜಾನೇತ್ರ ನರ್ತನದ
ಅಂಗಳದಲ್ಲಾಡುತಿರಲೆಂದು ದೊರೆಜನದ
ಪಟ್ಟಣ ಹಳ್ಳಿಗಳಲಿ ಹಂಚಿದರು ಸಕ್ಕರೆ
ಮುಟ್ಟಿತು ಕಂಡವರಿಗೆ ಕಂಗ ಮುಗುಳ್ನಕ್ಕರೆ
ದಿಟ್ಟಿ ತಾಗದಹಾಗೆ ಬೊಟ್ಟಿಟ್ಟರಾಚೆಲ್ವಂಗೆ

ಸೃಷ್ಟಿಯೆ ಹೊಸ ಚಿಗುರೊಯ್ದಿತು ನವಮಾಲ್ಯಗೆ
ಅಂಗಾರಕನು ಅನುಕೂಲನಾಗಿಲ್ಲವೆಂದು
ಬಂಗಾರಬಟ್ಟಲ ದಾನಮಾಡಿದರು ನಿಂದು
ಅಂಗನೆಯರು ರಾಣೀವಾಸದ ಹೊಸ್ತಿಲಲಿ
ಮಂಗಳ ಹಾಡಿದರುದಯಾಸ್ತ ಹೊತ್ತಿನಲಿ
ಕಾಶೀಗಂಗೆಯ ತಂದು ಅಭಿಷೇಕ ಮಾಡಿದರು
ಈಶಲಿಂಗಕೆ ಪುರೋಹಿತರುದ್ರ ಹೇಳಿದರು
ಮಾಸದ ಹೊಸಬಟ್ಟೆ ಬಡವರಿಗೊಲಿದಿತ್ತರು
ಕಾಸಿನ ತಿಮ್ಮಗೆ ಕಾಣಿಕೆಯನು ತೆತ್ತರು
ಕನ್ನಡದಂಕುರ ಕಳಕಳಿಸಲಿ ಎಂದರು
ಚೆನ್ನಾಗಿ ಜಾತಕರ್ಮವ ಮಾಡಿ ಜ್ಯೋತಿಷ್ಕರು
ಸನ್ನುತ ಯತಿತತಿ ಮಂತ್ರರಕ್ಷೆಯನಿತ್ತವು
ಉನ್ನತ ಕರಿಗಳು ಘೀಳಿಟ್ಟು ಜಯವೆಂದವು
ಚಾಪವೇದವ ವೀರಶರ್ಮರಿಂದಲೆ ಕಲಿತ
ಭೂಪಾಲಸುತ ಹೊಗಳಿಕೆಯಿಂದ ಮೈಮರೆತ
ಶ್ವಾಪದಗಳ ಬೇಟೆಯಲಿ ಹೆಸರನುಪಡೆದ
ಗೋಪಾಲ ಕೃಷ್ಣನ ರೀತಿಯೊಳೇ ನಡೆದ
ಮುದ್ದಾದನೂರಿಗೆ ಮುದ್ದಾದನವ ಕೇರಿಗೆ
ಮುದ್ದಾದ ಕುಂತಳ ಜನನಿಯರೆಲ್ಲರಿಗಳು
ಗದ್ಯವನಾಡಿದರವನದು ಪದ್ಯವಾಯ್ತು
ಹೃದ್ಯತೆಯವನೊಡಹುಟ್ಟಾಗಿ ಮೊಗವೇರಿತು
ಕಣ್ಮಾತು ತುಟಿಮಾತು ಕಿವಿಮಾತು ಮೂಗುಮಾತು
ಬೆನ್ನ ಸೂಕ್ಷ್ಮದಮಾತು ತಲೆಮಾತು ಕೈಯಮಾತು
ಎನ್ನುವ ಸಪ್ತವಾಣಿಗಳಿಂದ ಯುವತಿಯರು
ಪನ್ನತಿಕೆಯ ಯುವರಾಜನ ಹೊಗಳಿದರು
ಕೋಲ್ಮಿಂಚು ಕುಡಿಮಿಂಚು ಹೂಮಿಂಚು ಹೊಡೆಯಿತಮ್ಮ
ಬಾಳದಿನೇಶನ ಮುಖ ಬಂದು ಹೋಯಿತಮ್ಮ
ನೀನೋಡಲಿಲ್ಲ ನಿರರ್ಥ ನಿನ್ನಕ್ಷಿಗಳು
ನಾನೇನ ಹೇಳಲಿ ಎನೆ ಪ್ರೇಮ ಪಕ್ಷಿಗಳು
ಪ್ರಾಯಕ್ಕೆ ಬರುವಾಗ ಪೆರೆಯಂತೆ ಪೂರ್ಣಿಮೆಯ
ಮಾಯವ ಮೈತುಂಬಿಕೊಂಡ ಮದ್ದಾನೆಯ

ಶ್ರೀಯರಸನಮಿತ್ರನೂರಸೇರಿದನು ತಂದೆ
ಹಾಯೆಂದು ಮರುಗಿದ ನಿಲ್ ನಾನೂ ಜೊತೆಗೆ ಬಂದೆ
ಸಂತವಿಟ್ಟರು ತಾಯಿ ಮಗಕೇಳದಳಲಿದನು
ಸಂತೆಯಾಯಿತು ಜನರದು ದುಃಖದೀನರನು
ಸಂತವಿಸಲು ನಿಂತ ಮೂರುತಿಂಗಳವರೆಗೆ
ಚಿಂತೆಯ ದನಿಶ್ರುತಿಗೊಡೆ ಕಡಲಿನ ಕರೆಗೆ
ಕನ್ನಡಗಣ್ಣಿಂದ ಹೊರಬಿದ್ದ ಕರುಣವ ಕಂಗ
ಮನ್ನಿಸಿ ಗದ್ದುಗೆಯೇರಿದ ನಿತ್ಯ ಸತ್ಸಂಗ
ಗಣ್ಯಸಾಮಂತರ ಕರೆಸಿ ಕರ್ತವ್ಯಗಳನ್ನು
ವರ್ಣಿಸಿ ಹೇಳಿದ "ಮಂತ್ರಿಮಹೊದಯರಿನ್ನು
ಪಲ್ಲವ ಪೋರರ ಬಗೆಗೆ ತಾಳಿರಿ ಎಚ್ಚರ
ಅಲ್ಲದೆ ಕ್ಷತ್ರಪ ಹೊಂಚುತಲಿರಲುತ್ತರ
ಖಿಲ್ಲ ಗುಪ್ತರ ಬಲಿಯಿಸುತಿದೆ ವಾಕಾಟಕ
ಮಲ್ಲ ಮೈಮರೆತಿಹ ಕೊಬ್ಬಿ ಬಾರದೆಕಂಟಕ"

"ಅಷ್ಟಾದಶಾಶ್ವಮೇಧವ ಮಾಡಿರಲು ಜನಕ
ಮುಟ್ಟಲೀ ನೆಲವನು ಬಹನಾವ ಬಡ ಶುನಕ
ಇಟ್ಟರೆ ಕಾಲನು ಕಡಿದೊಗೆಯಲು ನೇಮಕ
ಕೊಟ್ಟೆನೆ"ಂದನು ಮಂತ್ರಿ ಹರದೇವ ಭಟ್ಟಾರಕ

ದಂಗೆಯೆದ್ದಾಭೀರರನು ತಂದ ತಹಬಂದಿಗೆ
ಸಂಗರಕಿಳಿದ ಕೇಕಯರನಿಕ್ಕಿದ ಬಂದಿಗೆ
ಕೊಂಗಣದಿಂದೋಡಿ ಹೋಗಿದ್ದ ತಳಕಾಡಿಗೆ
ಕೊಂಗುಣಿವರ್ಮ ತಾಜ್ಯವ ಕಟ್ಟಿ ಈ ನಾಡಿಗೆ
ತಂದಿರೆ ತನ್ನಾನೆ ಸೇನೆಯ ಗಡಿಯೊಳಗೆ
ಹಿಂದೋಡಿಸಲು ಕಂಗ ನಡೆದ ನಿಮಿಷದೊಳಗೆ
ಮಂದಿ ಮಾರ್ಬಲ ಸರದಾರ ಸುಭಟರೊಡನೆ
ಇಂದ್ರಾಯುಧವ ಹಿಡಿದರಿಸೋಲದುಳಿಯುವನೆ?
ಹೋಳಾಗಿ ಹಾಳಾಗಿ ಧೂಳಾಗಿ ಗಡಿಯಾಚೆಗೆ
ದಾಳಿಗಾರರು ಮರಳಿದರೆನೆ ತುಳಿಲಾಳಿಗೆ
ಹೇಳಲಾರದ ಹಿಗ್ಗು ಕುಂತಳಪುದೊಳಗೆ
ಮಾಳಿಗೆಗಳು ಬೆಳಗಿದವು ದೀಪಗಳೊಸಗೆ

ಕಡಿದ ತೋಳುಗಳನ್ನು ಖಡ್ಗಸಮೇತ ತಂದು
ಒಡೆದ ತಲೆಗಳ ಶಿರಸ್ತ್ರಾಣಗಳನು ತಂದು
ಮಡಿದರಿಗಳ ದಂಡನಾಯಕರನ್ನೆಳೆದು
ಅಡಿಗೆ ಕೆಡಹಿದರು ಭಟರು ಕಂಗನ ಕರೆದು

ಅರಿಬಲಘಾತಕ ಶರವೃಷ್ಟಿಪಾತಕ ಕಂಗ
ಕರಿಘಟೆಗಳಡಹಿದ ರಣಕಣಶೂರಸಿಂಗ
ಶರಜನ್ಮನವತಾರ ಪರಮಾತ್ಮ ಪರಿಪೂರಣಾಂಗ
ಜಯ ಜಯ ಜಯ ಜಯ ಎಂದಿತು ಕನ್ನಡ ಸಂಘ
ಕದಲಾರತಿಗಳಿಂದ ಹೊದಲಕ್ಷತೆಗಳಿಂದ ಪುರವ
ಮುದದಿಂದ ಪೊದಳಿ ಹೊಗುತ್ತಿರೆ ಪುರಭೇರೀರವವ
ಎದುರಿಸಿತಾ ಚತುರಂಗ ಬಲದ ಕಿವಿ ಚದುರ
ಕೆದರಿಕಲಹಕಾಳಕಳಿಸಿದ್ದ ವಾಕಾಟಭಿದುರ
'ಹೊಡೆಭೇರಿ ಊದುತುತ್ತೂರಿ ಕಹಳೆ ಕೊಂಬು ತರಿಸು
ಹಿಡಿದೆತ್ತಿನುಡಿಸು ಪೃಥ್ವೀಸೇನನಿಗೆ ಹೇಳಿಕಳಿಸು–
ಘಡನೃಪ ಮಣಿವವನಲ್ಲ ಕನ್ನಡ ದೊರೆ ಮುನಿಸು
ಸುಡುವುದು ನಿನ್ನ ಸೇನೆಯನೆಂ'ದು ಗಜರಿದ ಬಿರುಸು
ಅಡಿಯಿಂದ ಮುಡಿವರೆಗುರಿಯಾಗಿ ಸುಟ್ಟಿತು; ಅರಿಯ
ಪಡ ಚಂದ್ರಗುಪ್ತನ ನೆರವಿಂದ ಗಡಿದಾಟಿ ಹರೆಯ
ಅಡಿಯ ತಪ್ಪಿಡುವಂತೆ ಹೊಗುತಿರೆ ಒಳನಾಡಿನೆದೆಯ
ಕಡಿವೆನೆಂದೆದುರಾದ ಕಂಗ ಕುಂತಳದೇಶದೊಡೆಯ
ಮುಂಗಾರು ಮಳೆಯಂತೆ ಸುರಿದಂಬುಗಳು ಹೊಗಲೆದೆಯ
ಕಂಗಾಲಾದರು ರಿಪುಯೋಧಾಗ್ರಗಣ್ಯರು ಸದಯ
ಕಂಗ ಬಿಡುವಕೊಟ್ಟ ನಿಮಿಷಕ್ಕೈದುಗಳನು ಕೊಳಲು
ಮಂಗಳವಾಯ್ತುವನಿಗೆ ವಿಜಯದ ಮಾಲೆ ಬರಲು
ಪೃಥಿವಿಯ ನಾಡೊಳಹೊಕ್ಕು ದಾಳಿಯ ಮಾಡುತಿರಲು
ಶತಮನ್ಯುಗಳು ದಸ್ಯುಗಳ ಕಡಿದೆಸೆಯುತ್ತಲಿರಲು
ಹತನಾದ ಕಂಗನೆಂದರಿಗಣ ಕೂಗಿದ್ದ ಕೇಳಿ
ಮೃತಪಿತತರ್ಪಣ ಕೊಡುತ್ತಿದ್ದ ಕಂಗನು ಕೆರಳಿ

"ಹೊಯ್ ಹಾಕು ಹೊಡೆ ಬಂದೆ ಬಿಡಬೇಡ" ಎಂದೆದ್ದು ಬಂದು
ಹಯವೇರಿ ಖಡ್ಗವಝುಳಪಿಸಿ ಪಡೆಮಧ್ಯನಿಂದು
ಗೆಲುವುದರಲಿ ಕಂಗ ಮೇಲೇರಿ ಬರುತಿದ್ದ ಪಡೆಯ
ಕೊಲುವುದರಲಿ ಜಿಗಿದನಹಾ ಬಂದನು ಬಿಳಿಗೊಡೆಯ
ಹಿಡಿದನು ಪೃಥಿವಿ ಕಂಗಾಧಿನಾಥನ ಕೈಯ ತಡೆದು
ಬಿಡುವೆ ನಿಮ್ಮವರ ರಾಜ್ಯಾಂಶ ಕೊಟ್ಟರೆ ನೋಡು ಮಡಿದು
ಕೆಡುವುದೇತಕೆ ನಿನ್ನ ಪಡೆವಳರೆನೆದಯೆವಡೆದು
ಒಡಬಟ್ಟ ಪಡೆಗೂಡಿ ಹಿಂದಿರುಗಿದ ನೀತಿಹಿಡಿದು
ಬನವಸೆ ಮೆಚ್ಚಿತು ಕರುಣಿಗಳರಸನನಂದು
ಉಣಲಿಲ್ಲ ಕಂಗ ರಾಜ್ಯಾಂಶವ ತೆತ್ತೆತಾನೆಂದು
ದಿನವಿಡಿ ದುರಿ ತಾಪಹಾರಕ ಜಪಗೈದುನೇತ
ಗುಣುಗುಡುತಿರೆ ಎಲ್ಲಿಂದಲೊ ಬಂದ ಪರನೃಪದೂತ

೫

ಸೂ : ಪಲ್ಲವರ ದೊರೆ ಬುದ್ಧ್ಯಂಕುರವರ್ಮನ ಮಗಳನ್ನು ಕಂಗವರ್ಮ ಮದುವೆಯಾದನು. ಕಂಚಿಯಲ್ಲಿ ಕನ್ನಡ ಮೊಳಗುವಂತೆ ವಿವಾಹಮಹೋತ್ಸವ ಜರುಗಿತು.

ದ್ವಾರಪಾಲಕ ಕೇಳಿದನು 'ಬಂದೆಯೆಂದು ಎಲ್ಲಿಂದ?'
'ನೂರು ಯೋಜನದಾಚೆಯಿಂದ?'
'ಯಾರು ಅಟ್ಟಿಗರಯ್ಯ ನಿನ್ನನಲ್ಲಿಂದ ಏತಕ್ಕೆ?
'ನಮ್ಮೊಡೆಯರ ಠಾಣ್ಯದಿಂದ–
ಹೆಣ್ಣುಕೊಡುವರಂತೆ ತಮ್ಮೊಡೆಯರಿಗವರೀಗ
ಆಗಬಹುದೋ ಹೇಗೆ ಎಂದು
ಕೇಳಿ ಬಾ ಹಾಗಾದರಿಲ್ಲೇ ಇರುತ್ತೇನೆ ನಾನು'
'ಯಾರ ಮಗಳೋ ಹೇಳು ನಿಂದು'
'ಇಷ್ಟೂಗೊತ್ತಿಲ್ಲವೇ ಪಲ್ಲವಪ್ಪವದಿರ ಮಗಳು
ಬುದ್ಧಶ್ರೀ ಅಮ್ಮ ಅವರ್ಹೆಸರು
ಕೊಟ್ಟರ್‍ಯಾಶಕೆ ನಿನಗೊಡೆಯರು ಸಂಬಳವಿಲ್ಲಿ
ಮುಟ್ಠಾಳ ನಿಲ್ಲದಿರೆದುರು'
'ಎಲೆಲೆ ಎಷ್ಟುದ್ದ ನಾಲಿಗೆ ಹರಿ ಬಿಡುವೆ ನೀಮಂಕೆ'
'ಮಾಡುವೆ ಎಂಥ ಆತಂಕ?'

'ಹಲಗೆಯ ಹಾಕಿ ಮೆಟ್ಟಿಸಿ ಬಿಡುವೆನು ಹರಟಿದರೆ'
'ಬಲು ಬಿಂಕದೋರುವೆಯಲ್ಲ!'
'ನಿಲು ಬಿಗಿಯುವೆ ಹಗ್ಗದಿಂದ ಕಂಬಕೆ ಇಲ್ಲೇ ನಿನ್ನ'
'ಹಲುಮುರಿದೊಗೆವೆ ನಾಮಲ್ಲ!'
ಎನುತಿರ ಕಂಗ ಸಮ್ರಾಜನೆದುರು ಬಂದನಾಗ
ತನು ಬೆವರಿದುದಾಳುಗಳಿಗೆ
ಅನಿಮಿಷನಾಗಿ ನೋಡಿದ ಕುಂತಳೇಶ್ವರನವರ
ದನಿದೆಗೆದನು 'ಏನೀಜಗಳ?'
'ಒಡೆಯ ಕೇಳೀಮಂಕ ಹಲುಮುರಿಯುವನಂತೆ ನನ್ನ'
'ನೀನವಗೇನನೆಸಗಿದೆ?'
'ಒಳಗೆ ನುಗ್ಗಲು ತೊಡಗಿದ. ನಾನು ಬಿಡೆನೆಂದೆ ಒಡೆಯ'
'ಇವನಾವ ರಾಜನ ದೂತ?'
'ನೂರುಯೋಜನ ದಾಚೆಯೊಡೆಯನ ಆಳಿವನಂತೆ'
'ಯಾರು ನಿನ್ನೊಡೆಯ ಬಾಯ್ಬಿಚ್ಚು'
'ಸ್ವಾಮಿ ನಮಸ್ಕಾರ ಬುದ್ಧ್ಯಂಕುರಪ್ಪಂದಿರಿಂದ;
'ಏನೆಂದರವರು ಪೇಳ್ ಮೊದಲು'
'ಭಾವಂದಿರೇ ಚೆನ್ನಾಗಿರುವಿರ? ನಾವೆಲ್ಲ ಚೆನ್ನು,
ಅತ್ತೆಯವರಿಗೆನ್ನ ನಮನ.
ಬುದ್ಧಶ್ರೀ ದೊಡ್ಡವಳಾಗಿದ್ದಾಳೆಂಬುದು ಗೊತ್ತೇ?
ಹೃದ್ಯ ಸಂಗೀತ ನೃತ್ಯಗಳ
ಮುದ್ದಾಗಿ ತಾನು ಪ್ರದರ್ಶಿಸಬಲ್ಲಳು ಮತ್ತೆ
ಸದ್ಯ ನೋಡಿರಿ ಪತ್ರ ಅವಳ–
'ಪ್ರಿಯತಮ ಕಂಗ ನಾನನುದಿನನೆನೆವೆನು ನಿನ್ನ
ದಯೆ ಶೌರ್ಯಗಳ ಮನದನ್ನ
ಜಯಲಕ್ಷ್ಮೀಪತಿ ಪತಿಯಾಗಿ ಸೌಹಾರ್ದಸಂಪನ್ನ
'ಬಯಕೆಯ ನಡೆಸಿಕೊಡೆನ್ನ'
ಕೈಗೆತ್ತಿಕೊಂಡು ಪತ್ರವನೋಡಿನಕ್ಕ ಮಾರಾಯ
ಬಾಗಿ ಕೊಡಲು ದೂತ ಹರಸಿ

ಹೋಗಿ ಕೊಡಿದನಬ್ಬೆಗೆಂದು ಮೆಚ್ಚಿತ್ತ ಕೈತುಂಬ
      ರಾಗವೇನನೊ ಗುಣುಗುಣಿಸಿ
ಬುದ್ಧ್ಯಂಕುರನ ಅಕ್ಕ ಸೊಸೆಯ ಪತ್ರವ ನೋಡಿನಕ್ಕು
      ಎದ್ದು ಕೈತುಂಬ ಹೊನ್ನಿತ್ತು
ಮುದ್ದು ಕಂಗನೆ ನಿನಗೊಪ್ಪಿಗೆಯಾಯ್ತಲ್ಲ? ಎಂದು
      ಗುದ್ದಿ ಕೇಳಿದಳು ಕೈಯಾತು

ಗೋಣನಲ್ಲಾಡಿಸಿ ಸೂಚಿಸಿದನು ತನ್ನೊಪ್ಪಿಗೆಯ
ಶ್ರೀನಿಕೇತನ ಕಂಗನಾಥ
ಜಾಣ ಮಂತ್ರಿಗಳನುಕೂಲಸಂದೇಶವ ಕಳಿಸೆ
ಮಾನಮರ್ಯಾದೆಯ ಸಹಿತ
ರಾವುತ ಮಾವುತ ಮೇಣೆ ಮಂಚಲುಗಳ ಸಾಲು
ಕಾವಲುದಳಗಳ ಮುಂದೆ
ದೀವಟಿಗೆಗಳ ಹಂತಿಯಲಿ ಸಾಗುತ್ತಿರೆ ಡೋಲು
ದೇವತೆಗಳ ಪ್ರಭೆ ಹಿಂದೆ
ಕಂಚಿಯ ನಗರ ಕೌಮುದಿಯಾಗಿ ಬೆಳಗಿತು ರಾತ್ರಿ
ಪಂಚಬಾಣೋತ್ಸವದಲ್ಲಿ
ಸಂಚಿತ ಪುಣ್ಯ ಮೈವೆತ್ತು ಮೆರವಣಿಗೆಯಾಗೆ
ಚಂಚಲಾಕ್ಷಿಯರ ಗೀತದಲಿ
ಕವಿಗೋಷ್ಠಿ ಯಕ್ಷಗಾನಪ್ರದರ್ಶನಗಳ ನೋಡಿ
ಬುವಿಮೋಹಿಸುವ ಕಲಾಕೃತಿಯ
ಸವಿದರು ಕಂಚಿಯ ನಾಗರಿಕರು ಬನವಸೆಯ
ದಿವಿಜಮಾನದಪರಿಣತಿಯ
ಹಿಂದಿರುಗಿತು ರಾಜಪುತ್ರಿಯೊಡನೆ ಆ ದಿಬ್ಬಣವು
ಚೆಂದವ ಸಿಡಿಮದ್ದಸುಡುತ
ಮುಂದಾನೆ ಧೇನು ಮಂಗಲವಾದ್ಯ ತೂರ್ಯಘೋಷಗಳು
ಸ್ಯಂದನಗಳ ಸಾಲುಸಹಿತ
ಬನವಾಸಿಬಾವುಟ ಬಾನೆತ್ತರಕ್ಕೇರಿದಾಗ
ಜನಗಣ ಕಡಲಲೆಯಂತೆ

ಎಣಿಕೆಯಿಲ್ಲದ ಸಂಖ್ಯೆಯಿಂದ ಸ್ವಾಗತಿಸಿತು ಬೇಗ
ನವದಂಪತಿಗಳನೋರಂತೆ
ಉತ್ಸವೋತ್ಸವಗಳ ಕಂಡಿತ್ತು ಕನ್ನಡಕುಲ ನಿತ್ಯ
ಸ್ವಸ್ತಿಪಾಠಗಳ ಕೇಳುತ್ತ
ಉತ್ತಿಕ್ತರಿಪುಗಳ ಕಾದಿಗೆದ್ದೆಯ್ದುಹ ದೊರೆಯ
ಉತ್ಸಾಹವನು ವರ್ಧಿಸುತ್ತ

೬

ಸೂ: ಮಕ್ಕಳಿಲ್ಲದ ಕಂಗವರ್ಮ ತೀರ್ಥಯಾತ್ರೆ ಮಾಡಿದ. ಪುತ್ರವಂತ ನಾದ

ಕಾದಂಬ ಕುಂತಳೆ ವೈಭವವ
ಹೋದ ಬಂದವರಿಂದ ಕೇಳಿದವ
ಜಾದುವಿಗೊಳಗಾಗಿ ಪುರಸಿರಿಯ
ಎಯ್ದು ಹಿಡಿದು ತನ್ನೂರಿನ ದಾರಿಯ
ತುಟ್ಟಿಯಾದುದು ದುಷ್ಟಕೃತ್ಯವಷ್ಟೆ
ಉಟ್ಟುಣ್ಣದವನಪರಾಧಿಯಷ್ಟೆ
ಪಟ್ಟೆಯಲ್ಲದ ಬಟ್ಟೆ ಮೀಯಲಷ್ಟೆ
ಕಟ್ಟೆಯಲ್ಲದ ಕೆರೆ ಕಾಡೊಳಷ್ಟೆ
ಇಂತಿರೆ ಬಹುಕಾಲ ಕಳೆಯಿತಲಾ
ಸಂತತಿಯಾಗದೆ ಹೋಯಿತಲಾ
ಅಂತಾಗಲರಮನೆ ಚಿಂತಿಸಿತು
ಕಂತುಹರನ ನೆರೆ ಪ್ರಾರ್ಥಿಸಿತು
ತೀರ್ಥಯಾತ್ರೆಗೆ ಅಣಿಯಾದ ದೊರೆ
ಶ್ರೋತ್ರಿಯರೊಡನೆ ವಸಂತ ಬರೆ
ವೇತ್ರವತಿಯರೋಳಿ ಮುನ್ನಡೆಯೆ
ಕ್ಷೇತ್ರ ಪಂಡಿತ ಪುಣ್ಯ ಕಂಡಿವಡೆಯೆ
ತಾಳಗುಂದದ ಪ್ರಣವೇಶ್ವರನ
ಕಾಲಿಗೆ ಬಿದ್ದನು ಶುಭಕರನ
ಹಾಲೆರೆದಾ ಗೋಕರ್ಣೇಶ್ವರಗೆ
ಆಳಿದ ಭಕ್ತಿಯ ಕಡಲೊಳಗೆ

ಕೊಲ್ಲಯ್ಯ ಚೆಲ್ಲಯ್ಯ ಬರೆಲಂಘಿಸಿ
ಹೊಲ್ಲಮೆಯನು ಕಳೆದುದ್ಧರಿಸಿ
ಕೊಲ್ಲಾಪುರೀಯರ ಪಾಲಿಸಿದ
ಚೆಲ್ವ ಮಾಲಕ್ಷ್ಮಿಗೆ ತಲೆಬಾಗಿದ
ಅಹಿಕುಲಪತಿ ಸುಬ್ರಹ್ಮಣ್ಯನಿಗೆ
ನಮಿಸಿದ ದೊರೆ ಮಂಜುನಾಥನಿಗೆ
ಬಹುಸೋಪಾನಗಳೇರಿ ಗುತ್ತಿಯೂರ
ಮಹದೇವಿಗುಧೋ ಎಂದ ಭಕ್ತಿಪರ
ಕುಲದೇವ ಬಲದೇವ ಮಧುವಲ್ಲಭ
ಸಲಿಸಯ್ಯ ಬಯಕೆಯನೆನೆ ದುರ್ಲಭ
ಬಲಗಡೆ ಬಿತ್ತು ಪ್ರಸಾದಸುಮ
ಒಲವಿಗೆ ಒಲಿವುದು ದೇವಕ್ರಮ
ಮಾಸಗಳುರುಳಲು ಮಾಸತಿಗೆ
ಲೇಸಿಗೆ ಕನಸು ತೋರಿತು ಜೊತೆಗೆ
ಬೇಸಿಗೆ ಮುಗಿವಷ್ಟರಲ್ಲಿ ನಗೆ
ಸೂಸುವ ಮಗನೊಗೆದನು ದೊರೆಗೆ
ದೇಗುಲಗಳ ಗಂಟೆ ದೀರ್ಘಿಸಿತು
ಬಾಗಿನಗಳ ದಾನ ಮಾರ್ಗಿಸಿತು
ಜೋಗುಳಗಳ ಗೀತೆ ಜೋರಾಯಿತು
ಬಾಗಳ ಸರ ತೊಟ್ಟಿಲನ್ನೇರಿತು

೭

ಸೂ: ಕಂಗವರ್ಮ ಅಮರನಾದ; ರಾಜಮಾತೆ ರಾಜ್ಯಭಾರ ಮಾಡಿದಳು. ಕುಮಾರ ಭಗೀರಥ ವಾಕಾಟಕರೊಡನೆ ಕಾದಿ ತನ್ನ ಶೌರ್ಯವನ್ನು ಪ್ರಕಟಿಸಿ ೩೭೦ ರಿಂದ ೪೦೦ರ ವರೆಗೆ ವೈಭವದಿಂದ ಆಳಿದ.

ಬಂದಿರೆ ಮಗನಿಹಕೆ ಕಾಯಿಲೆಯಿಂದ
ಸಂದ ತಂದೆಯು ಪರಕೆ
ಮಂದಿ ಗೋಳಿಟ್ಟುದು ಮನೆಮಠಗಳ ಮುಚ್ಚಿ
ನಂದಾದೀಪದ ಹರಕೆ
ಸಲ್ಲಿಸಿ ದೇವರಿಗೆ! ಸಾವಿರ ಜನ

ಮಲ್ಲಿಗೆಗಳ ದೊರೆಗೆ।
ತಲ್ಲಣಿಸಿದ ರಾಜಮಾತೆಯ ಸಂತೈಸಿ
ವಲ್ಲಿ ಹಾಸಿತು ಧರೆಗೆ॥
ಚಂದನಗಳ ಕಟ್ಟಿಗೇರಾಶಿಗಳಲ್ಲಿ
ತಂದ ಕಪ್ಪುರಗಿರಿಯ
ನಂದದುರಿಸಿ ಪಾವನಿಸಿದರು ಕಾಯವ
ಸ್ಕಂದಶಕ್ತಿಯ ಮರಿಯ॥
ಕೊಡಹಿ ದುಗುಡ ಭಾರವ। ರಾಜಶ್ರೀಯ
ತೊಡೆಯೊಳಿರಿಸಿ ಗೌರವ।
ಕೆಡದಂತೆ ಪಾಲಿಸುತಿರೆ ರಾಜಮಾತೆ ತಾ
ಗುಡುಗಿತರಿಜ್ಯಾರವ॥
ಸಚಿವಸಾಮಂತಾಧಿಪ। ಸಾಹಸಮಲ್ಲ
ರಚಿಸಿದ ಬಲ ನಿಸ್ತುಲ।
ಇಚುಯಶ ಮೂಲವೊಣಗಿತರಿಗಳಿಗಾಗ
ವಚನವಾಯಿತು ವಿಹ್ವಲ॥
ವಾಕಾಟವ್ಯಾಕರಣ। ತಪ್ಪಾಯಿತು
ಭೂಕಂಟಕತೆ ಹೋಯಿತು।
ಶ್ರೀಕುಂತಳೇಶ ಭಗೀರಥನನು ಕಂಡು
ಲೋಕಕಚ್ಚರಿಯಾಯಿತು॥
ರುದ್ರಸೇನನು ಕಾಣದೆ। ಕಾಳೆಗದಲ್ಲಿ
ಭದ್ರವ ಬಲ ಸಹಿತ।
ಎದ್ದೋಡಿದನು ಮಹಾರುದ್ರಾಭಿಬಾಲನ
ಅದ್ರಿಯೋಧರಿಗಂಜು॥
ಅಭಿಮನ್ಯು ಉದಯಿಸಿದ। ಕನ್ನಡ ಕೀರ್ತಿ
ನಭದಿ ನರ್ತಿಸಲೆತ್ತಿದ।
ಪ್ರಭು ವಿಕ್ರಮಾದಿತ್ಯನೆನಿಸಿ ಕದಂಬರ
ವಿಭವಸ್ತಂಭವ ಹತ್ತಿದ॥
ಕಳೆದಿದ್ದ ರಾಜ್ಯಾಂಶವ। ಧುರದಿಭೂಪ
ಗೆಲಿದ ಕನ್ನಡವಂಶವ
ಬೆಳಗಿದ ಧರ್ಮವಿಜಯಗಳನೇಕವ
ಗಳಿಸಿ ಪಡೆದ ಸಂಸ್ತವ॥

ಹದಿನಾರರೀ ಹುಡುಗ। ಹರಿಯಹಾಗೆ
ಚೆದುರನೆಂದರು ಗಿಡುಗ।
ಕದನದಿ ಹಗೆವರಯಶವ ಕೊಂಡೊಯ್ಯುವ
ಗದರಂಜಿಸುಗು ಗುಡುಗ।
ಅಕ್ರಮಿಗಳ ಬಂಧಿಸಿ। ಸೆರೆಯೊಳಿಟ್ಟು
ವಿಕ್ರಮಿಗಳ ಸೋಲಿಸಿ।
ಶಕ್ರನ ಕರೆದಶ್ವಮೇಧವ ಮಾಡಲು
ಪಕ್ರಮಿಸಿದ ಮೇಳಿಸಿ॥
ಘಾತಿಸಿದರಿಹಯವ। ಯೂಪಕೆಬಿಗಿ
ದೂತಿದಾಯಕ ದೇವರ।
ಆತುಮಕರ್ಪಿಸಿ ತನ್ನಶ್ವರತ್ನವ
ಘಾತಿಸನವನೀಶ್ವರ॥
ವೇದವೇತ್ತರ ಗೊಟ್ಟಿಯೆ। ಕರೆದು ದೀರ್ಘ
ವಾದವ ನಡೆಸಿ ತನ್ನ।
ಸಾಧುತ್ವವನ್ನು ಸಾಧಿಸಿದ ಭಗೀರಥ
ಆದ ರಾಜರ್ಷಿ ಮುನ್ನ॥
ಆಚಾರ್ಯ ಪ್ರಾಚಾರ್ಯರು। ದಿಗ್ದೇಶದ
ಆಚಾರ ಕೋವಿದರು।
ಈ ಚಂಡಪಂಡಿತನಾಸ್ಥಾನವನು ಸೇರಿ
ಯಾಚಿಸದವರಾದರು॥
ಕೊಡುಗೈಯ ದೊರೆಯೆನ್ನಿಸಿ।
ಕುಂತಳಪತಿ।
ಬಡವರ ದೈವವಾದ।
ಅಡವಿಕಿರಾತರ
ಪಡೆ ಭಕ್ತಿಯಿಂದೀತ
ಒಡೆಯನೆಂದಿತು ವನದ॥
ಗುಂಡುಗಳನ್ನೆತ್ತಿದ।
ಗಿರಿಯ ಹತ್ತಿ।
ಬಂಡೆಗಳನು ಜರಿದ।
ಗಂಡರ ಮೂಗುತಿ
ಎನಿಸಿ ಭಗೀರಥ

ದಂಡಿಸಿದನು ದುಷ್ಟರ
ವಾಕಾಟ ಬಾರದಾದ।
ಗಂಗರ ದೊರೆ।
ಬೇಕೆನ್ನದಾದ ರಣ।
ಆಕೆ ವಾಳನ ಕೆಣ
ಕಲು ಬಂದ ಗುಪ್ತರ
ನೂಕಿದ ಬಿಂಜದಾಚೆ
ಬಿತ್ತರಿಸಿದ ವಂಶದ।
ರಾಜ್ಯಾರ್ಥವ।
ಮುತ್ತುರತ್ನವ ಕೋಶದ।
ಉತ್ತಮ ಹಸ್ತ್ಯಶ್ವ
ವೃಷಭ ಕಪಿಲೆಗಳ
ಕೊತ್ತಳಿಗಳ ಸಾಕಿದ॥
ಶಸ್ತ್ರವಿದ್ಯಾಭ್ಯಾಸದ।
ಗರಡಿಗಳ
ಪತ್ತನಗಳಲಿ ಕಟ್ಟಿ।
ಹತ್ತೂರ ಬಿಲ್ಲೊವ
ಜರನೇಮಿಸಿದ ದೊರೆ
ಪತ್ತಿಗೆ ಬಿಜ್ಜೆ ಬಿಟ್ಟಿ॥
ಕಡಲೂರರೇವುಗಳು।
ಈ ರಾಜ್ಯದ
ಅಡಿಕೆ ಮೆಣಸುಗಳನು।
ಹಡಗುಗಳಿಂದ
ವಿದೇಶಗಳಿಗೆ ಅಟ್ಟಿ
ಪಡೆದವು ಹೊಂಗಳನು॥
ಇಂತು ವಾಣಿಜ್ಯದಲಿ।
ಮುನ್ನಡೆಯಿತು।
ಕುಂತಳದೇಶವಂದು।
ಪಂಥದಿವಣಿಜರು
ದೇಶವಿದೇಶಗ
ಳಂತವ ತಲುಪಿದರು॥

ತಂದರು ದೊರೆಗಳಿಗೆ।
ರತ್ನಂಗಳ।
ಹೊಂದೇರಲಂಕೃತಿಗೆ।
ಬಂಧುರಾಕಾರ ಭ।
ಗೀರಥ ಬರುತಿರೆ
ಚೆಂದನಾಚಿತುನೋಡಿರೇ॥
ನಾನಾ ದೇಶದ ರಾಜರು
ಕುವರಿಯರ।
ನಾಮೇಲು ತಾಮೇಲೆಂದು
ಸ್ವಾಮಿಗೆ ತಂದರು
ಮನವೊಪ್ಪದವದಿರ
ಶ್ರೀಮನೋಹರ ಬಿಟ್ಟನು॥
ಕೊನೆಗೆಸೇಂದ್ರಕಕುವರಿ
ಮೆಚ್ಚಿಸಿದಳು
ಘನಚಕ್ರವರ್ತಿಯನು।
ದಿನವ ನಿಶ್ಚಯಿಸಿ ಮಂ।
ಗಲವನಾರಂಭಿಸೆ
ಜನತಾಬ್ಧಿಯುಬ್ಬೇರಿತು॥
ಶಂಖದ ಕೊರಳೀಕೆಗೆ
ಸಿಂಹದ ಕಟಿ।
ಬಿಂಕದ ನಡೆ ಮೊಗದ।
ಪಂಕಜವನ್ನರ
ಳಿಸುವರ್ಕಕಾಂತಿಯ
ಸಂಕ್ರಮ ಎದೆಯೂರಿಗೆ॥
ಅಪ್ಪಟ ಕನ್ನಾಡಿನ।
ಕನ್ನಿಕೆ ಇವ
ಳೊಪ್ಪದ ತುರುಬುಗಳ।
ಕಪ್ಪ ಕೊಟ್ಟನು ಪ್ರತಿ
ಮಾಡಲುಜ್ಜುಗಿಸಿದ
ತಿಪ್ಪೋಜ ಶಿಲ್ಪಿಗಳ॥
ಷಟ್ಶಾಸ್ತ್ರವೋದಿರುವ

ಪಂಡಿತೆಯೀಕೆ
  ದಿಟ್ಟೆಕ್ಷಾತ್ರವ ತೋರುವ।
      ಪಟ್ಟನು ಬಲ್ಲಯ
          ಶೋಧರೆ ಎಂದೂರ
              ಭಟ್ಟರು ಹೊಗಳಿದರು॥
                  ಈಕೆಯೊಡನೆ ರಾಜ್ಯವ
ಪಾಲಿಸುತ್ತಿದ್ದ
  ಭೂಕಾಂತನೊಂದುದಿನ।
      ರಾಕಾನಿಶಾಕರ
          ರನ್ನು ಮೀರಿಸುವಂಥ
              ತೋಕವೆರಡ ಪಡೆದ॥
ತಿಳುಪೇನು ಹೊಳಪೇನಿದು
  ಈಯಮಳರ
      ಕಳೆಯಭ್ರ ಶುಭ್ರವಲಾ।
          ಎಳೆಯತನದೊಳೆ ದಿ
              ವ್ಯಾರ್ಥಸೂಚಕವಾಣಿ
ಮೊಳಗಿತೇನೆನಲು ಜನ।
  ರಘುಕಾಕುತ್‌ಸ್ಥರಜೋಡಿಗೆ
      ಪುರಂಧ್ರಿಯ
          ರೊಗುಮಿಗೆ ಮುಗ್ಧರಾಗಿ।
              ಬಗೆ ಬಗೆಯಡಿಗೆಗ
ಳನು ನಿತ್ಯ ತಂದಿಟ್ಟು
  ನಗಿಸಿಯಾಡಿಸುತ್ತಿದ್ದರು॥
      ಐದು ತುಂಬುವ ಮೊದಲೇ
          ವೇದದಮಾತ
              ನಾಯ್ದುಲಿಯುವ ಮಕ್ಕಳ
ಪಾದರಸದ ಬುದ್ಧಿ
  ಚಕಿತಗೊಳಿಸಿತೆಲ್ಲ
      ಮಾದರಿಯಾಚಾರ್ಯರ॥
          ಕೋಟಿದೀಪಾರಾಧನೆ
              ನಡೆಸಿಜನ

ರಾಟವಾಡುವವೀರರ।
ಮಾಟವನೋಡುತ್ತ
ಸಂಜೆಗಳೆಯುತಿದ್ದ
ತೋಟವಾಯ್ತಿಡಿ ನಗರ॥
ನಮ್ಮ ನಾಯಕರಿವರು
ಕನ್ನಾಡಿನ
ಹೆಮ್ಮೆಯ ಮಕುಟಗಳು।
ಚಿನ್ಮಯನಿವರಿಗಾ
ಯುಷ್ಯ ಹೆಚ್ಚಿಸಲೆಂದು
ಹೆಮ್ಮಕ್ಕಳಾಡಿದರು॥

೮

ಸೂ: ಭಗೀರಥ ಕುಮಾರರಾದ ರಘು–ಕಾಕುತ್‌ಸ್ಥರು ಪ್ರಬುದ್ಧಮಾನಕ್ಕೆ ಬಂದು ಅರಿಗಳನ್ನ ಅಡಗಿಸಿ, ರಾಜ್ಯವನ್ನು ವಿಸ್ತರಿಸಿ, ಮದುವೆಯಾಗಿ ಮಕ್ಕಳನ್ನು ಪಡೆದು, ಕನ್ನಡ ಸಂಸ್ಕೃತಿಯನ್ನು ಪೋಷಿಸುವ ಹಲವು ಕಾರ್ಯಗಳನ್ನು ಮಾಡಿದರು.

ತಂದೆಯ ಹಿಂದಶ್ವವೇರಿ ರಣ–
ಸಿಂಧುರರೀರ್ವರು ಬೇಟೆಗೆ ಸಾರಿ
ಬಂದಬ್ಬೆಗೆರಗೆ ಕಾಲೊತ್ತಿ ತಾನು
ಮುಂದಲೆ ಮೂಸಿ ಮುತ್ತಿಟ್ಟಳು ಎತ್ತಿ

ಆರ್ಯಕನ್ನಡ ನುಡಿಯಿಂದ ಸೌಕು
ಮಾರ್ಯಸಹಜ ಕಂಠಮಾಧುರ್ಯದಿಂದ
ಕಾರ್ಯಕಾರಣ ಜ್ಞಾನದಿಂದ ಅವ
ರಾರ್ಯೆದರ್ಚಿಸಿದರತಿಥಿಗಳ ಬಂದ

ಇನ್ನೂ ಕೌಮಾರ ಕಾಲದಲೇ ಶಾಸ್ತ್ರ
ವನ್ನು ಕಲಿಯುತ್ತಿದ್ದರಮ್ಮ ನಿಂದೇನೇ
ಧನ್ಯವಾಯಿತು ರಾಜ್ಯಶಕ್ತಿ ಇವ
ರನ್ನರ ಕೈಹಿಡಿದೆನೆ ಗುರುಸೇನೆ

ನಿಮಿಷಮಾತ್ರಕೆ ರಘು ಅಣ್ಣ ಆದ
ರಮಿತಭಕ್ತಿಯ ತೋರುತ್ತಿದ್ದ ಆ ತಮ್ಮ
ಶ್ರಮದ ಕಾರ್ಯವನೆಲ್ಲ ತಾನೇ ಮಾಡಿ
ನಮಿಸಿ ನಿಲ್ಲುತ್ತಿದ್ದ ತಾಳದೆ ಹಮ್ಮ

ಶಾಸ್ತ್ರಪಾರಂತನಾದ ರಘು
ಶಸ್ತ್ರಪಾರಂಗತನಾದ ಕಾಕುತ್ಸ್ಥ
ಕ್ಷಾತ್ರದಿಮ್ಮೊಗವಾದ ಅವರ ಯುಕ್ತ
ಪಾತ್ರವ ಮೆಚ್ಚಿತು ಲೋಕಸಮಸ್ತ

ವಿಸ್ತಾರವಾದ ಕುಂತಳವ ಆಳ್ವ
ಶಕ್ತಿ ಬೆಳೆಯಿತಿವರಲ್ಲೆಂದು ಗ್ರಹಿಸಿ
ಸ್ತುತ್ಯ ಭಗೀರಥರಾಯ ವಾನ
ಪ್ರಸ್ಥವ ಹಿಡಿದನು ಪಟ್ಟದೊಳಿರಿಸಿ

ರಘುಚಕ್ರವರ್ತಿ ಶ್ರೀಭೀಮ ಇಡಿ
ಜಗವ ನಡುಗಿಸುವ ಅರ್ಜುನ ಯೋಧ
ಅಗಣಿತಸೇನ ಕಾಕುತ್‌ಸ್ಥ ಮೊಗೆ
ದಗಚುವಹಗೆವರ ಯುವರಾಜನಾದ

ಶ್ರುತಕೀರ್ತಿ ಎಂಬ ಸೇನಾನಿ ಭೀಷ್ಮ
ವ್ರತನಾಗಿ ದುಡಿದು ಶತ್ರುಗಳನ್ನು ಮೆಟ್ಟಿ
ಕ್ರತುಗಳ ಮಾಡಿಸಿ ದೊರೆಯ ಕೀರ್ತಿ
ಶ್ರತವಾಗುವಂತೆಸಗಿದ ದೂರದೃಷ್ಟಿ

ಕ್ಷತ್ರಪ ರುದ್ರದಾಮಣನ ಮಗ–
ಳುತ್ತರೆ ಮತ್ತು ಚಿತ್ರೆಯರನ್ನು ತಂದು
ಇತ್ತು ವಿವಾಹ ಮಾಡಿಸಲು ದೂತ
ರೊತ್ತಿಬಂದರು ದೊರೆಯೆಡೆಗೆ ತಾವಂದು

ಗುಪ್ತರಿಗಂಜಿದ ಸಿಥಿಯ ತನ್ನ
ಶತ್ರುಗಳನು ಹಣಿಯಲು ಹೊಂಚಿ–ಧರೆಗೆ
ರತ್ನವೆನ್ನಿಸಿದಂಥ ರಘುಗೆ ಕರೆ
ಯಿತ್ತಿದ್ದ ಮದುವೆಯ ಸಂಬಂಧಗಳಿಗೆ
ಉತ್ತರದಲಿ ಚಕ್ರವರ್ತಿ ಗುಪ್ತ
ಉತ್ತುಂಗನಾದರೂ ಓಲೈಸದಹಹಾ
ಇತ್ತಬಂದಿಹನಿವನೆಂದು ರಘು
ಇತ್ತನೊಪ್ಪಿಗೆಯನ್ನು ನಡೆಯೆ ವಿವಾಹ

ರಾಜವೈಭವವೆಂಬಂತಿಲ್ಲ ಬಹು
ಸಾಜವೆನ್ನಿಸುವ ವ್ಯವಸ್ಥೆಯನಿಡಿಸಿ
ತೇಜವ ಮೆರೆದ ಸಾತ್ವಿಕದ ಭೂರಿ
ಭೋಜನವೊಂದನು ಬಿಡದೆ ಮುನ್ನಡೆಸಿ

ಉತ್ತರಾಪತಿ ರಘುವಾದ ಆ–ಕಾ–
ಕುತ್‌ಸ್ಥ ಚಿತ್ರೆಯ ಕೈಯಹಿಡಿದ ಸಂತೋಷ
ಉತ್ಸವಕೆಡೆಗೊಟ್ಟಿತಿಲ್ಲಿ ಜನ–
ರುತ್ಸಾಹಕೆಣೆಯಿಲ್ಲ ಬನವಸೆಯಲ್ಲಿ

ಶ್ವೇತಮಯೂರಗಳಂತೆ ರಘು–
ನಾಥಕಾಕುತ್‌ಸ್ಥ ದಂಪತಿಗಳು ಜನರ
ಪ್ರೀತಿಯ ಮೂರ್ತಿಗಳಾಗಿ ಧರ್ಮ–
ವೀಥಿಯ ಕಟ್ಟಿಸಿದರು ದಾನಾಧ್ವರರ

ಕಾದಂಬಕೀರ್ತಿಯ ಕೇಳಿಹೃಷ್ಟ–
ನಾದ ಕೇಕಯರಾಜ ಉತ್ಸಾಹತಾಳಿ
ತಾ ದಾನಕೊಟ್ಟನು ಸುತೆಯ ಆಕೆ–
ಯಾದಳು ಕಾಕುತ್‌ಸ್ಥ ಪತ್ನಿ ನಲ್ಗತೆಯ

ಮಾಧವಗಂಗ ಸ್ನೇಹವನು ಬೇಡಿ
ಪಾದಗಾಣಿಕೆಗಳ ಕಳಿಸಿದ ರಘುಗೆ
ಹೋದ ಪ್ರವರಸೇನ ದೂರ ತನ್ನ
ಮೇದಿನಿ ನೋಡಿಕೊಳ್ಳುತಲಿದ್ದಬದಿಗೆ
ಆದರೆ ಚಂದ್ರಗುಪ್ತಾಖ್ಯ ಕಾರ್ಯ
ಸಾಧಕನಾಗಿ ರಘೂತ್ತಮನೆಡೆಗೆ
ವಾದಿಸೆ ಕಾಳಿದಾಸನನು ಅಟ್ಟಿ
ಭೇದಿಸಲ್ಪಟ್ಟು ಹೋದನು ಮನೆಕಡೆಗೆ

ಕಾಲ ಹೋಗಲು ಮುಂದೆ ಹರಿದು ರಘು
ಬಾಲಕರಿಲ್ಲದೆ ಕಾಕುತ್‌ಸ್ಥಪಡೆದ
ಶೀಲಸಂಪನ್ನ ಕನ್ಯೆಯರ ಸಾಕಿ
ಹೇಳಿಕೊಟ್ಟನು ಶಾಸ್ತ್ರಕ್ಷಾತ್ರ ಬೆಂಬಿಡದ

ಅವನ ಸುಪುತ್ರ ಶಾಂತೀಶ ತನ್ನ
ಕುವರನೆಂದೇ ಭಾವಿಸಿದ ರಘುರಾಯ
ಅವನೀಪಾಲಕ ಗುಣಸಾಂದ್ರ ಪುಣ್ಯ
ಧವಳ ಕೀರ್ತಿಯ ಪಡೆದನು ಧರ್ಮರಾಯ

ಇಪ್ಪತ್ತು ವರ್ಷ ಕಳೆಯಲು ಮತ್ತೆ
ತಪ್ಪದೆ ಬಂದನು ಕವಿ ಕಾಳಿದಾಸ
ಒಪ್ಪಿಸೆ ರಘುವ ಕುಮಾರ ಗುಪ್ತ
ನಪ್ಪ ಕಳಿಸೆ ಕನ್ಯೆಗಾಗಿ ವಿಶೇಷ

ನನ್ನೊಡೆಯ ಚರಿತವನುರ ದೊರೆ
ನಿನ್ನ ಹೆಸರಿನಿಂದ ರಚಿಸುವೆನೆಂದು
ದಣ್ಣಿಕ್ಕಿ ಹೇಳಲು ನಕ್ಕು ಹೋಗು
ನಿನ್ನೊಡೆಯನ ಕಳಿಸೆಂದ ತಾನಂದು

ಇಮ್ಮಡಿ ಚಂದ್ರಗುಪ್ತಾರ್ಯ ಬಂದು
ತಮ್ಮೊಡಾತಿಥ್ಯಕ್ಕೆ ಮಿಗಿಲಾಯ್ತಿದೆಂದೆ
ಸುಮ್ಮಾನದಿಂದುಬ್ಬಿಹೋದ ರಘು
ವರ್ಮನ ಘನತೆಯ ನೆರೆ ಮನದಂದು
ಆಳುಪ ಪಶುಪತಿಯಪ್ಪ ದೂತ
ಮೇಳವ ಕಳಿಸಿದ ಕನ್ನೆಯ ಬೇಡಿ
ಆಳನಟ್ಟಿದ ನರೇಂದ್ರನಿಗೆ ತನ್ನ
ಪಾಳಿಯೆಂದಾ ಪ್ರವರಾಖ್ಯ ರಾಜೇಂದ್ರ

ಅಜಿತೆ ನರೇಂದ್ರಸೇನನನು ಮತ್ತು
ವಿಜಿತಾರಿ ಪಶುಪತಿ ಅಳುಪನನ್ನು
ಭಜಿಸಲೊಪ್ಪಲ್ ಅಸೀಮೆ ಇನ್ನು ಗುಪ್ತ
ವಿಜಯಿಯಾದನು ಪಡೆದಮರಾಂಬೆಯನ್ನು

ಕನ್ನಡನಾಡ ದೀಪಗಳು ಇಂತು
ಅನ್ಯರಾಜ್ಯಗಳನ್ನು ಬೆಳಗಿದವೆನಲು
ಧನ್ಯ ಕದಂಬರ ಕುಲವು ಸರ್ವ
ಮಾನ್ಯವೆಂದಿತು ಗಣ್ಯರಾಜಮಂಡಲವು

೯

ಸೂ: ರಘುವಿನ ಸನ್ಯಾಸ ಮತ್ತು ಜನ ಶಿಕ್ಷಣ ಪ್ರಯೋಗ,

ತತ್ವ ಚಿಂತನವ
    ಹಿಡಿದಣ್ಣ ತನ್ನ
    ಅತ್ಯಾಪ್ತ ತಮ್ಮ
    ದೊರೆಗರ ಚಿನ್ನ
ಹೊತ್ತಾನು ಹೊರೆಯ
    ಕುಂತಳ ಧರೆಯ
    ಇತ್ತರೆಂದವಗೆ
    ವಹಿಸಿದ ಬಗೆಗೆ–

ಆನಂದಬಾಷ್ಪ
 ಸುರಿಸಿತು ನಾಡು
 "ಏನೆನ್ನಬೇಕು
 ನನ್ನಿಯ ಬೀಡು
 ಈ ನಮ್ಮ ರಾಜ
 ದೇವಾತ್ಮ ತೇಜ
 ನಮಗೀಗ ಸೂಳು
 ಬರೆ ದಿವ್ಯ ಬಾಳು"
ಕನ್ನಡದಲ್ಲಿ। ಮೊದಲಾಯಿತಾಗ
ದಕ್ಷಿಣದಲ್ಲಿ ಧರ್ಮಪ್ರಯೋಗ॥
ಕೊಂಕಣನಗರ। ಋಷಿರಾಜ ಶಿಬಿರ
ರಘು ಜನಕಾತ್ಮ। ಅಪಹೃತ ಪಾಪ್ಮ॥
ಎಂಟು ದಿಕ್ಕುಗಳ। ಶ್ರಮಣ ಭಿಕ್ಕುಗಳ
 ವೇದಾಂತ ಧುರರ। ವಿಜ್ಞಾನ ಪರರ।
 ಪರಿಷತ್ತು ನೆರೆದು। ಸತ್ಯಾರ್ಥವೆರೆದು
 ಜನ ಶಿಕ್ಷಣವನು। ನಡೆಸಿದ ಹವಣು
 ಕಲಿಯುಗದಲ್ಲಿ । ಮೊದಲಿದೇ ಎಂದು
ಸಲಿಸಿತು ಲೋಕ। ನುತಿಯ ವಿವೇಕ॥
 ತಮಗೆಂದೇ ದುಡಿವ
 ಭ್ರಮೆಯನ್ನೇ ಹಿಡಿವ
 ಕೃಮಿಗಳು ನರರೇ?
ಸ್ವಹಿತಾರ್ಥ ಪರರೇ?
 ವ್ಯಷ್ಟಿಯ ಕ್ಷೇಮ
 ವ್ಯಷ್ಟಿಯೊಳಿಲ್ಲ
 ಸೃಷ್ಟಿಯ ನೇಮ
 ದೃಷ್ಟಿಯೊಳಿಲ್ಲ!
 ವ್ಯಕ್ತೀಷ್ಟ ನೇತ್ರ
 ಮುಕ್ತಿಗೆ ಮಾತ್ರ
ಭುಕ್ತಿಯ ಬಾಳ್ಗೆ
 ಪರಹಿತವೇಳ್ಗೆ

        ಸತ್ಸಂಗ ನೀತಿ
        ರಾಜ್ಯದ ನೀತಿ
ದುಃಸಂಗದಿಂದ
        ರಾಜ್ಯಕ್ಕೆ ಭೀತಿ!
        ಪ್ರಜೆಗಳ ರಾಜ್ಯ
        ಸಮ ಸಂವಿಭಾಜ್ಯ
ರಾಜ ನಿಯೋಜ್ಯ
        ಪ್ರಭುತಾಪ್ರಯೋಜ್ಯ;
ಶಕ್ತಿಯೇ ದೈವ
        ಪ್ರಜೆಗಳ ಕಾವ
ಪ್ರಜೆ ಕೆಟ್ಟ ರಾಜ್ಯ
        ಪ್ರಭುವಿಗೆ ಭೋಜ್ಯ।
ಅನ್ವಾರ್ಥ ಕರ್ಮ
        ಸಂಸ್ಕೃತ ಧರ್ಮ
ಪುಣ್ಯದ ನಿಕಷ
        ನ್ಯಾಯದ ಹರುಷ।
ಜನಪದ ಸೇವೆ
        ಮಾಡುವನೆಂದೇ
ರಾಜನ ಸೇವೆ
        ಪ್ರಜೆ ಮಾಡಲಿಂದೇ!
ಜನಕನ ಕವಚ
        ಮಾನವ ತೊಡಲಿ
ಜನ ಜಾತಿ ಹೀನ
        ಕುಲಕೆ ತಾ ಕೊಡಲಿ।
ಕರ್ಮವಾಗದಿಹ
        ಕರ್ಮವೆ ಜ್ಞಾನ
ಜ್ಞಾನವಿಹೀನ
        ಭಕ್ತಿಯ ಜ್ಞಾನ!
ಭಿನ್ನನ 'ಬೇಕು'
        ತುಚ್ಛ ಸಂತೋಷ

ಅನ್ವಾರ್ಥ ಕಾರ್ಯ
        ದಿವ್ಯಾತ್ಮ ಘೋಷ!
ಬದುಕಿದನಿಂತು
        ರಘು ಸರ್ವತಂತು
ಕನ್ನಡ ಪುಣ್ಯ
        ಸರ್ವತ್ರ ಗಣ್ಯ॥

೧೦

ಸೂಚನೆ: ೪೨೫ ರಿಂದ ೪೫೦ರ ವರೆಗೆ ಕಾಕುತ್ಸ್ಥವರ್ಮ ಕದಂಬೇಶ್ವರ ರಾಜ್ಯಭಾರ ಮಾಡಿದ. ಅನಂತರ ಅವನ ಮಗ ಶಾಂತಿವರ್ಮ ಧರ್ಮ ಮಹಾರಾಜ ಪಟ್ಟಕ್ಕೆ ಬಂದ, ಮದುವೆಯಾದ. ಬನವಾಸಿ ವಿವಾಹ ಮಹೋತ್ಸವವನ್ನು ನಡೆಯಿಸಿತು. ಕನ್ನಡನಾಡು ಸಮೃದ್ಧವಾಯಿತು, ಅವನಾದ ಮೇಲೆ ಅವನ ಮಗ ಬಂದ; ಅರ್ಧರಾಜ್ಯದ ಅಧಿಕಾರ ಮಾತ್ರ ಅವನಿಗೆ ಉಳಿಯುವಂತಾಯಿತು; ಮೊಮ್ಮಗನಿಗೆ ಮೊದಲು ಅದೂ ಉಳಿಯದಾಯಿತು,

ಪ್ರತಿನಿತ್ಯ ಕಾಕುತ್ಸ್ಥ ರಘುದೇವನಡಿಗೆ
ನತಶಿರನಾಗಿ ಪ್ರಜಾರ್ಥದ ನಡೆಗೆ
ವ್ರತತೊಟ್ಟು ಸಾಮ್ರಾಜ್ಯವಾಳಿದ ಮೇಲೆ
ಸುತ ಶಾಂತಿವರ್ಮ ಪಟ್ಟವನೇರ್ದ ಲೀಲೆ!

ನಿರ್ಜನತೆಗೆ 'ಶಾಂತಿ' ಎಂದರೆ ಸಲ್ಲ
ನಿಃಶಬ್ದತೆಗೆ ಎಂದರದು ಸತ್ಯವಲ್ಲ
ನಿರ್ಜೀವತೆಗೆ 'ಶಾಂತಿ' ಎಂದರೆ ಸರಿಯೇ?
ನಿಷ್ಕರ್ಮ ನಿಷ್ಪಂದ ಅಲ್ಲವೆ ಬರಿಯೇ?

ನಿರ್–ನಾಮ ರೂಪದ ಪ್ರಜ್ಞಾನಸೂರ್ಯ
ಸನ್ನಾಮಚಿಹ್ನಿತ ಸರ್ವಾತ್ಮಧೈರ್ಯ
ಉನ್ನತ ಧ್ಯೇಯಕ್ಕೆ ಮಾತ್ರ ಕೈಂಕರ್ಯ–
ಎನ್ನುವುದನು ನಂಬಿನಡೆವವನಾರ್ಯ!

ರಘುತತ್ವಕೌಮುದಿಯಲಿ ಮಿಂದ ಜೀವ
ಮಗಮಗಿಸುವ ನಿರ್ಮಲಾನಂದ ಭಾವ
ಮಗನಾದ ಕನ್ನಡ ಸನ್ನುತ ಪ್ರಜೆಗೆ
ಅಗದವಶಾಂತಿಗೆ ದುರ್ಜನರುಜೆಗೆ!

ಶಮದಗ್ನಿಯಾಗಿದ್ದ ದೇಹೇಂದ್ರಿಯದಲಿ
ಜಮದಗ್ನಿಯಾಗಿದ್ದ ಸಚ್ಚಿಕೀರ್ಷೆಯಲಿ
ವಮದಗ್ನಿಯಾದನು ವಿಷಯಲೋಭಕ್ಕೆ
ಭ್ರಮದಗ್ನಿಯಾದನು ಶತ್ರುಲೋಕಕ್ಕೆ
ಪರಶುಧರನು ಬಂದು ಕೊಡಲಿಯನಿತ್ತು
ಹರಸಿದ ದರ್ಶನದಲಿ; "ಧರ್ಮಬಿತ್ತು
ಅರಸ ನೀ ಕೊಂಕಣಕುಲವಜ್ರಬಾಹು
ಸ್ಮರಿಸಿದಾಗಳೆಬಹ ದುಷ್ಕ್ಷತ್ರರಾಹು"

ಚಂದ್ರಗುತ್ತಿಯ ಗುಡ್ಡೆಗಂದೇನೇ ಹೋಗಿ
ಬಂದ ಶಾಂತೀಶ್ವರ ರೇಣುಕೆಗೆರಗಿ
ಅಂದೆ ಮಾಡಿಸಿದನು ವಜ್ರಪರಶುವ
ಮುಂದಿಟ್ಟ ಮಧುಕೇಶನೆದುರು ತಾನೆಸೆವ

ಅಭಿನವಭಾರ್ಗವನೆಂದರಂದಿಂದ
ಸುಭಟ ಕೋಟಿಗಳಾತನನು ಪ್ರೀತಿಯಿಂದ
ಇಭಸೇನೆಯನು ಮೀರಿಸುವ ವಜ್ರಸೇನೆ
ಪ್ರಭವಿಸಿ ತರಿಗಣಕಡಸಲು ಬೇನೆ

ಮೂರು ಕಿರೀಟಗಳರಸನೆನ್ನಿಸಿದ
ತೀರದ ಕುಂತಳ ಕರ್ಣಾಟ ಹಿಡಿದ
ತೋರಮಾಣಿಕದಂಥ ಪೂರ್ವಪ್ರದೇಶ
ಆರಯ್ಯಲಾದವು ಪ್ರಭುತಾನಿವಾಸ

ಕ್ಷತ್ರಪ ದೌಹಿತ್ರ ಕ್ಷೇತ್ರಜ್ಞನಾದ
ಸುತ್ರಾಮ ವೈಭವವಿರುವಾಗ ವೇದ–
ವೇತ್ತರನಲ್ಲ ಧರ್ಮಾಚಾರರನ್ನು
ಎತ್ತಿಹಿಡಿದ ತೆಗೆದಿತ್ತು ಹೊನ್ನನ್ನು

ಇಂಥವನಿಗೆ ವಧು ಎಂಥವಳೆಂದು
ಚಿಂತಿಸಿದನು ಪುರೋಹಿತ ಮನದಂದು
ಕಂತುಹರನ ನೆನೆದವ ತೀರ್ಥಯಾತ್ರಾ–
ಪಂಥವ ಹಿಡಿದೆಯ್ದಿದನು ಧರ್ಮಸೂತ್ರ
ಗುಪ್ತವಾಗಿಯೆ ಗುಪ್ತರಾಜ್ಯಕ್ಕೆ ಹೋದ
ಸುಪ್ತೋತ್ಥಿತರನಲ್ಲ ನೆಲೆಸಿ ಆರಯ್ದ
ತೃಪ್ತಿಯಾಗದೆ ತನ್ನ ದೊರೆಯ ಸೋದರಿಯ
ಇಪ್ಪತ್ತರಣುಗಿಯ ಕಂಡ ಸುಂದರಿಯ

ಶಿಲ್ಪವೆ ಮೈವೆತ್ತ ಶ್ರೀ ಭ್ರಮರಾಂಬೆ
ಜಲ್ಪನವರಿಯದ ವಿನಯಾವಲಂಬೆ
ಅಲ್ಪವ ಮೆಚ್ಚದುದಾರಾತ್ಮಬಿಂಬೆ
ಕಲ್ಪಜ್ಞಮಾಧುರ್ಯ ಗುಣನಿಕುರುಂಬೆ

ಪರಿಕಿಸಲೆಂದವಳೆದುರಿಟ್ಟ ಚಿತ್ರ
ವರರಾಜಋಷಿ ಶಾಂತಿವರ್ಮನ ಮಿತ್ರ
ಸರಿದೊರೆಯಾದೊಂದು ವಿಗ್ರಹ ಮಾಡಿ
ಇರಿಸಿದಳೆದುರಿದೆಂತಿದೆ ಎಂದು ನೋಡಿ

ಜೀವಂತ ಶಾಂತಿಪ್ರಭಾತ ನಿಂದಿಹನೋ
ಭಾವಪೂರ್ಣಾವಲೋಕನವೆತ್ತು ಬಹನೋ
ಭಾವಿಕಸತಿಯೆದುರೆಂಬಂತೆ ನೋಟ
ಠೀವಿಯ ತಳೆದಿತ್ತು ರೂಪಿನ ಮಾಟ

ಅಮೃತಾಂಶುಕಿರಣವ ಬೀರುವ ನಗೆಯ
ಅಮಿತಾನುಕಂಪವ ಸೂಸುವ ಬಗೆಯ
ಭ್ರಮಿಸಲು ಕೈ ಒಂದು ಹಿಡಿದಿರೆ ನಡುವ
ಧಿಮಿಕಿಟ ಸಮಹೆಜ್ಜೆ ನಟರಾಜ ಇಡುವ

ತಿಳಿದು ಬಗೆಯನವಳಮ್ಮನಿಗೆಂದ
ನಳಿನಲೋಚನ ನಿನ್ನ ತಮ್ಮ ಶಾಂತೀಂದ್ರ
ಅಳಿಯನಾಗಲು ತಕ್ಕ ಗುಣವಂತ ಮಗಳ
ಎಳೆಯದೆಗಾಗಿದೆ ಅವನಾಸೆ ನಿಗಳ
ಎನೆ ಮುಗುಳ್ನಗೆದೋರಿ ಅಮರಾಂಬೆ ತನ್ನ
ಮನವುಬ್ಬಲೇ ಭ್ರಮರೆಯ ಮನದನ್ನ
ನಿನಗಿವನೇನೆಂಬೆ ಎನೆಗೆಯ್ದಳಸ್ನೆ
ಅನುಕೂಲ ಸಂಜೆಯ ಶಿಲ್ಪಪ್ರಸನ್ನೆ

ಕುಂತಳೇಶ್ವರ ದೌತ್ಯ ವಹಿಸಿದ ತವಸಿ
ಶಾಂತಿವರ್ಮನ "ರಘುವಂಶ' ದಿ ಬೆಳೆಸಿ
ದಾಂತ ಶ್ರೀರಾಮನ ಪಾತ್ರದೊಳಿರಿಸಿ
ಶಾಂತಿ ಸಿಕ್ಕಿತು ಎಂದ ನಿಟ್ಟುಸಿರಿಳಿಸಿ

ಗುಣವೀರ್ಯಧರ್ಮ ಸತ್ಯಗಳನ್ನು ಮೆರೆವ
ತೃಣವೆಂದಿಂದ್ರಿಯ ವಿಷಯಗಳ ತೂಪಿರಿವ
ಘನವಂತ ಶ್ರೀರಾಮ ಚಾರಿತ್ರಭಾನು
ಇವನಲ್ಲದಿನ್ನಾರು ಜನಕಾಮಧೇನು?

ಎಂದುದ್ಗರಿಸಿ ಪುರೋಹಿತನೊಡಗೂಡಿ
ಬಂದನು ಬನವಾಸಿ ದೊರೆಯನು ನೋಡಿ
ಇಂದಾದೆ ನೀನೆನೆ ಭ್ರಮರಾಂಬೆಯರಸ
ಹೊಂದದಿರದು ಸೌಖ್ಯ ಭಾರತವರುಷ

'ನಿನ್ನಜ್ಜನಜ್ಜ ಕುಮಾರವಾಹನನು
ನಿನ್ನಜ್ಜನಿಕ್ಷ್ವಾಕು ಕುಲದಪುಂಗವನು
ನಿನ್ನ ಮಾವನು ಗುಪ್ತನಾದ ಕುಮಾರ
ನಿನ್ನ ತೇಜೋರೂಪ ರಾಮಾವತಾರ

'ಮಗು ನಿನ್ನ ಹರಸುವೆ ಮುದುಕ ನಾನಾದೆ
ಭೃಗು ಪೌತ್ರಕೃಪೆಯಿಂದಜಯ್ಯನೀನಾದೆ
ಮಗಳಕೊಡುವ ದೊರೆಗುಪ್ತ ಏನೆಂಬೆ'
ಮುಗುಳರಳಿತುಬಾಯ ನೃಪನೆದೆ ತುಂಬೆ!
ಉತ್ತರಾಪಥಸಾರ್ವಭೌಮನ ಬಳಗ
ದಕ್ಷಿಣಾಪಥ ಹೊಕ್ಕು ಕಾದಂಬರಣುಗ
ಉತ್ತಮವರನೆಂದು ಬಂದುದು ನೋಡಿ
ಕತ್ತೆತ್ತಿ ಸ್ವಾಗತಿಸಿದರೆಲ್ಲರೋಡಿ

ಇಂಗಿತವರಿತೆಲ್ಲ ಸಂಭಾರ ತಂದು
ಮಂಗಲೋತ್ಸವ ನೆರವೇರಿಸಿ ನಿಂದು
ಸಂಗೀತಸಭೆಯನಾರಂಭಿಸಹೋದ
ಮಂಗಲಾಷ್ಟಕ ಹಾಡಿ ದ್ವಿಜ ಸುಪ್ರಬೋಧ

ಒಳಗಡೆ ಸಂಗೀತ ಹೊರಗೆ ನಗಾರಿ
ತುಳಿಲಾಳ ಕೂಚಿಗೆ ಕರೆವ ತುತೂರಿ
ಮಲೆನಾಡಮಲ್ಲರ ರಣಕೇಳಿ ಮತ್ತೆ
ಶುರುವಾಯಿತೇನೆನೆ ನಾದ ಜಗತ್ತೆ!

ಗುಪ್ತಕದಂಬರ ಗುಪ್ತಿಯಕಳೆದು
ತಪ್ತ ಕಾಂಚನದಂತೆ ಹೊಳೆವ ಮೈತಳೆದು
ಸಪ್ತಸಾಗರದಲೆಯೇರಿ ನರ್ತಿಸಲು
ಪ್ರಾಪ್ತವಾಯಿತು ಕಾಲ ಸಿರಿಗೆ ಶಿಖಿವೊಲು

ಹಿರಿಯರ ಸತ್‌ಪರಂಪರೆಗನುಗುಣವಾಗಿ ತಾ
ಕೆರೆ ಕಾಲುವೆಗಳನು ಕಟ್ಟಿಸಿದನು ಗುಡ್ನಾ–
ಪುರವೆಂದು ಕರೆಯುವ ಕೆರೆ ಶಾಂತಿಜಲವಂತ
ಅರಿಯಲಿಂದೂ ಇದೆ ಮರಿಗಡಲೆಂಬಂತೆ!

ನಿಷ್ಕೃತಿಯಿಲ್ಲ ಕೃತಘ್ನ ಕನ್ನಡಿಗಗೆ
ವಿಸ್ಮೃತಿಯಲಿ ಮುಳುಗಿದನಾರ್ಯ ದಡಿಗಗೆ
ಉತ್ತಮಸ್ಥಿತಿಯನು ಜನರಿತ್ತ ಹಿರಿಯರ
ಕತ್ತೆತ್ತಿ ಕಾಣದ ಕವಲೆತ್ತಿನೊಡೆಯಗೆ
ಅದರಿಂದಲಾ ಶಾಂತಿಚಕ್ರೇಶನಾದಮೇ–
ಲುದಿಸಿದ ತನಯ ಮೃಗೇಶನಾಳಿಕೆಯಲ್ಲಿ
ಚಿಕ್ಕಪ್ಪ ಪಾಲ್ಗೊಂಡ ರಾಜ್ಯಾರ್ಧವನ್ನು
ಠಕ್ಕಿಸಿ ಸಾರಿದ ಸ್ವಾತಂತ್ರ್ಯವನ್ನು

ವನವಾಸ ಕಳೆದಂತೆ ಕಳೆದಿತು ಹದಿನೈದು
ಘನವರ್ಷಗಳ ನಾಡು ವಿಧಿವಿಲಾಸವಬ್ಬೈದು
ಎಣಿಸದ ಕಡೆಯಿಂದ ದಾಯಾದ ಬಂದ
ಕ್ಷಣದೊಳೆ ಕಸಿದಧಿಕಾರವ ನಿಂದ

ಮಾಯೂರಮಾಂಧಾತನಳಿಯೆ ಮೃಗೇಶನು
ಹಾಯಾಗಿ ಶಿಶುರವಿಯನು ಕಡೆಗಣಿಸುತ
ಆಯತ ಹೊತ್ತಿಗಾರ್ಭಟವ ಮಾಡಿದನು
ಮಾಯಾವಿ ಬನವಾಸಿ ಪೀಠವೇರಿದನು

ಮತ್ತೇಳು ವರ್ಷಗಳನು ಕಳೆಯಿತು ಜನ
ಸತ್ತೆಯ ರವಿಕೊಂದು ಮಾಂಧಾತನನು ತನ್ನ
ಹಸ್ತದೊಳಿರಿಸಿಕೊಳ್ಳುವವರೆಗಂದು
ಹೃತ್ತಾಪದಲಿ ನಿತ್ಯನರಳುತ್ತ ಬೆಂದು

೧೧

ಸೂ: ಶಾಂತಿವರ್ಮನ ಮಗ ಮೃಗೇಶ, ಮೃಗೇಶನ ಮಗ ರವಿವರ್ಮ, ಪ್ರಾಯಕ್ಕೆ ಬಂದೊಡನೆಯೇ ರವಿವರ್ಮನು ತನ್ನ ರಾಜ್ಯಾಧಿಕಾರವನ್ನು ಕಸಿದುಕೊಂಡಿದ್ದ ಚಿಕ್ಕಪ್ಪ ಮಾಂಧಾತ ಮಹಾರಾಜನನ್ನು ಯಮಪುರಿಗೆ ಕಳಿಸಿ ಅಧಿಕಾರಾರೂಢನಾದ. ಅವನ ರಾಜ್ಯ ನರ್ಮದಾಂತವಾಯಿತು.

'ಭಾಗ್ಯ ಬರಲಿ ಭೂಮಿಗೆ
ಯೋಗ್ಯ ಯಶಸ್ಕಾಮಿಗೆ
ಭೋಗಚಕ್ರದ ನೇಮಿಗೆ
ನಾಗಲೋಕದ ಸ್ವಾಮಿಗೆ'
ಎಂದು ಪ್ರಾರ್ಥಿಸುತಿರೆ ಕನ್ನಾಡರು
ಮಾಂಧಾತಶಾಸನ ಪೀಡತರು
ಗಂಧೇಭಬಂಧುರಪ್ರವಿಭಾಸಿ ರವಿಯ
ಮಂದಹಾಸವ ಕಂಡು ಮುಗಿದರು ಕೈಯ

ಮೃಗವರ್ಮಪುತ್ರ ಸಂಪನ್ನಚಾರಿತ್ರನು
ಹೊಗಳಿಕೆಗಳ ಕೇಳನು
ಮೃಗಯಾದಿ ದುರ್ವ್ಯಸನಗಳಿಂದ ಮುಕ್ತನು
ಹಗೆಗೆ ದಾವಾನಲನು

ಹರಿಸೇನ ವಾಕಾಟಕನು ಗೆದ್ದರೂ ಮೊದ
ಲರಿಗಂಜದಪರಾಂತೇಶ
ಬರಿದು ಮಾಡಿದ ಯೋಧಬಲವನಾತನ ಆಗ
ವರಮಿತ್ರನಾದ ತೋಷ

ಸಾಲಂಕಾಯನರ ಸೋಲಿಸೆ ನಿಮಿಷಾರ್ಧದಿ
ಮಾಲೆ ಬಿದ್ದಿತು ಜಯದ
ಭಾಳಲೋಚನ ಮೂರನೆಯ ರೇಣುಕಾಸುತ
ಕಾಲದಂಡನು ಭಯದ

ಕೋಸಲ ಮಾಳವ ಲಾಟ ತ್ರೈಕೂಟರ
ವಾಸಿಮಾಡಿದ ಗರ್ವವ
ದಾಸತ್ವವನ್ನು ಗುರ್ಜರರೊಪ್ಪಿದರು ಕನ್ನ
ಡೇಶನ ಜಯಪರ್ವವ

ಗಾಥೆಯ ರಚಿಸಿ ಹಾಡಿದರು ವಿವಿಧಭಾಷಾ
 ವೇತ್ತರು ನರ್ಮದೆಯ
ಪಾತ್ರವು ಗಡಿಯಾದ ಕನ್ನಡ ಸಾಮ್ರಾಜ್ಯ
 ಪ್ರಾತಃಸ್ಮೃತಿಗೆ ಬೋಧೆಯ
ಆದಿಮಯೂರನ ಸಾಮ್ರಾಜ್ಯ ಮತ್ತೀಗ
 ಪ್ರಾದುರ್ಭವಿಸಿತಹಹಾ
ಸಾಧುಗೆ ಸಾಧು ಧೂರ್ತಗೆ ಧೂರ್ತನೆನಿಸಿದ
 ಕಾದಲ್ಮೆಯೊವಜ ಮಹಾ

ದಕ್ಷಿಣಾಪಥದ ಮಹೋಕ್ಷ ರವೀಂದ್ರನ
 ಪಕ್ಷವ ಸೇರದವ
ದುಷ್ಕ್ಷತ್ರಿಯನೆಸರಿ ಎಂದಿತು ಲೋಕನಿಷ್
 ಪಕ್ಷಪಾತವ ತೋರುವ

ಅರಿಕುಲಶರಭಭೇರುಂಡ ವಿಜಯಯಾತ್ರೆ
 ಶುರುಮಾಡಲೆಣಿಸಿದಾಗ
ಪರರಾಜರೆಲ್ಲ ಕಾಲ್ವಿಡಿದರೆಂದರಿದೇನು
 ಬರಿಮಾತಾಯಿತೆ ಕೇಳುಗ?

ಭಾರತದಲಿ ಹೆಸರಾಂತ ನೃಪರೊಳೀತ
 ಸೇರಿದ ಧರ್ಮಸಿಂಧು
ಪಾರಾವಾರಗಳಾದವೀಸಾರ್ವಭೌಮನ
 ನೀರಾಟಗೆರೆಗಳಂದು

ಕನ್ನಾಡ ಸಿರಿಯನ್ಯನನ್ನು ವರಿಸೆನೆಂದು
 ಮುನ್ನಡೆದೆಯ್ತರಲು
ಹೊನ್ನು ಬಂಡಿಗಳೊಡನನ್ಯರಾಜರು ತಮ್ಮ
 ಹೆಣ್ಣ ಕೊಡುವೆವೆಂದರು

ಆಮಿಷಾಶೆಯಗೆದ್ದ ಭೂಮೀಶನೊಪ್ಪದೆ
ಕಾಮಮೋಹವನೊಡ್ಡಿದ
ರಾಮನಂತಾದಿಯ ಪುಲಿಕೇಶಿಯಣುಗಿಯ
ನೇಮದಿ ಕೈಹಿಡಿದ
ಮಾವನ ಬಾದಾಮಿಯುಪರಾಜಧಾನಿಯ
ಗದ್ದುಗೆಗೇರಿಸಿದ
ಯಾವ ಅಳಿಯ ಮಾವನಿಗೆ ಬಳುವಳಿಯನು
ಕೊಡುವ ಕ್ಷಾತ್ರಕೆ ಸೇರಿದ?

ಗೆದ್ದೆತಾನೆಂದು ಘೋಷಿಸಿದಾಗ ಕ್ಷಮಿಸಿದ
ಯುದ್ಧ ಮಾಡದೆ ಜರೆದು
ಹದ್ದಿನಿಂದವನ ದೂರದೂಳಿಟ್ಟ ಕಾಂತೆಯ
ಮುದ್ದುಮೊಗವ ನೆನೆದು

೧೨

ಸೂ; ರವಿವರ್ಮನ ಆಳಿಕೆ ೪೯೭ ರಿಂದ ೫೩೭ರ ವರೆಗೆ, ಅವನ ಆಸ್ಥಾನವೈಭವ ಅಭಿಮಾನಾಸ್ಪದವೆನ್ನಿಸಿತು. ಮಗ ಹರಿವರ್ಮ ಅನಂತರ ತಂದೆಯ ಸತ್‌ಪರಂರೆಯನ್ನು ಮುನ್ನಡೆಸಿಕೊಂಡು ಹೋಗಲು ಬದ್ಧಕಂಕಣ ನಾದ, ಕನ್ನಡ ಮೆರೆಯಿತು!

ವೈದಿಕ ಜೈನ ಬೌದ್ಧರ ಯತಿಗಣಗಳ
ನಾದರಿಸಿದ ರವಿಕೋಟಿತೇಜದ ರವಿ
ಹೋದಲ್ಲಿ ಬಂದಲ್ಲಿ ನವಿಲೆದ್ದು ಕುಣಿದವು
ದೇವನರ್ತಕಿಯರಂತೆ

ಪಾದವಿಟ್ಟೂರಲ್ಲಿ ಮಳೆ ಬೆಳೆ ಹೆಚ್ಚಲು
ಮಾದರಿಯಾಯಿತು ಕುಂತಳ ಲೋಕಕೆ
ವಾದಿ ವಾಗ್ಮಿ ಕವೀಂದ್ರ ಪಂಡಿತರಿದ್ದರು
ಸುತ್ತಿ ಗ್ರಹಗಳಂತೆ

ಅರ್ಥಕಾಮಗಳೆಲ್ಲ ಧರ್ಮಕಾಗಿಯೆ ಎಂದು
ಸಾರ್ಥಮಾರ್ಗವ ಹಾಕಿದಂಥ ಕದಂಬರ
ಪೃಥ್ವೀಶ ರವಿಯಾಳುತಿರೆ ಕನ್ನಡದ ಕೆಚ್ಚು
ಮುಗಿಲಿಗೇರಿತು ಮೂಡಿದ

ಅರ್ಥ ಮಾತಿಗೆ ಕಾರ್ಯ ಪೌರುಷವೊಂದೆ ನಿ
ರರ್ಥೋಪದೇಶಕೆ ವೇಳೆಗಳೆಯದ ಪ
ರಾರ್ಥಪರಾನಂದರಾದರು ಪ್ರಜೆಗಳು
ಸತ್ಯಧರ್ಮವ ಕೂಡಿದ

ಪಾವನ ಭಾವವೆ ರಮ್ಯ ವ್ಯಾಪ್ತರೊಳೂ ವಿ
ಭಾವಿಸದೌಚಿತ್ಯವನು ಗುಪ್ತಿಗೆಳಸುವ
ಭಾವ ಮಹಾಪಾಪ ಪ್ರಚ್ಛನ್ನ ದುಷ್ಟರ
ಕಾವುದು ದ್ರೋಹವೆಂದು

ಯಾವನ ಕೇಳಿದರೂ ಉದ್ಗರಿಸುತ್ತಿದ್ದ
ಭೂವಲಯಕೆ ದಾಕ್ಷಿಣಾತ್ಯನ ದಾಕ್ಷಿಣ್ಯ
ಭಾವನೆ ಅಚ್ಚು ಮೆಚ್ಚಿನದಾಯ್ತು ಎನೆ ರವಿ
ಜನನೇತನಾದನಂದು

ಮನೆಮನೆಯಲಿ ಮಂಗಲೋತ್ಸವ ನಡೆಯಿತು
ತನುಜಾತ ಹರಿವರ್ಮ ಹುಟ್ಟಲು ಬನವಾಸಿ
ಕುಣಿಯಿತು ನವಿಲಂತೆ ಆನಂದವೇ ಬ್ರಹ್ಮ
ಪರರುದಯದೆ ಹುಟ್ಟುವ

ಗಣಿಸದೆ ಸ್ವಸುಖವ ಪ್ರಜೆಗಳಿಗಾಗಿಯೆ
ದಣಿವ ದೊರೆಗೆ ಬರುವಾನಂದವೂ ಬ್ರಹ್ಮ
ಪ್ರಣವ ಪರೋಪಕಾರದ ಕರ್ಮ ಸಾಮ್ರಾಜ್ಯ
ಮುಕ್ತಿರಾಜ್ಯವ ಕಟ್ಟುವ

ಹರಿಸಿಂಹ ಹರಿಯಿಂದ್ರ ಹರಿವಿಷ್ಣು ಹರಿಹಯ
ಹರಿಹರ ಜಗದಾತ್ಮತತ್ವ ಸತ್ಯದ ಸತ್ಯ
ಹರಿ ಸಚ್ಚಿದಾನಂದ ದಿಕ್ಕಾಲಗಳ ಮೀರಿ
ದರಿಹೀನ ಪರಮಾರನ

ಹರಿಯಿರವಾದರ್ಶ ಜೀವನವೆಂದಾಗ
ಹರಿನಾಮವನ್ನಿಟ್ಟು ಕರೆದರು ಕುವರನ
ಶರದ ಚಂದಿರನಂತೆ ಸಾಗರಾಂಬರಧರೆ
ಯಾಣ್ಮನಾಗುವ ವೀರನ

ರವಿ ಹರಿಯಾದ ವೇದೋಕ್ತರ ಕಾಲದಿ
ಪವಿಧರನಾದ ವೈಕುಂಠಪುರಾಧಿಪ
ಹವಿಹೋಗಿ ನೈವೇದ್ಯವಾಯ್ತು ಕಾಲಾಂತರ
ನಾಮಾಂತರಕೆ ಕಾರಣ

ಅವನಿಗೆ ಸಮನಾದ ರೂಪಗುಣಂಗಳು
ಸವನಿಸೆ ಹರಿಯಲ್ಲಿ ಊರಾಡಿಕೊಂಡಿತು
ಕವನವಾಯಿತು ಸೂಕ್ತ ಇವನನು ಬಣ್ಣಿಪ
ಕವಿಯಾದ ಋಷಿವಾರಣ

ಕನ್ನಡ ಪ್ರಕೃತಿಯನರಿಯದ ಪುರುಷರ
ಕಣ್ಣು ಕಾಣದ ಪರದೇಶೀಯ ಪ್ರತ್ಯಯ
ಚೆನ್ನವೆನ್ನದೆ ಹೋದರಾಭಿಜಾತ್ಯಕೆ ಕೇಡೆ?
ಸಕ್ಕದ ಸವಿಗೂಡಿದ

ಪನ್ನೀರ ಪಾನಕ ವಾಯಿತಾಸ್ಥಾನದ
ಪುಣ್ಯಪದಸ್ಥ ಕವೀಶ್ವರ ಕುಲ ಹಾಡೆ
ಧನ್ಯನಾದನು ರವಿ ಹರಿಪಿತ ಹರಸುತ
ಹಾರುವರೆಯ್ತರಲು

ಸುಗ್ಗಿ ಖಾತಿಗಳೆಂಬ ಬೆಳೆಗಳಧಿಕವಾಗಿ
ಅಗ್ಗವಾಗಲು ಜೀವನೋಪಯೋಗದ ವಸ್ತು
ಮಗ್ಗಗಳಲ್ಲಿ ಮಲ್ಲುಗಳೊಗೆದವು ಬೆಳು
ದಿಂಗಳ ಭ್ರಮೆ ಹುಟ್ಟಿಸಿ

ದುರ್ಗಗಳೇರಿ ಕವಾಯತುನಡೆಸುವ
ವೆಗ್ಗಳದಧಿಕಾರವರ್ಗ ಕರ್ತವ್ಯವ
ಜಗ್ಗದೆ ಕುಗ್ಗದೆ ಪಾಲಿಸುತಿರೆ ಜನ
ದಕ್ಷವಾಯಿತುನಿಟ್ಟಿಸಿ

ಸಗ್ಗದ ಬಗ್ಗೆ ಯಾಗವ ಮಾಡದಾದರು
ಅಗ್ನಿ ಶರಣರಿಲ್ಲಿ ರವಿಹರಿಯೋಗದ
ಸುಗ್ಗಿಯ ಕುಣಿತ ನಾಡನ್ನೆಲ್ಲ ಕುಣಿಸಿತು
ಹೂವಿನ ಕೋಲೊಡನೆ

ನುಗ್ಗಿತು ಮನೆ ಮನೆಯನು ಮೇಳಯುವಕರ
ಉಗ್ಗಡಿಸಿತು ಮಹಾನವಮಿ ಸಂದೇಶವ
ಮಗ್ನವಾಯಿತು ಜನ ರಾಸಲೀಲೆಯೊಳೊಲಿ
ದಿರೆ ಮಧುಕೇಶ್ವರನು

ಗಿಳಿಯುಲಿಯೆ
ಅಳಿಯೊಲಿಯೆ
ತಿಳಿಗೊಳದಲಿ ದೋಣಿಗಳೆಸೆಯೆ

ನಳನಳಿಸಿ
ಜಳದಗಳು
ಪಳಪಳ ಹೊಳೆದವು ಸಿರಿಯೊಸೆಯೆ।

ಹೆಡೆಹೊನ್ನಿನ
ನಾಗಗಳು
ಗೆಡೆಗೊಂಡು ಕುಣಿದವು ಕೊಳಲೂದಲು

ಮಿಡಿಮೂಡಲು
ಮಾವುಗಳು
ಹಡೆದವು ನುಣ್ಚರ ಪಿಕಹಾಡಲು!
ಪ್ರಕೃತಿಯಲಿ
ಸುಕೃತಿ ಸೇರೆ
ಅಕೃತಕವೆನಿಸುವ
ಹೊಗರೇಳುಗು
ಪ್ರಕೃತ ಕಾಗಿ
ವಿಕೃತ ಗೈಯೆ
ದುಷ್ಕೃತದಪರೂಪ ಮೈದಾಳುಗು!

ತೋಳಿರಲು
ತಾಳಿಯೆಲ್ಲಾ
ಬಾಳಿನ ಜಡ ಅಗ್ನಿಮೀಳೆಗಳ
ನಾಳೆಬರೆ
ಗಾಳಿಕರೆ
ಮೇಳಿಸುಗುಲಿಯಲು ತಾಳೆಗಳ!

✻ ✻ ✻

ಕಂಟಕಾರಿ ಮಹಾಕಾವ್ಯಂ

‘ಕಂಟಕಾರಿ ಮಹಾಕಾವ್ಯಂ’ ವರ್ತಮಾನದ ಒಂದು ಪ್ರಖರ ವಿಡಂಬನೆ

‘ಕಂಟಕಾರಿ ಮಹಾಕಾವ್ಯಂ’ ಎಂಬುದು ಕನ್ನಡದ ಹೆಸರಾಂತ ಲೇಖಕರಾಗಿದ್ದ ಬಿ.ಎಚ್.ಶ್ರೀಧರರ ಒಂದು ಕಾವ್ಯಕೃತಿಯಾಗಿದೆ. ಇದರ ಹೆಸರೇ ಸೂಚಿಸುವಂತೆ ಇದೊಂದು ವಿಡಂಬನ ಕಾವ್ಯ. ಇದನ್ನು ‘ವಿಡಂಬನೆ’ ಎನ್ನುವುದಕ್ಕಿಂತ ‘ಕಟಕಿ’ ಎಂದರೆ ಸೂಕ್ತವಾಗುತ್ತದೆ. ಈ ‘ಕಟಕಿ’ ವರ್ತಮಾನದ ಸಾಮಾಜಿಕರನ್ನು ಕುರಿತಾಗಿದೆ. ಸಾಮಾಜಿಕರನ್ನೊಳಗೊಂಡಿರುವುದಾದರೂ ಅದರ ಕೇಂದ್ರಸ್ಥಾನ ರಾಜಕೀಯ. ಅಂದರೆ ಕೆಟ್ಟ ರಾಜಕೀಯವಾಗಿದೆ.

ಹೀಗೆ ರಾಜಕೀಯ ಮತ್ತು ಸಾಮಾಜಿಕವಾದ ವಿಡಂಬನೆಯ ಪರಂಪರೆ ಹೊಸದಲ್ಲ. ನಮ್ಮ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇಂದಿನ ತನಕವೂ ಅಂಥ ಪರಂಪರೆಯನ್ನು ಬೆಳೆಸಿದೆ. ಅಂತ ಪರಂಪರೆಯ ಪುಷ್ಟಿ ಪಡೆದುಕೊಂಡೇ ಬಂದದ್ದು ‘ಕಂಟಕಾರಿ ಮಹಾಕಾವ್ಯಂ’.

ಕವಿಗೆ ಸಮಾಜದೊಡನೆ, ಮುಖ್ಯವಾಗಿ ರಾಜಕೀಯದೊಡನೆ ಉಂಟಾದ ಬಿರುಕು ಮತ್ತು ಬರ್ಬರ ಬದುಕು ಪಡೆದುಕೊಳ್ಳಬಹುದಾದ ಒಂದು ಪ್ರಕಾರ ಈ ವಿಡಂಬನೆ ಗಂಭೀರ ವಸ್ತುವನ್ನು ಹಗುರವಾಗಿಯೇ ಸಮಾಜವನ್ನು ಲೇವಡಿ ಮಾಡುವುದರ ಮುಖಾಂತರ ನಗೆ ಚಿಮ್ಮಿಸುವ ರೀತಿ ಇದು. ಆದರೆ ಈ ನಗೆ ಕೇವಲ ಮನೋರಂಜನೆಯ ವಸ್ತುವಾಗಿರದೇ ಅದರ ಒಡಲಲ್ಲಿ ಸಾಮಾಜಿಕರಿಗೆ ತಿಳಿಗಣ್ಣನ್ನು ಕೊಡುವ ಆಶಯ ಇದ್ದೇ ಇರುತ್ತದೆ. ಅಂತಹ ಒಂದು ಕಾವ್ಯ ‘ಕಂಠಕಾರಿ ಮಹಾಕಾವ್ಯ’ ಎಂದು ಹೇಳಿ ಬಿಟ್ಟರೆ ಮಾತ್ರ ಸಾಲದು; ವರ್ತಮಾನದ (ಇದರ ಪ್ರಕಟಣೆ ೧೯೮೧) ವಿಕಾರಕ್ಕೆ ಹಿಡಿದ ಪ್ರಖರವಾದ ವಾಗ್ರೂಪವಾಗಿದೆ ಎನ್ನಬೇಕು ಮತ್ತು ರಾಜಕೀಯ ವಿಡಂಬನೆಯಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ.

ಇದರಲ್ಲಿ ಹತ್ತು ಸರ್ಗಗಳಿವೆ. ಇದು ವಿಡಂಬನಾ ಕಾವ್ಯವಾಗಿದ್ದು ಮಹಾಕಾವ್ಯದ ಅಣಕು ಕೂಡ ಹೌದು. ಆದ್ದರಿಂದ ಇದು ಸರ್ಗಗಳಿಂದ ವಿಂಗಡಿಸಲ್ಪಟ್ಟಿದೆ. ನಾಸಪ್ರಜ್ಞಾ ವಿಲಾಸ, ಜಿಹ್ವ ಪ್ರಜ್ಞಾ ವಿಲಾಸ ಹೀಗೆ ಕರ್ಣ, ನೇತ್ರ, ಮುಖ, ಕುಂತಲ, ಕಂಠ, ನಖ, ಪೃಷ್ಠ ಮತ್ತು ವಿಚಿತ್ರ ಪ್ರಜ್ಞಾ ವಿಲಾಸವೆಂಬ ಸರ್ಗಗಳಿವೆ.

ಕನ್ನಡ ಓದುಗರಿಗೆ ಗೊತ್ತಿರುವ ಸಂಗತಿ ಎಂದರೆ ಶ್ರೀಧರರ ಭಾಷೆ ಸಂಸ್ಕೃತ ಭೂಯಿಷ್ಠವಾದುದು. ಆದರೆ ಅದು ಇಲ್ಲಿ ಅವರ ಉದ್ದೇಶಕ್ಕೆ ತಕ್ಕಾಗಿ ಬಂದಿದೆ. 'ನಾಸ ಪ್ರಜ್ಞಾ ವಿಲಾಸ' ಎಂಬ ಹೆಸರನ್ನೇನೋ ನೋಡಬಹುದು. ಇದನ್ನು ಮೂಗಿನ ಆಟ ಎಂದೋ, ಮೂಗಿನ ಅಲಂಕಾರ ಎಂದೋ ಮಾಡಿದ್ದರೆ ಅದರ ಭಾವವೇ ಕೆಟ್ಟುಹೋಗುತ್ತಿತ್ತು. ಹಾಗೆಂದೊಡನೆ ಅವರಿಗೆ ಕನ್ನಡದ ಕೊರತೆ ಏನೂ ಇಲ್ಲ. ಬಹಳ ಸುಂದರವಾದ ನ್ನಡದ ಪರಿಣತಮತಿ ಕೂಡ ಅವರದ್ದು ಎಂಬುದಕ್ಕೆ ಇಲ್ಲಿ ಉದಾಹರಣೆಗಳಿವೆ.

ಗೊರೆಮೂಗಿನ ನಿದ್ರೇಶ್ವರಿ
ಧರೆಯಂ ಪಾಲಿಸುವ ಪರಿಯನಿ ವೀಕಿಸಲೀಗಳ್
ತೆರೆಗಂಗಳಿಂದೆ ಪೋಪಂ
ಸಿರಿಸರಸತಿ ಸತಿಯರಿರ್ಕೆ ಮೂಗಿನ ತುದಿಯೊಳ್

ಎಂದು ಕಾವ್ಯ ಪ್ರಾರಂಭವಾಗುತ್ತದೆ. ಹೀಗೆ ಪ್ರಾರಂಭವಾಗುವ ಕಾವ್ಯದ ಭಾಷೆಯನ್ನು ನೋಡಿ ಇಡೀ ಕಾವ್ಯದ ಭಾಷೆಯೇ ಇದೆಂದು ತಿಳಿಯಬೇಕಿಲ್ಲ. ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ಆಂಗ್ಲಗನ್ನಡ ಇತ್ಯಾದಿ ಎಲ್ಲದರ ಬಳಕೆಯೂ ಇದೆ. ಆಯಾ ಭಾವ ವಿಲಾಸಕ್ಕೆ ಅಥವಾ ವಿಡಂಬನಾಭಿವ್ಯಕ್ತಿಗೆ ತಕ್ಕ ಹಾಗೆ ಭಾಷೆ ಮೈದೋರುತ್ತದೆ.

ಭಾಷೆಯಲ್ಲಿ ಮಾತ್ರವಲ್ಲ, ಇಲ್ಲಿ ಬೇರೆ ಬೇರೆ ಛಂದಸ್ಸಿನ ರಚನೆಯಿದೆ. ಕಂದ, ವೃತ್ತ, ಷಟ್ಪದಿ, ಸಾಂಗತ್ಯ, ಮುಕ್ತಛಂದ ಹೀಗೆ ರಚನೆಗಳಿವೆ. ಮತ್ತು ಈ ರಚನೆಗಳು ಕೇವಲ ಆಯಾ ಛಂದಸ್ಸಿನ ಧಾಟಿಯನ್ನು ಮಾತ್ರ ಹಿಡಿದು ಬೆಳೆಸಿದ್ದಲ್ಲ. ಈ ಎಲ್ಲ ಛಂದಸ್ಸಿನ ರಚನೆ ಪರಂಪರೆಯ ರಚನೆಗೆ ಸರಿಯಾಗೇ ಅನುಸರಿಸಿದೆ. ಇಲ್ಲಿಯ ಹೆಚ್ಚಿನ ರಚನೆಗೆ ಅನ್ವಯಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಈ ರೀತಿಯಲ್ಲಿ ಶ್ರೀಧರರಿಗೆ ವಿವಿಧ ಛಂದಸ್ಸಿನ ಮೇಲೆ ಇರುವ ಹಿಡಿತವೇ ಬೆರಗುಗೊಳಿಸುತ್ತದೆ.

ಶ್ರೀಧರರ ಹತ್ತಿರದ ಸಂಪರ್ಕ ಉಳ್ಳವರಿಗೆ ಗೊತ್ತು ಶ್ರೀಧರರು ಸಂವಾದ – ಸಂಭಾಷಣೆಯಲ್ಲು ಬಳಸುವ ಭಾಷೆಯಲ್ಲಿ ಚುಚ್ಚುವ ದಬ್ಬಣ ಅಡಗಿರುತ್ತದೆಂದು. ಅಂಥ ಹರಿತ ಚುಚ್ಚುವಿಕೆ ಅವರದ್ದಾದ್ದರಿಂದಲೇ ಇದು ಕೇವಲ ವಿಡಂಬನೆಯಾಗದೆ 'ಕಟಕಿ' ಆಗಿದೆ. ಅವರ ಹಾಸ್ಯ ಪ್ರಜ್ಞೆಗೆ ಒಂದು ಉದಾಹರಣೆ,

ಗಂಡಹೆಂಡತಿಯರೆದುರುಬದುರಾಗಿ
ಮಂಡೆ ಹಾಕಲು ಮುತ್ತಿಡೆ
ಪುಂಡು ಮೂಗುಗಳು ಅಡ್ಡ ಡಿಕ್ಕಿಹೊಡೆ
ದುಂಡವರನು ನಗಿಸವೇ?

ಇಲ್ಲಿಯ ವ್ಯವಹಾರವನ್ನು ಹೀಗೆ ನಿರೂಪಿಸುತ್ತಾರೆ.

'ಗುಡ್ ಮಾರ್ನಿಂಗ್' ಎಂಬುದು ಮೂಗೊಳದನಿ ಪ್ರತಿನಿತ್ಯ
'ಬೆಡ್‌ರೂಂ ಪ್ರಾಮಿಸಸ್' ಸಚಿವಾಲಯದೊಳ್ ಸ್ತುತ್ಯ
'ಹೆಡ್ ಹಂಟಿಂಗ್' ಗುಣವೆದೆಯೋಳ್ ನೌಕರ ಜನರಲ್ಲಿ
'ರೆಡ್ ನೋಸರ್ಸ್ ಡೆಡ್ ಟೇಪಿಸ್ಟ' ಗ್ರೇಸರರಿಲ್ಲಿ"

ಕವಿರಾಜ ಮಾರ್ಗದಲ್ಲಿ ಕನ್ನಡಿಗರ ವರ್ಣನೆ ಹೀಗಿದೆ.

ಪದನರಿದು ನುಡಿಯಲು ನುಡಿ
ದುದನರಿದಾರಯಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್

'ಕಂಟಕಾರಿ ಮಹಾಕಾವ್ಯಂ' ಅಣುಕು ಕಾವ್ಯವನ್ನು ಒಳಗೊಂಡಿರುವುದು ಅನೇಕ ಉದಾಹರಣೆಗಳಿಂದ ಕಾಣುತ್ತೇವೆ. ಇದರ ಅಣುಕು ಪದ್ಯವಾಗಿ ಕನ್ನಡಿಗರ ಗುಣವರ್ಣನೆ 'ಕಂಟಕಾರಿ ಮಹಾಕಾವ್ಯಂ'ದಲ್ಲಿ ಹೀಗೆ ಬಂದಿದೆ.

ಈ ನಾಡವರ್ಗಳ್ ಚಪಲರ್
ಪಾನಪ್ರಿಯ ಪರಮ ರಸಿಕ ಭೋಗಾತ್ತಫಲರ್
ದನದ ದೋಸೆಗೆ ದುಡಿವ
ಶ್ವಾನಾಧಿಕ ಮಾನರತ್ಯಧಿಕ ಮಡಿವಂತರ್

ಇದರ ಛಂದಸ್ಸು ಮೂಲಕ ನಿಯಮವನ್ನೇ ಅನುಸರಿಸಿದೆ. ಆದರೆ ಮೊದಲದರ ಗಂಭೀರ ಚರ್ಯೆಯನ್ನೇ ವಿಡಂಬನೆಗೊಳಪಡಿಸಲಾಗಿದೆ. ಆದರೆ ಇದು ಕೇವಲ ವಿಡಂಬನೆಯಲ್ಲ. ಕವಿಯ ಪಾಲಿಗೆ ವಾಸ್ತವ ಕೂಡ. ನಮನಿಮಗೆ? ಎಲ್ಲರಿಗೂ ವಾಸ್ತವವೇ ಅಲ್ಲವೇ?

ಇಲ್ಲಿಯ ಆಡಳಿತವನ್ನು ವಿಡಂಬಿಸಿದ ರೀತಿ ಇದು.

ದೋಸೆಗಳ ತಿಂಬವರು ಕೆಲಕೆಲವರಾದರೆ
ಆಸೆ ತೀರಿಸಲಿಡಲಿಗಳ ಕೆಲರು
ಲೇಸಿಗೆಂದೇ ಪ್ರಜೆಗಳಿಂದಾ
ಕೇಸರಿಯಭಾತನ್ನು ಕಸಿವರು –
ನೇಸೊಕೊಂಬರು ಜೊತೆಗೆ ಕಾರ್ಯದಿ

ಕುಮಾರವ್ಯಾಸನ ವಿರಾಟಪರ್ವದಲ್ಲಿಯ ಉತ್ತರನ ಪೌರುಷವನ್ನು ಹೇಳುವ ಪದ್ಯದ ಅಣುಕು ರಚನೆ ಇದಾಗಿದೆ. ಅಲ್ಲಿ,

> "ಆರೊಡನೆ ಕಾದುವೆನು ಕೆಲವರು
> ಹಾರುವ'ರು ಕೆಲವರಂತಕನ ನೆರೆ
> ಯಾರವರು ಕೆಲವರಧಮ ಕುಲದಲಿ ಸಂದು ಬಂದವರು'

ಮುಂತಾಗಿ ಇರುವುದನ್ನು ಗಮನಿಸಬಹುದು. ಆದರೆ ಇಲ್ಲಿ ಭಾಷಾಲಯದಲ್ಲಿ ಮಾತ್ರ ಅನುಸರಣೆಯಿದೆ. ಮೂಲ ಷಟ್ಪದಿ ರಚನೆಯಲ್ಲಿ ಇಲ್ಲ. ಇಂಥವು ಅನೇಕ ರಚನೆಗಳಿವೆ. ಅದೇನಿದ್ದರೂ ಇದೊಂದು ಅಣುಕು ರಚನೆಯೇ, ಹಾಗಿದ್ದಾಗಲೂ ಅದು ಇಲ್ಲಿ ಇಡಿಯ ಬಂಧದ ಬೆಳವಣಿಗೆಗೆ ಪೂರಕವಾಗಿ ರೂಪ ಪಡೆದಿದೆ.

ಕರ್ಣಪ್ರಜ್ಞಾ ವಿಲಾಸ ಸರ್ಗದಲ್ಲಿ ಬರುವ ಈ ಪದ್ಯವನ್ನು ನೋಡಿ.

> 'ಆ ಅದೂ ಕೇಳದೀ ಇದೂ ಕೇಳದೊ ಉದೂ ಕೇಳದೀಗ
> ಯಾವುದೂ ಕೇಳದಮಲೇರಿದಂಥ ಕಿವಿಗಳಿಗೆ ಶಾಂತಿಯೋಗ
> ಹಾವನೂ ಮೀರಿಸಿದ ಶಬ್ದವಿಮುಖರಧಿಕಾರದರ್ಪದಲ್ಲಿ
> ಬೇವನ್ನು ತಿಂದು ಬದುಕುವುದಕಂಜಿದರೆ ಕೊರಳಿಗೊಂದೆ ಬಳ್ಳಿ'

ಆಳುವವರೂ ಕರ್ಣ–ಕಿವಿ–ಸಂಪೂರ್ಣವಾಗಿ ಕೆಪ್ಪಾಗಿ ಹೋಗಿದೆ. ನಾಗರಿಕರ ಕಷ್ಟ ಕೋಟಲೆಯಾಗಲಿ, ಗೌಜು ಗದ್ದಲವಾಗಲಿ ಕೇಳುವಂತಿಲ್ಲ. ಅಂತಹ ಸಂದರ್ಭದಲ್ಲಿ ನಾಗರಿಕರ ಕೊರಳಿಗೆ ಬಳ್ಳಿ–ನೇಣು–ಅಲ್ಲದೆ ಮತ್ತೇನು ಎಂಬ ಭಾವ.

ಇದು ಕೂಡ ಒಂದು ಮೂಲ ರಚನೆಯ 'ಅಣಕ'ವೆಂದೇ ತೋರುತ್ತದೆ. ದ.ರಾ.ಬೇಂದ್ರೆಯವರ 'ಜೋಗಿ' ಕವಿತೆಯ ಸಾಲನ್ನು ನೋಡಿ.

> 'ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
> ಹಳ್ಳ ಅಡಗಿ ಹರಿದಲ್ಲಿ ತುಡುಗುಟುರ ತೊಂಡುಮೇಯುವಲ್ಲಿ
> ದಿಕ್ಕು ತಪ್ಪತಾರ ತಪ್ಪಿ ಹೊಕ್ಕರೇ s ಕಕ್ಕಾವಿಕ್ಕಿಯಾಗಿ
> ಇರುಳ ಅಂತನ s ಹಗಲ s ಗೂಕುತಾವ ಅಲ್ಲಿ ಜೋಡ ಗೂಗಿ'

ಇಲ್ಲಿಯ ಕನ್ನಡ ಆಡು ಮಾತಿನ ಲಯ ಮತ್ತು ಆತ್ಮೀಯತೆ ಶ್ರೀಧರರ ರಚನೆಯಲ್ಲಿ ಸೂರೆ ಹೊಡೆಯಲಾಗಿದೆ. ಅಲ್ಲದೇ ಅದು ಒಂದು ಬಗೆಯ ಆಧ್ಯಾತ್ಮದ ನಿರೂಪಣೆಯ ಮುಖವಾಡವನ್ನು ಹಾಕಿಕೊಂಡಿದೆ. ಸದ್ದನ್ನೇ ಕೇಳಲಾರದ ಕೆಪ್ಪು ಕಿವಿಗೆ 'ಶಾಂತಿಯೋಗ'ವಲ್ಲದೇ ಮತ್ತೇನು? ಅಲ್ಲಿ ಆಧ್ಯಾತ್ಮದ ದಿಗಿಲು (ರಾತ್ರಿಯೆಂದೇ

ತಿಳಿದು ಹಗಲು ಸಹ ಗೂಗೆ ಕೂಗುವಷ್ಟು ದಿಗ್ಮೂಡ, ಭಯಾನಕ–ಅಪರಿಚಿತತೆ, ಮುಸುಕಿದೆ. ಅದು ವಾಸ್ತವವೂ ಹೌದಾಗಿ ಆಧ್ಯಾತ್ಮವನ್ನು ಧ್ವನಿಸುತ್ತದೆ. ಇಲ್ಲಿ ಶಬ್ದವಿಮುಖರ ಅಧಿಕಾರದಲ್ಲಿ ಕೊರಳಿಗೆ ನೇಣೇ ಗತಿಯಾಗಬಹುದಾಗಿದೆ. ಅಂದರೆ ಜೋಗಿ ಕವನದ ದರ್ಶನವನ್ನು ಇಲ್ಲಿ 'ಅಣಕವಾಡ'ನ್ನಾಗಿ ಮಾಡಿದಂತಿದೆ.

ಇಲ್ಲಿಯ ನೇತಾರರು–

ಮಾತಿಂದ ಕಲ್ಯಾಣ ರಾಜ್ಯಮಂ ಕಟ್ಟುವರ್
ಮಾತಿಂದ ಸರ್ವಸಮತಾ ರಾಜ್ಯಮಂ ಕಟ್ಟಿ
ಮಾತಿನಿಂದಲೇ ಪ್ರಜೆಗಳಂ ಪ್ರಭುಗಳೆಂದುಸುರಿ
ತಮ್ಮ ಬೇಳೆಯ ಬೇಯಿಸಿ.....

ಅದರಂತೆ

ಮಾತಿನಿಂ ಕೊಳಚೆಯಂ ತೆಗೆವರ್ ಕರಂಗಳಂ
ಮಾತಿನಿಂದಿಳಿಸಿ ದರಗಳನೆಲ್ಲ ದುರ್ಜನರ ಮಾತಿನಿಂದೇ ಶಿಕ್ಷಿಸಿ
ವಾತಾಯನದ ಹಾಗೆ ದೇಹಕ್ಕೆ ಬಾಯ್ ಎಂದು
ಸೋತರು ಗೆದ್ದ ನಾನೇ ಎಂದು ಬಗೆವರ್‌ದುರ್
ಯೂಥ್‌ಪರ್ ರಾಜಕಾರಣ ಪಟುಗಳೀ ಪ್ರಜಾರಾಜ್ಯದೋಳ್ ಮೆರೆಯುತಿರ್ಪರ್'

ಈ ಮಾತಿನ ಮಹಿಮೆಯನ್ನೇ ನಾವು ಸ್ವಾತಂತ್ರ್ಯ ಸಿಕ್ಕಿ ಐವತ್ತು ವರ್ಷ ಕಳೆದಮೇಲೂ ನೋಡುತ್ತೇವಲ್ಲ? ದಲಿತೋದ್ಧಾರ, ಗರೀಬಿ ಹಠಾವೋ ಇತ್ಯಾದಿಗಳ ಹೆಸರಿನಲ್ಲಿ ಮಾತಿನಮಳೆಯನ್ನೇ ನಮ್ಮ ಮೇಲಾದರೂ ಸುರಿಸಿರುವ ಹಿನ್ನೆಲೆಯಲ್ಲೇ ಮೇಲಿನ ಪದ್ಯವನ್ನು ಗ್ರಹಿಸಿದಾಗ ಹೇಗೆ ವರ್ತಮಾನವೇ ವಿಡಂಬನೆಯಾಗಿದೆ ಎಂದು ಅರ್ಥವಾಗುತ್ತದೆ.

ಪುಲಿಕೇಶಿಗಳ್, ಕೆಲರ್ ನರಿಕೇಶಿಗಳ್
ಕರಡಿಕೇಶಿಗಳನಿಬರರೆಬತ್ತಲಾಗಿರುವ

ಲಲನೆಯರ ಕೊರಳಸುತ್ತಲ್ ಬೆಳೆಸಿಕೊಂಡಿರುವ ನೀಳಕುಂತಳದಾಮರು ಎಂದು 'ಕೇಶ ಪ್ರಜ್ಞಾವಿಲಾಸ' ಸರ್ಗದಲ್ಲಿ ವರ್ಣಿಸುತ್ತಾರೆ.

ನಖಧರ್ಮಂ ಬರಗುವುದೇ
ಶಿಕಾರಿ ಶೂರರ್ಗೆ ನಖಮುಖೇಶ್ವರಿಯಡಿಯೋಳ್
ಅಖಿಲಮನರ್ಪಿಸಿ ಸುಖಿಸುವ
ವಿಕಾರಿಗಳ್ ಪ್ರಾಧಿಕಾರಿಗಳ್ ಗತಲಜ್ಜರ್

ಎಂದು 'ನಖಪ್ರಜ್ಞಾವಿಲಾಸ'ದಲ್ಲಿ ಹೇಳುತ್ತಾರೆ. ನಖಧರ್ಮಂ ಎಂಬ ಗಂಭೀರ ಸಮಾಸಪದದ ಮುಂದುವರಿಕೆಯಾಗೇ 'ಬರಗುವುದೇ' ಪ್ರಯೋಗದಿಂದ ಒಂದು ವಿಕಟ ವಿನೋದ ಹುಟ್ಟುತ್ತದೆ.

ಪೃಷ್ಠ ಪ್ರಕಟನ ಚತುರರ್
ಪೃಷ್ಠ ಪರಾಕ್ರಮಿಗಳಿದ್ದ ಗದ್ದುಗೆ ಬಿಡದ
ಪಟ್ಟಾಭಿರಾಮರಾದರ್
ನಷ್ಟಕ್ಕುಳಿದೆಲ್ಲ ಪೃಷ್ಠರೇಖಾಹೀನರ್

ಎಂದು ನಮ್ಮ ನೇತಾರರನ್ನು ವಿಡಂಬಿಸಿದರೆ,

ಮುಖಪೃಷ್ಠಂ ನಖಪೃಷ್ಠಂ ತುಂದಿಲತ್ವ ಪೃಪೃಷ್ಠತಾ
ಶುಕಂ ಹತ್ವಾ ಪಿಕಂ ಹತ್ವಾ ಶಾಸ್ತ್ರಿರಾಜ್ಯಂಸುಪೃಷ್ಠವಾನ್

ಎಂದು ಆಡಳಿತವನ್ನು ವರ್ಣಿಸುತ್ತಾನೆ.

ಕೇವಲ ರಾಜಕೀಯ ನೇತಾರರ ವಿಡಂಬನೆಯಲ್ಲದೆ ಬುದ್ಧಿಜೀವಿಗಳ ಕವಿ ಕಲಾವಿದರ ವಿಡಂಬನೆಯೂ ಇದೆ. ಆದರೆ ರಾಜನೇ ಕಾಲಕ್ಕೇ ಕಾರಣ. ಎಂಬ ನಂಬಿಗೆಯೇ ಇದಕ್ಕೆ ಹಿನ್ನೆಲೆಯಾಗಿರುವುರು ರಾಜಕಾರಣದ ವಿಸ್ತಾರವೇ ಹೆಚ್ಚಾಗಿರುವುದಕ್ಕೆ ಕಾರಣ. ಅದರ ಹಿನ್ನೆಲೆಯಲ್ಲೂ ಬೇಕಷ್ಟು ನಿರುಪದ್ರವಿ ವಿಡಂಬನೆ ಕೂಡ ಇಲ್ಲಿ ಇದೆ. ಪ್ರಖರವಾದ ವರ್ತಮಾನದ ವಿಡಂಬನೆ ಇದಾಗಿದ್ದು ವರ್ತಮಾನದಿಂದ ದೂರವನ್ನು ಸಾಧಿಸಿರುವುದು ಇಲ್ಲಿಯ ಕಲಾತ್ಮಕತೆಯ ಹೆಚ್ಚಳವಾಗಿದೆ. ಶ್ರೀಧರರ ಸೃಜನಶೀಲ ಕೃತಿಯಲ್ಲಿ 'ಕಂಟಕಾರಿ ಮಹಾಕಾವ್ಯ'ಕ್ಕೆ ಗಣನೀಯ ಸ್ಥಾನವಿದೆ.

ಆರ್.ವಿ.ಭಂಡಾರಿ

I

ನಾಸಪ್ರಜ್ಞಾವಿಲಾಸವೆಂಬ ಒಂದನೆಯ ಸರ್ಗ

The world of Nosiles

ಗೊರೆಮೂಗಿನ ನಿದ್ರೇಶ್ವರಿ
ಧರೆಯಂ ಪಾಲಿಸುವ ಪರಿಯನೀಕ್ಷಿಸಲೀಗಳ್।
ತೆರೆಗಂಗಳಿಂದೆ ಪೋಪಂ
ಸಿರಿ ಸರಸತಿ ಸತಿಯರಿರ್ಕೆ ಮೂಗಿನ ತುದಿಯೊಳ್
॥೧॥

ಗಿಣಿಮೂಗು ರಾಣಿಗೂ ಗಿಣಿಮೂಗು ಮಂತ್ರಿಗೂ
ಗಿಣಿಮೂಗು ಸಂರಕ್ಷಣಾಧಿಪತಿಗೂ।
ಫಣಿ ಮೂಗು ನೌಕರರ ಮುಖ್ಯರೆಲ್ಲವರಿಗೂ
ಫಣಿವೇಣಿಯರ ಪಣ್ಯ ಪುಣ್ಯ ಮುಖಕೂ ॥೨॥

ಹೋಗುವ ದಾರಿಯು ಮೂಗಿನ ನೇರಂ
ಕಂಡದ್ದನ್ನೇ ಕಾಂಬುದು ವೀರಂ
ಹೇಗಾದರು ಆದರೆ ಸರಿ ಕಾರ್ಯಂ
ಹೋಗೆಂದರೆ ಹೋಗದ ಹುಡಿ ಧೈರ್ಯಂ ॥೩॥

ಸೊಂಡಿಲಿಗದೂರು ನೋಡು–ಆದರೇಂ?
ಥಂಡಿಯಾದವರ ಪಾಡು!
ಪಂಡರಾಪುರದ ಪ್ರೇಮ–ವಿಟ್ಠಲಗೆ
ಉಂಡುಳಿದುದೊಗೆವ ನೇಮ ॥೪॥

ಗಂಡ ಹೆಂಡತಿಯರೆದುರು ಬದುರಾಗಿ
ಮಂಡೆ ಹಾಕಲು ಮುತ್ತಿಡೆ।
ಪುಂಡು ಮೂಗುಗಳು ಅಡ್ಡ–ಡಿಕ್ಕಿ ಹೊಡೆ–
ದುಂಡವರನೂ ನಗಿಸವೇ? ॥೫॥

ಅಲಸರ್ ಕೆಲಸಿಗರೆಲ್ಲರ್
ನೆಲಬರನಾಸರ್ ಗಜಾನನ ಪ್ರತಿಮಾನರ್।
ತೊಳಸಂಬಟ್ಟೆಯ ದಾರಿಗ–
ರೆಳೆಲಿಂಬೆಯ ಕಾಯಿಗಳ್ ಮಹೀಶೂರರ್ಕಳ್ ॥೬॥

ಅತ್ತರ್–ಸ್ನೋ–ಪೌಡರ್–ಸಿಲ್ಕ್–
ವಸ್ತ್ರ ಪ್ರಮದಾ ವಿಲಾಸ ವಿಟವೇಷಗಳೇ।
ಷಟ್ ಶಾಸ್ತ್ರವಿದರ ನಾಡೊಳ್
ಸುಸ್ತಂ ಬರಿಸುವುವು ಕಣ್ಗೆ ಕಮನೀಯತೆಯಿಂ
॥೭॥

"ಗುಡ್‌ಮಾರ್ನಿಂಗ್" ಎಂಬುದು ಮೂಗೊಳದನಿ ಪ್ರತಿನಿತ್ಯ
"ಬೆಡ್‌ರೂಂ ಪ್ರಾಮಿಸಸ್" ಸಚಿವಾಲಯದೊಳ್ ಸ್ತುತ್ಯ।
"ಹೆಡ್‌ಹಂಟಿಂಗ್" ಗುಣವೆದೆಯೊಳ್ ನೌಕರ ಜನರಲ್ಲಿ
"ರೆಡ್ ನೋಸಸ್ ರೆಡ್ ಟೇಪಿಸ್ಟ" ಗ್ರೇ ಸರ ರಿಲ್ಲಿ ॥೮॥

ಹಂಡೆಬಾಯಂಥ ಹೊಳ್ಳೆಗಳಿದ್ದರೂ ಮೂಗು
ಭಂಡತನದಿಂದೆಂಬ ವೊಲ್ ಸರ್ವದುರ್ಗಂಧ
ಹೊಂಡಗಳ ನಡುವಿದ್ದರೂ ದೂರದೀ ಜನರ
ಸಂಭಾವಿತಿಕೆಯ ಕಂಡು

ಚೆಂಡನಾಡಲು ದೇವತಾ ಯುವಕ ಯುವತಿಯರ್
ಹಂಡೆಗಟ್ಟಲೆ ಬಂಡವಾಳ ತಂದೊಯ್ಯುವರ್
ದುಂಡು ಮೇಜಿನ ಸುತ್ತ ಡಿವಿಡೆಂಡ್ ಹಂಚಿಕೊಂಡವರವರ
ಪಾಲಿನಂತೆ ॥೯॥

ಬಣ್ಣ ನೂರೆಂಟಿರುವ ತುದಿಗಳ
ಕಣ್ಣ ಕೋರಯಿಸುವ ಮಹಾ ನಾ–
ಸಾರ್ಣವವೊ ಎನೆ ತೋರುವುದು ಈ ಜನರ ಸಂಮೇಳ।
ಅಣ್ಣತನಕೆಲ್ಲವರು ಸಿದ್ಧ, ಪ–

ರಾನ್ನ–ಚಿನ್ನಗಳನ್ನೆ ಬಯಸುವ
ನಿರ್ಣಯಾತ್ಮಕ ಬುದ್ಧಿಯುಳ್ಳ ಪ್ರಜೆಗಳಾಂದೋಳ
॥೧೦॥

ಎಲ್ಲ ನೌಕರರಿಲ್ಲಿ ಕಲಿತಂಥ–ಅಧಿಕಾರಿಗಳ ಕೈ–
ಗೆಲ್ಲ ಗಮ್ಮಂಟಿಹುದು ನೋಟುಗಳ।
ಗಲ್ಲದಲ್ಲೆಣಿಸುತಿರೆ ಗ್ರಾಂಟಾ–
ದೆಲ್ಲ ಮೊತ್ತವ ಹಂಚುವಲ್ಲೊ–
ಹಲ್ಲು ಕಿರಿವರು ಮೂಗು ಮುರಿವರು
ಎಲ್ಲ ಹಣ ಬೇಕೆಂಬ ಜನರಿರೆ ॥೧೧॥

ಹಣದ ವಾಸನೆ ಹಿಡಿವ ಕಲೆಯಲ್ಲಿ–ಮೂಗಿಗರೆದುರು ಹೆ–
ಗ್ಗಣಗಳೂ ಸೋತಾವು ತಿರಿಯಿರಿವ।
ವ್ರಣದಿನುಪಜೀವಿಸುವ ಕೃಮಿಗಳ
ಬಣಗಳಂದದಿ ಜನರ ಜೇಬನು
ಚಣಚಣಕ್ಕೂ ಹಗುರುಗೊಳಿಸುವ
ವಿನಯ ತಂತ್ರಜ್ಞರಿಗೆ ಸಹಜವೊ ॥೧೨॥

ಎಲ್ಲರೂ ಸ್ವಾತಂತ್ರ್ಯರಸದವರು–ನೇತಾರರಲ್ಲೊ
ಗುಮ್ಮಗುಸುಕರೆ ಗಣ್ಯರಾಗಿಹರು।
ಎಲ್ಲ ವರ್ಗಗಳಲ್ಲು ಕವಿಗಳು
ಎಲ್ಲರಲ್ಲೂ ವಾದಿ–ವಾಗ್ಮಿಗ–
ಳೆಲ್ಲರೂ ಮೂಗುದ್ದ ಮಾಡಿಯೆ
ಸುಂಯೆನುವ ಮಾಧ್ಯಮವ ಹಿಡಿವರು ॥೧೩॥

ಲಂಬನಾಸಗೆ ಶೀನು ಬಂದರೆ ಕಂಬಗಳು ಬಿದ್ದುರುಳ್ವವು
ಲಂಬಿಸುವುದೇ ಕಾರ್ಯಗೌರವ, ಲಂಬ ಚರ್ಚೆಗಳೇಳ್ವವು।
ಕುಂಭಿನಿಯೊಳಿಹ ನುಸಿಯ ಬಗೆಗೂ ಕುಳಿತಕಡೆಯಲ್ಲೆಲ್ಲವೂ
ಹಂಬಲೆಂಬತಿ ತುಟ್ಟಿವಸ್ತುವ ಕಳಿಸದಾವ ವಿದೇಶವೂ ॥೧೪॥

ನಂಬಿಗೆಯ ಮರೆವವರು ಕೆಲವರು, ಮಾತಮರೆವವರನ್ಯರು
ತಂಬಿಗೆಯ ಮರೆವವರು ಬಯಲಿಗೆ ಹೋಗುವಾಗ ವದಾನ್ಯರು ।
ರಂಭೆ–ರಸ–ರವೆತಿಂಡಿಯೆದುರಿರೆ ಕೆಲಸ ಮರೆವವರಿತರರು
ಜಂಭದಲ್ಲೆಲ್ಲವನು ಮರೆವರು ಜೋರಿನಧಿಕಾರಸ್ಥರು ॥೧೫॥

ಕಣ್ಣಂ ಮರೆವರ್ ಕೆಲವರ್
ಕಿವಿಯಂ ಮೇಣ್ ಲಂಬನಾಸಿಕವನಿನ್ನನ್ಯರ್।
ಹಣ್ಣಂ ಹೂವಂ ಮರೆವರ್
ತಲೆಯನ್ನೇ ಮರೆವರಧಿಕ ಹೊಣೆಗಾರರ್ಕಳ್॥೧೬॥

ಹೃದಯವನನ್ಯರ್ ನೆನೆಯರ್
ವಿಧಿವತ್ತೆಯನನಿಬರೆಳ್ಚರದೊಳಿಡಲರಿಯರ್।
ವದನವನೀಕ್ಷಿಸದಿರ್ಪರ್
ಪದುಳಮನೆಣಿಸಿರ್ಪರನ್ಯಲಕ್ಷ್ಮೀಜಯದೊಳ್ ॥೧೭॥

ಕರ್ತವ್ಯವನು ಮರೆವ ರಡ್ಡ ಬಂದಿರೆ ನಾಸ
ಹರ್ತವ್ಯ ಕಣ್ಣೆದುರ್ ಕಾಣುತಿರೆ ಕಲ್ಪಿಸಿದ,
ವರ್ತಮಾನವ ಮರೆವರರ್ಥ ಚಿಂತನದೊಳಿರೆ, ಚಿತ್ತಕ್ಕೆ
ನಿಮಿನಿಮಿಷಕೂ।

ಪಥ್ಯವಾಗುವ ವಸ್ತು ಬೇರೆ ಬೇರೆ, ನಿರರ್ಥ
ಕೃತ್ಯದಲ್ಲರ್ಥಮಂ ಕಾಂಬ ಚತುರರ್ ರಾಜ್ಯ
ಭೃತ್ಯೋತ್ತಮರ್ ನೃತ್ಯಕೋವಿದರ್ ಸ್ತ್ರೀ ಪುನ್ನಪುಂಸಕರ್
ವರ್ತನೆಯಲಿ ॥೧೮॥

ಒಂದು ಸಭೆಯಲ್ಲೊಬ್ಬ ಮೂಗೆತ್ತಿ ಹೇಳಿದನು
ಬಂದ ಬಂದವರೆಲ್ಲ ಮೂಗಿಂದ ಕುಸ್ತಿಗೈ–
ವಂದ ಮಂ ತೋರಬೇಕೆಂದು ಆ ಜಂಗಿ ಕುಸ್ತಿಯ
ಬಗೆಯನೇವೊಗಳ್ವೆನು।

ಅಂದಾ ವಿಧಾನ ಸಭೆ ಹಾಕಿದ ವಿಧಾನವನು
ಮುಂದಿನೆಲ್ಲಾ ಸಭೆಗಳೂ ಪಾಲಿಸದವೆನಲ್
ನಿಂದು ನೋಡಿದ ವಿದೇಶೀಯ ರಾಯಸದವರ್ ಮೂಗಿನಲಿ
ಬೆರಳಿಟ್ಟರು ॥೧೯॥

ಜನಧನವ ಕಲ್ಲುಹರಳಂತೆ ಬೇಕಾದವರ
ತನಯಾದಿ ಬಾಂಧವರ ಖಾಸಗಿಯ ಬೊಕ್ಕಸಕೆ
ಎಣಿಸಿ ತೂರುವ ಯೋಜನಾವಳಿಯ ಮನಬಂದ ಹಾಗೆ
ನಡೆಸುತ್ತಲಿರುವ।
ಜನಸೇವೆಗೆಣೆಯುಂಟೆ ಪಾರ್ಲಿಮೆಂಟೀಶ್ವರರ
ಘನ ಮಹಾಘ್ರಾಣಮತಿ ತೊಗಲಖಿಸಲೆದ್ದುದಂ
ಪ್ರಣಿಧಾನದಿಂದರಿತ ವೈದೇಶಿಕರ್ ಗಡಿಯ ನಾಕ್ರಮಿಸಿದರ್ ಮೆಲ್ಲನೆ
॥೨೦॥

ಅನುಕೂಲವೊಂದೊಂದ ಕಸಿಯುತ್ತ ಮತ್ತವರ್
ಜನಪಾಲ ಮುಖ್ಯನುದ್ದಾಮ ನಾಸಿಕವನ್ನು
ಕೆಣಕಿ ಸಂತಯಿಸುತ್ತ ನಗುತಿದ್ದರೊಳಗೊಳಗೆ, ಸುರೆ ಕುಡಿಸಿ
ವಾರಾಂಗನೆ।
ಎಣೆಯಾಡಬಂದವನ ಹಣವ ಸುಲಿಯುವ ಹಾಗೆ
ದಣಿಸುತ್ತಲಿದ್ದರೂ ಸಹಮಂತ್ರಿಗಳು ಹೊಗಳಿ
ಬೆಣೆಕಿತ್ತು ದೇಶೀಯ ಜನರ ಬಾಲವ ಚಿಲ್ಲುಮಾಡಿ ಸಂತಸಬಟ್ಟರು
॥೨೧॥

ಮಾನವ್ಯ ಮುಖ, ಬುದ್ಧಿ ಕಪಿಯದದರೊಳಗೆ, ಮೇ–
ಲಾನವ್ಯ ನಿರ್ಗಂಧ ಮುಖನಾಸ ಮಾನಸದ
ಮಾನ ವಿಮುಖತೆಯ ಸೂಚಿಸುತಿರಲ್ ಶ್ವಾನಯುಗ ನಾನಾ
ಪ್ರಕಾರದಿಂದ
ಬಾನುಲಿಯ ಮೂಲಕ ಪ್ರಚುರ ಪಡಿಸಿದ ಮೂಗಿ–

ನಾಣತಿಯನೋದಿ ಕೇಳಿದ ಸುಂದರಾನನರ
ಶೀನು ಮೂಗಿಂದ ಮೂಲೋಕಮಂ ನಡುಗಿಸುಗು
ದೈತ್ಯಪ್ರಮಾಣದಿಂದ ॥೨೨॥

II

ಜಿಹ್ವಾಪ್ರಜ್ಞಾವಿಲಾಸವೆಂಬ ಎರಡನೆಯ ಸರ್ಗ

The WORLD of Liguiles

ಮಧುಪ್ರಭೃತಿ ಸಪ್ತಸಿಂಧುಗಳನು ಕಡೆದು ತೆಗೆದುದು
ಅದಮ್ಯ ಹೃತ್ತಾಪಹಾರಿ ವಿಧುಚಿಕಿತ್ಸೆಗೆಣೆಯಿದು।
ಪದಸ್ಥ ಸಂಗ್ರಹ್ಯವಾದ ಬುತ್ತಿಯೆನಿಸಿ ಮೆರೆವುದು
ಗದಾಗದ ಮಹೋಪದಾಖ್ಯ ಸುಧಾಸಾರ ಕರೆವುದು
॥೧॥

ದಶಮರಸವಾವುದೆನಲೀ
ಹೊಸರಾಜ್ಯದೊಳತ್ತಲಿತ್ತ ಶೋಧಿಸಿ ನೋಡಲ್।
ದೆಸೆದೆಸೆಗೆ ಮುರ್ಕಿ ಪರಿವ
ಪ್ರಶಸ್ತ ಲಂಚಂ ರುಚಿಜ್ಞರಿಗೆ ದೊರೆಕೊಳ್ಗುಂ
॥೨॥

ಈ ನಾಡವರ್ಗಳ್ ಚಪಲರ್
ಪಾನಪ್ರಿಯ ಪರಮರಸಿಕ ಭೋಗಾತ್ತಫಲರ್।
ದಾನದ ದೋಸೆಗೆ ದುಡಿವರ್
ಶ್ವಾನಾಧಿಕ ಮಾನರತ್ಯಧಿಕ ಮಡಿವಂತರ್ ॥೩॥

ಕತ್ತರಿಪೇಟಾ ಕುಡಿವುದು ಘೋಟಾ
ವಿತ್ತದ ಹಸಿವಿನ ಪಿತ್ತ ವಿರಾಟಾ।
"ಗಾಂಧೀ ಟೋಪೀ ಕುಡಿ ಬಿಳಿಕಾಫೀ"
ಎಂಬುದರರ್ಥವ ಹೇಳೋ ಪಾಪೀ ॥೪॥

ಅಂಗಣ್ಣಂ ನುಂಗಣ್ಣಂ
ಅಂಗಿಯ ತೆಗೆದಾಗಳರಸುದೊಳ್ಳಿನ ಸೊಬಗು।
ರಂಗಸ್ಥಳದೊಳಮುದ್ಧದ
ಚೆಂಗಾವಿಯ ಜಿಹ್ವೆ ಹನಿಸೆ ಲಾಲಾರಸಮಂ ॥೫॥

ಹಣ್ಣನ್ನಲ್ಲದೆ ಕೋರ್ಟಿನ
ಬಣ್ಣದ ಕಾಗದವನಿರದೆ ನುಂಗುವ ಜಾಣಂ।
ಅಣ್ಣರೊಳಣ್ಣಂ ನಾಡಿನ
ಕಣ್ಣೆಂದೇ ಪೂಜೆಗೆಯ್ವ ರಾಯತಜಿಹ್ವರ್ ॥೬॥

ಸಾಮಾನುಗಳಂ ತಿನ್ನುವ
ಸಾಮಾನ್ಯರ ಜೊತೆಗೆ ಲೆಕ್ಕಪತ್ರವ ತಿಂಬ।
ಗ್ರಾಮಣಿ ಬುದ್ಧಿಯ ನೌಕರ–
ಧಾಮಂ ಜಿಹ್ವಾಧಿನಾಥ ರಾಜ್ಯಸೋಮಂ ॥೭॥

ಜೋಲುನಾಲಿಗೆ, ತೇಲುನಾಲಗೆ, ಹಾಳುನಾಲಗೆ, ಕೀಳುನಾಲಗೆ
ಮಾಲುಗಳ ನಿದ್ದಲ್ಲೆ ನುಂಗುವ ಕಾಳನಾಲಗೆಯ।
ಶೀಲವಂತಿಕೆಯನ್ನು ಹೊಗಳುಗು ಚೂರುರೊಟ್ಟಿಯನೊಗೆದ ಕೂಡಲೆ
ಬಾಲದಂತಲ್ಲಾಡಿ ಲೀಲೆಯ ತೋರಿ ಬಗೆಬಗೆಯ ॥೮॥

ಹರಿತಿಂಬಂ ಹರ ತಿಂಬಂ
ದೊರೆ ತಿಂಬಂ ಧೂಮಕೇತು ತಿಂಬಂ ತಿರೆಯ।
ಕುರಿವಾನಿಸ ನೆಸಗಿದುದಂ
ಪರಮಾರ್ಥಮಿದಕ್ಕದಾವನಿದಿರ್ನುಡಿದಪನೋ! ॥೯॥

ಕುಲವ ನಾಲಗೆ ಯರುಹುಗು
ಬಲವ ನಾಲಗೆ ತಿಳುಹುಗು।
ಛಲವ ನಾಲಗೆ ತೋರುಗು
ಹೊಲವ ಬೇಲಿಗೆ ಮಾರುಗು ॥೧೦॥

ರಕ್ಷಿಗಳೆ ಭಕ್ಷಿಗಳು ರಾಜ್ಯದಿ, ಕುಕ್ಷಿವರ್ಧನ ಶಿಕ್ಷಣ
ಅಕ್ಷರವ ಬರೆವಾಗಳೂ ನುಂಗಾಟ ಸದಮಲ ಲಕ್ಷಣ।
ಮಕ್ಷಿಕಾಮುದ್ರಣವಿಚಕ್ಷಣ ಲೋಪಿಸುವ ಸಂಪತ್‌ಕ್ಷಣ
ಶಿಕ್ಷಕರ ಜಿಹ್ವೆಗಳ ಬಂಧಿಸಲಕ್ಕು ತೆತ್ತೂ ಬಲು ಹಣ ॥೧೧॥

ಜಿಹ್ವೆಯುದ್ಧವೆ ಮಾನ್ಯತಾಮಾನ–ಸಂಮೇಳನಗಳಲಿ
ಕಾಫಿತಿಂಡಿಯ ತಿಂಬುದೇ ತ್ರಾಣ।
ಬಹ್ವಜಗಳಿಹ ವನ ಕವಿದ ಗಿರಿ–
ಗಹ್ವರಗಳಲಿ ಬೆಳೆದ ಗಿಡದೊಳು
ಎಲ್ಲ ರೆಂಬೆಗಳಲ್ಲು ಸೊಪ್ಪೊಂ
ದಿಲ್ಲವಾಗುವುದಲ್ಲವೇ ಮಗು? ॥೧೨॥

ಬುಡತನಕ ನೆಕ್ಕಿರಲು ಬಡಜನದ–ಬಡಕೋಶವೆಲ್ಲವ
ಪಡೆಯಲದರಿಂದೀಯ ಬೇಕದಕೆ।
ಕೊಡುಗೆಗಳ ಸಾಲಗಳ ದಾನದ
ಹೆಡಗೆಗಳ ನೆಂಬಂಥ ಗಳಿಗೆಯೊ–
ಳೆಡಗಡೆಗೆ ಬೈತಿಟ್ಟು ಪಾಲನು
ಕೊಡುವ ಹೆನ್ನಾಲಗೆಗರಿರುವರು ॥೧೩॥

ದೋಸೆಗಳ ಲಗ್ಗೆಗಳ ತಿಂಬವರು–ಕೆಲಕೆಲವರಾದರೆ
ಆಸೆತೀರಿಸಲಿಡಲಿಗಳ ಕೆಲರು।
ಲೇಸಿಗೆಂದೇ ಪ್ರಜೆಗಳಿಂದಾ
ಕೇಸರಿಯಭಾತನ್ನು ಕಸಿವರು
ಬಾಸೆ–ಬಳಸದ "ಕೈಬಡಿಗೆ"ಗಳ
ನೇಸೊಕೊಂಬರು ಜೊತೆಗೆ ಕಾರ್ಯದಿ ॥೧೪॥

ನೆಕ್ಕಿ ಪಡೆವರು ಹೆಸರ ರತ್ನವ
ನೆಕ್ಕಿ ಪಡೆವರು ಹಾರಹೊರೆಗಳ
ನೆಕ್ಕಿ ಪಡೆವರು ಸ್ಥಾನಮಾನ ಮಹೋದ್ಯಮಾದಿಗಳ।
"ಲಿಕ್ ಎಬವ್" ಮೇಣ್ "ಕಿಕ್ ಬಿಲೋ" ಎಂ
ಬಕ್ಕಲಿಗತನದಿಂದ ರಾಜ್ಯದ
ಪಕ್ಕವನೆ ಮುರಿದಾಳುತಿಹರೀ ಜಿಹ್ವೆಯಾಳುಗಳು ॥೧೫॥

ಮಕ್ಕಳ ಮೊಮ್ಮಕ್ಕಳ ಜೀ
ವಕ್ಕೊಳಿತೆಂದಾಸ್ತಿ ಮಾಡುವುದಕಿತಿಮಿತಿಯೆ?
ನೆಕ್ಕಿಗರಾ ಲೆಕ್ಕಿಗರವ
ರಕ್ಕನ ಮನೆಗಂಟು ಜನರ ತೆರಿಗೆಯ ಮೊತ್ತಂ ॥೧೬॥

ಪುತ್ರೀ ಪುತ್ರಪ್ರೇಮದ
ಭಸ್ತ್ರಿಕೆಯಾ ಕಾಯವಡುಸುತಿರೆ ಹೆಮ್ಮುಪ್ಪಂ।
ಕುತ್ರಾಪಿ ದೇಶಚಿಂತೆಯ
ನೆತ್ತರ್ವನಿ ಕಾಣಸಿಗದು ವೈಶ್ಯಾವಳಿಯ ॥೧೭॥

ಕೊಳ್ಳುವ ಮಾರುವ ಹಂಚುವ
ದಲ್ಲಾಲಿಗಳೊಲ್ಲೆವೆಂಬರೇ ನಾ ಲಕ್ಷ್ಮಿ।
ಬೆಲ್ಲದವೊಲ್ ನಾಲಗೆಯೇರ್–
ದುಲ್ಲಾಸದಿನಿಳಿಯ ತೊಡಗೆ ಗಂಟಲಗುಳಿಯೊಳ್ ॥೧೮॥

ನೆಕ್ಕಿ ಕಂಡುದೆ ನನ್ನಿ, ನಂಬಲದೆ ಯೋಗ್ಯ
ನೆಕ್ಕಿ ಕೊಂಡುದೆ ಚಿನ್ನ ಆಭರಣಭಾಗ್ಯ।
ನೆಕ್ಕಿ ಮೈಗರಿವಾಗದಂತನ್ಯರೊಡವೆಗಳ
ದಕ್ಕಿಸಿದರವೆ ದಿವ್ಯವಾದ ಭೋಗ್ಯ ॥೧೯॥

ಮೇಲಿನವರೆಕ್ಕಡವ ನೆಕ್ಕುವ
ಮೂಲವಿದ್ಯೆಯ ದರ್ಪವಂತಿಕೆ
ಶೀಲವೀರಾಷ್ಟ್ರದಲಿ ಸೇವಾಯೋಗ ಹಿಡಿದವರ।
ನಾಲಗೆಯ ನೀಳ್ನಡತೆ ನಾಗರಿ–
ಕಾಲಯಗಳಲಿ ಮೆರೆಗು ಭೋಗಾಂ
ದೋಲಿಕಾರೂಢಪ್ರತಾಪದ ಮೇಲೆ ಮತ್ತುಂಟೆ? ॥೨೦॥

ಹತ್ತು ನಾಲಗೆಗಳನು ಹೊತ್ತವ–
ರೆತ್ತ ಹೋದರು, ನೂರು ಸಾವಿರ
ಹುತ್ತಗಳಿನೊಂದೊಂದು ಕಾಯದಿನೇಳ್ವ ಜಿಹ್ವೆಗಳ।
ಬಿತ್ತರದ ಬೀಸಾಟದಲಿ ತಲೆ–
ಯೆತ್ತಲೆಂತೊನ್ನಾಲಿಗೆಗ? ಸಾ–
ಯುತ್ತಲೇ ಬದುಕಿರುವ ಸ್ವಾರಾಜ್ಯಾನುಭವವಗೆ ॥೨೧॥

"ಮರಣಂ ಪ್ರಕೃತಿ; ಶರೀರಿಣಾಂ
ವಿಕೃತಿರ್ಜೀವಿತಮುಚ್ಯತೇ ಬುಧೈ:।
ಕ್ಷಣಮಪ್ಯವತಿಷ್ಠತೇ ಶ್ವಸನ್
ಯದಿ ಜಂತುರ್ನನು ಲಾಭವಾನಸೌ"
ಚಾಪೆನಾಲಗೆ–ಗೆರಿಸೆನಾಲಗೆಗಳುಳ್ಳವರ,

ಪಾಪಕಾಣದ ಹಾಗೆ ಚಪ್ಪರಿಸಿ ನುಂಗುವರ
ರೂಪಾತಿಶಯವ ಬಣ್ಣಿಸಲು ಬಂಗಾಲದಾ ಕಾಪಾಲಿಕನೆ ಶಕ್ತನು।
ಆಪತ್ತಿನಲ್ಲನ್ಯರಾನಂದವನು ಕಾಂಬ
ರಾಪಿಂದ ಗೌರವವ ಮೆರೆಯಿಸುವ ಶಕವಿದಹ
ಭಾಪು ಭಾಪೆನೆ ಚತುರ್ದಶಲೋಕದವರೆಲ್ಲ ದೀರ್ಘಜಿಹ್ವೆಗಳ
ಚಾಚಿ ॥೨೨।

III

ಕರ್ಣಪ್ರಜ್ಞಾವಿಲಾಸವೆಂಬ ಮೂರನೆಯ ಸರ್ಗ

The World of Audiles

ಚಾಡಿದೇವರ ಭಕ್ತರು ಉಂ
ಡಾಡಿಗಳ ಸಂಜಾತರು.
ಮಾಡಿದುದ ಮರೆತಿರುವರು–ಮಾ
ತಾಡಿದರೆ ಮುನಿದೇಳ್ವರು ॥೧॥

ಈ ಕರ್ಣರಾಜ್ಯದಲ್ಲಿ ಕಿವಿಗಲ್ಲದೆ ಕಣ್ಣಿಗೆ ಪ್ರಾಧಾನ್ಯವಿಲ್ಲ;
ಆದುದರಿಂದ–
ಧೃತರಾಷ್ಟ್ರರೆಲ್ಲರುಂ ಪರ–
ಹಿತದತ್ತಲ್, ಸ್ವಹಿತಮೊಂದೆ ಸತತಾರಾಧ್ಯಂ।
ಸ್ಥಿತಿವಂತ ರಾಯರುಗಳಂ
ಶತಪ್ರಯತ್ನಂಗಳಿಂದೆ ಸೇವಿಸಿ ಬಾಳ್ವರ್ ॥೨॥

ಹಿತ್ತಾಳಿಯ ಕಿವಿಯವರೇ
ಉತ್ತಮರೀ ರಾಜ್ಯದೊಳ್ ಪ್ರಕಾಶಕರವರೇ।
ಹತ್ತಿರದೊಳ್ ಕರ್ಣೇಜಪ–
ಸತ್ತೆಯನಾಧರಿಸಿ ವಸ್ತು ಸತ್ಯವನರಿವರ್ ॥೩॥

ಅವರ ದೇವತೆಯಾದರೋ–
"She is not old, She is not young
The woman with the Serpent's Ear
Who slights the worthiest in the land
Sneers at the just condemns the brave
And blackens goodness in its grave" ॥೪॥

ದುರ್ವೃತ್ತಶ್ರುತಿಚಪಲಾ
ಕರ್ಣೇ ವಿಷದಂಶನೀ ಸರೀಸೃಪಕರ್ಣಾ।
ದುರ್ವಾರ್ಯರುಚಿರಮಂಗಲ–
ಚರ್ಯಾ ಸಾ ದೇವತಾ ದುರತ್ಯಯಮಾಯಾ ॥೪॥

ಕಿವಿನಾಡಿದು ಕಿವಿಯಿರದವ
ಕವಿಯೆಂದರ್ಚಿತನು ಚಿತ್ರಮೀ ಅಪವಾದಂ।
ಕಿವಿಕಚ್ಚುವ ಕಿವಿಚುಚ್ಚುವ
ಸವಿ ಸರ್ವಾಕರ್ಷಕಂ ವಿನಾಯಕವರರೊಳ್
॥೫॥

ಆದೇವತೆಯ ಭಜಕರಾದರಾತಿಥ್ಯಗಳ
ಸ್ವಾದಜ್ಞರಾಗಿಹರ್ ಯಂತ್ರಮಸ್ತಿಷ್ಕರಾ–
ಪಾದಕರ್ಣರ್ ಕಿವಿಗಳವಯವಗಳೆಲ್ಲಮಂ ಹತ್ತಿಕ್ಕಿ ರಾಜ್ಯವಾಳ್ಗು–

ನಾದ ವಿಕಟ ಪ್ರತಾಪರ್ ಕಲಹಲಂಪಟರ್
ವಾದವೆಲ್ಲ ವಿತಂಡೆ ಮತದಾರರೊಳ್ ಕೂಡ
ಮೇಧಾವಿಗಳ್ ಕದ್ದು ಕೇಳಿ ಕಜ್ಜಕ್ಕಿಳಿವ ಸ್ವಾರ್ಥಕಾರ್ಯ–ವಿಶಾರದರ್
॥೬॥

ಕಂಡದ್ದ ನಂಬರಾರುಂ
ಗುಂಡರ್ ಗಂಡರ್ ಶ್ರುತಿಪ್ರಧಾನರ್ ಚದುರರ್।
ಮಂಡೆಗಳ ಗಾತ್ರವುಂಡೆಯ–
ದಂಡಲೆವರ, ಪುಟ್ಟಿನಿಂದರ ಪ್ರತಿಮಾನರ್ ॥೭॥

ಕೇಳಿದ್ದಷ್ಟೇ ವೇದಂ
ಕೇಳಿದ್ದಂ ಹೇಳಿ ಹರಟುತಿರುವುದೆ ಧರ್ಮಂ।
ಮೂಲಕ್ಕಾರುಂ ಪೋಗರ್
ಬಾಲದವೊಲ್ ಕಿವಿಯನೆಲ್ಲರಲ್ಲಾಡಿಸುವರ್ ॥೮॥

ವರದಿಗಳ ನಂಬಿ ನಡೆವರ್
ಪರೋಕ್ಷಕಿಂತ ಪ್ರಮಾಣ ಮಾವುದುಮಿಲ್ಲಂ।
ಹರಿಹರಪದದೆ ವಿಭಕ್ತರ್
ಹಿರಿಕಿರಯರ್ ವರ್ಗಜಾತಿವೈರೋನ್ಮತ್ತರ್ ॥೯॥

ಕರ್ಣಾಟದಧಟರನ್ಯರ್
ವರ್ಣಿಸಿದುದನೆಲ್ಲಮಂ ಕರಂ ಸ್ವೀಕರಿಸಲ್।
ನಿರ್ಣಯಿಸಿದ ರಣಧೀರರ್
ಕರ್ಣಮತರ್ ಕರ್ಣಿಕಾರ ಗಂಧರ್ ನರರೊಳ್ ॥೧೦।

ಶಬ್ದಾಬ್ಧಿತಿಮಿಂಗಿಲಗಳ್
ಲುಬ್ಧರ್ ಸ್ವಜನರ್ಗೆ ಪರರಿಗಿನತನುಜಾತರ್।
ಶುದ್ಧಾಶುದ್ಧವಿವೇಕಕ–
ಬದ್ದರ್ ಭವಿಗಳ್ ಸಮಷ್ಟಿಶಪ್ತರ್ ಪಾರ್ವರ್ ॥೧೧॥

ಅಂಥವರ ಮೆಟ್ಟಿ ಮುರಿಯುವ
ಪಂಥಂ ಮೊರಗಿವಿಯ ಗಣ್ಯಸಂಖ್ಯರ ನಿರತಂ।
ಶಾಂತಂ ಪಾಪಮಶಾಂತಂ
ಕಾಂತಂ ಕಾಮೋಪಜೀವನಂ ಶ್ರೇಯಸ್ಕಂ ॥೧೨॥

ಎಂಬತಿರಥರಂ ನಂಬಿದ
ಕುಂಭೋದರರರಂ ಪ್ರಗಲ್ಭರೆಂಬರ್ ದೊರೆಗಳ್।
ಲಂಬಾಯತ ಮುಖನೇತ್ರರ್
ಸಂಬಳದಾಳ್ಗಳ್ ಶ್ರುತಿಪ್ರಮಾಣದ ನಾಡೊಳ್ ॥೧೩॥

ಹೆಡಗೆಗಿವಿ, ಕೊಡೆಗಿವಿ, ಮೊರಂಗಳ
ಹಿಡಿದು ಹಚ್ಚಿರುವಂತೆ ತೋರುವ
ಒಡೆಯಗಿವಿ, ಒಕ್ಕಲಿನ ಗುದ್ದಲಿಗಿವಿ–ಅದೊಂದೆರಡೇ?
ಹಿಡಿದ ಪಟ್ಟನು ಬಿಡದ ಹೆಗ್ಗಿವಿ

ನುಡಿದ ನನ್ನಿಯ ನುಂಗುವೊಳಗಿವಿ
ಬಿಡದೆ ಬೆನ್ನಟ್ಟುವ ಯಮೋಪಮ ಬೇಹುಗಾರಗಿವಿ ॥೧೪॥

ಬೆಪ್ಪುಗಿವಿ, ಚಪ್ಪೆಗಿವಿ, ಹಪ್ಪುಗಿವಿ, ಹಾಳುಗಿವಿ
ತಿಪ್ಪುಗಿವಿ, ತಿನ್ನುಗಿವಿ, ಜರಲೆಗಿವಿ, ತರಲೆಗಿವಿ
ತಪ್ಪುಗಿವಿ, ತಾಳುಗಿವಿ, ತನ್ನ ದನಿಯನ್ನಷ್ಟೆ
ಮೆಚ್ಚುವುಚ್ಚಾತ್ಮಗಿವಿಯು ।
ಚೆಪ್ಪು ಹೆಕ್ಕುವ ಚಾರರವವೀಂಟುವಪ್ಪಗಿವಿ
ಜಪ್ಪಿ ಜನಪದರಾಜ್ಯಗೈವ ಕಾಲದೊಳಿಂದು
ಅಪ್ಪಚ್ಚಿಯಮ್ಮಣ್ಣಿ ಎರಡನೂ ಕಳಕೊಂಡ ತಿಪ್ಪೆಗಿವಿ
ಬಡವರ್ಕಳ ॥೧೫॥

ಖಗದೇವರ ಮಿಗದೇವರ
ಹೊಗೆದೇವರ ಹೊಟ್ಟುದೇವರಾರಾಧಕರಾ ।
ಹಗರಣಿಗರ್ ಹಳ್ಳಿಗಳೊಳ್
ಹಗಲನ್ನಿರುಳೆಂದು ನಂಬುವಂತೆಸಗಿದಪರ್ ॥೧೬॥

ಅಬುಧರ ಕಿವಿಯಗಲವನಳೆ–
ವಬುಧಿಯನೀಸುವ ಹಿಮಾಲಯದ ಹೊರೆಹೊರುವ ।
ಕಬಳಿಪನಿದ್ದರೆ ಕಲ್‌ಗಳ
ನಭಃಸ್ಪೃಗಾದೀತು ಕೀರ್ತಿಯಾತನದಿಳೆಯೊಳ್ ॥೧೭॥

ಆ ಕಿವಿಯ ಹೊಕ್ಕು ಮತ್ತೀ ಕಿವಿಯ ತೂತಿಂದ
ಬೇಕಾಗದಿದ್ದ ಮಾತುಗಳು ಹೊರಬಿದ್ದಾವು
ನಾಕು–ಜನರೆದುರು ಮುಂದಾಳೆಂದುಕೊಂಬ ಖರಕರ್ಣಾಗ್ರಗಣ್ಯರಲ್ಲಿ
ಮೂಕ ಕೋಟಿಯ ಹಾಗೆ ಕರ್ಣಗತಭಾವನಾ
ಸಾಕಲ್ಯದಿಂ ಮೆರೆವ ನಾಯಕರ ನಡೆಯಿಂದ
ಶೋಕಕ್ಕೆ ಬಾಯಿ ಮೂಕಂಬೊಲಾಯ್ತನ್ಯಾಯಗೀರ್ಣ ಸಾಕ್ಷರ
ಬಡವರ ॥೧೮॥

ಹಣೆಯ ಬರೆಹವಿದೆಂದು ಹಲವರು
ಎಣಿಸಿದರೆ ಕಿವಿಯರಸನಾಳ್ಕೆಯ
ತಣಿವರವನಧಿಕಾರಿಗಳು ಹೆಣದಿನಿಗಳಗ್ರಜರು ।
ಹಣವಗಳಿಸುವರವರ ಬಗೆಯಲಿ
ದಣಿದವರ ಸುಲಿದನ್ಯರಹಹಾ
ಮಣಿಯರಾರೀ ಹಿಂದುಗಳ ಹಿಂದುಳಿದ ಸಾಹಸಕೆ ॥೧೯॥

ಹೆಚ್ಚು ಬೆಳೆಯನು ಬೆಳೆಯಿರೆಂದು ನಾಯಕರುಸಿರೆ
ಹುಚ್ಚುಕಿವಿ ಲಕ್ಷಿಸದು, ಕಡಿಮೆ ಮಕ್ಕಳ ಹಡೆಯಿ–
ರಚ್ಚುಮೆಚ್ಚಿನ ಬಾಂಧವರೆ ಎನಲು ಕೇಳಿಸದು ಏಕೆಂದು ನೀವ್ ಬಲ್ಲಿರಾ?
ಉಚ್ಚರೂ ಸ್ವಾರ್ಥಿಗಳು ಅವರನನುಸರಿಸುತಿಹ
ಲುಚ್ಚರೂ ಸ್ವಾರ್ಥಿಗಳು ಲಂಬಕರ್ಣರ ದೇವ
ಹೆಚ್ಚು ಕಡಿಮೆಯ ಮಾಡಲಿಲ್ಲ–ಸರಕಾರು ಮೇಣ್ ಪ್ರಜೆಗಳಾಚಾರದಲ್ಲಿ
॥೨೦॥

ಕಿವಿಯ ಅಗಲ ಉದ್ದ ದೇಹದಿತರಭಾಗಕಿಂತಲೂ
ಬುವಿಯ ಜನರೊಳಗ್ರಗಣ್ಯ; ಹೃದಯ ಗಾಧ, ನರಗಳೋ
ಹುರಿಗಳಷ್ಟು ಶಿಥಿಲ ಕತ್ತರಿಸಿದ, ಕರ್ಮಕಾಂಡದ
ಜಠರತೆ ಉರಿ ತಣಿಸೀತೇ ಹೊಟ್ಟೆಯಗ್ನಿ ಕುಂಡದ ॥
ಐವತ್ತು ಕೋಟಿ ನರವಿಲ್ಲದಿಹ ನರರೊಟ್ಟು
ಐವಜಿನ ಕಿವಿಯ ಸರಕಾರ ರಚಿಸಿ
ಹಲವಿಧ ಸುಧಾರಣೆಯ ಹುಯ್ಯಲೆಬ್ಬಿಸಿದಾಗ
ಕುಲಗುಣವ ಬಿಟ್ಟೀತೆ ಕಿವುಡುಗಿವಿಯು? ॥೨೧॥

ಆ ಅದೂ ಕೇಳದೀ ಇದೂ ಕೇಳದೋ ಉದೂ ಕೇಳದೀಗ
ಯಾವುದೂ ಕೇಳದಮಲೇರಿದಂಥ ಕಿವಿಗಳಿಗೆ ಶಾಂತಿಯೋಗ ।
ಹಾವನೂ ಮಿರಿಸಿದ ಶಬ್ದವಿಮುಖರಧಿಕಾರ ದರ್ಪದಲ್ಲಿ
ಬೇವನ್ನು ತಿಂದು ಬದುಕುವುದಕಂಜಿದರೆ ಕೊರಳಿಗೊಂದೇ ಬಳ್ಳಿ॥
ಈ ಜಗದ ವಿಕಟ ಸಂಸ್ಕೃತಿಯ ರಾಷ್ಟ್ರಗಳು ಸಹ

ಸೋಜಿಗದ ಕವಿನಾಡ ಧರ್ಮಬಧಿರರ ಕಂಡು
ಮೋಜೆಂದು ಗಣಿಸಿ ಯಾತ್ರಾರ್ಥಿಗಳ ಕಳುಹುತಿವೆ ಅವರ
ದುಡ್ಡನ್ನು ಕಿತ್ತು।

ಭೋಜ್ಯಪೇಯಗಳಲ್ಲಿ ವಾರವನಿತೆಯರಲ್ಲಿ
ರಾಜರೇ ತಾವೆಂದು ಮುಳುಗಿರುವ ಮಂತ್ರಿಗಳ
ನಾಜೂಕು ಸವಿತೃಸುತ ಕರ್ಣನನು ನಾಚಿಸಿತು ದುರ್ದಾನ
ಧರ್ಮದಿಂದ ॥೨೨॥

ಶ್ರಮದ ಮಾತು ಯಾವ ಕಿವಿಗು
ಕೇಳಿಸದೋ ಕೇಳಿಸದು
ಶಮದಮ ಸಂಪನ್ನರನ್ನು
ಹೊಗಳಿದರದ ನೊಪ್ಪದು ॥೨೩॥

ಬೇಕಾದಾಗ ತ್ರಿವಿಕ್ರಮಂ ಬೇಡವಾದರೆ ವಾಮನಂ।
ಕಾಕಾಕ್ಷಿಗೋಲಕನ್ಯಾಯಂ ಲಂಬಕರ್ಣರ ರಾಜ್ಯದೊಳ್
॥೨೪॥

IV

ನೇತ್ರಪ್ರಜ್ಞಾವಿಲಾಸವೆಂಬ ನಾಲ್ಕನೆಯ ಸರ್ಗ

The World of Visiles

ಹಂಡೆಗಣ್ಣಿನ ಕೆಂಡ ಕಾರುವ ನೋಟವೇ ನೋಟ
ದಂಡೆಯಿಲ್ಲದ ದಿಟ್ಟಿಯೊಂದೇ ನಾಯಕರ ಮಾಟ।
ಬಂಡೆದಲೆಗಿದೆ ಕುಂಡೆಗಣ್ ಅದರಾಟವೇ ಆಟ
ಕಂಡ ಕಂಡೆಡೆ ಕಣ್ ಕಿಸಿವುದಧಿಕಾರಧರ ಕೀಟ! ॥೧॥

ಕಣ್‌ಸನ್ನೆ ಮಾತು, ಜನರೊಳ್
ಪೆಣ್ ಸನ್ನೆಯ ನಡತೆ, ಕಣ್ಣ ಬೆದರಿಕೆಯಾಳ್ಕೆ।
ಪಣ್ ಗಾಯಿ ಪೂದಳಿರ್ ಸಹ
ಕಣ್ನೋಟಕೆ ಬೆದರಿ ಯದುರಿ ಮಂದುರುವ ಮಾಳ್ಕೆ ॥೨॥

ತಾನು ಕಂಡದ್ದಕ್ಕೆ ಕೋಡು ಮೂರೇ ಎಂಬ
ಮಾನವರ ಮುಂದಾಳುತನದಲ್ಲಿ ಮಂಡೆಯಿಹ
ಮಾನಿಸರ್ ಮೂಕರೋ ಬೆಪ್ಪರೋ ಹೆಳೆವರೋ
ಆಗದಿದ್ದರೆ ಬದುಕರು।

ಶ್ವಾನಾಯನಂ ಧರ್ಮ, ಕಣ್ಣಿಂದಲೇ ಧನ–
ಧ್ಯಾನಮಂ ಕೇಳಿ ಕಸಿದುಂಬ ದಂಭಾರೂಢ
ರಾನಂದ ರಾಜ್ಯದೊಳ್ ಕಿವಿ, ಮೂಗು, ನಾಲಗೆಗಳಿದ್ದರೂ
ಸತ್ತಂತೆಯೇ ॥೩॥

ಕಂಡರಷ್ಟೇ ಪರರ ಮಾತಾಡಿಸುವ ಶಾಠ್ಯ
ಕಂಡರೂ ಕಾಣಿಸದ ಹಾಗೆ ತಿರುಗುವ ನಾಟ್ಯ
ಕಂಡವರು ಬೆನ್ನುಹಾಕಿದ ಮೇಲೆ ಸತ್ತರೆಂದೇ ತಿಳಿವ ದಿವ್ಯಸ್ಮೃತಿ।

ಉಂಡಾಡಿರಾಜ್ಯದಲಿ ಮಂಡೆಗಿಲ್ಲ ಸ್ಥಾನ
ಕಂಡಕಂಡಂತೆ ಹರಿಹಾಯ್ವ ನೇತೃಧ್ವಾನ
ಭಂಡನೋಟದ ಶಸ್ತ್ರ ಸಜ್ಜನರ ಸಂಹರಿಸ–
ಲಿರ್ದಪುದು ಸಿದ್ಧವಾಗಿ ॥೪॥

ನೇತ್ರರೋಗ ರೋಗವಲ್ಲ
ಹಳದಿನೋಟ ಯೋಗ್ಯವೆಲ್ಲ।
ಪಾತ್ರದವರ ಜಾಣನೆಲ್ಲ
ತುಂಬಿಕೊಳದ ಕಣ್ಣು ಹೊಲ್ಲ! ॥೫॥

ಆಗದವರ ಮನೆಯ ಹೊಕ್ಕು ಚಿತ್ರಪಟವ ನೋಡಲು
ಆಗಲೇ ಅದೊಡೆದುಹೋಕು ಕಣ್ಣ ಶಾಪ ಸೋಕಲು।
ಮಾಗದಿರುವ ಮಿಳ್ಳೆಯೆಲ್ಲ ಪಟಪಟಾರನುರುಳುಗು
ಜಾಗದಲ್ಲಿ ನೋಡಿದೊಡನೆ ಬಿತ್ತಿದ ಬೆಳೆ ಮುರುಟುಗು! ॥೬॥

ಬಣ್ಣಕ್ಕೇ ಪ್ರಾಧಾನ್ಯಂ
ಉಣ್ಣುವ ರುಚಿಗಿಲ್ಲ ಭಕ್ಷ್ಯಭೋಜ್ಯಾದಿಗಳೊಳ್।
ಕಣ್ಣಿಂದಮೆಗಾಯನಮಂ
ತಣ್ಣಗೆ ಕೇಳ್ವರ್ ತ್ರಿಣೇತ್ರನಂ ನಾಚಿಸುವರ್! ॥೭॥

ನಿತ್ಯ ಸಿನೆಮಗಳ ದರ್ಶನ ಕಣ್‌ಕಲಾವಿದಗೆ
ಅತ್ಯಮೋಘ ವಿಚಿತ್ರ ಚಿತ್ರನಿರ್ಭರ ವಸ್ತ್ರ
ಪಥ್ಯ ಬಣ್ಣದ ತಿಂಡಿ ತೀರ್ಥ ಮದ್ದುಗಳೆಲ್ಲ ದತ್ತೋಪದಾನ ರಮ್ಯ
ಮಿತ್ರಬಂದರೆ ಕಣ್ಣ ಹೊಡೆಯುವರ್ ಮನೆಯಲಿ ಸು–
ಮಿತ್ರೆ ಬಂದರೆ ಕಣ್ಣುಗಳ ಜೊತೆಗೆ ಹುಬ್ಬುಗಳ್
ಬಿತ್ತರಿಸಿ ಕಬಳಿಸುವ ಭಾವಗಳ ಬಗೆಯೊಂದೆ?
ಶೇಷಶೀರ್ಷಾತಿರಿಕ್ತ ॥೮॥

ಕುಣಿವುದು ಕಣ್ ಮಣಿವುದು ಕಣ್
ತಣಿಯದು ಕಣ್ ಕಳ್ಳವೊನ್ನ ಬಿಸ್ಕೀಟುಗಳಂ।
ದಿನಮುಂ ಕಂಡೂ ಪ್ರಜೆಗಳ
ದಣಿಸಿದರೂ ಹಿಂಡಿ ಹೀರಿ ಕರಭಾರಗಳಿಂ। ॥೯॥

ಕಣ್ ಕಣ್ ಬಿಡುವುದು ಧರ್ಮಂ
ಮಣ್ವಾನಿಸರಾದ ಸತ್‌ಪ್ರಜಾಕೋಟಿಗಳ।
ದುಣ್ಣರ ದುಣ್ಣೆಯರಾಳ್ಕೆಯ
ಕಣ್ಣೊಳಗಿರುವಗ್ನಿ ಬಾಡಬಂ ಬಲ್ಲಿರೆ ನೀಂ? ॥೧೦।

ಮೇದುರಾ ಮಧುರಾ ದಾರಾಃ ಸುಧೀರಾ ನೇತ್ರಬರ್ಬರಾಃ।
ಪ್ರದರಾಃ ಸಚಿವ ಸ್ಥಾನೇ ದುರ್ಧರಾ ಭೀಮಭೈರವೈ: ॥೧೧॥

ಮಾತಾಡುವಂಥಾ ಮಹನೀಯರನ್ನು
ಪಾತಾಳದಲ್ಲೊಯ್ದು ಅನಂತಕಾಲ।
ಬೇತಾಳದೊಲ್ ಕೊಂಬೆಗಳಿಂಗೆ ಕಟ್ಟಿ
ನೇತಾಡಿಪರ್ ನೇತ್ರ ನಿಮೇಷವಿದ್ಯರ್! ॥೧೨॥

ಅನುಯಾಯಿಗಳಿಗೆ ಕಣ್ಣಿದ್ದರೂ ಇಲ್ಲ ಕೇಳ್
ಜನನಾಯಕರಿಗೆ ಕಣ್ಣಿರದಿದ್ದರೂ ಉಂಟು
ಅನುಮಾನವಿಲ್ಲ ಸರ್ವಾಧಿಕಾರಿಗಳ ಪ್ರಭುತ್ವದಲ್ಲಿದಕೆ ಜಗದೊಳ್।
ಪ್ರಣಯ ಯುದ್ಧಗಳಲ್ಲಿ ತಪ್ಪೆಂಬಂದಿರದಂತೆ
ಘನನೇತ್ರರಾಡಳಿತದಲ್ಲಿ ತಪ್ಪುಗಳೆ ಸರಿ
ತನುವೆಲ್ಲ ಕಣ್ಣು ಕಣ್ಣೆಂದರದ್ಭುತ ತೂತು
ಹೆಣದಟ್ಟೆಗಿರುವಹಾಗೆ ॥೧೩॥

ಈ ಕ್ಷಣದಿಂದೀ ಶಾನನ
ಲೋಕಂ ಪುಟ್ಟಿದುದನರಿಯಿರೇ ನೀವೆಲ್ಲರ್।
ಈ ಕ್ಷಣ ಭಕ್ಷಣ ಸಾಧನ–
ವೀಕ್ಷಿತಿಯೊಳ್ ನೇತ್ರಸೂತ್ರಚಾಲಿತ ನರರ ॥೧೪॥

ಕಣ್ಣರೆ ಕನ್ನಡಿಗರ್ ಗಡ
ತಿನ್ನುವ ತಿರುತಿರುಗಿ ಬರುವ ಮುಟ್ಟುವ ಕೇಳ್ವ।
ಚಿನ್ನಾಟವಿತರಜನರಿಗೆ
ಕನ್ನಡಿಗರಿಗಿಲ್ಲಿ ಕಾಂಬುದೊಂದೇ ಕಜ್ಜಂ! ॥೧೫॥

ಡೆತ್‌ರೆ ಸಮಾನ ಸಚಿವೇಶ್ವರರುಗ್ರ ನೋಟಂ
ನೃತ್ಯತ್ ಕರಾಳ ಕಮನೀಯ ನಿಶಾತತಾರಂ।
ದೃಕ್ ಪಾವಕಪ್ರಜನನಂ ಪ್ರಲಯಪ್ರಯೋಗಂ
ದಿಕ್ಕೆಟ್ಟುಹೋದ ಬಡವಂಗೆ ದಿವಾಳಿಭೋಗಂ ॥೧೬॥

ಕಿಟಕಿಗಂಗಳ ಮೊಟಕು ಮೂಗಿನ
ದಿಟಕೆ ಬಾಹಿರವಾದ ಜಿಹ್ವೆಯ
ಕುಟಿಲನಾಸಕೆ ವಾಸನೆಯೆ ಗೊತ್ತಾಗದಿರುವಾಗ।
ಹಟಕೆ ಬಾಗುವ ಕುರುಡ ಬಡವನು
ಪಟಕೆ ಹೆದರುವ ನೇತ್ರಗಾತ್ರದ
ತುಟಿಗಳನು ಬೆಸೆದವರ ಸೇವೆಗೆ ಸವೆವ ಜೀವವನು ॥೧೭॥

ದೃಷ್ಟಿಯುದ್ಧದಿಂದ ಗುಡ್ಡ
ದಷ್ಟ ಬಾಂಬುಗಳನು ಸುಡುವ
ದಟ್ಟರಕ್ಷಿಕಾಯರಿಲ್ಲಿ ಕಣ್ಣ ಮಿಟುಕಿಸಿ।
ಇಷ್ಟವನ್ನು ಪಡೆವ ಧೃಷ್ಟ
ಧೃಷ್ಟೆಯರ್ಕಳಧಿಪತಿಗಳು
ಶಿಷ್ಟರನ್ನು ಕಾಲಕಸಕೆ ಸರಿಯ ಮಾಳ್ಪರು ॥೧೮॥

ಅದು ಕಣ್ಣಿದು ಕಣ್ಣುದು ಕಣ್
ಚದುರರ ಮೈಯೆಲ್ಲ ಕಣ್ಣುತುಂಬಿದ ಹೆಡಗೆ।
ಒದರರರದಾರೂ ನೋಟವೆ
ಒದಗಿಸುಗೆಲ್ಲವನವರ್ಗೆ ನಿಮಿಷದೊಳಮಮಾ! ॥೧೯॥

ಮಿಂಚುದೀಪ ಬೇಡವಿಲ್ಲಿ
ಮಿಂಚುಗಣ್ಣ ಬೆಳಕೆ ಸಾಕು
ಚಂಚಲಿಸಲು ಬೆಳಕ ಬೀರಿ ಮನೆಮನೆಗಳಲಿ।
ವಂಚನೆಯಲಿ ಚಿಲ್ಲರೆಗಳ
ಸಂಚಯಿಸಲು ಬಲ್ಲ ಇವರ
ಪಂಚಶೀಲ ಪಂಚಭೂತವಶ್ಯವಾಗಿದೆ! ॥೨೦॥

ಜ್ಞಾನವಿಲ್ಲದೆ ಗೆಲವಿನಲ್ಲಿ ಬಾಳುವ ಚಟ್ಲಿ
ಮೀನಿನಂತಹ ಕಣ್ಣುಮಿಡುಕದೊಯ್ಯಾರವನು
ಮೀನಕೇತನ ರಾಜ್ಯಮಾತ್ರಮೆಚ್ಚೀತು ಸಾಕಾಮೆಚ್ಚಿಗೆಯೆ ಜನರಿಗೆ।
ಆನೆಯಾರತಿ ಬೇರೆ ಆ ರಸಿಕಮತಿ ಬೇರೆ
ಪಾನೀಯಗಳ ಕಂಗಳಿಂದ ಕುಡಿದಮಲೇರೆ
ಮಾನಾಪಮಾನ ಭೇದವ ಮೀರಿದದ್ವೈತ
ಕರತಲಾಮಲಕವಕ್ಕು ॥೨೧॥

ವಿಪರೀತ ಗಜಕಡ್ಡಿಯಿಂದಳೆವ ಕಣ್ಣಳತೆ
ಆಕಾಶಕಿಂತಲೂ ಅಗಲ ಅಗಲ।
ಅವಕಾಶಕಿಂತಲೂ ಆಳ ಆಳ ಕರಾಳ
ಅರ್ಧನಗ್ನಶ್ರೀಯ ದಂಭದ ಬಲ! ॥೨೨॥

ಬಂಧವಿವರ್ಗೆ ವಿಮುಕ್ತಿ
ಚ್ಛಂದಂ ಸ್ವಚ್ಛಂದ; ಮಂದರೇ ತ್ರೈಣೇತ್ರರ್।
ಚೆಂದವೆ ನನ್ನಿ ದಿಗಂಬರ
ಸುಂದರರಿಗೆ ವೇಷಭೂಷಣಾತ್ಮರ್ಗೆಂದುಂ ॥೨೩॥

ಇಂತಿರ್ಪ ಮಹಾರಾಷ್ಟ್ರದ ನೇತ್ರಪ್ರಭಾವಲಯದೊಳ್।
ಕಂಡುದಷ್ಟೇ ಸತ್ಯ ಕೇಳಿದೆಲ್ಲಾ ಸುಳ್ಳು
ಕಂಡಂತೆ ಭಾವಿಸಿದ್ದೂ ಸತ್ಯವೆಂದು
ಮಂಡೆಯಲ್ಲಿಹ ಮಿದುಳ ಬಳಸದಿಹ ಭೂಮಿಜರ
ತಂಡದಾಳಿಕೆ ಸಮಾಜವಾದವಿಂದೊಂದು ॥೨೪॥

ಆಲೋಚನಾಲೋಚನಾಭಾವ ವಿಖ್ಯಾತಿ:
ಬಾಲಿಶತೆ ಬಹುಮಾನ್ಯ, ಹಿಪ್ಪಿಯೋಗ ಭ್ರಾಂತ–
ಫಾಲೋತ್ತರಾಕ್ಷರಾದರ್ ಕನ್ನಡಕ ಧರರ್ ವಿಜ್ಞಾನಭಗ್ನ ನೇತ್ರರ್।
ತಾಳತಂತಿಗಳಿರದ ಕಾಲಯಾಪನೆಯೆ ಕಲೆ;
ಮೇಳಕ್ಕೆ ಮೇಷಗಳ ತೋಳವೇ ನೇತಾರ
ಕಾಳಲ್ಪಸಂಖ್ಯರಿಗೆ ಜೊಳ್ಳು ಬಹುಜನರಿಗೆನೆ
ನಾಮಕರ್ಹತೆಯಿಲ್ಲದ ॥೨೫॥

ಒಕ್ಕಣ್ಣರಿಕ್ಕಣ್ಣರವರೊಡನೆ ಮುಕ್ಕಣ್ಣ–
ರಕ್ಕಪಕ್ಕದಲಿ ಪಲಗಣ್ಣರಲ್ಲದೆ ಕಣ್ಣ
ಸೊಕ್ಕಿನಿಂದೇ ಕುರುಡರಾದವರ್ ಲಂಚಕ್ಕೆ
ಮಾತ್ರ ಕಣ್ದೆರೆವ ವಿಬುಧರ್
ಹಕ್ಕಲಾರಿಸ ಹಚ್ಚಿಹಳ್ಳಿಗಳ ಬಡ ಜನಕೆ
ಮಕ್ಕಳಾಗದ ಮದ್ದ ಚುಚ್ಚಿ ಮೆರೆದಾಡುವರ್
ರೊಕ್ಕವೇ ರೂಪವೆಂಬರ್ ಮಿತಿಯದಕ್ಕಿಲ್ಲ
ವಿವಿಧಸುಖಸಾಧನಗಳ ॥೨೬॥

V

ಮುಖಪ್ರಜ್ಞಾವಿಲಾಸವೆಂಬ ಐದನೆಯಸರ್ಗ

The World of Oriles

ಬ್ಯಾ' ಎಂದವನೇ ಬೊಮ್ಮಂ
ಬಾಯ್ದೆರೆದಾಕಾಶದಗಲಮಮಂ ಕಿರಿದೆನಿಸಲ್।
ಬಾಯ್ಬಡಕರನ್ನು ಸೃಜಿಸಲ್
ಬಾಯ್ಬಲಮಮಂ ಬೈಬಲೆಂದು ಸಾರಲ್ ನಿಧಿವರ್ ॥೧॥

ಬಕಬಾಯ್ ವೃಕಬಾಯ್ ಮೊಸಳೆಯ
ಕ್ರಕಚೋಪಮದಂತಯುಕ್ತ ಬಾಯ್ ಹೆಗ್ಗವಿಬಾಯ್।
ಮುಖವಿಡಿ ಬಾಯ್ ಭಾರತದಲಿ
ಸುಖಲಕ್ಷ್ಮೀಪುತ್ರರಾದ ನೇತಾರರಿಗೆ ॥೨॥

ಮಾತಿಂದ ಕಲ್ಯಾಣ ರಾಜ್ಯಮಂ ಕಟ್ಟುವರ್
ಮಾತಿಂದ ಸರ್ವಸಮತಾರಾಜ್ಯಮಂ ಕಟ್ಟಿ
ಮಾತಿಂದಲೇ ಪ್ರಜೆಗಳಂ ಪ್ರಭುಗಳೆಂದು ಸಿರಿ
ತಮ್ಮ ಬೇಳೆಯ ಬೇಯಿಸಿ।

ಮಾತುಹೊರಡುವ ತೂತಿನೊಳಗಿಳಿಸಿ ತಿರುಗುವರ್
ಮಾತುಕೊಟ್ಟದ್ದನ್ನು ಮುರಿವ ಮರ್ಯಾದೆಯಂ
ಬೇತಿನಿಂ ಪಾಲಿಸುವ ಬಾಯೂರ ಭಾರಿ ವು–
ಸ್ತಾದರಸಹಾಯಶೂರರ್ ॥೩॥

ಮಾತಿನಿಂ ಬೆಳೆಯ ಬೆಳೆವರ್ ಮನೆಯ ಕಟ್ಟುವರ್
ಮಾತಿನಿಂದ ಕೊಳಚೆಯಂ ತೆಗೆವರ್ ಕರಂಗಳಂ
ಮಾತಿನಿಂದಿಳಿಸಿ ದರಗಳನೆಲ್ಲ ದುರ್ಜನರ ಮಾತಿನಿಂದೇ ಶಿಕ್ಷಿಸಿ।

ವಾತಾಯನದ ಹಾಗೆ ದೇಹಕ್ಕೆ ಬಾಯ್ ಎಂದು
ಸೋತರೂ ಗೆದ್ದ ಹಾಗೇ ಎಂದು ಬಗೆವ ದುರ್–
ಯೂಥಪರ್‌ರಾಜಕಾರಣ ಪಟುಗಳೀ ಪ್ರಜಾರಾಜ್ಯದೊಳ್।
ಮೆರೆಯುತಿರ್ಪರ್ ॥೪॥

ಗಡಿಯಂ ಕಾಯಲ್ ಬಾಯಿದೆ
ಗುಡಿಸಲುಗಳ ಕಟ್ಟಲಿರ್ಕುಬಾಯ್ ಮುಖಪುರದೊಳ್।
ಬಡವರಿಗನ್ನವನಿಕ್ಕಲ್
ತಡವಾಗದು ಬಾಯಿ ಬಡಿಸುಗೆಲ್ಲವನನಿಶಂ ॥೫॥

ಹಸಿರಿನ ಕ್ರಾಂತಿ, ವನವೃದ್ಧಿ; ಧಾನ್ಯ ಸಮೃದ್ಧಿ
ಹೆಸರಿಲ್ಲದವರಿಗೇ ಹೆಸರ ಪಟ್ಟವ ಕಟ್ಟಿ
ಜಸವ ಕೊಡಿಸುವ ಕಾಯಕಗಳ ಕೈಯಿಲ್ಲದೆಯೆ
ಬಾಯಿಂದಲೇ ಮಾಡಿಸಿ।

ಮಸಗಿ ಮಾತಿಂದ ಸಾಹಿತ್ಯ, ಸಂಸ್ಕೃತಿ ವಿದ್ಯೆ,
ಹೊಸ ಹೊಸ ಮಹಾಶೋಧ, ಶಾಸ್ತ್ರಂಗಳಂ ಬಾಯ
ಹುಸಿ ಮಾತಿನಿಂದ ರಾಷ್ಟ್ರಕ್ಕೊದಗಿಸಿದ ಮಹಾವೀರರೀ
ಬಾಯಾಳ್ಗಳು ॥೬॥

ಬಾಯ್ ಬಡಿಗೆಗಳಂ ಬೀಳ್ವರ್
ಬಾಯ್ತುರಿಯಂ ತೀರ್ಚಲೆದ್ದು ಚಾಡಿಯನುಸಿರಿ।
ಬಾಯ್ತುಂಬ ಕುಡಿದು ತೇಗುವ
ರಾಯ್ತೆಂದೆದ್ದೋಡುವರ್ ಸಭಾಗೃಹದಿಂದಂ॥

ಬಾಯ್ ಪ್ರತಿನಿಧಿಗಳ ಬಾಯಾರ್ಪಿಗೆ
ನಾಯ್ ಸಹ ಸರಿದೋಡದಿರ್ದೊಡಂ ಪಥದಿಂದಂ।
ಆಯ್ತಾಯ್ತೆಲ್ಲ ಸುಧಾರಣೆ
ಹೋಯ್ತೆಲ್ಲಾ ಕಷ್ಟವೆನ್ನಬೇಕು ಪ್ರಜೆಗಳ್ ॥೭॥

ಬಾಯಲ್ಲೇ ಬ್ರಹ್ಮಾಂಡವ–
ನಾಯತಿಯಿಂ ತೋರ್ದನಂದು ತಾಯ್ಗೆ ಮುರಾರಿ।
ಆ ಯುಕ್ತಿಯಿಂದೆ ವದನ–
ಶ್ರೀಯುತರಿಂದೇಳ್ಗೆವಡೆದರೆನಲಚ್ಚರಿಯೇಂ ॥೮॥

ಅದು ಸಕ್ಸೆಸ್ಸಿದೂ ಸಕ್ಸೆಸ್ಸುದೂ ಸಕ್ಸೆಸ್ ಮುಖಾತ್ಮಕರ್।
ಒದರಲ್ ವೇದಿಯನ್ನೇರಿ, ಪತ್ರಿಕಾಗೋಷ್ಠಿಯೊಳ್ ಸದಾ॥
ಉಂಡರೆಂದುಣ್ಣದವರಂ ಬಣ್ಣಿಸಲ್ ರಾಜವಾಗ್ಬಲರ್
ಸತ್ತರೂ ಬದುಕಿದವರೇ ಆದಾರವರ ಫೈಲಿನೊಳ್ ॥೯॥

ಆಸ್ಯಖಂಡದಾಸ್ಯವಿದೀ ಭಾರತಾಖ್ಯದೇಶ
ಶಾಸ್ಯರಿಂಗೆ ದಾಸ್ಯದೀಕ್ಷೆ ಕೊಡುವುದೇ ವಿಶೇಷ।
ಆಸ್ಯಶಕ್ತಿ ಮಹಾಮಾಯೆ, ವೇದಗೀದವೆಲ್ಲ
ವಾಸ್ಯಮುಖಜವಾದ್ದರಿಂದ ಶ್ರೇಷ್ಠ ಬಾಯ ಮಲ್ಲ ॥೧೦॥

ಮಾಳ್ಪುದು ಬಾಯ್ ಬೇಳ್ಪುದು ಬಾಯ್
ಕಾಳ್ಪುರಮಂ ಸೃಜಿಸಿ ಕಣ್ಣೆದುರ್ ಸುಳಿಯಿಸುವ।
ನಾಳ್ಪಗರಣಮಂ ನಡೆಯಿಸಿ
ಬಾಯ್‌ಚಪ್ಪರಿಸುತ್ತಮಿರ್ಪುದೇ ನೇತ್ರಗುಣಂ ॥೧೧॥

ಮುಖ ಮಹಾಲಿಂಗವನು ತೋರ್ಪುದು
ಮುಖ ನಿರುದ್ಯೋಗವನು ಕಳೆವುದು
ಮುಖ ಮಹೌಷಧಿಗಳನು ಬಡವರಿಗಾಗಿ ಹಂಚುವುದು।
ಮುಖ ಮಹಾಬಿಲ ಸರ್ವಯೋನಿ
ಪ್ರಖರ ಮಾರ್ತಾಂಡ ಪ್ರತಾಪವ–
ನಖಿಲ ನಾಯಕವರ್ಗಕೀವುದು ಮುಖ ಮಹಾದೇವ
॥೧೨॥

ಹುಡಿನುಡಿಗಳೆ ವಿಮರ್ಶೆ, ಯೋಜನೆ
ಹುಡಿನುಡಿಗಳೆ ವಿಚಾರ ವಿಸ್ತರ
ಹುಡಿನುಡಿಗಳಾಚಾರ, ಧರ್ಮಧ್ವಜ ಮಹಾಮೇರು।

ನುಡಿಯೆ ನಡೆ, ನಡೆಗಲ್ಲಮನ್ನಣೆ
ನುಡಿವ ಬಾಯ್ ಮತಗಳನು ನುಂಗಲ್
ಪಡೆದು ಬಂದಿದೆಯರ್ಹತೆಯ ಬಾಯ್ಗೆಸೆಯಿರೊ ಮತವ
॥೧೩॥

ತರುಣ ತುರುಣಿಯರೆಂಬ ಭೇದಪದಗಳಿಗಿಲ್ಲ
ಜಾತಿಭೇದ ಪದಪ್ರಯೋಗಕಿಲ್ಲ
ಪದದಾನಯಜ್ಞ; ಅರ್ಥಕ್ಕೆ ಭಸ್ಮೀಭವನ
ಪದವಿ; ತೊದಲಿಗಕಾದಮಿ ಪ್ರದಾನ ॥೧೪॥

ಹರಿಜನೋದಯ ಗಿರಿಜನೋದಯ
ಕುರಿಜನೋದಯ ಮರಿಜನೋದಯ
ದರಿಜನೋದಯ ಬಾಯೊಳೇ ಸಿದ್ಧಿಸುವುದಿದು ಮಂತ್ರ।
ನರರಿಗೆಲ್ಲ ಪರಿಸ್ಥಿತಿಯೊಳೂ
ದೊರಕುವುದು ಕಣ್ಗೆಟುಕದಿರುವೀ
ಬರಿಯ ಬಾಯುಪಚಾರ ಮುಖ ರಾಜ್ಯಾಧಿಪತಿಯಿಂದ
॥೧೫॥

ರಾಷ್ಟ್ರಮೈತ್ರ್ಯುದ್ಧಾರ, ತೆರಿಗೆಗಳ ತೆಗೆದೊಗೆದು
ಭ್ರಾತರೆಲ್ಲಾ ಬಡವರೆಮಗೆನ್ನುವುದ್ಗಾರ,
ನಾತನೆಲದಲಿ ವಾಸಿಸುವ ಜನಗಳಿಗೆ ಮನೆಗಳನ್ನು ಕೂಡಲೆಕಟ್ಟಿಸಿ।
ಭೀತಿಗಳೆವೆವು ನಮ್ಮ ನಾಯ್ದುವರಿಗೆಂದು ಸಂ
ಪ್ರೀತಿರಸಧಾರೆಗಳ ಬಾಯಿಂದ ನೀಡಿ ಮೇಣ್
ಕೈತೋರಿಸದ ಕಮಲಮುಖರ ವನ್ಯಾಚಾರ ಮುಖರಾಜ್ಯಭಾರ
ಶೌರ್ಯ ॥೧೬॥

ಪದಕೋಶಂಗಳ ಸಂಪತ್
ಉದಾರನೇತಾರರಲ್ಲಿ ಕೊಡಲಿದೆ ಮುಖದಿಂ।
ಒದರುವುದರಿಂದ ಸರಸತಿ
ಬೆದರ್ದೋಡಿದ ಹಾಗೆ ತೋರ್ಕು ನಾಚಿಕೆಯಿಂದಂ ॥೧೭॥

ತೂತೆಲ್ಲ ಮಾತಿನೊಳ ಮೀ
ಬೇತಾಳರ ರಾಜ್ಯದಲ್ಲಿ ನುಂಗುವರೆಲ್ಲರ್।
ಕೂತಲ್ಲೇ ಸಾವಿರಗಳ
ನಾತಂಕಮದಿಲ್ಲ ಗದ್ದುಗೆಗಳನ್ನೇರಲ್ ॥೧೮॥

ವ್ಯರ್ಥವ್ಯಯಪ್ರಧಾನಂ
ಸ್ವಾರ್ಥಕ್ಕಿತಿಯಿಲ್ಲ ರಾಜಪುರುಷರ ಹಸ್ತಂ।
ಸ್ವಸ್ತಿಮುಖದಿಂದ ಮರೆಯಿಸಿ
ಬೆಸ್ತರವೊಲ್ ಬಳಕೆಗಾರರಂ ಪಿಡಿದೆಳೆವರ್ ॥೧೯॥

ಹೆಬ್ಬಾಯ್‌ಕೊಬ್ಬುಲಿ ಹಂಚಲ್
ದುರ್ಭೇದ್ಯಾಲೋಚನರ್ಗೆ ಮುಖಮುಖರಿಂಗೆ।
ಅರ್ಬುದ ಪದಚೇಲರ್ಗೆ ಪ–
ದಾಬ್ಜಂಗಳ ನೊಂದೆಸವನೆ ಬೆಳೆವರ್ಗಿಳೆಯೊಳ್ ॥೨೦॥

ಗಗನಾಂಬುಜಸುರಭಿ ಬೇಕೆ?
ಕೂರ್ಮಸ್ತ್ರೀಸ್ತನ್ಯ ಬೇಕೆ?
ಕಂಬಂಧ ಸಂಗೀತ ಬೇಕೆ?
ಕಾಕದಂತ ಕಿರಣ ಬೇಕೆ?
ಭದ್ಮಶ್ರೀ ಬಿರದು ಬೇಕೆ?
ಕದ್ದು ತಂದ ಡಿಗ್ರಿ ಬೇಕೆ?
ಮರೀಚಿಕೆಯ ನೀರು ಬೇಕೆ?
ಶಶವಿಷಾಣಗಳು ಬೇಕೇ? ॥೨೧॥

ಕಡುಬಿಲ್ಲದ ಕೊಟ್ಟೆ ಹೂರಣವನು ತೆಗೆದ ಹೋಳಿಗೆ
ನೆಲಗಟ್ಟಿಗೆ ಒರಲೆ ಹಿಡಿದ ಹಳೆಯ ಮನೆಯ ಮಾಳಿಗೆ।
ಬರಡೆಮ್ಮೆಯ ಹಾಲ ತುಂಬಿಸಿಟ್ಟ ದೊಡ್ಡ ಕೌಳಿಗೆ
ಹಲ್ಲು ಮುರಿದು ಹೋದ ಬೊಡ್ಡುಬಾಯೆ ಹೆಚ್ಚುವೀಳಿಗೆ ॥೨೨॥
ಬೇಕೇ?
ಬೇಕೇ?
ಬೇಕೇ?

ನೂರುಯೋಜನದಗಲಬಾಯಿಯ
ಹಾರು ಮಾತಿನ ಹಗುರ ಮಿದುಳಿನ
ಭಾರಿಯೋಜನೆಯಿಂದ ನಡೆಸಿದ ಪರ್ವತಪ್ರಸವ।
ತೋರುವೀ ಬಾಯ್ನಾಡ ಬೊಂಡದ
ನೀರು ಪಾಚಿ; ದಿವೌಕಸರಿಗೂ
ಸೇರುವುದು ಮಾತಾಳಿ ಹೇಳಿದರೆಂಬುದೇ ಸತ್ಯ! ॥೨೪॥

ಸದ್ದು ಗದ್ದಲ ಗೊಂದಲಂಗಳ
ಮೊದ್ದು ಸುಖಪಡಬೇಕು ನಾಡಿನ
ಮೆದ್ದು ಜನಗಳು ಮಾಲುಗಳು ಗೋಲಗಳು ಹುರುಳಿರದ।
ಕದ್ದು ಕೊಂದು ತೊದಲ್ದು ವಿಜ್ಞಾ–
ನೋದ್ಧರಣದಿಂದಲೆ ಸಮರ್ಥಿಸಿ
ಗೆದ್ದ ಮುಖವೀರಾಗ್ರಗಣಿಗಳ ಹೊಗಳಲಳವೆಲ್ಲಿ? ॥೨೪॥

ಮಾಡದಿಹ ಕಜ್ಜಕ್ಕೆ ಮಾತೆಂಬುದೇ ಪ್ರತಿಮೆ
ಮಾಡದುದ ಮುಚ್ಚಲೂ ಮುಖವಾಡವು।
ಆಡಲಾಟಿಗೆ ಮಾತು ಸೋಮಾರಿಗಳಿಗೆ ಬಾ
ಯಾಡಿಸಲು ಬರುವ ಕಚ್ಚಾ ಚೂಡವು! ॥೨೫॥

ಮಾತಿನ ರಾಜ್ಯವೆ ಮಾತೆಯ ರಾಜ್ಯ
ನಮೋ ಅದಕ್ಕೆನ್ನಿ।
ಮಾತು ಬಿಟ್ಟವನು ಮಾತೆ ಬಿಟ್ಟವನು
ಮಾತು ಕೊಡದೆ ಬನ್ನಿ ॥೨೬॥

VI

ಕುಂತಲ ಪ್ರಜ್ಞಾವಿಲಾಸವೆಂಬ ಆರನೆಯ ಸರ್ಗ

The World of Hirsutes

ಬೀಯಂ ಶ್ರೀಕರ ರಾಜ್ಯದ
ಖಾಯಂ ವ್ಯಾಪಾರಿ ರಾಜಧಾನಿಗೆ ಪೋಗಲ್।
ಆಯವ್ಯಯ ಮತಿವಂತರ
ಜಾಯಾರಾದನೆಯ ನೀಕ್ಷಿಸಲ್ ಸೊಗಸಕ್ಕು ॥೧॥

ಸ್ವರ್ಣಲತೋದ್ಯಾನರ್‌ಬಹು
ವರ್ಣರ್ ಪೆರ್ದೊಳ್ಳರೆಲ್ಲ ಹಕ್ಕುಗಳೊಡೆಯರ್।
ನಿರ್ಣಾಯಕಕೇಶಬಲರ್
ದುರ್ಣಯವನ್ನಪ್ಪಿನಡೆವ ಹಿಪ್ಪಿಗಳ ನೆಲಂ ॥೨॥

ಕತ್ತಪ್ರಜ್ಞೆಯ ಕೆಂಗುರಿ
ಮೊತ್ತಂ ಜನರಾಶಿಯಂಧಭಕ್ತಿಯ ತೇರಂ।
ಕತ್ತಿನ ಕುಂತಲದಿಂದೆಳೆ–
ಯುತ್ತಿರ್ಪುದ ನೋಡಿರೈ ಚುನಾವಣೆಕಣದೊಳ್ ॥೩॥

ಪ್ರಾಥಮಿಕ ಮುಂತಾದ ಶಿಕ್ಷಕರ್ ಕಾರ್ಖಾನೆ–
ಯಾತ್ಮದಂತಿಹ ಕೂಲಿಕಾರರ್ ಪ್ರಶಾಸನದ
ಭೌತಮಟ್ಟದ ನೌಕರರ್ ಚಿಕ್ಕಭೂಧರರ್ ರಿಕ್ಷಾಜಟಾಧಾರಿಗಳ್।
ಪಾತಾಳಗತ ಜೀವನಾವಶ್ಯಕಾರ್ಥರ್ ಪು–
ನೀತರಾದರ್ ಬೀಜಭಂಗಕ್ರಮಗಳಿಂದ
ಮಾತಾಡದೆಣಿಸುವರ್ ಕೂದಲಂ ಸೀಳಿ ತರ್ಕಿಸುವ ಬಗೆಯಿಂದ ಹಣವ ॥೪॥

ಕಾಮ ನಪುಂಸಕ ಕೋಪ ನಪುಂಸಕ
ಲೋಭ ನಪುಂಸಕ ಮಿದುಳೆದೆಗಳ್ ಸಹ
ಖೋಜಾರಾಜ್ಯದ ಕಾಳ್ಗೂದಲ ಮಂತ್ರೀಶ್ವರರಾಳ್ಕೆಯಲಿ।
ಧೂಮೋಚ್ಛ್ವಾಸರ ಮುಂಗುರುಳಲೆಗಳ
ನೇಮವೆ ನೇಮಂ ಹಬ್ಬಿಗಳಾಹಿಗ
ಪಾಮರರಿಗೆ ಡಿಗ್ರೀಧರರಿಗೆ ವಿದ್ಯಾರ್ಥಿಗಳಿಗೆ ನಾಡ ॥೫॥

ಇಂಥವರಂ ತಿಂದನುದಿನ ಬದುಕುವ
ಪಂಥವ ಹಿಡಿದ ಪರಾಕ್ರಮ ಸೂಕರ
ತಿಂತಿಣಿ ತೋರುವಕೂದಲೆ ಕೂದಲ್ ತಿರುಪತಿಯೊಡೆಯನಿಗೆ।
ಬೆಂತರಗಳು ನಟರಾಜರು ಸಿನೆಮದ
ಕಂತುಗಳಂ ನಾಚಿಸುವ ಧುರೀಣರು
ಮಂತಣವಿಲ್ಲದೆ ಸಭೆಯಲಿ ವೇದಿಕೆಯೇರುವ ಕಪಟಿಗಳು ॥೬॥

Though the mills of God grind heavily
yet they grind extremely slowly!

ಸುವಿಚಾರವಂತರೆಂಬವ ತಲೆ ಹಳೆಗತ್ತ
ಅವಿಚಾರ ಫಲವಂತರುದ್ಯಾನಲತೆ ಬೆತ್ತ
ಕವಿಗಮಕಿ ಪಂಡಿತ ವಿಮರ್ಶಕರ್ ಜೂದಿಗರ್
ಪೆಟ್ಟುಬಿದ್ದರು ತಿಳಿಯದ।
ಅವಿಗಳಾದರ್ ಪಪ್ಪಿಗಳ ಹಿಡಿದು ತಿರುಗುತಿಹ
ದಿವಿಜ ರಾಜ್ಯೋತ್ಸವದಿ ಚಂದ್ರಹಾಸರ ಬೈದು
ತಿವಿವ ತಿಗಳರ ರಾಜ್ಯದೊಳ್ ನವ್ಯ ಸಂಕೀರ್ಣ ಕಚಮುಖರ
ಕಿಮ್ಮೀರರ ॥೭॥

ಹಗ್ಗವ ಹೊಸೆಯುವ ಕಸಬೇ ಕಸಬು
ಕಾಲವ ಕಳೆಯುವ ತುರಿಕೆಯ ಇಸಬು
ಶತಪಥ ಹಾಕುವ ಸೈನಿಕರುಬ್ಬಟೆ
ಜಟಿಲರ ವಂಚಕ ಕಲೆ ಕೇಳ್ ಪುಕ್ಕಟೆ
ಸಿಕ್ಕದು ನೋಡಲ್ ತೆರಬೇಕೆಲ್ಲವ
ಕಟ್ಟದ ಜುಟ್ಟದ ಕಾಯಕದವರಿಗೆ! ॥೮॥

ಸ್ವರತಿಕ್ರೀಡೆಯ ಸಭ್ಯಾಭ್ಯಾಸ;
ಒಬ್ಬಳೆ ಮೂರ್ಖಳ ಕಂಕುಳ ದಾಸ
ಮತಧರ ಕಂಬಳಿ ಹೊದೆದ ನಿವಾಸ;
ಪತಿಯನು ಗತಿಗೆಡಿಸುವ ಹವ್ಯಾಸ;
ಅತಿ ಮಾನವ ತಾನೆಂಬೀ ಗುಂಪು
ಶತಗಡ್ಡಂಗಳ ಹೊತ್ತಿಹ ಪೆಂಪು
ಹರಡುತ್ತಿಹ ದುರ್ಣಯಗಳ ಕಂಪು
ದೈತ್ಯರ ಹೃದಯಕ್ಕಾಯಿತು ತಂಪು! ॥೯॥

ಪಿತ್ತಕೇಶದ ಕಂಗಳಿಗೆ ಬರಿ
ಕತ್ತ ಮಿದುಳಿನ ಕಿವಿಗಳಿಗೆ ಮೈ–
ವೆತ್ತ ಮಾಂದ್ಯದ ರೋಮಹಸ್ತಾವಳಿಗೆ ಸತ್ಕಾರ।
ಕತ್ತೆವಾನಿಸರೆಂದು ಸಭ್ಯರ
ನಿತ್ಯ ದುಡಿಸುವ ರಾಜ್ಯದಲಿ ಬರಿ
ಬೆತ್ತಗಾಯದೆ ಲತ್ತೆ ಶಾಸನ ಧೂರ್ತಘೂತ್ಕಾರ ॥೧೦॥

ಪುಲಿಕೇಶಿಗಳ್ ಕೆಲರ್ ನರಿಕೇಶಿಗಳ್ ಕೆಲರ್
ಕರಡಿಕೇಶಿಗಳನಿಬರರೆಬತ್ತಲಾಗಿರುವ
ಲಲನೆಯರ ಕೊರಳ ಸುತ್ತಲ್ ಬೆಳೆಸಿಕೊಂಡಿರುವ ನೀಳಕುಂತಳ ದಾಮರು।
ಬಲಿಗಳೀ ಕೇಶಗಣರಾಜ್ಯದಲಿ ಕೇಶಿಯೇ
ಕಲಿ, ಸಕೇಶಿ ವಿಕೇಶಿಗಿಂತಲೂ ಹೆಚ್ಚಿನವ
ಳಲೆಗೂದಲಿಳಿಬಿಟ್ಟ ಹಣೆಯವ ಪವಾಡಪುರುಷೋತ್ತಮನು
ಕುರಿಜನರಿಗೆ ॥೧೧॥

ಸಂಶೋಧಿಸಿದರೆ ಸಿಗುವುದು ಕೂದಲು
ಸಂಶಂಬಿಸಿದರೆ ಸಿಗುವುದು ಕೂದಲು
ದಂಶಿಸೆ ತಿನಿಸನು ಸಿಗುವುದು ಕೂದಲು ಮನೆಮೆಟ್ಟಿಲ ಮೇಲೆ।
ಅಂಶುಕಂಟುಗು ಕುಳಿತರೆ ಕೂದಲು
ವಂಶೋತ್ತಮರಲಿ ಹರಿದರೆ ಕೂದಲು
ಶಂಸೆ ಕಚಾವಿಲ ತರುಣಗೆ ಮೀಸೆಯು ಮೂಡಿಹ ಕನ್ನಿಕೆಗೆ ॥೧೨॥

ಸರ್ವಂ ಖಲ್ವಿದ ಮಾಸೀದ್ ಬ್ರಹ್ಮ
ಸರ್ವಂ ತೋರ್ಪಂ ಬಾಲದ ಹಮ್ಮ
ಡಾರ್ವಿನ್ ವಂಶದ ಕಪಿಯಿವರಮ್ಮ
ಪೂರ್ವೋತ್ತರಗಳ ಗಣಿಸದೆ ತಿಮ್ಮ
ಇವರ ಮುಖಂಡ ಕಚಾಕ್ಷ ಕಚೋದರ
ನವನಿರ್ಮಾಣ ಸ್ಫೂರ್ತಿ ಕಚಾಕರ
ಅವಿನೀತರ ನಾದರಿಸುವ ನರವರ
ಕವಿಕೇಸರಿ ಸುಪ್ರತಿನಿಧಿ ಮೂರ್ಖರ ॥೧೩॥

ಇಂತಿರ್ಪ ಕೇಶದರ್ಶನ ಸಾರೋದ್ಧಾರ ಪರಾಯಣರ ದೇಶದೊಳ್–
ಕುರಿಯಲಿ ಗೂಳಿಯ ಕೂದಲು ಕಾಣುಗು
ಎತ್ತಿಗೆ ಕುರಿಯುಣ್ಣೆಯು ಮೈದೋರುಗು
ಕುದುರೆಗೆ ಕತ್ತೆಯ ಬಾಲವು ಬೆಳೆವುದು
ನಿಧಿಚೋರಗೆ ಕೂದಲುಗಳು ಹೊಳೆವುವು ॥೧೪॥

ರಾಜಕಾರಣ ಕೂದಲೆಳೆಯ ಮೇಲೇ ನಡೆಗು
ಯೋಜನೆ ಕಚಾಸ್ತರ, ಜನೋಪಕಾರೋದ್ಯಮಗ–
ಳೋಜೆಯಲಿ ಚೌರಿಚಾಮರಗಳ ತಯಾರಿಕೆ ಸಮಸ್ತಾಗ್ರವರ್ತಿ ಯಕ್ಕು।

ಭೋಜ್ಯವಾದೀತು ಕೂದಲು ಹೊಟೇಲುಗಳಲ್ಲಿ
ವ್ಯಾಜ್ಯವಾದೀತು ಕೂದಲಿನಿನ್ಶುರೆನ್ಸಿಂಗೆ
ಪೂಜ್ಯ ಕೂದಲ ದೇವ ಹಿಪ್ಪೀಶ ಹಪ್ಪುಕಳ್ಳರಿಗೆ ಸರಿದೊರೆಯಾಗಿಹ ॥೧೫॥

ಸರ್ವದ್ವಾರಸಮಾನಂದಾ; ಕೇಶಕಂಬಲಧಾರಿಣಃ
ಕೃತ್ಯಾಕೃತ್ಯಾನಭಿಜ್ಞಾಶ್ಚ ನವದ್ವಾರಕಚಾಂಬರಾಃ ॥೧೬॥

VII

ಕಂಠ ಪ್ರಜ್ಞಾವಿಲಾಸವೆಂಬ ಏಳನೆಯ ಸರ್ಗ

The World of Gutturals

ಘಂಟಾಸ್ವರ, ಶಂಖಸ್ವರ, ಕಾಹಲಕಲನಾದ
ಉಂಟಾರಿಗೊ ಅವರೇ ಜನಜಂಗುಳಿಗಾಮೋದ।
ಘ್ಯಾಂಟಂ ಸಮ ಕಂಠಕ್ರಿಯೆ ಈ ರಾಜ್ಯದ ಭಾಷೆ
ಒಂಟೆಗಳೇ ಧ್ವಜಚಿಹ್ನಗಳಭಿಮಾನದ ಮೂಷೆ ॥೧॥

ಉಚ್ಚಸ್ವರರೇ ಉಚ್ಚರ್
ತುಚ್ಛರ್ ಮಂದಸ್ವರರ್ ಮಹಾಮಹಿಷಾಭರ್।
ಪ್ರಶ್ನಪ್ರತಿಭರ್ ಪ್ರಜೆಗಳ್
ನಿಷ್ಣಾತರ್ ಕೂಗು ಮೆರವಣಿಗೆಗಳ ನಡೆಸಲ್ ॥೨॥

ತಂಬೂರಿಗಂಟಲಿಗರನು ಮೀರ್ದು ಕಿರಿಚಬಹ
ಬಂಬುವಾದ್ಯದ ರಾಗವುಳ್ಳ ರಾಸಭಸಮರು
ಕಂಬವಾಗಿಹರು ರಾಷ್ಟ್ರದ ಕಟ್ಟಡಕ್ಕೆನಲ್ ಜಂಬುಕವು ಮೆಚ್ಚದಿಹುದೇ?।
ನಂಬಿದವರನ್ನು ವಂಚಿಸುವ ಕಂಠಾಗ್ರಹದ
ಜಂಭಾರಿಗಳ್ ಧುರೀಣರ್ ದೇಶದಾದ್ಯಂತ
ಗೊಂಬೆಗಳವೊಲ್ ಮೂಕರಾದಾರು ಮತದಾರರೀಮಹಾಧ್ವಾನದಲ್ಲಿ
॥೩॥

ಇರುಳೊಳ್ ರಾಗದರೋಗಕೆ ಮನ್ನಣೆ
ಪಗಲೊಳ್ ರಾಗದ ರೇಗಿಗೆ ಮನ್ನಣೆ
ಕುರಿಗಾಹಿಯಕಂಠದೊಳುಂ ರಾಗದ ಬುರುಡೆಯ ಸಂಗೀತ।
ಅರಿವಿಗೆ ರಾಗಂ ಮರೆವಿಗೆ ರಾಗಂ
ತಿರುಗಿಸುತಿದೆ ಟ್ರಾನ್ಸಿಸ್ಟರ್ ಗುಂಡಿಯ
ಹರಿಹರಕಮಲಜರೂ ಮರುಳಾಗರೆ ಕಂಠಕಲಾಗ್ರಣಿಗೆ ॥೪॥

ರಾಗ ರಸ ಪದಕಸ ಪ್ರಜಾಪ್ರಭು–
ಮೇಘರಾಜ್ಯದ ಮೋಘಕಾರ್‍ಯಾ
ಯೋಗ ಸಮಿತಿಗಳಲ್ಲಿ ನಾದಬ್ರಹ್ಮ ಪರಮಾರ್ಥ।
ಸ್ಲೋಗನೇ (Slogan) (gun)ಗನ್ ಎಂದು ನಂಬಿದ
ಕೂಗರಸ ಮುಷ್ಕರ ಮಹಾರಸ
ತೂಗನೇ ಆಡಳಿತ ತೊಟ್ಟಿಲೊಳೆಲ್ಲ ಹತಶಿರರ ॥೫॥

ಚಳಿಯಿಸಲಮರಾಚಳಮಂ
ತುಳುಂಕಲಂಭೋನಿಧಾನಮಂ ಸಿಡಿದೆದ್ದು।
ಕಲಕಲ್ ಸರಕಾರಂಗಳ
ನಳುಂಕರುಚ್ಚೈಃಸ್ವರರ್ ಧನಪ್ರತಿನಿಧಿಗಳ್ ॥೬॥

ರಾವಣಾಧಿಕಕಂಠ ಮುಖ್ಯಮಂತ್ರೀಶ್ವರನು
ದುಂದುಭಿಸ್ವರರ ಸಚಿವೀಯ ಸಂಪುಟ ಮಾಡಿ
ಮಾರೀಚನಾಕಾಶವಾಣಿ ಮಂತ್ರಿತ್ವದೊಳ್ ಕೂಗುಗಳ ಕೊಡಲು ನಿಂತು।
"ಶ್ರೀ ವನಿತೆಯನ್ನಾಳುವಧಿಕಾರ ಪಡೆಯುವೊಡೆ
ನೀವೆಲ್ಲ ಹೆಗ್ಗಂಟಲಿರಾಗಬೇಕಯ್ಯ
ಈ ವಿಧದ ಟ್ರೇನಿಂಗು ಕಾಲೇಜ ಗಿರಿಗಳಲಿ ನಾಳೆಯೇ ಸ್ಥಾಪಿಸುವೆನು ॥೭॥

"ಅತಿಕೋಳಿ ಅತಿನವಿಲು, ಅತ್ಯುಷ್ಟ್ರ, ಅತಿಹಸ್ತಿ
ಅತಿಸಿಂಹ, ಅತಿಕತ್ತೆ, ಅತಿಹಂದಿ ಮುಂತಾದ
ರತುನದಂತಹ ಬಿರುದುಗಳ ಪಡೆಯಬಹುದಿಲ್ಲಿ
ಸತತ ಪ್ರಯತ್ನದಿಂ ಕಂಠಬಲಮಂ ಬೆಳೆಸೆ:
ಕೂಗು ಪಂಡಿತರತ್ನ, ಕಿರಿಚು ಪಂಡಿತರಾಜ
ಬೌಗುಟ್ಟುವರ ಗಂಡ ಮಿಯ್ಯಾಂವ್ ಸ್ವರರ ಮಿಂಡ
ಗೌಜಿಗರ ಶಂಖನಾದಂ ಗೊಂದಲದ ಕಹಳೆ
ಓಜ ಘೀಳಿಗರ ಮೇಣ್ ಗೂಬೆಗಳ ಗುರುರಾಜ
ವಾಜಿಗೀಜಿಗಳನೋಡಿಸುವ ಭೇರೀಕಂಠ ॥೮॥

ಎಂಬ ಕಿವಿಗಡಚಿಕ್ಕುವ ಅನೇಕಾನೇಕ ಬಿರುದುಗಳನ್ನು
ನಮ್ಮ ರಾಜಾತಿರಾಜರಾದ ಮಂತ್ರೀಶ್ವರರ ಮಹಾಸಭೆಗಳಲ್ಲಿ ಹಂಚಲಾದೀತು!

ಗಂಟಲ ಬಂಟರ ನೆರವಿಯ
ಕಂಠೀರವರಷ್ಟೆ ಪೊಗಳಿಕೆಗೆ ಭಾಜನರೀ।
ಕಂಠ ಪರಾಕ್ರಮ ರಾಜ್ಯದ
ನೆಂಟರೆ ನೀವ್ ಕೇಳಿರೆಂದು ಗುಡುಗಿದನಾತಂ ॥೯॥

ಗೊಣಗುವ ಪ್ರಜೆಗಳ ಸುಲಿಯುವ
ಗಣರಾಜ್ಯಂ ಗದ್ದಲಿಗರ ಗಂಟಂ ಬೆಳೆಸಲ್।
ಪಣಗೂಡಿಸುವಪಚಳವಳ
ವೆನಿತೆನಿತನೊ ನಡೆಯಿಸಿರ್ಪುದಿದಕೆಣೆಯುಂಟೇ ॥೧೦॥
ಸ್ಮಾರಕನಿಧಿ ಪತ್ರಿಕೆಗಳ
ವಾರಾನ್ನದನಿಧಿ ಮಹೋದ್ಯಮದ ನಿಧಿ ಮತ್ತಂ।
ಆರಯಲರುವತ್ತರ ನಿಧಿ
ಕಾರ್‌ನಿಧಿ ಕಾಮಣ್ಣನಿಧಿಗಳೊಂದೇ ಎರಡೇ? ॥೧೧॥

ಕೂಗಾಳುಗಳ ಸಂಪು, ಮುಷ್ಕರ, ಮಹಾಗಲಭೆ
ತೇಗಾಳುಗಳ ಗುಂಪು ಕಲ್ಲೆಸೆತ ಗಾಜೊಡೆವ
ಯೋಗಶಕ್ತಿ ರಹಸ್ಯ ಮರಣವನ್ನೊಡರಿಸುವ ರಾಜತಂತ್ರಗಳ ಹಿಡಿದು।
ಭೋಗಿಗಳ್ ಬಹುಸಂಖ್ಯರಂ ಪೀಡಿಸುತ್ತಿರುವ
ನಾಗಲೋಕವಿದಯ್ಯ ಪೀಡಿತರ್ ಪಾಪಿಗಳ್
ಹಾಗೆಯೇ ಹುಟ್ಟಿದವರನ್ಯಾಯಗಿನ್ಯಾಯ ಕರ್ಥವೇ ಇಲ್ಲವೆಂಬರ್
॥೧೨॥

ಕುಂಬಳಕಾಯಿಳಿದೀತಾ
ನಂಬಿದರಂ ನುಂಗಲೇಳ್ವ ಗಳದಂಗಳದೊಳ್।
ತಂಬಿಗೆ ಬಾಟಲಿ ರಸಮಂ
ತುಂಬಾಯದಿನೀಂಟಿ ತೇಗುವಬ್ಬರವೇನೋ ॥೧೩॥

ಪಾನ ಪ್ರತಿಬಂಧಂ ಬಡಜನರಿಗೆ
ಯಾನಪ್ರತಿವಿಘ್ನಂ ಧನಹೀನಗೆ
ಕಾನೂನೆಲ್ಲಾ ಲಕ್ಷ್ಮೀ ಸುತರಿಗೆ
ವಾನಪ್ರಸ್ಥಂ ಪ್ರಾಮಾಣಿಕರಿಗೆ! ॥೧೪॥

ಭಾರತ ಗಿರಣಿ ಸ್ವರವುಳ್ಳವನಿಗೆ ಭಾರೀ ಬಹುಮಾನ।
ಶ್ರೀರಮಣರು ಮುಂದಿಟ್ಟಂಥವರವರೊದರಿದ್ದೇ ಸುಜ್ಞಾನ ॥೧೫॥

ಮೇಜು ಕುರ್ಚಿ ಮೈಕುಗಿಯ್ಯು
ಸುತ್ತಿಗೆಗಳ ಸದೆವವ।
ಭೋಜ ಸಭಾಧ್ಯಕ್ಷನವನ
ಕೂಗೆ ನಾಡಿನುತ್ಸವ ॥೧೬॥

ಗಂಟಲ ಮೇಲೇ ನಿದ್ದೀ
ತೆಂಟೆದೆಯವಗೆಂದು ಕೇಳ ಬೇಡಿರಿ ಕುಡುಕಂ।
ಬಂಟರೊಳಗ್ರ ಕಬಂಧಂ
ತುಂಟಂ ರಾಜ್ಯೇಶ್ವರಂ ನಮೋ ಎನಬೇಕೈ ॥೧೭॥

ದಂಡಧರವಾಹನ ಧ್ವನಿ
ಮಂಡೆಯನದಕಿದಕೆಮಾರಿ ಕಳಕೊಂಡವರಂ।
ಉಂಡುರಿಗು ರೇಸುಲಾಟರಿ
ಗುಂಡಾಗಿರಿ ಗುಪ್ತಮಾರಣಂಗಳನೇಕಂ ॥೧೮॥

ಪದಶಬ್ದಾಕ್ಷರವಾಕ್ಯಗ
ಳ್ಗದೆಲ್ಲಿ ಬಂತರ್ಥ? ನಿರ್ವಿಚಾರ ಧ್ವನಿಗಳ್।
ಪುದಿದಿರೆ ಕಂಠಂಗಳಿಗುಂ
ಪದಾರ್ಥಸಂಬಂಧವಾಯ್ತನೂಹ್ಯಂ ಧರೆಯೊಳ್ ॥೧೯॥

ಗುರುಗೃಹದಾಹಮನುಂ ಗಡ
ನರರುಸಿರರ್ ಪದದೆ ಶಾಸಕಾಗ್ರೇಸರರೊಳ್।

ಸ್ವರಬಲಮೋಂಕಾರಾಧಿಕ–
ಮರಿಶರಭಂಗಳ್ಗಮಾಯ್ತು ಭೇರುಂಡಂ ಕೇಳ್ ॥೨೦॥

ಸ್ವಾರ್ಥಸ್ವರಂ ಪ್ರಧಾನಂ
ಧೂರ್ತಸ್ವರಮುಚ್ಚಮಧಿಕಮಂತರ್ಗೂಢಂ।
ರಾತ್ರಿಂಚರ ರಾಜ್ಯದೊಳೀ
ಕ್ಷಾತ್ರಂ ನವ್ಯಂ ನಿರಂಕುಶಂ ನಿರ್ಭೇದ್ಯಂ ॥೨೧॥

ಮೌನವಿದಲ್ಲಂ; ಮಾತೇ?
ಮಾತಲ್ಲಂ ನೀತಿಯಲ್ಲಮೀ ದುರ್ಧ್ವಾನಂ।
ಜ್ಞಾನಾತೀತಂ ಷಡ್ರಿಪು–
ಧಾಮದೊಳಾಳುವರೆ ಗರಳಗೊರಳಿಗರಾದರ್ ॥೨೨॥

VIII

ನಖ ಪ್ರಜ್ಞಾವಿಲಾಸವೆಂಬ ಎಂಟನೆಯ ಸರ್ಗ

The World of Nailists

ವಿದ್ಯುಚ್ಚಲಾಂಭೋಜಪೀಠವೇರಿದ ರೊಬೋಟ್
ರವಿಶಶಿಗ್ರಹ ತಾರೆ ನೀಹಾರಿಕೆಗಳೆಂಬ
ಅಂಕೆಗೊಳಗಾಗದವಯವಿಗಳನ್ನುಗುರಿಂದ
ಔಂಕಿ ಹಿಡಿದಾಳುತಿಹನಾಕಾಶವನು ಮೆಟ್ಟಿ ! ॥೧॥

"ಅಣುಶಕ್ತಿ ಪ್ರಧಾನಾಯೈ
ಹೈಡ್ರೋಜನ್ ಬಾಂಬು ಹಸ್ತಿನಿ।
ರಾಕೆಟ್–ಸ್ಫುಟ್ನಿಗ್ವಾಹನಾಯೈ
ನಖಾಸ್ತ್ರಾಯೈನಮೋ ನಮಃ" ॥೨॥

ಎಂದು ನಿಮಿ ನಿಮಿಷಕ್ಕೆ ಹೊಗಳಿಕೆಯ ಹಂಚುವರ್
ಕೊಳಕುವೆಣ್ಗಳ್ ಹುಳುಕು ಹುರುಕುಗುರುಗನ್ನೆಯರ್
ಸಂದಿ ಸಂದಿಗಳಲ್ಲಿ ಸೀಅಯ್ಡಿಯಾಗಿಹರ್
ಬಂಧುಗಳನುಂ ಹೇಸದಿರಿವ ಹೆಮ್ಮಾರಿಯರ್ ॥೩॥

ಅತಿಹಿಟ್ಲರನಾದಾಕೆಯೊ
ಪತಿಗಿತಿಗಳ ಗತಿಯನೆಣಿಸದಾಳುವ ಯಂತ್ರಂ।
ಖತಿ ಮಗನನ್ನನುಸರಿಸದ
ಸ್ಥಿತಿವಂತರ ಮೇಲೆ ಚಿವುಟಿ ಹಾಕುವುದರ ॥೪॥

ಸರ್ವನಖಮಯಶರೀರೆ।
ಸರ್ವದಾ। ದುರ್ವಿನಯ ನಖ ವಿಕಾರೆ।
ಚರ್ಮಾಸ್ಥಿ ಮಾಂಸ ಖಂಡ।
ಎಲ್ಲವೂ। ದುರ್ಮದೋದ್ಧತನಖೋತ್ಥ ॥೫॥

ಆ ಸರ್ವಾಧಿಕಾರಿಣಿಯಾದ ಸರ್ವಾಸುರಿಯ ರಾಜ್ಯದೊಳ್
ನಖಮುಖಿಯರ್ ನಖನೇತ್ರೆಯ–
ರಖಿಲರ್ ದುಃಸಚಿವೆಯರ್ ಮಹಾದುರ್ಮಂತ್ರರ್!
ಸಕಲವಿಧ ಸೇವಕರ್ ಶತ–
ಶಕಾರರಂ ಮೀರಿಸಿರ್ಪರೆನಲೆಣೆಯುಂಟೇ? ॥೬॥

ಋಕ್ಷನಖರಕ್ಷಚತುರರ್
ಭಕ್ಷಣಕೆಂದೇ ದರಿದ್ರರಂ ಬಸಿರ್ಬಗೆದು।
ಪ್ರಖ್ಯಾತರೆನಿಸಿಕೊಂಡರ್
ದುಃಖಾರ್ತರನಳಿಸಿ ನಿಮ್ನರಂ ಮೇಲೆತ್ತಿ ॥೭॥

ಬೇಕಾದವರೇ ನಿಮ್ನರ್
ಬೇಡಾದವರೆಲ್ಲರಗ್ನಿ ಹೋತ್ರಿಬ್ರಹ್ಮರ್।
ಶಾಕಿನಿ ಡಾಕಿನಿಯರ್ ತಾವ್
ಮೂಕತೆಯಂ ತಾಳ್ದು ನಿಂತರೀ ಮಾರಿಯೆದುರ್ ॥೮॥

ಶೂರ್ಪಣಖೆಯಾರ್ಪದೆಷ್ಟಾ
ಕಾರ್ಪಣ್ಯ ಪ್ರಭೆಯ ನಖಗಳಾಕೆಯ ಕೈಯೊಳ್।
ತೀರ್ಪಾಕೆಯದೇ ಕಾಯದೆ
ನೇರ್ಪೆನ್ನಲೆ ಬೇಕು ಬದುಕುವಾಸೆಯನ್ನುಳ್ಳರ್ ॥೯॥

ನಖಧರ್ಮಂ ಬರಗುವುದೇ
ಶಿಕಾರಿ ಶೂರರ್ಗೆ ನಖಮುಖೇಶ್ವರಿ ಯಡಿಯೊಳ್।
ಅಖಿಲಮನರ್ಪಿಸಿ ಸುಖಿಸುವ
ವಿಕಾರಿಗಳ್ ಪ್ರಾಧಿಕಾರಿಗಳ್ ಗತಲಜ್ಜರ್ ॥೧೦॥

ದಿಲ್ಲೀಶ್ವರಿ ಧನಿಕೇಶ್ವರಿ
ಕಳ್ಳವ್ಯಾಪಾರಿಗಳ್ಗೆ ರಕ್ಷಿಕೆಯಾದಳ್।
ದಲ್ಲಾಲಿಗಳರಸಿತಿ ತಾಂ
ದುರ್ಲಲಿತೆ ದುರಾಗ್ರಹ ಪ್ರಧಾನನಖಾಗ್ರೇ ॥೧೧॥

ನಖಮಯ ಮೃಗಪಕ್ಷಿಕ್ರಿಮಿ
ಬಕಭೇಕ ಪ್ರಕರ ಘೂಕಯಾಕಾನಿಕಂ।
ನಖರಾಜ್ಯದೊಳುದಿಸಿದವೆನೆ
ಪ್ರಕಾರಮೆಂತಾ ಮಹೋಗ್ರನಖಿ ಶಾಸನದ ॥೧೨॥

ದೀನರ ಹಕ್ಕಂ ಕಸಿಯಲ್
ಕಾನನಬಾಂಬೊಂದನೆಸೆದಳಾಪತ್ಕಾಲಂ।
ದಾನವರ ಪರ್ವಮಾಯ್ತು;ನ–
ಖಾನೀಯರ್ ಸತ್ಯಸಂಧರಾದವರೆಲ್ಲರ್! ॥೧೩॥

ಬದಲು ಬದಲು ಬದಲು ರಾಷ್ಟ್ರವೆಲ್ಲ ಬದಲು ಬದಲು
ಉಗುರುಮಿದುಳಿನವರ ಮೌಲ್ಯರಾಶಿಯೆಲ್ಲ ಬದಲು!
ಕಾವ್ಯಕಲೆಗಳಲ್ಲಿ ನಖಪ್ರತಿಮೆಗಳ ವಿಧಾನ
ಕಾಮಧಾಮಗಳಲಿ ನಖಕ್ಷತಗಳೇ ಪ್ರಧಾನ!
ವಿಜ್ಞಾನದ ವಿಪಣಿಗಳಲಿ ನಖಸೂತ್ರಗ್ರಹಣ
ಕ್ರೀಡಾಗೃಹಗಳಲಿ ನಖಕ್ರೀಡೆಗೆ ಪಣ್ಯಧನ ॥೧೪॥

ನಖಸುಖಪ್ರಲೋಭರಾದರು
ಪ್ರಜನರೆಲ್ಲ। ಪ್ರಖರವರ್ಣನಖವ ತಳೆದರು!
ವಿಕಟರೀತಿಯನ್ನು ಹಿಡಿದರು
ನಡತೆಯಲ್ಲಿ। ಪ್ರಕಟವಾಗಿ ತುರಿಸಲೆದ್ದರು। ॥೧೫॥

ಉಗುರ ಚುಚ್ಚುವುದನು ಕಲಿತರು
ತೊಗಲ ಹರಿದು। ಹಗಲೆಕೊಂದು ಜನರ ಸುಲಿದರು।
ವಿಗಡವಿಕ್ರಮರ್ಕಳೆದ್ದರು
ಮನೆಮಠಗಳ। ಸುಡಿಸಿ ಬಂಗಲೆಗಳೊಳೆಸೆದರು ॥೧೬॥

ಒಬ್ಬ ಮಾತನಾಡಿದರಿನ್ನೊಬ್ಬಗೆ ತುರಿಕೆ
ಅಸೆಂಬ್ಲಿಯಲಿ ಚೆಲ್ಲುವದೂ ಚುರುಚಿಯ ಗರಿಕೆ।
ನಖಭಾಷೆಯೊ ಮೊನಚು ಮೊನಚು
ಪ್ರಶ್ನೆಗಿಲ್ಲಕಾಲ ಗಡಚು
ಯಾವಾಗಲು ಸೆಕೆ ಸೆಕೆ ಸೆಕೆ
ಮನುಷ್ಯಸಂಬಂಧಕ್ಕೆ! ॥೧೭॥

ಹೃದಯದಲಿ ಹುಲಿಕರಡಿಯುಗುರುಗಳು ಬೆಳೆದಿರಲು
ಜಾತಿವೈರದ ಬೆಂಕಿಯನ್ನು ಹೊಟ್ಟೆಯೊಳಿಡಲು
ಬೆದರಿಸುವ ಕೋವಿ ಬೆನ್ನಂಟಿ ತಾ ಬರುತಿರಲು–
ಭೀತಿಯೊಂದೇ ನೀತಿಯಾಡಳಿತಕಾಗಿರಲು–
ಸತ್ತವರಿಗತ್ತವರಿಗಿಹುದು ಕಾರಾಗಾರ
ತುತ್ತಿಗಿಲ್ಲದ ಜನರನಡಗಿಸುವ ಪರಿವಾರ
ಸುತ್ತಿರುವುವೆತ್ತಲೂ ಮಂತ್ರಿಗಳ ಬಡಿವಾರ
ಕತ್ತೆತ್ತಿದರೆ ಕಚ್ಚಿಹರಿವ ನಖದವತಾರ! ॥೧೮॥

ಉಗುರು ಕಂಪಿದಲ್ಲಿ ಸಾವಿರಗಳು ಮಾಯವಾಗುವುವು
ದಗಲುಬಾಜಿಗಳಿಗೆ ರಕ್ಷಿಗಣಗಳು ಬಂದೊದಗುವುವು
ಬಗಲುಬಂಟರಾದವರಿಗೆ ಸ್ಥಾನಮಾನ ದೊರಕುವುವು–
ಮುಗಿಲ ಮುಟ್ಟಿತಪತ್ರಪೆಯ ಬಾವುಟ! ದುಮ್ಮಾನವು
ಬಗೆಯಿತೆದೆಯ ಸಾಧುವೃತ್ತಿಯವರ, ದುರಾಕ್ರಮಣದಿಂದ
ದುಗುಡ ಹೊತ್ತಿತಂಧಕಾರ ಮುಸುಕಿತವರ ಕಂಗಳಿಂದ
ಹರಿದ ನೀರು ಜಲಧಿಯಾಯ್ತು; ಉಸಿರೆತ್ತಲು ಬಾಯ್ಗೆ ಬಂಧ
ಪತ್ರಿಕೆ–ರೇಡಿಯೊಗಳೆಲ್ಲ ಹಲಧರಗೋವಾದವು ॥೧೯॥

ಕಲಹಕಂಟಕರ ಮುಖಂಡತ್ವದಲಿ ಜನಮನಗಳು ಬದ್ಧ
ಜಲಲಿಪಿರೂಪಕ್ಕಿಳಿಯಲವರುಗಳು ಕೊಟ್ಟ ವಚನ ವಿದ್ಧ
ಮಿದುಳತಿರುಗಿಸುವ ವೈಜ್ಞಾನಿಕತೆಯ ಯಂತ್ರವೈದ್ಯಯುದ್ಧ
ಒದರಿದವರ ಪರಲೋಕಕೆ ಕಳಿಸಲು ಅವರ ತಂತ್ರ ಸಿದ್ಧ ॥೨೦॥

ಉಗುರ ಬಿಚ್ಚುವ ಉಗುರ ಕಚ್ಚುವ
ಆಡಳಿತದಧಿಕಾರಿಗಳ್
ಉಗುರುಸನ್ನೆಯ ಮಾಡಿ ಉಲಿಯುವ
ಜಗಳನಗೆಯೊಳ್ಗನ್ನೆಯರ್ ॥೨೧॥
ಅವರಿವರಂ ಪರಚುವುದೇ
ಸವಿಮಾತಾ ಸಮಾಜದೊಳ್ ಸಭಾಸ್ಥಾನಗಳೊಳ್।
ಜವನಂ ಕೆಣಕುವ ಕಾಯ್ದೆಗ–
ಳವನಿಯನೆಡಗಾಲಿನಿಂದವುಂಕಿದವಮಮಾ! ॥೨೨॥

ಬಾಂಬೊಡೆದಂತೊಡೆದುದು ಜನ
ನಂಬಿಸಿ ವಂಚಿಸುವ ವೈದ್ಯಕೀಯದ ಬಲದಿಂ।
ನಂಬಲು ಬಾರದ ವಿಕೃತತೆ
ತುಂಬಿತು ಮೈತುಂಬ ಸತ್‌ಪ್ರಜಾ ವರ್ಗಗಳ ॥೨೩॥

ಕೈ ಕಾಲು ಕಣ್ಣು ಮೂಗು ವಿ
ಪಾಕದಿನಂಗಾಂಗವಯುತ ಸಂಖ್ಯೆಯೊಳವರ।
ವೈಕೃತವಾದವು ಮಾಯಾ–
ಸೇಕದಿನಾಳುವರ ನಖವಗುರ್ವಿಸಿಯೆಸೆದ ॥೨೪॥

ಅಂಥ ಶಾಸನಕಂಜಿ ವಿಕೃತಾಂಗವೇಷವಾಕ್
ಪ್ರಕೃತಿಯವರನುದಿನವು ನಖವೃದ್ಧ ದೆವ್ವಗಳ
ಮಂದ ಮತಿಯಿಂದ ಪೂಜಿಸಿದರಾ ನರಮೇಧ
ಹಿರೊಶಿಮಾ ನಾಗಾಸಾಕಿಗಳೊಳಾದುಕ್ಕಿಂತ
ನೂರಾರು ಪಟ್ಟು ದುರ್ದೃಶ್ಯವಾಯ್ತೆನೆ ಮೂಢ
ರಿಂದು ದೈವದ ಪಾತ್ರಿ ಕುಣಿಸಿದಂತೆಯೆ ಕುಣಿವ
ಚೆಂದ ವೈರಾಜ್ಯದೊಳ್ ಚಂಡಿಕಾಧರ್ಮದೊಳ್!
ಕುಂಡೆ ಚಿವುಟುವ ಕಲೆಯನಳವಡಿಸಿ ಕೊಂಡವರ್!

ಕೋಡು ಮಕುಟವಹೊತ್ತ ಕೋಡಂಗಿ ನಾಯಕರ್
ಕಿಷ್ಕಿಂಧೆಯನು ನಿರ್ಮಿಸಿದ ಮೂಲ ಮೇಸ್ತ್ರಿಗಳ್
ಉಗುರ ಮೇಲ್ ನಿಗುರಿ ನಿಲ್ಲುವ ನಾಟ್ಯಶಾಸ್ತ್ರಿಗಳ್ ॥೨೫॥

ಆ ರಾಜ್ಯದೂರುಗಳೊಳ್–
ಉಗುರುಗಚ್ಚಿನ ಗೋಡೆಗಳ ಹೇ
ರುಗುರುದೋರಣ ಹೊತ್ತ ಕಿಟಕಿಯ
ಉಗುರುಸರಗಳ ಗೇಟು ಹಾಕಿದ ಬಂಗಲೆಗಳನ್ನು।
ಉಗುರುಹಂಚಿನ, ಮಾಡಿನಚ್ಚಿನ
ಬೆಗಡು ತುಂಬಿದ ಹವೆಯವಾಡಿಸಿ
ವಿಗಡಿಸಿದರೋ ಕಟ್ಟಿಸಿ ಪ್ರತಿಮಯ ಮಹಾಪ್ರತಿಭರ್ ॥೨೬॥

ಎಂಟು ಕೋಡಿನವರು ಬೇಕೆ
ಆರು ಮೊಲೆಗಳವರು ಬೇಕೆ
ಗಂಟು ಮೂಗಿನವರು ಬೇಕೆ
ಪಂಟು ಹೊಡೆವ ಪೋಲಿ ಬೇಕೆ
ಹತ್ತುಬಾಯ ಹನುಮ ಬೇಕೆ
ಪೆಂಟೆಬೆಲ್ಲದಂಥ ತಲೆಯ ಬೇಕೆ ಜನಗಳು ॥೨೭॥

ವಿಜ್ಞಾನವನೀಬಗೆಯೊಳ್
ತಜ್ಞರ್ ಬಳಸಲ್ ಸುಧಾರಣಾಪರ ಸಚಿವರ್।
ಆಜ್ಞೆಯಕೊಟ್ಟುದು ಕಾರಣ–
ಮಜ್ಞಾನಮನೋದಿಸಿಟ್ಟರಾ ಮಕ್ಕಳಿಗೆ ॥೨೮॥

ಸ್ಥಿರಪಟ್ಟಮಾಯ್ತು ಪೈಶಾ–
ಚರ ವಂಶಕ್ಕೆಂದು ಸಂತಸಂಬಟ್ಟಿರ್ಪಳ್।
ಖರನೆಂದು ಪತಿಯನೆಂದೋ
ಮುರಿದೀಂಟಿದನೆತ್ತರಂ ಭಲೇ ದೊರೆಸಾನಿ ॥೨೯॥

IX

ಪೃಷ್ಠ ಪ್ರಜ್ಞಾವಿಲಾಸವೆಂಬ ಒಂಬತ್ತನೆಯ ಸರ್ಗ

The World of Fundamentalists

ತಲೆಗಿಂತ ಪೃಷ್ಠಮಂ ನಾ
ಣೆಲಿಗಳ್ ನಂಬಿರ್ಪರಿಲ್ಲಿ ಸರ್ವಶ್ರೇಷ್ಠಂ।
ಕುಳಿತಿರ್ಪ ಕಂತ್ರಿಗದ್ದುಗೆ–
ಯಳುಂಕುವೊಲ್ ರಾಜರಾಜಸದೃಶಂ ಬೊದ್ದಂ ॥೧॥

ಪೃಷ್ಠದೊಳಿರ್ಪುದು ಮಿದುಳೆಂ
ದಟ್ಟಮನೇರ್ದಾಳ್ವ ನಾಯಕರ್ ಬೆಂಬಲಿಗರ್\
ಪೃಷ್ಠಪ್ರತಿಷ್ಠೆಗೆಂದೇ
ದುಷ್ಟರ ಸಾಕಿರ್ಪರಂಜಿಸಲ್ ಸಜ್ಜನರಂ ॥೨॥

"ಇರಿ
ಇರಿ
ಬೆನ್ನಿಗಿರಿ
ಗಿರಿಯಂತಹ ಬೆನ್ನಿಗಿರಿ
ಚಿನ್ನದ ಚೂರಿಯನು ತೆರೆದು
ಹರಿಯಂದದಿ ಹಲ್ಲುಕಿರಿದು

ಅರಿತ ಜನರ ಕಂಡು ನಂಬಿಸುತ್ತ ನಿದ್ದೆಮಾಡಿಸಿ
ಹರಿದರಿವೆಯ ಮೊಗಕೆ ಮುಚ್ಚಿ ವಿವಿಧ ವಿಷಮನೂಡಿಸಿ
ವ್ಯಾಪಾರದ ಕತ್ತಿಯಿಂದ
ವ್ಯವಹಾರದ ಶೂಲದಿಂದ
ಚಾಡಿಛಿದ್ರ ದೀಟಿಯಿಂದ
ದೇಶಾವರಿ ನಗೆಗಳಿಂದ
ಬಢತಿಗಳನು ಭಗ್ನಿಸು

ವರ್ಗಾವಣೆ ಹಿಗ್ಗಿಸು
ನಿಂತ ನೆಲವೆ ಕುಸಿಯುವಂತೆ
ಖೆಡ್ಡಗಳನು ನಿರ್ಮಿಸು
ಮಕುಟ ಕಚ್ಚಿ ಹಾರುವಂತೆ
ಸರ್ಪಾಸ್ತ್ರವ ಘೂರ್ಮಿಸು ॥೩॥

ವೈಟ್ ಕಾಲರ್ ವರ್ಕರಾಗಿ
ಮಧ್ಯವರ್ಗ ವೈಶ್ಯನಾಗಿ
ಬದ್ನಾಮಿಸು ಮಿತ್ರರ
ಸುಮನಃಶತಪತ್ರರ ॥೪॥

ಎಂಬುದು ಧುರೀಣರು ಪ್ರಕಾಶಕರಿಗಿತ್ತ ಗುಪ್ತಾದೇಶವಾಗಲ್–
ಅವರ ಅನುಯಾಯಿಗಳಂತೆಯೇ ಎಸಗಲ್

ಕುದುರಾಳನ ಹೃದಯ ತಾಳಿ
ಹಾಲಾಹಲ ಹೊಯ್ದು ದಾಳಿ
ಮಾಡದೆ ಜಯವುಂಟೆ ಹೇಳಿ
ಪಂಚೇಂದ್ರಿಯ ಸೌಖ್ಯಕೆ
ಬೃಹತ್‌ಪೃಷ್ಠಲೋಕಕೆ ॥೫॥

ಪ್ರಜೆಗಳನ್ನು ದುಡಿಯ ಹಚ್ಚಿ
ದಂಡಿಗೆಗಳ ಹೊರಲು ಹಚ್ಚಿ
ದ್ವಿಜರನೆಲ್ಲ; ಪಾಪಕರ್ಮಿಗಳನು ಹೆಚ್ಚಿಸಿ
ಮಜವ ಮಾಡಿ ತಿರುಗುವಂಥ
ಗಜಾಸುರರ ಪೃಷ್ಠದಿಷ್ಟ
ಯಜಮಾನಿಕೆಯೆಲ್ಲೆಲ್ಲೂ ಕಡ್ಡಿ ಚುಚ್ಚಿಸಿ ॥೬॥

ರಾವಣನೇ ಮಹೋದಾತ್ತ
ಕೌರವನೇ ಧರ್ಮಪುತ್ರ

ಶಿಶುಪಾಲನು ಸರ್ವಪಾಲ ಪೃಷ್ಠ ರಾಜ್ಯದಾಳ್ಕೆಯೊಳ್।
ಹಿರಣ್ಯಾಕ್ಷ ಹಿರಿಯ ಮಂತ್ರಿ
ಪರಸ್ವಾಪಹಾರ ಸೂತ್ರಿ
ನರಾಧಮರೆ ನರೋತ್ತಮರು ಪೃಷ್ಠ ಶ್ರೀಮಂತರೊಳ್ ॥೭॥

Gold begets in brethren hate
Gold in families debate
Gold does friendship separate
Gold does civil war create ॥೮॥

ರಾಷ್ಟ್ರ ರಾಷ್ಟ್ರಗಳಲಿ ಚಿನ್ನ
ದನ್ನಕಾಗಿ ಕಲಹವೆದ್ದು
ಕಾಲಾಗ್ನಿಯಲೀಲೆ ಮತ್ತೆ ಪ್ರಾರಂಭಿಸದಿರುವುದೇ?
ಒಬ್ಬೊಬ್ಬ ಪ್ರಜೆಯಲ್ಲೂ
ಹುಟ್ಟಿದೀರ್ಷ್ಯೆಯಗ್ನಿ ಕೂಡಿ
ವಡವಾನಲನಾಗಿ ಬೆಳೆದು ನೀರ್‌ನೆಲಗಳನುಂಗದೇ? ॥೯॥

ನಾಗರಿಕತೆಯೆಂಬ ನಾಟ್ಯ–
ಮೇನಕಾವತಾರದೆದುರು
ಅಮೇರಿಕಾಚೀನರಶಿಯ ಮುಗ್ಧವಾದ ಹಾಗೆಯೇ!
ಯೂನಿವರ್ಸಿಟಿಗಳ ಹಿಡಿದು
ಸರ್ವಸಂಘ ಸಂಸ್ಥೆಯೊಳೂ
ವ್ಯಕ್ತಿಲೋಭದುರಿಯೆದ್ದುದು ರಾಷ್ಟ್ರಹಾನಿಗಾಗಿಯೇ ॥೧೦॥

ಅಜ್ಮೀರದ ಹತ್ತಿರದಲಿ
ಶಂಬಲ ಪ್ರದೇಶದಲ್ಲಿ
ಕಲ್ಕಿ ಹುಟ್ಟಿ ಬರುವನಂತೆ ಅದಕ್ಕಿದೋ ಸಿದ್ಧತೆ!
ಕಂಟಕಾರಿಹಾರಧಾರಿ
ಬಂಟನಾಗಿ ಬರುವನಂತೆ
ಪಿಂಟುಗಳನು ದಂಗುಬಡಿಸಲದಕ್ಕಿದೋ ಸಿದ್ಧತೆ! ॥೧೧॥

ಕರ್ತವ್ಯದ ಮೋರೆಗಡ್ಡ
ಚಾಚಿ ಕುಳಿತು ಪೃಷ್ಠವನ್ನು
ಕಬ್ಬನ್ ಪಾರ್ಕ್ ಹೋಟೆಲಲ್ಲಿ ಕಾಫಿ ಕುಡಿವ ಶುದ್ಧತೆ।
ಕೌಟಿಲ್ಯದೆ ಕಾಲವನ್ನು
ನೂಕುವುದೇ ನಿತ್ಯಧರ್ಮ
ರೂಪಾಯಿಗೆ ಬಾಯಿನೀರು ಬಿಡುವುದೆ ಮರ್ಯಾದೆಯು ॥೧೨॥

ಸಂಬಳವೋ ಗಿಂಬಳವೋ
ಭತ್ಯವೊ ಬಾಯ್ಬಡಿಗೆಗಳೋ
ಯಾವುದಾದರೇನದಕೇ
ಯಾರನಾರು ಇರಿದರೇನು
ತರಿದರೇನು ಮುರಿದರೇನು
ಅದೇ ನಿತ್ಯ ನಡೆಯುವಾಗ ಅಳು–ಅಂಜಿಕೆಯೇತಕೆ? ॥೧೩॥

ಸಿಕ್ಕಿದ್ದನು ಸೆಳೆದುಕೊಂಬ
ರಾಜ ತಂತ್ರದಿಂದ ದೊಂಬ
ರಾಟವಾಡದವನು ಹುಂಬ ನಡೆ ನೀನೂ ಮೇಲಕೆ। ॥೧೪॥

ಬಿದ್ದವನು ಒಂದೆ ಎದ್ದವನು ಒಂದೆ ಪೃಷ್ಠಪ್ರಮಾಣದಿಂದ
ದೊಡ್ಡವನೆ ದೊಡ್ಡವನು ಕುಳಿತ ಕಾರಿನಾರ್ಭಟದವೋಟದಿಂದ।
ಮಡ್ಡಿ ಮಡೆಯ ಮುಟ್ಠಾಳ ಲಂಚವನು ತೆಗೆದುಕೊಳ್ಳದೆಬಡ
ದುಡ್ಡಿನಿಂದ ದೊಡ್ಡಪ್ಪನಾವನೋ ಅವನ ಕುಂಡೆಯೆ ಬಡಾ
॥೧೫॥

ಪೃಷ್ಠ ಭಾಷೆಯೇ ಭಾಷೆ ಯೋಗಿಗಳು "ಪರಾ" ಎಂಬರದನು
ಪಿಷ್ಟಪೇಷಣವೆಸೆಂಬ್ಲಿವಾದ ಮರುಳ್ಗೊಳಿಸೆ ಜನಗಳನ್ನು।
ಪೃಷ್ಠಹಾಸವೇ ಅಟ್ಟಹಾಸ ಕೈಲಾಸಗಿರಿಯವಾಸ
ಕಷ್ಟವೆಲ್ಲ ಬಡ ಪೃಷ್ಠರಿಂಗೆ ಕೃತಪೂರ್ವಜನ್ಮದೋಷ ॥೧೬॥

ಪೃಷ್ಠಪ್ರಕಟನ ಚತುರರ್
ಪೃಷ್ಠಪರಾಕ್ರಮಿಗಳಿದ್ದ ಗದ್ದುಗೆ ಬಿಡದ।
ಪಟ್ಟಾಭಿರಾಮರಾದರ್
ನಷ್ಟಕ್ಕುಳಿದೆಲ್ಲ ಪೃಷ್ಠರೇಖಾಹೀನರ್ ॥೧೭॥

ಪೃಷ್ಠಭಾರವೇ ರಾಜ್ಯಭಾರನಿರ್ವಾಹಕತೆಗೆ ನಿಕಷ
ಭಟ್ಟಂಗಿಗಳನ್ನಿಟ್ಟುಕೊಳ್ಳದಿರೆ ಬಾಳೆಲ್ಲಾ ವಿರಸ।
ಅಟ್ಟವೇರಿ ಒದೆದೇಣಿಯನ್ನು ನಿಷ್ಪಕ್ಷ ಪಾತದಿಂದ
ಬಿಟ್ಟಿಬೀಡಿ ಸೇದುವುದು ನೇತೃಗುಣ ಕಸಿದುಕೊಂಡು ಬಂದ
॥೧೮॥

ಮುಖಂ ಪೃಷ್ಠಂ ನಖಂ ಪೃಷ್ಠಂ ತುಂದಿಲತ್ವಂ ಪ್ರಪೃಷ್ಠತಾ।
ಶುಕಂ ಹತ್ವಾ ಪಿಕಂ ಹತ್ವಾ ಶಾಸ್ತ್ರಿರಾಜ್ಯಂ ಸುಪೃಷ್ಠವಾನ್ ॥೧೯॥

ಪೃಷ್ಠಬುದ್ಧಿ ತಲೆಗಿಲ್ಲವೆಂಬುದೇ ಪೃಷ್ಠವಾದಸಾರ
ಉತ್ತರಗಿತ್ತರ ಪ್ರಶ್ನೆಗಿಲ್ಲ ಮೂಕಾಸುರಾವತಾರ।
ಪೃಷ್ಠತಿರುಹಿದರೆ ರಾಜ್ಯತಿರುಗುವುದು ಮಹಾಪೃಷ್ಠಧರರ
ಪೃಷ್ಠಪ್ರಭೆಯಿದೆ ಮಿಣುಕುಹುಳಕ್ಕೂ ಬಲ್ಲಿರೇನು ಖಬರ ॥೨೦॥

ಬಂಡವಾಳದಪ್ರತಿಮ ಮೂಲವೀ ಪೃಷ್ಠ ಗೋತ್ರದವರ
ಜೊಂಡಿಗ ಮೀಸೆಯ ಹೊತ್ತ ಮುಖವು ಸಹ ಪೃಷ್ಠಿಗಿರಿಯ ಶಿಖರ।
ಚಂಡಕೋಪ ಪೃಷ್ಠಪ್ರತಾಪ ವಿಶ್ವಾದಿಮೂಲ ಮೇರು
ಮಂಡ ನಂಗಳಲ್ಲಗ್ರಗಣ್ಯವಿದು ಪೌರುಷಕ್ಕೆ ಬೇರು ॥೨೧॥

X

ವಿಚಿತ್ರ ಪ್ರಜ್ಞಾವಿಲಾಸವೆಂಬ ಹತ್ತನೆಯ ಸರ್ಗ

The World of Strangers

ಅಪರೂಪವನುರೂಪ ಅಪಲಾಪ ಸಲ್ಲಾಪ
ಅಪರಿಚಿತರಾಜ್ಯವಿದು ಪರಿಚಿತರಲಿ।
ಸುಪರೀಕ್ಷೆಗೊಳಪಡಿಸಿ ಮೃತ್ಪಿಂಡ ಮತಿಯನ್ನೆ
ಕಪಟಿಗಳು ಮೆಚ್ಚುವುದು ಮಂತ್ರಿಗಳಲಿ ॥೧॥

ಅಪಕಾರವುಪಕಾರ ಲೋಕಕೀ ನೇತೃಗಳು
ತಪಿಸಿಮಾಡುತ್ತಿಹುದು ಹುಚ್ಚು ಕೆಲಸ।
ವಿಪಿನವನ್ನೇ ಕಡಿದು ವನಮಹೋತ್ಸವ ಮಾಳ್ಪ
ಚಪಲ ಶಾಸ್ತ್ರಜ್ಞನಾಫೀಸಿಗಲಸ ॥೨॥

ಮೋಸದಲಿ ವೇಷ, ವೇಷದಲಿ ಮೋಸ–
ಇದರಲ್ಲದಾವ ದೋಷ?
ಇರಿತ ದುರಿತಗಳ ವಿಶ್ವರೂಪವನು
ಎಣಿಸಬಲ್ಲ ಶೇಷ! ॥೩॥
ಹೊಸನಮೂನೆಗಳ ನಮಗೆ ತೋರಿಸಿದ
ದೈತ್ಯ ನಮ್ಮ ಭಾವ
ಪಾಪ ಪುಣ್ಯಗಳ ಭೇದವಳಿದಿರಲು
ಜನರ ನಾವ ಕಾವ? ॥೪॥
ತಿರುಗಿಸು ಪೃಷ್ಠವ ನೀತಿಗೆ ಭೀತಿಗೆ
ನಿರ್ನಿಮಿತ್ತವಾಗಿ
ಜಗವ ನಿರ್ಮಿಸಿದನಂತೆ ಬೊಮ್ಮ ತಾ
ತನ್ನ ಲೀಲೆಗಾಗಿ ॥೫॥
ನೂರು ದಿವಸ ಹಗಲಿರುಳು ಬೈಸಿಕ
ಲ್ಲಿಳಿಯದೋಡುತಿರುವ
ಗೇರುಬಳಿದ ಮೊಗದವನ ನೋಡಲಿದೆ
ಜನರ ಸಂತೆ ಬರುವ! ॥೬॥

ಇಂಗ್ಲಿಷ್ ಬಾಡಿಯ ಚೂಚುಕ ಮೊಳೆಗಳ
ನಿಗುರಿಸಿ ನರ್ತಿಸುವಂಥವರ
ನೋಡಲು ಸಿನೆಮಿಸ ಹೊರಡುವ ರಸಿಕತೆ
ಸೆಳೆಯದೆ ದೇವತೆಯಂಥವರ? ॥೭॥

ಈ ಸ್ವಾತಂತ್ರ್ಯ ಸ್ತ್ರೀಗೇ ಮಾರಕ
ಎಂಬುದ ನರಿಯದ ಮುಗ್ಧೆಯರ
ಪ್ರೌಢಾವೇಶಕೆ ತುದಿಮೊದಲೆಲ್ಲಿದೆ
ದೇಶದ ನಾಶದ ಹರಿಕಾರ ॥೮॥

ವೇಷದ ಸಮತೆಯ ಲಿಂಗದಸಮತೆಗೆ
ಸಮವೆಂದೀತಹ ತಜ್ಞಗಣ;
ಮೋಸದ ವೇಷದ ಸಾವ್ಕಾರರುಗಳು
ಬಡವರೆ ಸರಿ ಎಂದೀತು ಜನ! ॥೯॥

ತೇನಸಿಂಗ ಗೌರೀಶಂಕರವ–
ನ್ನೇರಿ ಬಂದ; ದೇವತೆಯವನು;
ಅದ್ಭುತಕಾಗಿಯೆ ಅದ್ಭುತವೆಂಬುದು
ನವ್ಯಕವಿಗಳಿಗೆ "ಹನಿಮೂನು" ॥೧೦॥

ಎರಡು ಮೂರು ಜಡೆವೊತ್ತ ಹೆಂಗಸರ
ಬರಡುನಗೆಯ ನೋಡಲು ಬನ್ನಿ;
ಹುರುಡಿಗಾಗಿ "ಮರ್ಡರ್" ಮಾಡಿಸುತಿಹ
ಸಾನಿಯರಿಗೆ ಸಲ್ಲಾಮೆನ್ನಿ! ॥೧೧॥

"ಫಾರಿನ್" ಡಿಗ್ರಿಯ ಪ್ರಚಂಡ ಪಂಡಿತ
ಆರುಭಟಿಸುವದ್ಭುತದಿಂದ
ಪಾರಾಗದು ಜನರಾಣಿ ಬೆಂಬಲಿಸೆ
ಕೋಟಿ ಕೋಟಿ ಖರ್ಚಾನಂದ! ॥೧೨॥

ಚಳವಳ ಚಮತ್ಕಾರ, ಗದ್ದಲದ ಗಮಕ ಮೇಣ್
ಪ್ರಳಯತಾಂಡವ ಸೇನೆಯೊಡೆಯ ಬಾಯ್ಮಾತಿನವ
ಕಳವಳದ "ಸ್ಟಂಟ್ ಹೀರೊ" ಕವಿ, ಮಂತ್ರಿ, ಕುಲಪತಿ
ವಿಮರ್ಶವಿಜ್ಞಾನಿಯಥವಾ!

ಅಳಿದ ವೀರರ ಹೊಗಳಿ ಭಾಷಣಿಸಿ ಬೊಬ್ಬಿರಿದು
ಗಳಿಸಿ ಮೆರೆವಖಿಲ ಕಪಟೋಪದೇಶಕರೆದ್ದು
ಇಳೆಯ ಪೆಚ್ಚರ ಹುಚ್ಚುಮಾಡಿ ಹೊಟ್ಟೆಯ ಹೊರೆದು
ಕೊಂಬ ಸೌಂದರ್ಯವೆಷ್ಟು! ॥೧೩॥

ದೊಂಬರಾಟ ಸಮಗ್ರಯೋಗ ವಿ
ಡಂಬನೀಯ ಸಮುಚ್ಚಯಾಗಮ
ಶಂಬರಾರಿಯ ಬಲೆಗೆ ಸಿಕ್ಕದ ಶಾಸಕರ ಬಣದ।
ಜಂಬದಾಟದ ಭಜನೆ ಬಾಜನೆ
ಕಂಬದಲಿ ನರಸಿಂಹನನು ತಾವ್
ತುಂಬಿ ಹೊರಬರಿಸುವ ಸಮುತ್ಪಾದನೆಯ ರಂಬಾಟ ॥೧೪॥

ರಾಜಕೀಯದೊಂಬ ಮುಖ್ಯಮಂತ್ರಿಯಾದ ರಾಜ್ಯ
ವ್ಯಾಜ ತತ್ವದಧ್ಯಾತ್ಮ ಪ್ರಚಾರ ಸವಿಭೋಜ್ಯ
ಪೇಜು ಕಾಪಿ ಮಾಡಿದರೂ ದಕ್ಕಿಸಿಕೊಂಡಾರು
ಮೋಜುಗಾರ ಶಾಸಕ ಸುತರೆಲ್ಲವನುಂಡಾರು ॥೧೫॥

ಮಾತಿನ ದೊಂಬ
ಬೇತಿನ ದೊಂಬ
ವ್ಯಾಪಾರದ ದೊಂಬ
ನೌಕರ ದೊಂಬ
ನಾಯಕ ದೊಂಬ
ಆಧಾರ ಸ್ತಂಭ!
ಮದ್ಯಾಸನ ಮಾಂಸಾಸನ ಮಾನಸೋತ್ತರಾಸನ
ಪದ್ಯಾಸನ ಗದ್ಯಾಸನ ಯೋಗಮಾತೃಕಾಸ್ತನ
ಖೋಟಾಹಣ ನಿರ್ಮಿಸುತಿಹ ಭೋಗ ಯೋಗಸಾಧನ
ಪಾಠವಿಲ್ಲ ಆಟವೆಲ್ಲ ಶಿಕ್ಷಣ ಸಂಬೋಧನ ॥೧೬॥

ಬುಡುಬುಡುಕಿಯ ಹಿಡಿಯದೆ ಕಣಿ ಹೇಳುವ
ದುಡುಕುವ ಧುಮುಕುವ ಯುವಜನ ಕೇಳುವ
ಕಡುಪಿನ ಉಡುಪಿನ ಅಭಿನಯದರ್ಪಣ
ಬಿಡುಬಿಟ್ಟುಗಳನು ಕುಣಿಸುವ ಧನಿಗಣ! ॥೧೭॥

ಗಾಡುಮಿಣಿ, ಕುಂಟುಮಿಣಿ, ಹಕ್ಕಿಕುರುಬ, ಕಪಾಲ–
ತಾಂತ್ರಿಕ, ಮಹಾದೇವ, ಭೈರವೇಶ್ವರ ಪಾತ್ರಿ;
ಮುಟ್ಟುಸಿನ ವೈದ್ಯ, ಮಾಯಾವಿದ, ಮನೋಹಂತ,
ಮಂಗ–ಹಾವುಗಳನ್ನು ಬಸವಕರಡಿಗಳನ್ನು
ಲಾಗ ಹಾಕಿಸಿ ದುಡ್ಡು ಸೆಳೆವಾತ್ಮಗಳು ಸತ್ತು
ಬಾಗಿಲೆದುರೀಗ ರಾಜಕರೂಪಗಳ ತಾಳಿ
ಬರುತಿಹವು ಕಿರಿಕಿರಿಯ ಕೊಡುತಿಹವು; ದುಷ್ಕೇಳಿ
ಮಾರಾಟವಾಗುತಿದೆ; ಬೆಪ್ಪರಿಗದೆ ಸುಕೇಳಿ! ॥೧೮॥

ಟೋಪಿ, ಪೊಗಡೆ, ರುಮಾಲು, ಹ್ಯಾಟು ಬುರುಕಿಗಳಲ್ಲಿ
ಪಾಪಾತ್ಮಗಳು ತಮ್ಮ ಹಳೆ ರೂಪಗಳ ಮುಚ್ಚಿ
ಪೇಟೆ ಪಟ್ಟಣಗಳಲಿ ತಿರುಗುತಿವೆ ತಿರುಕತನ
ನಾಗರಿಕತೆ; ಮಹಾತ್ಮರುಗಳ ಹೆಸರನು ಹೇಳಿ

ಹೋಗಿ ಬೆಳೆಗಳ ತಿಂಬ ಹುಳುಗಳಾಗುತ್ತಿಹವು!
ಕೋಟಿಬಾರಾಬಾಂಗ್ಲ ದೊಂಬರಹಹಾ! ಇವರ
ಮೋಟುಮಿದುಳಿನ ಲೀಲೆಗಾಡಳಿತ ವೆಂದೆಂಬ
ಚೀಟಿಯಂಟಿಸಿದುದನು ನಿಜವೆಂದು ನಂಬಿರುವ
ಪಾತಕರು ತುಂಬಿರುವ ಇಂಡಿಯಾದೇಶದಲಿ
ಚೋಟುದ್ದ ಹುಡುಗನೂ ಮತದಾರ ಹುರಿಯಾಳು!
॥೧೯॥

ವಿಜ್ಞಾನದ ಕುಂಬಳ ಕಾಯೊಳಗಿಹ
ಪೌರಾಣಿಕಗಳ ಪಸರಿಸಿ ಹೇಳುವ
ತಜ್ಞರ ಸಾಕಣೆಗೆಲ್ಲ ಧನವ್ಯಯ
ಮಾಳ್ಪುದು ಕೇಂದ್ರದ ದುಷ್ಟ ಚತುಷ್ಟಯ!
ಮೇಲಾಡಳಿತಕೆ ಸ್ವಂತದ್ದೇ ವ್ಯಥೆ

ಕಾಲಾಯಸಕರ ಮಾಡಿದ್ದೇ ಕಥೆ
ಬಾನುಲಿ ದಿನದಿನವೂ ಹೇಳುತ್ತಿದೆ
ನಖ ಶೌರ್‍ಯಂಗಳ ಪೃಷ್ಠಪರಾಕ್ರಮ
ಹೊಸ ಆಯಾಮವ ತೋರಿದ ಬಗೆಗಳ! ॥೨೦॥

ಹಳೆಯದಕೇ ಹೊಸ ಉಡುಪನು ತೊಡಿಸುತ
ಹೊಸದಕ್ಕೂ ಹಳೆಯುಡುಪನು ಹಾಕುತ
ಹಾಗೂ ಹೀಗೂ ಹೆಸರನು ಗಳಿಸುವ
ಸತ್ಯಾಸತ್ಯವಿವೇಕವ ಮರೆಸುವ
ವೈಚಾರಿಕ ಪುಂಗಿಗಳನ್ನೂದುವ

ಧನಲಕ್ಷಗಳನು ಗುಳುಮನೆ ನುಂಗುವ
ಬುವ್ವಾಬಾಜಿಯ ನೂರವತಾರವ
ಮಾರುತಿ ಕಾರುಗಳದೃಶ್ಯರೂಪವ
ತೋರುವ "ಗ್ಯಾಂಗ್‌ಸ್ಟರ್" ಬಳಗವ ಸಾಕುವ
ಪ್ರಜಾಪ್ರಭುತ್ವದ ಸ್ವರಾಜ್ಯವೈಭವ! ॥೨೧॥

ಉಚ್ಚಾರಕ್ಕೂ ಆಚಾರಕ್ಕೂ ಮೈಲು ಮೈಲು ದೂರ
ಪ್ರಚಾರವೊಂದೇ ಚುನಾವಣೆಗಳಲಿ ಕಿವಿ ತುಂಬುವ ಭಾರ
ಒಳಗೊಳಗೇ ಪರದೇಶದ ತಜ್ಞರು ನಕ್ಕರೆ ಕೇಳಿಸದು
ತಳಮಳಿಸುತ ಬಡಜನ ಮೃತರಾದರೆ ಯಾರಿಗು ಕಾಣಿಸದು!
ಫೈಲುಗಳಲ್ಲೇ ಅರ್ಜಿಗಳೆಲ್ಲಾ ಸತ್ತುಹೋಗಿರುವುವು
ನೈಲನ್ನರಿವೆಯ ನಾಗರಿಕತೆಗೇ ಜಯ ಜಯ ಎನ್ನುವೆವು!
॥೨೨॥

ವಿಕೃತಕಗಳ ಹೊರೆ ಹೊರೆ ಹೊರೆ
ಪ್ರಕೃತಕ್ಕಸಮರ್ಪಕಂ ವಿಸಂಗತಮೆಲ್ಲಂ।
ಪ್ರಕರಣಗಳಸಂಖ್ಯಾತಂ
ವಿಕರ್ತನಂ ಸಾಕ್ಷಿನರರ ಕಣ್ಗೊಳವಲ್ಲಂ ॥೨೩॥

ವಾನರಸೇನಾನಾಯಿಕೆ
ಪಾನೋನ್ಮತ್ತರ್ಕಳಿಂದ ರಾಜ್ಯಂಗೆಯಲ್।
ಬಾನ್ ನೀರ್ ನೆಲಗಳ್‌ನಗುವುವು
ಕಾನನವಾಯ್ತೂರು ವನ್ಯಚೇಷ್ಟೆಗಳಿಂದಂ ॥೨೪॥

ನರಮೇಧದ ವೈಚಿತ್ರ್ಯಂ
ಕರದರತೆರಕಾರರನುಭವಕ್ಕೇ ವೇದ್ಯಂ।
ಕರಭಕ್ಷ್ಯಮನುಂ ತೆರಬೇ
ಕಿರ ಬೇಕೆಂಬಾತನು ಸಿರಿನೊಡನೀ ಧರೆಯೊಳ್ ॥೨೫॥

ನೋಟು ಪರಮಾತ್ಮನಾಗಲ್
"ಗೇಟ್ ಪಾಸ್" ಬದುಕಿರಲು ಲಂಚಮಾಗಲ್ ದೀನರ್।
ಬೂಟುಗಳಡಿ ತತ್ತರಿಸಲ್
ದೋಟಿಗಳನ್ನೆತ್ತಿ ಸುಖಫಲವ ಕೊಯ್ವವರ ॥೨೬॥

ಜೀವನ್ಮೃತಿ ಸತ್ಯಾರ್ಥಿಗೆ
ಬೇವಂ ಸಿಹಿಯೆಂದು ಚಪ್ಪರಿಸಲೊತ್ತಾಯಂ।
ಕಾವವರಿಂದಂ ಬಂದಿರೆ
ಹಾವನ್ನೆ ಹಗ್ಗವೆಂದು ಬಳಸುವೊಡಾಜ್ಞೆ ॥೨೭॥

ಅಧಿಕಾರದ ಚೇಳ ಕುಟುಕಲ್
ಮಿದುಳಕ್ರಮವಿಕ್ರಮಕ್ಕೆ ತೊಡಗುವುದನಿಶಂ!
ವೇದಮಿಂದ್ರಂಗಿಂದ್ರಂ ಗಡ
ವಿಧವೆಯನೆದುರಿಟ್ಟು ಸಧವೆಯೆಂದಾಡೀತು ॥೨೮॥

ಸರ್ವಾವಯಗಳ ವೇಗಮ–
ಗುರ್ವಿಸಿರಲ್ ರಾಜಕಕ್ಕೆ ದಶಶತಮತಿಗಳ್।
ಗರ್ವಿಸಿ ಮೂಡಲ್ ಸರ್ವಂ
ದುರ್ವಾಸ್ಯಂ ಸನ್ಮತಿಪ್ರಧಾನರಿಗೆಲ್ಲಂ ॥೨೯॥

"ಏತಾ ಹಸಂತಿ ಚ ರುದಂತಿ ಚ ವಿತ್ತಹೇತೋಃ
ವಿಶ್ವಾಸಯಂತಿ ಚ ನರಂ ನತು ವಿಶ್ವಸಂತಿ ॥೩೦॥

ಎಂಬಂತೀನಾಡ ನಾಯಿಕಾ ಭಕ್ತರೆಲ್ಲರೂ ನಡೆದುಕೊಳ್ಳಲಾರಂಭಿಸಿದಾಗ ಸಂಮೋಹನಾಸ್ತ್ರಕ್ಕೆ ಮತದಾರರೆಲ್ಲರೂ ಬಲಿಯಾದಂತೆ ತೋರಿದ್ದರಿಂದ, ವ್ಯಾವಹಾರಿಕಾದ್ವೈತಗಳು ದ್ವಂದ್ವಗಳ ಗಣಗಳನ್ನು ಹೊಕ್ಕು ವಿಜೃಂಭಿಸಿದ್ದರಿಂದ, ವಿಚಿತ್ರ ಪ್ರಜ್ಞಾವಿಲಾಸವು ರಾಷ್ಟ್ರವನ್ನೂ ರಾಜ್ಯಗಳನ್ನೂ ಮಂಕುಬೂದಿಗೊಳಪಡಿಸಿದ್ದು ಕಂಟಕಾರಿಕಾವ್ಯಪ್ರಸವಕ್ಕೆ ಕಾರಣವಾಯ್ತು. ಕಂಟಕಸ್ಯ ಅರಿಃ=ಪಾದರಕ್ಷೆ; ಅದಕ್ಕೆ ಸರಗಳ ಬೆಲೆ ಸರ್ವಹಾರಗಳಿಗೂ ನೈತಿಕವಾಗಿ ಬಂದದ್ದರಿಂದ–ಮಾಜಿಯಾದ ಕೂಡಲೆ ಉಕ್ತಸರಗಳು ಮಹಾಪ್ರಧಾನರ ಕೊರಳಿಗೆ ಬೀಳತೊಡಗಿದ್ದರಿಂದ–

ಸಗ್ಗಂನರಕಂ ಮೋಕ್ಷಂ
ದುರ್ಗತಿ ಸದ್ಗತಿಗಳೆಲ್ಲ ಭೂತಲದೊಳಗೇ।
ವಿಘ್ನಾವಿಘ್ನಂಗಳೊಡಲ್
ಭಗ್ನಾಶರ ಮಿದುಳಹೋ ಬತ ಪ್ರಾಣಿಗಳೇ ॥೩೧॥

ಕಂಟಕಸರ್ಗಂ ಶರಣಂ
ಕಂಟಕರಿಪು ಕಾಯದಿರ್ಪ ತಲೆಗಳ್ಗೆಂದುಂ।
"ಫ್ಯಾಂಟಂ" ಸಾಹಸಕಾರ್ಯಂ
ಗಂಟಲಗಾಣಂ ಪೆರರ್ಗೆ ದುಃಶಾಸ್ಯರ್ಗೆ ॥೩೨॥

ಅಭಿನವ್ಯಂ ಜನಕಾವ್ಯಂ
ನಭ ಸ್ಥಲೀಯಂ ವಿಸೃಷ್ಟಿವಿದ್ಯಾಜಾತಂ।
ಅಬುಧರ್ ಸುಬುಧರ್ ವಿಬುಧ್
ಪ್ರಭಾವ್ಯರಪ್ಪರ್ ಪ್ರಕಂಟಕಿತರಿಂದಪ್ಪರ್ ॥೩೩॥

ಪಟ್ಟಣ ಶೆಟ್ಟರ್ ಶೆಟ್ಟರ।
ಪಟ್ಟಣಗಳ್ ಕಂಟಕೋದ್ಭವಂಗಳ್ ಧೀರರ್।
ಮೆಟ್ಟದ ಮೆಟ್ಟುಗಳಂಗಡಿ
ಪುಷ್ಪಂ ಕಂಟಕಗಳಿಂದಮೀ ಸಂಸ್ಕೃತಿಯೊಳ್ ॥೨೪॥

ಆರಾರೇರರ್ ಶಾಸ್ತ್ರ–
ಶ್ರೀ ರಾಜ್ಯದ ಪಟ್ಟಮಂ ಮಹಾಕವಿಗಣದೊಳ್
ಆರಯ್ದುವರ್ಗಿದೊ ನಮನಂ
ಸಾರಾ ಸಾರಾಜ್ಞ ಸಹೃದಯರ್ಗೆಂ ಮತ್ತಂ ॥೩೫॥

ಜಾತವೇದ

ಜಾತವೇದಸಪ್ರಜ್ಞೆ

ಬ್ರಹ್ಮಾಂಡ ಭಾಂಡವನು ಮಾಡಿದಜಗಿಂತಲೂ
  ಹೆಚ್ಚು ತೂಕದ ಆದಿಕರ್ತ ನೀನು;
ಬ್ರಹ್ಮಾಂಡವನು ತುಂಬಿಕೊಂಡಿರುವನಂತ ನೀನ್
  ಇದ್ದುದಿಲ್ಲದುದೆಲ್ಲ ಮೀರಿ ನಿಂತ
ದೊಡ್ಡಾತ್ಮ; ಹರಿಯದಿಹೆ, ಹನಿಯದಿಹೆ, ಒಸರದಿಹೆ
  ಹಾಳಾಗದಿಹೆ, ಕರಗದಿರುವೆ ಉದುರಿ
ಬೀಳದಿಹೆ, ಬಂಜೆಯಾಗದೆ ಇರುವೆ, ದೇವೇಶ!
  ಯಾಕೆ ನಮಿಸರು ನರರು ನಿನ್ನನಿಂಥ?
ಎಲ್ಲ ದೇವರ ಆದಿಪುರುಷ ನೀ ಹಳತುಗಳಿ–
  ಗೆಲ್ಲವಕ್ಕೂ ಹಳಬ; ಈ ವಿಶ್ವದ
ಕೋಶ, ಆಕರ, ರಕ್ಷಣಾಗಾರವೆನಿಸಿರುವೆ
  ಆತ್ಮನೂ ಅಹುದಿದರ ಆದಿಮೂಲ;
ಸರ್ವೋಚ್ಚ ಇರವಾದೆ, ಅರಿಯಬೇಕಾದ್ದೆಲ್ಲ
  ಅರಿತ, ಅರಿಯಲು ಯೋಗ್ಯನಾದ ನೀನು
ಸರ್ವೋತ್ತಮ ಸ್ಥಾನವೆನಿಸಿಹೆ, ಮಹಾಸಾರ್ವ
  ಭೌಮ–ವೈಭವಪೂರ್ಣ ಶಕ್ತಿಯಾದೆ!
ಎಲ್ಲದಕ್ಕೂ ಹಿರಿಯ ಬೆಳಕಾದೆ, ಬಲವಾದೆ
  ಎಲ್ಲದರ ಬಲು ಒಳ್ಳೆ ಒಡಲಾಗಿಹೆ;
ಎಲ್ಲದಕ್ಕೂ ಶ್ರೇಷ್ಠ ವರ್ಗ ನೀನೇ, ವಿಶ್ವ–
  ದೀ ಅನಂತಾಕೃತಿಯ ನೀನೆ ಸಮೆದೆ;
ನೀ ಗಾಳಿ, ಯಮಧರ್ಮರಾಯ, ಚಂದಿರ, ವರುಣ
  ನೀ ಬೆಂಕಿ, ಹುಟ್ಟಿದೆಲ್ಲವುಗಳೊಡೆಯ;
ನೀನಪ್ಪನಪ್ಪ ಸಾವಿರ ಸಾರಿ ಬಾಗುವೆನು
  ನಿನಗೆ ಮತ್ತೂ ಎರಗಿ ಬಲವರುವೆನು!
  ಮುಂದೆ ನಿನಗೆ ನಮಸ್ಕಾರ

ಹಿಂದೆ ಇಗೋ ವಂದನ;
ಎತ್ತೆತ್ತಲು ನಮನ ನಮನ
ಎಲ್ಲೆಲ್ಲೂ ಎಲ್ಲನೇ!
ಅಳವಿಯಿರದ ವೀರರಾಯ
ಅಪರಿಮಿತ ಪರಾಕ್ರಮ;
ಎಲ್ಲವನೂ ವ್ಯಾಪಿಸಿ ನೀ–
ನೆಲ್ಲ ಹೊಂದಿ ಮೀರಿಸಿ
ಎಲ್ಲದಲ್ಲಿ ಹೊಕ್ಕು ತಲುಪಿ
ಎಲ್ಲನಾದೆ ಸಂಧಿಸಿ!

ಕೂತಾಗ ನಿಂತು ಹೊರಟಾಗ ಊಟ ಮಾಳ್ಪಾಗ ಮಲಗುವಾಗ
ಆ ತಾವಿನಲ್ಲಿ ಈ ತಾವಿನಲ್ಲಿ ಹುಸಿ ಹಾಸ್ಯ ಮಾಡುವಾಗ
ಮಾತಿಂದ ನಿನ್ನೆದುರೊ ಹಿಂದೊ ನಿಂದಿಸಿದ್ದಿದ್ದರಪ್ರಮೇಯ
ನೀ ಕ್ಷಮಿಸನಾದರವ ಮಾಡಿದೆನ್ನ ಅಳಿವಿರದ ಪುಣ್ಯಕಾಯ!
ಎಲ್ಲ ಲೋಕಗಳ ತಂದೆ ನಡೆವ ನಡೆದಾಡದಿರುವವುಗಳ
ಎಲ್ಲರಿಂದ ಆರಾಧ್ಯ ಹಿರಿಯ ನೀನೆಲ್ಲ ಹಿರಿಯರುಗಳ;
ಇಲ್ಲ ನಿನ್ನ ಸರಿ ಯಾರು ಎಂದ ಮೇಲಧಿಕನಾವನಿರುವ?
ಲೋಕ ಮೂರರಲ್ಲಿರುವನಾವ ನಿನ್ನಂಥ ಸುಪ್ರಭಾವ?

ಅದರಿಂದ ನುತಿಗೆ ತಕ್ಕಾದ ಒಡೆಯ ತಲೆವಾಗಿ ನೆನೆದು ನಿನ್ನ
ಮುದಗೊಳಿಸಿ ಬೇಡುವೆನು ತಂದೆ ಮಗನ ತಾನಿನಿಯನಿನಿಯಳನ್ನ
ಸದಯಾಂತರಂಗ ಗೆಳೆಯನನು ಗೆಳೆಯ ತಾಳ್ದಿರುವ ಹಾಗೆ ನನ್ನ
ಹೊಳೆಹೊಳೆವ ಮೈಯ ಮನದೈಯ್ಯ ತಾಳಿಕೋ ನನ್ನದೆಲ್ಲವನ್ನ!

ಪ್ರಾಣಪ್ರಜ್ಞೆ

೧

ಗಾಳಿಗಿಂತಲು ತೆಳ್ಳಗಾದ ಸಾಮಾನುಂಟೆ?
ಗಾಳಿಗಿಂತಲು ಹಗುರವಾದ ಹಾಯಾಗಿಸುವ
ಧೂಳಿಕಣವೂ ಸಿಕ್ಕದರರೆ ಗಾಳಿಯ ನಾದ
ಗಂಗಾ–ತರಂಗ–ಶೀಕರ ಕೊಡುವ ಸಂಮೋದ;
ತಂಗಾಳಿಯೇ ಸಗ್ಗ ಕರ್ಮವೀರರಿಗಲ್ತೆ!
ಗಾಳಿಯೇ ಪ್ರಾಣ, ಚೇತನೆಯ ಚಂಚತ್‌ಚಿಹ್ನ;
ಸರ್ವಕ್ರಿಯಾ–ಬೀಜಶಕ್ತಿ, ಕಾರ್‍ಯಬ್ರಹ್ಮ
ಚೆಲ್ಲಿ ಸೂಸಿದ ಮುಗುಳುನಗೆಯಲಂಪಿನ ಹರಹು;
ಸರ್ವಶ್ರಮಾಪಹಾರಕ ಪೌಷ್ಟಿಕೋನ್ಮಾದ,
ಚೇತನಾಚೇತನಗಳಿಗೆ ಹಾಕಿರುವ ಸಂಕ;
ಗಾಳಿ ಬಾಳಿನ ತೇರ ಚಕ್ರಪಾಣಿಯೆ, ನಿನ್ನ
ತಾಳಲಯಕಿಳೆ ಚರಾಚರದೊಡನೆ ಕುಣಿಯದೇ!

೨

ದೇವತೆಗಳೆಂಬರ್ ಮರುದ್ರೂಪರಲ್ತೆ? ಈ
ಗಾಳಿಬಣ ಬೆಳಕ ಬೀರುವ ಕನ್ನಡಿ ಜಗಕ್ಕೆ;
ನಾದಮಯ ರುದ್ರಶಕ್ತಿಯ ಧೀರ ಯೋಧಗಣ–
ಗಾಳಿ ಬಾಳಿನ ಬಳಕೆಗೊದಗಿರುವ ದಿವ್ಯಧನ!
ಸ್ಪಂದನದ ತಂದೆ, ಕ್ರಿಯೆನಾದಗಳ ಅಜ್ಜ ನೀನ್
ನಿನ್ನ ಸಮತೋಲವೇ ಸ್ಥಿತಿಗೆ ಕಾರಣ ದೇವ
ನಿನ್ನಿಂದ ಸೃಷ್ಟಿ, ಸರ್ವೋದ್ಭವಕ್ರಿಯೆ, ನಿನ್ನ
ರುದ್ರಭೀಮಾವತಾರದೆ ಸರ್ವಲಯವಲ್ತೆ!
ನಿನ್ನ ಝಂಝಾಘಾತ ಜಗವ ಹೊತ್ತದ್ರಿಗಳ
ಶಿಖರಗಳನುರುಳಿಸುಗು, ಜಲಧಿಗಳ ನೊಣಗಿಸುಗು,

ಹಸಿರ್ನೆಲವ ಮರುಳುಗಾಡಾಗಿಸುಗು! ನರ ರಚಿಸಿ
ಮೆರೆಯಿಸುವ ರಾಜಸೌಧಗಳು ನೆಲೆದಪ್ಪುವುವು
ಭೂಲೋಕ ಕಂಪಿಸುವುದುಂಟು ಬಾಯ್ದೆರೆಯೆ ನೀನ್
ತನ್ನ ಮಕ್ಕಳನೆ ಬುವಿ ನುಂಗ ಹೊರಡುವುದುಂಟು!

೩

ಪ್ರಾಣಮಯ ಕೋಶದಲಿ ತಾಣ ಬಿಟ್ಟೇಳೆ ನಿ–
ತ್ರಾಣವಪ್ಪುದು ನರಶರೀರ ವಾತಾಹತಿಗೆ;
ಕಾಣ ಮದ್ದನು ವೈದ್ಯರಾಜನೀ ತಿರೆಯಲ್ಲಿ
ನಿನ್ನ ಮುನಿಸಿಂದ ರುಜೆ ವಿಶ್ವರೂಪವ ತಾಳಿ
ಬನ್ನ ಬಡಿಸುವುದನ್ನು ಬಣ್ಣಿಸಲು ಬಲವುಂಟೆ
ನನ್ನ ಲೇಖನಿಗೆ? ಓ ಗಾಳಿ ನೀನೇ ಸ್ಪೃಶ್ಯ–
ರೂಪ ಆ ಆದಿಕರ್ತನ, ಜಗಚ್ಚಾಲಕನ!
ಅಣು–ಮಹತ್ತುಗಳೊಳ್ ಪ್ರವೃತ್ತಿಯನು ನಿಯಮಿಸುವ
ಘನವಂತ, ವಿಶ್ವಾತ್ಮಸಂದೇಶವನು ಹೊತ್ತ
ಧ್ವನಿ ದೇವಕರ್ಮರಾಟ್, ಸ್ವೈರ–ಸಂಭ್ರಮ–ವೇಗ,
ಜನಮನದ ಸಂರಭ–ಸಂತೋಷ ವೃತ್ತಿಗಳ
ತಿರುಹುಗುಂಡಿಯೆನಿಪ್ಪ ನಿನ್ನ ವಿದ್ಯುತ್ತಂತ್ರ
ಅರಿವು ಮರೆವುಗಳ ಬುದ್ಬುದಮಾಲೆಯೆಬ್ಬಿಸುತ
ಹರಿ–ಹರ–ಬ್ರಹ್ಮ ಪ್ರಭಾವವನು ಜಗವೆತ್ತ
ನರಜೀವ ವಾರಿಧಿತರಂಗದಲಿ ತೋರಿಸುಗು;
ಶರಣಾಗತಾತ್ಮಗಳನುದ್ಧಾರ ಮಾಡಬಹ
ಧುರಧೀರ ಧೇನಿಸುವೆ ಧೇನಿಸುವೆ ನಿನ್ನಡಿಯ!

೪

ಸೂರ್ಯಮುಖಕೆ ಹೊಡೆವಂತೆ ಬೀಸಿ ಬಹ
ಗಾಳಿ ಓ ಪ್ರಚಂಡ
ಆರ್ಯ ಪೂಜಿಸಿದ ಅಗ್ನಿವೀರ್ಯಭರ
ದೇವ–ದೈತ್ಯ–ಗಂಡ!
ಮೇರು–ಮಂದರದ ಬೇರನಲುಗಿಸುವ
ಸಾರ ನಿನ್ನ ಬಂಡ;

ಭೂರಿ ಜೀವಗಳ ಶಿಕ್ಷ-ರಕ್ಷೆಗಿದೆ
ನಿನ್ನ ಬಂಟತಂಡ!
ಭಾರವೆಂಬುದಿಹುದೇನು ವಸ್ತುವಿಗೆ ಗಾಳಿಯಿಲ್ಲದಲ್ಲಿ?
ಭೂಭಾರ-ಬುದ್ಧಿಯೂ ಗಾಳಿ ಗುದ್ದದೆಯೆ ಬರುವದುಂಟೆ ಇಲ್ಲಿ?
ಸಾರವುಂಟೆ ಸಂಸಾರದಲ್ಲಿ ನಡೆ ತೂಕ ತಪ್ಪಿದಾಗ?
ಆಹಾರ ಬೆಳೆಗೆ ಆಸಾರ-ದೇವ ಪವಿಭಾರ ಕುಗ್ಗಿದಾಗ?
ಅಂಜಿಕೆಗೆ ಅಂಜಿಕೆಯ ರೂಪ ಭೂಪ ಅಂಜನಾದೇವಿಯೋಪ
ನಂಜುರಿಯ ನುಂಗುವಿಂಗಾಲ ದೈತ್ಯಕುಲಭಂಜನಾಗಿತಾಪ!
ಜಂಜಭಿಸುವಾತ ದುರ್ಮನರ ಮುತ್ತಿ ದುಂದುಭಿಸಿ ಭೀಮಭೂತ
ಬಂಭ್ರಮಿಸಿ ಒರೆವ ಬಯಲೊವಜ ನೀನೆ ಓ ಕಾಲ ಕಾಲ
ವಾತ!

೫

ನೀನು ಹೊರಡಲು ರೋಮ ಕೂಡಾ
ಹಂದದೀ ನರಗಾತ್ರದ;
ಜೀವವೇ ಅವ್ಯಕ್ತ ತತ್ವದಿ
ಲೀನವಾಗುವ ಸೂತ್ರದ
ಚಾಲಕನೆ ಓ ಚಿನ್ಮಯಾತ್ಮ-
ಸ್ಖಾಲಕನೆ, ಜಗದೀಶ್ವರ
ಗಾಳಿ, ಓ ಹೆಗ್ಗಾಳಿ, ಮಾಡದೆ ದಾಳಿ
ಕಾಯೋ ಭಕ್ತರ!
ನಿನ್ನ ಸುಪ್ರೇರಣೆಗೆ ಮೂಲಾ-
ಧಾರ ಮೂಡಿಸಲಾಪರಾ
ಸ್ಪಂದಿಸುಗು ಮಧ್ಯಮೆಯ ರೂಪದಿ
ಮತ್ತೆ ಪಶ್ಯಂತೀಸ್ವರ
ಮುಂದರಳಿ ವೈಖರಿಸದೇ? ಓ
ಗಂಧವಹ, ಗಮನಾಧ್ವರ
ಚೆಂದನಡೆಯಾನಂದಸಾಗರ
ಸಚ್ಚಿದದ್ಭುತವಿಸ್ತರ!

೬

ಭ್ರಮೆಯ ಕತ್ತಲೊಡ್ಡಕಿತ್ತು
ಬೆಳಕ ತೀಡು ಮಾರುತ;
ಶ್ರಮದ ಬಾಳ ಮುಗುಳ ಮುಟ್ಟಿ
ಬಿರಿಯಿಸು ದೇವವ್ರತ!
ನಮಿಸದವರ ನಮಿಸಬಲ್ಲ
ಸತ್ಯ–ಸತ್ವ–ಸಂಭೃತ;
ನಮೋ ನಿನಗೆ ನಿತ್ಯಶುದ್ಧ
ಪರಾತ್ಪರಸಮೀರಿತ!

ಋತ ಪ್ರಜ್ಞೆ

೧

ಪರಮ ವಿಷ್ಣುಪದದಲ್ಲಿ ಮಧೂತ್ಸದ
ರೂಪದಲ್ಲಿ ನಿಂತ
ಸೋಮದಮೃತರಸವಾಗಿ ಕಾಣಿಸಿದ
ಪ್ರತಿಭೆಯೊಂದು ಪಂಥ!
ಶುಚಿಯ ರುಚಿಯ ರೋಚಿಯ ಕಲ್ಮಷಹರ
ರಚನೆಯಾಗಿ ಮೆರೆದ
ಪಚನವಾದಿ ರಿಸಿಗಾಣ್ಕೆ ಮಿಂಚಿ ಶ್ರುತಿ–
ವಚನಪಂಕ್ತಿಯೊರೆದ!
ಎತ್ತರದ ಗರ್ಭದಿಂದೆದ್ದ ಹೊಳಪೆ ಜ್ಯೋ–
ತಿಃಸ್ವರೂಪ ತೊಟ್ಟು
ಬಿತ್ತರಿಸಿ ಬಂದ ಆಪೋದೇವಿಯರಲಿ
ದ್ರವಣಶೀಲವಿಟ್ಟು
ಸತ್ತೆಯನು ಸುತ್ತಿದಾವರಣವಾದೆ
ಅಜನಾಭಿಜಾತಜಾಲ
ಅತ್ತಿತ್ತ ಹರಿದು ಹೊತ್ತಿಳೆಯ ಹೊರೆವ
ರಂಗತ್ತರಂಗಮಾಲ!

೨

ಬಿಸಿಲನು ಕುಡಿದಂಬರ ತಳವೇರಿದೆ
ಹೊಸ ಮಾಧುರ್ಯದ ಹಬೆಯನು ಬೀರಿದೆ
ಮುಸುಕಿದೆ ಬುವಿಗೇ ಕೊಡೆ ಹಿಡಿದಂತೆ
ಪಸರಿಸಿ ದಿಕ್ತಟಗಳ ತೊಡೆವಂತೆ
ಘನಗಗನದಿ ವಜ್ರೋತ್ಸವ ನಡೆಸಿದೆ
ಚಮಕಿಸಿ ಗರ್ಜಿಸಿ ಸಿಡಿದು ಬಡಿದು ನೂರ್

ಗಮಕದಿ ನರ್ತಿಸಿ ಬೆಳೆದು ಗಾಳಿಯೂರ್
ಗೆಳೆಯರ ಬಳಗದಿ ಮಳೆಯ ಬಿಲ್ಲುಗಳ
ಹೊಳೆಯಿಸಿ ಹಬ್ಬಿಸಿ ಹತ್ತು ಗುಲ್ಲುಗಳ
ಗಿರಿಕಂದರಗಳ ಗರ್ಭವ ಗುಡುಗಿಸಿ
ಅರಣ್ಯದಧಟರನೊಮ್ಮೆಲೆ ನಡುಗಿಸಿ
ಬುವಿಯೆದೆಯುಬ್ಬಿಸಿ ಕೊಬ್ಬಿಸಿ ಗಬ್ಬಿಸಿ
ಸುರಿಸಿ ವೀರ್ಯರಸಧಾರೆಯನೆಬ್ಬಿಸಿ
ಮಲಗಿದ ಮನಗಳ ಹೊನಲ್ವರಿದೆಲ್ಲೊ
ಜೀವಕಿಂತಲೂ ಜಡ ಚುರುಕಲ್ಲೋ
ಎನ್ನುವಂತೆ ತಂಪಿನ ಪೊಂಪುಳಿಯಲಿ
ಹೊಳೆಯಲಿ ಮಳೆಯಲಿ ಹುರುಪಿನ ಕಳೆಯಲಿ
ಬಂದೆ ವರುಣ ಪೂರ್ವೇಂದ್ರ! ಪಾಪಗಳ
ಗಂಧವನಡಗಿಸಿ ಕಲಿಮಲವುಡುಗಿಸಿ
ಒಂದೇ ಹೊಡೆತಕೆ ನೆಲವನು ಹಸಿರಿಸಿ
ನಿಂದ ನಿಜಾನಂದದ ಉಕ್ಕೇ ನಿ–
ನ್ನಂದವಿದದ್ಭುತ! ವೀರ ಕುಲಾಗ್ರಣಿ
ಸ್ವರ್ಗ–ಮರ್ತ್ಯ–ಪಾತಾಳಗಳಾಡಿಸಿ
ದುರ್ಗಮಗಳ ಸುಗಮಿಸಲೆಂದೂಡಿಸಿ
ಅರ್ಘ್ಯಧಾರೆಯನು, ದೇವಗಣದ ಕರು–
ಣಾರ್ದ್ರತೆ! ಜಾಡ್ಯವ ತೊಳೆದೊಗೆದಮಲರು
ಶುದ್ಧ–ಬುದ್ಧ–ಸಚ್ಚಿತ್ಪದಕೇರುವ
ವಿದ್ಯಾಸಂಕ್ರಮ ವಂದಿಪೆ ವಾರವ!

೩

ಸರ್ವೋತ್ತಮ, ಸ್ವಸ್ತಿವಿತ್ತ, ಸ್ವದಾತಾರ
ನಿತ್ಯಪ್ರಸನ್ನ, ಪ್ರಜಾಜೀವನಾಕಾರ;
ಸಾವಿಂದ ಸಾವಿರದ ಗಡಿಗಿಟ್ಟ ಪ್ರಾಸಾ
ಸಾವಿಂಗೆ ಸಾವಿತ್ತ ಶಿವದಟ್ಟಹಾಸಾ!
　　ನಮೋ ನೀಲಭಾಸಾ
　　ಸದಾನಂದರಾಸಾ
　　ಖಗೋಲಾದಿವಾಸಾ

ಕ್ಷರಾತ್ಮಪ್ರವಾಸಾ
ಜಗಜ್ಜಾಲ–ಕಾಲಾನಲಾಭೂತಿ–ಗರ್ಭಾ
ಜಗಚ್ಚಾಲನಾವಶ್ಯ–ನೀತಿ–ಪ್ರಗಲ್ಭಾ
ಅವರ್ಣ್ಯಪ್ರಭಾವಾ
ಸುವರ್ಣಾನುಭಾವಾ
ಧರಾಧಾರಸಾರಾ
ನಮೋ ದಿವ್ಯ ಪೂರಾ!

ಅದಿತಿ ಪ್ರಜ್ಞೆ

೧

ಹಿಮಾಲಯದ ಶಿಖರಗಳೋ
        ಭೂಮಿಯೊಳೇ ಎತ್ತರ
ಹಿಮಾಚ್ಛನ್ನ ಕಿರೀಟಗಳ
        ಹೊತ್ತ ತಲೆಯ ಬಿತ್ತರ
ಯಾವಾಗಲು ಭಯಗ್ರಸ್ತ!
        ಸೂರ್ಯ ಹಿಮವ ಕರಗಿಸುವನು
ಅಥವಾ ಮಾನವತೆ ಹಡೆದ
        ಜಲಜನಕದ ಬಾಂಬು ಹೊಡೆದು
ಉರುಳಿದರೂ ಉರುಳಬಹುದು!
        ಇಲ್ಲವೆ ಸಾಗರ ಒಮ್ಮೆಲೆ
ಸೊಕ್ಕಿ ಇಡೀ ನುಂಗಿದರೋ
        ತಲೆಯು ಇಲ್ಲ ಬುಡವು ಇಲ್ಲ
ಯಥಾಪೂರ್ವ ಜಲಸಮ!
        ನೆಲಸಮದಲಿ ತಲಸಮ!

೨

ಶರಾವತಿಯ ಹೃದಯದಾಳ
        ತಳದಲ್ಲೇ ತಳತಳ
ಪಾತಾಳದ ಅದಮ್ಯತೆಯ
        ಮೈಗೊಂಡಿಹ ಕೊತ್ತಳ
ಸೂರ್ಯ ಚಂದ್ರ ಬಾಂಬು ಗೀಂಬು
        ಯಾವುದಕೂ ಅಸದಳ!
ಆದರೊಮ್ಮೆ ಹೆಗ್ಗಡಲದ
        ಹೊಟ್ಟೆಯೊಳಿಡಬಹುದು;
ಜ್ವಾಲಾಮುಖಿ ತಳವ ಸೀಳಿ
        ನೀರ ನುಂಗಬಹುದು!

೩

ಲಯವಾದರು ಆಗಬಹುದು
        ಆದರು ಅತ್ಯಲ್ಪ ನಷ್ಟ
ಪುನರುದಯಕ್ಕಿಲ್ಲ ಕಷ್ಟ;
        ಅನಿತ್ಯದಲಿ ಸ್ವಲ್ಪ ನಿತ್ಯ
ಪ್ರಮಿತದೊಳಪ್ರಮಿತ ಕೊಂಚ
        ಸುಖದುಃಖವ ದಾಟಿ ನಿಂತ
ಆನಂದದ ಅರ್ಥವನ್ನು
        ಅಂದಾಜಿಸಿ ತೋರಿಸುತಿಹ
ಭಾಸ್ವತ್ತೆಯ ಸೂಕ್ಷ್ಮಜಾಲ
        ಜೀವಜಡಾಶ್ರಯ ವಿಶಾಲ
ಆದಿತ್ಯರು ಅರಳಿ ನಿಂದ
        ಕಲ್ಪಕುಸುಮತರು !
ಬೊಮ್ಮ ಹೊದೆದ ಸಮ್ಮ, ಶಕ್ತಿ
        ಮಾಯೆ, ಪ್ರಕೃತಿ, ಕಂಡರೂ
ಕಾಣಿಸದಿಹ ಕರ್ಮದುಸಿರು
        ಗೌಣವಾಗಿ ನಿಂದರೂ
ಪ್ರಧಾನತೆಯ ಗುಣವ ಹೊತ್ತೆ
        ವಿರಾಡಾಗಿ ಬಂದರೂ
ಬೊಮ್ಮ ನೀನು ಬೆದರದುಳಿದೆ
        ಬೆದರಿದರೂ ಅದಿರದಾದೆ
ಭಕ್ತಳಾಗಿ ಅವಿಭಕ್ತಗೆ
        ಸಕ್ತಿಯಿಂದ ಬಾಗಿಹೆ
ಅವನಂಬರವಾಗಿಹೆ
        ಅಲಿಪ್ತ ಸನ್ಮಾತ್ರಗೆ ಬಳಿ–
ದಲೇಪ್ಯ ಲೇಪ
        ಅವರ್ಣ್ಯ ಚಿನ್ಮಯನು ತೊಟ್ಟ
ಸುವರ್ಣ್ಯರೂಪ!

ನವೋದಯ ಪ್ರಜ್ಞೆ

೧

ಹಾಲುಜೇನು ಬರಿ ಖೋವ ಖೋವ, ಚಾಕ್ಲೇಟು, ಕಿತ್ತೊಳೆಗಳು,
ಬ್ರೆಡ್ಡುಬನ್ನು, ಆಮ್ಲೇಟ್ಟು, ಸೆಲಡುಗಳ ಕೋಟೆ ಕೊತ್ತಲಗಳು!
ಹಲ್ವ, ಬೆಣ್ಣೆಬಿಸ್ಕತ್ತು, ಕೇಕು, ಐಸ್‌ಕ್ರೀಮು ಖಂಡಿ ಖಂಡಿ
ಚೆಲ್ವ ಸೋಡ ಶರಬತ್ತು, ವಿಸ್ಕಿ, ಚಹ, ಕಾಫಿ, ತಿಂಡಿ ಬಂಡಿ!

ಎಲ್ಲಿ ನೋಡಿದರು ನಮ್ಮ ಊರಿನಲಿ
ಚಿಲ್ಲರೆ ಕೇಳುವ ಪದ್ಧತಿಯಿಲ್ಲ!
ಎಲ್ಲೆಲ್ಲಿಯು ರಥ ಕಾಲಿನಿಂದ ಪಥ
ತುಳಿಯುವ ಜೀವಿಗಳುಪಟಳವಿಲ್ಲ!

ಚಿತ್ರದಲ್ಲಿಯೇ ಚಿತ್ತವಿರುವ ರಸ–
ರಸಿಕತೆ ತುಂಬಿದ ಜನಗಳ ಬೆಳ್ಗಸ
ಹೊತ್ತಿ ಹೊಗೆಯುವುದು ತುಟಿಗಳ ಸೀಳಿ
ಸತ್ಯದ ಮೇಲ್ ಸೌಂದರ್ಯದ ದಾಳಿ!

"ಮೆಕ್ಷಿಕೋದಲ್ಲಿ ಲಕ್ಷ ಕಳವಾಯ್ತು
ಹಾಲಿವುಡ್ಡಿನಲಿ ಹಣವು ಹೊಳೆಯಾಯ್ತು;
ಕಾಂಗೊ ಬೇಸಿನಿನ ಕಾಡ ಮಧ್ಯದಲಿ
ಮೂರು ತಲೆಯ ಹೆಬ್ಬಾವು ಕಾಣಿಸಿತು"
ಎಂಬ ಸುದ್ದಿಗಳ ನೋದಿ ಚರ್ಚಿಸುವ
ತುಂಬ ಕಲಿತ ಜನರೆಲ್ಲಿ ಕಂಡರೂ!

ಬಟ್ಟೆಗೂ ಇಸ್ತ್ರಿ
ಹೊಟ್ಟೆಗೂ ಇಸ್ತ್ರಿ
ಮಿದುಳಿಗೂ ಇಸ್ತ್ರಿ ಹಾಕಿ
ನೆಟ್ಟಗೂ ಅಲ್ಲ
ಸೊಟ್ಟಗೂ ಇಲ್ಲ ನಡೆ
ಅದೇ ಬೇರೆ ಷೋಕಿ!

೨

ಊರಿನ ನಂದನವನದಲ್ಲೆಲ್ಲೂ
ಜವಾನ ಜನಗಳ ಕಂಪೆನಿ ಸುತ್ತೂ
ಸಾಹೇಬರುಗಳ ಪುಣ್ಯಚರಿತ್ರೆಯ
ಕೇಳಿಸಬಾರದು ಎಂದೇ ತಮ್ಮೊಳು
ಕೇಳಿಸುವಂತಾಡುವ ಸಿರಿಗತ್ತು!

ಗುಂಡಿಗೆಯದಿರುವ ಘನಗಮ್ಮತ್ತಿನ
ಖಂಡಿತ ನಡತೆಯ ಕಾಳೆದೆಗಾರಿಕೆ
ಗೌತಮನನ್ನೂ ಗಾಬರಿಗೊಳಿಸುಗು
ಧರ್ಮಶಾಸ್ತ್ರಕೂ ಕರ್ಮಶಾಸ್ತ್ರವೇ
ಮಿಗಿಲೋ ಮಿಗಿಲೆಂದೊಪ್ಪಲೇ ಬೇಕು!

ಅಡಿಕಿತ್ತಲೆವವ ಕಿತ್ತಡಿಯಲ್ಲೆ?
ವರ್ಗಾವರ್ಗಿ ಪರಿವ್ರಾಟ್ ತಖ್ತೆ
ಮಾಡಿದ್ದೆಲ್ಲವ ಮುಚ್ಚುವ ಮೋಡಿ
ಹೇಳಲು ಹೋದರೆ ನೀ ಕಿಡಿಗೇಡಿ!

ಆರು ಶಾಸ್ತ್ರಗಳ ಅಧಟರ ಊರು
ಅರಿವೆಯೊಳರಿವನ್ನಡಗಿಸಿದೂರು
ಹಿರಣ್ಯಗರ್ಭರ ಸೇವೆಗೆ ನಿಂತಿಹ
ಅರಣ್ಯಪಂಡಿತರುರಿಯುವ ಊರು!

೩

ಓಸಿಯಾಧಾರ, ವೇದಾಂತವೀರ, ಹರಿಕಥಾಭಕ್ತಿಸಾರ
ಹಳಜನರ ಕೂಟದಲಿ ಹತ್ತರೊತ್ತಿನುಪಜೀವಿಕಾವತಾರ!
ಕಲಿತವರ ನಡುವೆ ಪರದೇಶವಾರ್ತೆ ಮಥಿಸುವ ವಿಚಾರಸಾರ
ಬಹುರೂಪವಂತಿಕೆಯ ಬೆಳಗುತಿಹುದು ಈ ನಮ್ಮ ಊರ ಶಾರ!

ಒಂದೆ ನೂರೊಂದು
ಒಬ್ಬಗಿರ್ದುಬ್ಬ
ಒಮ್ಮೆಗಿನ್ನೊಮ್ಮೆ ಹುರುಡು!
ಗಳಿಗೆಗೊಂದೊಂದು
ದೇವ–ದಾನವವ
ನೋಡ ಬಯಸೆ ಬಾ ಹೊರಡು!
ಮಿಂಚಿಗೂ ಮಿಗಿಲು ಚಂಚಲ
ಮರದ ಮಿಗದೇವಕುಲಕು ಚಪಲ
ಅಂಚಿನಲೆ ನರ್ತಿಸುವ ದೊಂಬಗಲೆಯನೀ
ಕಾಣದಿರಲು ವಿಫಲ!
ಕಂಚಿಗೂ ಕಂಠ ಎತ್ತರಃ ಹೊಡೆಯೆ ಡಂಗುರ
ತಮ್ಮ ಜಯವ
ಹಂಚೆದ್ದು ಹಾರುವುದ್ಗಾರ ಹೀಗಳೆಯ–
ಲನ್ಯ ಹಿಡಿದ ನಯವ!
ಎಲ ಎಲಲ ಕೇಹು ತಾಂಡವಃ ತತ್ವಖಾಂಡವಃ
ದಹನ ಮಾಡಿ
ಭಳಿಭಳಿರೆ ಬೆನ್ನ ಚಪ್ಪರಿಸಿಕೊಂಡು ತಿರು–
ಗುವುದು ನಮ್ಮ ರೂಢಿ!

೪

ಅಲ್ಲಿ ಸಭೆ
ಇಲ್ಲಿ ಸಭೆ
ಗಲ್ಲಿಯಲ್ಲ ದಭದಭೆ!
ಅಧ್ಯಕ್ಷತೆ ಗುತ್ತಿಗೆ ಹಿಡಿ–
ದವರ ವಾಕ್ಸ್ವಯಂಪ್ರಭೆ!

ಸರ್ವಜ್ಞತೆ ಗುಳಿಗೆ ಮಾಡಿ ನುಂಗಿದವರ ಹಾಗೆ
ಪರ್ವತಪೃಷ್ಠರಗುರ್ವಿಸೆ ಬೃಹಸ್ಪತಿಯೆ ಬಾಗೆ,
ಪುಢಾರಿಗಳ ಜಹಜುತುಂಬಿ ಕಳಿಸಬಾರದೇಕೆ?
ಖಡಾಖಡಿಯ ಮಾತಿದಕ್ಕೆ ಮೀನ–ಮೇಷ ಬೇಕೆ?

ಉಚ್ಚಾರಕ್ಕಪಚಾರವ ಮಾಡಬಾರದೆಂದು
ಉಚ್ಛರಿಸುವರನುದಿನವೂ ಪರಪ್ರಾಣ ತಿಂದು
ಸಂಚಾರಿಯೆ ಆಚಾರದ ಅವಿಚಾಲ್ಯ ಸ್ಥಾಯಿ
ಸಂಚಿಗೆ ಹಂಚಿಕೆ ಹಾಕುವ ಕೈಗಿದೆ ಹೆಬ್ಬಾಯಿ!

೫

ಹುಟ್ಟಿಗೆಯ ತೊಟ್ಟ ಬೊಂಬೆಗಳ ನಾಟ್ಯೋತ್ಸಾಹ
ಕಟ್ಟಿಗೆಯ ಮೂರ್ತಿಗಳ ಉದ್ಧಾರ ಸಪ್ತಾಹ,
ಮುಟ್ಟಿದ್ದನಲ್ಲೆ ನುಂಗುವ ಮಹಾತ್ಮರ ಜಾತ್ರೆ!
ಅಟ್ಟಲೇರಿದ ಬೆಚ್ಚುಗಳ ಯಾಜಮಾನ್ಯದಲಿ
ಹಿಟ್ಟುಗುರಿಗಳ ಯಜ್ಞಸತ್ರ ವೇದಿಕೆಗಳಲಿ;
ಸೃಷ್ಟಿಮಾಳ್ಪ ಸ್ಥಾನ–ಮಾನ–ಪ್ರಸಿದ್ಧಿಗಳ
ಪೊಟ್ಟಣಗಳನು ಹೇರಿ ಓಡಾಡುತಿಹ ಕಾರ
ಚೊಕ್ಕಳಿಕೆ: ಕೃತಕ ದಂತದ ತೋಟದಲಿ ಬೆಳೆದ
ಮಕ್ಕಳುಟದ ಹಣ್ಣು–ಹಂತಿ ಜಾಹೀರುಗಳ!
ಬೆಟ್ಟದಾವರೆಗಂಪಿನಟ್ಟಹಾಸವ ಮರೆವ
ಬೆಟ್ಟೆದೆಯ ಚದುರಂಗ ಮಂತ್ರಿ ಮಾರ್ಬಲ ನಡೆವ
ದಟ್ಟಣೆಯ ಹೆದ್ದಾರಿ; ದೀನ–ದಲಿತರ ಬಾಳ
ಕುಟ್ಟಿ ಪುಡಿ ಮಾಡಿ ಗಟ್ಟಿಸಿ ಸಮೆದ ಕಟ್ಟಡಗ–
ಳೊಟ್ಟಜೆ; ಶವಾಸನದಿ ಕುಳಿತು ಸಂಶೋಧಿಸುವ
ಲೆಕ್ಕಿಗರ ಬೆಳ್ದಲೆಯ ನವಿರಲ್ಲಿ ನರ್ತಿಸುವ
ಲಕ್ಷ್ಮಿಯಡಗಿಗೆ ಬಾಯಿನೀರು ಬಿಡುವಕ್ಕರಿಗ
ಸೊಕ್ಕು ಸಾರಸ್ವತಿಸಿ ಮುದ್ರಿಸಿದ ಚಿತ್ರಕಥೆ
ಚೆಕ್ಕಂದವಾಡುತಿಹ ಭಂಡಾರದೋಜೆಯೇನ್!

ಮಿಲ್–ಮಂಡಿ–ಮಠ–ಮಹಾಲಯಗಳ ಹಿತಕ್ಕಾಗಿ
ಕಲ್ ಕಡಿಸಿ ಕಡಿವವರ ಮನೆಯ ಸುಡಿಸಿ
ಚೆಲ್ವಿಕೆಯ ಸೆರೆಹಿಡಿದು ನೋಟಕರ ರಂಜಿಸುವ
ಮಲ್ಲಗಲೆಯನು ಬಲ್ಲೆಯೇನಯ್ಯ ನಡೆಸಿ?

ಕಪ್ಪುರದ ಚರ್ಮಕ್ಕೆ ಕನಸಿನಲ್ಲಿಯು ಕೂಡ
ರೊಪ್ಪವಾನಿಸ ನೊರಜು–ಕಟ್ಟಿರುವೆ–ತಗಣೆಗಳ
ತಿಪ್ಪೆಯಲಿ ಹೋರಾಡುವುದು ಹೊಳೆಯಲಪ್ಪುದೇ?
ಸುಪ್ಪತ್ತಿಗೆಯ ಸೀಟಿನಲ್ಲಿ ಸಾಗುವ ಸೂಟಿ
ಗೊಪ್ಪತ್ತಿಗಿಲ್ಲದರವಸ್ತಿತ್ವದರಿವಕ್ಕೆ?
ದಪ್ಪ ದಪ್ಪದ ಹೊತ್ತಿಗೆಗಳ ಗಾಳಿಯ ಹೀರಿ
ಹೆಪ್ಪುಗಟ್ಟಿದ ಕಣ್ಣುಬಾಯಿಗಳ ಬಿಂಕಕ್ಕೆ
ಸೊಪ್ಪು ಸಿಕ್ಕದ ಹಾಳು ಸಂಸಾರಿಗಳ ಬನ್ನ
ತಪ್ಪಿಯಾದರು ಕಣ್ಣಿಗೆದುರಾಗುವುದೆ? ತತ್ವ
ದಪ್ಪಚ್ಚಿಗಳ ಬೀದಿಬಾಂಡಲೆಗಳಲಿ ಕರಿದು
ಕುಪ್ಪಳಿಸಿ ಹತ್ತುಮಂದಿಗೆ ಹಂಚುವೊವಜರ್ಕ–
ಳುಪ್ಪಿಗಾದೀತೆ ನನ್ನಿಯ ಹಪ್ಪ ನುಡಿವಾತ್ಮ?

೬

ಸೋಫ ಕೂಪ, ಕೈಬೆಂಚು, ಕುರ್ಚಿ, ಹೆಮ್ಮಂಚ ಪಂಚವಾಳ,
ಸೋಪು ಸೆಜ್ಜೆ, ಕರ್ಟನ್ನು, ಮೇಜು ಕೈಚೀಲ ಮೊಗದ ರಾಳ!
ಜೀಪು, ನಾಯಿ, ಹೊರೆಯಾಳು ದಾಯಿ, ಟೆನ್ನೀಸು, ರೇಸು ಹಡೆದ
ಟಾಪು ಟೀಪು ಸಂಸ್ಕೃತಿಯ ಬಣ್ಣಿಸಲು ಬಣ್ಣಸಾಕೆ ಬಡಿದ?

೭

ಸಂಸ್ಕೃತಕೆ ಪಾಳಿಯಾಗುವ ಪಾಳಿ ಬಂತಂದು
ಬುದ್ಧನ ಮಹಾಭಿನಿಷ್ಕ್ರಮಣಕೂ ಮೊದಲಿಗೇ
ಭಾರತಸರಸ್ವತಿ ಮಹಾಪ್ರಾಣ ಕಳಕೊಂಡು
ಸಂಘಟಿಸಿ ಬಾಳಿರಲ್ಪಪ್ರಾಣಗಳನೆಂದು
ಕೊಟ್ಟಳ್ ಪ್ರಜಾಪ್ರಭುತ್ವದ ಸೂಚ್ಯ ಸಂದೇಶ.
ವನ್ನು; ಮರೆತದನೆಮ್ಮ ಜನ ಪರರ ದ್ಯಾಸದಿ ಪ

ದೇ ಪದೇ ಬಿದ್ದಿತಲ್ಪದಿ ಸುಖವನರಸುತ್ತ–
ಅಡಿಯಡಿಯ ಹುಡಿಯಾಗಿ ಹಾರುತ್ತ ಬೀಳುತ್ತ
ಎಂದು ಆರ್ತತ್ರಾಣ ಗಾಂಧಿ ತಾನವತರಿಸಿ
ಸ್ವಪ್ರಾಣಬಲವಿತ್ತು ತೂಪಿರಿದ ಜೊಳ್ಳುಗಳು
ತಾಳಿ ಸಂಘದ ತ್ರಾಣವನ್ನು ಬಿಡುಗಡೆಗೆದ್ದು
ಬಾಳಲೆಂದಿಡಿಕಿರಿದು ಕಟ್ಟಿದೀ ನಮ್ಮೂರ
ಮೇಳದಿ ಮಹಾಪ್ರಾಣ ವರ್ಗ ಮತ್ತುದಯಿಸಿದ
ಲೀಲೆ ಲಾಂಗೂಲಸುಂದರವಯ್ಯ! ಕನ್ನಡಕೆ
ಬಾಯಿ ಹೊರಡದು ಬಣ್ಣಿಸಲು ಹೊರಟರದರಂದ

೮

ದಂಡಕಾಷ್ಠ, ಬಕಭಾಂಡ ಮಕುಟ, ಕಂಥಾವಗುಂಠಚೇಲ
ಖಂಡವೇಷ್ಟಿ, ಕೃಷ್ಣೋಪನಯನ, ಚೌಗುಂಡಿವೇತ್ರಚೋಲ,
ಚಂಡಮುದ್ರ ಮುಖ, ಮಂಡಜಠರ, ಭೇರುಂಡಬುದ್ಧಿ ಜಾಲ
ಕಂಡು ಕೈ ಮುಗಿಯದವನ ಬಿಡುವುದೇ? ಬಂತು ಅವಗೆ ಕಾಲ!

ಹಾಲು ಜೇನು ಬರಿ ಖೋವ, ಖೋವ, ಚಾಕ್ಲೇಟು ಕಿತ್ತೊಳೆಗಳು
ಬ್ರೆಡ್ಡುಬನ್ನು, ಆಮ್ಲೇಟ್ಟು, ಸೆಲಡುಗಳ ಕೋಟೆ ಕೊತ್ತಲಗಳು!
ಹಲ್ವ, ಬೆಣ್ಣೆಬಿಸ್ಕತ್ತು, ಕೇಕು, ಐಸ್‌ಕ್ರೀಮು ಖಂಡಿ ಖಂಡಿ–
ಚೆಲ್ವ ಸೋಡ–ಶರಬತ್ತು, ವಿಸ್ಕಿ, ಚಹ, ಕಾಫಿ, ತಿಂಡಿ ಬಂಡಿ!

ಮಿಥ್ಯಾ ಪ್ರಜ್ಞೆ

೧

ಗುಂಬಳ ಗುಂಬಳ ಸೊನ್ನೆ ಸೊನ್ನೆ ಬರಿ
ಗೊರಟ ಗೊರಟ ಗೊರಟ
ಉರುಟು ಉರುಟು ಹೆಗ್ಗೋಲ ಗೋಲ ಸು–
ಳ್ಳೆಂಬ ತೂತುಕರಟ!
ಗಾಲಿ ಗಾಲಿ ಬರಿ ಗಾಳಿ ಸಮೆದ ಸುಳಿ
ಇಂದ್ರಜಾಲವೃತ್ತ
ಬಾನು ಬಯಲು ಬಿನ್ನಾಣದ ಬತ್ತಲೆ
ಬುರುಡೆ ಬುರುಡೆವೆತ್ತ!

೨

ಬಟ್ಟೆಯಲ್ಲಿ ಕೊರೆದ ವಟ್ಟೆ
ಸಾರದಡಿಯ ತುಂಬು
ಬಿಸಿಲುಗುದುರೆಯೇರಿ ಬರುವ
ಬಂಜೆಮಗನ ಕೊಂಬು
ಅಗಲ ಹಡೆದ ಮುಗಿಲ ಹೂವು
ಇರುವುದಯ್ಯ ನಂಬು
ಜಗಳದಲ್ಲಿ ಬರುವುದಯ್ಯ
ಬಿಡಲು ಇಂಥ ಅಂಬು!

೩

ಸುತ್ತುತ ಸುತ್ತುತ ತಿರುಗುವ ತೀಟ
ಹಿಡಿಯಲು ಸಿಕ್ಕದ ಬರಿ ಚಿಕ್ಕಾಟ
ದುಡ್ಡಿಲ್ಲದವರ ಕೊಡು–ಕೊಂಬೋಟ
ಅಸಲಿಲ್ಲದೆ ಬಡ್ಡಿಯ ಬರೆವಾಟ

೪

ಮುದುಕಿಯರ ಓರೆ ನೋಟ! ಗಂಡಾಡ
ಕೊರಳ ಮೊಲೆವಾಲಿನೂಟ
ಹಿಮ್ಮಡಿಯು ಹೋದ ಬೂಟ–ಹಾಕಿಕೊಂ–
ಡಲೆವ ಮರ್ಯಾದೆ–ಮಾಟ!

೫

ಪೂರ್ಣ ಪೂಜ್ಯ ಗಗನ ಗಗನ
ಗರ್ಭರಹಿತ ಮೌನ
ಹಿಂದೆ ಮುಂದೆ ಮೇಲೆ ಕೆಳಗೆ
ಬೋಳು ಕಳಪೆ ಕಾಣ!
ಗಬ್ಬಿಲವೂ ಕಾಣ ಬರದ
ಗಡಿಯಿಲ್ಲದ ಹೆಬ್ಬಿಲ
ತಬ್ಬಿತಡಹಿ ನೋಡಲುಂಟೆ?
ಚರ್ಮಹರಿದ ತಬ್ಬಲ!
ತಾಣಕಷ್ಟೇ ತಾಣವಲ್ಲಿ
ತೂಲಕಿಲ್ಲ ತಾಣ
ಲಯದ ಭಯದ ಭೂತ ಬಿಟ್ಟ
ಸುರು ಸುರಂಗ ಬಾಣ–
ಮೈಕಾಣದ ತೆರೆದ ಬಾಯ
ಖಾಲಿ ಖಾಲಿ ಖಾಲಿ
ರೂಪ ರಸ ಸ್ಪರ್ಶ ಗಂಧ
ಶಬ್ದವಿರದ ಗೋಲಿ!
ಹೃದಯವೆಂಬ ಹೆಣಕೆ ಕಟ್ಟಿ
ಕೆಡಹಿ ಕಳೆದ ಗೋರಿ
ಗುರುತೊಂದೂ ಇಲ್ಲದಿರುವ
ಅಳಿಸಿ ಹೋದ ದಾರಿ!
ಇಲ್ಲಗಳನು ಮಾಲೆಮಾಡಿ

ಸೂಡಿರುವ ಕಬಂಧ
ಎಲ್ಲೆಲ್ಲೂ ಕಂಡುಬರದ
ನವ್ಯತೆಯ ಕುಬಂಧ!
ಬುರುಗು ಬುರುಗು ಬರಗಲೇನು?
ಬರಡು ಬರಡು ಬರಡು
ಹರಿದ ತಳದ ಹೆಡಗೆಯಲ್ಲಿ
ತುಂಬಿ ಅಳೆವ ಹುರುಡು!
ಖಗ್ರಾಸದ ಖಂಡದಲ್ಲಿ
ಹುಟ್ಟಿ ಸತ್ತ ಪ್ರೇತ–
ಏನು ಏನು ಏನು ಏನು?
ಎಲ್ಲಾ ಪ್ರಶ್ನಾರ್ಥ!

ಶ್ರೇಯಃ ಪ್ರಜ್ಞೆ

೧

ಹುರುಳು ತಿರುಳು ಸಾರಭಾರ
ನಿತ್ಯ ಸೌಖ್ಯ ಸಂಭ್ರಮ
ಅರಳಿದಂಥ ಜಗತ್ಕಲ್ಪ
ವೃಕ್ಷದೊಂದು ವಿಭ್ರಮ
ಮನಂಗೊಳಿಸುತಿಹುದು ನೋಡ
ಕಾಳಿದಾಸ ಕಟ್ಟಿದ
ಧರ್ಮರಾಜ್ಯದಲ್ಲಿರುವಾ
ರಾಜಮಾರ್ಗ ಮೆಟ್ಟಿದ
ಊರ್ವಶಿ ಬಾ ಬಯಸಿ ನಿಂದ
ಪುರೂರವನ ಪ್ರೇಮಕೆ
ಕಳಸವಿಟ್ಟು ಸಗ್ಗಬಿಟ್ಟು
ಬಾಗಿ ಎದೆಯ ನೇಮಕೆ!

೨

ಹಸಿವಿದೆ ಬಾ ಕಸುವಿದೆ ಬಾ
ಬುವಿಯೊಳಿಂದ್ರಿಯಂಗಳ
ಮೆಚ್ಚಿಸುವತಿ ಮಧುರವಾದ
ವಸ್ತುಗಳಿವೆ, ಮಂಗಳ
ಹುಚ್ಚು ಹಿಡಿಸುವಷ್ಟಿದೆ ಬಾ
ಸೇವಿಸೋಣ ಇಬ್ಬರೂ
ಸಂವಿಭಾಗದಿಂದ ಭಕ್ತ
ರಭಕ್ತತ್ವ ಸಿದ್ಧಿ–
ಅಂತೆಯೇ ನಮ್ಮಿಬ್ಬರಿಗೂ
ಇರುವ ತನಕ ಬುದ್ಧಿ
ನಿಜವಾಗಿಯು ತುಚ್ಛವಾದ

ಈ ಪ್ರಪಂಚವನ್ನು
ನಿಜವಾಗಿಯು ಬ್ರಹ್ಮತ್ವ–
ಕ್ಕೇರಿಸಬಹುದೆನ್ನು!
"ನಾನಲ್ಲದ್ದೆಲ್ಲ ನೀನು
ನಿನ್ನ ಬಳಗ ದೊಡ್ಡದು"
ಎಂದಿಬ್ಬರು ತಿಳಿದಾದಿನ
ನಿನ್ನ ಸುಖವೆ ನನ್ನದಕ್ಕು–
"ನನ್ನ ಸುಖಕೆ ಪಾರವಿಲ್ಲ
ಬ್ರಹ್ಮಕದಕು ಭೇದವಿಲ್ಲ"
ಎಂಬನುಭವವಿಬ್ಬರಿಗೂ
ಒಂದಾಗಿಯೆ ಬರುವುದು
ಬಂಧ ಮುಕ್ತಿಯಪ್ಪುದು!

೩

ಬಂಧವ ಮುಕ್ತಿಗೆ ತಿರುಗಿಪುದಂದ
ಅಬಂಧ ಕುರೂಪ ಹಡೆದಿಹ ಕಂದ!
ಅಸಂಖ್ಯ ಎದೆಗಳ ಪ್ರತಿನಿಧಿಯಾದ
ನಿನ್ನೆದೆ ನನ್ನೆದೆ ತಾನಾದಾಗ–
ಹುಟ್ಟುವ ಹಾಡೇ ನನ್ನಿಯ ಚೆನ್ನು
ಕಟ್ಟಿದ ಪಾಡೇ ಬಿಟ್ಟುಲಿಯೆನ್ನು

೪

ಯಕ್ಷಲೋಕ ಶೃಂಗಾರ ಸಾಹಸದ ಕೃತ್ಯ ನಿತ್ಯ ನಿಮಗೆ
ಪಕ್ಷವಿಲ್ಲದಲೆ ಹಾರಬರುವುದೀ ಬುವಿಯ ತೋಟದೊಳಗೆ!
ಇಕ್ಷುಚಾಪ ಹರಕೋಪದುರಿಗೆ ಪಕ್ಕಾಗದುಳಿವ ನಮ್ಮ
ರಕ್ಷೆಯಾಗಿ ಧರ್ಮಾರ್ಥ ಮೋಕ್ಷ ನಿಮಗಿದೋ ಎಂಬ ಬೊಮ್ಮ!
ಸಾವಿನಂಜಿಸುವ ಉಗುರುಹಲ್ಲುಕೊಂಬಳಿದು ಹೋಗಿ ಸಾವೇ
ಮಾವಿಗಿಂತ ಸಿಹಿಯಮೃತವಾಗಿ ಎದೆ ತಣಿಸುತಿರಲು ನಾವೇ
ದೇವರಾಗುವೆವು ಕೇಳೆ ಊರ್ವಶೀ ನನ್ನ ತೋಳ ತೊಡವೇ
ಜೀವಜೀವದಂಟಾದ ದೇವಗುಣ ಸುರಿವ ಹಾಲ ಕೊಡವೇ!

ಅವತಾರ ಪ್ರಜ್ಞೆ

೧

ಮುಚ್ಚಿ ತೆರೆವ ಕಣ್ಣು ಮಾಳ್ಪ
ಮುಚ್ಚುಮರೆಗಳೇಕೆ?
ಮೂಡಿ ಮುಳುಗುತಿರುವಂದದ
ಸತ್ಯ–ಸಟೆಗಳೇಕೆ?
ನನ್ನ ನಯನಗಳ ವಂಚಿಸ
ಬಯಸುವ ನೀ ಮೊದಲೆ
ನಿನ್ನೆದೆಯನು ವಂಚಿಸಿಕೊಂ–
ಡಿರುವೆ ಮುದ್ದು ತೊದಲೇ!
ನನ್ನ ನೀನು ಮರೆಯುವುದೋ
ನಿನ್ನ ನೀನೆ ಮರೆತವೋಲ್–
ಜಗದ ಸಟೆಯ ಚಿಹ್ನವಾಗಿ
ಮೆರೆವ ಸೊಕ್ಕು ನಿನಗಿರೆ
ಜಗತ್ತುಚ್ಛವೆಂದು ಬಿಟ್ಟು
ನಡೆವ ಶಕ್ತಿ ನನಗಿದೆ!
ನಂಬಿದವನ ವಂಚಿಸುವುದು
ನಿನಗಾಗೆ ಪರಾಕ್ರಮ
ನಂಬದೆಯೂ ನಂಬಿದಂತೆ
ತೋರ್ಪುದೆನ್ನ ವಿಕ್ರಮ!
ನಿನಗೆ ನೀನೆ ಸಾಕೆನ್ನುವ
ಸಾಹಸ ನಿನಗಿದ್ದರೆ
ಸಾಲದೆಂದು ತೋರಿಸುವೆನು
ಒಮ್ಮೆ ನೀನು ಬಿದ್ದರೆ!

೨

ಅಪರಾಧವನ್ನು ನೀನಜ್ಞಾನವೆಂದೊರೆಯೆ
ಸುಪರೀಕ್ಷೆಗೊಳಪಡಿಸಿ ತಿಳಿಯಬಲ್ಲೆ;
ಅಪರಾಧವಲ್ಲದುದನಪರಾಧವೆಂದುಸುರೆ
ತಪಿಸಿ ಸುಟ್ಟುರಿವಂತೆ ಮಾಡಬಲ್ಲೆ!

೩

ಇಂದ್ರ ನಾನು ಅಗ್ನಿ ನಾನು ಧರ್ಮದಂಡಪಾಣಿ ನಾನು
ನನ್ನ ಇತಿಮಿತಿಗಳನರಿತು ನಿನ್ನದನ್ನು ಕಲಿತ ನಾನು
ಅಹಂಬ್ರಹ್ಮವೃತ್ತಿ ಹಿಡಿದು ಸ್ವಸ್ವರೂಪನಾದ ನಾನು
ನಿನ್ನ ತಂತ್ರಕೆಂದಿಗೂನು ಮಣಿಯೆ ಮಗುವೆ, ಜೀವವೆ

ಪ್ರೇಮವೆಂದು ಕಾಮವೆಂದು ನೀತಿಯೆಂದು ಭೀತಿಯೆಂದು
ಲಾಭವೆಂದು ಲೋಭವೆಂದು ಕರುಣೆಯೆಂದು ಮೌಢ್ಯವೆಂದು
ಬಗೆಬಗೆಯಲಿ ಕಾಡಿಸಿ
ನಿನ್ನ ಬೇಳೆ ಬೇಯಿಸಿಕೊಳಲಾಗದು ಬಾ ನನ್ನಲಿ
ನಿನ್ನದೆಲ್ಲ ಝಾಡಿಸಿ
ತೆರೆದ ಕಣ್ಣ ಮುಚ್ಚದಂತೆ ನಿಲ್ಲಿದಿರೋ ನಾಯಿಕೆ
ಶರಣು ಹೊಡೆದು ಕಾಯಕೆ!

೪

ಜ್ಞಾನರಾಜ್ಯದಲ್ಲಿ ಅಪ–
ಜ್ಞಾನಕೆಲ್ಲಿ ನೆಲೆ?
ಸೂರ್ಯ ರಾಜ್ಯದಲ್ಲಿ ತಮೋ–
ರಾಶಿಗೆಲ್ಲಿ ಬೆಲೆ?
ವಿಶ್ವರೂಪ ತೋರಿಸಿದರೆ
ದಂಗು ಬಡಿದ ಅರ್ಜುನ
ಅಲ್ಲ ನಾನು, ನಿನ್ನ ಹಣಿವ
ಪರಮಾತ್ಮದ ತರ್ಜನ!
ನಿನ್ನನುಂಡು ಪರಮಾತ್ಮಕೆ

ತಲ್ಪಿಸುವ ಅನಂತಭೋಗಿ
ನೀನೆಷ್ಟೋ ತಿಳಿದುರೂನು
ಉಳಿವೆ ನಾನು ಶೇಷನಾಗಿ!
ನಿನ್ನ ನೀನು ತಿಳಿದುಕೊಳಲು
ಹೊರಟ ನಿಮಿಷ ಮಾತ್ರದಿ
ನಿನಗೆ ಮೋಕ್ಷ ನನ್ನಲ್ಲಿಯೆ
ಐಕ್ಯ ನನ್ನ ಪಾತ್ರದಿ!

ಅನಾಸಕ್ತಿಯೋಗ ಪ್ರಜ್ಞೆ

೧

ಸೈನಿಕನಾಗೆಲೆ ಹೃದಯ ಇಲ್ಲದಿರೆ
ಸನ್ಯಾಸವ ಹಿಡಿ ಹೋಗು
ಸಹಜೀವಿಗಳಿಗೆ ಶಿಕ್ಷಣ ಕೊಡಲೆಲೆ
ಹೊರಡುವ ಆಸೆಯ ನೀಗು!
ಶಿಕ್ಷಿತರಾದರೆ ಬಹಳ ಒಳ್ಳೆಯದು
ಆಗದೆ ಹೋದರೆ ಹೊರಡು
ಸೈನ್ಯಕೆ ಅಥವಾ ಅರಣ್ಯವಾಸಕೆ
ನಾಗರ ಜೀವನ ಬಿಡು!
ಕೋಟಿಗೊಂದು ನಿಜರತ್ನ ಸಿಗುವವೊಲು
ಕೋಟಿಗೆ ವಿದ್ಯಾವಂತ
ದೊರೆಗು ಹೆಣ್ಣು–ಗಂಡುಗಳಲಿ ಹುಡುಕಲು
ಈ ಸಮಾಜದಾದ್ಯಂತ!

೨

ಹಿಂದು ಮುಂದಿನಾಲೋಚನೆ ಬಾಳಿನ
ಬಿಡುವುದು ನಿಶ್ಚಿಂತತ್ವ
ಜೀವನ್ಮುಕ್ತಿಯ ಬುನಾದಿಯದೆ ಆ
ಬುದ್ಧಿಗೆ ಆಶ್ರಯವಿತ್ತ;
ಹೇಳಿದ್ದಷ್ಟನೆ ಮಾಡಿ ಬದುಕುವ
ಸೇನಾಧರ್ಮವದೊಂದು
ಹೇಳುವರಾರೂ ಇಲ್ಲದೆ ಬದುಕುವ
ಸನ್ಯಾಸಾಶ್ರಮವೊಂದು–
ಶುದ್ಧ ಪಶುತ್ವದ ಬಾಳೆ ಶುದ್ಧ ಈ
ಅರ್ಧಕಲಿತ ಜೀವನಕಿಂತ

ಶುದ್ಧ ಪಶುಪತಿತ್ವವೋ? ಪೂರ್ಣ ಶುಚಿ!
ಅದಕೆ ಬೇಕು ಧೈರ್ಯದ ಪಂಥ
ಸಂತಪಂತದಾ ಹೊಂತ ಕಷ್ಟ ಅತಿ
ಆದ್ದರಿಂದ ಹಿಡಿ ರಣಪಂಥ
ಎಂಥ ಕೆಲಸದಲ್ಲಿಯೂ ಹೋರು ನೀ
ನ್ಯಾಯಕಾಗಿಯೇ ಅಸರಂತ;
ನಿತ್ಯಘರ್ಷಣವು ಸ್ತುತ್ಯವಾಗುವುದು
ಸಮತೆಗಾಗಿ ನೀ ನಡೆಸಿದರೆ
ಸಮವೆ ಸತ್ಯಸೌಂದರ್ಯ ಬಾಳಿನಲಿ
ವಿಷಮವೆಲ್ಲ ಅಪರೂಪ ಖರೆ!

೩

ರಣದ ನಡುವೆ ನರಗೆಂದನಂದು ತಾ
ಸುದರ್ಶನವ ಹಿಡಿದು
ಅಹಂಬ್ರಹ್ಮವೃತ್ತಿಯಲಿ ಮೋಹದ–
ಶ್ವತ್ಥವನ್ನು ಕಡಿದು
ಬಯಲು ಮಾಡಿಕೊಟ್ಟನು ಕರ್ತವ್ಯಕೆ
ಕೃಷ್ಣ ತೆಗೆದು ತಡೆಯ
ಹಯಗಳಂಥ ಇಂದ್ರಿಯಗಳನುಭವವ
ಹಿಡಿದು ನಿಲಿಸಿ ಒಡೆಯ–
ನರಶರೀರವನು ನಡೆಸುತಿರುವೆ ಆ
ಪರಮ ಬುದ್ಧಿಯೋಗಿ
ನರಾತ್ಮಕ್ಕೆ ಸಮಮಾರ್ಗ ತೋರಿಸಿದ
ಹಿಮ್ಮುಖಕ್ಕೆ ತಿರುಗಿ!

೪

ಇಂದ್ರಿಯಾಶ್ವವೇರಿರುವ–
ಶ್ವತ್ಥಶಾಖೆಯಂಥ
ವ್ಯಕ್ತಿ–ವಸ್ತು–ಕಲ್ಪನೆ–ರುಚಿ–
ವಿಚಾರಗಳನಂತ
ಅಸಂಗಾಸಿಯೆತ್ತಿ ಬುಡವ

ಕಡಿಯದಿರೆ ದುರಂತ
ನರಗೆ ತಪ್ಪದೆಂದಾದರು
ಎಂದಾ ಭಗವಂತ
ಸಮಕರ್ಮವ ತಿಳಿದವನವ
ನಿಜ ವಿದ್ಯಾವಂತ
ಸೂರ್ಯ ಚಂದ್ರ ತಾರೆಗಳಿಗೆ
ಉರಿವ ಸಾರವೀವ
ಮಹಾಜ್ಯೋತಿ ನಡೆವ ನೀತಿ
ಸನ್ಯಾಸದ ಭಾವ;
ಸಮಹೃದಯ ಪ್ರಭೆಯಾರ್ಜಿಸು–
ವಂತೆ ಯೋಧಧರ್ಮ
ಹಿಡಿದೆದೆ ಸಮದರ್ಶನವಡೆ–
ದಕ್ಕು ಮುಕ್ತಕರ್ಮ
ಸಮಶ್ರೀಯೆ ಶ್ರೀಮಂತಿಕೆ
ಶಾಂತಿಕಾಮಧೇನು
ಫಲಾಶೆಗಳ ಕಲ್ಪವೃಕ್ಷ
ಅಭೋಗ್ಯ ಸಾಮಾನು!

ಆತ್ಮವಿಕಾಸ ಪ್ರಜ್ಞೆ

೧

ಕಾರ್ಮುಗಿಲ ಗರ್ಜನೆಯ ತಾಳಕ್ಕೆ ಸರಿಯಾಗಿ
ವೃಷ್ಟಿನಟ ಕುಣಿಯುತಿರೆ ಕಣ್ಮಿಂಚ ಝಗ್ಗೆನಿಸಿ
ಹಳೆಯ ಮಲೆನೆಲದ ಹಳ್ಳಿಯ ಹಟ್ಟಿಯೆದುರಲ್ಲಿ
ಒಂದು ಗೊಬ್ಬರ ಹೊಂಡ, ಇರುವೆ ಎಂಬತ್ತುಕೋ–
ಟಿಗಳ ನಿಮಿಷದಿ ಹಡೆದ ಹೆಬ್ಬೊಮ್ಮೆ ಕಾಲ್ಚಾಚಿ
ಕುಳಿತ ಪ್ರಸೂತಿಕಾಗೃಹ–ಅದರ ಕಂಪುವಳ
ತಿರೆಯೆದೆಯ ನರುಗಂಪ ಬೀಸಿದ್ದ ಬಲ್ಲಿರಾ?
ಜಗದಲ್ಲಹಿಂಸೆಗಪ್ರತಿಮ ಸುಪ್ರತಿಮೆಯಹ
ಹಸುಕೊಟ್ಟ ತೀರ್ಥಪ್ರಸಾದವದು ಎಂಬುದನು
ಹತ್ತು ಮಳೆ ಕಂಡ ಗೊಬ್ಬರಗುಂಡಿ ತಿಳಿಸೀತು
ಮೇಗಾಳಿಯಿಂದ, ಅದು ಸಾಲದಾದರೆ ಅದರ
ಸಾರವುಂಡೆದ್ದ ಹೊಲವೆಳೆಯ ಪರಿಮಳಸಾಲೆ
ಒಕ್ಕಲಿನ ಹೊಸತು ಹಬ್ಬದೊಳೆಲೆಯ ಹರಿಸದೇ?
ಒಡೆಯಂದಿರೆಡೆಯಲ್ಲಿ ಸಾಕ್ಷಿಕೊಡದುಳಿವುದೇ?

೨

ಗಗನಗರ್ಜನೆಯಲ್ಲಿ ಮಳೆಯ ಮಾರ್ಜನದಲ್ಲಿ
ಜಗವಿಡೀ ಮಿಂದು ಮಡಿಯಾಗುವುದೊ ಎಂಬವೊಲ್
ಜಡಿಧಾರೆ ಸುರಿವೊಂದು ಸಂಜೆ ಮನೆಜಗುಲಿಯಲಿ
ಬಡತನದ ಬಹಿರಂಗ ಸೌಂದರ್ಯ ಮೈವೆತ್ತು
ದುಡಿವಾಳ ಕೈಹಿಡಿದು ಗರತಿವ್ರತವ ಮಾಡ–
ಲಿಳಿದು ಬಂತೋ ವಿಧಿಯ ಮಧ್ಯ ಪ್ರದೇಶದಿಂ–
ದೆನೆ ಕುಳಿತ ಮೂರ್ತಿ ತಾನಾವ ದೇವತೆ–ಹೇಳಿ?
ಉಗ್ರಪ್ರತಾಪದಲಿ ಹೊಯ್ದು ಹೆಳವರನೆಲ್ಲ
ಹೆದರಿಸುವ ಮಳೆನಾಡ ಮಳೆಗಾಲ ಮೊಗವೊತ್ತ
ಪ್ರಕೃತಿ ಸುಗ್ಗಿಯ ಮಧುರ ಸೌಂದರ್ಯಮುಖದಿಂದ
ಅಂಡಜೋದ್ಭಿಜ್ಜರಾಯುಜಗಳನು ತಣಿಸಳೇ?

ಅಂತಾ ಮಹಾಮಾತೆ ಭೂಮಾತೆಯರಳಿಸಿದ
ಹೂನಗೆಯ ಮೊಗವೇನೊ ಎಂಬಂತೆ ಕುಳ್ಳಿಹಳ್–
ಬಡತನದ ಗೊಬ್ಬರದ ಸತ್ವಾಂಶ ಕುಡಿವೊಡೆದು
ಗಿಡವಾಗಿ ಮರವಾಗಿ ಮೃಗಪಕ್ಷಿ ಮಾನವರ
ಎದೆಯ ತಣಿಸುವ ಸಾವಿರಾರು ಹಣ್ಸುರಿಯಿಸುವ
ತನಿರಸದ ಇಮ್ಮಾವಿದೇನೆನಲ್ ಕಾಣುವಳ್
ಮೂವತ್ತು ವರುಷಗಳ ಹಿಂದೆ ಕಣ್ತಿರುಗಿಸಲ್!

೩

ಪಾತಾಳದೊಳಿದೆ ತಾಮಸದಂಧತೆ
ವ್ಯಕ್ತಿ ಸ್ವಾರ್ಥಪರಾಯಣ ಮಂದತೆ
ವಿಷಸೌಂದರ್ಯದ ನಾಗರಬಂಧದ
ಮಸಕಗಳೊಟ್ಟಜೆಯೆಂಬರು ನಂದದ
ಮಸಣದ ಹಗ್ಗಿಯ ಮಾಯಾದೃಶ್ಯಗ–
ಳಸಹ್ಯವಾದರೆ ದೇವಲೋಕದಲಿ
ಸುಧಾಮಯೂಖವ ಸೂಸುವ ನಲ್ಮೆಯ
ಹಡೆವೊಲ್ಮೆಯ ಶತಕಾಮಧೇನುಗಳು
ಕುಡಿವರನರಸುತ ತಿರುಗುವವೆಂಬರು:
ಮಧ್ಯಮಲೋಕದೊಳೆಂತಿದೆ? ಇಂತಿದೆ–
ಅದು ಇದೆ ಇದು ಇದೆ ಶೌಚಾಶೌಚದ
ಎದೆಗಳ ರೂಪಕುರುಪಗಳೆಂಬುದು
ಹೃದಯಜ್ಞರಿಗರಿಯದ ಸಂಗತಿಯೇ?
ಚೆಲುವಿನ ಮರ್ತ್ಯಾಮರ್ತ್ಯತೆಗಾವುದು
ಅಳೆಗೋಲೆನೆ ಮುನಿಮೋಹನದಾಸನು
ಚೊಕ್ಕವೆ ಚೊಕ್ಕಳಿಕೆ ಕಣಾ ಎಂದನು!
ಶಿವಸತ್ಯದ ಶುಚಿಯಿಲ್ಲದ ಮಯಮಂ–
ಟಪವನ್ನೆದೆಯೆಂದೆನ್ನಲು ಬರ್ಪುದೆ?
ಶಿವವಾತ್ಸಲ್ಯರಸೋದಯವಿರುವೆಡೆ
ಅವನಿಯೆ ಅದರು ಸಗ್ಗಕೆ ಮಿಗಲೋ!

೪

ಆ ಮಹಾಮನೋಜ್ಞಭಾವ
ತುಂಬಿ ಹರಿವ ಹೃದಯ ಸುತ್ತ
ಸೂಸುವ ನೈರ್ಮಲ್ಯಕಿರಣ–
ರಾಶಿ, ಅವಳ ಸುತ್ತ ಬಿರಿದ
ಸುಪ್ರಸನ್ನ ಮಂಜುಪ್ರಭೆ
ಬೆಳುದಿಂಗಳ ಮೀರಿದೆ!
ಉಷಸ್ಸಿಗೂ ಮಿಗಿಲಾಗಿದೆ
ಬೆಳ್ಳಿಗು ಮುದ್ದಾಗಿ ಹೊಳೆವ
ನಗೆಯೆಳವಗಲಾಗಿದೆ
ಬಾನಿಗಿಂತ ತಿಳಿಯಾಗಿದೆ
ಬೆಳರ್ವಾಳೆಯ ಸುಳಿಯಾಗಿದೆ
ಬಂಧನ ಭಾವವ ತೊಳೆಯುವ
ಕಂದತನದ ಹೊಳೆಯಾಗಿದೆ
ಒಲಿದ ಹಿರಿಯ ಕಿರಿಯೆದೆಗಳ–
ನೆಲ್ಲ ಕೂಡಿಕೊಂಡು ಕುಳಿತ
ಪಂಚವರ್ಣ ಶುಕಕಿಲ್ಲದ
ಪರಂಜ್ಯೋತಿ ಬೆಳಗುತ್ತಿದೆ
ಪಿತೃಮುಖಕ್ಕೆ ಕಣ್ಣಾಗಿಹ
ಮಾತೃಮುಖ ಮನೋಹರ
ಅಲ್ಲಿ ಮಾತ್ರ ಹೃತವಾಗುವ
ಮನವಾತ್ಮವಿಕಸ್ವರ!

ಅಂತರ್ಮುಖ ಪ್ರಜ್ಞೆ

೧

ಸಂಬಳವ ಕೊಡದಿರುವ ಒಡೆಯನ
        ಪಾದಸೇವೆಯ ಮಾಡಿದೆ
ನಂಬಿಗೆಯನಿಡದಿಹ ಗೆಳೆಯನಿಗೆ
        ಸ್ನೇಹಸೇವೆಯ ನೀಡಿದೆ
ಉಳಲು ಬಾರದ ಉಂಡು ಮಲಗುವ
        ಹೋರಿಯನು ನಾ ಸಾಕಿದೆ
ಕೊಳ್ಳಲಾರೂ ಬರದ ಬೆಳೆಯನು
        ಬೆಳೆದು ಸಂತೆಗೆ ನೂಕಿದೆ
ಮುಂದಿನದನೂಹಿಸಲು ಬಾರದ
        ವಿದ್ಯೆಯನು ನಾನೋದಿದೆ
ಇಂದು ಹಿಡಿದೀ ವ್ಯಾಧಿಗಾಗದ
        ಔಷಧವ ನಾ ಮಾಡಿದೆ

೨

ಹಣ್ಣು ಕಾಣದ ಹೂಗಿಡಗಳ ಹಾಕಿದೆ ಬಹಳ
        ಹಾಲೀಯದಾವುಗಳ ಹಲವ ಹೊರೆದೆ
ಕಣ್ಣು ಕಾಣದ ದೊಡ್ಡ ಕಣ್ಣುಳ್ಳ ಗೃಹರಮೆಗೆ
        ಹಗಲಿರುಳು ಹರೆ ಹಾಲು ಹೈನವೆರೆದೆ
ಸಣ್ಣತನವೊಳಗಿರುವ ದೊಡ್ಡವರನೆಡೆಬಿಡದೆ
        ಕೊಂಡಾಡಿ ನಮಿಸಿ ಸಂತರ್ಪಿಸಿದೆನು
ಕಣ್ಣು ತೆರೆಯದ ದೇವರಿಗೆ ನಿತ್ಯವೂ ನನ್ನ
        ಅನ್ನವೆಲ್ಲವ ಬಿಡದೆ ಅರ್ಪಿಸಿದೆನು
ಕದನಕ್ಕೆ ಕರೆದರೂ ಬಾರದಿಹ ಹಗೆಗಳಲಿ
        ಶೌರ್ಯವನು ತೋರಿಸಿದೆನು
ಒದೆದರೂ ನಾಚಿಕೊಳ್ಳದ ಆಳ ಲೆಕ್ಕಕ್ಕೆ
        ಸಂಬಳವ ಸೇರಿಸಿದೆನು
ಬ್ರಹ್ಮನನು ಕಾಣಿಸದ ವೇದಾಂತವಾಗುದಧಿ–

ಯಾಳದಲಿ ನಿತ್ಯವೂ ಮುಳುಗಿ ಮಿಂದೆ
ಕರ್ಮವೇ ಸುಖವೆಂದು ಸುಳ್ಳೆ ಸಂತೈಸುತಿಹ
ಔದ್ಯಮಿಕವಾದ ಹಿಡಿದಾಳಿ ಬಂದೆ

ಬೆಂಕಿಯಲ್ಲಿಯ ಹೋಮ ನೀರಹೋಮದ ಹಾಗೆ
ವಿಫಲವಲ್ಲೆಂಬ ಸುಳ್ಳಾರಾಧಿಸಿ
ಮಂಕನಾದೆನು ಜಗದ ಸತ್ಯವನು ಸುಳ್ಳನ್ನು
ಬೋಧಿಸುವ ತತ್ವಗಳ ಸಂಶೋಧಿಸಿ

ಜಗ–ದೇವ ನಾನುಗಳ ಕಲ್ಪನಾತ್ರಯದಲ್ಲಿ
ನನ್ನನೊಬ್ಬನನೆ ನಾನು ಬಿಟ್ಟಿರುವುದು
ಹೊಗುವೆ ನಾನಿನ್ನೆನ್ನ ಸಾಕು ನನ್ನೀ ವಿಶ್ವ
ನನ್ನಲ್ಲಿಯೇ ನನ್ನನ್ನಿಟ್ಟಿರುವುದು!

ಬಹಿರ್ಮುಖ ಪ್ರಜ್ಞೆ

೧

ಬೆಳಗಾಯಿತು ಬೆಳಗಾಯಿತು ತಿಳಿವೆಳರಿನ ಸುಳಿಯೆದ್ದಿತು
ಅರುಣೋದಧಿಯುಷೆಯಲೆಗಳ ತಣ್ಣೊರೆವೊನಲನು ಹರಿಸಿತು
ಬುವಿಬಾನ್ಗಳ ಗಿರಿ ಕಾನ್ಗಳ ಚಿತ್ರಿಸುತಿಹ ರವಿ ಮೂಡಿದ
ಹವೆ ಹೊರಟಿದೆ ಖಗ–ಮೃಗಗಳ ಹಲ ಕಂಠಂಗಳು ಹಾಡಿದ!

ಯಾರವತಾರಗಳಿವು? ಎಂ–
ಬಚ್ಚರಿಯಲಿ ಕಣ್ದೆರೆಯಲು–
ನನ್ನನ್ನೇ ಗುರುತಿಸಿದೆನು ನಾನಾ ನಾನಾ ಚಿತ್ರದಿ
ನಿದ್ರೆಯ ಮೊಟ್ಟೆಯ ಹೊಟ್ಟೆಯ ಹೊರಬೀಳಲು ನಾನೊಮ್ಮೆಲೆ
ಹೃದ್ರಾಗವು ಬಯಲಾಯಿತು ವಿಶ್ವದ ವೈಚಿತ್ರ್ಯವಾಗಿ!
ಗಳಿಗಳಿಗೆಗು ನಾನೆ ಬೇರೆ ನೀನಾದಲ್ಲೆಂಬೀ ಹಲ
ಸಾವಿರ ಸಾವಿರ ಸಾವಿರ ಸಾವ ಚರಾಚರ ಸಂಕುಲ
ನನ್ನನ್ನಲ್ಪಿಸಲನುದಿನ ಯತ್ನಿಸುತಿದೆ ಅಹಹ ಅಹಾ
ಯಮಿಸಿದರೂ ಆಯುಷ್ಯವ ಕಾಲಕಾಲಕೀ ಸೃಷ್ಟಿಯ
ಭ್ರಮಿಸುತ್ತಿದೆ ತನ್ನತನವ ನಂಬಿ ಎಚ್ಚರಿನ ಹಾಗಿಹ
ನಿದ್ರೆಯಲ್ಲಿ ನನ್ನನ್ನೂ ಸೆಳೆದುಕೊಂಬವೇನೋ ಎನಲು!

ಇದರ ಹುರುಳು ನನಗೆ ಮರಳು
ಈ ಯೆಚ್ಚರ ನನ್ನ ಕನಸು!
ನನ್ನ ಮರುಳು ಮಾಡಬರುವ ಕುನ್ನಿಗಳನು ಶಿಕ್ಷಿಸುವೆ
ನನ್ನ ನೆನೆದು ಕೃತಜ್ಞತೆಯ ಸಲಿಸುವವರ ರಕ್ಷಿಸುವೆ!
ಕೊಟ್ಟದ್ದನು ಕೊಡುವೆ ಜಗದೆ ಇದೇ ಕರ್ಮನೀತಿ
ಕೊಡದಿಹ ಕೋಡಗಗಳನಾ ದಂಡಿಸುವೀ ಭೀತಿ
ನಡೆಯಲಿ ನಡೆಯಲಿ ನನಗೇ ಬೇಸರ ಬರುವನಕ

ಬಂದೊಡನೆಯೆ ಮತ್ತೆ ನಿದ್ರೆ ಮಾಡುವೆನೀ ಶುನಕ
ಸಂಸರಿಸಲಿ ಸೃಷ್ಟಿಸ್ಥಿತಿಲಯಗಳಲ್ಲಿ ಹೊಕ್ಕು
ಕೃತಜ್ಞಾತ್ಮಗಳು ನನ್ನಲಿ ನಿಂತು ನಲಿಗೆ ನಕ್ಕು!

೨

ಸ್ನೇಹವಿರದ ಸಮಾಜವನು ಕಟ್ಟಿಕೊಂಡ ನರರಲಿ
ಮೋಹ ಮದೋನ್ಮಾದ ಬೆಳೆಯೆ ಸೌಂದರ್ಯದ ಹೆಸರಲಿ
ನಾಗರಿಕತೆ–ವೆತೆಯಲಿ
ನೀತಿನಿಯಮ ಕತೆಯಲಿ
ಅವರಿಗವರೆ ಹಗೆಗಳಾಗಿ ಸಾಯಲೆಂದು ಶಾಪಿಸಿ
ಅವರ ಮುಕ್ತಿ ಪಥವ ತೋರ್ಪೆ ಕೋಪದಿಂದ ತಾಪಿಸಿ;
ಸ್ನೇಹವೊಂದೆ ಐಕ್ಯಕಾರಿ ಐಕ್ಯವೊಂದೆ ಮೋಕ್ಷಕಾರಿ
ಚರಾಚರಕಿದೊಂದೆ ದಾರಿ ಮತ್ತೆ ಬರಲು ನನ್ನ ಸೇರಿ;
ನಾನು ತಂದೆ ಇವನ್ನಿಲ್ಲಿ ನಾನು ಕರೆದುಕೊಳ್ಳುವೆ
ಪಶ್ಚಾತಾಪದ ವಿದ್ಯೆಯ ಕಲಿಸಿ ಕೊಳೆಯ ತಳ್ಳುವೆ
ನೈರ್ಮಲ್ಯದ ಸೌಂದರ್ಯವನೆರೆದು ಕತ್ತಲೋಡಿಸಿ
ಬೆಳಗಿಸುವೆನು ಕರುಣಧಾರೆಯೆರೆದವದಿರಿಗೂಡಿಸಿ;
ಬೆಳಗಿನ ಬೆಳರನ್ನು ಹೀರಬಲ್ಲ ಹೃದಯವೆಷ್ಟಿದೆ?
ತೊಳಲುವ ಸಂಸಾರಿಗಳಲಿ ಸ್ವಾರ್ಥ ಕೋಟೆ ಕಟ್ಟಿದೆ!
ಹಕ್ಕಿತನವ ತಾಳಲೆಂತು ಪಕ್ಕಚಿಗುರುಗಾತ್ಮಕೆ?
ಪಕ್ಕ ಬರದೆ ಹಾರಲೆಂತು ಸಾಧ್ಯ ಅಂತರಾತ್ಮಕೆ?
ಹಕ್ಕಿಯಾಗಿ ಹಾರಿ ಬನ್ನಿ ಸುಹೃದಯವಿಸ್ಫಾಲಕ
ಮಕ್ಕಳೆ ದಿನ ಬೆಳಗು ಕರೆವೆ ತಂಬೆಲರಿನ ಮೂಲಕ!

ವಿಷಮದಾಂಪತ್ಯ ಪ್ರಜ್ಞೆ

೧

ಭೂತಕಾಲದ ರೂಪದಪವರ್ತನೆಗಳೆದ್ದು
ಆತುಮಜಲವನ್ನು ಕಲಕುತಿರೆ
ಭೂತಪ್ರೇತಗಳಲ್ಲಿ ನಂಬಿಗೆ ಹುಟ್ಟಿತು
ಈ ತುಮುಲದಿ ಸಿಕ್ಕ ನರಕುರಿಗೆ
ಮಾತನಾಡದೆ ಮೋಡಿ ಮಾಡಿದ ಪ್ರತಿಮೆಯ
ಭಾತಿಗೆ ಗುಂಡಿಗೆಯದಿರುತಿರೆ
ಪಾತಾಳದಿಂದೋಡಿ ಬಂದ ನೆನಹುಗಳ
ವಾತಾಹತಿಗೆ ಸಿಕ್ಕಿ ನರಳುತಿರೆ!

೨

ಭೂತವದೃಷ್ಟ ಸಂಚಿತ ಕರ್ಮವೆಂಬುದು
ಐತಿಹಾಸಿಕ ಸತ್ಯವೆನಿಸುತಿರೆ
ಭೌತಿಕ ಜೀವನದಲ್ಲಿ ರೂಪಿಸುವುದು
ಐತಿಹ್ಯ ವರ್ತಮಾನವ ತಾನುರೆ–
ಗತಮುಖಚಿತ್ರಗಳೊಂದೊಂದೆ ತಾವೆದ್ದು
ಸ್ಮೃತಿಮುಕುರದ ಮೇಲೆ ಹಾಯುತಿರೆ
ಮತಿ ಚಂಚಲಿತವಾಗಿ ಖತಿಯೆದೆಯನು ಸುಟ್ಟು
ಭಸಿತ ಮಾಡಲು ತೊಡಗಿತು ಥಟ್ಟನೆ

೩

ಭೂತ ವಸ್ತುವಿನ ವಿವೇಕವೆಂದರಿದೇನು?
ಏತರ ಬಗೆಯಿದೆಂದಾಲೋಚಿಸಿ–
ಸೋತ ಜೀವದ ಸುಡುವುಸಿರು ಹೂಂಗುಟ್ಟಿತು
ಯಾತನೆಯಾತಾಯಾತವನೆಸಗೆ;

ಬೇತಾಳದವತಾರ ಶ್ರೀಮುಖಭಿತ್ತಿಯೆ?
ಪಾತಾಳದಲಿ ನಿಂತು ನಸುನಕ್ಕಿತು
ನೂತನ ಮೃತ್ಯುಸೌಂದರ್ಯದ ಪ್ರಭೆಗಳ
ಆತುಮಕೆರಚಿತು ನಡುನೆತ್ತಿಯೆ?

೪

ಓಡಿತು ದಿಕ್ಕೆಟ್ಟು ನಿದ್ದೆಯ ಶಿಶುವತ್ತ
ಬೀಳುತ್ತ ಏಳುತ್ತ ಪರ್ವತದ
ಕಾಡು ಮರವ ಕಡಿದರೆ ಉರುಳುವ ಹಾಗೆ
ಗೋಳೆಂದು ಅರಚುತ್ತ ಮುಖ ತಗ್ಗಿಸಿ;
ಪ್ರಾರಬ್ಧದಲ್ಲಿ ಪರೇಚ್ಛೆಯ ಪಾಲಿಷ್ಟು
ತೋರುವುದೆಂದರಿದೆದೆ ಕುಸಿಯೆ
ಭಾರವಾಯಿತು ತಲೆ ಧಗಧಗಿಸಿತು ಹೊಟ್ಟೆ
ರೋಮರೋಮಗಳೆಲ್ಲ ಸುಡತೊಡಗೆ!

೫

ಹೆಣ್ಣಿಂದ ಹಣ್ಣಾದ ಗಂಡು ಬುದ್ಧಿಯ ಕಂಡು
ಹೇಸಿತು ಮನ ನೂರು ನೂರು ಸಾರಿ
ತನ್ನಲ್ಲೆ ಧೇನಿಸತೊಡಗಿತು ತನಗಿನ್ನು
ಜನ್ಮದೊಳೇ ಇಲ್ಲ ಬೇರೆ ದಾರಿ
ಶ್ರೇಯಸ್ಸು ಪ್ರೇಯಸ್ಸು ಎರಡನ್ನೂ ಬಲಿ ಕೊಟ್ಟು
ಧೇನಿಸಲೇನುಂಟು? ಬರಡುಗತೆ
ಬಾಳೆಲ್ಲ! ಎನಿಸಲು ಬಗೆ ಕಂಡ ಕಾಣ್ಕೆಯ
ಧೂಮಕೇತುವನೆಂತು ಬಣ್ಣಿಸುವೆ!

೬

ಒಂದು ಗಳಿಗೆಯ ಹಾಲು ಹುಣ್ಣಿವೆ ಮರುಚಣ
ನೂರು ಕಾಲದ ಅಮಾವಾಸ್ಯೆಯಾಗೆ
ಒಂದು ನಿಮಿಷದ ಪೀಯೂಷಾನುಭವ ಮತ್ತೆ
ನೂರು ವರ್ಷದ ಹಾಲಾಹಲವೆನಿಸೆ

ಒಂದು ಸೆಕುಂದಿನಾದರ ಯುಗಯುಗಗಳು–
ದಾಸೀನಭಾವವನುಗುಳಿದರೆ
ತಿಂದು ತೇಗುವ ಭೂತಬೆಂತರಗಳು ಬೇಕೆ
ಸುಂದರಾತ್ಮವ ಸುಸ್ತು ಮಾಡಲಿಕೆ?

೭

ಬೇಸರಿಕೆಗು ಹೆಚ್ಚು ಬೇನೆ ಯಾವುದು ಹೇಳು!
ಬೇಸಿಗೆಗೂ ಹೆಚ್ಚು ಬಿಸಿ ಯಾವುದು?
ಓಸರಿಸುವ ಸತಿಮುಖಕಿಂತ ಹೆಚ್ಚಿನ
ಶೋಷಕ ಔಷಧಿಯಿನ್ನಾವುದು?
ಕಲ್ಲಂತೆ ನಿಲ್ಲುವ ಕಳೆಯಂತೆ ಬೆಳೆಯುವ
ಜೊಲ್ಲಂತೆ ನಾತವ ಹುಟ್ಟಿಸುವ
ಎಲ್ಲೆಂದರಲ್ಲುಂಡು ಬೀಸಾಗಿ ಬೀಳುವ
ಹಲ್ಲುಸೊಕ್ಕಿನ ಹಿಮಕೆಣೆ ಯಾವುದು?

೮

ನೀರಾಗಿ ಬೆಂಕಿಯ ಹುಟ್ಟಿಸುವೊಡೆ ಮತ್ತೆ
ಜೇನಾಗಿ ಬೇವಿನ ರುಚಿ ಕೊಡಲು
ತಾನಾಗಿ ನಿಷ್ಪಾಪಮುಖ ಪ್ರಿಯಹೃದಯದಿ
ನಾನಾ ಶಾಪಗಳನ್ನು ಹುಟ್ಟಿಸಲು
ಹಾಲಾಗಿ ವಾಯೂಪದ್ರವವ ಹೆಚ್ಚಿಸುವೊಡೆ
ಕಾಲಾಗಿ ಕುಂಟಿಸೆ ಜೊತೆ ಜೀವನ
ಸಾಲಾಗಿ ಹುಟ್ಟಿರಿ ಆತುಮಗಳೆ ಅಂಥ
ವಾರಿಜಮುಖ ಹೊತ್ತು ಮಾಯಕದ!

೯

ಧನಲೋಭಿಗಿಂತಲು ಒಣಗಿದ ಬಗೆಯುಂಟೆ?
ಉಂಟು ಚತುರ್ದಶ ಲೋಕದಲಿ
ಸ್ವನಯವ ಬಿಡದಿಹ ನಿರವಗ್ರಹಾತ್ಮದ
ಒಣ ಉಪಚಾರದ ಒಗಟದಲೆ–

ವಿನಯದ ಪರದೆಯ ಹಿಂಗಡೆ ನಡೆಸುವ
ಘನಮಾಂಧ್ಯ ಲೀಲೆಯ ಛಂದದಲಿ–
ತನುಮಾತ್ರಬುದ್ಧಿಯ ತಲ್ಪಸಂಯೋಗಿಯ
ಕಣ್ಣು ಮುಚ್ಚುವ ಕೈಯ ಕೈಂಕರ್ಯದಿ!

೧೦

ಮಂದಿಯ ಮುಂದೆಲ್ಲ ಸ್ಮಿತವಾಗಿ ಬೆಳಗುವ
ಕಂದುಕುಂದಿಲ್ಲದ ಕುಮುದಮುಖ
ಕಂಡವರೆಲ್ಲರನಾದರಿಸುವ ಮಕ–
ರಂದಮಾತಿನ ಮುಗ್ಧಚಂದ್ರಮುಖ–
ನಂದಿದದೀಪ ತನ್ನಿನಿಯನಿದಿರು ನಿತ್ಯ
ಬೆಂದ ಹೆಣವು, ಹಿಮಗಡ್ಡೆ, ಯಮ
ತಂದು ಜೇಲಿನೊಳಿಟ್ಟ ಸತ್ತ ದೇಹದ ಮೊತ್ತ,
ಒಂದೂ ಹೂವಿಲ್ಲದ ಒಣ ಮಾಮರ!

೧೧

ಕತ್ತಲ ರಾಶಿಯ ಕಡೆದು ತೆಗೆದ ಬೆಣ್ಣೆ,
ಹುತ್ತದೊಳೇ ಸತ್ತ ಹಳೆ ಹಾವಿನ
ಬಿಟ್ಟಂಥ ಪರೆ, ನೂರು ಸಿಡಿಲಿಗೂ ಒಡೆಯದ
ಕೆತ್ತಬಾರದ ಅರೆಕಲ್ಲುತನ
ಮೆತ್ತಿದ ಮೊಗ! ಸುತ್ತ ಹಚ್ಚಿದ ದೀಪದ
ಕತ್ತು ಹಿಸುಕುವಂಥ ಕಳೆವೆತ್ತಿರೆ
ಮುತ್ತುಕೊಟ್ಟರು ಒಂದೆ ಮೂಲೆಗೆಸೆದು ಹತ್ತು
ಪೆಟ್ಟುಕೊಟ್ಟರು ಒಂದೆ; ಅದಕೇನಿದೆ?

೧೨

ಇನಿಯನ ಮೊಗ ನೋಡಿ ತೂಕಡಿಸುವ ಮೊಗ,
ಅವನಾದರಿಸುವಾಗ ಕಣ್ಮುಚ್ಚುವ
ಶ್ರಮದಿಂದ ಉಸಿರಾಡಿಸುವ ಉರುಳುವ ಮೊಗ;
ಎಳೆದರಲ್ಲಾಡದ ಯಮನ ಮೊಗ;

ಹಾಳು ಬಾವಿಗೆ ಬಿದ್ದ ಬೋಳು ಹೀರೆಯ ಕಾಯಿ
ಕರೆದರೋಯೆನ್ನದ ಕರಟಮುಖ
ಏಳು ಜನ್ಮದ ಶತ್ರು ಎವೆದೆರೆಯದ ಮುಖ
ಸಾಯುವಾಗಲು ಸಹವಾಸಿಸಖ!

೧೩

ಅತ್ತರೂ ಅರಿಯದ ಉರಿದರೂ ತೆರೆಯದ
ಅಮೃತವುಣಿಸಿದರೂ ಅಲ್ಲಾಡದ
ಹತ್ತರೊಳಗೆ ಛೀ ಥೂ ಎಂದರೂ ಗಣಿಸದ
ಮೃತ್ಯುಭಯಕ್ಕೂನೂ ಮಣಿಯದಿಹ
ಗೊತ್ತು ಗುರಿಯ ಬಗ್ಗೆ ಕತ್ತೆತ್ತಿ ನೋಡದ
ಹಿತ್ತಲಿನಶ್ವತ್ಥಮುಂಡದಂಥ
ಹತ್ತು ವರ್ಷದ ಕಾಲ ಹರೆಯವ ಹೀರಿದ
ಹೃತ್ತಾಪಕರ ಮುಖ ಮೈದೋರಿತು!

೧೪

ನಿದ್ದೆಯನೋಡಿಸಿ ಬುದ್ಧಿಯ ಕಾಡಿಸಿ
ಮೊದ್ದುಣಿಸೂಡಿಸಿ ಮರೆಮಾಜಿಸಿ
ಇದ್ದುದನೆಲ್ಲವ ಹದ್ದಿಗೆ ಹಾಕಿಸಿ
ಮದ್ದು ಹಾಕುವ ಹಾಗೆ ಮನಮೋಹಿಸಿ
ಸದ್ದು ಮಾಡದೆ ಸಾವ ಕರೆಯಿಸಿ ತಗಣೆಯ
ಮುದ್ದಿತ್ತು ಸಾಕಿದ ಸವಿಮೊಗದ
ಸುದ್ದಿಯನಿನ್ನು ಹೆಚ್ಚಾಗಿ ಬಿತ್ತರಿಸಲು
ಬುದ್ಧಿ ಸೂಸದು ಮಾವ ತೋರಿಸಿದ!

ಗುಮಾಸ್ತ ಪ್ರಜ್ಞೆ

ರಾಷ್ಟ್ರಾಧ್ಯಕ್ಷ ಪ್ರತಿನಿಧಿ ರಾಜ್ಯತಂತ್ರ ನವನಿಧಿ!
ಆಳುವವರನಾಳುತಿರುವ ಆಳು ನಾನೆ ಅತಿವಿಧಿ!
ಲಂಚಕುಮುದ ಬಾಂಧವ। ದೃಗಂಚಲ ವಾಗ್ವೈಭವ।
ಅಧಿಕಾರದ ಅರ್ಥಕೋಶಕೀಲವೆನಿಸಿನಿಂದಿಹೆ। ಕಚೇರಿಗಿಳಿದು
ಬಂದಿಹೆ!

ಇನ್‌ಫ್ಲುಯೆನ್ಸಿನಾಳದಲ್ಲಿ ಮುಳುಗಿ ತೆಗೆದ ರತ್ನವ
ಜೇಬಿನಲ್ಲಿ ಇಟ್ಟುಕೊಂಡು ಮಾಡುತಿರುವೆ ಯತ್ನವ
ಗುಣಿಸಿ ಭಾಗಿಸುತ್ತ ಲೆಕ್ಕ ಪತ್ರ ಫೈಲು ಫೈಲನು
ಮಣಿಸಿ ಮೇಲಿನವರ ಮತಿಗೆ ತೋರಿಸುತ್ತ ಜೈಲನು
ಕಾಗದಗಳ ಚೂರುಗಳನು ಮಂತರಿಸುವ ತಂತ್ರವ
ಬಲ್ಲೆ ಮಂತ್ರಿಯಕ್ಷರನ್ನು ಒಲಿಸಿಕೊಂಬ ಮಂತ್ರವ!
ಹಸ್ತಾಕ್ಷರ ಬಾಣದಿಂದ ಹತ್ತು ಕೋಟಿಯೊಡೆಯನಿಗೂ
ಮಸ್ತಕದಲಿ ನೀರಿಳಿಸುವೆ! ಹಣವ ತೆಗೆದು ಕಲ್ಗಳಿಗೂ
ಕಡಿಮೆಯೆಂದು ಚೆಲ್ಲುವಂತೆ ಛೂ ಬಿಡುವೀ ಚಾಕರ
ತಮೋವಿಲೀನ ಭಾಸ್ಕರ!

ನನ್ನ ಸೂತ್ರದಿಂದ ನಡೆಗು ಸರಕಾರದ ಸರ್ವಪಾತ್ರ
ಫೈಲ ಗಾತ್ರ ಬೆಳೆಸುವಂಥ ನನ್ನ ದಿವ್ಯ ತತ್ವಶಾಸ್ತ್ರ
ರೆಡ್‌ಟೇಪಿನ ಕಟ್ಟಿನಲ್ಲಿ ಶೋಭಿಸುತಿದೆ ಸಾಲು ಸಾಲು
ವಿಡ್‌ವಿರಾಡ್–ವಿಲಾಸನೃತ್ಯ–ಮಾರ್ದಂಗಿಕನಾರು ಹೇಳು?
ಬಡವ ಬಲ್ಲಿದರ್ಕಳೆಂಬ ಭೇದಗೀದ ಕಾಂಬೆನೆ? ಕೊಡಲ್ಕೆ
ಹಸ್ತಕೊಂಬೆನೆ?

ಬಡಬಾನಲಗೊಂದು ಚಮಚ ತುಪ್ಪ ಸಾಕೆ ಮೋರಲು!
ಕ್ಷುಧಾರ್ತಿ ಪೂರ ತೀರಲು!
ಜನಗಳೇನು ದನಗಳೇನು ಒಡೆಯರೇನು ಒಕ್ಕಲೇನು
ಪಕ್ಷ ಬಂದು ಹೋದರೇನು ಲಕ್ಷವಿರಲಿ ಲಕ್ಷ್ಯವೇನು?
ಚಿತ್ರಗುಪ್ತ ನಾನು ಬರೆದ ಗುಪ್ತಚಿತ್ರರಾವಣ। ಹೃದಂಕುರ
ವಿದ್ರಾವಣ!
ಈಶರಿರವ ತಿರುಗಿಸುವ ಸಮಸ್ತ ರಾಜ್ಯಕಾರಣ। ಗುಮಾಸ್ತ
ವೃತ್ತಿಧೋರಣ!
ಗಣರಾಜ್ಯದ ಗಣ್ಯರನ್ನೆ ಗಣಿಸಿ ಒಗೆವ ದಫ್ತರ।
ಅದೇನು ಒಂದೆ ತರತರ
ನನ್ನ ತತ್ವವೆಲ್ಲಾ ಮಸಿ ಅಂದ ಮೇಲೆ ಬ್ರಹ್ಮಾಸ್ಮಿ
'ಅಹಮನ್ನಂ ಅನ್ನಾದಃ' ದಾಸ ಮೇಲೆ ಈಶನೊಳಗೆ
ಪ್ರಜಾಸಾಗರಾಂತರಾಳ ಭಾವವೀಚಿ ಜಾಲವ
ಕುಣಿಸಿ ಕಾಲ ಕಾಲವ
ಸೃಜಿಸಿ ಉಳಿಸಿ ನಾಶಮಾಡಿ ನಗುವ ನನ್ನ ಲೀಲೆ
ವಿದಗ್ಧಾಕ್ಷರಮಾಲೆ!
ರೇಶನಿಸುವೆನೆಲ್ಲ ಜನರ ದುಃಖಸುಖವಿತಾನ!
ಅಹಾ ಕುಬೇರ ದೀನ!
ನನ್ನ ಕುಲ ನಿರಾಕುಲ
ನನ್ನ ಬಲ ಸಮುಜ್ವಲ
ನಾನೆ ನಾನು ನೀಲನೀರದಸ್ಥ ವಿದ್ಯುದಾಭ! ನಮೋಽಸ್ತು
ಎನಲು ಲಾಭ
ತಾನೆ ಲಭ್ಯ ನಿಮಗೆ ನರರೆ, ಅದರೊಳರ್ಧವೀಗ!
ಅದಿರಲಿ ನನ್ನ ಭಾಗ।
ಹವ್ಯಕವ್ಯಗಳನು ತೆತ್ತು ನಡೆದುಕೊಂಡರೇನೆ।
ದಿವಸ್ಪತಿಗಳ ಸೇನೆ।
ನಿಮ್ಮ ಕಡೆಗೆ ನಿಲುವುದಲ್ತೆ!
ಅದೇ ತಕ್ಕ ನೀತಿ। ನಿಜಕ್ಕು ನಲ್ಮೆ ಗೀತಿ!

ಸತ್ಯಾನೃತ ಪ್ರಜ್ಞೆ

೧

ಕಾಡಿಯೋ ಬೇಡಿಯೋ ತಂದೆ ನಾ 'ರಾಡಿಯೋ'
ರೇಡಿಯೋಕಿಂತಲೂ ನವ್ಯವಿದು, ಭವ್ಯವಿದು
ಕದ್ದು ತರಲಿಲ್ಲವಿದ, ಕೊಂಡು ತರಲಿಲ್ಲವಿದ
ಗೆದ್ದು ತಂದದ್ದು; ಗೆಳೆಯರೆ ಹಳಬರೆಂಬಂಥ
ದೊಡ್ಡ ರಾಗದ ಬುರುಡೆಯಲ್ಲ ಸಣ್ಣಗೆ ತನ್ನ
ಗೊಡ್ಡುಗೊರಲಲಿ ಗೊಣಗುವಂಥ ಶ್ರುತಿಬುರುಡೆಯೂ
ಅಲ್ಲ–ಇದು ನುಡಿಯುವುದು ಗದ್ಯವೆಂದೂ ಅಲ್ಲ,
ಪದ್ಯವೋ? ಅನುಮಾನ, ಅದರಿಂದಲೇ ಇದು ಗ–
ಪದ್ಯ ಗಂಪನ ಪದ್ಯ; ಪಂಪಗಾಂಪರ ರಂಪ–
ದುದ್ಯೋಗವಲ್ಲ, ಸಂಗೀತ ಸಂಗಾತಿಗಳ
ಕಂಪನ ನಿಳಿಂಪ ಕವಿಗಳ ವಚೋಗುಂಫನಗ
ಳಿಂಪಿಲ್ಲ; ಅಥವಾ ಅಮೇರಿಕದ ಹೊಸಯುಗದ
ಮಿಶ್ರರೂಪಕ ಭಿನ್ನವೃತ್ತಳ ಹೊರೆ ಹೊತ್ತು
ಹಾವಿನಂತಹ ನೇರದಾರಿಯಲಿ ತಲೆಕೆಳಗು
ಮಾಡಿಕೊಂಡುಲಿವ ಹಾರನ್ನುಳ್ಳ ಕವಿರಚಿತ
ಕಾರಿಗಿರುವಂಥ ಕಮನೀಯತೆಯು ಇದಕಿಲ್ಲ.
ಇದು ಜನದ ಹೃದಯ, ಜನದೊಳವಾತು, 'ಜನವಾಣಿ'–
ಪತ್ರಿಕೆಯಿದಲ್ಲ ಆ ಹೆಸರಿಂದ ಹೆದರದಿರಿ.
'ಗಾಸಿಪಿಂಗ್ ಎಂಡ್ ಲಯಿಂಗ್ ಆರ್ ದಿ ಟ್ವಿನ್ ಸಿಸ್ಟರ್ಸು'
ಎಂಬಂತೆ ಕನ್ನಡದ ಕವಿ ವಿಮರ್ಶಕರೆಲ್ಲ
ತಮ್ಮ ತಲೆ ಹೊಟ್ಟೆಯೆನ್ನುವ ಕಾರಖಾನೆಯಲಿ
ಕಿಚ್ಚಿನ ರಸಾಯನವ ಮಾಡಿ ಬೇಕಾದೆಡೆಗೆ
ಪ್ಯಾಕ್ ಮಾಡಿ ಕಳಿಸಲೆಕ್ಸ್‌ಪೋರ್ಟಿಸಲಿ ಹೊರಗಡೆಗೆ
ನಾ ಹೆದರೆ, ನನ್ನ ನವ ಕಾವ್ಯಕಾನನದೇವಿ
ಕೂಡ ಬೆಚ್ಚಳು, ಬೆಚ್ಚಗಿರುವ ಮಾತುಗಳಿಂದ
ಸಮೆದ ಲಂಗಾಂಗಿಗಳ ಸೂಟು ಧರಿಸಿಹಳಾಕೆ।

೨

ನನ್ನ ರಾಡಿಯೊ ಅವಳು, ಅಲ್ಲ ಅವನುಹು ಅಲ್ಲ–
ಅದು ಶಿಖಂಡಿ ಅನಂತ ಖಂಡಿ ಅನುಭಾವಗಳ
ತಲೆ ತುಂಬ ಎದೆ ತುಂಬ ಮೈತುಂಬ ತುಂಬಿಕೊಂ
ಡಲೆವ ಜಿಪ್ಸಿಗಳಸ್ಸರೋನೃತ್ಯದಲಿ ನಿರತ
ಕಾಲಕುಂಡದಿ ಬಾಲವೆತ್ತಿ ಭುಗ್ಗೆಂದ್ದೆದ್ದ
ಜೋಲು ನಾಲಗೆಯಗ್ನಿಯಾಡುಮಾತಿನ ಶೈಲಿ
ಚಂಡಿ ಚಾಮುಂಡಿ ಲಂಕಾಸುಂದರಿಯರೆಲ್ಲ

ಮಂಡೆಯೊಡಕೊಂಡರೂ ಹೊರಡದಾ ಶತಕಂಠ
ಶಿತಿಕಂಠ ಪರ್ವತದ ಕೆಳಗೆ ಚಿಲ್ಲಾದಾಗ
ಅರಚಿರ್ದ ಅಮರ ದೈತ್ಯಧ್ವಾನಕೂ ಇಲ್ಲ
ಅದರ ಜೋಗ್ ಜಲಪಾತದಂಭೋದ ಕುಂಭೀನ
ದಂಭದಾಲಾಪ ಸಲ್ಲಾಪದ ವಿಲಾಪ–ಆ
ಅವಳು ನಡೆದೋಡುತಿಹ ಬೀದಿಗೆಲ್ಲೂ ಕೂಡ
ಹೊಡೆದಿಲ್ಲ ಲಕ್ವ! ಪಕ್ಷಾಂತರಂಗದ ಪನಸ
ಮೈಬಿಚ್ಚಿ ಹಾಸಿದಂತಹ ಬಂಧದೊಂದು ಹಸ–
ಎಲ್ಲ ಹೊಸ! ಕಸದ ಕಸಕಸೆಯ ಪಾಯಸದಂತೆ
ಚೆಲ್ಲಿ ಸೂಸಿದ ರಸೋಲ್ಲಾಸ ಸರ್ವಸಮಾಜ
ಕೆಲ್ಲೆಲ್ಲು ಕಂಡದರ್ಶನ ಭಯಂಕರ ಹೊಲಸು–
ನನ್ನವಳ ಸಂದೇಶ ಈ ವರೆಗೆ ಬಂದ ಕವಿ–
ವರ್ಯರುಗಳಿತ್ತಂಥ ಸಂದೇಶಕಾದೇಶ!

೩

ನನ್ನ ಕಾನನದೇವಿ ನನ್ನಿನೀರಿನ ಬಾವಿ;
ಪ್ರಾಸದಾಸೆಯ ತೊರೆದ ಛಂದದಂದವ ಮರೆದ
ವೇದಾಂತವನು ಜರೆವ ಮೋದಾಂತವನು ತೆರೆವ
ವ್ಯಾಕರಣವನ್ನೊದೆವ ಶಬ್ದಶಕ್ತಿಯ ಮಿದಿವ
ಧ್ವನಿಯನಣಕಿಸುವ ದುರ್ದ್ವಂದ್ವ ಚಿತ್ರಗ್ರಥಿತೆ!
ಹರಕು ಹಗ್ಗದ ತುಣುಕು ಚುಟುಕುಗಳನೊಲೆಗಿಕ್ಕಿ

ಚಟಪಟಿಸಿ ದೃಷ್ಟಿತೆಗೆದಂಥ ಚಟುವಟಿಕೆಯಲಿ
ಹಾರಿ ರಸಿಕನ ಮಿದುಳಿಗೆಲ್ಲೆಲ್ಲು ಷಾಕ್ ಹೊಡೆದು
ಅವನ ಕಲ್ಪನೆಗೆತ್ತಲೋಡಿದರು ಷಹ ಕೊಟ್ಟು
ರುಂದ್ರಮಂದ್ರಾತಂದ್ರ ನೀರಂಧ್ರ ಚಂದ್ರಿಕೆಯ
ಮಂದಾರ ಸೌರಭವ ಬಿತ್ತರಿಸಿ ಕತ್ತಲೆಯ
ಹುತ್ತದಲ್ಲಿಹ ಬೆಳಕುಗಂಟಕಾದಿಹ ಮೂಢ
ತತ್ವ ಸರ್ಪವ ಕೆಣಕಿ ಕಾದಿ ಜಗ್ಗಲರಿಯಿಂದ;
ಮುತ್ತೈದೆನಿಚ್ಚೈದೆಯರ ಮಿಶ್ರಮೂರ್ತಿಯಾ
ಅರ್ಧನಾರೀಶ್ವರನ, ಅರ್ಧ ದೇವಾಸುರನ
ಅರ್ಧಾರ್ಧ ಭಾವ ಪದವಾಕ್ಯ ರೂಪಕರಾಡಿ–
ಯೆದ್ದ ಕಂಬಳಗದ್ದೆಯಲ್ಲಿ ಚೀರುವ ಹೋರಿ–
ಯೊದ್ದಾಟವನು ತೋರಿ ಚಂಚಲಿಸಿ ಬಿಡುವ ಆ
ಮುಗ್ಧ ಮೋಹಿನಿಯನ್ನು ಬಿಟ್ಟೆನಿದೊ ರಂಗಕ್ಕೆ!

೪

ಛಟಛಟಿಸಿ ಡಭಡಭಿಸಿ ಅನುಕರಣದವ್ಯಯಗ–
ಳಿಗೆ ಬೆಂಕಿಯಿಕ್ಕಿ ಸಂತೆಯ ಸದ್ದ ತರಲೆಂದು
ಕೊರಳಡಬ್ಬಿಯ ಬಾರಿಸಲು ಹಚ್ಚಿ ಹುಯ್ಯಲಲಿ
ಮಸಣದುದ್ವೇಜಕ ಪ್ರತಿಮೆಗಳ ಸುಳಿಯಿಸುತ
ಗಾಳಿ ಮಾರುವಳಂತೆ, ಡೊಂಬಡೋಲಿಗನಂತೆ
ಹಾಳು ಹೊಟ್ಟೆಯ ಹೊರೆಯೆ ತಾಳ ಹಾಕುವನಂತೆ
ತಾನೊಬ್ಬಳೇ ಕುಂಭಮೇಳ ಯಾತ್ರಿಕವೃಂದ
ಎಂದು ಖೊಕ್ಕನೆ ನಕ್ಕು ಮತ್ತೆ ಫಕ್ಕನೆ ಬಿಕ್ಕಿ
ಚಿತ್ತವಿಕ್ಷಿಪ್ತಿಯಲಿ ಬೀದಿಗರ ರಂಜಿಸುತ
ಗಣಕಗಣಿಕಾ–ನ್ಯಾಯಸೂತ್ರದಲಿ ನಡೆವಾಕೆ
ನನ್ನ ರಾಡಿಯೊ ದೇವಿ ಉಟ್ಟ ಸೀರೆಯ ಕಾವಿ
ಎಲ್ಲ ಹಾದಿಗಳಿಂದ ಮೊಗೆದು ಕೂಡಿಸಲೋವಿ
ಬಂದ ಬಣ್ಣದ ಬೆಣ್ಣೆಯಿಂದ ಮಾಡಿದ ಲೆಪ್ಪ–
ರಂಗಕ್ಕೆ ತಕ್ಕಂಥ ರಂಗೆಂದರದೆ ನೋಡಿ!

ಮಂದಿಮಕ್ಕಳನೆತ್ತಿ ತಂದು ತನ್ನದೆ ಎಂದು
ಒಂದು ತಿಂಗಳ ಕೂಸು, ತಾ ಹಸಿಯ ಬಾಣಂತಿ
ಎಂದು 'ಕವಳಾತಾಯಿ
ರಾಗದಲಿ ರೋಗಿವೊಲು
ಬಂದು ಬೆಚ್ಚಿಸಿಬಿಡುವ ನವತಂತ್ರದಿಂದವಳ
ಮಾಡಿದೆನು, ಮಾಡಿನಾ ನೋಡಿದೆನು, ನೋಡಿಕೊಂ
ಡಾಡಿದೆನು ಮನಸೋತು ಕೂಡಿದೆನು ಆ ಕ್ಷಣದಿ
ಮೂಡಿದೆನು ನವ್ಯಕಾವ್ಯಪ್ರಜಾಪತಿಯಾಗಿ!
ಹಾಡುತಿಹೆ ಹೊಸತನ್ನು ಹುಟ್ಟಿಸುತ ಹೊಸಹೊಸಾ
ಕಾವ್ಯಕಾನನದೇವಿಯರನು ಕಣ್ಮಿಂಚಿಸುತ–
ಬೇಕಾದ ಮಾಲುಂಟು, ಬೆಲೆಯೊ ಎರಡೇ ಆಣೆ!

ರುದ್ರ ಪ್ರಜ್ಞೆ

೧

'ರುದ್ರೋऽಹಂ ರುದ್ರೋऽಹಂ' ಸಹ್ಯಾದ್ರಿಯನೆದ್ದು ಬಂದು
ಜಗದಗಲಕೆ ಹರಹಿ ನಿಂದೆನಿದೋ ಮುಗಿಲುಜಡೆಯ ತೂಗಿ
ವಿದ್ಯುದಸ್ತ್ರ ಹಿಡಿದೆ ಗುಡುಗಿ ನಡುಗಿಸುತಿಹೆ ಚರಾಚರದೊ–
ಳಿರುವ ದುಷ್ಟಸರ್ಪಮತಿಗಳೆಲ್ಲರನ್ನು ಮೆಟ್ಟಲೆಂದು
ಸಹ್ಯಾದ್ರಿಯ ತುಂಗತಮ ಶಿರಃಪ್ರದೇಶದಲ್ಲಿ ಮೂಡಿ
ಗರ್ಜಿಸುತಿಹೆನಿದೋ ಕೇಳಿ ಅಣುಮಾನವ ಜಂತುಗಳೇ
ಕ್ಷುದ್ರಲೋಭ ಮೆತ್ತಿಕೊಂಡ ಮೈಮನಗಳ ಮೂಟೆಗಳೇ
ನಿಲ್ಲಿರಲ್ಲಿ ನಿಂತಲ್ಲೇ ವಜ್ರಮುಷ್ಟಿಯಿಂದ ನಿಮ್ಮ
ಬೆನ್ನೆಲುಬನ ಹುಡಿಗೂಡಿಸಿ ಬುವಿಗೆ ಗೊಬ್ಬರವನ್ನಿಕ್ಕುವೆ
ಮಣ್ಣಿನಾಸೆ ಹೊನ್ನಿನಾಸೆ ಕಸಕಿಂತಲು ಕಡಿಮೆಯಾದ
ಜೊಳ್ಳು ಬಿರುದು ಬಾವಲಿಗಳ ಹೆಕ್ಕುವಾಸೆ ಬೆನ್ನುಹತ್ತಿ
ನನ್ನಿಗಾರರೆದೆಗೆ ಹಿಂದಿನಿಂದ ಚೂರಿಯಿಕ್ಕಿ ಬಾಳ್ವ
ನರನರಿಗಳೆ, ಇಗ್ಗಾಲಿನ ಕರ್ಕೋಟಕ ಕುಂಡಗಳೇ,
ಕುದುರಾಳಗಳೆಲ್ಲ ಸತ್ತು ಹುಟ್ಟಿದ ವಿಷಪಿಂಡಗಳೇ,
ಕೆಡೆದು ನಿಮ್ಮ ತೆರೆಚರಂಡಿಯಲ್ಲಿ ನೂಕಿ ಜಡಿದು ಬಡಿದು
ಕಡೆದು ನುಣ್ಣನೆಣ್ಣೆಮಾಡಿ ಹರಿಯ ಬಿಡುವೆ ನರಕದೆಡೆಗೆ!
ಇದೋ ಶೂಲ, ಇದೋ ಪಾಶ, ಕಚ್ಚಿ ಚುಚ್ಚಿ ತಿಂಬ ಭೂತ
ಇದೋ ರಕ್ತರಕ್ತವನ್ನು ಕಾರಿಸುವ ಪಿಶಾಚತಂಡ
ಬಿಟ್ಟೆ ನಿಮ್ಮ ಮೇಲೆ ತಾಳಿಕೊಳ್ಳಿರೆಂಜಲುಂಬ ಮಾನ
ಸತ್ತ ಹೇಡಿ ಹೆಣಗಳೇ ಕರಾಳ ತಂತ್ರಗಣಗಳೇ!
ಎತ್ತ ಓಡಲೆದ್ದಿರಯ್ಯ ಹೋಗಿರೋ ಅದೆಲ್ಲಿ ನೀವು
ತಲೆತಪ್ಪಿಸಿಕೊಂಬಿರೆಂದು ನೋಳ್ಪೆ ನನ್ನ ಮಾಯೆಯಿಂದ
'ತತ್ತರಿಸಿ ತಬ್ಬಿಕೊಳ್ಳಿರಯ್ಯ ನಿಮ್ಮ ಪಾಪಗಳನು
ಚಾಡಿ ಛಿದ್ರ ಕಪಟ ಕಂತ್ರಿವಿದ್ಯೆ, ಕಳ್ಳ–ಸುಳ್ಳತನದ

ಮೋಡಿಮಂತ್ರ–ಒಂದೆ ಎರಡೆ? ಕಾರ್ಗೆಲಸದ ಗುಡ್ಡಗುಡ್ಡ!
ಆ ಅರಮನೆಗಳಲಿ ತಲೆಯು ಮರೆಸಿಕೊಳ್ಳಲೇಳಿರಯ್ಯ–
ಏಕೆ ಗಾಬರಿಯಲಿ ಎಡಹುತಿರುವಿರೀಗ ಗಣ್ಯರೇ,
ಏಕೆ ಬೆದರಿ ಬಳಕುತಿಹಿರಿ ನಾಗರಿಕವರೇಣ್ಯರೇ.!
ಕ್ಷುದ್ರಶತ್ರು ರುದ್ರ ನಾನು
ಗೀತಾ ಕಾಂಪ್ಲೆಕ್ಸಿನವನು!
ಮದ್ಯಗಿದ್ದವಿದ್ದರೆಯ್ದಿ
ಬೇಗ ಕುಡಿದು ಬನ್ನಿರೋಡಿ–
ಗುಟ್ಟುಗಳ ಕಪಾಟನೊಮ್ಮೆ ತೆರೆದುನೋಡಿ ಬನ್ನಿರಯ್ಯೋ
ಕಷ್ಟಕಷ್ಟ! ಪರರ ಕೈಗೆ ಸಿಕ್ಕರವು! ಬೃಹಸ್ಪತಿಗಳೆ!
ಕಾಲವಿಲ್ಲ, ಕಾಲ ಕಾಲ ಆಜ್ಞೆಯಿತ್ತೆ ಕೇಳಿತೇನು?
ಬಾಲ ಮಡಿಸಿಕೊಂಡು ನಿಲ್ಲಿ ಚೀರಲಿಲ್ಲಿ ಫಲವದೇನು?
ಖ್ಯಾತೋಹಂ ವಿಷಯಲುಬ್ಧ ರಾಷ್ಟ್ರಕೃತದ್ಯೂತೋಽಹಂ
ವಿಜ್ಞಾನ ವ್ಯಾಪಾರ ವಿಷಾಬ್ಧಿಜನ್ಯ ಭೂತೋಽಹಂ
ಧಗದ್ಧಗಿಸಿನಿಂದೆನಿದೋ ದಿಗ್‌ದಿಗಂತಗಳಲಿ ಹರಡಿ
ಜೀವಗಳ್ಳರಿತ್ತ ಕಾಣಿರೊಮ್ಮೆ ಕಣ್ಣನರಳಿಸಿ!
ಕಟ್ಟಿ ಗಂಟುಮೂಟೆಯನ್ನು ಹೊರಡಲಿನ್ನು ಸರಳಿಸಿ

೨

ಏನಹಹ ಚೆಲ್ಲಾಟ ಚಿಗುರೆಗಳು ನಾಚುವುವು
ಎಂಥ ರಮಣೀಯ ನರ್ತನವಹಹ! ಮಾನವ್ಯ
ಕೀಟಗಳು ಈಗಲೂ ನನ್ನ ತಿಸುಳದ ಕೊಂಡಿ
ಕರುಳ ಹಿಡಿದೆಳೆಯುತಿದ್ದಾಗಲೂ ಹೆರರೊಡವೆ
ಮಾನಸನ್ಮಾನಗಳಿಗಾಗಿ ಬಾಯ್ನೀರ್ಗರೆದು ಜಾಣತನ
ತೋರುತಿವೆ ಚಾಪಲ್ಯದಂಡೆಗಳು
ಮಾತ್ಸರ್ಯದುಂಡೆಗಳು, ಮದಮೆತ್ತಿ ಹೊಲಸಾದ
ಜೀಜೀತನದ ಜೋಲುಗೊಂಡೆಗಳು, ಮಂಡೆಗಳು
ಲಜ್ಜೆಯಿಲ್ಲದ ಕೊಳಚೆಹಂಡೆಗಳು! ಹೇಸು ನಗೆ–
ಯರಳಿ ಮಿರುಗುವುದಬ್ಬ ಮುಖಗಳಲಿ! ಈ ರೀತಿ
ಬೊಬ್ಬರಿದು ನಿಂತರೂ ನನ್ನ ಕಾಣುವ ಕಣ್ಣು

ಒಬ್ಬರಿಗು ಇಲ್ಲವಾಯ್ತಿವರ ಹಿಂಡನ್ನರೆದು
ನನ್ನ ಗಣಗಳಿಗೌತಣವೆನಿಕ್ಕುವೆನು. ಜಗವು
ಈ ಮಸಣವಾನಿಸರ ಮೃಗಬುದ್ಧಿ ಖಗಹಸ್ತ
ಮಾಡಿರಾಶಿಸಿಬಿಟ್ಟ ಲಂಚವಂಚನೆ ಪಿಶುನ–
ವಾಣಿ ಬೆನ್ನಿರಿವ ಮಿತ್ರಾದಿ ಸರ್ವದ್ರೋಹ
ಮಾಯೆ ಮಾರೀಚತನಗಳ ಬಣಬೆಯಿಂ ತುಂಬಿ
ತೇರ್‍ಯೆಸಿ ತಿಣುಕುತಿದೆ ತೀಡುತಿದೆ! ಯಮ ಕೂಡ
ಕಾಣದಾಗಿಹನಿವರ ಪಾಪಕ್ಕೆ ಶಿಕ್ಷೆಗಳೇ!
ಓ ಬನ್ನಿ ನೀವಾರು?
ಸುಳ್ಳನುಗುಳುವ ಜಾತಿಯೊಳಗೆ ಲಾಯರೆ ನೀವು?
ಇಲ್ಲವೆ ಮಹಾಧ್ಯಾಪಕರೆ ಸುಳ್ಳನಾಡುತ್ತ
ಒಳ್ಳಿತನು ಪರರಿಗೆಂದೇ ಬೋಧಿಸುತ ಬಾಳ್ವ?
ಕಳ್ಳಪೇಟೆಯ ಧರ್ಮರಾಯ ಸೆಟ್ಟರೆ ಹೇಳಿ?
ಬಲ್ಲವರ ಹಾಗುಲಿವ ಚೆಲ್ಲಗಾರಿಕೆಯಿಂದ
ಎಲ್ಲರಿಗೂ ಟೊಪ್ಪಿ ಹಾಕುವ ರಾಜಕಾರಣದ
ಮಲ್ಲರೇ? ಪರಮತವ ಶುಕಪಾಠ ಮಾಡಿ ಅದೆ
ಎಲ್ಲ ತತ್ವಜ್ಞಾನವೆಂಬ ಜಂಭದ ಹುಂಬ
ವಾಚಾಲ ವಿದ್ಯಾವಿಶಾರದರೆ? ಪ್ರೋಗ್ರಾಮು
ನಿಮ್ಮದೇನಬಲೆಯರ ಸುಬಲಗೊಳಿಸುವ ಕೂಗು?
ಎಲ್ಲರ ಸಮಾನತೆಯ ತಲೆ ಹೊಡೆದು ಅಳೆಯುವುದೆ?
ಸುಳ್ಳನಾರಾಧಿಸುವ ಹದಿಬದೆತನದ ನೂರು
ತಿಲ್ಲಾಣಗಳನೊಡ್ಡಿ ಲಂಚ ಹೀರುವ ಕಪಟ
ಕಲ್ಯಾಣಗುಣಗಣಾಮೃತ ಕಲಶರೇನಯ್ಯ?
ಕಲ್ಲುಗಾಣಕೆ ಹಾಕಿ ಸತ್ಯಸಂಧರ ನಿತ್ಯ
ಎಲ್ಲೆಲ್ಲು ವಿಜ್ಞಾನ–ಯಂತ್ರ–ತಂತ್ರವ ಬಿಚ್ಚಿ
ಕೊಲ್ಲುಗಲೆಯನು ಹರಡಿ ನಾಗರಿಕತೆಯದೆಂದು
ಬಲ್ಲಾಳ್ತನವ ಮಾಳ್ಪ ಚೆಲ್ವ ನಾಯಕರೇನು?
ಬನ್ನಿ ಬನ್ನಿ ಪಾಪಕೂಪಪತಿತ ಮಹಾಮಾನ್ಯರೇ
ಬನ್ನಿ ಬನ್ನಿ ದೈವವನ್ನು ಜರೆದು ಗೆದ್ದ ಧನ್ಯರೇ!
ಇದೊ ಕೃಪಾಣ, ಇದೊ ತ್ರಿಶೂಲ ಇದೊ ಇದೊ ಶಕ್ತ್ಯಾಯುಧ

ಇದೊ ಲಲಾಟಲಿಖಿತವನ್ನು ತಿದ್ದಬಲ್ಲ ಚಿದ್ವಿಧ–
ಕಾಣದ ಕೈಚಾಚಿ ನಿಮ್ಮ ಕರೆವುದೆಲ್ಲ ಬನ್ನಿ
ತಾಣವಿಲ್ಲ ಹೊರಟೆವಿನ್ನು ರುದ್ರಧಾಮಕೆನ್ನಿ!
ನುಡಿದ ಸಿಡಿಲಿನಿಂದೊಡೆಯದೆ ಹೋಗೆ ನಿಮ್ಮ ಕಿವಿ
ಸಿಡಿವ ಬಾಂಬು–ತಾಳ ಹಾಕಿ ಹಾಡುವನೀ ಕವಿ!

ನರಕ ಪ್ರಜ್ಞೆ

೧

ಗಗನಸಾಗರದಿ ಮೇಘತಿಮಿಂಗಲಪಂಕ್ತಿ ಸಾಗುತಿರಲೀಸಿ ಸಂಜೆಯಲಿ
ಕಾರ್ಗಪ್ಪಿನ ಹಿಮವಂತನಂಥ ಮುಗಿಲೊಡ್ಡು ಬಂತು ಬಂತಹಹ
ನಿಮಿಷದಲಿ!
ಮುಳುಗುತ್ತಿದ್ದ ಸೂರ್ಯಾಗ್ನಿ ಕುಂಡದಿಂದೆತ್ತಿ ರಕ್ತರಸಪಾನ ಮಾಡಿತೆನೆ
ತೆರೆಯಿತೆರಡು ರುದ್ರಾಕ್ಷಿಗಳನು ಮೇಣ್ ಬಿರಿಯಿತೊಂದು ಬಾಯ್
ಪಾತಾಳೋಪಮ!
ಸುತ್ತುಮುತ್ತಲಿನ ಸಣ್ಣ ಮೋಡಗಳ ನುಂಗಿತು ನುಂಗಿತು ನೋಡ
ನೋಡುತಿರೆ,
ತನಗಿಂತಲು ಮುಂದೋಡುವವೆಂದವ ನೊಣೆದು ನೀಗಿಸಿದ ಅಬ್ಬರದುಬ್ಬರ
ಜಗಚ್ಚಕ್ಷುವನ್ನಸ್ತಮಿಸಿತ್ತೋ ಜಗಜ್ಜಾಲವಚ್ಚರಿ ಪಡುವಂದದಿ!
ಲಯದ ಹೆಡೆಯ ಬಡಿದೆಬ್ಬಿಸಿತ್ತು, ಭಯದುತ್ಸವೆದ್ದು ಚಿಮ್ಮಿತ್ತು
ದಿಗ್ದೆಸೆಗೆ–

ಒಳಗೂ ಹೊರಗೂ ಅದೇ ತುಂಬಿಹುದು!
ಅದೇ ಹಗಲಿಗನ ಕಣ್ಣು ಕಟ್ಟಿಹುದು!

೨

ಅರಣ್ಯಗಗನದಿ ಬೀಡು ಬಿಟ್ಟ ನವ ಶೃಗಾಲಶೂರರು ಕಣ್ಣಿಗೆ ಬಿದ್ದರು;
ಎಡಬಲಕಿದ್ದಾ ಜಂಬುಕಗ್ರಹಗಳಲ್ಲಿ ಒಂದು ನರಿಗಳ ರವಿಯೆದುರಿಗೆ
ಬಾಲಚುಕ್ಕೆಯನು ಬೀಸಿದ ಕೂಡಲೆ ನರಿಗಳರಸ ನರರೆದೆಯನು ಹೀರಿದ
ಲೋಭರಾಗರುಚಿನೇತ್ರನಾಗಿ ಹೆಬ್ಬಲ್ಲುಗರಗಸವ ಹಿರಿದು ಕೂಗಿ ಆ
ಮರಿಯ ಕೊರಳ ಮುರಿದಧಟ ಮೂಜಗಕೆ ಮೆರೆಯಿಸಿದ್ದ!
ಅವನಟ್ಟಹಾಸದಲಿ
ತಿರೆಗೆ ಗರ್ಭ ಹೋದಂತೆ ಆಗಿ ಲಾವಾರಸ ಹರಿಯಿತು ಕಾದ
ತಾಮ್ರದೊಲು!

ಜರಾಜರ್ಜರಿತ ನಾಯಿ ಕಂಡದನು ಕೃತಾಂತ ಕೂಗಿದನೆಂದತ್ತೋಡಿತು!
ಮರಗಳೆಲ್ಲ ದುರ್ಮರಣವೆದುರಿಸುವ ದುಃಸ್ವರದಿಂದಲ್ಲಾಡಿದವಿಡಿದಿನ!
ಒಳಗೂ ಹೊರಗೂ ಅದೇ ತುಂಬಿಹುದು,
ಅದೇ ವ್ಯಾಧನನು ಕಂಗೆಡಿಸಿರುವುದು!

೩

ಜಲಾರಣ್ಯದಲಿ ಝುಗ್ಗನೆದ್ದು ನಡುಹಗಲಿನಲ್ಲಿ ನಾ ಹೊಕ್ಕೆನೊಮ್ಮೆ; ಆ
ಕಾಡು ನಾಗರಿಕತೆಯಲಿ ಕೂಡಿ ಬೆಳೆ 'ದೈರು' ಬಾಳೆಗಳ ಚೆಂದವೆಂಥದೋ!
ಗಾಳಿಹುಡುಗ ಕೈಬೀಸಿ ತರಗ ಹರಿದೊಗೆದನಲೆಯ
ಮೇಲಾಟಕೆಂದರರೆ
ಬಾಳೆ ಮೀನ ತಾ 'ಐರುಮೀನು' ಹಿಡಿದೆಳೆದು ಬಾಲವನ್ನು ದರಗಹ್ವರದ
ಆಳದಲ್ಲಿ ಹೂಳಿತ್ತು ಕಣ್ಣು ಮಿಟುಕಿಸುವ ಹೊತ್ತಿನಲಿ ಕಂಡರಂಥ ನೀ–
ರಾಳಿಕೆಯಲಿ ನಿರ್ನಾಮಲೀಲೆ ಕಣ್ಣಾಲಿಗಳನು ಗರಗರನೆ ತಿರುಗಿಸುಗು!
ಹೇಳುವ ಕೇಳುವ ಒಡೆಯನಿಲ್ಲದಿಹ ಹಾಳು ರಾಜ್ಯದಲಿ ಹದ್ದೆರಗಿದವೊಲು
ಕಾಳಿಯ ನಾಲಿಗೆಗೆಚ್ಚಲ ಕೆಂಭಾಲೀಂಟಿ ಬಂದ ಮೀನಿನ ಹಾವಳಿ ಬಲು–
ಒಳಗೂ ಹೊರಗೂ ಅದೇ ತುಂಬಿಹುದು
ಅದೇ ಬೆಸ್ತನಿಗೆ ಮಂಕು ಹಿಡಿಸಿಹುದು!

೪

ಅದ್ರಿರಾಜನೊಡ್ಡೋಲಗ ನಡೆದಿರಲೆಂತೋ ಸಾಗಿದೆನಲ್ಲಿಗೆ ಬರಬರ:
ಮೋಡಗಣ್ಣುಗಳ ಮೂಡಿಸಿ ಕುಳಿತಿಹ ಮಹಾಶಿಖರ
ಮಂಡೆಯನೆತ್ತಿದ್ದಿತು;
ಕೊಳದ ನಡುವೆ ಹೊಂಗಮಲವೊಂದು ಹರಿಪೂಜೆಗೆಂದು
ಪಟಲಂಗಳ ಹರಡಿತು
ಅದರ ಕಾಂತಿ ಕಣ್ಗಡ್ಡವಾಯಿತೆಂದುಕ್ಕಿ ಮಂಜುಗಡ್ಡೆಯನು
ಉರುಳಿಸಿತು
ಸಿಗಿದು ಬಿಡುವೆನೆಂಬಂಥ ಸಿಟ್ಟಿನಲಿ! ಶಿವನೊ ರುದ್ರನೋ
ಯಾರು ಲೋಕಪತಿ?
ಯಾರು ಹೇಳುವರು? ಹೇಳುವದೇತಕೆ? ಕಂಡ ಕಣ್ಣಿಗೇಂ

ಕುಂಡೆಯ ಸಾಕ್ಷಿಯೆ?
ಕಾರ್ಯಕಾರಣನ್ಯಾಯಕೋವಿದನ ಹಾಗೆ ಸಪ್ಪಳಿಸಿ ಸುಮ್ಮನಾಯ್ತು ಜಲ;
ವಿಭೂತಿಯೋಗವ ಹೇಳಿ ಕೃಷ್ಣಕೊಳಲೂದಿದ ದನಗಳು ಕೇಳಲಿ
ಬಿಡಲಿ!

ಒಳಗೂ ಹೊರಗೂ ಅದೇ ತುಂಬಿಹುದು,
ಅದೇ ಇಂದ್ರನಿಗೆ ಥಂಡಿ ಹಿಡಿಸಿಹುದು!

೫

ನರವಾನರರಿರುವಂಥ ಲೋಕದಲಿ ನಡೆಯುತಿದ್ದೇನೇನೋ ನೆನೆಯುತ;
ಗೃಹಕಿಷ್ಕಿಂಧದಿ ಗುಹಾಜಾಂಬವತಿ ಗೊರಿಲ್ಲಗಳ ಹಡೆದಾಡಿಸುತ್ತಿದ್ದಳು!
ಚಾಡಿರಾಗದಲಿ ಜೋಗುಳ ಹಾಡಲು ತೀಡುತಿದ್ದ ಕೂಸೊಂದು ಗರಕ್ಕನೆ
ಮಾಡ ಗೂಡಿನಲಿ ಕುಳಿತ ಗುಬ್ಬಿಗಳ ಪ್ರಣಯ ಕಂಡು
ಕೋಪೋದ್ದೀಪನದಲಿ
ಕೂಗಿ ಕುತ್ತಿಗೆಯ ಹಿಸುಕಿ ಒಗೆಯಿತೋ ತನಗಿಲ್ಲದ ಆ ಲೀಲೆ ಅದಕ್ಕೇ–
ಕೆಂದು! ಕೂಡಲೇ ಭೂಮಿ ಭಾಗವಾಯ್ತಿಂಗಿತು
ಗಂಗಾಸ್ರೋತವರ್ಧಕೇ!
ಗೂಗೆ ಗುಡುಗಿದವು! ಕಾಗೆ ಕಬಳಿಸಿದವಕ್ಕಿಯ ಹುಳುಗಳ
ಲೆಕ್ಕವೆ ಇಲ್ಲದೆ!
ಕೇರೆಕಪ್ಪೆಗಳ ಕಚ್ಚಿಒಯ್ಯುತಿರೆ ಚೀರುವ ಗೀತವು ತುಂಬಿತು ಕಿವಿಗಳ–
ಒಳಗೂ ಹೊರಗೂ ಅದೇ ತುಂಬಿಹುದು,
ನಾರಾಯಣಗೇ ನೀರು ಕುಡಿಸಿಹುದು!

೬

ಪಂಚಲೋಕದ ಪ್ರವಾಸವಾರ್ತೆಯ ಸಗ್ಗಕೆ ಮುಟ್ಟಿಸಲೆಂದೆಯ್ತುರುತಿರೆ
ಐರಾವತವನು ಹತ್ತಿ ರಾವಣನು ವಿಹರಿಸುತ್ತಿದ್ದನು; ಕಾವಲುಗಾರರು
ಕುಂಭಕರ್ಣಸಂಧಿಯನ್ನೋದು ತಿಹನೆಂಬುದನರಿತಾ ಕಾಮಧೇನುವನು
ಕಟ್ಟಿ ಹಾಲಕರೆದೊಯ್ಯುತಿದ್ದನಾ ವೃತ್ರನಿಂದ್ರನೋಟಕ್ಕೆ ಕಾದಿರಿಸಿ–
ದಟ್ಟದ ಮೇಲಿನ ಅಮೃತದ ಹಪ್ಪಳವೆತ್ತಿಕೊಳಲು ಶೂರ್ಪಣಖಿ
ತಾಟಕೆಯ–

ರೊಟ್ಟು ಜಗಳಕಾರಂಭಿಸಿ ಕಚ್ಚುತ ಕಡಿದು ಪರಸ್ಪರರಂಗಾಂಗಗಳನು
ವೃತ್ರರಾವಣರ ಪಕ್ಷಕೆ ಕರೆಯಲು ಅವರೂ ಹೋರಿದರವರ ಕಟ್ಟಿಕೊಂ–
ಡೆತ್ತ ನೋಡಿದರು ಭೀಕರ ಕಾಳೆಗ! ಎಲುಬಿನ ಚೂರೆಲ್ಲೆಲ್ಲೂ ಚೆಲ್ಲಿತು!

ಒಳಗೂ ಹೊರಗೂ ಅದೇ ತುಂಬಿಹುದು,
ಅದಕ್ಕದೇ ಮದ್ದರೆಯ ತೊಡಗಿಹುದು!

ಸೃಷ್ಟಿಪ್ರಜ್ಞೆ

೧

ರಾಮರಾಜ್ಯದಿ ಶೂರ್ಪಣಖೆ ರೋಗಬೀಜಗಳ+
ಬಿತ್ತಿದಂತೆವೊಲಂದು ರಾವಣನ ಪಟವನ್ನು
ಸೀತೆಯಿಂದಲೆ ಬರೆಸಿ ಜೀವ ತುಂಬಿಸಿ ಬಿಟ್ಟು
ಹೋದಂತೆ ವೃತ್ರನಿಂದ್ರಾದಿಗಳ ಮೇಲಿದ್ದ

ಸೇಡ ತೀರಿಸಿಕೊಳಲು ಬ್ರಾಹ್ಮಣನ ರೂಪಿಂದ
ಬೊಮ್ಮನೆದುರ್ಗೈದಿ ಭಕ್ತಿಪ್ರದರ್ಶನಮಾಡಿ
'ನೀನೆ ಕಲೆಯೊವಜ ಮಾಯೆಯ ಗಂಡನುದ್ದಂಡ'
ಇಂದ್ರಜಾಲಾಪ್ಸರೆಯ ಮಿಂಡ, ಮಾಂತ್ರಿಕ ದಂಡ!
ಎಂದು ನುತಿಗೈಯೆ, ಬೊಮ್ಮಗೆ ನಾಲ್ಕು ಮೊಗ ಹೋಗಿ
ನಾನೂರು ಮೊಗ ಮೂಡಿದಂತಾಯ್ತು, ಹಿಗ್ಗಿದನು
ಅಗಲವಾದನು ದ್ವಾಪರಾಂತದಲಿ ಒಡೆದೊಡಲು+
ತುಂಡುಗಲೆಯುರುವಾಗಿ ಉದುರಿತ್ತು ಚೆದುರಿತ್ತು
ಚೆಲ್ಲಿತ್ತು ಚಮಕಿಸಿತ್ತೆಲ್ಲೆಲ್ಲು ಚೆಲುವಾಗಿ–
ಚಂಚಲಿಸಿ ಚಿತ್ತಹಾರಕವಾಗಿ ಚದುರಾಗಿ!

೨

ಪ್ರಲಯಶೂನ್ಯದ ಶಾಂತಿಯಳಿದಿತ್ತು ಬೆಳೆದಿತ್ತು
ನೆಬುಲ–ನಕ್ಷತ್ರ–ರವಿ–ಗ್ರಹಕೋಟಿ; ಗಾಳಿ–ನೀರ್–
ಕಲ್ಲು–ನೆಲ–ಹಸಿರು–ಹುಳು–ನೊಳ–ಹಕ್ಕಿ–ಹುಲುಮನುಜ
ಮುಂತಾದ ಇರುವೆಯೆಂಭತ್ತು ಸಾಸಿರ ಜೀವ–
ಜಾತ ಗಜಿಬಿಜಿಸಿತ್ತು; ಅಜ ಹೋಗಿ ದ್ವಿಜನಾದ

\+ ಯಕ್ಷಗಾನದ ಪ್ರಕಾರ
\+ 'ಏಕೋऽಹಂ ಬಹುಸ್ಯಾಂ ಪ್ರಜಾಯೊಯ'

ತ್ರಿಜನಾದ ದಶ–ಶತಜತಾದ, ದ್ವಂದ್ವಸಹಸ್ರ–
ನಾದ, ಬಿಂದುಬ್ರಹ್ಮನಾದ ನಾದಬ್ರಹ್ಮ!
ಒರಗಿದ್ದ ಮನುವೆದ್ದ ತನ್ನ ಮನ್ವಂತರದ
ತೆರೆ ಹರಿದು ಹೊರಬಿದ್ದ ಹೊಸ ವಿಸೃಷ್ಟಿಯ ಕಂಡು
ಕಂಡ ಕೂಡಲೆ ಹಸುಳೆಯಾದ, ಹಂಬಲುಗಳೆದು
ಹುಂಬ ಹಾದಿಗನಾದ, ಹೊರಟ ಸಂಚಾರಕ್ಕೆ;
ಹೊರಟ ಹೊತ್ತೇ ಹಾಗೊ ಬೆಳೆದ ಸೃಷ್ಟಿಯೆ ಹಾಗೊ
ಅಂತಿಂತು ಮೊದಲ ಹೆಜ್ಜೆಗೆ ಕಾಲು ಎಡಹಿತ್ತು
ಸತ್ಯಯುಗದಲಿ ವೃತ್ರ ಕೂಡ ಹೆದರುತ್ತಿದ್ದ
ವೈವಸ್ವತನ ಕಂಡು; ಯಾವ ಯುಗ ಬಂತಯ್ಯ!
ಕಾಲನನ್ನಳೆವೆನ್ನ ಕಾಲಿಗೇ ಕಂಟಕವೆ?
ಕಾಲಕಾಲನ ಕಾಲವೇನಲ್ಲವಿದು ಮತ್ತೆ
ಕಾಲಕಳೆವರ ಕಾಲವಿರಬಹುದೆ? ಕಲ್ಲಿಗೂ
ಕಾಲ ಬಂತೇ ಕಾಲದಂಡನಾದೆನ್ನಳೆವ?
ಎನ್ನುತ್ತ ಮುನ್ನಡೆಯೆ ಒಣಬೊಡ್ಡೆಯಡ್ಡಾಯ್ತು;
ಅದನೇರಿ ದಾಟಿ ಮುಂದೆರಗಿದಾಕ್ಷಣ ಎರಡು
ಕಾಲೇರಿ ಸಾಗುತಿಹ ಜೀವಪ್ರಪಂಚವೊಂ–
ದೆದುರಾಯ್ತುದೇವನಿಹ ಸುಳಿವು ಸಿಕ್ಕದೆ ಅಲ್ಲಿ
ತಡಕಿದನು ಕುರುಡನಂದದಿ ಬರಡುಗೈಯಿಂದ;
ಅರೆಮಂಜು ಕವಿದ ಆವರಣದಲಿ ಸಾಗಿದನು
ಏಳುತ್ತ ಬೀಳುತ್ತ ಸಹರಸಂತತಿಯನ್ನು
ದಾಟುತ್ತ ಓಯಸಿಸ್ಸನು ನೀರೀಕ್ಷಿಸಿಕೊಂಡು,
ಬಿಸಿಲ ಬೇಗುದಿಯಿಂದ ತೊಳಲುತ್ತ ಬಳಲುತ್ತ!

೩

ಪ್ರಕೃತಿಭೂಖಂಡದಲಿ ಸಂಸ್ಕೃತಿಯ ಕೊಡೆ ಹಿಡಿದು
ತಿರುಗುತ್ತಲಿದ್ದ ಗುಂಪೊಂದ ನೋಡಿದ ನೋಡ
ಲೆದೆಯೊಂದನುಳಿದೆಲ್ಲ ಅವಯವಗಳೊಟ್ಟಿತ್ತು
ಒಂದೊಂದು ನರಯಂತ್ರದಲ್ಲಿಯೂ; ಮತ್ತಿನೆಡೆ
ಸಾಗಿತ್ತು ಕಡಲಲೆಯ ಮಾಲೆಯಂತೆ ಕಬಂಧ–
ಸೇನೆ; ಎದೆಯಲ್ಲಿತ್ತು, ಕರುಳಿತ್ತು, ಕೈಯಿತ್ತು;

ಆದರಿಲ್ಲವೆ ಇಲ್ಲ ಮಂಡೆಯೆಂಬ ಪದಾರ್ಥ!
ಎಲ್ಲ ಲೇಡೀಸಿನಂಬರ್ಲ! ಎಂತಿವು ನನ್ನ
ಮಕ್ಕಳಾದಾವು? ಏನಿದು? ಎಂದ ಮನುರಾಯ
ಮಂಡೆಯನು ಹಿಡಿದೆರಡು ಕೈಯಿಂದ ತುರಿಸುತ್ತ;
ಕಂಡರೂ ಮತ್ತೆ ಕಣ್ಣರಳಿಸಿದ ಕಾಣಲೆಂ–
ದಂಡಲೆದು ಮಾನವ್ಯ ಮಂಡೆಗಳನುಹು ಇಲ್ಲ!
ಎಡಕೆ ತಿರುಗಲು ಮಂಡೆಯೆದೆಗಳೆರಡೂ ಇರದ,
ನಾಗರಿಕತೆಯ ವಸ್ತ್ರಭೂಷಣಗಳನು ಹೊದ್ದ
ಜನಸಂತೆ ಎದುರಾಯ್ತು ವಿಜ್ಞಾನವೀಥಿಯಲಿ
ಏನಿದೀ ಮುಕ್ಕಾಲು ಮೂರ್ತಿಗಳ ಬಗೆಯೆಂತು?
ಶ್ವಾಸಕೋಶಗಳಂತು ಇವೆಯಿವಕೆ ಎನ್ನುತಿರೆ
ಅವುಗಳಿಗು ಬದಲುಕ್ಕಿನವ ಸೆಕ್ಕಿಕೊಂಡಂಥ
ನವನಿರ್ಮಿತಿಗಳು ಕಣ್ಗೆಡ್ಡವಾದವು; ಅರರೆ
ಏನಿದೇನೆಂಬಷ್ಟರಲ್ಲಿ ಎದೆಮಿದುಳೆರಡ–
ನುಳ್ಳ ಪೂರ್ಣಾರವಿಂದಾಯತಾಕ್ಷರ ಗುಂಪ–
ನೊಂದನೀಕ್ಷಿಸಿದನುತ್ಸಾಹ ಮನುಗೇರಿತ್ತು;
ರಾಮಾಯಣದ ಹಾಗೆ ಬರೆದ ನಾರಾಯಣವ;+
ನನ್ನ ಮಕ್ಕಳು ನನ್ನ ಮಕ್ಕಳೇ ಎಂದುಬ್ಬಿ
ಹಾಡಿದನು ಸಪ್ತಮದ ಮನು ಸುಪ್ತಿಗೆಳೆವಂತೆ!

೪

ಹಾಡು ಮುಗಿಯವಷ್ಟರಲಿ ಯಮನು ಎಕ್ರೇಯಿಸಿದ;
ಕಂಡ ಮನುವೇನನ್ನು? ಜಠರ ಕೋಶದ ಜೊತೆಗೆ
ಒಂದೆ ಒಂದಿರಬೇಕು ಮಲಕೋಶ ದೇಹದಲಿ–
ಆದರಿಲ್ಲಂತಿಲ್ಲ; ಎದೆಯಲ್ಲಿ, ತಲೆಯಲ್ಲಿ
ಬಾಯಲ್ಲಿ, ಕೈಯಲ್ಲಿ, ಕಣ್ಣಲ್ಲಿ; ಕಿವಿಯಲ್ಲಿ
ಮೂಗಿನಲಿ, ಮರ್ಮದಲ್ಲೆಲ್ಲೆಲ್ಲು ಮಲಕೋಶ!
ಮೂಲ ಮಲಕೋಶ ತಾನೊಳಗಿದ್ದು ನಾರದಿದೆ;
ತೂಲಮಲಕೋಶಗಳೊ? ದಿಕ್ಕು ದಿಕ್ಕುಗಳಲ್ಲಿ
ಹೇಳಲಾಗದ ಕಂಪ ಸೂಸುತಿವೆ! ಮನು ಮೂಗ

+ ನರನಿಗೆ ಸೇರಿದ್ದು ನಾರ; ನಾರಂಅಯನ=ಮಾರ್ಗ, ನಾರಾಯಣ

ಕೊಯ್ದು ಕೊಂಡೇ ಬಿಟ್ಟ ತಡೆಯಲಾರದೆ ನಾತ!
ಆದರೂ ಅಂಜದವು ಮೂಗುವಟ್ಟೆಗಳಲ್ಲಿ
ಅಂಬನಂಬಟ್ಟುವೊಲು ನುಗ್ಗಿದವು ಅಲೆಯಾಗಿ!
ನರನ ಅಯನವಿದಲ್ಲ ನಾರುವಯನವಿದೆಂದ
ನರನರನೆ ನಡುಗಿದನು, ಗುಡುಗಿದನು, ಗೋಣಗಿದನು,
ಮಡಗಿದ ಶಿರಸ್ತ್ರಾಣವನ್ನು ಕೆಳಗಡೆ ಎತ್ತಿ;
ಆಸ್ಪ್ರೊ ಎಲ್ಲಿದೆ? ಎಂದು ಕೊರಲೆತ್ತಿ ಕೂಗಿದನು,
ರೇಗಿದನು, ಮೂಗನ್ನು ಮುಗಿಸಿದ್ದರೂ ಮತ್ತೆ
ಸಾಗಿದನು ಮುಚ್ಚಿಕೊಳ್ಳಲು ಬೆರಳು ತಿರುಹುತ್ತ!

೫

ಮೈಯ ಮಲಿನ ಮಾಡಿಕೊಂಡು
ಮೂಗು ಹಿಡಿದು ಕುಳಿತ ಕಾಡ
ಋಷಿ ಮುನಿಗಳ ಕಂಡು ಹಿಂದೆ
'ಕಿಂ ನು ಮಲಂ ಕಿಮಜಿನಂ
ಕಿಮು ಶ್ಮಶ್ರೂಣಿ ಕಿಂತಪಃ
ಪುತ್ರಂ ಬ್ರಹ್ಮಾಣ ಇಚ್ಛಧ್ವಂ
ಸ ವೈ ಲೋಕೋಽವದಾವದಃ'
ಎಂದು ನುಡಿದೆನಾದರೀಗ
ನರಮುನಿಗಳು ನಾಡ ತುಂಬ
ಹೊರಗಷ್ಟೇ ಸಾಲದೆಂದು
ಒಳಗದಕ್ಕು ಕ್ರೂರವಾದ
ಹಲಮಲಗಳ ಹೊತ್ತುಕೊಂಡು
ಪುತ್ರಪೌತ್ರರಾಶಿ ಕೂಡಿ
ಅದೇ ದೀಕ್ಷೆ ಅವರಿಗಿತ್ತು
ಪರಿವ್ರಜಿಸುತಿರುವರಮಮ!
ಕೆಲರಂತೂ ಹೊರಮಲಗಳ
ಸೆಂಟು ಹಚ್ಚಿ ತೊಳೆದೋಡಿಸಿ
ಅದಕೆ ಹತ್ತು ನೂರು ಪಟ್ಟು
ಕಂಪೋಸ್ಟುಗಳನ್ನೊಳಗಡೆ
ಕೂಡಿಸಿಟ್ಟುಕೊಂಡಿರುವರು–

ಏನಿದೇನಿದೆಂದು ಕೂಗಿ
ಹಿಂದಿರುಗಿದ ವೈವಸ್ವತ
ಹೆಜ್ಜೆಯಿಡಲಸಾಧ್ಯವಾಗಿ
ಕಣ್ಕತ್ತಲು ಬಂದು 'ಸಾಕು
ಸಾಕು ಬೊಮ್ಮ ಸಾಕು ಮಾಡು
ಸಾಕುವುದನು ಹುಳು ಸಂತೆಯ'
ಎಂದು ಬರೆದ ನಾರಾಯಣ–
ವನ್ನು ಹರಿದು ನಾರಾಯಣ!
ಅಜನಾದನೆ ಅಜ? ಸಲಹೋ
ಸಲಹು!' ಎಂದನಂಗಲಾಚಿ.

೬

ಮಿಂಚಿತೋ ಫಳಾರನೊಂದು
ಮಿಂಚು; ನಿಮಿಷ ಮಾತ್ರದಲ್ಲಿ
'ಬದುಕಿದೆ ಬದುಕಿದೆ' ಎಂಬೀ
ದನಿ ಕೇಳಿಸಿತತಿ ದೂರದ
+ರವಿಲೋಕದ ದಿಕ್ಕಿನಿಂದ–
'ಅಜನಜನಹುದೀಗ ತಂದೆ!'
ಎಂಬ ನುಡಿಯ ಮುಂದುಗೊಂಡು!

೭

ಮಲನಾಡಿಂದೋಡಿ ಹೋದ
ಮನು ಬದುಕಿದ; ಮಲನಾಡಲಿ
ಅವನು ನಿಂತ ಕಾಲದಲ್ಲಿ
ಅವಗೆ ಹುಟ್ಟಿದಂಥ ಸಂತ
ಕುಲದ ನಾಕು ಮಂದಿ ನಿತ್ಯ
ನಾತದಲ್ಲೆ ನರಳುತಿಹರು!
ಷಣ್ಮುಖರೋ ಷಣ್ಮುಖ ಜನ–
ರಾರು ಮೊಗದ ವೀರರೋ–

+ ವೈವಸ್ವತನಾದ ಈ ೭ನೆಯ ಮನುವು ಹೆದರಿ ತಂದೆಯಾದ ಸೂರ್ಯನ ಲೋಕಕ್ಕೆ ಹೋದ.

ಆರು ಕರಣಗಳನಾರರಿ–
ಗಳಿಗೆ ಹಂಚಿ ಬಿಟ್ಟರೋ!
ಸನಾತನತೆಯಿಲ್ಲವೀಗ
'ಸನಾತ' ದಿನ ಬಂದಿತೋ
ಅನಾಥ ಸುಹೃದರ ಮೊರೆ ಅಜ–
ನಜಾತ ಕಿವಿ ಮುಟ್ಟದೋ–
ದುರಂತ ರಸರಸಿಕತೆಯುಗಿ
ಮೈ ಸುಡುವುದು 'ಮನುಜರ';
ಮಲನಾಡಿನ ಫಲವತ್ತೆಗೆ
ಬೆದರಿತು ಮನ ಮಾನವ!
ಮುಪ್ಪಷ್ಟೇ ಮಲಮಯವೇ?
ಅಲ್ಲ, ಪ್ರಾಯ ಬರುವದೂ
ಮಲ ಮಲ ಮಲರಿಯೆ, ಮಲರೂ
ಮಲಿಸುಗು, ನಿರ್ಮಲಿಸದು.
ಮಲಾರ್ಥಕ್ಕೆ ಹೇಸದವರು
ಮಲಪದವನು ಕಂಡರೋ–
'ಎಲಾ' ಎಂದು ಮೂಗು ಮುರಿವ
ಕಲಾವಂತ ಗಂಡರೋ!
ಲಿಲಿಪುಟ್ಟರಿಗಿಂತ ಪುಟ್ಟ
ತಲೆಯ ತಳೆದ ಮಾರರೋ!
ತಲೆಯಲ್ಲೇ ಹೊಲೆ ಬೆಳೆಯುವ
ಬೆಲೆವಾಳ್ತೆಯ ಶೂರರೋ!
ತೋಟಿಗ ಕಲಿ ಬೆಳೆಸಿರುವೀ
+ಹೇತಾರಿಯ ಕಾಡು
ಚಕ್ಕೆ ತೊಗಟು ತಿರುಳೆಲ್ಲಾ
ಸುಮಲಗಂಧ ನೋಡು!
ಹೊಲಸಾಗಿಯೆ ಹುಲುಸಾಗಿಹ
ಚರ ತರುಗಳ ಥಾಟು
ಸೈತಾನಸ್ಫೂರ್ತಿಗುರುವ
ಲೊದಗಿಸುವೇರ್ಪಾಟು!

\+ ಭೂತಪಿಶಾಚಿಗಳಿಗೆ ಮುಟ್ಟುಸಾದ ಹೇತಾರಿಮರ

ಭಗವಂತನ ವಿಶ್ವರೂಪ
ಮಲ–ನಿರ್ಮಲವಿತ್ತು;
ಶ್ವರೂಪದೀನೆಲಕೊ? ಮಲ–
ಸ್ವರೂಪ ಸಂಪತ್ತು!

ವಿಜ್ಞಾನಪ್ರಜ್ಞೆ

೧

ಜಲಜನಕ ಆಮ್ಲಜನಕಗಳ ಬೆರಸುತ್ತಿರುವ–
ರೊಂದು ಕಡೆ; ಒಂದು ಕಡೆ ಜಲವ ವಿದ್ಯುತ್ತಿಂದ
ಭೇದಿಸುವ ಕಬೆಗೊಳವೆ ಕೆಲಸ ಮಾಡುತ್ತಿಹುದು:
ನವಿಲು ತುತ್ಯದ ಹರಳು ಹೆರೆಯಾಗಿ ಕೂಡುತಿದೆ;
ದ್ವಿಜಗಂಧಕಾಮ್ಲ, ಕ್ಲೋರೀನ್ ಅಗೋ ಹೈಡ್ರೊಜನ್
ಸಲ್ಫೈಡು ಸುರುಳಿ ಹೊಗೆಯೇಳುತಿದೆ; ಅಂಗವ–
ಸ್ತ್ರವನೆತ್ತಿ ಮೂಗೊತ್ತಿಕೊಂಡಿಹನು ಕನ್ನಡಕ–
ದೊವಜ; ಘಟ್‌ಘಟ್ಟೆನ್ನುತಿದೆ ಪೊಟಾಸಿಯಮಹಾ
ಕಿವಿಯ ಕಿವುಡಿಸಿ! ಕಣ್ಣಕೋರೈಸಿ ಬೆಳಗುತಿದೆ
ರಂಜಕಜ್ವಾಲೆ ಮೈಮೇಲೆ ಹಾರುವ ಹಾಗೆ;
ಸೋಡಿಯಂ ಚೂರು ಟಿಸ್ಸೆನ್ನುತಿದೆ ನೀರೇರಿ
ನಾಗಪ್ಪನಂತೆ ಮತ್ತೊಂದು ಮಂದಿರದಲ್ಲಿ
ನಡೆವುದು ಯುರೇನಿಯಮ್ಮಿನ ಕಣದ ಮೇಲ್ಬಾರ್ಜು–
ನೂರಾರು ಸಿಡಿಲುಗಳು, ಗುಡುಗುಗಳು, ಮಿಂಚುಗಳು
ಪಂಚೇಂದ್ರಿಯಗಳನ್ನು ಮುದ್ರಿಸಿವೆ, ರುದ್ರಿಸಿವೆ!
ಹೃದಯವನ್ನೆಸೆದು ಕೋಲ್ಡ್ ಸ್ಟೋರೇಜಿನಲ್ಲಿ ಕಂ–
ದೆರೆದೆಲುಗು ಮಿದುಳು ನೋಳ್ಪಂದ ಬಲು ನಿಷ್ಪಂದ!
ಎಚ್ಚರದ ಎಚ್ಚರವೆ ಇಲ್ಲ–ವಿಜ್ಞಾನಂ ಬ್ರಹ್ಮ!
ವಿಶ್ವೋದ್ಧರಣ ಸಮಾಧಿಯ ಗರ್ಭದಲಿ ಗುಮ್ಮ
ಗುಣುಗುಣಿಸುವುದನೇನು ಬಲ್ಲನಾ ಕುರಿ ತಿಮ್ಮ!

೨

ಮಾನವ ಸ್ವರದ ಸುಳಿವಿಲ್ಲ ಸುದ್ದಿಯೆ ಇಲ್ಲ
ಗಾಳಿಗೂ ಗೊತ್ತಿಲ್ಲ, ಬೆಳಕಿಗರಿವೇ ಇಲ್ಲ–

ಯಾವ ದೆಸೆಯಿಂದಗ್ನಿಪಿಂಡಮಂಡಲ ಗಗನ–
ವೇರಿ ಬರುತಿಹುದೆಂದು! ಮಾಯಾವಿ ವಿಜ್ಞಾನಿ
ಬರಿ ಬುರುಡೆರೂಪದಲ್ಲಡಗಿ ಕುಳಿತಿಹನೆಲ್ಲೊ
ನೂರಾರು ಯೋಜನಗಳಾಚೆ, ನಿಷ್ಪಾಪ ತಾ–
ನೆಂದು ರಾಜನ್ಯರಿಡುಗೂಳಿಗೊಡ್ಡುತ ಬಾಯಿ;
ವಿಶ್ವದಗಲಕೆ, ಚಂದ್ರಸೂರ್ಯರೆತ್ತರಕೆ, ತ–
ನ್ನುತ್ತಮಾಂಗದ ವಿದ್ಯುದಂಶ ಮುಟ್ಟುವುದೆಂಬ
ಬಕರಸಾವೇಶದ ನಿರೀಕ್ಷೆಯಲಿ! ಕಾಳ್ತೊಂಡೆ
ಬೆಂಡೆಗಳ ನಿರ್ಮಿಸಿದ ಮೌನಿ ವಿಶ್ವಾಮಿತ್ರ–
ನಭಿನವ್ಯ ಶಿಷ್ಯರೀ ಧೂಮಕೇತು–ಕ್ರೀಡೆ–
ಯಿಂದೆನ್ನಬೇಕು, 'ಶಿಷ್ಯಾದಿಚ್ಛೇತ್ಪರಾಜಯಂ!'
ಹಾಲಾಹಲದ ಹೊಗೆಯೆ ಮೋಡ, ಮಿಂಚೇ ವೃಷ್ಟಿ
ಸಾಲಾಗಿ ಕೆಡೆದುರುಳುತಿಹ ಚರಾಚರಗಳೇ
ಕಾಲಾನುಗುಣ ಸೃಷ್ಟಿ! ಪುಣ್ಯಪಾಪಾದೃಷ್ಟ
ಮೇಲು ಕೀಳೆಲ್ಲ ಮೊಗಚಿದವೀ ಮಹಾಸಾಮ್ಯ–
ಧೋರಣದ ಜಾಗತಿಕ ವ್ಯಾಪ್ತಿಯಲಿ ಸತ್ತೆನೆ–
ನ್ನಲು ಕೂಡ ಬಾಯಿಲ್ಲದಂಥ ಈ ಸತ್ತೆಯಲಿ
ಮಾನವ್ಯ ಗಿನಿಪಿಗ್ಗು ಸಂಸ್ಕೃತಿ ಪ್ರಯೋಗಕ್ಕೆ!

೩

ಶಾಂತಿಸಂಧಾನಕ್ಕೆ ಅಣುದೂತನೇ ಮುಂದೆ,
ಕ್ರಾಂತಿಸಂತಾನಕ್ಕೆ ತುತ್ತು ಕರಿಯರ ಮಂದೆ;
ಹಗಲು ವಿಶ್ವಪ್ರೇಮಕಾವ್ಯನಿರ್ಮಿತಿ, ರಾತ್ರಿ
ಮುಗಿಲಿಂದ ಕೀಟಗಳ ಮಳೆಯಿಸುವ ಸಂಚು! ಅಂ–
ಜನೆಯಪ್ಪಿಕೊಳ್ಳಲು ಜುಗುಪ್ಸೆಪಡುವಂಥ ವಾ–
ಯ್ವವತಾರ ಮಾರಣದ ಹೋಮಸಿದ್ಧತೆಗಾಗಿ!
ಡಾಲರಧ್ವರ್ಯುಗಳು, ಸ್ಟರ್ಲಿಂಗು ಹೋತೃಗಳು,
ಬೇರೆ ನಾಣ್ಯದ ಸಾಮಗಾಯಕರು, ನಾಯಕ–
ಬ್ರಹ್ಮ, ವಿಜ್ಞಾನವಾರಾಂಗನಾವಿಟರಾಜ!
ಬಡ ಮಾನಿಸರ ಮಕ್ಕಳೆದೆ ಯಜ್ಞಪಶುವೃಂದ–
ನಡೆವುದಂತಾರಾಷ್ಟ್ರದಂತಕಾರಕ ಪಂತ!

ಏಕೆ? ಪ್ರಕೃತಿಯುಸಿರ್ದರ್ಳಾದಿಯಲಿ, 'ಮಾನವs,
ಮಾ ನವೋ ಭವ! ಇದ್ದ ಹಾಗೆ ನಿನ್ನೆದೆಯಿರಲಿ
ಆದಿ–ಅಂತ್ಯಗಲ್ಲಿ ಅಡವಿ–ನಗರಗಳಲ್ಲಿ;
ಮಲಗು ಮಗು ಮುದ್ದೆ, ಹುಟ್ಟಿದೆ ನನ್ನ ಮೋಹದಲಿ
ನಿನ್ನ ಮೋಹದಿ ಬೆಳೆವೆ ನಿನಗೆ ನೀನೇ ಎಂದು,
ಅನ್ನಾದ, ವಸ್ತ್ರಾದ, ಸ್ವರ್ಣಾದನೆಂದನಿಸೆ
ಜಗಮೋಹ ಬೆನ್ನಟ್ಟಿ ತಿಂಬ ಬಾಯ್ತೆರೆಯುವುದು–
ಮಗುಳಿ ಸತ್ತೆನ್ನುದರಕೆಯ್ತುರುವೆ ನೀ ಕಂದ!

ಇಂಗಿತಪ್ರಜ್ಞೆ

ಮುಖಮಾಯೆ ಮನುಜರಲಿ ಕಾಲು ಕೈಯ ಬೆರಳುಗಳೆ ಸಾಕ್ಷಿಚಿತ್ರ
ಅಕಲಂಕ ದೇಹಮನಗಳನು ಸೂಚಿಸುವ ಪ್ರಕೃತಿದತ್ತ ಸೂತ್ರ!
ತೊಟ್ಟು ಕೊಳೆತ ಹಣ್ಣಲ್ಲಿ ಕ್ರಿಮಿಗಳಾ–
ವಾಸ ಸುಲಭಸಾಧ್ಯ
ಉಟ್ಟು ಮುಚ್ಚಿದೆಡೆಯಲ್ಲಿ ರೋಗವಿರೆ
ಮೊಗವೊ ಸುರನಿವೇದ್ಯ!
ಅಡಿಗೆಸರ ನೀರ ತಿಳಿ ಬೇರೆ ಬೇರೆಯ–
ಚ್ಚೋದ ಸರದ ಚೆಂದ
ಅದನರಿವ ಕಣ್ಣು ಲೋಕದಲಿ ವಿರಳ
ಮತಿ ಮಂದ ಮಂದ ಮಂದ!
ಬುಡವದೃಢವಾದ ಮನೆಯೂತುಮಾಡು ತಾ
ದಿಕ್ಕು ದಿಕ್ಕಿನತ್ತ
ತನುಗೊಂದು ದಿಕ್ಕು ಮನಕೊಂದು ದಿಕ್ಕು ಮಾ–
ತೆತ್ತಲೋ ನಿರಸ್ತ!
ರಮಣಿಯರ ರಮ್ಯತೆಯನಳೆವ ವೀರನವ
ರಾಣ್ಮನೊಬ್ಬನಷ್ಟೇ
ಮಿಕ್ಕೆಲ್ಲ ಪಂಡಿತರ ಮಂಡೆ ಕಂಡರೂ
ಕಾಣದುಳಿಗು ನಿಟ್ಟೇ!
ಮುಗುದತೆಗು ಮೂರ್ಖತೆಗು ದೂರ ಕಡಿಮೆ ಸಹಜೀವ ವಸ್ತುವಿನಲಿ
ಹಾಗೊಮ್ಮೆ ತೋರೆ ಹೀಗೊಮ್ಮೆಯಡಗೆ ತಲೆ ದಾಟಬಹುದು ಜಗದಿ!
ಜಗ ಮಾಯೆಯಾದುದೀಯರ್ಥದಲ್ಲಿ
ತಮ್ಮಾತ್ಮವರಿಯದಿರುವ
ಮುಗುದರ ವಿಹಸ್ತಕುಶಲತೆಯ ಕಂಡರೆದೆ
ಹಾರಬಹುದು ಅರಿವ!

ಏಕತಾನ ತಲ್ಲೀನಭಾವವಿರ–
ದಂಥ ಬಗೆಯ ಕಟ್ಟು
ಯಾತಕಾದರೂ ಯೋಗ್ಯ ಮೈತ್ರಿ ಸಂ–
ಧಾನವನ್ನು ಬಿಟ್ಟು!
ಉಗುರುಗಳ ಬಣ್ಣ ಆಕಾರ ತಿಳಿಸುವುವು
ಬಗೆಯ ಬಗೆಯ ಬಗೆದು
ಮೊಗವಲ್ಲ ಮೂಡುಗಣ್ಣಲ್ಲ ಕೈಯ ಐ–
ಮೊಗದ ಬಾಯ ತೆಗೆದು!
ಹಗಲಲ್ಲಿ ರಾತ್ರಿ ಮೊಗವೋದುವಂಥ ಸತ್
ಕಾಲ ರಮ್ಯ ಧರೆಯ
ಜಗವೆಲ್ಲ ನಿದ್ರಿಸಿದೆ ಜಾಗರಿಸುವ ಕ–
ಣ್ಣೊಂದೆ ಕಾಣ್ಗು ಖರೆಯ!
ಬಿಳಿಹಾಳೆಯೋದಿನಂತಲ್ಲವಯ್ಯ ಸಿರಿ–
ದೊಗಲಿನೋದು ಜನದ
ಆ ಶಾಸ್ತ್ರವನ್ನು ಬರೆದಿಟ್ಟರಿಲ್ಲ ನಿಃ
ಶಸ್ತ್ರಯೋಧ ಮನದ!
ಹೆಗ್ಗೆರೆಯ ಮೇಲೆ ಕಿಗ್ಗೆರೆಗಳನ್ನು ಕಂ–
ಡಾಗ ಮುಸುಕು ಸರಿಸಿ
ನುಗ್ಗಾದ ಜೀವ ಮೊಗ್ಗಾಗಬಹುದು ಹೂ–
ವಾಗಬಹುದು ಸ್ಮರಿಸಿ!
ಸಾಮುದ್ರವೀಚಿ ಸೌಂದರ್ಯಗಾಳಿ ಬಂ–
ದಾಗ ಬೀಚಿನಲ್ಲಿ!
ಮಾರುದ್ರವಯ್ಯ ನಿಸ್ತಬ್ಧದಲ್ಲಿ ಮೊಸ–
ಳೆಗಳು ಚಾಚಿದಲ್ಲಿ!

ಮಾಯಾಬಜಾರ ಪ್ರಜ್ಞೆ

೧

ರೊಕ್ಕವುಂಟು ಲೆಕ್ಕಕ್ಕೆ ಸಿಕ್ಕದ–
ಷ್ಟೆಂಜೀನಿಯರುಂಟು
ಸೊಕ್ಕುವಷ್ಟು ಆರೋಗ್ಯಶಾಸ್ತ್ರ ಪಾಂ–
ಡಿತ್ಯ ಭಾರವುಂಡು
ಒಕ್ಕುವಷ್ಟು ಮೂರೂರನುಂಟು ಯಂ–
ತ್ರಾನುಕೂಲ–ಇಷ್ಟಿದ್ದೂ
ಬಿಕ್ಕುತಿದ್ದಳಾ ನಗರಲಕ್ಷ್ಮಿ ಹೊಲ–
ಸಂಗಿಯಲ್ಲಿ ಸೆರೆಬಿದ್ದು!

೨

ಅಡಿಯ ಕಲ್ಲು ನಡುಗಡೆಯ ಮಿಂಚು ಮೇ
ಲಟ್ಟಹಾಸದೆಲರು
ತಡಿಯ ಭೀಮತರುಗುಲ್ಮಸೇನೆ ಅಜ–
ಪೀಠವಾದ ಅಲರು
ತಡೆದು ನಿಲಿಸಿದಪ್ಸರೆಯ ಮಾಯೆ ಮಣ–
ತೂಕವಿದ್ದರೂನೂ
ದಡದ ಕಟ್ಟಿನಲಿ ಕೆಟ್ಟು ನಾರಿತೋ
ಹೊಂಡ ನೀರು ತಾನು!

೩

ಕಾಯವುಂಟು ಕರಿರಾಯನಂಥ ಆ–
ದಾಯವುಂಟು ಆರು ಲಕ್ಷ
ಬಾಯಕರೆಗೆ ಬಹ ಬಂಟರುಂಟು ಮಿ–

ತ್ರಾಯದಲ್ಲಿ ಮನೆ ಲಕ್ಷ್ಯ
ತಾಯ ಹರಕೆ ತಲೆಗಂಟು ಆದರೇ–
ನೊಡೆಯನೂಳಿಗದಲಿ
ಜೀಯ ಜೋ ಹುಕುಂ ಎಂದು ಸತ್ತು ಹೋ–
ಯ್ತಾತ್ಮ ದಾಸ್ಯದಲ್ಲಿ!

೪

ಚೆನ್ನೆಕೆನ್ನೆ ಮುಂಡಾಟ ಕುಸ್ತಿಗುಂ–
ಡಾಟ ಚೆಂಡುದಾಂಡು
ಚೆನ್ನ ಚೆನ್ನ ಚತುರಂಗಸೇನೆಯು–
ನ್ಮಾದ ಸವಿದ ಬಂಡು
ಧನ್ಯ ಕಾವ್ಯಶೃಂಗಾರರಾಜ್ಯ ಎಂ–
ದಾಡುತಿರುವ ಹಾಗೇ!
ಸೊನ್ನೆ ಕಪ್ಪು ಪರದೆಗಳನಿಳಿಸಿತೋ
ನೋಡುತಿರುವ ಹಾಗೇ

೫

ಗಾಳಿಯಿತ್ತು ದನಕರಗಳೋಟ ಕೆದ–
ರಿತ್ತು ಸುತ್ತ ಮಣ್ಣೆಲ್ಲಾ
ಬಾಳಿನಲ್ಲಿ ಬಯಲೊಡೆಯತನದ ಕಡು
ಕೋಪ–ತಾಪ–ಕಣ್ಣೆಲ್ಲಾ
ಹಾಳಿನಾಳವನ್ನೀಸಿ ಅಳೆವ ದ್ರ–
ಷ್ಟಾರತನದ ಬಲವೆಲ್ಲಾ
ಧೂಳಿನಲ್ಲಿ ಧೂಳಾಯ್ತು ಕಸದ ಬಲ್
ಬಿಂಕ–ಬಂಡ–ಬೆಲೆಯಿಲ್ಲಾ!

೬

ಕಸದ ಕಮ್ಮನೆಯ ರಸದ ರಾಜ–ರಂ–
ಕಾವಳಿಗಳ ಬೇತು
ಪಿಸುಣ–ಧೀರರೊಳತಂತ್ರ ವಿಕ್ರಮಗ–

ಳೆಲ್ಲ ಹೂತು ಕಾತು
ಫಸಲು ಕೊಡಲು ತಮಗಳವಿಯಿಲ್ಲ ಅ–
ವ್ಯಕ್ತ ಶಕ್ತಿ ಕೂತು
ಬೆಸದ ನಿತ್ಯ–ಸಾರಥ್ಯ ನಡೆಸುವುದ
ನೋಡಿ ಆಡು ಮಾತು!

ದಾಂಪತ್ಯಪ್ರಜ್ಞೆ

೧

ಲ್ಯಾಂಪಿನ ತುದಿಯಲಿ ಲಫಂಗ ಕುಳಿತಿರೆ
ದೀಪಸುಂದರಿಯ ನುಂಗಲು ಇಡಿ ಅವ–
ಳವಿಶ್ರಾಂತ ಚಪಲಜ್ವಲ ಜ್ವಾಲೆ
ಸುಟ್ಟರು ರೆಕ್ಕೆಯನಲುಗಾಡದೆ ಈ
ರಸಾಧ್ವರಕ್ಕಾತ್ಮಾಹುತಿಯೊಂದೇ
ತಕ್ಕುದೆಂದು ತಿಳಿದಾ ಗರಿವಾನಿಸ!
ಬಹಿಷ್ತ್ರಭೆಯ ಹುಡಿತಪದ ಅರ್ಥವೇ
ಅವಳಿಗರಿಯದವಳಪ್ಪ ಬಲ್ಲ! ಮುಂ
ದೇನು? ಅವಳೊ ಶಿಲೆಗಲ್ಲು; ಉರಿವ ಚಟು–
ವಟಿಕೆಯೆಲ್ಲ ಚಟುವಟಿಕೆಗಾಗಿಯೇ
ಎಂಬ ಹಾಗೆ ಜೀವಿದ್ದೂ ಜಡ–ಇದ
ಬಲ್ಲ ನಲ್ಲ ರಸಸುಂದರ; ಅವನಾ
ಪ್ರೇಮಾಜ್ಯಾಹುತಿ ಪ್ರೇಮದೇವತೆಗೆ
ಮುಟ್ಟಿದೆಯೆಂದೇ ಥಟ್ಟನೆ ತಿಳಿದವ
ಹಾರಿದ ಬೆಂಕಿಗೆ ಶ್ರೇಯಸ್ಸನ್ನೇ
ತ್ಯಜಿಸಿ ಹೊರಟ ಸಂಪ್ರೇಯೋ ಧಾಮಕೆ–
'ಗಂಡು ಕೋಗಿಲೆ
ನವಿಲು ಗಿಳಿ
ಲೋಕಮೌಲ್ಯದೊಳ
ಗುಟ್ಟ ತಿಳಿ!'
ಎಂದು ಬಂದ ಹಾಡುತ್ತ ಜೇನುದೊರೆ
ಹೊಳೆವ ನೀಲ–ಪಚ್ಚೆಗಳ ಹೊತ್ತ ಮೊಗ–
ದೋರಿ ಮೂಕ ಹೂಗಳ ಮಾತಾಡಿಸ
ಹೊರಟು ಸುಸ್ತಿನಿಂದೇದುತ ಸುಸಿಲಲಿ

ಮರೆತು ಹೋದರೂ ಮತ್ತೆ ನೆನೆದು ಆ
ಪ್ರೇಯಸಿಯರ ನಿಷ್ಕ್ರಿಯಾನುಕೂಲವ
ಸಾಮ್ಯವಾದಕೀ ಪ್ರೇಮರಾಜ್ಯದಲಿ
ಇಲ್ಲ ಜಾಗ ಇಲ್ಲಿರುವುದು ಗುರು ಶಿ–
ಷ್ಯರ ಅಥವಾ ದೇವಾರ್ಚಕ ವರ್ಗದ
ಪ್ರೇಮಸೇವೆಯುನ್ಮಾದ ಎಂದೊರೆದ!

೨

ಮೂಡಲಲ್ಲಿ ಮುಕ್ಕಾಲು ತಿಂಗಳ–
        ಡ್ಡಾಡಿ ಬಂದ ಕೇಳಿ
ತೀಡಿತಲ್ಲಿ ಒಳ್ಗಳ್ಳನಂತೆ ಮೇಲ್
        ಸಗ್ಗದಗ್ಗಗಾಳಿ–
ದೇವ ದೇವ ನಾರಾಯಣ ಎನ್ನುತ
ದೇವಕೀಟ ನಾರದ ಬಂದುಲಿದನು;
ಭಕ್ತಿಯೊಂದೆ ರಸ ಮಿಕ್ಕುದೆಲ್ಲವೂ
        ಲಫಂಗ ಗಿರಿಯೆ ಅಳಿ
ಮೊದಲಿಗಿದ್ದರೂ ಕಡೆಗೆ ವಿಷಮ ಗತಿ
        ಇರದಾವೇಶದಲಿ
ಪ್ರೇಮದಲ್ಲಿ ತರಲಾದಿ ಸಾಮ್ಯವನು
ಅಂತ್ಯ ವಿಷಮತೆಗೆ ಬೀಜವಪ್ಪುದೀ
ರಹಸ್ಯವರಿಯೆಯ? ರಸಿಕನೆ ದೇವರ
ದಾಸ ದೇವರನ್ನಾಳುವ ಬಲ್ಲೆಯ?
ಕೇಳಲು ದೇವರು ತನ್ನ ಆಳಿಕೆಯ
ನಿರಂಕುಶತೆಯನು ನಂಬಿ ನುಡಿವನೀ
ಭಕ್ತಿಸತ್ಯ ನಿಮಗೆಲ್ಲಿ ಗೊತ್ತು ಗಾಂ–
ಧರ್ವಶೈಲಿಯವರೆಲ್ಲ ಹೀಗೆಯೇ–
ಎನಲು ಹಿಗ್ಗಿ ಗುಂಜಿಸಿದ ಜೇನು ನಿ–
ಲ್ಲದೆಯೆ ಮಲ್ಲಿಗೆಯ ಮುತ್ತಿದ ಒರಟನು
ಲೋಕ ನಿಂದಿಸಿತು, ನಿಂದಿಸಿ ಹೊಗಳಿತು

ಹೂವಿನ ತಪವೋ ಪಡೆದಿತು ಕಣ್ಣನು
ಭಕ್ತಿ ಬಂತು ಶಿವಶಕ್ತಿಯಾಗಿ ಇಹ
ಮೆಟ್ಟಿಲಾಯ್ತು ಕೊನೆಗವರ ಜೀವನದ
ಮುಕ್ತಿಗೆ ನಾರದ ತಾರದೊಳಾಡಿದ;
ಕರಟದೊಳಿರಲೇ ಬೇಕು ತೆಂಗು, ಶಿವ
ನಾರಿಕೇಳ ಸಾರವನೆ ಬೇಡುವನು;
ಕದಳೀದ್ರಾಕ್ಷಾಸ್ವಪ್ನ ಸೌಖ್ಯಗಳ
ಮಿದುಳಿಗೆ ಮುಟ್ಟಿಸಬೇಡ ಮಗು;
        ಕೊಟ್ಟರು ವ್ಯರ್ಥ
        ಕೊಂಡರು ವ್ಯರ್ಥ
ನೀರುಗುಳ್ಳೆಯಂತದರ ನಗು!

ಸ್ವಾತಂತ್ರ್ಯಪ್ರಜ್ಞೆ

೧

ಹೊಸ ಅರುಣನುದಯಿಸಿದ ಹೊಸ ಉಷಃಸುಂದರಿಯ
ಹೊಸ ಕೀರಕಂಠ ಕಿವಿದೆರೆಗೆರಗಿದೆ!
ಹೊಸ ಭಾರತದ ಮೂಡಲಲ್ಲೆದ್ದ ಹೊಸ ರವಿಯ
ನಸುನಗೆಯ ಬೆಳ್ವೆಳರು ಬಿತ್ತರಿಸಿದೆ!

ಬಿಡುಗಡೆಯ ತಂಗಾಳಿ ತೀಡಿ ತುಂಬಿದ ಹುರುಪು
ಹಡೆದ ಹೊಸ ಸೊಗಸುಗಳೆದಳಿದ ಹೂಹಸಿರುಗಳ
ತಮ್ಮ ಭವಿತವ್ಯತೆಯ ತಾವೆ ಚಿತ್ರಿಸಿಕೊಂಬ
ಸುಮ್ಮಾನ ಸೂಸುತಿಹ ನವ ಶೈಶವಾತ್ಮಗಳ–

ನಲ್ನುಡಿಯ ಮೆಲ್ನಡೆಯ ಚೆಲ್ವಿಕೆಯ ಗೆಲ್ವಿಕೆಯ
ಗರಿ ಹಾರಿ ಗಗನದಲಿ ಚುಕ್ಕೆ ಸಾಲಾದವೋ
ಎನ್ನುವಂತಿಹ ಚಿನ್ನಗನಸುಗಳ ಕಾಲವಿದು–
ಅಲ್ಲ–ಬರಿ ಕನಸು ಕಾಣುವ ಕಾಲವಲ್ಲ ಕಾ–

ಣುತ್ತ ಕಾಣುತ್ತ ಕನಸನು ಗಟ್ಟಿಮಾಡಿ ಕೈ
ಯಲಿ ಬೆಣ್ಣೆಯಂತೆ ಹಿಡಿದುಂಬನಲ್ಲಾಗಲವಿದು!

೨

ಉಪನಿಷತ್ತೆಂಬ ಹಳೆಬೊಡ್ಡೆ ಚಿಗುರಿರಲಿಲ್ಲ,
ಬಹುಕಾಲ ಬಿದ್ದಿತ್ತು ಜಡವಾಗಿ, ಅದರೀ

ಸುಪರಿಚಿತ ವರ್ತಮಾನದಿ ಚಿಗುರಿ ಗಿಡವಾಗಿ
ಭಾರತದ ಋಷಿಮುನಿಗಳಾರ್ಜಿಸಿದ ತಪ ಮೂರ್ತಿ–

ವೆತ್ತಂತೆ ಫಲಿಸಿತೆರಡನೆ ಬುದ್ಧರಸ ತುಂಬಿ!
ಆ ರಸಸ್ಫೂರ್ತಿಯಿಂದೆಮ್ಮ ನೆಲ ಹದಗೊಳಲು
ಹೊಲೆತನದ ಕಳೆಯನೆದೆಯಿಂದೆ ಕಿತ್ತೆಸೆಯುವೆವು–
ಬಿಳಿಬಟ್ಟೆ ಬಗೆಯಿಂದ ಕಪ್ಪು ಭಾವನೆದಳೆದು
ಒಳ ಮಲದ ಬಲದಿಂದ ಹೊರಹೊಲೆಯರನು ಕೀಳು–
ಗಳೆದ ಕಾಡಾಡಿತನವನು ಗಡಿಯ ಹೊರನೂಕಿ
ನಿರ್ಮಲಿಸುತಿಹೆವಿದೋ ಭಾರತದ ಹೆದ್ದಿರೆಯ:
(ಕರ್ಮ ಕಂಠೀರವ ನಮೋ ಗಾಂಧಿ ಶುಭ ನಾಂದಿ!)

ಹಳ್ಳಿಗಳೆ ಭಾರತದ ಹೃದಯವೆಂದೊರೆದು ಮೇಣ್
ಉಳ್ಳವರು ಹಂಚಿ ಉಣಬೇಕೆಂದು ನಾಡಿನಲಿ
ಎಲ್ಲ ಅನುಯಾಯಿಗಳಿಗಪ್ಪಣೆಯನಿತ್ತು ಕೈ–
ವಲ್ಯಕೇರಿದ ತಂದೆ; ಅವನ ಹರಕೆಯ ಹೊತ್ತು
ಬಲ್ಲಿದರು ನೆಲದ ಶುದ್ಧಿಯ ಮಿಕ್ಕ ಕಾರ್ಯಗಳ
ಮುಂಬರಿಸಿಕೊಂಡು ಸಾಗುವ ದೃಶ್ಯವತಿ ರಮ್ಯ!

ಜಾತೀಯತೆಯ ಸರ್ಪ, ಮತಪಂಥಕುದುರಾಳ,
ಧರ್ಮಾಂಧತೆಯ ಕಡಾಲ್‌ಬಳುಕ, ದುಷ್ಪ್ರಾದೇಶಿ–
ಕತೆಯ ಕೊಂಡಿಯ ಚೇಳು, ವೈಯಕ್ತಿಕ ಸ್ವಾರ್ಥ–
ಕಾರ್ಕೋಟಕಗಳ ಕಡಿದಭಯವಿತ್ತೊಳ್ಳಿದಗೆ;
ನೀರೊಡ್ಡುಗಳ ನಿಲಿಸಿ, ಬುವಿಯ ಚೊಚ್ಚಿಲು ಮಕ್ಕ–
ಳಾರೈಕೆಗೆಡೆಮಾಡಿ, ನೀರ್ಮಿಂಚ ಸಂಗ್ರಹಿಸಿ

ನಾನಾವಿಧೋದ್ಯಮದ ಕೇಂದ್ರಗಳ ಕಟ್ಟುತಿಹ
ಮಾನವ್ಯ ನವ್ಯಸಂಭ್ರಮ ದಿವ್ಯವಾಗುತಿದೆ!

೩

ಅಲ್ಲಲ್ಲಿ ದುಡಿವ ತಜ್ಞರ ವಿಶ್ವಕರ್ಮತ್ವ
ಎಲ್ಲ ಅರ್ಥಗಳಿಂದ ಸಾರ್ಥಕವಲಾ!
ಬಿಲ್ಲು ಬಾಣದ ಕಾಲವಲ್ಲ–ವಿಜ್ಞಾನಾಸ್ತ್ರ
ಎಲ್ಲವನು ತರಿಸಿಕೊಡಲೆದ್ದಿದೆಯಲಾ!

ನವಭಾರತದ ಎರಡನೆಯ ವಿಭೂತಿಯ ಯೋಗ
ನವ ಪಾರ್ಥರೆದುರಿಂದು ಮೂಡಿ ನಿಲಲು,
ಹವೆಯೆ ಹೊಸದೆನಿಸುತಿದೆ ಕವಿರಚನೆವೋಲ್ ನವೋ–
ನವ ರಚನೆಗಳ ಯೋಜನೆಗಳೇಳಲು!

೪

ಮಯಮಂಟಪಗಳೇನೊ ಮಾಯಾಬಜಾರದ
ನಯನಮೋಹನ ಮನೆಸಾಲೋ–
ಎನುವಂತೆ ಶ್ರಮಿಕರ ಬೇಡಿಕೆಗಳ ನೋಟ
ತಣಿಸುಗು ಕಣ್ಣನಲ್ಲಲ್ಲಿ!
ನಿನ್ನೆ ಮಸಣವೆನಿಸಿದ್ದ ಜಾಗದೊಳಿಂದು
ಬಣ್ಣ ಬಣ್ಣದ ಕಟ್ಟಡಗಳು
ಪನ್ನತಿಕೆಯ ಸಾರಲೇಳೆ ಭಾರತದಾಳ
ಮುನ್ನಡೆಗಲೆಗೆಣೆಯುಂಟೇ?
ಮರುನೆಲ ಸಿರಿನೆಲ ಮರುದಿನ ! ಅಕ್ಷರ–
ವರಿಯದ ಗಾವಿಲ 'ಹಾಹಾ'
ಎನುವಷ್ಟರಲಿ ಸುಶಿಕ್ಷಿತನಾಗಿ ನಿಲ್ಲುವ
ಪರಿಯ ಕಂಡೆಂಬರು 'ವಹವಾ!'

೫

ನಗರ–ನಗರದಲಿ ಕಲಿತ ಕುವರಿಯರ
ಸತ್ಯಕಾಮ ಹೆಚ್ಚಿ
ಜಗಳ ಬಾಳು ನಿರ್ನಾಮವಾದ ಮಂ–
ಗಲದ ಮನೆಯ ಮೆಚ್ಚಿ
ಸೊಗವನುಂಬ ರಸರಸಿಕರತ್ನಗಳ
ರಾಗರುಚಿಗಳಿಂದ
ಜಗದ ಜೀವನೋತ್ಸಾಹ ಬೆಳೆಯುತಿದೆ
ಪುರುಷಕಾರದಿಂದ!
ಬಾಯ ಬ್ರಹ್ಮದಲಿ ಬರಡುಗತೆಗಳಲಿ
ವೇಳೆಗಳೆವ ಕುರುಡು
ಮಾಯವಾಗುತಿದೆ, ವೀರ ಲೌಕಿಕತೆ–
ಯಿಂದ ನಡೆವ ಹುರುಡು

ನ್ಯಾಯವಾಗಿ ಪಸರಿಸಲು ತೊಡಗಿ ವಿಧಿ–
ವಾದ–ದಾಸ್ಯ ದುಃಖ
ಹೇಯವಾಯ್ತು ಸುವಿಚಾರ ಪಕ್ಷಿಗಿದೊ
ಮೂಡಿ ಬರಲು ಪಕ್ಕ!
ಹುರುಳು ಹೋದ ಮಡಿ–ಮಾಂದ್ಯ ಮಾಡುವಾ
ಚಾರ ಭಗ್ನವಾಗಿ
ತಿರುಳನೋದಿ ಬಂದಂಥ ತಿಳಿವು ಪ್ರೇ
ಮಕ್ಕೆ ಲಗ್ನವಾಗಿ;
ಮರುಳುತನದ ಹಿಂಸಾಪ್ರಕಾರಗಳು
ಕಡಿಮೆಯಾಗುತಿಹವು
ಕರುಳು ಕರುಣೆಯಲ್ಲಿರುವ ದಿವ್ಯತೆಯ
ಕಂಡು ಹೀರಿಕೊಳಲು!
ಐಕ್ಯಭಾವನೆಯನುಂಡ ಜೀವಿಯಾ
ನಂದವಾಯ್ತು ಚೆಂದ
ಶಾಕ್ಯಕುಲಜನಾದರ್ಶ ಪೂಜ್ಯವಾ–
ಯ್ತವನ ನೀತಿಬಂಧ
ಲೋಕಲೋಚನವ ತೆರೆಯಿಸುತಿದೆ; ಸತ್
ಸಾಮ್ಯವಾದದಿಂದ
ಮೂಕಕೋಟಿಯುದ್ಧಾರ ಸಾಗುತಿದೆ
ವಾಯುವೇಗದಿಂದ!
ತರುಣ ತರುಣಿಯರ ತುಂಬುಮೊಗದ ತಾ–
ವರೆಯ ದಳಗಳಲ್ಲಿ
ಬರೆವೆನೆಂದು ಆ ಬ್ರಹ್ಮ ‘ನಿಮ್ಮ ಭವಿ–
ತವ್ಯ ಯತ್ನದಲ್ಲಿ
ಇರುವುದಯ್ಯ; ಮಣಿಮಾಲೆಯೆಣಿಸುವೊಣ
ಜಪದ ಜಾಡ ಹಿಡಿದು
ತಿರಿವ ಕವಡಿಗೆಡೆಯಿಲ್ಲ ದ್ಯೂತ ಮ–
ದ್ಯಪ್ರಭಾವ ಪಡೆದು!

ಹೊಸಬನಿಂದು ರವಿ, ಹೊಸಬನಿಂದು ಕವಿ
ಹೊಸತು ಕನಸು–ನನಸು.
ಹೊಸತು ಧೈರ್ಯ, ಮಾಳ್ಪಂಥ ಕಾರ್ಯ ಹೊಸ–
ತುಂಬ ತುಂಬು–ಮನಸು;
ಹೊಸತು ಹಬ್ಬ, ಹೊಸ ಹೊಸತು ಮೈಯ ಮೇ–
ಲಂಗಿ ಚುಕ್ಕೆ ಚುಕ್ಕೆ
ಮಿಸುನಿಗಾಲ, ಸ್ವಾತಂತ್ರ್ಯಲೋಲ ಜನ
ಎಂದು ನಾನು ನಕ್ಕೆ!

ವಿಜ್ಞಾನಪ್ರಜ್ಞೆ

೧

ಹುಚ್ಚುಹುಡುಗ ಕಟ್ಟುತಿರುವ
ಬಟ್ಟೆಗಂಟನೊಮ್ಮೆ
ಮತ್ತೆ ಬಿಚ್ಚಿ ಮನೆಯಲೆಲ್ಲ
ಹರಡುತಿರುವ ಹೆಮ್ಮೆ
ಅಪ್ಪ ಗಳಿಕೆಯುಳಿಸೆ ಹೊಟ್ಟೆ
ಕಾಸಿ ಕಾಸಿ ಕಾಸಿ
ತಿಪ್ಪೆಗೆಲ್ಲ ಚೆಲ್ಲಿ ಮೆರೆದ–
ನದನು ಮಗ ವಿಲಾಸಿ
ಬಾಯಿ ತೆರೆದು ಮುಚ್ಚುವುದೇ
ನಾಯಿಗಾಯ್ತು ಡ್ಯೂಟಿ
ಸಾಯಿಸುವುದು ಹುಟ್ಟಿಸುವುದು
ಯಮನದೊಂದೆ ಧಾಟಿ
ತುಂಬಿ ಸುರಿದು ತುಂಬಿ ಸುರಿದು
ಆಡುತಿಹುದು ಮಗು
ನಂಬಿ ಮತ್ತೆ ಅಲ್ಲಗಳೆದು
ಮಾಡುತಿಹುದು ಲಗು
ನಡೆದು ನಿಂತು ನಿಂತು ನಡೆದು
ಸಾಗುತಿಹುದು ಕಾಲ
ಒಡೆದು ಬೆಸೆದು ಕಾಲ ಹಾಕು–
ತಿಹನು ಭಾಂಡಿವಾಲ
ಮುಚ್ಚಿ ತೆರೆದು ಕಂಗಳನ್ನು
ಮಾಡುತಿದ್ದು ಸನ್ನೆ
ಮೆಚ್ಚಿ ಮರೆತು ಚುಚ್ಚಿ ಬೆರೆತು
ನಡೆವಳು ಮನದನ್ನೆ

ಬಿದ್ದು ಎದ್ದು ಹೆಳವ ತನ್ನ
ದಾರಿಯಳೆವ ಹಾಗೆ
ಮುದ್ದುಕೊಟ್ಟು ಗುದ್ದು ಹಾಕಿ
ಸಾಕುವ ತಾಯಾಗೆ
ಅಪ್ಪಿ ಬಿಟ್ಟು ಒದೆದು ನಮ–
ಸ್ಕರಿಸುತಿರುವ ಪ್ರಿಯ
ತಪ್ಪು ಸರಿಗಳನ್ನು ಅಳೆದು
ಸಮೀಕರಿಪ ನಯ!

೨

ಅರಿಯುವುದು ಮರೆಯುವುದು
ಕಾಲಕಾಲಕೆ ತನ್ನ
ತಿರುಗಾಟವನು ತಿರುಗಿ
ಸುವುದು ಹುಳು ಬಲೆಯಲ್ಲಿ!
ಪ್ರೋಟಾನ ಸುತ್ತುತಿವೆ
ಬಹು ಇಲೆಕ್ಟ್ರಾನುಗಳು
ಆ ಅಣು ಮಹಾರೇಣು–
ವಿನ ಸುತ್ತುವರಿಯುತಿದೆ!
ಚಂದ್ರ ಬಲವರುತಿರುವ
ಬುವಿಗೆ, ಬುವಿ ಸೋದರರ
ಮಂಡಲದೆ ರವಿಯನೋ–
ಲೈಸುತಿದೆ ಪರಿವರಿದು;
ರವಿ ಸಪರಿವಾರ ಪ್ರ–
ದಕ್ಷಿಣೆಯ ಮಾಡುತಿಹ–
ನಾವನೋ ಮತ್ತೊಬ್ಬ
ಹೆಬ್ಬೆಂಗದಿರನನ್ನು
ಇಲ್ಲವೆ ಮಹಾತಾರೆ
ಯನ್ನು ಅಥವಾ ನೆಬುಲ–
ವನ್ನದಿನ್ನಾವುದನೊ!
ಹೀಗೆ ವಿಶ್ವದ ಕೇಂದ್ರ–
ವಾದಪ್ರಮೇಯ ಪ್ರೋ–

ಟಾನು ಸ್ವಕ್ರಿಯೆ ನಿಷ್ಕ್ರಿ–
ಯೆಗಳಿಂದ ತೋರಿಸುವು–
ದಡಗಿಸುವುದಾ ಮೇಲೆ–
ಇಂದ್ರಿಯ ಮನೋಗ್ರಾಹ್ಯ
ಸೃಷ್ಟಿಸರ್ವಸ್ವವನು!
ಮೇಟಿಗಂಬದ ಸುತ್ತ
ಮೊಟಿ ತಿರುಗುವ ಸೃಷ್ಟಿ–
ಯೋಟ ದುಷ್ಕಲ್ಪನೀ–
ಯ, ಜಡಪ್ರವಾಹದಲಿ;
ಮೊಟುಗಂಬವು ಮೇಟಿ
ಚೈತನ್ಯ ಸಾಂದ್ರತೆಯ
ಮಾಟ ಕಾರ್ಯಬ್ರಹ್ಮ–
ರೂಪದುದ್ಯದ್ಬಿಂಬ!
ಆಕುಂಚನ–ಪ್ರಸಾ
ರಣ ವಿದ್ಯೆಯಿಂದನಿಶ
ಜಡ–ಜೀವಶಕ್ತಿಗಳ
ಹಿಡಿಯುತಿದೆ ಬಿಡುತಲಿದೆ
ಬೆಳಕು ತಿಳಿವುಗಳಾಗಿ–
ಹಿಡಿದಾಗ ಕತ್ತಲ–
ಜ್ಞಾನದಶೆಗಳು ಲಯದ
ಕಡಲಾಗಿ ತಾಟಸ್ಥ್ಯ–
ವಡೆಯುವವು ಕೆಲಕಾಲ!

೩

ಮನುಜ–ಮಾನದ ಕಾಲ
ಬೆಳಕು–ಮಾನದ ಕಾಲ
ಅದಕು ಹೆಚ್ಚಿನ ಗುಣಿತ
ಚೈತನ್ಯದಳೆಗಾಲ
ಬ್ರಹ್ಮಾರ್ಧದಿನ, ಅವನ
ಹಗಲು; ಸೃಷ್ಟಿಸ್ಥಿತಿಗ–
ಳುಣ್ಮುವೀ ವಿಶ್ವಜೀ–
ವಿತ ಕಾಲಮಾನವಲ

೪

ಅಣುರೇಣು ಭೂಗ್ರಹಗ–
ಳಿರುವ ಸೌರವ್ಯೂಹ–
ಗಳ ತುಂಬಿಕೊಂಡಿರುವ
ದಿಗ್ವಲಯದಾಯತಿಯ–
ನಳೆದನಾವನು? ಅದರೊ
ಳಲೆವ ವಸ್ತುಪ್ರಕರ
ಬಹುವಾಗಿ ತೋರಲವ–
ಕಾಶದ ವ್ಯಾಪಕತೆ
ಪರಿಮಿತಿಗಳನ್ನೊಡ್ಡಿ
ಖಂಡಿಸಿಹುದೇ ಬೀಜ!
ಅದರಿಂದ ನಾವೆಲ್ಲ
ಖಂಡಿತರಹಂಖಂಡ–
ಗಳು ಮಮ–ಪ್ರಾಪರ್ಟಿ
ಗಳ ನಡುವೆ ಕೆಲಕಾಲ
ಕುಳಿತಿರುವ ತತ್ಕಾಲ–
ಮೇಯ ಪ್ರೋಟಾನುಗಳು,
ಟೆಂಪೊರರಿ ಮರಿ–ಕಾರ್ಯ
ಬ್ರಹ್ಮಗಳು ಹಮ್ಮುಗಳು–
ದೊಡ್ಡಹಮ್ಮಿನ ಚೂರು
ಗಳು ಸಣ್ಣ ಹಮ್ಮುಗಳು;
ವಿಶ್ವಸಿಂಧುವಿನಲ್ಲಿ
ನಿಂತ ಕಡೆಗೋಲಿಂದ
ಕಡೆಯಲ್ಪಡುವ ರಸದ
ಬಿಂದುಗಳು–ತಮ್ಮತನ
ವನು ತೊಟ್ಟು ವಿಹರಿಸುವ
ಚೂರು ಚೇತನವಡೆದಿ–
ಲೆಕ್ಟ್ರಾನುಗಳು ನೋಡೆ!
ಜಡ–ಜೀವ ಭಾಗಗಳ

ಮಾಲಿಕ್ಯೂಲುಗಳಾದ
ಪಾಂಚ ಭೌತಿಕ ಪಿಂಡ–
ಗಳು ಕರ್ತೃತಾಂಶಗಳ
ಹಿಡಿದು ಭೋಗಾಂಶಗಳ
ಬೆಂಬತ್ತಿ ತಿರುಗುವವು–
ಹೆಚ್ಚು ಸಾಂದ್ರತೆಯುಳ್ಳ
ಪರಮಾಣುಪುಂಜಗಳು
ಕಡಿಮೆ ಸಾಂದ್ರತೆಯುಳ್ಳ
ವುಗಳ ಗೌಣತೆಗಿಳಿಸಿ
ಇಟ್ಟುಕೊಂಬವು ತಮ್ಮ
ಸನಿಹದಲಿ ಕೆಲ ಕಾಲ
ಮುಟ್ಟಬರದನಕ ಸಾಂ–
ದ್ರತರ ಪ್ರಭಾವಿಕಣ!

೫

ದೊಡ್ಡ ಮೇಟಿಯ ಜೇಡ
ಅವಕಾಶ ಜಾಲವನು
ಒಳಗೆಳೆದುಕೊಂಡೊಡನೆ
ಬ್ರಹ್ಮನರೆಯಿರುಳಕ್ಕು;
ಅವನ ಗರ್ಭವ ಹೊಕ್ಕು
ವಿಶ್ವ ವಿಶ್ವತ್ವವನು
ಕಳೆದುಕೊಂಬುದು–ಎಲ್ಲ
ಶೂನ್ಯ ಮಾನಸಗತಿಗೆ!
ಕೇಂದ್ರ ಸರಕಾರದಾ–
ಳಿಕೆ ಬಾರದೇ–ರಾಜ್ಯ
ಗಳ ಸಚಿವಮಂಡಲಗಳಕ್ಷಮತೆ
ಗಿಳಿದಲ್ಲಿ?

೬

ಕೇಂದ್ರೀಕರಣ ಪ್ರಲಯ,
ವಿಶ್ವದಲ್ಪಾವಧಿಯ
ಮೋಕ್ಷ, ಬ್ರಹ್ಮನ ಭುಕ್ತಿ;
ಸೃಷ್ಟಿಯೊ ವಿಕೇಂದ್ರದಶೆ!
ಈ ಉಗುಳಿ ನುಂಗುವ–
ದ್ಭುತಲೀಲೆಯಲ್ಲಹಂ–
ಭಾವ ತಾಳದೆ ನಿಲುವ
ಜೀವಶಕ್ತಿಯ ಪಿಂಡ
ಯೋಗಿಯಾಗುಳಿಯುವುದು;
ಹೋಹುದೆತ್ತಲೊ ಚೆದರಿ
ಇಮ್ಮೊಗದ ಭೋಗದಲಿ
ಸಿಲುಕಿ ತನ್ನತನಕ್ಕೆ
ಹೆಮ್ಮೆ ಪಡುತಿಹ ಪಿಂಡ
ಪ್ರತ್ಯೇಕತಾಖಡ್ಗ–
ಖಂಡನೆಗೆ ತುತ್ತಾಗಿ,
ಸಂಭವದ ಯಂತ್ರದಲಿ
ಹೊಕ್ಕು ಹೊರಡುತ ದುಃಖ
ಸುಖ–ಶೂರ್ಪ ಗೇರುವುದ–
ಕಾಳಾಗಿ ಬಹುಕಾಲ!
ಪುನರುದಯ ಪುನರಸ್ತ
ಪುನರಾಯ–ವೆಚ್ಚಗಳು
ಸಮಶಾಂತಿಗೆಡಿಸುವುವು
ವಿಷಮತೆಯನೂಡಿಪವು!

೭

ನಿರ್ದುಃಖ ಸುಖರಾಜ್ಯ
ಸಾಮ್ಯವೇ ಸಾಯುಜ್ಯ;
ಮೇಟಿಯುದರವ ಮತ್ತೆ
ಹೊಕ್ಕಿರುವ ಭೈಷಜ್ಯ;

ಪರಿಮಿತಿಗಳನು ಮರೆತು
ಕುಡಿವುದಾನಂದಾಜ್ಯ!
ಐಕ್ಯವಮೃತವನೈಕ್ಯ
ವಿಷವೆಂಬುದೇ ಮಹಾ–

ವಾಕ್ಯ; ಅದಕಿಹ ಅರ್ಥ–
ಶಕ್ತಿ ಮಿಕ್ಕುದಕುಂಟೆ?
ಅದೆ ಪೂರ್ಣತಾಸಿದ್ಧಿ;
ಅದರಲ್ಲಿ ಬೆರೆತಾಗ–
ಕುಳಿತೆ ತಿರುಗಾಡುವೆವು
ಮಾತಾಡದೆಯೆ ಅಭಿ–
ಪ್ರಾಯಗಳ ತಿಳಿಸುವೆವು
ತಿನ್ನದೆಯೆ ಬದುಕುವೆವು!
ಮಾಡದೆಯೆ ನೋಡುವೆವು
ನೀವುತನದೊಡಕಳಿದು
ನಾವೆ ನೀವಾಗುವೆವು!
ಮೇರು ಮಂದರವೆ ಮುಂ–
ತಾದ ಕುಲನಗಗಳಾ–
ವಾಗಿ ಕುಳಿತೊಂದನಿ–
ನ್ನೊಂದೇರಿ ಹದಿನಾಲ್ಕು
ಲೋಕಗಳನಳೆಯುವೆವು
ಏಕಭಾವಿತರಾಗಿ!
ಗಗನವಿಡಿ ಸೂರ್ಯಕುಲ–
ಮಯವಾಗೆ ನಾವದರ
ಬೆಳಕಾಗಿ ಬೆಳಗುವೆವು
ಲೋಕಸಾಕ್ಷಿಗಳಾಗಿ!

ಒಲವಿನಂಬುಧಿಯಾಗಿ
ಅಕಾಶಪಾತಾಳ–
ಗಳ ದಡಗಳಪ್ಪುವೆವು
ತೆರೆಗೈಗಳನು ಚಾಚಿ!

ನಗ–ನಾಗ–ನೀಕಾಶ
ವಿಗಡ ಮೇಘಾವಳಿಯ
ನಗುವ ಕಣ್ಮಿಂಚಾಗಿ
ಕರುಣಾಂಬುಧಾರೆಗಳ
ಜಗದ ಸುಜನರಿಗಾಗಿ
ಸುರಿಸುವೆವು ಹರಸುವೆವು!
ಕುಂದ ಪರಿಮಳವಾಗಿ
ಚಂದ್ರಚಾರುತೆಯಾಗಿ
ಚಂದನದ ತಂಪಾಗಿ
ಮಂದಾನಿಲನನೇರಿ
ಕಂದ ಮನಗಳ ಕರೆದು
ಮುದ್ದಿಡುವೆವೆದೆಯೆರೆದು!

ಅಗ್ನಿಪಾವಕರಾಗಿ
ನಗ್ನನನ್ನಿಗಳಾಗಿ
ದಿಗ್ದೇಶಗಳ ಮೀರಿ
ಋಗ್ರೂಪಗಳ ತಾಳಿ
ಯಜ್ಞ ಹೃದಯಕೆ ಸೊದೆಯ
ಹಾಡುವೆವು ಆಡುವೆವು!

ಶಿವಪ್ರಜ್ಞೆ

ಒಂದು ೧

ಮಂಗಲದಂಗಳ ತಣಿಸುಗು ಕಂಗಳ
ತಿರುಗಿ ದಣಿದ ತಿರುಪಾಡಿಗಳ
ಹಂಗಿನ ಸೊದೆಗೂಳರಗದೆ ಸೊರಗಿದ
ದುಃಖದ ಸಾರಿಗೆ ಗಾಡಿಗಳ
ಇಪ್ಪತ್ತನೆ ಶತಮಾನದ ಭಾರತ
ಅಪ್ಪಿದ ಮುದ್ದು ಕುಮಾರಿಯರ
ತಪ್ಪಿನ ಉಪ್ಪುಂಡಭಯವ ಕಾಣದೆ
ದಿಕ್ಕೆಟ್ಟ ದಿವಾಸ್ವಪ್ನಗಳ!

೨

ಮಧುಮಾಸದ ಮುಗುಳ್ನಗೆ ಬಗೆಗೊಳಿಸದ
ಸೊದೆಗರ ಸೂಸುವ ತಂಬೆಳರ
ಮಧುರುಚಿ ಕೂಡಾ ಸೇರದ, ಗಿಳಿವಿಂ–
ಡೊದರುವುದೆಂದೆದ್ದೋಡುವರ
ಹುದುಳವನೆಲ್ಲೂ ದೊರಕಿಸಲಾಗದೆ
ಹದಗೆಟ್ಟೆದೆಯನು ಹೊತ್ತಿರುವ
ವಿಧುರಮನರನಾಕರ್ಷಿಸಿ ಹರ್ಷಿಸಿ
ಪದೆಪುಗೊಳಿಪುದೀ ದಿವ್ಯ ತಳ!

೩

ಸಿರಿ ಬನದೇವಿಯ ಸೊಕ್ಕಿನ ಬೊಕ್ಕಸ
ಕಟ್ಟಿಸಿದಂಥ ಬಜಾರಗಳ
ತೆರಪಿಲ್ಲದೆ ತಿರುಗಿದರೂ ಶಾಂತಿಯ
ತೊಟ್ಟೊಂದೂ ಸಿಗದಾಗಿರುವ

ಒಣಗಿದ ಕಣ್ಮನ ಕರುಳೆದೆ ಮೊಗಗಳ
    ತುಂಬಿದ ಇಗ್ಗಾಲ್ ಚೀಲಗಳ
ಕಣಿ ಹೇಳುವ ಅನುಕಂಪದ ಪೆಂಪಿನ
    ತವರೆಲರಾಡುವ ತೀರ್ಥವಲಾ!

೪

ಸುತ್ತಿದ ಬೆಟ್ಟದ ಹಲಗೆಯ ತಲದಲಿ
    ಹಾಸಿದ ಹಸಿರ್ವೂದೋಟಗಳ
ಮೆತ್ತೆಯ ಮೆಟ್ಟಿದ ಹಾದಿಗ ಮಗುವಿಗೆ
    ತೊಟ್ಟಿಲ ಜೋಗುಳ ಹಾಡುವಳು
ಹತ್ತಿರ ಹರಿಯುವ ನೇತ್ರೋತ್ಸವಕರ
    ನೇತ್ರಾವತಿ ನಿಷ್ಪಾಪಮತಿ
ಕರ್ತಾರನ ಕೈಂಕರ್ಯವ ವಹಿಸಿದ
    ಕಾರುಣ್ಯಾಮೃತಸಾರವತಿ!

೫

ಧನದೌಲತ್ತಿನ ವೀಚಿಯ ರೋಚಿಯ
    ಮಿಂಚಿಸಿ ಮೆರೆವ ಮದಾಲಸರ
ಕನಕಾಡಂಬರಕಾಗಿಯೆ ದುಡಿದುಡಿ–
    ದನ್ನಿಸಿಕೊಂಡ ಸುಮಾನಸರ
ಗಣಿಗಿಚ್ಚಿನ ದಳ್ಳುರಿನಂಜಾರಿಸ–
    ಲಣಿಯಾದಗದದ ಪೆಟ್ಟಿಗೆಯೋ
ಎನೆ ಕಣ್ಗೆಳೆವುದು ಕಾಡಿನ ಕಮ್ಮೆದೆ
    ಹಾಡಿ ಹಡೆದ ಹೆಬ್ಬೊತ್ತಿಗೆ ಹೋ!

೬

ಅಷ್ಟಮದಾನ್ವಿತ ದುಷ್ಟರ ಸೇವಿಸಿ
    ಹೊಟ್ಟೆ ಹೊರೆದುಕೊಳಬೇಕಾಗಿ
ಪಟ್ಟ ಪಾಡುಗಳ ಹಾಡಲು ಕೂಡಾ
    ಅಪ್ಪಣೆ ಪಡಕೊಳಬೇಕಾಗಿ
ಅಟ್ಟುಳಿವಟ್ಟನುದಿನ ಬದುಕಿದ್ದೂ
    ಸತ್ತಾಮಾತ್ರ ಶರೀರದಲಿ

ತುಟ್ಟಿಯೆನಿಸೆ ಸಂತುಷ್ಟಿ ಕರೆವುದೀ
ತಾಯ್ನೆಲ ತುಂಬೆದೆಯೊಲವಿನಲಿ!

೭

ಸತ್ವರಜಸ್ತಮ ಕಾಣದ ಕೇಳದ
ಪುಣ್ಯಪಯೋನಿಧಿಯಿಂದೊಗೆದ
ನಿತ್ಯಾನಂದದುಪತ್ಯಕೆಯಲ್ಲಿಹ–
ರಾರೆಂಬೆಯ ಮಗು ನರಪುರದ
ಕೃತ್ಯಾಕೃತ್ಯಾತೀತ ಪರಾತ್ಪರ
ಧರ್ಮಧ್ವಜ ದೌರಾತ್ಮ್ಯಹರ
ಸತ್ಯೋದ್ಧಾರ ಪರಾಕ್ರಮ ಭವಭಯ–
ಭಂಜನ ಮಂಜುಕಲಾಚತುರ!

೮

ಸರ್ವಾಧಾರ ಸಮಸ್ತ ಸದಾಗತಿ
ಸರ್ವೇಶ್ವರ ಸತ್ಯಗ್ರಂಥ
ಸತ್ಯದುರಂಧರ ಸರ್ವಾದ್ಯಂತ ವಿ–
ಗುರ್ವಿಪ ಮಧ್ಯಮಗತಿಯಂತ
ಉರ್ವೀಜೋತ್ತಮ ಚೇತನ ಪಾಲಕ
ಗರ್ವಾವಿಲ ದಂಡನದಕ್ಷ
ಸರ್ವಾರಾಧ್ಯ ಮಹಾಬಲ ಮಂಜು ಮ–
ಹಾಲಿಂಗೇಶ್ವರ ಸತ್ಪಕ್ಷ!

ಎರಡು ೧

ಬಸ್ಸುರೈಲು ವಿಮಾನವೇಗ ಪ್ರವಾಸಯುಗ
ರಷ್ಟು ನರನಾಡಿಗಳ ಹೊಕ್ಕು ತಿಂಬ
ದುಃಶಾಸನಕಾಲವಿದು ದುರ್ಮರಣಶೀಲವಿದು,
ವಿಶ್ವಾಸ ನಿಃಶ್ವಾಸ ಬಿಡುಗು ಹುಂಬ;
ಕಾಳಕೂಟ ಕಷಾಯದಲ್ಲಿ ಹಾಲೆರೆದುಂಬ
ಆಳುಬಾಳಿನ ಅರಸು–ಷೋಕಿ ಬೇಕೆ?

ಬಾಳಿನಾಳವ ಕಂಡು ಸಾಕ್ಷಿತ್ವದಲಿ ನಿಲುವ
ದಾಳಿಗಂಜದ ಧರ್ಮರಾಜ್ಯ ಬೇಕೇ?

೨

ಗಳಿಗಳಿಗೆಗೂ ಹೆಚ್ಚಿ ದಿಗ್ದೆಸೆಯನಾವರಿಸಿ
ಗಳಿಕೆ ಸಾಲದೆ ಅಬಲ ಜೀವಕುಲದ
ಗಳಕಂದಳವನವುಕಿ ಕೊಂದು ಕಾಡುವ ಜನದ
ಥಳಕು–ಕಣ್ ಕೋರಯಿಸುತಿಹುದು ಛಲದ;
ಗಳಿಗೆಗೊಂದರ್ಥ ಕಾಯಿದೆಗೆ ಕೈಬಲದಂತೆ
ತಿಳಿಸಿ ಹೇಳುವ ತಜ್ಞ ಲೋಕ ಬೇಕೇ?
ಮಳಲಲ್ಲಿ ಮಣ್ಣಲ್ಲಿ ಮನವಾರೆ ಕೃಷಿಗೈದು
ಗಳಿಸಿ ಹಂಚುವ ದಿವ್ಯರಾಜ್ಯ ಬೇಕೇ?

೩

ಅಜ್ಞ ಜನಗಳ ತೆಗೆದು ಯಜ್ಞಕಾಹುತಿ ಕೊಟ್ಟು
ಸುಜ್ಞಾನ ಹೇಳಿ ದುರ್ಜ್ಞಾನ ಮಾಡಿ
ಬೊಜ್ಜದೂಟವ ಸಮಾರಾಧನೆ ಷಡ್ರಸದ
ಕಜ್ಜಾಯದೂಟವೆಂದೆತ್ತಿ ಹಾಡಿ
ಅಜ್ಜನಾಗರಿಕತೆಯ ಅಂತ್ಯವಿಧಿಯಾಯ್ತೆಂದ
ಬೊಜ್ಜನಳಗುತ ಬರುವ ಭಾಗ್ಯ ಬೇಕೇ?

೪

ಮಜ್ಜಿಗೆಯನುಂಡು ಮಂದಿಗೆ ಮೊಸರ ಬಡಿಸಬಹ
ವಿಜ್ಞಾನಯೋಗ ಸೌಭಾಗ್ಯ ಬೇಕೆ?
ಕೃಮಿಗಿಂತ ಕೃಮಿಯಾಗಿ ಅಂತರಂಗದಿ, ಹೊರಗೆ
ಭ್ರಮೆಯ ಹುಟ್ಟಿಸಿ ದಿವ್ಯ ಸನ್ಯಾಸದ
ಯಮರೂಪಿಗಳು ಬುದ್ಧ ಸಂದೇಶವನು ಸಾರಿ
ಸಮೆದು ಸಂಸ್ಕೃತಿಯನ್ನು ಶವಹಾಸದ
ಚಿಮುಕಿಸುವ ನಾಗರಿಕ ಪನ್ನೀರ ಹನಿಗಾಗಿ
ಬೆಮರಿ ಕಾಯುವ ರೊಕ್ಕರಂಗು ಬೇಕೇ?
ಶ್ರಮಧನದ ಕರ್ಮವೀರರು ಸರ್ವಹಿತಕಾಗಿ
ಕ್ರಮಗಜ್ಜಗೈವ ಕೈವಲ್ಯ ಬೇಕೇ?

೫

ವೃಷ್ಟಿದೃಷ್ಟಿಯ ಧೂರ್ತಧರ್ಮವೇ ಭಾರತದ
ಕೃಷ್ಟಿಯೆಂದಾಗ್ರಹಿಸಿ ಕೂಗಿ ಕೊನೆವ
ದುಷ್ಟ ವೇದಾಂತಕರ ಮುಷ್ಟಿಗಲೆಯನು ಹೊಗಳಿ
ತುಷ್ಟರಾಗುವ ತುಂಡು ಪಂಡಿತಗಳ
ಪಟ್ಟಿನಲಿ ಸಿಕ್ಕಿ ವಿಷಕೃಮಿತನವನಾಶ್ರಯಿಸಿ
ಅಟ್ಟಹಾಸವ ನಟಿಸಿ ಬಾಳಬೇಕೆ?
ಮುಟ್ಟಿದ್ದು ಪರರಿಗೆಂದೇ ಹೆಕ್ಕಿಕೊಡುವಂಥ
ದಿಟ್ಟ ಧರ್ಮದ ಸಹಜ ತುಷ್ಟಿ ಬೇಕೆ?

೬

ಪಂಕ್ತಿ ಭೇದದ ಧರ್ಮ, ಪಂಕ್ತಿ ಭೇದದ ಅರ್ಥ
ಪಂಕ್ತಿ ಭೇದದ ಕಾಮ ಮೋಕ್ಷತಂತ್ರ;
ಪಂಕ್ತಿಪ್ರಪಂಚವೇ ಪರದೈವವಾಗಿರುವ
ರಂಕ ರಾಜ್ಯವೆ ರಾಮರಾಜ್ಯಯಂತ್ರ?
ಶಂಕಿಸುತ ನಿತ್ಯವೂ ಬಿತ್ತರಿಸಿ ಸಾತ್ವಿಕರ
ಮಂಕುಗೊಳಿಸಲು ಹೊರಟ ಹೂಟ ಬೇಕೆ?
ಪಂಕಋಣವನು ಮರೆಯದಿರುವ ಪಂಕಜವಾಗಿ
ಶಂಕೆಯಿಲ್ಲದೆ ಬಾಳ್ವ ಕೂಟ ಬೇಕೆ?

೭

ಅಧಿಕಾರದಾಸರುದ್ಧಾರ ಯೋಜನೆ ತೆರೆವ
ಅಧಿಕ ಪ್ರಸಂಗ ವಿಜ್ಞಾನವಾದ;
ಅಧಿಕಾರಮದದಿಂದ ಸರ್ವಜ್ಞತೆಯ ವಹಿಸಿ
ವಧಿಸಿ ತೇಜವ ಯೋಗ್ಯ ಬುದ್ಧಿಬಲದ,
ಅಧಮ ಪೂಜೆಗೆ ಸುಪ್ರಜೆಗಳನು ಬಲಾತ್ಕರಿಸಿ
ಗೃಧಿಸುವುದ್ಧಟರಾಳ್ವ ಸಗ್ಗ ಬೇಕೇ?
ಮೃದು ಗುಣದ ರಸವರಿತ ಸದಯ ಹೃದಯದ ನಿಷ್ಠೆ
ಸದೃಢವಾಗಿಹ ನಿಯಮದಿರ್ಕೆ ಬೇಕೇ?
ಮೋಸಕ್ಕೆ ನೂರಾರು ನೀತಿ ವರ್ಣವ ಹಚ್ಚಿ
ದಾಸ್ಯದಮನಗಳನ್ನು ಕೊಟ್ಟು ಕೊಂಡು
ಹಾಸ್ಯಾಸ್ಪದ ಸ್ಥಿತಿಯ ಗೌರವಾಸ್ಪದವೆಂದು

ಭಾಷ್ಯ ಹೇಳುತ ತಿರುಗುವವರ ದಂಡು–
ಕೋಶ ಮೂಲದ ವಾದ ಹಿಡಿದು ಭಾವನೆಗಳನು
ದೇಸಿಗತನಕ್ಕಿಳಿಸಿ ಬಾಳ ಬೇಕೇ?
ದಾಸನಾದರೆ ಜನಾಂತರ್ವಾಸಿ ಮಂಜುನಾ–
ಥೇಶನಲ್ಲಾಗುವುದು ವಾಸಿಯಲ್ತೆ?

ಮೂರು ೧

ಮಲೆಯ ನಾಡಿನಲಿ ಮಳೆಯ ಹಾಗೆ ಮೈ
    ಬೆವರು ಹರಿಸಿ ಬೆಳೆವ
ಬೆಳೆಯ ಬಯಲು ಸೀಮೆಯಲಿ ಬೆಳೆದ ಮೈ
    ಬೆಟ್ಟವನ್ನು ಕೊಳುವ
ಗಳಿಕೆಗಿಳಿವ ಮೈಗಜ್ಜ ಕಟ್ಟಿಡುವ
    ಕಟ್ಟಡಗಳ ಚೆಲುವ
ಬಳಕೆಯಿಂದ ಹೆಚ್ಚಾಗಿ ಹೊಗಳದಿಹ
    ರಷ್ಟೆ ತಮ್ಮ ಬಲವ!

೨

ಕಲ್ಲುಗೋಡೆ ಬರಿ ಮೇಜು ಕುರ್ಚಿಗಳ
    ಕಟ್ಟಡಂಗಳಲ್ಲ!
ಹುಲ್ಲಿನಂತೆ ಹಾಲ್ಮೊಸರುಗೂಳು ಮೆ–
    ದ್ದವರ ದೊಡ್ಡಿಯಲ್ಲ!
ಚೆಲ್ಲಿ ಕಂಡವರ ರಕ್ತವನ್ನು ಕ–
    ಟ್ಟಿಹರೆ ಕೋಟೆಗಬ್ಬ!
ಬಲ್ಲತನದಿ ಬೆವರಿಳಿಸಿ ಹೃದಯಗಳ
    ಕೂಡಿಸಿಟ್ಟ ಹಬ್ಬ!

೩

ಹಾಡುವವರೆ ಹೆಚ್ಚಾದ ಬಾಳಿನಾ
    ಪಾಡು ಬೇಡ ಬೇಡ
ಹಾಡುವಂತೆ ಬಾಳುವರ ಸಂಖ್ಯೆ ಹೆ–

ಚ್ಚೆಲ್ಲೊ ಅಲ್ಲೆ ಮೋಡ
ಹಾಡದಿರದು ತಾ ಹೇಮವೃಷ್ಟಿಯನು
ನೆಲವ ಕಲೆಯ ಮಾಡಿ
ನೋಡದಿರನು ಆ ಜಗಚ್ಚಕ್ಷು ಬೆಳ–
ಗಿಗೂ ಮುಂಚೆ ಮೂಡಿ!

೪

ಎರಕ ಬೆರಕೆ ಗೆಳೆತನದ ಗೀಳು ಪರ
ಹಿತದ ಪುಣ್ಯಭಾವ
ಮರಕೆ ಮರಕೆ ಮೂಡಿತ್ತೊ ಎಂಬವೊಲು
ತುಂಬಿ ಬೆಳೆದ ಜೀವ
ಹರಕೆ ಹೊತ್ತೊಡನೆ ಹಣ್ಣುಕಾಯಿಗಳ
ಹೇರಿ ಬಗ್ಗಿ ತೋರ್ಪ
ಮರವೆ ಕೈಮರವು ಮಂಜುರಾಷ್ಟ್ರದಲಿ
ಹೃದಯರಾಜ್ಯದಾರ್ಪ!

೫

ವರ್ಣಭೇದ, ಮತಿಭೇದ, ಮಾತು–ಮೈ–
ವಸ್ತ್ರ–ಪದವಿ ಭೇದ
ಸಣ್ಣತನದ ದೊಡ್ಡಹಂಕಾರಗಳ
ಬೆಳಸದಿರುವ ಮೋದ
ಎಲ್ಲಿ ಸಿಕ್ಕುವುದು ಬೆಲೆಯ ತೆತ್ತರೂ
ಬುದ್ಧಿಯಾಳ್ಕೆಯಲ್ಲಿ?
ಚೆಲ್ಲಿ ಹರಿಗು ಆ ಬುದ್ಧಿ ಸುಹೃದಯದ
ದಾಸ್ಯ ವಹಿಸಿದಲ್ಲಿ!

೬

ವರವ ಕೊಡುವ ದೇವತೆಗಳೆಂದು ಬಹ–
ರೆಂದು ಕಾದು ಕುಳಿತ
ಗೊರವರಿಲ್ಲ, ವರ ಕೇಳುವಂಥ ದುರ್
ದಶೆಯ ಬಾಳಿನಿಳಿತ
ಬರದೆ ಇರುವವರ ಕೇಳಿ ಪಡೆದ ಹನು–
ಮಂತ–ಜನರ ಕಂಡು

ಬಿರಿಯದಾವನೆದೆ ಹೆಮ್ಮೆಯಿಂದ ಬರಿ
    ಹರ್ಷದಮೃತವುಂಡು!

೭

ಒಂದೊ ಹತ್ತೊ ಹಿರಿಯಾತ್ಮಗಳನು ಹಡೆ
    ದಂಥ ನಾಡು ನಾಡೇ?
ಒಂದಕೆರಡು ದಶಲಕ್ಷ ಕುನ್ನಿಗಳ
    ತುಂಬಿಕೊಂಡು ನೋಡೆ?
ಕುಳ್ಳರೊಟ್ಟು ಕೂಡಿದರೆ ಅಡಿಕೆ ಮರ–
    ವಾಗಿ ನಿಲ್ಲಲಕ್ಕೆ?
ಎಲ್ಲ ಮಾಮರಗಳಿರಲು ಎತ್ತರದ
    ಜೊಳ್ಳು ಜಂಭ ಬೇಕೆ?
ಬಿಳಿಯ ಬಟ್ಟೆಯಲಿ ಕರಿಯ ಭಾವ ಸಂ–
    ಚರಿಸುತಿರುವ ನಾಡು
ಕಲೆಯ ಹೆಸರಿನಲಿ ಬೆಲೆಯ ವಸ್ತುಗಳ
    ಮಾರಲಿಟ್ಟ ಬೀಡು
ತಲೆಯ ಹೊತ್ತು ಸಹ ಕಪಟ ಗೌರವಕೆ
    ಮಣಿವ ಜನರ ಬಾಳು
ಹಳೆಯ ಎಕ್ಕವಡವೆಂಬ ಧೀರಜನ
    ಮಂಜುನಾಥನಾಳು!

ನಾಲ್ಕು ೧

ನೆಲದಗಲಕೆ ಬಾನುದ್ದಕೆ ಕಡಲಿನ
ಅಲೆಮಾಲೆಯ ಸುತ್ತಾಟಕೆ ಒಡಲಿನ
ಒಲುಗಲೆಯುಬ್ಬಲು ಚೆಲುವೇ ಚೆಲುವಲ
ಬಲು ಮೊಲೆಯೆದೆ ಬರಿ ಮಾಂಸದ ಬೆಚ್ಚಲ

ಕಣ್ಣಿಲ್ಲದ ಜನ ವಿಜ್ಞಾನಿಸುವುದೆ?
ಕೈಯಿಲ್ಲದ ಜನ ಸೌರಾಷ್ಟ್ರಿಸುವರೆ?
ಹಳ್ಳಿಯು ನಗರವೆ ನಗರವು ಹಳ್ಳಿಯೆ
ಎಲ್ಲೂ ಹೊಟ್ಟೆಯ ಕಿಚ್ಚಿನ ಕೊಳ್ಳಿಯೆ

ದಲ್ಲಾಲ್ತನದಲಿ ಮಾನವ ಮೌಲ್ಯವ
ಕೊಳ್ಳಲು ಮಾರಲು ನಿಂತರೆ, ಲೌಲ್ಯವ
ಎಲ್ಲಾ ಸಂಸ್ಥೆಗಳಲ್ಲೂ ಬೆಳೆಸಲು
ಎಲ್ಲಾ ಕಜ್ಜಗಳಲ್ಲೂ ಬಳಸಲು

ಯಾವ ರಾಜ್ಯಧರ್ಮವು ಬರಲೇನು?
ಯಾರಿಗೆ ಯಾರೋ ಏನಿದ್ದೇನು?
ಕಾಮರಾಜ್ಯಗಳನೆಷ್ಟೋ ಭಕ್ಷಿಸಿ
ಆವಳಿಸುವ ಕಾಲನ ದುರ್ಲಕ್ಷಿಸಿ

ಕಟ್ಟುವುದೇನು? ಬಿಚ್ಚುವುದೇನು?
ಕಹಿವಗೆ ನರಹುಳು ಕಾರುವ ನಂಜು?
ಕವನವೆ ಕಾಣ್ಕೆಯ ಕೊಬ್ಬಿನ ಮಂಜು?
ಬಡವರ ಶೋಷಿಸಲೆಂದೇ ಕಟ್ಟಿದ

ಗುಡಿಗುಂಡಾರ ಕಲಾಲಯ ಮೆಟ್ಟಿದ
ಇಡಿ ಜೀವಂಗಳ ಭೂಗತ ಕೀರ್ತಿಯ
ಸಿಡಿಲೊಡಲಿನ ಕಾಲಾಂತಕ ಮೂರ್ತಿಯ
ಕಸಗುಡಿಸುವ ಕಾರ್ಯವು ಮೊದಲಾಗಲು

ಕಿಸುರ್ಗಣ್ಣಿನ ಜನ ಮಸಣವ ಕಾಣಲು
ಮಂಜುಳ ಮಂಜೀರದ ದನಿ ಕೇಳುಗು
ಮಂಜೇಶ್ವರನೆದೆಯೊಳ್ಪೆದ್ದೇಳುಗು;
ಭಟ್ಟ ಸೆಟ್ಟಿಯಾಚಾರ್ಯ ಪೈ ಪ್ರಭುಗ–

ಛೊಟ್ಟು ಕಟ್ಟಲೆದ್ದೀತು ಹೃದಯದಘ
ಸುಟ್ಟು ಹೋಗೆ ಸೌರಾಜ್ಯವ ಮಂಜುಲ
ದೃಷ್ಟಿಯಾಣ್ಮ ತೊಳೆಯಲು ಕಣ್ ಕಜ್ಜಲ!
ಸರ್ವಧರ್ಮ ಸಂಮೇಳನ ಕೂಡಿಸಿ

ಸರ್ವ ಸೌಹೃದದ ಬೀಜವ ಮೂಡಿಸಿ
ಸರ್ವೋದಯ ಭಾವನೆಯನು ಹರಡಲು
ಸರ್ವಂಕರ ಸಂಕಲ್ಪಿಸಿ ಹೊರಡಲು–
ದಕ್ಷಿಣವೇಕಾಗದು ಜನರಕ್ಷೆಯ

ಪಕ್ಷವ ತೆರೆಯಿಸಿ ಸತ್ಪ್ರತಿಕಕ್ಷಿಯ
ಶಿಕ್ಷಿಸಿನವ್ಯೋತ್ಸಾಹವನೆಬ್ಬಿಸಿ
ಲಕ್ಷಾಂತರ ಜನಮನಗಳನುಬ್ಬಿಸಿ
ಭರತಖಂಡ ಗಾತ್ರಕ್ಕೆ ಶಿರಃ ಸಮ,

ಕರ್ನಾಟಕ ಮಂಗಲ ಕಾರ್ಯೋದ್ಯಮ?
ಪಡುಗಡಲಿನ ಮೈಲೆತ್ತರ ತೆರೆಗಳು
ಮಂಜು ಭಾರತದ ನೊಸಲಿನ ಗೆರೆಗಳು
ತೆಂಗುಕಂಗುಗಳ ಕಾಯ್ಗೊನೆಯಕ್ಕರ

ಮಂಜುಬ್ರಹ್ಮನ ಬಯಕೆ ವಿಕಸ್ವರ?
ಹೊಳೆಕೆರೆ ಕಾಲುವೆ ತೋಡುಗಳು
ಭಾರತ ಕೀರ್ತಿಯ ಹಾಡುಗಳು
ಎನಿಸುವ ಗುಡ್ಡದ ಬೋಳೆಯ ಹಾಡಿಯ

ಹೊಲಗದ್ದೆಯ ಹನೆಬಯಲಿನ ಜೋಡಿಯ
ಗಿಳಿಯಳಿ ಕೋಗಿಲೆ ರೇಡಿಯೊ ಆಗವೆ
ಬಿತ್ತರಿಸಲು ಜಸವಾಡನು ಹೋಗವೆ?
ಮಂಜೇಶ್ವರನುಲಿ ಕನ್ನಡವಾಗದೆ

ಆದ ಕನ್ನಡಿಸಲು ಭಾರತ ಬಾಗಿರೆ
ತಲೆಯನು ಮಂಜರ ಸಾಸದ ಗೈಮೆಗೆ
ಮಲೆಗರೆ–ಜನ–ಸಹಕಾರದ ಮೈಮೆಗೆ

ಐದು ೧

ಕೋಳಿ ಜಗಳದ ಕುಲದಿ ಹುಟ್ಟಿದರು ಕೂಡ
ಹಾಳು ಹಿರಿಯರ ಹೊಗಳಿ ಸೊಕ್ಕುವವ ಮೂಢ
ಹೇಳಿದ್ದನೇ ಹೇಳಿ ಬಾಳಿಗಾಗದ ಬರಡ
ವೇಳೆಗಳೆಯುವ ಪಂಡಿತೋಕ್ತಿ ಬೇಡ

ಮಧ್ವ ಶಂಕರರನ್ನು ಉದ್ಧರಿಸುವೋಡಾಟ
ಶಬ್ದಗಹ್ವರದಲ್ಲಿ ಅರ್ಥಗೂಢ
ಉದ್ದಾಮ ಪಾಂಡಿತ್ಯ ಊಟಕಿಲ್ಲದರೆದುರು
ಊಟಕಾಗಿಯೆ ತೋರ್ಪ ವಿದ್ಯೆ ಬೇಡ

ಭಾರತದ ವೇದಾಂತ ತಿರುಕಗನಸಿನ ಪಂಥ
ನೂರು ಕೋಟಿಗಳಾಗಿ ಬೆಳೆಯೆ ಸಂಖ್ಯೆ
ಹಾರುವರು ಹರದರೇ ಪುಡಿಸಂತೆಯೊವಜದಿರು
ಭಾರವೇ ಸರಿ ಬುವಿಗೆ ಇಲ್ಲವಂಕೆ!

ತನ್ನನರಿಯದ ಪುಂಡ ನಿನ್ನನೀನರಿಯೆಂದು
ಸೊನ್ನೆಹುರುಳಿನ ತತ್ವವಾಕ್ಯವಾಡಿ
ಕನ್ನೆಯೆದೆಗರ ಮಂಕುಗೊಳಿಸಿ ತಿರುಗಿದವರನು
ಕಣ್ಣು ಕೀಳಿಸದಿರದು ಜನತೆ ನೋಡಿ!

ಬಸವ ಬುದ್ಧರ ಹೆಸರ ಹೇಳಿ ಕಾಳಗ ಮಾಳ್ಪ
ಹೊಸ ಹುದ್ದರಿಗಳಿಗೂ ಸ್ಥಾನವಿಲ್ಲ
ಹಸಿದವನಿಗೂಡಿಸದ ರಾಜಕಾರಣಕಿಲ್ಲಿ
ತುಸು ಜಾಗವೂ ಇಲ್ಲ ಇಲ್ಲ ಇಲ್ಲ!
ಭಾರತಕೆ ಹಿಡಿದ ಈ ಧರ್ಮಭೂತವ ಬಿಡಿಸ–

ಲಣ್ಣಪ್ಪನಡಿಯಿಡಲು ಹೊಸ ಸತ್ವದ
ಕಾರ್ಯಕರತೆಯು ಮೆರೆಗು ಹಿಮಗಿರಿಯ ವರೆಗು ಈ
ದೂರತೀರದ ಕನ್ನಡರ ತತ್ವದ;
ಚಿಲ್ಲರೆ ವ್ಯವಹಾರ ಮಾಳ್ಪಂಥ ಧೂರ್ತತನ
ಎಲ್ಲ ತತ್ವವನರೆದು ಕುಡಿದರೂ ವ್ಯರ್ಥ!

ಆರು ೧

ಹಳೆಯ ಜೀವನದ ಹಳಸು ಹೋಗುವುದು
ಕಷ್ಟ ಕಷ್ಟ ಕಷ್ಟ!
ತಲೆಯ ಬೋಳಿಸಲು ಕೂದಲ ಬೆಳೆ ತಾ–
ನಾಗುವುದೇ ನಷ್ಟ?

೨

ನೆಲಗಟ್ಟೆ ಇಲ್ಲದಿಹ ಬಂಗಲೆಯ ಕಟ್ಟುವರು
ಗೋಪುರವೆ ಇಲ್ಲದಿಹ ದೇಗುಲಗಳ
ಕುಲಗೆಟ್ಟು ಸೊಗವಡೆಯದಂತಹ ಸುಧಾರಣೆಯ
ಕಲೆಗೆ ಕಟ್ಟುವೆಯೆಷ್ಟು ಹೆಬ್ಬೆಲೆಗಳ?

೩

ಮಂತ್ರಿಗಳ–ಕಾರುಗಳ ಮಧುರ ತಾರಸ್ವರವ
ಕೇಳಿ ಹಳೆದೈವಗಳು ಎಚ್ಚರಾಗಿ
ಮಂತ್ರಕ್ಕು ಹೆಚ್ಚಾದ ಉಗುಳಾಗಿ ಅವರುಗಳ
ಬಾಯಿಂದ ಬೀಳುವವು ತುಂತುರಾಗಿ!

೪

ಎಮ್ಮಲ್ಲೆ ಶಾಸನಸಭಾಪೀಠವನ್ನೂ
ಅರ್ಥಸಾಧಕ ಯೋಜನೆಯ ಕೇಂದ್ರವನ್ನೂ
ಒಮ್ಮೆಲೇ ಆಕ್ರಮಿಸ ಬಯಸುವೀ ರೂಢಿ
ನಂಜುನಾಗರಿಕತೆಯ ನರನಾಗಮೋಡಿ!

೫

ಹೆರರ ನಾಡಿನ ದಾಳಿಗಾರರು
ಬರುವ ಮುಂಚೇ ದೇಶದ
ಸಿರಿಯ ಸುಲಿಯುವ ತಂತ್ರಗಾರರ
ಬಲುಮೆ ಬಂತೇ ವೇಷದ?

೬

ಮಧ್ಯಮ ವರ್ಗವ ಹೋಲುವ ವಿದ್ಯೆಯ
ಮದ್ಯಪ ವರ್ಗವ ಹೋಲುವ ಬುದ್ಧಿಯ
ಸದ್ಯಃ ಸುಖ ಸಂಕಲ್ಪದ ಯೋಜನೆ
ನೂರಾರನು ಹಾಕಿ
ವಧ್ಯರನುಳಿಸುವ ಕಾರ್ಯದಿ ಶುಕ್ರರು
ಯದ್ವಾತದ್ವವ ಮಾಡುವ ಮುಖ್ಯರು
ಕದ್ದರು ಕಾಯದೆಯನ್ನೇ ಕೊಳ್ವುದು
ವ್ಯವಹಾರದ ಷೋಕಿ!

೭

ಉಪಮೆಯಿಲ್ಲದ ಪ್ರತಿನಿಧಿಗಳನು
ವಿಫಲ ಬುದ್ಧಿಯ ಕರಗಳು
ಉಪಲದಂತಹ ಮತವನಿತ್ತಾ
ರಿಸುವ ಫಲವೀ ಕರಗಳು!

೮

ನೆಲದ ಬಸಿರನಳೆವ ಶೌರ್ಯ
ರಸಾಯನದ ಗೊಬ್ಬರಕ್ಕೆ
ಜನದ ತಲೆಯನಳೆವ ಬುದ್ಧಿ
ಚುನಾವಣೆಯ ಅಬ್ಬರಕ್ಕೆ!

೯

ಸ್ವಾಧೀನತೆಯಲಿ ಗಳಿಸಿದ ಸಂಸ್ಕೃತಿ–
ವಧುವಿಗೆ ಸರಿಜೋಡಿ
ಸ್ವಾಧೀನತೆಯಲಿ ಸಾಧಿಸಿದಂತಹ
ಸಂಸ್ಕೃತಿ ಮಧು ನೋಡಿ!

೧೦

ಎಲ್ಲಿ ಅಧಿಕಾರಸ್ಥ ಗೂಗೆಗಳ ಕಡೆನೋಟ
    ಬೀಳುವದೊ ಅಲ್ಲಿ ಬಡ ಕಲೆಗಾರರ
ಸೊಲ್ಲಡಗುವಂಥ ನಿಯಮಾಸ್ತ್ರಗಳು ಬೀಳುವವು
    ಕಲ್ಲೆದೆಯ ರಾಜ್ಯಕಿಡಲಾವ ಹೆಸರ?

೧೧

ಹಗೆತನಕೆ ವಿಷ ಚೆಂದ ವಿಷಕೆ ಹಗೆ–
    ತನವೆ ಚೆಂದ ಪರರ
ನಗೆಗೆ ನಟನೆ ನಟನೆಗೆ ನಗೆಗಾರಿಕೆ
    ಚೆಂದವಾಯ್ತು ನರರ
ಬದುಕು ಸಾವಿಗೂ ಚೆಂದವಾಯ್ತು ಈ
    ಹಗೆಯ ನಗೆಯ ಕೂಡಿ
ಅದಕೆ ಮಂಜುತತ್ವಕ್ಕೆ ಮಣಿದರೋ
    ಸಂತರಳೆದು ನೋಡಿ!

೧೨

ಇದು ಕಲಿಯ ಕೈಮಾಟ ವಿಕ್ರಮನ ಶನಿಯಾಟ
ಹದುಳ ಬಾಳುವೆಯಲ್ಲವೆಂದು ತಿಳಿದು
ಮಧುಮತ್ತರುತ್ತಂಸವನು ಕಿತ್ತುಕೆಡೆಯಲ್ಕೆ
ಕುದಿದಿತ್ತು ನೆತ್ತರಳ್ಳೆದೆಗೆ ಮುಳಿದು!

೧೩

ತೀರ್ಥಯಾತ್ರೆಗೆ ತಿರುಗುತಿದೆ ಜನ–
    ಸ್ವಾರ್ಥ ಯಾತ್ರಿಕ ತಂಡದ
ಗಾತ್ರವೃದ್ಧಿಗೆ ಬೆದರಿ ಕಲಿಕರ
    ಪಾತ್ರವಾಗಿಹ ಬಂಡದ
ಪಾತ್ರಿಯನ್ನಾಯುವುದೆ? ಖಂಡಿತ
    ಇಲ್ಲ, ಆಯ್ಕೆಗೆ ಮತಗಳ
ಖಾತ್ರಿಗೊಳಿಸಲು ಶಿವನ ಗಣ ತಾ
    ಕೇಳದೋ ದುಷ್ಕಥೆಗಳ!

೧೪

ಅಸುರರಂಡಲೆದು ಕಾಯುತಿರಲು ವೈ–
    ದೇಹಿ ಗಾರ ಕಾಪು?
ಮಿಸುನಿಗೂಳ ಕಾಡಿಸೆ ಪ್ರಹ್ಲಾದನ
    ಕಾದುದಾವ ಸೈಪು?
ಕಮ್ಯುನಿಜಮ್ಮು ಸೋಶಲಿಜಮುಗಳ ಬರಿ
    ನಿಂದೆ ನುತಿಗಳಿಂದ
ಅಮಲುದಾರ ನೇತಾರರೊಡ್ಡು ದಿನ
    ದಬ್ಬುತಿರುವ ಚೆಂದ
ಸಮನಿಸಿತ್ತು ನೈರಾಶ್ಯವಾಗಿ ಇಡಿ
    ಖಂಡವನ್ನು ಮುತ್ತಿ
ಅಂಥ ಕಾಲದಲಿ ಅಂತಕಾಂತಕನ
    ದಿವ್ಯ ಸನ್ನಿಧಿಯಲಿ
ಪಂಥ ಬಿಟ್ಟು ಬರಿ ಮನುಜರಾಗಿ ನಿಲೆ
    ಕಂಡ ಕಾಣ್ಕೆಯಲ್ಲಿ
ಮಂಜೂರೂಪ ಮೂಡಿತ್ತು ಮಂಜುಮನ
    ರೂಹು ವಡೆದು ನಿಲಲು
ಮಂಜುರಾಜ್ಯವೆದುರಾಯ್ತು ಮಂಗಲದ
    ಗಾಳಿ ಬೀಸಿ ಬರಲು!

೧೫

ಮಾಯೆಯನೆಲ್ಲೆಡೆ ಕಂಡ ನನಗಿದೂ
ಮಾಯೆಯೆ ಸರಿ ಎಂದೆನಿಸಿತಲಾ;
ಕಾಯುವ ತಂದೆಯೆ ಕಸಿವುದ ಕಂಡವ
ಪೋಲೀಸನನೂ ನಂಬನಲಾ!

೧೬

ಹರಣವ ಮುಡಿಪಿಡಬಲ್ಲವನೆಂದೇ
ಹರಣವ ಕೊಳಬರೆ ವೈರಿಗಳು
ಮರಣವನಾದರು ನಿಮ್ಮಲಿ ಪಡೆಯೆನು

ಹರ ಬರಲೆಂಬೀ ಮಾತುಗಳು
ಸರಳಿಸಲೆದೆಯಲಿ ಬೆದರರೆ ಹೊಕ್ಕೆನು
ದರವಿದಲಿತ ಮೊಗದವನಾಗಿ
ಸಿರಿಯುದಯದ ಸವಿಗನಸನು ನೋಡಿದೆ
ನೆರವಿಗುಸುರುವೆನು ಸುಖವಾಗಿ–

೧೭

ಧರ್ಮಸ್ಥಲದಿ ಧರ್ಮ–
ಸೌಂದರ್ಯ ಸೊಗಯಿಸಿರೆ
ನನ್ನ ಮನದಲಿ ಹರ್ಷವುಕ್ಕಿ ಬಂತು
ಕರ್ಮಸ್ಥಲದಿ ನೊಂದು
ಕೆಟ್ಟ ಕತೆಯನು ಕೇಳಿ–
ಅಥವ ಆ ಮಾತೇಕೆ? ಕಾಲ ಸಂತು!

೧೮

ಕೃಷ್ಣಾಜಿನ ಜಟಿ ದಂಡ ಕಮಂಡಲು–
ವೇಕೆ ಬೇಕು ಇಲ್ಲಿ–
ತೃಷ್ಣಾಸೂಯೆಗಳಿಂದ ಲೋಭಿಗಳು
ಕಾಡಿಸುತಿರುವಲ್ಲಿ?

ಏಳು

೧

ಕರ್ಮಸ್ಥಳದಿ ಕೂಡ ಪ್ರಕೃತಿಸೌಂದರ್ಯವಿದೆ
ಹಸಿರುಟ್ಟ ಭೂದೇವಿ ಹಾಡುತಿಹಳು;
ಧರ್ಮವನು ದೌರ್ಜನ್ಯ ಓಡಿಸಿರುವುದರಿಂದ
ಆ ಹಾಡು ನೊಂದು ನುಚ್ಚಾದ ಕರುಳು!

೨

ದುರ್ದೈವವಾವುದೋ? ದುರ್ಮದರ ಹಿಡಿಗೂಳಿ–
ಗೊಡ್ಡಿ ಕೈಗಳ ದಿನವ ದಬ್ಬುತಿಹುದು;
ಬರ್ದಿಲವ ಸೊಗವೆಂದರೇನು? ಗುಣಿಗಳ ಗುಣವ
ಮೆಚ್ಚಿ ಹರಸುವರೊಡನೆ ಬಾಳುತಿಹುದು!

೩

ಮನ–ಮೈ–ಕಣ್ಕಿವಿಗಳ ಕರಿಮೋಡವು
ಜಡಿದು ಮುಸುಕಿತೋ ಕಾರರಲು
ದಿನದಿನವೂ ಬಂದಂಟಿ ಮೆತ್ತಿಗೆಯ
ಮಾಡುತಿರುವುದೋ ಎಂದೆನಲು
ಬೇಸರ ಬೇಸರ ಬೇಸರ ಬೇಸರ
ನಿಂತರೆ, ಕುಳಿತರೆ, ಮಲಗಿದರೆ
ಗೋಸರಿಡಿದ ತಳದಂತೆ ಬಾಳ ದಿನ
ಓಸರಿಕೆಯ ಹುಟ್ಟಿಸಿತು ಬಲು!

೪

ಆಟಕ್ಕಾಗಿ ಸದಾತ್ಮರ ಹಿಂಸಿಸಿ
ಗಳಿಸಿದ ಪಾಪದ ಬೀಜಗಳ
ತೋಟದಲ್ಲಿ ಸಲೆ ಬಿತ್ತಿ ಬೆಳೆಸುತಿಹ
ಮಾಟಗಾರ ಮುತ್ಸದ್ಧಿಗಳ
ಕೀಟಲೆರಕ್ಕಸ ದಂಡು ಸಗ್ಗಿಗರ
ಕಾಡಿಸಮಾಡಿದ ತೋಳ ತುರಿ
ನೋಟದಿಂದಲೇ ನುಂಗಿ ಬಿಡುವ ಹಗೆ–
ತನವ ಹಾವು ಬಿಟ್ಟುಸಿರಿನುರಿ!

೫

ಉದಯಕಾಲದ ತಂಪನುರಿಬಿಸಿಲ ಮಾಡಿರುವ
ಸದಮಲಾನಿಲನಿಂಗೆ ದುರ್ಗಂಧವೂಡಿಸಿಹ
ವಿಧುಕಲೆಗೆ ಕೊಲೆಯನೆತ್ತರ ಹಚ್ಚಿ ಬಣ್ಣಿಸಿದ
ಮಧುರವಾಣಿಯ ಹಕ್ಕಿಗಳ ಕೊರಳನವುಕಿರುವ
ಹಸಿರು ಮೈದಾನಕ್ಕೆ ಕೆಸರೊರಸಿ ಕೆಡಿಸಿರುವ
ಗುಡ್ಡಂಗಳಭಿಮಾನ ಶಿರಗಳನು ಕಡಿದಿರುವ
ಗದ್ದೆಗಳ ಹಿಳಿದು ನಿರ್ವೀರ್ಯತೆಯನೊಡರಿಸಿಹ
ಗಿಡಮರಂಗಳ ಹಿಂಡಿ ನೀರಸತೆಗಿಳಿಸಿರುವ
ಹೂ ಹಣ್ಣು ಕಾಯಿಗಳ ಹುಳುಹಿಡಿಸಿ ಹಾಳ್ಗೈದ
ಹೊಳೆಯ ಸವಿನೀರಿಗುಪ್ಪಿಕ್ಕಿ ಕರ್ದಮಿಸಿದ್ಧ
ಹೆಗ್ಗಡಲಿನೆದೆಯ ವಿಸ್ತಾರವನು ಸಂಕುಚಿಸಿ

ಅದರ ಕೊಡುಗೈಗಳನು ಕಂಡಲ್ಲಿ ಕತ್ತರಿಸಿ
ಬಾಂದೇವಿಯುಟ್ಟ ಮುಗಿಲಿಗೆ ಕಪ್ಪುಬಳಿದಿರುವ
ಅಂಧಂತಮಸ್ಸಿನಾ ಭಾರತವನೇವೊಗಳ್ವೆ?
ಆ ಲೋಕದಿಂದ ನಾ ಬಂದೆನೀಲೋಕಕ್ಕೆ
ಕಾಡುಕತ್ತಲ ಕಳೆವ ಮಿಂಚಿನಾಲೋಕಕ್ಕೆ
ಬಿಡುಗಡೆಯ ಬೀಸುತಿಹ ಬೆಳ್ವಗೆಯ ನಾಕಕ್ಕೆ
ಕೊಡುಗೈಯ ಹರಿಸಿರುವ ಬೆಟ್ಟಗಳ ಸೇಕಕ್ಕೆ!
ಹಡೆದವರ ಹಾಗೆ ಅಕ್ಕರೆಗಂಪ ಬೀರುತಿಹ
ಸೊಡರಾಗಿ ಮಂಗಲವನೆಲ್ಲೆಲ್ಲು ಮಿಂಚಿಸಿಹ
ಪಡೆದಪ್ಪ ಮಂಜುನಾಥನ ದಯೆಯ ಬೀಡಿಂಗೆ
ಬಡತನವ ಪರಿಹರಿಪ ಮೃಡನಿರುವ ನಾಡಿಂಗೆ!

ಗುರುಪ್ರಜ್ಞೆ

ಓಂ ನಮೋ ಭಗವತೇ ಅರುಣಗಿರಿಯ ಮರಣಾತಿರಿಕ್ತ ರಮಣ
ಆಶ್ರಯಿಸಿದವರ ಸಲಹುವ ಸಮಸ್ತ ಕಲ್ಯಾಣಗುಣಾಭರಣ!

ಸಹನಾವವತು ಗುರೋ ನೌಭುನಕ್ತು ಸಹ ಸರ್ವತಃ ಸದೈವ
ತ್ರೈಗುಣ್ಯ ಚರಿತದೀಲೋಕದಲ್ಲಿ ಚಂಚಲಿಸುತಿರುವ ಭಾವ।
ದಿವ್ಯಾತ್ಮರಸದ ಸಂಪ್ರಜ್ಞೆಗೊಯ್ದು ಮುಟ್ಟಿಸಲಿ ದೇವದೇವ
ಐಕ್ಯಾತ್ಮದರ್ಶನಸ್ಫೂರ್ತಿ ಹುಟ್ಟಲೀಯೆಲ್ಲವನ್ನು ಕಾವ !

ಅಧಿಯಜ್ಞನಾಗಿ ನೀನಿತ್ತೆ ನಿನ್ನದೆಲ್ಲವನು ಮಾಯೆಯದನು
ಅಪಹರಿಸಿ ನಿರ್ಮಿಸಿತು ಬದಲಿಯಾಗಿ ಈ ದೇಹಭಾಗವನ್ನು!
ಮಾಯೇಶ ನಿನಗಿದೊಪ್ಪಿಗೆಯೆ? ತಿಳಿಸದೀ ನಿನ್ನ ಗೂಢವನ್ನು
ದಣಿಸಿದೆಯದೇಕೆ ಈ ದೀನಚೇತನವ ತೋರು ಕರುಣೆಯನ್ನು!

ಬುವಿಯಲ್ಲಿ ಬಾನು ಗವಿಯಲ್ಲಿ ಬೋನು ಸಗುಣನಲಿ ನಿರ್ಗುಣತ್ವ
ಲಯದಲ್ಲಿ ಸೃಷ್ಟಿ ಭಯದಲ್ಲಿ ಧೈರ್ಯ ದುಃಖದಲಿ ಸುಖದ ತತ್ವ!
ಭವಿಯಲ್ಲಿ ನಾನು ಕವಿಯಲ್ಲಿ ಕಾನು ಸದಸತ್ ಪರಸ್ಪರತ್ವ
ಅವಿತಿರುವ ಗೂಢ ಗೊತ್ತಾಗದಾಗ ಉಂಟಾಗದಿರದಪಾರ್ಥ!

ಬೀಜದಲಿ ವೃಕ್ಷ ವೃಕ್ಷದಲಿ ಬೀಜ ಕರ್ಮದೊಳಕರ್ಮದಂಶ
ಪದದಲ್ಲಿ ಪಾದ ಪಾದದಲಿ ಪದ ವಿಷಾಮೃತದ ಯಮಳ ಪಾಶ!
ಗುಣದಲ್ಲಿ ದೋಷ ದೋಷದಲಿ ಗುಣದುದಯ ಕಂಡುಬರುವ ಬಾಳ
ಪಂಜರದೊಳಿಟ್ಟು ಸಾಕುವದು ಸಾಕು ಹೆಚ್ಚಿಸದಿರಯ್ಯ ಗೋಳ!

ಹೆದರುವುದು ಜೀವ ಮಾಯಾಪ್ರವಾಹದಾನಂತ್ಯವನ್ನು ಕೇಳಿ
ಚಕ್ರಾರಪಂಕ್ತಿಗತಿಯಾಚೆಗೆಂತಿಹುದು ಮೋಕ್ಷದಾ ಸುಕೇಳಿ?
ನಡುಗಿತೋ ಶ್ರದ್ಧೆಯುಡುಗಿತೋ ಭಕ್ತಿ ಸತ್ಯಸ್ಯ ಸತ್ಯನಾದ
ಮೃಡ ಗುಡುಗಿ ಹೇಳು ಮತ್ತೊಮ್ಮೆ ಗೂಢವನ್ನು ತಪ್ಪಲು ಪ್ರಮಾದ!

ಆನಂದವೆಂತು ಈ ಬಂಧವಾಯ್ತು? ನಂಬಿಸದನಾದಿವಾದ
ಸುಜ್ಞಾನ ಸೂರ್‍ಯನನು ನುಂಗಿತೆಂತು ಅಜ್ಞಾನದಂಧ ಬೋಧ?
ಕರುಣಕ್ಕೆ ನಿನ್ನ ಬೇಕೊಂದು ಪಾತ್ರವೆಂದಿದನು ಸೃಷ್ಟಿಸಿದೆಯಾ?
ಅರುಣಾಚಲೇಶ ಕರುಣಾವಿಲಾಸ ತಡೆ ಶಂಕೆ ಮಾಳ್ಪ ವಧೆಯ!

ಸಾಧಕತ್ವ ಸಾಧ್ಯತ್ವ ಸಾಧನತ್ವಗಳ ಭೇದಲೀಲೆ
ಬೇಡಯ್ಯ ಬೇಡ ಕಲಿಸಿದ್ದು ಸಾಕು ಈ ಬಾಳ ಪಾಠಶಾಲೆ
ಬರಡಾಯ್ತು ಕಲಿಸಲದರಲ್ಲಿ ಯಾವ ಹೊಸ ವಿಷಯವಿಹುದು ಹೇಳು
ತರ್ಕಾತಿರಿಕ್ತ ವಿಜ್ಞಾನದೂರ ಮೌನಾದ್ರಿಶಿಖರ ಬೋಳು!

ಗುರುಭಕ್ತಿಯೊಂದೆ ಹರಭಕ್ತಿಯೊಂದೆ ನರಶಕ್ತಿಗಿಂದು ಗಮ್ಯ
ವಿರಮಿಸದ ದೀರ್ಘ ಚಿಂತನಗಳೆಲ್ಲವೂ ಬುದ್ಧಿಗೊಮ್ಮೆ ರಮ್ಯ!
ಪರಸತ್ಯವಪರಪರಭೇದದಿಂದ ಕಾಡುವುದ ನಿಲ್ಲಿಸೆಂದು
ಹೊರಳಾಡಿ ಬೇಡುವೆನು ಬುದ್ಧಿಪೌರುಷದ ಶಿಖರವೇರಿ ನಿಂದು!

ಅನುಬಂಧ

ಬಿ.ಎಚ್. ಶ್ರೀಧರರ ಕೃತಿಗಳ ಕುರಿತಾದ ಅರಿಕೆಗಳು

ಮೇಘನಾದ

ಜೀವನದಲ್ಲಿ ಗೆಳೆತನಕ್ಕಿಂತ ಹೆಚ್ಚಿನದಿಲ್ಲ, ಪವಿತ್ರತರವಾದುದಿಲ್ಲ. ಮೈತ್ರಿಯೆಂಬುದು ಮಾನವನಿಗೆ ದೇವ ಕೊಟ್ಟಿರುವ ಒಂದು ವರ. ಅದು ಆನಂದಗಂಗೆಯ ಅತ್ಯುಚ್ಚವಾದ ಉಗಮ. ಗೆಳೆತನವೆಂಬುದು ನನಗೆ 'ಮಧುರಾದಪಿಮಧುರತರಂ' ಎಂದು ಹೇಳಬಯಸುತ್ತೇನೆ.

ಸಖ್ಯದಲ್ಲಿ ದಿವ್ಯತೆಯಿದೆ. ಶಾರೀರಿಕ ಸಂಬಂಧವು ಸ್ನೇಹವೃದ್ಧಿಗೆ ಅನಗತ್ಯ. ಸಂಸ್ಕೃತರಾದ ವ್ಯಕ್ತಿಗಳಿಗೆ ಪರಸ್ಪರರಲ್ಲಿ ಆತ್ಮೀಯತೆಯನ್ನು ಬೆಳೆಸಲು ರಕ್ತಸಂಬಂಧ ಬೇಕಿಲ್ಲ; ಭಾವೈಕ್ಯ ಅಥವಾ ಸಹೃದಯತೆ ಇದ್ದರೆ ಸಾಕು.

ಸಹೃದಯನಿಗಿರಬೇಕಾದುದು 'ಸಹಾನುಭೂತಿ'. ಆ ಶಬ್ದದಿಂದಲೇ ಗೊತ್ತಾಗುವಂತೆ ರಸಿಕನು ತನ್ನ ಸನ್ಮಿತ್ರನಾದ ಕವಿಯ ಮಾತನಾಲಿಸುವಾಗ ತೆರೆದ ಹೃದಯದಿಂದ ಇದ್ದು ಅವನ ಅನುಭವಗಳಲ್ಲಿ ತಾದಾತ್ಮ್ಯ ಹೊಂದುತ್ತಾನೆ. ತೆರೆದ ಹೃದಯದಿಂದ ಕೇಳುವುದೆಂದರೆ ಪೂರ್ವಸಿದ್ಧವಾದ ಅಭಿಪ್ರಾಯಗಳನ್ನು ದೂರವಿರಿಸಿ ಕೇವಲ ಮಿತ್ರಾಭಿಪ್ರಾಯ ಗ್ರಾಹಕನಾಗಿ ಒಂದೇ ಮನಸ್ಸಿನಿಂದ ಲಕ್ಷ್ಯವಿಟ್ಟು ಕೇಳುವುದು; ಇದೇ ತಲ್ಲೀನತೆ ಅಥವಾ ತಾದಾತ್ಮ್ಯ. ಅದರಂತೆ ಇದು ನನ್ನದು, ಇದು ನನ್ನದಲ್ಲ, ಅದು ಅವನದು, ಮತ್ತೊಂದು ಅವನದಲ್ಲ–ಎಂದೆನ್ನದೆ ಹೇಳುಗನ ಅನುಭವಗಳನ್ನು ತನ್ನವೇ ಎಂದು ಕೇಳುಗನು ತಿಳಿದು ತನ್ನ ಹೃದಯದಲ್ಲಿ ಅವುಗಳಿಗೆ ಸ್ಥಳಮಾಡಿಕೊಡುವುದು ಸಹಾನುಭವದ ಲಕ್ಷಣ. ನೇಹಿಗರೇ, ನಿಮ್ಮಿಂದ ನಾನು ಇಂತಹ ಸಹಾನುಭೂತಿಯನ್ನು ಬಯಸುತ್ತೇನೆ. ನಿಮಗೆ ಈ ಕವನ ಸಂಗ್ರಹವನ್ನು ಅರ್ಪಿಸಿದ್ದೇನೆ.

ಗೆಳೆತನದ ಮಧುವನ್ನು ಪಾನಮಾಡಿದ, ಮಾಡುತ್ತಿರುವ ಮತ್ತು ಎಷ್ಟು ಪಾನಮಾಡಿದರೂ ತಣಿಯದ ತದೇಕಮಗ್ನವಾದ ನನ್ನ ಈ ಹೃದಯವು ಮಿತ್ರ ದೇವತೆಗಳನ್ನು ಈ ಮೂಲಕ ಆಲಿಂಗಿಸುತ್ತದೆ. ಮೈತ್ರಿಯು ರಸಿಕತೆಯ ಬೀಜ. ಮಿತ್ರರ ಮಾತು ಶ್ರವಣಕ್ಕೆ ಮಧುರ, ಮಿತ್ರರ ನೋಟ ನಯನಕ್ಕೆ ಮಧುರ. ಮಿತ್ರರ ಮುಖದಲ್ಲಿ ಆನಂದವಲ್ಲಿಯ ವಿಲಾಸ, ಮಿತ್ರರ ಹೃದಯದಲ್ಲಿ ಆತ್ಮೀಯತೆಯ ವಿಕಾಸ! ಮಿತ್ರರೇ ನಿಮ್ಮ ಸುಧಾಸ್ಯಂದಿಯಾದ ಸಹೃದಯತೆಯಿಂದ ನನ್ನ ಜೀವ ಬೆಳಕನ್ನು

ಕಾಣಲಿ!

‘ಜನ್ಮಕಥಾ’ ಎಂಬ ಕವನ ದಿವಂಗತ ಠಾಕೂರರ ‘ಜನ್ಮಗಾಥಾ’ ಎಂಬ ಗೀತವನ್ನನುಸರಿಸಿ ರಚಿಸಲಾಗಿದೆ.

ಈ ಕವನಗಳಲ್ಲಿ ಕೆಲವು ‘ಜಯಂತಿ,’ ‘ಜಯಕರ್ನಾಟಕ’ ಮೊದಲಾದ ಮಾಸಿಕಗಳಲ್ಲಿ ಈ ಮೊದಲು ಅಚ್ಚಾಗಿವೆ. ಆ ಕಾರಣದಿಂದ ಆಯಾ ಸಂಪಾದಕ ಮಿತ್ರರಿಗೆ ನಾನು ಸದಾ ಕೃತಜ್ಞ. ಈಗ ಈ ಸಂಗ್ರಹವನ್ನು ಪ್ರಕಟಿಸಿದ ‘ಮಿತ್ರ ಸಂಘ’ದ ಶ್ರೀ ದೊರೆಸ್ವಾಮಿಯವರ, ಇತರ ವಿಚಾರಗಳಲ್ಲಿ ನೆರವಿತ್ತ ನನ್ನ ಪ್ರಿಯಮಿತ್ರ ರಾಮರಾಯರ ಮತ್ತು ಪುಸ್ತಕವನ್ನು ಸುಂದರವಾಗಿ ಅಚ್ಚು ಮಾಡಿಕೊಟ್ಟ ಶ್ರೀ ಚಿಂತಾಮಣಿಯವರ ಉಪಕಾರವನ್ನು ಮರೆಯಲಾರೆ.

ಭಟಕಲ

೧೦–೧೨–೧೯೪೫ **ಬ.ಹೆ.ಶ್ರೀಧರ**

ಅಮೃತಬಿಂದು

'ಅಮೃತಬಿಂದು'ವನ್ನು ಸಹೃದಯರ ಮುಂದಿಡಲೆಂದು ಮುನ್ನುಡಿಕಾರರ ಕೈಗೆ ಒಪ್ಪಿಸಲು ಸಂತೋಷವಾಗುತ್ತದೆ. 'ಮೇಘನಾದ'ವಾದ ಮೇಲೆ ಇದೇ ನನ್ನ ಎರಡನೆಯ ಕವನಸಂಗ್ರಹ. ಇದರಲ್ಲಿರುವ ಕೆಲ ಕವಿತೆಗಳು ಮೂರು ನಾಲ್ಕು ವರ್ಷಗಳಿಂದ 'ಉಷೆ,' 'ಜಯಂತಿ,' 'ಕರ್ಮವೀರ,' 'ಜೀವನ,' 'ಸುಬೋಧ,' 'ನರಸಿಂಹ' ಮುಂತಾದ ಪತ್ರಿಕೆಗಳಲ್ಲಿ ಅಚ್ಚಾದವು, ಕೆಲವು ಸಭೆ ಸಮ್ಮೇಲನಗಳಲ್ಲಿ ಓದಿದವು, ಮತ್ತೆ ಕೆಲವು ಪ್ರಕಟವಾಗದವು. ವಿಶಿಷ್ಟ ಕಾಲಗಳಲ್ಲಿ ವಿಶಿಷ್ಟಾನುಭವಗಳ ಪ್ರಚೋದನೆಯಿಂದ ಉದ್ಬುದ್ಧವಾದ ಈ ಭಾವಗಳು ಸಹೃದಯರ ಹೃದ್ಬುದ್ಧಿಗಳ ಸಹಾನುಭೂತಿಗೆ ಪಾತ್ರವಾದಾವೆಂದು ನಂಬಿ ಅವನ್ನು ಬೆಳಕಿಗೆ ತರುವ ಸಾಹಸಮಾಡಲಾಗಿದೆ.

ಈ ಸಂಗ್ರಹ ಹೊರಬೀಳಲು 'ಸಂಯುಕ್ತ ಕರ್ನಾಟಕ'ದ ಹಿರಿಯರ ಸೌಹಾರ್ದಬಲವೇ ಕಾರಣ. ಅದರಲ್ಲೂ ಶ್ರೀ. ವ್ಹಿ. ಬಿ. ನಾಯಕ, ಎಂ.ಎ, ಎಲೆಲ್.ಬಿ. ಅವರ ಅನ್ಯಾದೃಶ ಸ್ನೇಹವು ಈ ಪ್ರಯತ್ನ ಪೂರ್ಣವಾಗಲು ನೆರವಿತ್ತಿತು. ಅದಕ್ಕಾಗಿ ಅವರೆಲ್ಲರಿಗೆ ಮತ್ತು ಹಿಂದೆ ಪ್ರಕಟನೆಗೆ ಅವಕಾಶವಿತ್ತ ಪತ್ರಿಕೆಗಳಿಗೆ ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮುನ್ನುಡಿಯನ್ನು ಬರೆದುಕೊಟ್ಟು ಈ ಪುಸ್ತಕದಲ್ಲಿ ಕಾವ್ಯಪುರುಷನನ್ನು ವಿಜಯಿಯಾಗೆಂದು ಹರಸಿಬಿಟ್ಟ ಶ್ರೀ ನಾಯಕರಿಗೆ ಆ ಬಗ್ಗೆ ನಾನು ಎಂದೆಂದೂ ಋಣಿ. ಪುಸ್ತಕದ ಮುದ್ರಣದಲ್ಲಿ ವಿಶೇಷ ಆಸ್ಥೆಯಿಂದ ಕೆಲಸ ಮಾಡಿಸಿದ 'ಸಂಯುಕ್ತ ಕರ್ನಾಟಕ'ದ ಮುದ್ರಣಾಲಯದ ವ್ಯವಸ್ಥಾಪಕರಿಗೂ ನಾನು ಆಭಾರಿಯೇ ಸೈ. ಇದನ್ನು ತಮಗೆ ಅರ್ಪಿಸಲು ಅನುಮತಿಯಿತ್ತ ಲೋಕಶಿಕ್ಷಣ ಧರ್ಮನಿಧಿಯ ಧರ್ಮದರ್ಶಿಗಳಾದ ಶ್ರೀ. ದಿವಾಕರ ರಂಗರಾಯರ ವಾತ್ಸಲ್ಯದ ಬಗೆಯನ್ನು ಮರೆಯಲಳವಲ್ಲ.

ಹುಬ್ಬಳ್ಳಿ **ಬ.ಹೆ.ಶ್ರೀಧರ**

೧–೪–೧೯೪೯

ರಸಯಜ್ಞ

ನಾನು ರಚಿಸಿದ ಮೊದಲ ಕವಿತೆ–ಅದರ ಹಿನ್ನೆಲೆ–ಕಾವ್ಯ ಸೃಷ್ಟಿಗೆ ಕಾರಣ:

ನಾನು ರಚಿಸಿದ ಮೊದಲ ಕವಿತೆ ಕರ್ನಾಟಕದ ಗತವೈಭವವನ್ನು ಕುರಿತು. ವಿದ್ಯಾರಣ್ಯರ ವೀರ ಪ್ರಯತ್ನದಿಂದ ಬೆಳೆದ ವಿಜಯನಗರದ ಚರಿತ್ರೆ ನನ್ನ ಮನದ ಮೇಲೆ ಮುದ್ರೆಯಾಗಿ ಮೂಡಿತ್ತು. ಅಂದಿನ ಸರ್ವಾಂಗ ಸುಂದರವಾದ ಕನ್ನಡನಾಡಿಗರ ಬಾಳ್ವೆಗೆದುರಾಗಿ ಇಂದಿನ ನಮ್ಮ ಕೊರತೆಯ ಬಾಳು ನಿಂತಿರುವುದು ಹೃದಯ ವಿದ್ರಾವಕವೆನಿಸಿತು. ಈ ನಾಕ–ನಾರಕ ತಾರತಮ್ಯ ಎದೆಯನ್ನು ಹೊಕ್ಕು ಸಂತಾಪಾಗ್ನಿಯನ್ನು ಹೊತ್ತಿಸಿತು. ಆ ಅಗ್ನಿಸ್ಫುಲಿಂಗದ ಬೆಳಕಿನಲ್ಲಿ ಹಿಂದಿನ ಹರೆಯದ ಬಲ, ಪುಷ್ಟಿ, ಸಾಹಸ, ಕಲೆ, ಸಂಸ್ಕೃತಿ, ಔದಾರ್ಯಗಳು ಮನೋಮುಕುರದಲ್ಲಿ ಪ್ರತಿಬಿಂಬಿಸಿದವು. ಆ ಪ್ರತಿಬಿಂಬ ಪುಂಜವೇ ಛಂದಃಶರೀರ ತಾಳಿ ವ್ಯಕ್ತವಾಯಿತು. ಅಂದಿನ ತುಂಬುಜೀವನದ ರಸ ರುಚಿ ಪುನರುದಯವಾಗಲೆಂಬ ಉತ್ಕಟೇಚ್ಛೆ ಕವನದ ಪ್ರೇರಕ ಶಕ್ತಿಯಾಯ್ತು. ಆ ಗಂಡಸುತನದ ಕಸು ಮತ್ತೆ ನಮ್ಮಲ್ಲಿ ಮೈದಳೆಯಲೆಂಬ ಪ್ರಾಣಮಯ ಪ್ರಾರ್ಥನೆ ಮನೋಭೂಮಿಕೆಯಲ್ಲಿ ಮೈಯುಂಡುಹೋಗಿ ಕವನದ ಹಿನ್ನೆಲೆಯಲ್ಲಿ ಸ್ಫೂರ್ತಿಯ ಉತ್ಸವಾಗಿ ನೆಲೆಸಿತು. ಇಂಥ ಭಾವಸಾಂದ್ರತೆಯ ಒತ್ತಡವೇ ಕಾವ್ಯ ಸೃಷ್ಟಿಗೆ ಕಾರಣವಾಯಿತು. ಇಂದಿಗೂ ನನ್ನ ಇಡಿ ಬಾಳಿನ ಕೇಂದ್ರಸ್ಥಾಯಿ ಇದೇ; ಇದೇ ಗುಪ್ತ ಗಾಮಿನಿಯಾಗಿ ಒಳಗೆ ಹರಿಯುತ್ತ ಬೇರೆ ಬೇರೆ ಭಾವಗಳ ಬೆಳವಣಿಗೆ ಹಾಗೂ ವ್ಯಕ್ತೀಕರಣಗಳಿಗೆ ಕಾರಣವಾಗಿದೆ.

ನನ್ನ ಮನೆತನದ ಕಾವ್ಯಪರಂಪರೆ:

ನನ್ನ ತಂದೆಯ ತಾಯಿ ಮಹಾಲಕ್ಷ್ಮಿಯಮ್ಮ ದ.ಕ. ಜಿಲ್ಲೆಯಲ್ಲಿಯ ತನ್ನ ಗ್ರಾಮದಲ್ಲಿ ತಕ್ಕಮಟ್ಟಿಗೆ ಪ್ರಥಿತಯಶಳಾದ ಕವಯಿತ್ರಿ. ಹಳ್ಳಿಗರ ಅಭಿರುಚಿಗನುಗುಣವಾದ ಹಾಡುಗಳನ್ನು ಕಟ್ಟಿ ಆಕೆ ತನ್ನ ಸುತ್ತುಮುತ್ತಲಿನ ಜನರ ಮೆಚ್ಚಿಗೆಗೆ ಪಾತ್ರಳಾಗಿದ್ದಳು.

ಆಕೆಗೆ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ಈ ಐವರೂ ಕವಿತಾ ಶಕ್ತಿಸಂಪನ್ನರು. ಎಲ್ಲರಿಗೂ ಹಿರಿಯಳಾದ ನನ್ನ ಸೋದರ ಅತ್ತೆ 'ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣಮತಿ'ಯಾಗಿದ್ದಳು. ದೈವಭಕ್ತಿಪ್ರೇರಿತವಾದ ಅನೇಕ ಹಾಡುಗಳನ್ನು ಆಕೆ ಕಟ್ಟಿ ಸ್ವಗ್ರಾಮ–ಪರಗ್ರಾಮಗಳಲ್ಲಿಯ ಭಾವಿಕರ ಮನವನ್ನು ಹರ್ಷಗೊಳಿಸುತ್ತಿದ್ದಳು. ಎರಡನೆಯ ಸೋದರತ್ತೆಗೆ ಎಂಭತ್ತರ ಮೇಲಾಗಿತ್ತು. ಈಕೆ ಬಹಳ ರಸಿಕತೆಯುಳ್ಳವರು; ಜನಪದ ಸಾಹಿತ್ಯ ಕೃತಿಗಳಲ್ಲಿ ಬಹಳ ಆಸಕ್ತಿಯುಳ್ಳವರು. ಈಕೆ ಅಸಂಖ್ಯ ಹಾಡುಗಳನ್ನು ಕಟ್ಟಿ ಹತ್ತಾರು ಗ್ರಾಮಗಳಲ್ಲಿ ಹೆಸರಾದಾಕೆ; ಬಹಳ ಚತುರ ಮತಿಯೂ ವಿನೋದಪರಳೂ ಸಂವಾದಪಂಡಿತೆಯೂ ಆಗಿದ್ದಳು.

ಬವಳಾಡಿ ವೆಂಕಟರಮಣ ಹೆಬ್ಬಾರರೆಂಬವರು ನನ್ನ ಹಿರಿಯ ದೊಡ್ಡ ತಂದೆ. ಅವರು ಮುದ್ದಣನ ಸಮಕಾಲೀನರು; ಹಳಗನ್ನಡ, ಸಂಸ್ಕೃತಗಳಲ್ಲಿ ಕಾವ್ಯರಚನೆ ಮಾಡಬಲ್ಲವರಾಗಿದ್ದರು. ಅವರ ವೈದಗ್ಧ್ಯ ಅಪಾರವಾಗಿದ್ದರೂ ದುರ್ದೈವದಿಂದ ಮದುವೆಯಾದಬಳಿಕ, ಅವರನ್ನು ಸಮೀಪಿಸಿದವರಿಗೆ ಪಾಠ ಹೇಳುವುದೊಂದನ್ನು ಬಿಟ್ಟು ಮತ್ತಾವ ಸಾಹಿತ್ಯಿಕ ಸಾಹಸಕ್ಕೂ ಕೈ ಹಾಕದೆ ಕುಳಿತುಕೊಂಬ ಒಂದು ಬಗೆಯ ಮಾಂದ್ಯ ಅವರಲ್ಲಿ ಮೂಡಿ ಅವರ ಕೈಯಿಂದ ಹೆಸರಿಸಬಹುದಾದ ಒಂದು ಕೃತಿಯೂ ಹೊರಬೀಳಲಿಲ್ಲ. ಮುದ್ದಣನ ಕಾವ್ಯರಸಿಕತೆಯ ನಿಕಷವಾಗಿ ಕೆಲಕಾಲ ಅವನೊಡನಿದ್ದುದೊಂದೇ ಅವರ ಜೀವನದ ಗಣ್ಯಾಂಶವಾಯಿತು.

ಬವಳಾಡಿ ಹಿರಿಯಣ್ಣ ಹೆಬ್ಬಾರರು ನನ್ನ ಎರಡನೆಯ ದೊಡ್ಡ ತಂದೆ. ಅವರು ಸಂಸ್ಕೃತ ಯಕ್ಷಗಾನಗಳಲ್ಲಿ ದೊಡ್ಡ ವಿದ್ವಾಂಸರು. 'ವಿಶ್ವಾಮಿತ್ರ ಪ್ರತಾಪ' ಹಾಗೂ 'ಪಾಂಡವವಿಜಯ' ಎಂಬ ಎರಡು ಯಕ್ಷಗಾನಪ್ರಸಂಗಗಳನ್ನವರು ರಚಿಸಿದ್ದಾರೆ. 'ಭಾನುಮತಿಕಲ್ಯಾಣ' ಎಂಬ ಅವರ ಪ್ರಸಂಗ ಅಚ್ಚಾಗಿದೆ. ಅವರು ಹೆಸರಾದ ಅರ್ಥಗಾರರೂ ಭಾಗವತರೂ ಮೃದಂಗವಾದಕರೂ ಆಗಿದ್ದರು. ಅವರ ತುಂಡುಪದಗಳಾದರೂ ಯಕ್ಷಗಾನ ಮಾದರಿಯ ಪ್ರಾಸ–ಪರಿವೇಷಗಳ ಗತ್ತುಗಾರಿಕೆಗಳಿಂದ ಕೂಡಿವೆ.

ಬವಳಾಡಿ ಸೀತಾರಾಮ ಹೆಬ್ಬಾರರು ನನ್ನ ತಂದೆ. ಅವರೂ ಯಕ್ಷಗಾನ–ಭಾಗವತರಾಗಿದ್ದರು; ಯಕ್ಷಗಾನದ ಮಟ್ಟಿನ ಅನೇಕ ಹಾಡುಗಳನ್ನೂ ಪದಗಳನ್ನೂ ರಚಿಸುತ್ತಿದ್ದರು. ಅವರ ಕವನಗಳಲ್ಲಿ ಧಾಟಿಗೆ ಹೆಚ್ಚಿನ ಪ್ರಾಧಾನ್ಯ; ನಾಟಕೀಯ ಪದಗಳ ರಚನೆಯಲ್ಲಿ ಅವರಿಗೆ ಹೆಚ್ಚಿನ ಆಸಕ್ತಿಯಿತ್ತು.

ಕನ್ನಡದ ಪ್ರಾಚೀನ ಹಾಗೂ ಆಧುನಿಕ ಕವಿಗಳ ಪ್ರಭಾವ ನನ್ನ ಮೆಚ್ಚಿನ ಕನ್ನಡ ಕವಿಗಳು:

ನನ್ನ ಕವಿತೆಗಳ ಮೇಲೆ ಏನಾದರೂ ಪ್ರಭಾವವಾಗಿದ್ದರೆ ಅದರಲ್ಲಿ ಹಳಗನ್ನಡದ ಚಂಪುಗಳಿಗಿಂತ ನಡುಗನ್ನಡದ ಷಟ್ಪದಿಕಾವ್ಯಗಳ ಪ್ರಭಾವಾಂಶವೇ ಹೆಚ್ಚೆನ್ನಬೇಕು. ಅಭ್ಯಾಸಕಾಲದಲ್ಲಿ ಮೊದಲು ನಾನು ವೃತ್ತಗಳಿಂದಲೇ ಆರಂಭಿಸಿದರೂ ಭಾಮಿನೀ ಷಟ್ಪದಿಯಮಾರ್ಗ ನನಗೆ ಬಹುಬೇಗ ಕರಗತವಾದದ್ದು. ಆದರೆ ವಾರ್ಧಿಕದ ಗಾಂಭೀರ್ಯ ನನ್ನ ಮನವನ್ನು ಹೆಚ್ಚಾಗಿ ಸೂರೆಗೊಂಡಿತು. ಅತ್ಯಲ್ಪ ಕಾಲದಲ್ಲಿ ನನಗೆ ಆಧುನಿಕ ಕನ್ನಡದ ರಗಳೆಗಳ ಷಟ್ಪದಿಜನ್ಯತ್ವದ ಗುಟ್ಟು ಹೊಳೆದು, ೧೯೩೬ರ ಹಿಂದು ಮುಂದಿನ ಅವಧಿಯಲ್ಲಿ ಜನಪ್ರಿಯತೆಗೇರುತ್ತಿದ್ದ ಹೊಸಗನ್ನಡದ ಕವಿಗಳ ಛಂದೋವೈವಿಧ್ಯವನ್ನು ನಾನು ಸ್ವೀಕರಿಸಿದೆ.

ಒಂದು ಕಡೆ ರನ್ನ, ಕುಮಾರವ್ಯಾಸರ ವೀರವಾಣಿ ನನ್ನನ್ನಾಕರ್ಷಿಸಿದರೆ ಇನ್ನೊಂದು ಕಡೆ ಪಂಪ, ಲಕ್ಷ್ಮೀಶ್ವರ ಗೀರ್ಗುಂಫ ನನ್ನ ಎದೆಯನ್ನು ಸೂರೆಗೊಂಡಿತು. ಒಂದುಕಡೆ ಪದಗಳ ಪುಂಖಾನುಪುಂಖಗತಿ, ಇನ್ನೊಂದು ಕಡೆ ಗಂಭೀರ, ವಿಸ್ತಾರ ನಾದಸ್ರುತಿ– ಈ ಇಬ್ಬಗೆಯ ಸಾರಸ್ವತ ಸೌಂದರ್ಯ ಸದಾ ನನ್ನ ಮನದಲ್ಲಿ ಮನೆಮಾಡಿಕೊಂಡಿತು. ನನ್ನ ಪದ್ಯದಲ್ಲಿ ಮೊದಲಿನ ಅಂಶ ಕೆಲಮಟ್ಟಿಗೆ ಹೆಚ್ಚು; ಗದ್ಯದಲ್ಲಿ ಎರಡನೆಯ ಬಗೆ ಕೆಲವಂಶ ಕೆಲವೆಡೆ ಕಾಣಬಂದೀತು.

ಹೊಸಗನ್ನಡ ಕವಿಗಳಲ್ಲಿ ಬೇಂದ್ರೆ ಹಾಗೂ ಪುಟ್ಟಪ್ಪನವರ ಹೆಸರುಗಳು ಗಣ್ಯ. ಒಬ್ಬರ ಲಾಲಿತ್ಯ–ಮಾಧುರ್ಯ–ಚಾತುರ್ಯಗಳೂ ಇನ್ನೊಬ್ಬರ ಗಾಂಭೀರ್ಯ–ಭೂಮತ್ವ– ಭೀಮತ್ವಗಳೂ ಹೃದಯಸ್ಪರ್ಶಿಯೆನಿಸಿವೆ. ಛಂದಸ್ಸು, ಪದಮೈತ್ರಿ, ಯತಿ–ಗತಿಗಳನ್ನುಳಿದರೆ, ಮಿಕ್ಕ ಕಾವ್ಯಾಂಗಗಳಲ್ಲಿ ಅದರಲ್ಲೂ ಭಾವಸಂತಾನದಲ್ಲಿ–ನನ್ನ ಸುತ್ತಮುತ್ತಲಿನ ಅಜ್ಞಾನ– ರೋಗ–ದಾರಿದ್ರ್ಯ–ದೌರ್ಜನ್ಯ–ಪ್ರೇಮ–ಸಂತಾಪ–ಶೋಕ–ರೋಷಗಳಲ್ಲದೆ ಯಾವ ಒಬ್ಬ ಕವಿಯೂ ಕುರಿತಾಗಿ ನನ್ನ ಕವನಗಳ ಮೇಲೆ ಪ್ರಭಾವ ಬೀರಿಲ್ಲ; ಏನಾದರೂ ಬೀರಿದ್ದರೆ ಅದು ರಕ್ತಗತ ಆಹಾರದಂತಲ್ಲದೆ, ಬರಿ ಜೀರ್ಣ ಅಥವಾ ಅಜೀರ್ಣ ಆಹಾರದಂತಲ್ಲ. ಆದುದರಿಂದ ಆ ಅಮೃತವಾಹಿನಿಯನ್ನು ಗುರುತಿಸುವುದು ದುಃಸಾಧ್ಯ.

ಆಂಗ್ಲಸಾಹಿತ್ಯದ ಪ್ರಭಾವ–ನನ್ನ ಮೆಚ್ಚಿನ ಆಂಗ್ಲ ಕವಿಗಳು:

ಒಂದು ಕಡೆ ಶೇಕ್ಸ್‌ಪಿಯರನ ಗಂಭೀರ, ನಾಟಕೀಯ ಅಚ್ಚುಕಟ್ಟು, ಮತ್ತು ಮಿಲ್ಟನ್ನನ ನಾದಭಾರಗಳಾದರೆ, ಇನ್ನೊಂದು ಕಡೆ ವರ್ಡ್ಸ್‌ವರ್ತನ ಸರಳತೆ ಹಾಗೂ

ಕೋಲ್‌ರಿಜ್ಜನ ಸೂಚಕತೆಗಳು ನನಗೆ ಮೆಚ್ಚಿಗೆಯಾದವು. ಶೆಲ್ಲಿಯ ಕಲ್ಪನಾಭವ್ಯತೆ ಹೃದಯವನ್ನು ಮೋಹಿಸಿತು. ಆದರೆ ಈ ಯಾವ ಕವಿಗಳೂ ನನ್ನ ಕವನದ ನುಡಿನಡೆಯಮೇಲೆ ವಿಶಿಷ್ಟ ಆಂಗ್ಲತ್ವದ ಪ್ರಭಾವಗಳಿಂದಾದ ಮುಖ್ಯ ಲಾಭವೆಂದರೆ ಕಾವ್ಯವಸ್ತುಗಳ ಆಯ್ಕೆಯ ಸ್ವಾತಂತ್ರ್ಯ ಮತ್ತು ಜಗತ್ತು ಹಾಗೂ ಜೀವನಗಳನ್ನು ಸ್ವತಂತ್ರವಾಗಿ ನೋಡುವ ದೃಷ್ಟಿಪ್ರಖರತೆ. ಭಾವಗೀತದ ವೈಯಕ್ತಿಕತೆಯ ಪ್ರಾಧಾನ್ಯ ನನಗೆ ಎದ್ದು ಕಾಣುವಂತಾದುದು ಆಂಗ್ಲ ಕವನಗಳ ಅವಲೋಕನದಿಂದ ಎಂದು ಧಾರಾಳವಾಗಿ ಹೇಳಬಹುದು.

ನನ್ನ ಸಾಹಿತ್ಯ ಪ್ರಕಾರಗಳು – ಭಾಷೆ:

ನನ್ನ ಸಾಹಿತ್ಯದಲ್ಲಿ ಭಾವಗೀತಗಳೂ ಪ್ರೌಢಪ್ರಬಂಧಗಳೂ ಬಹುಸಂಖ್ಯ. ಕನ್ನಡವೇ ನನ್ನ ದೊಡ್ಡ ಕ್ಷೇತ್ರ. ಆಂಗ್ಲ–ಸಂಸ್ಕೃತ ಹೊಲಗಳಲ್ಲಿ ಬೆಳೆದ ಬೆಳೆ ಬಹಳ ಕಡಿಮೆ. ಕನ್ನಡದಲ್ಲಾದರೂ ಕತೆ–ನಾಟಕಾದಿಗಳು ಔಷಧಿಗೆ ಬೇಕಾದಷ್ಟು ಮಾತ್ರ. ನನ್ನ ಭಾವಗೀತಗಳಲ್ಲಿ ಸೌಂದರ್ಯ ಪ್ರೇಮ, ದೇಶಪ್ರೇಮ, ದೈವಪ್ರೇಮಗಳೂ ಇಂದಿನ ಬಾಳಿನ ಆರ್ಥಿಕ, ಸಾಮಾಜಿಕ, ರಾಜಕೀಯ, ಬೌದ್ಧಿಕ, ಭಾವನಾತ್ಮಕ ದುರವಸ್ಥೆಗಳ ಬಗೆಗಿರುವ ಸಂತಾಪವೂ ಭೂಮಿಕೆಗಳಾಗಿ ನಿಂತಿವೆ. ಪ್ರಬಂಧಗಳಲ್ಲಿ ರಸ–ಭಾವ–ಶಿಕ್ಷಣ–ನೀತಿ–ಉದ್ಯಮ–ತತ್ವಜ್ಞಾನ–ಕಲೆ–ವಿಜ್ಞಾನ–ರಾಜಕೀಯ–ಅರ್ಥವ್ಯವಸ್ಥೆ–ಕೃಷಿ–ಉದ್ಯೋಗ–ವ್ಯಾಪಾರ–ವ್ಯವಹಾರಗಳ ವಿವೇಚನೆ, ವಿಶ್ಲೇಷಣೆ, ವಿವರಣೆ, ವಿಮರ್ಶೆಗಳು ವ್ಯಕ್ತವಾಗಿವೆ. ಪತ್ರಿಕೆಗಳಲ್ಲೇ ನನ್ನ ಸಾಹಿತ್ಯ ವಿಹಾರ ಹೆಚ್ಚು. ಅಚ್ಚಾದ ಪುಸ್ತಕಗಳಿಗಿಂತ ಅಚ್ಚಾದ ಬಿಡಿ ಕವನ–ಲೇಖನಗಳ ಸಂಖ್ಯೆ ಹೆಚ್ಚು.

ಕವಿತೆಗಳನ್ನು ರಚಿಸುವ ನನ್ನ ರೀತಿ:

ಕಷ್ಟ–ನಿಷ್ಠುರ, ಕ್ರೋಧ–ಕಾರ್ಪಣ್ಯಗಳನ್ನು ಸಾಕಷ್ಟು ಎದುರಿಸಿದ ನನ್ನ ಮನ ಕವನಕ್ಕೆ ಕೈಹಾಕಿದ್ದು ಹೆಚ್ಚಾಗಿ (Under provocation) ಉದ್ವಿಗ್ನತೆಯಲ್ಲಿ; (Righteous Indignation) ಸಾತ್ವಿಕ ಸಂತಾಪದ ಸ್ವರೂಪದಲ್ಲಿ. ಅದರ ಶರೀರದ ಬಗ್ಗಾದರೋ–

'ಪಾದಪದ್ಧತಿಯಿಂದ ಪದ ಕೂಡಿ ಬರುವಾಗ
ಯಾರಾರೆ ಗುರುಲಘು ಎಣಿಸುವರೆ?'

ಎಂಬ ಬೇಂದ್ರೆಯವರ ಸವಾಲನ್ನೇ ಹಾಕಬೇಕು. ಬರೆಯುತ್ತ ಹೋಗುವುದೊಂದೇ ಗೊತ್ತಲ್ಲದೆ, ಅದರ ಅಂತ್ಯವೆಲ್ಲಿ, ಅದರ ಶೀರ್ಷಿಕೆಯಾವುದಿರಬೇಕು–ಎಂಬೀ ವಿಚಾರಗಳು ಮೊದಲು ತಲೆಯಲ್ಲಿರುವುದಿಲ್ಲ. ಯಾರಾದರೂ ಹೇಳಿಬರೆಯಿಸಿದ ಕವನವೊಂದೇ ಈ ನಿಯಮಕ್ಕೆ ಅಪವಾದ.

'ರೀತಿ' ಎಂಬುದನ್ನು 'ವಿಶಿಷ್ಟ ಪದಸಂಘಟನಾ ರೀತಿಃ' ಎಂಬ ಅರ್ಥದಲ್ಲಿ ತೆಗೆದುಕೊಂಡರೆ, ನನ್ನ ಪದವಿನ್ಯಾಸಪದ್ಧತಿ ಅಗ್ರಾಮ್ಯ ಪ್ರಯೋಗದತ್ತ ಒಲಿದಿರುವುದು ಸಾಮಾನ್ಯ. ಕೇವಲ ಹಾಸ್ಯವೇ ಗುರಿಯಾಗಿರುವ ಕೃತಿಯೊಂದು ಈ ನಿಯಮಕ್ಕೆ ಬಾಹ್ಯ. ಪದದ ಆಯ್ಕೆಯ ಬಗ್ಗೆ ನನ್ನ ಅಂತರ್ಲಕ್ಷ್ಯ ಹೆಚ್ಚು. Well chiselled words and expressions - ಚೆನ್ನಾಗಿ, ಚೌಕಶುದ್ಧವಾಗಿ ಕಡೆದಿಟ್ಟ ಮೂರ್ತಿ ಯಂತಿರಬೇಕು ನನ್ನ ಪದ–ಎಂಬುದು ನನ್ನ ಸ್ವಾಭಾವಿಕ ಮನೀಷೆ; ಮತ್ತು ತತ್ಸಮ–ತದ್ಭವ–ದೇಶ್ಯಗಳ ಪರಿಭೇದ ಕವಿಗಿರಕೂಡದು ಎಂಬವ ನಾನು. ಸಂಸ್ಕೃತ ಪದಗಳು ಅಗ್ರಾಹ್ಯವೆಂದೇನು, ಆದರೆ ಸಮಸಂಸ್ಕೃತ ಅಥವಾ ತತ್ಸಮಗಳನ್ನು ಹೊರದೂಡ ಹೊರಡುವುದು ಕನ್ನಡದ ಕಾಲು ಮುರಿದಂತೆ, ಕವಿತೆಯ ಕೊರಳಿಗೆ ಕೃತಕ ಪ್ರಯತ್ನದ ಗುದ್ದೆ ಕಟ್ಟಿದಂತೆ. ಇಲ್ಲಿ 'ನಿರಂಕುಶಾಃ ಕವಯಃ' ಎನ್ನದಿದ್ದರೆ ಕಾವ್ಯಕಲೆಯ ಬಾಯಿಗೆ ಬೀಗ ಹಾಕುವ ಪ್ರಸಂಗವೊದಗೀತು. ಕಿವಿಯುಳ್ಳ ಯಾವ ಕವಿಯೂ ಪದಮೈತ್ರಿಯನ್ನು ಲಕ್ಷಿಸದೆ ಶ್ರುತಿಕಷ್ಟ ಪದಸಂಘಟನೆಯನ್ನು ಮಾಡಹೋಗನು. ಆದುದರಿಂದ ಅರ್ಥವ್ಯಕ್ತಿ–ಶ್ರುತಿಸುಭಗತೆಗಳಷ್ಟೇ ನಿಕಷವಲ್ಲದೆ, ತತ್ಸಮ ತಿರಸ್ಕಾರ ನನ್ನ ಬಳಿ ಸುಳಿದಿಲ್ಲ. ಒಮ್ಮೆ ಬರೆದುದನ್ನು ಮೈತುಂಬ ರಿಪೇರಿ ಮಾಡುತ್ತ ಕುಳಿತುಕೊಳ್ಳುವುದಕ್ಕಿಂತ, ಅದನ್ನು ಹರಿದೊಗೆದು ಮತ್ತೊಮ್ಮೆ ಹೊಸಹಾದಿಯಲ್ಲಿ ಬರೆಯುವುದು ನನ್ನ ರೂಢಿ. 'Art is expression' ಎಂಬುದು ನಿಜವಾದರೆ, 'ರೀತಿರಾತ್ಮಾ ಕಾವ್ಯಸ್ಯ' ಎಂಬುದು ಸರಿಯುಲ್ಲವೇ? ಪದವಿನ್ಯಾಸವು ಸ್ವಾಭಾವಿಕವಾಗುವುದೆಂದರೆ ಸಂಸ್ಕಾರ–ಸಹಜವಾಗುವುದು, ಆದುದರಿಂದ ನನ್ನ ರಚನೆಯ ಬಗೆ ಸಕ್ಕದ–ಕನ್ನಡಗಳ ಜಕ್ಕುಲಿಸುವ ಜವ್ವನದ ನಗೆ.

ಕಾವ್ಯವಸ್ತು ಹಾಗೂ ಛಂದಸ್ಸುಗಳಲ್ಲಿ ನನ್ನ ಪ್ರಯೋಗಗಳು:

ಅತ್ಯಂತ (Concrete) ಸ್ಥೂಲ ಜಡ ಪದಾರ್ಥದಿಂದ ಹಿಡಿದು ಅತ್ಯಂತ (Abstract) ಕಲ್ಪನಾಸತ್ತೆ ಮಾತ್ರವುಳ್ಳ ಸೂಕ್ಷ್ಮ ಪದಾರ್ಥಗಳವರೆಗೆ ಯಾವ ವಸ್ತುವನ್ನಾದರೂ ನಾನು ತೆಗೆದುಕೊಳ್ಳುತ್ತೇನೆ.

'ವಸ್ತು ಭೇದವೆ ಕವಿಗೆ?
ರಸೆಯೊಳೆಸೆಯುವ ಸರ್ವ
ವಸ್ತುಗಳೊಳೊಂದೊಂದು ಗುಣವ ಕಂಡು
ಚಿತ್ತದೊಳಗುದಿಸಿರುವ
ಭಾವರಸದುತ್ಸವ ಸ–
ಮಸ್ತರಿಂಗಿತ್ತು ಸಂತೋಷಿಸುವೆನು'

ಎಂಬುದು ನನ್ನ ಪ್ರತಿಜ್ಞೆ. ಮಾನಸಪ್ರಜ್ಞೆಗೆ ಕೇವಲ ಕಲ್ಪನೆ ಎನಿಸಬಹುದಾದ ಭಾವಗಳ ಉಲ್ಲೇಖಕ್ಕೆ ಉದಾಹರಣೆ;

(೧) ಎತ್ತರಕ್ಕೆತ್ತರವಿದೆನಿಸುವುತ್ತುಂಗ ಧೃತಿ–
ಯುತ್ತಮಾಂಗವನೇರಿ ನಿಂತು ನೋಡು–
ಪ್ರತ್ಯುತ್ತರದ ಮೇಲೆ ಮೊರ್ದ ಸತ್ತ್ವೋದ್ರೇಕ–
ದುತ್ಪಾತದಲ್ಲಿ ನೀನೊಂದು ಗೂಡು!

(೨) ಅಗಲ ಅಗಲ ಮುಗಿಲಗಲ ಮತ್ತು ಮ–
ತ್ತಗಲ ಸೊಬಗು ಭವ್ಯ!
ಎದೆಯಗಲವಲ್ಲದಿನ್ನೊಂದು ಕಾಣದದ
ಪೂಜಿಸುವದೆ ದಿವ್ಯ!

(೩) ಅತಿ ಶುದ್ಧ ಬುದ್ಧ ಪರಿಪೂರ್ಣ ಸಚ್ಚಿದಾನಂದ ರೂಪದೊಲವೇ
ಸ್ಥಿತಿಗತಿಗಳರಿತು ಸಜ್ಜನರ ಕೈಯ ಹಿಡಿದೊಯ್ವ
ದೇವಬಲವೇ!

(೪) ಕಲ್ಪನೆಯ ನೆಲಗಟ್ಟು, ಪದೆಪಿನಾ ತಲೆಗಟ್ಟು
ಸಮಚಿತ್ತಕಿರುದ ಮಟ್ಟು;
ಜೀವನದ ಜೀವವದು, ಭಾವನೆಯ ಕಣ್ಣಹುದು–
ಉಸಿರಿನೊಡನದರ ಹುಟ್ಟು!

ನನ್ನ ಛಂದ ತಾಳ–ಗಣವನ್ನು ಬಿಡಲೊಪ್ಪದಾಗಿತ್ತು. ಅದರ ಆವರ್ತದಲ್ಲೇ ಮದ್ದಲೆಯ ಬಡಿತಗಳಂತೆ ವಿವಿಧ ಭಂಗಿಯಿಂದ ಕುಣಿದೀತಲ್ಲದೆ, ಗಡಿಮೊರಿ ಹೋಗಲು

ಗಡಚಾಗಿ ಒಲ್ಲೆನೆನ್ನುತ್ತಿತ್ತು. ಆದರೆ ಅದರ ಮಂದಕ್ರಮದ ವಿಕಾಸದಲ್ಲಿ ತಾಳದ ಇಡಿಯನ್ನು ಒಡೆದು ಗಣಕ್ಕಕ್ಷ್ವೇ ನಿಷ್ಠೆ ದೋರುವ ಮಟ್ಟವನ್ನು ಮುಟ್ಟಿತು. ಗಣವನ್ನು ಮೀರುವ ಗುಣ ಅದಕ್ಕಿನ್ನೂ ಬಂದಿಲ್ಲ. ಎರಡಾದರೂ ಸಮಗಣಗಳಿಲ್ಲದೆ, ಎರಡಾದರೂ ಸಮ ಪಂಕ್ತಿಗಳಿಲ್ಲದೆ (Repetitive Pattern) ಪುನರಾವರ್ತನದ ಮಾದರಿಯಿಲ್ಲದೆ ಹರಿಯುವ ಸಾಲನ್ನು ಪದ್ಯದ ಛಂದವುಳ್ಳದ್ದೆಂದು ನಾನಿನ್ನೂ ಹೇಳಲಾರದವನಾಗಿಯೇ ಉಳಿದಿದ್ದೇನೆ. ನನ್ನ ಚರಣಗಳ ಗತಿ ವೈವಿಧ್ಯಕ್ಕೆ ನಿದರ್ಶನಗಳು:

(೧) ಒಲ್ಲೆ ಒಲ್ಲೆ ಎಂದರೂನು
ಒಲಿಸಿಕೊಳ್ಳಲನುವಾಗುವ
ಸಹ–ಗಮನ ಸಮಾಗಮಗಳೊ
ನಿತ್ಯ ಸುಂದರ!

(೨) ತನ್ನ ಗಡಿಯ ತಾ ದಾಟಿ ಹೋದ ಮೇ–
ಲಿಲ್ಲವಯ್ಯ ಎಲ್ಲೆ!
ನೀನನ್ಯನಲ್ಲದಿರಲೆಲ್ಲ ನಿನ್ನವಶ–
ವಕ್ಕುದಾರಿಯಲ್ಲೆ!

(೩) ಸಂಗೀತದ ಸರಿಗಮದ ರಾಗರಸ–
ಗಂಗೆ ಸರಭರನೆ ಧುಮುಕಿ ನರ್ತಿಸುತ
ರಂಗಕಿಳಿಯೆ 'ತಾಥೈಯ' ಎಂದು ತ–
ನ್ನಂಗ ಭಂಗಿಯಿಂದಲುಗಿಸಿ ದನಿಯನು.

(೪) ಜಗತ್ತಿನೆಲ್ಲಾ ಬಿದಿರಿನ ಮೆಳೆಗಳ
ಕಡಿದು ತಂದು ಭಾರತ ಭೂತಲದಲಿ
ರಾಶಿ ಹಾಕಿ ಭೂಮಂಡಲದಲ್ಲಿಹ
ಗಂಧಕರಂಜಕವೆಲ್ಲವನೊಬ್ಬ
ಆಟಮಾದಿ ನಾನಾವಿಧ ಬಾಂಬುಗ
ಳಗಣಿತ ಕೊಟ್ಟಿಯ ಮೇಗಡೆ ಸುರಿದು
ಬೆಂಕಿಕೊಟ್ಟರಾಗುವ ಚಟಪಟದಂ
ತೊದರಿತು ಮೃತಾತ್ಮ ಶಾಸ್ತ್ರೋಕ್ತಿಗಳನು!

ಇನ್ನೂ ಇತರ ಗಣ, ಯತಿ, ಮಾತ್ರಾನ್ಯಾಸವೈವಿಧ್ಯಗಳನ್ನು ಅಲ್ಲಲ್ಲಿ ಮಾಡಿರುವುದಲ್ಲದೆ, ಪಂಕ್ತಿ ಚ್ಛೇದ, ಪಂಕ್ತಿಸಮನ್ವಯ, ಪಂಕ್ತಿಸಂಯೋಗಗಳ ಮೂಲಕ ಯಥೇಚ್ಛ ನಾನಾತ್ವವನ್ನು ಸಾಧಿಸಲಾಗಿದೆ.

ಪ್ರಿಯತಮ ಅನುಭವ, ಆಶೆ, ಕನಸು–ಕಲ್ಪನೆಗಳನ್ನು ಬಂಧಿಸಿಟ್ಟ ಕವನ ಯಾವ ಕವಿಗಾದರೂ ಸುಂದರತಮವೆನಿಸುತ್ತದೆ. ಆ ಕಾರಣದಿಂದ 'ಅಮೃತಬಿಂದು' ವಿನಲ್ಲಿಯ 'ಉದಯರಾಗ' ಹಾಗೂ 'ಉತ್ತರರಾಗ' ಎಂಬೆರಡು ಕವನಗಳನ್ನು ನನ್ನ ಮೆಚ್ಚಿನ ಕವನಗಳಿಗೆ ನಿದರ್ಶನಗಳನ್ನಾಗಿ ತೆಗೆದುಕೊಳ್ಳಬಹುದು.

"ನನ್ನ ನಂದನ ಅಥವಾ ನಾಳಿನ ಕನ್ನಡ ನಾಡು" –ಇತ್ತೀಚಿನ ಪದ್ಯ.

ನಾನು ಕಾವ್ಯಸೃಷ್ಟಿಯನ್ನು ಪ್ರಾರಂಭಿಸಿದಂದಿನಿಂದ ಅದರ ಬೆಳೆ ಜೀವನದ ಮಿಡಿತೆಗಳಿಂದ ಪದೇ ಪದೇ ಕುಂಠಿತವಾಗುತ್ತ ಬಂದಿದೆ. ಈ ಸೃಷ್ಟಿಯಲ್ಲಿ ಕಾವ್ಯರಸವಾಗಿರುವ ಆತ್ಮಕ್ಕೆ ಛಂದವಾಗಿರುವ ಶರೀರದ ಮಾನಸ ಕವಚವೆಂದರೆ ಛಂದ ಅಥವಾ ಅಪೇಕ್ಷೆಯಾಗಿರುವುದರಿಂದ ಅಪೇಕ್ಷಣಕ್ಕೆ ಕನಿಷ್ಠಾವಧಿಯ ಸಮಾಧಾನವಾದರೂ ದೊರೆತ ಮೇಲೆಯೇ ರಸೇಕ್ಷಣದ ಪ್ರಗತಿ ಪ್ರಾರಂಭವಾದೀತು. ನನ್ನ ಸೃಷ್ಟಿಯಾದ ನಂತರ ನನ್ನ ಕಾವ್ಯ ಸೃಷ್ಟಿಯಾದುದರಿಂದ ನನ್ನ ನಡೆ ಎಂತಾಗುವುದೋ ಆ ಪ್ರಕಾರ ಅದರ ನಡೆ ರೂಪಿಸಲ್ಪಡುವುದು. ನನ್ನ ನಡೆಯ ಭವಿಷ್ಯವನ್ನಿಗ ನಾ ಹೇಳಲಾರೆ.

ಕನ್ನಡದಲ್ಲಿ ಭಾವಗೀತೆಗಳಿಗೇ ಪ್ರಥಮ ಸ್ಥಾನ. ಪುರಂದರ ದಾಸರ ಹಾಗೂ ನಿಜಗುಣ ಶಿವಯೋಗಿಗಳ ಪದಗಳನ್ನು ಮಾತಿಗೆ ಮೊದಲು ಎತ್ತಿ ಆಡುವ ಜನ ಭಾವಗೀತೆಗಳಿಗಲ್ಲದೆ ಮತ್ತಾವುದಕ್ಕೆ ಅಗ್ರಸ್ಥಾನ ಕೊಟ್ಟೀತು? ಇಷ್ಟೇ ನಮ್ಮ ವಿದ್ಯಾಸಂಸ್ಕಾರಗಳ ಸಂಕರ–ಸಂಸೃಷ್ಟಿಗಳ ದೆಸೆಯಿಂದ ಈಗ ಕನ್ನಡದ ಭೂರಿಜನದಿಂದ ಸುಸಂಸ್ಕೃತ ಭಾವಗೀತ ಕೂಡ ಸ್ವಲ್ಪ ದೂರವಾಗಿ ನಿಂತಿರುವಂತೆ ತೋರುತ್ತದೆ. ಅವುಗಳ ಬೆಳೆವಣಿಗೆ ನವ್ಯಾಭಿನವ್ಯ ಹಾದಿಗಳಲ್ಲಿ. ಭಾವದ ಹಾದಿ ಗೀತದ ಬೆಳಕಿನ ಕಂಬವನ್ನು ಬಿಟ್ಟಾಗ ಭಾವಗೀತ ಜನಪ್ರಿಯವಾಗಿ ಉಳಿಯಲಾರದು. ಜಟಿಲ ರೂಪಕಬಂಧ ಹಿಡಿದು ಕೆಲ ಸೊಗಸನ್ನು ಕಾಣಬಹುದಾದರೂ ಅದರಲ್ಲಿ ಮುನ್ನಡೆದರೆ ನವ್ಯ ಚಿತ್ರಕಾವ್ಯ ನಿರ್ಮಿತವಾಗಬಹುದಲ್ಲದೆ ಲೋಕಹೃದಯಾಕರ್ಷಕ ರಸಾಮೃತದ ಕಾವ್ಯಸಮುದ್ರ ಹುಟ್ಟದು. ಆದುದರಿಂದ ಭಾವಗೀತ ನವ್ಯವನ್ನುಳಿದು ಅಭಿನವ್ಯ ಮಾರ್ಗದಲ್ಲಿ ಮುಂದೆ ಸಾಗುವುದೆಂದು ನನ್ನ ಕಾಣ್ಕೆ.

ಜಾತವೇದಕ್ಕೆ ಅರಿಕೆ

ಕಾವ್ಯದ ಅರ್ಥವು ಭಾವರಸಗಳ ಪ್ರೇರಣೆಯ ಸಂಯೋಜನೆ. ರಸವಿಲ್ಲದ ಭಾವವಿಲ್ಲ, ಭಾವವಿಲ್ಲದ ರಸವಿಲ್ಲ ಮಾನವ ಹೃದಯದಲ್ಲಿ ಕಾವ್ಯದಿಂದ ಪ್ರೇರಿತವಾಗುವ ಭಾವಗಳು ೪೨. "ಜಾತವೇದದ" ೨೨ ಪ್ರಜ್ಞೆಗಳು ಅಂಥ ವಿವಿಧ ಕಲಾಭಾವಗಳನ್ನು ಮೂಡಿಸುತ್ತವೆ. ಭಾವಸಾಂದ್ರತೆಯ ಒಂದು ಮಟ್ಟವೇ ರಸ. ಯೋಗ್ಯತೆ, ಆಕಾಂಕ್ಷೆ, ಆಸತ್ತಿಗಳನ್ನುಳ್ಳದ್ದು ವಾಕ್ಯ. ಪ್ರತಿಭೆಯಿಂದ ಸ್ಫುರಿಸಿದ ವಾಕ್ಯದ ಅರ್ಥವು "ಪಿಹಿತಾಪಿಹಿತ"– ಅರೆತೆರೆದ ದೇವಾಲಯದ್ವಾರದಂತೆ! ಪೂರಾ ತೆರೆದಿಡುವುದು ಬೆಳ್ನುಡಿ, ಪೂರಾ ಮುಚ್ಚಿಡುವುದು ಒಗಟು.

ಪದ–ವಾಕ್ಯ–ಛಂದಃಶುದ್ಧಿಗಳು ಶ್ರವ್ಯಕಾವ್ಯಕ್ಕೆ ಸಾರ್ಥಕತೆಯನ್ನು ತಂದುಕೊಡುತ್ತವೆ. ಆಡುಮಾತು ಕಾವ್ಯಕಲಾಮಾಯೆಯಿಂದ "ಕಾವ್ಯಭಾಷೆ" ಯಾಗುತ್ತದೆ. ಅದರ ಅರ್ಥಸ್ಪಷ್ಟತೆಯು ಕಾವ್ಯಾತ್ಮಕ ಭಾವಪ್ರಕಾಶಕ್ಕೆ ಸೀಮಿತವಾಗಿರುವುದು ಔಚಿತ್ಯ. ಕಿರಿದರೊಳ್ ಪಿರಿದಂ ಪೇಳ್ವುದರ ರಹಸ್ಯ.

ಸತ್ಕಾವ್ಯಗಳ ಸತತಾಭ್ಯಾಸದಿಂದ ಪಡೆದ ಶ್ರುತ ಮತ್ತು ಪ್ರಾಮಾಣಿಕ ಪ್ರಯತ್ನಗಳಿಲ್ಲದವರಿಗೆ "ಎತ್ತು ತೆಂಗಿನಕಾಯಬಲ್ಲುದೆ?" ಎಂಬ ಗಾದೆ ಅನ್ವಯಿಸುತ್ತದೆ. ಕವಿಯ ಸ್ವಾನುಭವವು ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದಗಳೆಂಬ ನಾಲ್ಕು ಅನುಭವ ಸಾಧನಗಳಿಂದ ಲಬ್ಧವಾಗಿರುತ್ತದೆ. ಪ್ರೊ. ದೇ. ಜ. ಗೌ. ಅವರ ಮಾತಿನಲ್ಲಿ–

"ಸಾಹಿತ್ಯವು ಜೀವನದ ಅನುಕರಣ ಮಾತ್ರವಲ್ಲ, ಪ್ರತಿಬಿಂಬವಲ್ಲ, ಪ್ರತಿಚ್ಛಾಯೆಯಲ್ಲ, ಪ್ರತಿರೂಪವೂ ಅಲ್ಲ. ಕೇವಲ ಪ್ರತಿನಿಧಿಯೂ ಅಲ್ಲ. (ಅದು) "ಜನತಾಂತರ್ ದೃಷ್ಟಿಯನ್ನೇ" ಮೂಲವಾಗುಳ್ಳ (ಮೂಲಾಧಾರವನ್ನಾಗಿ ತೆಗೆದುಕೊಂಡ) "ನವೀನ ಸೃಷ್ಟಿ" ಎಂದು ಇತ್ಯರ್ಥವಾಗುತ್ತದೆ. ಯಾವುದು ಲೋಕದಲ್ಲಿ ಛಿದ್ರ–ಛಿದ್ರವಾಗಿ, ಖಂಡ–ಖಂಡವಾಗಿ, ಅಪೂರ್ಣವಾಗಿ, ಅಸಂಬದ್ಧವಾಗಿ ಕಾಣುತ್ತದೆಯೋ ಅದು ಆ ನೂತನ ಸೃಷ್ಟಿಯಲ್ಲಿ ಅಖಂಡವಾಗಿ, ಸಂಪೂರ್ಣವಾಗಿ, ಸಾವಯವ ಸಂಬದ್ಧವುಳ್ಳದ್ದಾಗಿ, ಸತ್ಯವಾಗಿ ಕಾಣುತ್ತದೆ ವಸ್ತುವಿನ ಪರಿಪೂರ್ಣ ಜ್ಞಾನವು ಚರ್ಮ ಚಕ್ಷುಸ್ಸುಗಳಿಂದ ಲಭಿಸುವುದಿಲ್ಲ. ಸಾಮಾನ್ಯ ಮನುಷ್ಯನಲ್ಲಿ ಚರ್ಮಚಕ್ಷುಸ್ಸುಗಳ ಕ್ರಿಯೆಯೇ ಪ್ರಧಾನವಾಗಿ ಮನೋನೇತ್ರದ ಪಾಟವವನ್ನು (ಅದು) ಮಸುಳಿಸುತ್ತದೆ. ಆದುದರಿಂದ ಅವನಿಗೆ ವಸ್ತುವಿನ ಸತ್ಯಸ್ಥಿತಿ ಗೋಚರವಾಗುವುದಿಲ್ಲ. ಅದು ಗೋಚರಿಸಲು ಭೌತ ಚಕ್ಷುಸ್ಸುಗಳ ಪಟುತ್ವ ಕಡಿಮೆಯಾಗಿ (ಗೌಣವಾಗಿ) ಅಂತಶ್ಚಕ್ಷುಸ್ಸಿನ ಪಟುತ್ವವು

ತೀಕ್ಷ್ಣಗೊಳ್ಳಬೇಕು. ಅದು ಕಾವ್ಯಲೋಕದಲ್ಲಿ ಮಾತ್ರ ಸಾಧ್ಯ; ಹೊರಗಂಗಳನ್ನು ಮರೆಮಾಡಿ ಒಳಗಣ್ಣನ್ನು ತೆರೆಯಲು (ತೆರೆಯುವುದು) ಅಲ್ಲಿ ಸುಲಭ ಸಾಧ್ಯ. (ಸಾಹಿತ್ಯಮಾರ್ಗದ ಎರಡನೆಯ ಪುಟ ನೋಡಿರಿ).

ಎಲ್ಲರೂ ಚೆನ್ನೆಂದು ಭಾಸವಾಗುವಂತೆ ಶ್ರವ್ಯಕಾವ್ಯಗಳನ್ನು ಓದಲಾರರು. ಅವರು ಚೆನ್ನಾಗಿ ಓದಲು ಬರುವವರಿಂದ ಓದಿಸಿ ಕೇಳಬೇಕು. ಚೆನ್ನಾಗಿ ಓದುವುದೂ ಒಂದು ವಿಶಿಷ್ಟ ಕಲೆ. ಅದರಿಂದ ಕವಿದರ್ಶನದ ಸೂಕ್ಷ್ಮಾಂಶಗಳು ಸ್ಪಷ್ಟವಾಗುತ್ತವೆ. " Emperor's new cloth ಸಾರ್ವಭೌಮನ ಹೊಸ ಬಟ್ಟೆ" ಎಂಬ ಆಂಗ್ಲಗಾದೆಯಂತಿರುವ ಕಾವ್ಯ ಕಲಾಭಾಸವು (ನಾಟಕ ಕಲಾಭಾಸ ಕೂಡಾ) ಗಬೆಲ್ಸ್ ಸಹಜ ಪ್ರಚಾರದಿಂದ ತಾತ್ಕಾಲಿಕವಾಗಿ ಗಣ್ಯಾಭಾಸರನ್ನು ಮರುಳು ಮಾಡೀತು ಆದರೆ ಸಮರ್ಥ ಸಾಹಿತ್ಯ ವಿಮರ್ಶಕರು ಬರೆಯುವ ಸಾಹಿತ್ಯೇತಿಹಾಸದಿಂದ ಅಂಥ ಸಾರ್ವಭೌಮ ವೇಷಧಾರಿಯು ಮುಗ್ಧ ಬಾಲಕರಿಗೆ ದಿಗಂಬರ ಎಂಬ ಸತ್ಯ ಗೊತ್ತಾದಂತೆ, ಅದರ ಸಾರಶೂನ್ಯತೆ ಕಾಲಕ್ರಮೇಣ ಗೊತ್ತಾಗುತ್ತದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಆದಿ ಪಂಪನಿಂದ ಪ್ರಸ್ತುತ ಕವಿಯವರೆಗಿನ ಕವಿಗಳ ಕಾವ್ಯ ಸಾಧನದ ಪ್ರಭೇದಗಳ ಸಹಜವಾದ ತುಲನಾತ್ಮಕ ಪರಿಶೀಲನೆ ಮಾತ್ರ ಅವರುಗಳ ಕೃತಿಗಳ ಮಟ್ಟಗಳ ನಿಚ್ಚಣಿಕೆಯನ್ನು ರಸಿಕರ ಮುಂದಿಡಬಲ್ಲದು. ಇದು ಟಿ.ಎಸ್.ಎಲಿಯಟ್ ಸೂತ್ರ.

ಬಿ.ಎಚ್.ಶ್ರೀಧರ

ಬಿ.ಎಚ್. ಶ್ರೀಧರರ ಕೃತಿಗಳಿಗೆ ಬರೆದ ಮುನ್ನುಡಿಗಳು

ಅಮೃತಬಿಂದು

'ಕರ್ಮವೀರ' ಪತ್ರಿಕೆಯ ಉಪಸಂಪಾದಕರೂ ನನ್ನ ಪರಮ ಮಿತ್ರರೂ ಆದ ಶ್ರೀ ಬ.ಹೆ.ಶ್ರೀಧರರ 'ಅಮೃತಬಿಂದು'ವನ್ನು ಕನ್ನಡಿಗರಿಗೆ ಉಣಬಡಿಸುವ ಮಾಣಿಯ ಕೆಲಸವನ್ನು ಮಾಡಲು ನನಗೆ ಬಹಳ ಆನಂದವೆನಿಸುತ್ತದೆ. ಶ್ರೀ. ಶ್ರೀಧರರು ಈಗಾಗಲೇ 'ಮೇಘನಾದ'ವೆಂಬ ತಮ್ಮ ಕವನ ಸಂಕಲವೊಂದನ್ನು ಕನ್ನಡಿಗರಿಗೆ ಕೊಟ್ಟು ತಮ್ಮಲ್ಲಿರುವ ರಸಿಕತೆಯ ರುಚಿಯನ್ನು ತೋರಿಸಿಕೊಟ್ಟಿರುವರು. ಇದಲ್ಲದೆ, ಆಗಾಗ್ಗೆ ಬೇರೆ ಬೇರೆ ಪತ್ರಿಕೆಗಳು ಕೊಡುತ್ತಿರುವ ಸ್ಥಳ ಹಾಗೂ ಮಹತ್ವ ಇವುಗಳಿಂದಲೇ ಅವರ ಕಾವ್ಯರಸಗಂಗೆಯನ್ನು ಕನ್ನಡಿಗರು ಮೆಚ್ಚಿರುವರೆಂಬ ಅಂಶವು ವ್ಯಕ್ತವಾಗುತ್ತದೆ. ಶ್ರೀ. ಶ್ರೀಧರರು 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಒರೆಗಲ್ಲಿಗೆ ಕೂಡ ಹತ್ತಿದ ಶ್ರೇಷ್ಠ ಗದ್ಯ ಲೇಖಕರಾಗಿರುವರು. ಆದುದರಿಂದಲೇ ಅವರ ಚಿಕ್ಕಪುಟ್ಟ ಪ್ರಬಂಧಗಳು ಕನ್ನಡದಲ್ಲಿಯ ಅನೇಕ ಪತ್ರಿಕೆಗಳಲ್ಲಿ ಕಾಲ ಕಾಲಕ್ಕೆ ಪ್ರಕಟವಾಗುತ್ತಿವೆ. ಶ್ರೀಧರರ ಶೈಲಿಯ ಹಾಗೂ ವಿಚಾರಸರಣಿಯ ವೈಶಿಷ್ಟ್ಯಗಳಾದ ಹಳಗನ್ನಡ ಹೊಸಗನ್ನಡಗಳ ಹೊಂದಿಕೆ, ಪ್ರಾಚೀನ ಅರ್ವಾಚೀನ ಅಭಿಪ್ರಾಯಗಳ ಸುಂದರ ಸಮನ್ವಯ ಇವುಗಳನ್ನು ಈ 'ಅಮೃತಬಿಂದು' ವಿನಲ್ಲಿ ವೆಗ್ಗಳವಾಗಿ ಕಾಣಬಹುದು.

'ಕವಿ'ಯೆಂಬ ಪದ್ಯದಲ್ಲಿ 'ಅವನೆಂಥ ಕವಿಯೊ ಅವನೆಂಥ ಕವಿಯೊ' ಎಂದು ಆರಂಭಿಸಿ, 'ಜಗದಂತರಂಗಸೌಂದರ್ಯಮೂರ್ತಿಯನು ಕಡೆದ ಕಲೆಯ ತಂದೆ'; 'ಆ ಶಾಂತಯೋಗಿ, ಗೌರಾಂಗ, ಗೌರಿಗೇ ಶಿಖರವಾಗಿ ನಿಲುವ, ಈಶಾಂತರಂಗವನು ಕೆತ್ತಿ ಕಡೆದ ಕವಿ ಚೆಲುವರಲ್ಲಿ ಚೆಲುವ' ಎಂದು ತಮ್ಮ ಸಿದ್ಧಾಂತವನ್ನು ಕೊಡುವ ಶ್ರೀ. ಶ್ರೀಧರರ ಅದ್ಭುತ ಕಲ್ಪನಾಶಕ್ತಿಯು ಅತ್ಯಂತ ಪ್ರಶಂಸಾರ್ಹವಾಗಿದೆ. 'ರಾಷ್ಟ್ರಪಿತಾಮಹ' ಎಂಬ ಕವನದಲ್ಲಿ

"ನುಡಿದಂತೆ ನಡೆವ ನವ ದೇವಮಾನವ ನಮ್ಮ
ಜಡೆಯಿರದ ತವಸಿ ದಿವ್ಯಾನುರಾಗಿ"

ಎಂದು ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವವನ್ನು ನಿರಾಡಂಬರ ಸರಲಶೈಲಿಯಲ್ಲಿ

ವ್ಯಕ್ತಪಡಿಸಿದ ಅವರ ವಿನೋಕ್ತಿಯಂಥ ಸುಂದರಾಲಂಕಾರಗಳು ಬಹು ಹೃದ್ಯವಾಗಿವೆ. 'ದೇವನೆಲ್ಲಿಹನು' ಎಂಬ ಪ್ರಶ್ನೆಗೆ 'ನೀನಿಲ್ಲ ಅಲ್ಲಿ' ಎಂಬ ಪದ್ಯದಲ್ಲಿ ಶ್ರೀ. ಶ್ರೀಧರರು–

"ಇಹನಲ್ಲ ನೀನು ಮಾತ್ಸರ್ಯದ ಸರಿ ಸುರಿವಲ್ಲಿ ದಿವ್ಯಹೃದಯಾ
ಬಹನಲ್ಲ ಬುದ್ಧಿಗೇಡಿಗಳು ಬಹಳ ಮಾತಾಡುವಲ್ಲಿ ಸದಯಾ"

ಎಂಬ ಎರಡು ಸಾಲುಗಳಲ್ಲಿ ದೇವನ ಅಸ್ತಿತ್ವಕ್ಕೆ ಅಗತ್ಯವಾದ ಪರಿಸರ ಸನ್ನಿವೇಶಗಳೆಂತಿರಬೇಕೆಂಬುದರ ದಿಗ್ದರ್ಶವನ್ನೇ ಮಾಡಿರುವರು. ಶ್ರೀ. ಶ್ರೀಧರರ ಕಾವ್ಯಶೈಲಿಯ ಮೇಲೆ 'ಗೀಗೀ' ಪದಗಳ ಪ್ರಭಾವ ಬಿದ್ದಿರುವದು ಅಲ್ಲಲ್ಲಿ ಕಂಡುಬರುತ್ತದೆಂಬುದಕ್ಕೆ 'ಜಂಗಮ' ಎಂಬ ಕವನವೇ ನಿದರ್ಶನ. ಈ ಪ್ರಭಾವದ ಜೊತೆಯಲ್ಲಿಯೇ ಶ್ರೇಷ್ಠ ಅಭಿಜಾತ ವಾಙ್ಮಯದ ವರ್ಚಸ್ಸನ್ನು ಸಹ ಶ್ರೀಯುತರ ಕವನಗಳಲ್ಲಿ ಕಾಣಬಹುದಾಗಿದೆ. ಇದುವೇ ಅವರ ಸಮನ್ವಯ ಮಾರ್ಗದ ದೃಷ್ಟಾಂತ. ಉದಾಹರಣೆಗಾಗಿ 'ವೀರಘೋಷ' 'ಉಷಾಸೂಕ್ತ'ಗಳನ್ನು ಉಲ್ಲೇಖಿಸಬಹುದು. ಕೊನೆಯದಾಗಿ, 'ಬಾಳಬೆಳಗಬಹ ಕರುಣವಕ್ಕು ತಾನಮೃತಬಿಂದುವೊಂದು' ಎಂದು ಶುದ್ಧಾಂತಃಕರಣದಿಂದ ಹಾರೈಸಿದ ಅವರ ಬೇಡಿಕೆಯಲ್ಲಿ ನಾನೂ ದನಿಗೂಡಿಸಿ, 'ಚೆಲ್ಲಿಹರಿವ ಕವಿಮನದ ನಲ್ಮೆಯೊಂದಮೃತಬಿಂದು ಕೇಳೆ' ಎಂಬ ವಿಶ್ವಾಸದಿಂದ ಈ 'ಅಮೃತಬಿಂದು'ವನ್ನು ಕನ್ನಡಿಗರ ಕೈಯಲ್ಲಿ ಇಡುತ್ತೇನೆ. ಕನ್ನಡ ಸರಸ್ವತಿಯ ಭಕ್ತರು ಈ ಅಮೃತಬಿಂದುವನ್ನು ಸವಿದು ಚಿರಂಜೀವಿಗಳಾಗಲೆಂದು ಹಾರೈಸುತ್ತೇನೆ.

–ನಾಯಕ ವೆಂಕಟರಾಯ

ಕದಂಬ ವೈಭವ

"ಕದಂಬ ವೈಭವ"ವೊಂದು ಐತಿಹಾಸಿಕ ಖಂಡ ಕಾವ್ಯ. ಮೈಸೂರು ವಿ.ವಿ.ಯು ತನ್ನ 'ಪ್ರಬುದ್ಧ ಕರ್ನಾಟಕ'ದಲ್ಲಿ ಇದರ ಮೌಲ್ಯಕ್ಕೆ ಮೆಚ್ಚಿ ಹಿಂದೆ ತನ್ನ ಸಂಚಿಕೆಗಳಲ್ಲಿ ಪ್ರಕಟಮಾಡಿತ್ತು. ಅದನ್ನೀಗ ಪುಸ್ತಕ ರೂಪಕ್ಕೆ ತರಲುಪಯೋಜಿಸಲಾಗಿದೆ.

ಈ ಕಾವ್ಯವು ಕವಿಯ ಸ್ವಾತಂತ್ರ್ಯದಿಂದ ಇತಿಹಾಸಕ್ಕೆ ಅಪಚಾರವೆಸಗದೆ ಹೊಸ ರಸಪೋಷಕ ಪಾತ್ರಗಳನ್ನು ಕಲ್ಪಿಸಿದೆ, ಅವುಗಳಲ್ಲಿ ಸ್ತ್ರೀ ಪಾತ್ರಗಳು ಗಣ್ಯ.

ಇನ್ನೊಂದು ವೈಶಿಷ್ಟ್ಯವೆಂದರೆ ಕನ್ನಡದ ಹಾಡುಗಬ್ಬದ ಜನಪ್ರಿಯ ಛಂದಸ್ಸೆನ್ನಿಸಿದ ಸಾಂಗತ್ಯದ ಶಾಸ್ತ್ರೀಯ ವೈವಿಧ್ಯಗಳೆಲ್ಲವನ್ನೂ ಇದು ತೋರಿಸಿದೆ.

ಕದಂಬರೇ ಕನ್ನಡನಾಡಿನ (ದಕ್ಷಿಣಾಪಥದಲ್ಲಿ) ಪ್ರಥಮ ಸಾರ್ವಭೌಮರು: ಕೌಟಿಲ್ಯನ ಅರ್ಥಶಾಸ್ತ್ರದಂತೆ ರಾಜ್ಯವಾಳಿ ಕನ್ನಡವನ್ನು ಮೊದಲಬಾರಿಗೆ ರಾಜ್ಯ ಭಾಷೆಯನ್ನಾಗಿ ಮಾಡಿದವರು. ಹಲ್ಮಿಡಿಯ ಶಾಸನವು ಇದಕ್ಕೆ ಉದಾಹರಣೆಯಾಗಿದೆ. ಅವರ ಸಾಮ್ರಾಜ್ಯವು ಗಯೆಯವರೆಗಿತ್ತೆಂದು ಡಾ. ಸಾಲೆತ್ತೊರೆಯವರು ಉಲ್ಲೇಖಿಸಿದ್ದಾರೆ. ಆನುವಂಶಿಕ ಛಂದೋಜ್ಞಾನವುಳ್ಳ ಪ್ರೊ. ಬಿ. ಎಚ್. ಶ್ರೀಧರರಷ್ಟು ಚೆನ್ನಾಗಿ ಕದಂಬರನ್ನು ಅರ್ಥಮಾಡಿಕೊಂಡವರು ವಿರಳ. ಅವರೇ ಕರ್ನಾಟಕ ಸಂಸ್ಕೃತಿಯು ಆರ್ಯರೆನ್ನಿಸಿಕೊಂಡದ್ದು ಅವರಿಗೆ ತಿಳಿದಷ್ಟು ಇತರರಿಗೆ ತಿಳಿದಿದೆಯೋ ಇಲ್ಲವೋ ನಾನರಿಯೆ, ಅವರೇ ಕನ್ನಡದ ಮುನ್ನುಡಿಯಾಗಿದ್ದಾರೆ. ಮಯೂರ ಶರ್ಮನು ಮಯೂರವರ್ಮನಾದದ್ದು ಪರಶುರಾಮನನ್ನು ನೆನಪಿಗೆ ತಂದುಕೊಡುತ್ತದೆ, ಚಂದ್ರಹಾಸನ ಕುಂತಳವು ಕರ್ನಾಟಕವಾದದ್ದು ಕದಂಬರ ಕಾಲದಲ್ಲಿ, ಕದಂಬರು 'ಸಮಗ್ರ ಕರ್ನಾಟಕ ಭೂವರ್ಗ ಭರ್ತಾರರು' (ಶಾಸನೋಕ್ತ) ಮೂರು 'ಮಹಾ ರಾಷ್ಟ್ರಗಳನ್ನು' ಅವರು ಕ್ರಿ.ಶ ೪೫೦ರಲ್ಲಿ ಆಳಿದವರು, ಇದನ್ನರಿಯದ ಕರ್ನಾಟಕಸ್ಥರಿಗೆ ಇದು ಹೊಸ ಬೆಳಕನ್ನು ನೀಡಿದೆ.

ಈ ಕವಿಗಳು ಪ್ರಚಂಡ ವಿಮರ್ಶಕರೂ ಹೌದು, ಇವರ 'ಕಾವ್ಯ ಸೂತ್ರ'ಕ್ಕೆ ಅಕಾಡಮಿ, ವಿ. ವಿದ್ಯಾನಿಲಯ, ತೀ.ನಂ.ಶ್ರೀ ಬಹುಮಾನಗಳು ದೊರಕಿವೆ. ಕಾವ್ಯಶ್ರೀಯಷ್ಟೇ ವಿಮರ್ಶಶ್ರೀಯೂ ಇವರಲ್ಲಿ ನಿವಾಸ ಮಾಡಿದ್ದಾಳೆ ಎಂಬುದಕ್ಕೆ 'ಪರಿಸರಿಪ

ಕನ್ನಡಕ್ಕೊಡೆಯನೀರ ದರಾಂಕಿತ ಬೇಂದ್ರೆ' ಎಂಬುದಿನ್ನೊಂದು ಪ್ರಕಟ ಉದಾಹರಣೆ. ಕರ್ನಾಟಕದ ಘನ ವಿದ್ವಾಂಸರನೇಕರು 'ಕಾವ್ಯಸೂತ್ರವನ್ನು' ಮೆಚ್ಚಿ ಮುನ್ನುಡಿ ಬರೆದಿದ್ದಾರೆ.

ಕನ್ನಡದ ಪುನರುತ್ಥಾನಕ್ಕೆ ಕಂಕಣತೊಟ್ಟ ಈ ಕಾಲದವರಿಗಿವರ ಗ್ರಂಥ ರತ್ನಗಳು ಮಾದರಿಗಳು, 'ಕದಂಬ ವೈಭವ'ದ ಹೊಸತನವು ಹಳೆಯ ವಟವೃಕ್ಷದ ಮಹಾವಿಕಾಸ ಸ್ವರೂಪದ್ದು. ಇದರಿಂದ ಹೊಸಗನ್ನಡಿಗರಿಗೆ ಕನ್ನಡೋದ್ಧಾರಕ್ಕೆ ಸರಿಯಾದ ಹೊಸ ಸ್ಫೂರ್ತಿಯು ದೊರಕುವುದು ಖಂಡಿತ ಎಂದು ನನಗೆ ಭರವಸೆ ಇದೆ. ಹಿಂದು (ಭಾರತೀಯ) ಧರ್ಮದ ಪ್ರಸಾರವನ್ನು ಕಾಂತಾಸಂಮಿತಿಯಿಂದ ಇವರು ಮಾಡಿದ್ದಕ್ಕಾಗಿ ಅಖಿಲ ಭಾರತದ ಹತ್ತನೆಯ ಧರ್ಮ ಸಂಮೇಳನವು 'ಭಾರತೀಯ ಕನ್ನಡ ಸಾಹಿತ್ಯ ರತ್ನಂ' ಎಂಬ ಬಿರುದನ್ನೂ ಪದಕವನ್ನೂ ಇವರಿಗೆ ಕೊಟ್ಟಿದೆ–ಎಂದ ಮೇಲೆ ನಾನಿನ್ನೇನು ಹೆಚ್ಚಳವನ್ನು ಹೇಳಲಿ? ಕನ್ನಡನಾಡ ಪ್ರೇಮಿಗಳಿಗಿದು ಸ್ಫೂರ್ತಿ ರತ್ನಾಕರ.ದಿನಾಂಕ ೦೭:೧೨:೧೯೮೮ಡಾ. **ಎ.ಕೆ.ಶಾಸ್ತ್ರಿ, ಶಿರಸಿ**

ಕಂಟಕಾರಿ ಮಹಾಕಾವ್ಯಂ

ಸನ್ಮಾನ್ಯರಾದ ಶ್ರೀ॥ ಬ.ಹೆ. ಶ್ರೀಧರರನ್ನು ನಮ್ಮ ಬಹುಶ್ರುತ ವಿಮರ್ಶವಿಚಕ್ಷಣ ಶ್ರೀ॥ ಗೌರೀಶ ಕೈಕಿಣಿಯರು "ಆಧುನಿಕ ಸರ್ವಜ್ಞ" ಎಂದು ಕರೆದು, ಅವರ ಬಹುಮುಖ ಸಾಹಿತ್ಯ ಕೃತಿಗಳ ಪ್ರಶಂಸೆ ಮಾಡಿ ಹತ್ತುವರ್ಷ ದಾಟಿದೆ. ಶ್ರೀಧರರ ಪ್ರಕಟಿತ ಕೃತಿಗಳನ್ನಿಲ್ಲಿ ಎತ್ತಿ ಹೇಳುವುದು ಕ್ರಮಪ್ರಾಪ್ತವೂ ಸಮಯೋಚಿತವೂ ಆಗಿದೆ. (೧) 'ಕಿನ್ನರ ಗೀತ' (೨) 'ಅಮೃತ ಬಿಂದು' (೩) 'ಮಂಜು ಗೀತ' (೪) 'ಮೇಘನಾದ' (೫) ರಸಯಜ್ಞ ಇವು ಕವನ ಸಂಗ್ರಹಗಳು. (೧) ಹೊಸಗನ್ನಡ ಸಾಹಿತ್ಯ ಶೈಲಿ (೨) ಬೇಂದ್ರೆ (೩) ಟಿ.ಎಸ್. ಈಲಿಯಟ್ (೪) ಕವೀಂದ್ರ ರವೀಂದ್ರ ಇವು ವಿಮರ್ಶಗ್ರಂಥಗಳು. (೧) ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ (೨) ಜ್ಞಾನ ಸೂತ್ರ (೩) ರಾಷ್ಟ್ರ ಸೂತ್ರ (೪) ಪ್ರತಿಭೆ (೫) ಮಾನಸದರ್ಪಣ (೬) ವಿದೇಶದ ತಿಳುವಳಿಕೆಗಳು (೭) ಪಂಚ ಮುಖಿ –ಇವು ಆಧಾರಗ್ರಂಥಗಳಂತೆ ಇರುವ ಪ್ರೌಢವಿಚಾರ ವಿಶ್ಲೇಷಣ ಗ್ರಂಥಗಳು (೧) ಸಂಸ್ಕೃತ ಸುಭಾಷಿತ ಸಂಗ್ರಹ (೨) ಮನುಸ್ಮೃತಿಯ ೨ನೆಯ ಅಧ್ಯಾಯ (೩) ಭಾರತೀಯ ವಾಙ್ಮಯ (೪) ಭಾರತೀಯ ರಾಜ್ಯಶಾಸ್ತ್ರದ ಸತ್ವ ಮತ್ತು ಸ್ವರೂಪ (೫) ಸ್ವಾತಂತ್ರ್ಯ ಮೀಮಾಂಸೆ ಇವು ಭಾಷಾಂತರ ಕೃತಿಗಳು (೧) ರಮಣ ಮಹರ್ಷಿ (೨) ಮುತ್ತು ರತ್ನ (೩) ಮಯೂರ ಶರ್ಮ (೪) ಕೌಶಿಕ ರಾಮಾಯಣ ಇವು ಮಕ್ಕಳ ಸಾಹಿತ್ಯ. (೧) ಭಾಷಣ ಭೈರವರ ಒಡ್ಡೋಲಗ (೨) ಮರುಳ ಸಿದ್ಧನ ಮಹಾವಚನಗಳು ಇವು ವಿಡಂಬನ ಸಾಹಿತ್ಯ ರತ್ನಗಳು. ಬನವಾಸಿಯ ಕದಂಬರು (ಇತಿಹಾಸ ಗ್ರಂಥ) ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು ಪ್ರವಾಸೀ ಸಾಹಿತ್ಯ. ನೆಹರು ಉವಾಚ (ಸೂಕ್ತಿ ಮುಕ್ತಾಫಲ) ಹೀಗೆ ಮೂವತ್ತರಷ್ಟು ಅತ್ಯುತ್ತಮ ಕೃತಿಗಳನ್ನು ರಚಿಸಿದ ಈ ಧೀಮಂತ ಸಾಹಿತಿಯನ್ನು ಶ್ರೀ "ಕೈಕಿಣಿ" 'ಸರ್ವಜ್ಞ' ಎಂದು ಕರೆದುದು ಸರ್ವಥಾ ಯಥಾರ್ಥವೇ ಸರಿ. ಇಂತಹ ಬಹುಮುಖ ಪ್ರತಿಭೆಯ ಸಾಹಿತಿಗೆ ಹೊಸ ಕನ್ನಡ ಸಾಹಿತ್ಯೇತಿಹಾಸದಲ್ಲಿ ದೊರೆತ ಸ್ಥಾನ–ಮಾನ ಎಂಥಾದ್ದು?

ಅವರು ಇಷ್ಟರಲ್ಲೇ ನಮ್ಮ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕಾಗಿದ್ದಿತು; ಹಾಗೆಯೇ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ

ಆಗಬೇಕಾಗಿದ್ದಿತು. ಆದರೆ, ನಿರ್ಮತ್ಸರತೆ, ಮತ್ತು "ತನ್ನಂತೆ ಪರರ ಬಗೆ" ಎಂಬ ಉದಾತ್ತಭಾವನೆ, ನಮ್ಮ 'ಹಿರಿಯ' ಹಾಗೂ "ಕಾರಣಿಕ" ಸಾಹಿತಿಗಳಲ್ಲಿ ಲುಪ್ತವಾಗಿರುವುದರಿಂದ ಇವರಂತಹ ಅರ್ಹತೆಯವರು ನಮ್ಮ ಭಾಸ ಕವಿ ಹೇಳಿ ಹೋದಂತೆ "ಧನ್ಯಾಭವಂತಿ ಭುವಿಸತ್ಪುರುಷಾ: ಕಥಂಚಿತ್" ಆಗಬೇಕಾಗಿ ಬಂದಿದೆ. ಶೇಕಡಕ್ಕೆ ೪೦ ರಷ್ಟೂ ಸಾಕ್ಷರರಿಲ್ಲದ ನಮ್ಮ ದೇಶದಲ್ಲಿ ಕಥೆ;ಕಾದಂಬರಿ, ಚಲನಚಿತ್ರರಚನಕಾರರಿಗೇ ಹಿರಿಮೆಯ ಪಟ್ಟಮಣೆ ಮೀಸಲು, ಇಂಥ ರಸಿಕರ ರಾಜ್ಯದಲ್ಲಿ, ಶ್ರೀಧರರಂತಹ ಉಚ್ಚಶ್ರೇಣಿಯ ಸಾಹಿತಿಗಳಿಗೆ ದೊರೆಯಬೇಕಾಗಿದ್ದ ಸ್ಥಾನ–ಮಾನ ದೊರೆತಿಲ್ಲವೆಂಬುದು ಸೋಜಿಗವೇನಲ್ಲ!

ಅವರ ಈ ವಿಡಂಬನ ಕಾವ್ಯಕೃತಿ–ಯಾವದೃಷ್ಟಿಯಿಂದ ನೋಡಿದರೂ ಇಂದಿನ ರಾಷ್ಟ್ರಜೀವನದ ರೀತಿನೀತಿಗೆ ಕನ್ನಡಿಯೆಂಬಂತಿದೆ. ದಿವಂಗತ ರಾಜರತ್ನರು ೪೦ ವರ್ಷಗಳ ಹಿಂದೆಯೇ ಇಂದಿನ ಸಾಹಿತ್ಯಪ್ರಪಂಚವನ್ನು ಮನೋಜ್ಞವಾಗಿ ನಿರೂಪಿಸುವ "ಪುರುಷಸರಸ್ವತಿ" ಎಂಬ ವಿಡಂಬನ ಕಾವ್ಯಕೃತಿ ರಚಿಸಿದ್ದರೆ, ಶ್ರೀ ಶ್ರೀಧರರು ಇಂದಿನ ಸಾಮಾಜಿಕ, ಸಾಹಿತ್ಯಿಕ, ರಾಜಕೀಯ ಪರಿಸ್ಥಿತಿಗಳನ್ನೆಲ್ಲ ವಿಡಂಬಿಸುವ ಈ ಕೃತಿಯಲ್ಲೊಂದು ಸಾಫಲ್ಯವನ್ನು ಸಾಧಿಸಿದ್ದಾರೆ.

'ನಾಸಪ್ರಜ್ಞಾವಿಲಾಸ' 'ಜಿಹ್ವಾಪ್ರಜ್ಞಾವಿಲಾಸ' 'ಕರ್ಣಪ್ರಜ್ಞಾವಿಲಾಸ ನೇತ್ರಪ್ರಜ್ಞಾವಿಲಾಸ' 'ಮುಖಪ್ರಜ್ಞಾವಿಲಾಸ' 'ಕುಂತಲಪ್ರಜ್ಞಾವಿಲಾಸ' 'ಕಂಠಪ್ರಜ್ಞಾವಿಲಾಸ' 'ನಖಪ್ರಜ್ಞಾವಿಲಾಸ' 'ಪೃಷ್ಠಪ್ರಜ್ಞಾವಿಲಾಸ' 'ವಿಚಿತ್ರಪ್ರಜ್ಞಾವಿಲಾಸ' ಎಂಬ ಹತ್ತು ಸರ್ಗಗಳಲ್ಲಿ ಇಂದಿನ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಡೆದಿರುವ ವಿಕೃತಿಗಳನ್ನು ರಸವತ್ತಾಗಿ ವಿಡಂಬಿಸಿದ್ದಾರೆ.

ಈ ವಿಡಂಬನಗಳೆಲ್ಲವೂ ಏಕಾಮುಖದೃಷ್ಟಿಯುಳ್ಳವುಗಳು. ಅಸತ್ಯ ಅನ್ಯಾಯ, ಅನಾಚಾರ, ಅಸಮಾನತೆ, ಅಸಭ್ಯತೆ ಮೊದಲಾದ ನಿಷಿದ್ಧ ನಡತೆಗಳನ್ನು ಕಿತ್ತೊಗೆದು ಸಮಾಜಸ್ವಾಸ್ಥ್ಯವನ್ನುಂಟು ಮಾಡುವ ಛಲದಿಂದಲೇ ನವ್ಯ 'ನವೋದಯ' 'ಬಂಡಾಯ' 'ದಲಿತ ಎಂಬ ಚತುರ್ಮುಖ ಸಾಹಿತ್ಯ' 'ವಿಂದು ದುಮು ದುಮಿಸುತ್ತಿದೆ. ಶ್ರೀಧರರ ಈ ಕಾವ್ಯಕೃತಿಯೂ ಅದೇ ಆದರ್ಶವುಳ್ಳದ್ದಾಗಿ ಸ್ಫುರಣಗೊಂಡಿದೆ. ಅವರ ಈ ಸ್ಫುರಣದ ಹಿಂದೆ ಸರ್ವ ಸುಖಸಂತೋಷ ಸಮೃದ್ಧಿಯ ಮಾನವೀಯತಾ ತತ್ವ ಅಡಗಿಕೊಂಡಿಯೆಂಬುದನ್ನು ಓದುಗರು ಸುಲಭವಾಗಿ ಕಂಡುಕೊಳ್ಳಬಹುದು.

ಅವರ ಈ ಕಾವ್ಯದ ಶೈಲಿ ಪ್ರೌಢವಾಗಿದ್ದರೂ–ಹಿಂದಣ ಚಂಪೂಕೃತಿಗಳಂತೆ–ಅದು, ರಸಿಕವಿದ್ವನ್ಮಣಿಗಳನ್ನು ಆನಂದೋಲ್ಲಾಸದಿಂದ ಊಹಿಸಿ ತಣಿಸುವಂತಿದೆ. ಯಾವ ಕಾವ್ಯಕೃತಿಯೇ ಇರಲಿ, ಅದರ ರಸಾನಂದ ಪಡೆಯಬಯಸುವವರಲ್ಲಿ

ರಸಜ್ಞತೆಯೊಡನೆ ಅರ್ಥಗ್ರಹಣ ಶಕ್ತಿಯೂ ಇರಬೇಕಾಗುವದು. ಈ ಮಾತನ್ನು ಇಂದಿನ ನವ್ಯ ಕಾವ್ಯ ಪುರೋಭಾಗಿಗಳ ಕೃತಿಗಳಿಗೂ ಅನ್ವಯಿಸುವಂತಿದೆ ಎಂದರೆ ಶ್ರೀಧರರ ಕೃತಿಗೆ ಆ ದೋಷ ತಟ್ಟದು. ಈ ಕೃತಿ ನಮ್ಮ ಕನ್ನಡ ಸಾಹಿತ್ಯಾಕಾಶದಲ್ಲಿ ಎಂದಿಗೂ ಹಳತಾಗದ ಉಜ್ವಲ ನಕ್ಷತ್ರವಾಗಿ ಬೆಳಗುವುದೆಂಬಲ್ಲಿ ಸಂದೇಹವಿಲ್ಲ. ಕನ್ನಡದ ರಸಿಕರು ಇದನ್ನೋದಿ ಆನಂದ ಪಡುವರೆಂದು ನಂಬಿದ್ದೇನೆ.

ಜಿ.ಆರ್. ಪಾಂಡೇಶ್ವರ

ಜಾತವೇದ

ಎರಡು ದಶಕಕ್ಕಿಂತಲೂ ಹೆಚ್ಚಿನ ಕಾಲ ಯಥಾಶಕ್ತಿ ಸಾಹಿತ್ಯ ರಚನೆ ಮಾಡುತ್ತ ಬಂದಿರುವ ಮತ್ತು ಕೆಲಮಟ್ಟಿಗೆ ಸಮಾನ ಗುಣಧರ್ಮದವರಾದ, ಶ್ರೀಧರರು ಮತ್ತು ನಾನು ಅದೊಂದು ದಿನ ಅವರ ಮನೆಯಲ್ಲಿ ರಾತ್ರಿಯ ಪೂರ್ವಾರ್ಧವೆಲ್ಲ 'ಆಧುನಿಕ ಕನ್ನಡ ಸಾಹಿತ್ಯ'ದ 'ವಿಶ್ವರೂಪದರ್ಶನ'ದಲ್ಲಿ – 'ಸವ್ಯಸಾಚಿ'ಗಳಿಬ್ಬರಂತೆ– ಮಗ್ನರಾಗಿದ್ದೆವು. ಇಪ್ಪತ್ತು ವರ್ಷಗಳಲ್ಲಿ ಇನ್ನೂರು ವರ್ಷಗಳಲ್ಲಿ ಕಾಣದಷ್ಟು ವೈವಿಧ್ಯ ಮತ್ತು ವಿಪುಲತೆಗಳನ್ನು ಗುರುತಿಸಿದೆವು. ಅಂದಿನ ಇಂದಿನ ಸಾಹಿತ್ಯೋತ್ಸವಗಳ ತುಲನೆ ಮಾಡುತ್ತ ಹರಿತ ನಾಲಗೆಯವನಾದ ನಾನೆಂದೆ,: "ಈ ದೇವರ ಸಾಹಿತ್ಯ ದೇವಿ ಸನ್ನಿಧಿಗೆ, ಜಾತ್ರೆಗೆ, ಅಂದು ಕೆಲವೇ ಜನ ಬರುತ್ತಿದ್ದರು; ಎಲ್ಲರೂ ಶಬ್ದ (ಪದ) ಶುದ್ಧಿ, ಪ್ರಯೋಗ ಶುದ್ಧಿ ಮತ್ತು ಭಾವಶುದ್ಧಿ ಎಂಬ ತ್ರಿಕರಣ ಶುದ್ಧಿಯ ಮಡಿವಂತರಾಗಿ, ಕೈಯಲ್ಲಿ, ಒಂದೊಂದೇ 'ಗಿಂಡಿ' ಯನ್ನಾದರೂ, ಪವಿತ್ರವಾದ ಗಂಗೋದಕರಿಂದಲೇ ತುಂಬಿ ತರುತ್ತಿದ್ದರು. ಎಲ್ಲರೂ ಒಂದು ನಿರ್ಮಲ ನಿಯಮಾನುಸಾರವಾಗಿ, ಸುಮಧುರವಾದ ವೀಣೆ–ಕೊಳಲು–ಮೃದಂಗಗಳ ಸಾತ್ವಿಕ ಸುಸ್ವನ ಸಹಿತ ಸಾಲಾಗಿ ದೇವರ ಮೆರವಣಿಗೆ ಮಾಡುತ್ತ ಬಂದರು, ಕೆಲ ದೂರ ಸಾಗುವಷ್ಟರಲ್ಲಿಯೇ, ಹಿಂದಣಿಂದ ಒಂದು ದೊಡ್ಡ ಜನಜಂಗುಳಿಯು, ಡೋಲು, ನಗಾರಿ, ಭೇರಿ, ವಿವಿಧ ಸ್ವರಗಳ ತಂಬಟೆ, ಬಗೆಬಗೆಯ ತಾಳ–ಜಾಗಟೆ, ಚಂಡೆ, ಡಮರು ಮೊದಲಾದ ವಿವಿಧ ದೇಶಗಳ ವಿವಿಧ ಬಣ್ಣದ ವಿವಿಧ ರೀತಿಯ ಉಡುಗೆ ತೊಡುಗೆ ತೊಟ್ಟುಕೊಂಡು ಬಂದು ನುಗ್ಗಿಬಿಟ್ಟಿತು; ಹಾಗೂ ತೇರಿನ ಮಣಿಯನ್ನು ಸೆಳೆದುಕೊಂಡು ಪ್ರಚಂಡ ಘೋಷ ಮಾಡುತ್ತ ಮುಂದೆ ಸರಿಯತೊಡಗಿತು. ನಿಯಮ ನಿಬಂಧನೆಗಳೊಳಗಾಗಿ ದೇವರ ಮೆರವಣಿಗೆ ಹೊರಡಿಸಿದ್ದ ಅನೇಕ 'ಮಡಿವಂತ'ರು ಈ ಜನಜಂಗುಳಿಯ 'ನೂಕುನುಗ್ಗಲ'ಲ್ಲಿ ಎತ್ತೆತ್ತೋ ಚೆದುರಿ ಹೋದರು! ತಾವು ನಿಂತಲ್ಲಿಂದಲೇ ಒಬ್ಬರನ್ನೊಬ್ಬರು ಗುರುತಿಸಿ, "ಹೋಯ್! ನಾನಿಲ್ಲಿದ್ದೇನೆ. ನನ್ನ ತೀರ್ಥದ ಗಿಂಡಿಯ ನೀರೆಲ್ಲ ಚೆಲ್ಲಿಹೋಯಿತು; ಹೊದ್ದ ಶಾಲೆಲ್ಲ ಧೂಳಿಯಿಂದ ಬಣ್ಣಗೆಟ್ಟು ಮೈಲಿಗೆಯಾಯಿತು ನೀವು ಹೇಗಿದ್ದೀರಿ?" ಎಂದು ಕೇಳುವಂತಾಯಿತು. ಅವರ ಸಾತ್ವಿಕ ವಾದ್ಯಗಳ ಸುಸ್ವನವೆಲ್ಲ– ಸ್ವರಾನುದಾತ್ತ ಸಹಿತವಾದ ಮಂತ್ರಘೋಷವೆಲ್ಲ– ಈ ಹೊಸ ಪರಿಸೆಯ

ಪ್ರಚಂಡಧ್ವಾನ (medley of sounds)ದಲ್ಲಿ, "ಕೋಗಿಲೆಯ ಸರವರಣ್ಯ ದೊ। ಳೇಗೈಯ್ದು ದೊ ಜಡಜನಾರಣ್ಯದೊಳಿಂ। ಪೋವಡಿಸದೆ?" ಎಂದು ಪಂಪ ಕವಿ ನಿಟ್ಟುಸಿರು ಬಿಟ್ಟು ಹೇಳಿದಂತಹ ಪರಿಸ್ಥಿತಿಗೆ ತುತ್ತಾಯಿತು! ಇದಕ್ಕೇನೆನ್ನುತ್ತೀರಿ?" ಎಂದೆ. ದಯದ ಸಹೃದಯತೆಯಲ್ಲೊಂದು ಕಾಂತಿಯನ್ನು ಚಿಮ್ಮಿಸಿತು. "ಹಾಗಾದರೆ, ನನ್ನದೊಂದು ಕವನ ಸಂಕಲನಕ್ಕೆ ನೀವೊಂದು ಮುನ್ನುಡಿ ಬರೆಯಬಾರದೇಕೆ?" ಎಂದು ಕೇಳಿಯೇ ಬಿಟ್ಟರು. " 'ಕ್ವ ಸೂರ್ಯಪ್ರಭವೋ ವಂಶಃ ಕ್ವಚಾಲ್ಪವಿಷಯಾ ಮತಿಃ' ಎಂದಂತೆ ಪ್ರಖರಪ್ರತಿಭಾನದ ನೀವಾರು? ಹರಕು ಮುರುಕು ತಿಳಿವಳಿಗೆಯ ಪರಪ್ರತ್ಯಯನೆಯ ಬುದ್ಧಿಯ ನಾನಾರು? ಮುನ್ನುಡಿ ಬರೆವ ಹೊರೆ ಹೊರಿಸಬೇಡಿ" ಎಂದೆ. ಇದಾದ ಕೆಲ ಕಾಲಾನಂತರ ಪುನಃ ಅವರು ಅದೇ ಪ್ರಶ್ನೆಯ ಪಲ್ಲವಿ ಹಾಡಿದರು. "ಆಗಲಿ, ನಿಮ್ಮ ಕವನಗಳು ನನಗುಂಟು ಮಾಡಿದ ಆನಂದಕ್ಕೆ ಮಾತಿನ ರೂಪವನ್ನು ಕೊಟ್ಟು ಬಿಡುತ್ತೇನೆ. ಆದರೆ ಹಾಗೆ ಮಾಡುವಲ್ಲಿ ನಿಮ್ಮ ಅಕ್ಕಪಕ್ಕಕ್ಕೂ ತುಸು ದೃಷ್ಟಿ ಹರಿಯಿಸಲೇ?" ಎಂದೆ. "ಅಕ್ಕಪಕ್ಕಕ್ಕೆ ಕಣ್ಣು ಹಾಯಿಸದಿದ್ದರೆ ನಾನೆಲ್ಲಿದ್ದೇನೆ? ನನ್ನ ಗಾತ್ರ ಎಷ್ಟು? ನಿಂತ ನೆಲದ ಎತ್ತರ ಎಷ್ಟು? ಎಂಬುದರ ಕಲ್ಪನೆ ಹೇಗಾದೀತು? ಎಂದರು. "ಹೌದು; ಏಕಗ್ರಾಹಿಗೆ ಸಾಮಾಜಿಕತೆ ಸಲ್ಲದು; ಸಾಮಗ್ರ್ಯ ಒಲ್ಲದು, ಜನ ನಿಬಿಡವಾದ ಯಾತಾಯಾತದ ದಾರಿ ನಡೆವವನು ಒಂದೇ ವಸ್ತುವಿನಲ್ಲೇ ದಿಟ್ಟಿಯಿಟ್ಟು ನಡೆದಲ್ಲಿ ಅಪಾಯ ಸಂಭವಿಸುವದೇ ಸರಿ, ಅಲ್ಲವೇ?" ಎಂದು ನಾನು ಪ್ರಾಶ್ನಿಕನಾಗಿ ಸಮಾಧಾನ ಹೇಳಿಕೊಂಡೆ.

"ನಿಮ್ಮ ಮೊದಲ ಕವನಸಂಗ್ರಹ ಹೊರಬಂದದ್ದೆಂದು?" ಎಂದು ನಾನು ಕೇಳಿದೆ. "ಅದೋ? ಈಗ್ಗೆ ಸುಮಾರು ೧೫ ವರ್ಷಗಳ ಹಿಂದೆ; 'ಮೇಘನಾದ' ಅದರ ಹೆಸರು. "ಆ ಪುಸ್ತಕಕ್ಕೆ ಸಿಕ್ಕಿದ ಸ್ವಾಗತ ಹೇಗಿತ್ತು?" ಎಂದೆ ನಾನು. "ಅಂದಿನ ಪ್ರಸಿದ್ಧ ಪತ್ರಿಕೆಗಳೂ, ವಿದ್ವಾಂಸರೂ ಅದನ್ನು ಮೆಚ್ಚಿ ಬರೆದಿದ್ದರು" ಅಂದರು. "ಆ ಬಳಿಕ ಇಂದಿನ ತನಕವೂ ನೀವು ಕವನಗಳನ್ನು ಬರೆಯುತ್ತ ಬಂದಿದ್ದೀರಿ ಮತ್ತು ಪುಸ್ತಕ ರೂಪವಾಗಿಯೂ ಹೊರ ಹಾಕಿದ್ದೀರಿ. ಅಲ್ಲವೆ?" ಎಂದೆ ನಾನು. "ಹೌದು. ಆ ಬಳಿಕ ಬರೆದ ಕವನಗಳೇ ಹೆಚ್ಚು; ನೂರಾರು! ಅನೇಕ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಾಗೂ, ಇಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಎಲ್ಲ ವಿಷಯಗಳ ಅನುಭವ–ಸ್ಫೂರ್ತಿ–ಸಂವೇದನೆಗಳೂ ಅವುಗಳಲ್ಲಿ ತುಂಬಿಕೊಂಡಿವೆ. ಹೆಚ್ಚೇಕೆ? ಲಕ್ಷ ಕೊಟ್ಟು ನೋಡಿದಲ್ಲಿ ತಿಳಿದೀತು. 'ನವ್ಯ' 'ಅನವ್ಯ' 'ಭವಿಷ್ಯೋತ್ತರನವ್ಯ' ಎಲ್ಲಾ ಅವುಗಳಲ್ಲಿ ವಿಶ್ವರೂಪದರ್ಶನ ಕೊಟ್ಟಿವೆ" ಎಂದವರು ದೃಢವಾಗಿ ನುಡಿದರು. "ಮುನ್ನುಡಿ ಬರೆಯುತ್ತೀರಾ?" ಪ್ರಶ್ನೆಗೆ "ಹೌದು" ಎಂದುಬಿಟ್ಟೆ!

(೨)

ಈ ಸಂಭಾಷಣೆಯ ಬುಡ ಕಡೆ ಸರಸ–ಸುಲಭವಾಯಿತು; ಆದರೆ ಅಂದು ಮಂಡಿಸಿದ ಪ್ರಶ್ನೆಯಿಂದ ಮಾತ್ರ ನನಗೆ ಬಿಡುಗಡೆ ಆಗಲಿಲ್ಲ. "ಆಡುವುದು ಸುಲಭ, ಮಾಡುವುದು?" ಎಂಬ ಪ್ರಶ್ನೆ ಅದೇ ಮರು ಮುಂಜಾನೆಯೇ ನನ್ನನ್ನು "ಬ್ರಹ್ಮಕಪಾಲ"ದಂತೆ ಹಿಡಿದುಕೊಂಡು ಬಿಟ್ಟಿತು. ಸಂಭಾಷಣೆಯಲ್ಲಿ ಪ್ರಶ್ನೋತ್ತರರೂಪವಾದ ಕೆಲವೊಂದು ವಿವರಗಳನ್ನಂತೂ 'ಸಂಗ್ರಹಿಸಿ'ಕೊಂಡೆನು. ಮನೆಗೆ ಬಂದು ಮೂಲೆಯಲ್ಲಿ ಕೂತು ಕವಿಸಹಜವಾದ ಖಿನ್ನತೆ–ಪ್ರಸನ್ನತೆಗಳ ನಡುವಿನ 'ಹ್ಯಾಮ್ಲೆಟ'ನಂತಾಗಿಬಿಟ್ಟೆ. "ಸಾಹಿತ್ಯ ಶ್ರೀಧರರ ಅಕ್ಕಪಕ್ಕವೇ! ಕಣ್ಮುಂದೆ ಬಾ!" ಎಂದು ಕಣ್ಮುಚ್ಚಿದೆ. "ಹೊಸಗನ್ನಡ" ಕಾವ್ಯಾರಾಮವು ಬಗೆಗಣ್ಣಿನ ಮುಂದೆ ನಳನಳಿಸಿ ಹಬ್ಬಿಹೋಗಿತ್ತು! ಈ ಶತಮಾನದ ಎರಡನೆಯ ದಶಕದ ಕೊನೆಯಿಂದ ಐದನೆಯ ದಶಕದ ನಡುವಿನ ವರೆಗೆ ಚಾಚಿಕೊಂಡಿರುವ ಈ ಪುಷ್ಪೋದ್ಯಾನವು ಒಂದು 'ವಿಶ್ವ ಸಸ್ಯವಾಚಿ (Botanical garden)ಯಂತೆ ಕಂಡಿತು. ಪ್ರಪಂಚದ ಬೇರೆ ಬೇರೆ ದೇಶದ ಭೂಗುಣ–ವಾಯುಗುಣ–ನೀರುಗುಣ–ಬಿಸಿಲುಗುಣಗಳಲ್ಲಿ ಬೆಳೆಯುವ ವಿವಿಧ ಜಾತಿಯ ಗಿಡ–ಮರ–ಬಳ್ಳಿಗಳು ಹೂ, ಹಣ್ಣು, ಚಿಗುರುಗಳಿಂದ ತುಂಬಿ ಸೊಂಪಾಗಿ ಬೆಳೆದು ನಿಂತಿದ್ದವು. ಆಂಗ್ಲರ ಶಿಕ್ಷಣ ಸಂಸ್ಕೃತಿ ಬರುವ ಮುನ್ನ ಸಂಸ್ಕೃತ ಸಾಹಿತ್ಯವೇ ನಮ್ಮ ಸಾಹಿತ್ಯರಚಕರ ಆದರ್ಶ ಸಾಹಿತ್ಯವಾಗಿದ್ದಿತು. ಆದರೂ, ವೈಷ್ಣವದಾಸರೂ, ಶಿವಶರಣರೂ 'ದೇಸಿ' ನುಡಿ, ನುಡಿಗಟ್ಟುಗಳನ್ನೂ, ಛಂದಸ್ಸಿನ(?) ಹಾಡುಗಳನ್ನೂ ಕಾದುಕೊಂಡು ಬಂದಿದ್ದರು. ಪ್ರೇಮ–ಕಾಮ–ಕೋಪ–ತಾಪಗಳ ಸರ್ವತೋಮುಖಗಳನ್ನೂ ಅವರು ತಮ್ಮ 'ದೇಸಿ'ಗಳಲ್ಲಿ 'ದೇಸಿ'ಯಾಗಿಯೇ ಹಾಡಿ ಹರಿಯಿಸಿದ್ದರು. ಆಂಗ್ಲ ಶಿಕ್ಷಣವು ಸಾಗರೋತ್ತರ ಖಂಡಗಳ ಶಿಕ್ಷಣ ಸಂಸ್ಕೃತಿಗಳಿಗೊಂದು ಕಿಟಕಿಯಾಗಿ ಪರಿಣಮಿಸಿತು. ಜರ್ಮನ್, ಫ್ರೆಂಚ್, ಇಟಾಲಿಯನ್, ರಶ್ಯನ್, ಸ್ಪೇನಿಷ್, ಡೇನಿಷ್, ಚೀನೀ, ಜಪಾನೀ ಮೊದಲಾದ ಸರ್ವ ಸಾಹಿತ್ಯಗಳ ಕತೆ, ಕಾದಂಬರಿ, ಕಾವ್ಯ, ನಾಟಕ ಎಂಬುವೆಲ್ಲ ಇಂಗ್ಲೀಷ ಭಾಷಾಂತರದ ಮೂಲಕ ನಮ್ಮ ಸುಶಿಕ್ಷಿತ ಸಾಹಿತಿಗಳಿಗೆ ಕರತಲಾಮಲಕವಾಗಿಬಿಟ್ಟಿತು. ಅದರ ಪರಿಣಾಮವಾಗಿ "ಹೊಸ ಹೊಸ ಪ್ರಯೋಗಗಳು" ಎಂಬುವು ಹುಟ್ಟಿಕೊಂಡವು. ಈ ಪ್ರಯೋಗಗಳಲ್ಲಿ ಆಜನ್ಮಪ್ರತಿಭೆ ಮತ್ತು ಸ್ವಪರಿಸರದ ಜೀವನಾನುಭವಗಳಿಂದ ಹೊರಹೊಮ್ಮಿದ ಕಾವ್ಯಸತ್ವ ಎಷ್ಟೋ! ಒಬ್ಬೊಬ್ಬ ಕವಿ, ಕಾದಂಬರಿಕಾರ, ನಾಟಕಕಾರ, ಕಥಾಕಾರ ಹತ್ತು, ಇಪ್ಪತ್ತು, ಮೂವತ್ತು, ನಾಲ್ವತ್ತು ಸಂಖ್ಯಾಪರಿಮಿತಿಯ ಗ್ರಂಥಗಳನ್ನು ಹೊರಹಾಕಬಹುದು. ಆಂಗ್ಲಶಿಕ್ಷಣ ಹೊಂದದೇ ಇರುವ ಭಾಸ, ಕಾಳಿದಾಸ, ಭಾರವಿಗಳು ಈ ಶತಮಾನದ ಹಿಂದುಸ್ಥಾನದಲ್ಲಿ ಹುಟ್ಟಿದ್ದರೆ ಇಷ್ಟೊಂದು ದೊಡ್ಡ ಸಂಖ್ಯೆಯಿಂದ ಕೃತಿ ರಚಿಸುತ್ತಿದ್ದರೋ ಹೇಳಲಾಸಲ್ಲ! ಆಂಗ್ಲಶಿಕ್ಷಣವಿಲ್ಲದ ಅವರು ಎಲ್ಲೋ ಮೂಲೆಯಲ್ಲಿ ಕೂತು "ಕಾವ್ಯಮಾನಂದಾಯ"

ಆದರೆ "ಸ್ವಾಂತಸ್ಸುಖಾಯ" ಮಾತ್ರ ಎಂದುಕೊಳ್ಳುತ್ತಿದ್ದರೋ ಏನೋ ಅಥವಾ ಕಾಲಮಾನಕ್ಕನುಸಾರವಾಗಿ ಅವರೂ ಸಂಸ್ಕೃತದ ಬದಲು ಆಂಗ್ಲಶಿಕ್ಷಣ ಪಡೆಯುತ್ತಿದ್ದರೋ ಏನೋ! ಅಂತೂ 'ಹೊಸಗನ್ನಡ' ಸಾಹಿತ್ಯ ವಿಪುಲವಾಗಿ ಬೆಳೆದಿದೆ. ನೂರಕ್ಕೆ ೧೫ ರಷ್ಟು ಜನ ಅಕ್ಷರಸ್ಥರಾಗಿರುವ ಇಂದೇ ಇಷ್ಟೊಂದು ದೊಡ್ಡ ಪ್ರಮಾಣದಿಂದ ಸಾಹಿತ್ಯ ನಿರ್ಮಾಣವಾಗುತ್ತಿರುವಾಗ, ನೂರಕ್ಕೆ ನೂರು ಜನ ಸಾಕ್ಷರರಾದ ಮೇಲೆ, ಪ್ರತಿಯೊಬ್ಬನ 'ಬಂಗ್ಲೆ'ಯ ಮುಂದೂ ಒಂದೊಂದು ಹೂದೋಟ ಬೆಳೆಸಿಕೊಂಡಂತೆ ಪ್ರತಿಯೊಬ್ಬನೂ ಹತ್ತಾರು ಗ್ರಂಥಗಳ; ಕರ್ತೃವಾಗುತ್ತಾನೋ ಏನೋ ಕೊನೆಗೆ ಪುಸ್ತಕಗಳದ್ದೇ ವಿಂಧ್ಯ–ಹಿಮಾಚಲಗಳೇಳುತ್ತವೋ ಏನೋ! ಭರತಖಂಡವೆಲ್ಲ ಸಾಹಿತ್ಯರಸಾಯನದ ಮಹಾಸಾಗರದಲ್ಲಿ ತೇಲಾಡುವಂತಾಗುವುದೋ ಏನೋ! "ಬರುವ ದಿನ ಬಲ್ಲವರಾರು?" ಎಂದು ಸಮಾಧಾನ ತಾಳಿಕೊಳ್ಳೋಣ.

ಶ್ರೀಧರರ ಕಾವ್ಯಪುಷ್ಪೋಧ್ಯಾನದಲ್ಲಿ ಸಂಸ್ಕೃತದ ಭೂಗುಣ–ವಾಯುಗುಣ–ನೀರುಗುಣಗಳ ಹೂ ಗಿಡಬಳ್ಳಿಗಳೂ ಉಂಟು, ಆಂಗ್ಲ ವಾತಾವರಣ ಜಲಾವರಣಗಳವುಗಳೂ ಉಂಟು. ವೈಯಕ್ತಿಕಾನುಭವ–ಸಂವೇದನೆಗಳ (Romantic) ಕವನಗಳೆಲ್ಲ ಸಂಪೂರ್ಣ 'ಸ್ವದೇಶಿ'ಗಳು; "ಕಾಮರ್ಸಿನಿಂದಲೇ ಕಾವ್ಯಗಳ ಸಿದ್ಧಿ ಕೇಳ್", "ಕಾರಕೂನ ಉವಾಚ", "ಕಾಡಿಯೋ ಬೇಡಿಯೋ ತಂದೆ ನಾ ರಾಡಿಯೋ । ರೇಡಿಯೋಕಿಂತಲೂ ನವ್ಯವಿದು ಭವ್ಯವಿದು" "ಏರಂಡವೊಂದೆ ಒಂದೆಂದು ಸಾರುವೆನು ಮಹಾವೃಕ್ಷವಿಲ್ಲಿ! ನೀರುಳ್ಳಿಯೊಂದೆ ಸರ್ವೋತ್ತಮವಲ ಪರಿಮಳಸ್ಪರ್ಧೆಯಲ್ಲಿ" ಇವೇ ಮೊದಲಾದ ಕವನಗಳೆಲ್ಲ ಪ್ರತಿಮಾರೂಪದಿಂದಲೂ ಅನ್ಯೋಕ್ತಿ ವಿಧಾನದಿಂದಲೂ ಇಂದಿನ ಬಾಳನ್ನು ತೋರುವ ಸಾರುವ 'ನವ್ಯ'ಗಳು'. ಆದ್ದರಿಂದ ಇವುಗಳು ಎರಡೂ ಬಗೆಯ ಕಾವ್ಯರಸಿಕರಿಗೆ–ಏಕಕಾಲಕ್ಕೇ ಇಬ್ಬರಿಗೂ ನೀರುಣಿಸುವ ನದಿಯಂತೆ ಆನಂದವನ್ನೀಯುವ ರಸವಾಹಿನಿಗಳಾಗಿವೆ. ಪಾಂಡಿತ್ಯದ ಪದಪ್ರೌಢತೆಯೊಂದಿಗೆ ಅಜಸ್ರವಾದ ಶೈಲಿಸುಭಗತೆಯೂ, ಅಶ್ಲಿಷ್ಟವಾದ ಭಾವಕಾಂತಿಯೂ ಇವರ ಕವಿತ್ವಗಳಲ್ಲಿಯ ತ್ರಿಗುಣತೆಯಾಗಿದೆ. ಕನ್ನಡದ ರಸಿಕರು, ವಿಮರ್ಶಕರು, ಕಾವ್ಯಪ್ರಸಾರಕ ಗಮಕಿಗಳು ಈ ಕಾವ್ಯೋದ್ಯಾನದಲ್ಲಿ ಕಣ್ತೆರೆದು, ಬಗೆದೆರೆದು ವಿಹರಿಸಿದಲ್ಲಿ ಇಂದಿನ ಹಿರಿಕವಿಗಳ ಹಂತದಲ್ಲಿ ಶ್ರೀಧರರ ಸ್ಥಾನವು ನಿಜವಾಗಿಯೂ ಗಣ್ಯವೆಂಬ ಸತ್ಯವು ಮನದಟ್ಟಾಗದೇ ಇರದು.

– ಜಿ.ಆರ್. ಪಾಂಡೇಶ್ವರ್

ಜಾತವೇದಕ್ಕೆ ಮುನ್ನುಡಿ

ಪ್ರಿನ್ಸಿಪಲ್ ಬಿ.ಎಚ್.ಶ್ರೀಧರರು ತಮ್ಮ ಕಾಲೇಜಿನಿಂದ ನಿವೃತ್ತರಾದರೂ ಕಾವ್ಯ ಶಾಸ್ತ್ರಗಳಿಂದ ನಿವೃತ್ತರಾಗಿಲ್ಲ. ಅದಕ್ಕೆ "ಜಾತವೇದ" ಎಂಬ ಈ ಕವನ ಸಂಗ್ರಹವೇ ಸಾಕ್ಷಿಯಾಗಿದೆ.

ನವೋದಯದ ನಿತ್ಯೋತ್ಸವದಲ್ಲಿ ಶ್ರೀಧರರು ಅನೇಕ ದೀಪಗಳನ್ನು ಹಚ್ಚಿದ್ದಾರೆ. "ವಿಚಾರ ಪ್ರಧಾನ ಹಾಗೂ ವಿಡಂಬನಾತ್ಮಕ ಕಾವ್ಯ. ವಿಮರ್ಶೆ" ಇವು ಅವರ ಮೆಚ್ಚಿನ ಕ್ಷೇತ್ರಗಳು. ಅಲ್ಲಿ ಜನಮನವನ್ನು ಮೆಚ್ಚಿಸುವ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಈ ಸಂಗ್ರಹದಲ್ಲಿಯೂ ವಿಡಂಬನಾತ್ಮಕ ಕವಿತೆಗಳು ಇಲ್ಲದಿಲ್ಲ. ಉಳಿದ ಹಲವು ಕವಿತೆಗಳಲ್ಲಿ ಸ್ಪಷ್ಟವಾಗಿ ಮೂಡದ ಅವರ ಕಾವ್ಯಾರ್ಥವು ವಿಡಂಬನೆಗಳಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ.

"ಗುಮಾಸ್ತ ಪ್ರಜ್ಞೆ" ಎಂಬ ಕವಿತೆಯಲ್ಲಿ ಅವರು ಹೀಗೆ ಬರೆಯುತ್ತಾರೆ. "ಇನ್‌ಫ್ಲುಯೆನ್ಸಿನಾಳದಲ್ಲಿ ಮುಳುಗಿ ತೆಗೆದ ರತ್ನವ ಜೇಬಿನಲ್ಲಿ ಇಟ್ಟುಕೊಂಡು ಮಾಡುತಿರುವೆ ಯತ್ನವ। ಗುಣಿಸಿ ಭಾಗಿಸುತ್ತ ಲೆಕ್ಕಪತ್ರ ಫೈಲು ಫೈಲನು। ಮಣಿಸಿ ಮೇಲಿನವರ ಮತಿಗೆ ತೋರಿಸುತ್ತ ಜೈಲನು। ಕಾಗದಗಳ ಚೂರುಗಳನ್ನು ಮಂತರಿಸುವಯಂತ್ರವ। ಬಲ್ಲೆ ಮಂತ್ರಿಯಕ್ಷರನ್ನು ಒಲಿಸಿಕೊಂಬ ತಂತ್ರವ!"

ಕಾವ್ಯವು ಕಾವ್ಯವಾಗಿಯೂ ಉಳಿದು ಇದಕ್ಕಿಂತ ಹೆಚ್ಚು ಸ್ಪಷ್ಟವಾಗುವುದು ಸಾಧ್ಯವಿಲ್ಲ. ಇಂತಹದೇ ಸ್ಪಷ್ಟತೆಯನ್ನು ಅವರ ವಿಚಾರ ಪ್ರಧಾನ ಕವಿತೆಯಲ್ಲಿ ಕಾಣುತ್ತೇವೆ. ಉದಾಹರಣೆಗಾಗಿ ಅವರ ಅಂತರ್‌ಮುಖ ಪ್ರಜ್ಞೆಯನ್ನು ನೋಡಬಹುದು.

"ಸಂಬಳವ ಕೊಡದಿರುವ ಒಡೆಯನ ಪಾದಸೇವೆಯ ಮಾಡಿದೆ, ನಂಬಿಗೆಯನಿಡದಿರುವ ಗೆಳೆಯಗೆ ಸ್ನೇಹ ಸೇವೆಯ ನೀಡಿದೆ. ಉಳಲು ಬಾರದ ಉಂಡು ಮಲಗುವ ಹೋರಿಯನು ನಾ ಸಾಕಿದೆ. ಕೊಳ್ಳಲಾರೂ ಬರದ ಬೆಳೆಯನು ಬೆಳೆದು ಸಂತೆಗೆ ನೂಕಿದೆ. ಮುಂದಿನದನೂಹಿಸಲು ಬಾರದ ವಿದ್ಯೆಯನು ನಾನೋದಿದೆ ಇಂದು ಹಿಡಿದೀ ವ್ಯಾಧಿಗಾಗದ ಔಷಧಿಯ ನಾ ಮಾಡಿದೆ."

ಇಲ್ಲಿಯ ಪ್ರಜ್ಞೆ ಅಂತರ್ ಮುಖವಾಗಿದ್ದರೂ, ಯೋಚಿಸಿದ ಪ್ರತಿಮೆಗಳೆಲ್ಲ ಬಹಿರ್ಮುಖವಾಗಿದೆ. ಅಂತೇ ಕಾವ್ಯಾರ್ಥ ಇಷ್ಟೊಂದು ಸ್ಪಷ್ಟವಾಗಿದೆ.

ಕೆಲವೊಂದು ರಮ್ಯ ಕವಿತೆಗಳಲ್ಲಿಯ ಪ್ರಜ್ಞೆ ನಿರ್ದಿಷ್ಟ ಸ್ವರೂಪವನ್ನು ತಾಳದೆ ರಮ್ಯವಾಗಿ ವರದಾ–ತುಂಗಾ ಪ್ರವಾಹವಾಗಿ ಹರಿಯುತ್ತದೆ. ಶಬ್ದಗಳನ್ನು ಸಾಲಿನಂತ್ಯದಲ್ಲಿ ಒಡೆಯುವದರಿಂದ ಕಾವ್ಯ "ವೃಷದ್ವತಿ"ಯ ಆವೇಶವನ್ನು ಪಡೆಯುತ್ತದೆ. ಆದರೆ ಕಾವ್ಯಾರ್ಥ? ಅದು ಅಷ್ಟು ಸ್ಪಷ್ಟವಾಗುವುದಿಲ್ಲ ಹರಿಯುತ್ತದೆ ದಟ್ಟೈಸಿ ಗಟ್ಟಿಯಾಗುವುದಿಲ್ಲ. ಇದನ್ನು ಪ್ರಾಣ ಪ್ರಜ್ಞೆ, ಸತ್ಯಾನೃತಪ್ರಜ್ಞೆ, ದಾಂಪತ್ಯಪ್ರಜ್ಞೆ ಮೊದಲಾದ ಕವಿತೆಗಳಲ್ಲಿ ಕಾಣಬಹುದು.

ರಮ್ಯತೆಯು ಸ್ಪಷ್ಟತೆಯೊಡನೆ ಗೂಡುಕಟ್ಟುವದು ಸಾಧ್ಯ. ಅದು ಟರ್ನರ್ ಚಿತ್ರಶಿಲ್ಪದಂತೆ ಬರಿ ಮಂಜು ಮಂಜಾಗಿರಬೇಕಾದುದಿಲ್ಲ. ಮೂರ್ತಿ ಶಿಲ್ಪದಂತೆ ಬೆರಗುಗೊಳಿಸಬಲ್ಲುದು, ಇದು ಶ್ರೀಧರರಿಗೆ ಅಸಾಧ್ಯವೆಂದಲ್ಲ. ಎರಡು ಮೂರು ಅಂಶಗಳನ್ನು ಬಿಟ್ಟರೆ ಅವರು ಇದನ್ನು "ಜಾತವೇದ ಪ್ರಜ್ಞೆ"ಯಲ್ಲಿ ಸಾಧಿಸಿದ್ದಾರೆ. ಆದರೆ ಈ ಶಿಲ್ಪಕ್ಕೆ ಬೇಕಾದ ಸ್ಥಿರಚಿತ್ತವನ್ನು ಅವರು ಜೋಪಾನಿಸುವುದಿಲ್ಲ. ಅಂತೇ ರಮ್ಯತೆಯು ಚಂಚಲವಾಗಿ ಹರಿಯುತ್ತದೆ, ಹಿಮವಾಗುವುದಿಲ್ಲ. ಇದನ್ನು ಸಾಧಿಸಿದರೆ ಅವರ ಆಳವಾದ ರಮ್ಯ ಕವಿತೆಗಳೆಲ್ಲ ಸುಗಮವಾಗುತ್ತವೆ. ಈಗ ನಿವೃತ್ತಿ ಮಾರ್ಗದಲ್ಲಿರುವ ಶ್ರೀಧರರಿಗೆ ಇದು ಅನಾಯಾಸವಾಗಬಲ್ಲದು. ಈ ಶ್ರೇಯಸ್ಸನ್ನು ಅವರು ಸಾಧಿಸಲಿ!

"ಪ್ರಶಾಂತಿ ನಿಲಯ" **ವಿ.ಕೃ.ಗೋಕಾಕ್**
ಆಂಧ್ರ ಪ್ರದೇಶ
೨೨–೩–೧೯೮೪

ನಲ್ನುಡಿ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಳೆದ ಮೂರ್‍ನಾಲ್ಕು ದಶಕಗಳಿಂದ ಬರೆಯುತ್ತಲಿದ್ದು. ಸಾರ್ಥಕ ಸಾಹಿತ್ಯ-ನಿರ್ಮಿತಿಗೆ ತಮ್ಮ ಲೇಖನಿಯನ್ನು ಮೀಸಲಿಟ್ಟಿರುವ ಕನ್ನಡದ ಗಣ್ಯ ಬರಹಗಾರರಲ್ಲೊಬ್ಬರಾದ ಪ್ರೊ. ಬಿ. ಎಚ್.ಶ್ರೀಧರರ ನೂತನ ಕೃತಿ "ಜಾತವೇದ" ಇದೀಗ ಕನ್ನಡದ ಓದುಗರ ಪಾಲಿಗೆ ಹೊಸ ಹಾದಿಯನ್ನು ತೋರುವ ಸಫಲ ಪ್ರಯತ್ನವಾಗಿದೆ.

ಶಿಕ್ಷಣ-ಸಾಹಿತ್ಯ ರಂಗಗಳೆರಡಲ್ಲೂ ಸಾಕಷ್ಟು ಕೃಷಿ ಮಾಡಿರುವ ಈ ಕವಿಯ ಪ್ರಸಕ್ತ ವಿಚಾರಸರಣಿ, ಆಲೋಚನೆಯ ಧಾಟಿ, ಚಿಂತನದ ಧೋರಣೆಗಳು ಕೆಲ "ಆಧುನಿಕರಿಗೆ" ಅಷ್ಟು "ಪಥ್ಯ"ವೆನ್ನಿಸದಿರಬಹುದಾದರೂ ಗದ್ಯ ಪದ್ಯಗಳೆರಡರಲ್ಲೂ ಸವ್ಯಸಾಚಿಯಾದ ಲೇಖಕರು ಕನ್ನಡ-ಸಂಸ್ಕೃತಗಳೆರಡರಲ್ಲೂ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಸಂಪಾದಿಸಿದ ವಿದ್ವಾಂಸರಾಗಿದ್ದು ತಮ್ಮ ಪ್ರಬುದ್ಧ ಅನುಭವದ ಪರಿಪಕ್ವ ಫಲವನ್ನು ಈ ಉತ್ತಮ ಕೃತಿಯ ಮೂಲಕ ಕನ್ನಡಿಗರಿಗೆ ಯಥೇಷ್ಟವಾಗಿ ಉಣಬಡಿಸಿದ್ದಾರೆ.

ನವ್ಯ ಸಂಪ್ರದಾಯ ಹಾಗೂ ರಮ್ಯ ಸಂಪ್ರದಾಯಗಳ ನಡುವೆ ವಿಶಿಷ್ಟ ಸಮನ್ವಯವನ್ನು ಸಾಧಿಸಿದ ವಿರಳ ಕವಿಗಳಲ್ಲೊಬ್ಬರಾಗಿದ್ದು ಆಧ್ಯಾತ್ಮಿಕ ಹಾಗೂ ಲೌಕಿಕ ವಿಚಾರಗಳ ನಡುವೆ ಅಪೂರ್ವ ಸಮನ್ವಯವನ್ನು ಹೊರ ಹೊಮ್ಮಿಸಿರುವ ಈ ಕವಿಗಳ ಕೃತಿ ರಚನಾ ಸಾಮರ್ಥ್ಯದ ವೈಭವವನ್ನು ಈ "ಜಾತವೇದ"ದಲ್ಲಿ ನಾವು ಗುರುತಿಸಬಹುದಾಗಿದೆ.

ಜಾತವೇದಸಪ್ರಜ್ಞೆ, ಪ್ರಾಣಪ್ರಜ್ಞೆ, ಋತಪ್ರಜ್ಞೆ, ಅದಿತಿ ಪ್ರಜ್ಞೆ ಶ್ರೇಯಃ ಪ್ರಜ್ಞೆ, ಅಂತರ್ಮುಖ ಪ್ರಜ್ಞೆ, ಬಹಿರ್ಮುಖ ಪ್ರಜ್ಞೆ, ಅನಾಸಕ್ತಿ ಪ್ರಜ್ಞೆ, ಅವತಾರ ಪ್ರಜ್ಞೆ, ರುದ್ರಪ್ರಜ್ಞೆ, ಸೃಷ್ಟಿ ಪ್ರಜ್ಞೆ, ಇಂಗಿತ ಪ್ರಜ್ಞೆ, ಶಿವಪ್ರಜ್ಞೆ, ಗುರುಪ್ರಜ್ಞೆ, ಹೀಗೆ ವಿವಿಧ ವಿಚಾರಕ್ಷೇತ್ರಗಳಲ್ಲಿ ಕವಿಯು ನವ-ನವೋನ್ವೇಷಶಾಲಿಯಾದ ಪ್ರಜ್ಞೆಯು ಕ್ರಿಯಾಶೀಲವಾಗಿರುವುದನ್ನು ಗರುತಿಸಬಹುದಾಗಿದೆ.

ಮಿಥ್ಯಾಪ್ರಜ್ಞೆ, ದಾಂಪತ್ಯಪ್ರಜ್ಞೆ, ವಿಷಮ ದಾಂಪತ್ಯಪ್ರಜ್ಞೆ, ಮಾಯಾಬಜಾರ ಪ್ರಜ್ಞೆ, ಸ್ವಾಂತಂತ್ರ್ಯಪ್ರಜ್ಞೆ ಹೀಗೆ ಲೌಕಿಕ ವಿಚಾರಗಳ ಕುರಿತೂ ಚಿಂತಿಸಿರುವ ಕವಿಯ ಧೋರಣೆಯ ಮೂಲದಲ್ಲಿ ಆಧ್ಯಾತ್ಮಿಕತೆಯ ತೆಳುವಾದ ಹಂದರವು ಹಾಸು-ಹೊಕ್ಕಾಗಿರುವುದನ್ನು ಕಾಣಬಹುದು.

ನಮ್ಮ ಭಾರತೀಯ ಪರಂಪರೆಯ ಹಾಗೂ ಸನಾತನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರಾಚೀನ ಅರ್ವಾಚೀನ ಮೌಲ್ಯಗಳ ವಿಶ್ಲೇಷಣೆಗೆಳಸುವ ಪ್ರಬುದ್ಧ, ಪರಿಣತಮತಿಯ ವಿಚಾರ–ಶೃಂಖಲೆಯು ಎಲ್ಲಾ ಕವಿತೆಗಳಲ್ಲೂ ಜಾಗ್ರತವಾಗಿರುವುದು ಇಲ್ಲಿನ ಕವಿತೆಗಳ ವೈಶಿಷ್ಟ್ಯವಾಗಿದೆ.

ಇದು ಒಮ್ಮೆ "ಓದಿದೊಡನೆ" ಎಲ್ಲಾ ಅರ್ಥವಾಯಿತು, ಮತ್ತೇನಿಲ್ಲವೆಂಬ ಮಟ್ಟದ ಲಘು ಸಾಹಿತ್ಯ, ಅಥವಾ ಜನಪ್ರಿಯ ಸಾಹಿತ್ಯ ಪ್ರಕಾರದ ಗ್ರಂಥಗಳ ಸಾಲಿಗೆ ಸೇರುವ ಕೃತಿಯಲ್ಲ. ಹೆಚ್ಚಿನ ಪೂರ್ವ ಸಿದ್ಧತೆ, ಆಳವಾದ ಅನುಭವ ಇವುಗಳ ಅಸ್ತಿವಾರದಲ್ಲಿ ಅಧ್ಯಯನವನ್ನಾರಂಭಿಸಬೇಕಾದ, ಮತ್ತೆ ಮತ್ತೆ ಓದಿ ಅರ್ಥೈಸಬೇಕಾದ ಹಾಗೂ ಹೆಚ್ಚು, ಹೆಚ್ಚು ಪ್ರಯತ್ನಪಟ್ಟಷ್ಟು ವಿಶೇಷಾರ್ಥಗಳನ್ನು ಧ್ವನಿಸಬಲ್ಲ ಮತ್ತು ಹೆಚ್ಚು ಆಳಕ್ಕಿಳಿದಂತೆ "ಅಮೂಲ್ಯ ಮುತ್ತು–ರತ್ನ"ಗಳನ್ನು ಆರಿಸಿಕೊಳ್ಳಲು ಸಾಧ್ಯವಾಗುವ ಸ್ತರದ ಉತ್ತಮ ಕೃತಿಯನ್ನು ಪ್ರೊ.ಬಿ.ಎಚ್.ಶ್ರೀಧರರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ.

ಭೂತ ಭವಿಷ್ಯದ್ವರ್ತಮಾನಗಳನ್ನು ಗಮನದಲ್ಲಿರಿಸಿಕೊಂಡು ನಮ್ಮ ಸಂಸ್ಕೃತಿ, ಪರಂಪರೆಗಳ ಉತ್ತಮ ಮೌಲ್ಯಗಳನ್ನು ಎತ್ತಿಹಿಡಿಯುವ ಸಾರ್ಥಕ ಪ್ರಯತ್ನದ ಈ ಕೃತಿಯಲ್ಲಿ ಬಂದ ಕವಿತೆಗಳು ಕಾಲದ ಗೆರೆಯನ್ನು ಮೀರಿ ನಿಲ್ಲಬಲ್ಲ ಶಕ್ತಿಯನ್ನು ಪಡೆದ "ಗಟ್ಟಿಕಾಳು" ಗಳಾಗಿವೆ–ಎಂದರೆ ಅತಿಶಯೋಕ್ತಿಯೆನಿಸದು.

ವಿಚಾರಪ್ರಿಯರೂ, ಸಾಹಿತ್ಯ ಕೃತಿಗಳಲ್ಲಿ ಚಿರಂತನ ಮೌಲ್ಯಗಳನ್ನರಸುವವರೂ ಆದ ಸಹೃದಯಿಗಳಿಗೆ ಇಲ್ಲಿನ ಕವಿತೆಗಳು "ಖುಷಿ" ಕೊಡುವುದರಲ್ಲಿ ಸಂದೇಹವಿಲ್ಲ.

ಕನ್ನಡ ಭಾಷೆಯನ್ನು ಆಗಾಗ್ಗೆ ಸಂಸ್ಕೃತದ ರಸಪಾಕದಲ್ಲದ್ದಿ, ತನ್ನಿಚ್ಛೆಗನುಸಾರವಾಗಿ ಭಾಷೆಯನು, ಮಣಿಸಿ ನಡೆಯಿಸುವ ಸಾಮರ್ಥ್ಯವನ್ನು ಮೆರೆಯುವ ಕವಿಯ ಭಾಷಾ–ಶೈಲಿಯು, ನಿಜಕ್ಕೂ ಹೊಸತೊಂದು ಹಾದಿಯನ್ನು ತೋರಿ ಕನ್ನಡದ ಕವಿಗಳನ್ನು ಚಿಂತನಪರರಾಗುವಂತೆ ಮಾಡಿವೆಯೆಂದರೆ ತಪ್ಪಾಗದು.

ಈ ಕವಿಯಿಂದ ಕನ್ನಡ ಸಾಹಿತ್ಯ ಸರಸ್ವತಿಯ ಉಪಾಸನೆ ಇನ್ನಷ್ಟು ಕಾಲ ನಡೆದು, ಕನ್ನಡನಾಡು, ನುಡಿಗಳಿಗೆ ಇನ್ನಷ್ಟು ಸೇವೆಸಲ್ಲುವಂತಾಗಲೆಂದು ಶ್ರೀ ಕ್ಷೇತ್ರದ ಸ್ವಾಮಿ ಹಾಗೂ ಧರ್ಮದೇವತೆಗಳಲ್ಲಿ ಪ್ರಾರ್ಥಿಸುತ್ತೇನೆ.

ಧರ್ಮಾಧಿಕಾರಿಗಳು
ಧರ್ಮಸ್ಥಳ
೨೭–೩–೧೯೮೪

ಡಿ.ವೀರೇಂದ್ರ ಹೆಗ್ಗಡೆಯವರು
ಶ್ರೀ ಧರ್ಮಸ್ಥಳ

ನೌಕಾಗೀತಕ್ಕೆ ಸಂಪಾದಕರ ಮಾತು...

ಶ್ರೀ ಬವಳಾಡಿ ಹೆಬ್ಬಾರ್ ಶ್ರೀಧರರು ಅನುವಂಶಿಕ ಕವಿಗಳು ಮತ್ತು ಶಾಸ್ತ್ರಜ್ಞರು, ತ್ರಿಭಾಷಾಪಂಡಿತರು. ಪ್ರಬಂಧಕಾರರು ಅವರಿಗೆ ೧೯೪೧ನೆಯ ಇಸವಿಯಲ್ಲಿ "ಕವಿಯೂ ವಿಜ್ಞಾನಿಯೂ" ಎಂಬ ಕನ್ನಡ ಪ್ರಬಂಧಕ್ಕೆ "ಹೊನ್ನಸೆಟ್ಟಿ ಎಸ್ಸೆಪ್ರೈಸ್" ಪ್ರಪ್ರಥಮವಾಗಿ ಮೈಸೂರು ವಿಶ್ವವಿದ್ಯಾನಿಲಯವು ಸಂಸ್ಕೃತದ ಎರಡು ಚಿನ್ನದ ಪದಕಗಳೊಡನೆ ದಯಪಾಲಿಸಿತು.

೨೪–೪–೧೯೧೮ರಲ್ಲಿ ಜನಿಸಿದ ಈ ಕವಿಗಳು ೧೯೩೭ ರಿಂದ ಪ್ರಕಟ ಕವಿಗಳಾದರು. ಇವರ ಚಂಪಕಮಾಲಾ ವೃತ್ತಗಳು ಬೆಂಗಳೂರಿನ ಸುಬೋಧ"ದಲ್ಲಿ ಪ್ರಕಟವಾದವು. ಅನಂತರ ದ್ವಿಪದವೀಧರರಾದ ಶ್ರೀಧರರ ವಿಚಾರ ಪರಿಪ್ಲುತ ಲೇಖನಗಳೂ ಭಾವಶಿಲ್ಪಮಯವಾದ ಭಾವಗೀತೆಗಳೂ "ಜಯಂತಿ," "ಜಯಕರ್ನಾಟಕ" "ಪ್ರಬುದ್ಧ. ಕರ್ಣಾಟಕ" "ಕನ್ನಡ ನುಡಿ" "ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ" "ಜೀವನ" ಮುಂತಾದ ಸುಪ್ರಸಿದ್ಧ ಕನ್ನಡ ಪತ್ರಿಕೆಗಳಟ್ಲು ಪುಂಖಾನು ಪುಂಖವಾಗಿ ಪ್ರಕಟವಾಗತೊಡಗಿದವು. ಅದು ಆ ಪತ್ರಿಕೆಗಳ ಉಚ್ಛ್ರಾಯ ಕಾಲ (೧೯೩೮–೧೯೫೭) ದಿ. ರಂಗನಾಥ ರಾಯರ "ನಗುವನಂದ" ಕ್ಕೆ ಪ್ರತಿ ತಿಂಗಳೂ ೧೪ ವರ್ಷಗಳ ಕಾಲ "ಮರುಳಸಿದ್ಧ" "ಪರಮಾಚಾರ್ಯ ಮುಂತಾದ ಉಪನಾಮಧೇಯಗಳಿಂದ ಹಾಸ್ಯಲೇಖನಗಳನ್ನು ಬರೆದು ವಿಡಂಬನ ಕಲಾಚತುರರೆನ್ನಿಸಿದರು. ಕ್ರಿ.ಶ. ೧೯೪೭–೧೯೫೧ರ ಅವಧಿಯಲ್ಲಿ ಹುಬ್ಬಳ್ಳಿಯ 'ಕರ್ಮವೀರ'' ವಾರಪತ್ರಿಕೆಯ ಉಪಸಂಪಾದಕರಾಗಿ ಜನಪ್ರಿಯತೆ ಗಳಿಸಿ ಅದರ ಓದುಗರ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ ಮುಖ್ಯಪಾತ್ರವಹಿಸಿದರು. ಅಷ್ಟರಲ್ಲಿ ಕಥನ ಕವನ ಸಂಕಲನವಾದ ಕಿನ್ನರ ಗೀತ, ಭಾವಗೀತ ಸಂಕಲನವಾದ "ಮೇಘನಾದ" "ಅಮೃತಬಿಂದು" ಗಳು ಗ್ರಂಥರೂಪದಲ್ಲಿ ಪ್ರಕಟವಾದವು.

೧೯೫೧ರ ಅನಂತರ ಶ್ರೀ ಶ್ರೀಧರರಿಗೆ ಐಚ್ಛಿಕ ಪತ್ರಿಕೋದ್ಯಮ ಮತ್ತು ವೃತ್ತಿಬದ್ಧ ಪ್ರಾಧ್ಯಾಪಕ ಕರ್ತವ್ಯ ಎಂಬಿವು ಕವಿತಾ ರಚನೆಯ ಜೊತೆಗೆ ಹೆಣೆದುಕೊಂಡವು. ವಿಶ್ವವಿದ್ಯಾನಿಲಯಗಳ ಹಾಗೂ ಇತರ ಸನ್ಮಾನ್ಯ ಸಾಹಿತ್ಯ ಸಂಸ್ಥೆಗಳ ಮತ್ತು ಪತ್ರಿಕೆಗಳ ವಿಶೇಷ ಸಂಚಿಕೆಗಳಲ್ಲಿ ತಪ್ಪದೇ ಶ್ರೀ ಶ್ರೀಧರರ ಕನ್ನಡ ಅಥವಾ ಇಂಗ್ಲೀಷ್ ಲೇಖನಗಳನ್ನು

ಜನತೆ ಕಂಡಿತು. ಡಿ. ಕಡೆಂಗೋಡ್ಲು ಶಂಕರ ಭಟ್ಟರು ರಾಜಕೀಯ ಲೇಖನಗಳಿಗೆ ತಮ್ಮ ಪತ್ರಿಕೆಯಲ್ಲಿ ಪ್ರತಿಸಲವೂ ಅವಕಾಶ ಮಾಡಿಕೊಟ್ಟರೆ, ದಿ.ಬೆಟಗೇರಿ ಕೃಷ್ಣ ಶರ್ಮರು ಜಯಂತಿಯಲ್ಲಿ ಇವರ ಕನ್ನಡ ಭಾವಗೀತೆಗಳಿಗೆ ಸತತವಾಗಿ ಅನೇಕ ಅವಕಾಶಗಳನ್ನು ಮಾಡಿಕೊಟ್ಟರು. ಶ್ರೀಧರರ ಬಹುಮುಖ ಪ್ರತಿಭೆಗೆ ಅವರು ಅಪಾರ ಶಕ್ತಿಯನ್ನು ಕೊಟ್ಟರು.

ಆಧುನಿಕ ಪ್ರಪಂಚದ ಗಂಭೀರ ವಿಷಯಗಳ ತುಲನಾತ್ಮಕ ಅಭ್ಯಾಸದ ಬಲದಿಂದ ಶ್ರೀ ಶ್ರೀಧರರು ಬರೆದ ಕಾವ್ಯಸೂತ್ರವೆಂಬ ವಿಮರ್ಶ ಶಾಸ್ತ್ರಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಬಂಗಾರದ ಹಬ್ಬದ ಪ್ರಥಮ ಬಹುಮಾನವೂ ದಿ,ತಿ.ನಂ.ಶ್ರೀ. ಪ್ರಥಮ ಪಾರಿತೋಷಕವೂ ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಥಮ ಬಹುಮಾನವೂ ದೊರೆತವು; ರಸಯಜ್ಞವೆಂಬ ಕವನ ಸಂಕಲನಕ್ಕೆ ದೇವರಾಜ ಬಹುದೂರ್ ಪ್ರಥಮ ಬಹುಮಾನ ದೊರಕಿತು. "ನೌಕಾಗೀತ" ಎಂಬ ಇವರ ಸಮುದ್ರಯಾನದ ಐತಿಹಾಸಿಕ ದೀರ್ಘಗೀತಕ್ಕೆ ಮುಂಬಯಿಯ ನೌಕಾಶಾಖೆ ಬಹುಮಾನ ಕೊಟ್ಟಿತು. "ಜ್ಞಾನಸೂತ್ರವೆಂಬ" ಪಾಶ್ಚಾತ್ಯ-ಪೌರಸ್ತ್ಯತತ್ವ ಶಾಸ್ತ್ರಗಳ ತುಲನಾತ್ಮಕ ಅಭ್ಯಾಸಗ್ರಂಥಕ್ಕೆ ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟಿನ ಪ್ರಥಮ ಬಹುಮಾನ ದೊರಕಿತು. ಇವರೂ ಪ್ರೊ. ಹನುಮಂತರಾಯರೂ ಕೂಡಿ ಬರೆದ ಮಾನಸದರ್ಪಣವೆಂಬ ಮನಃಶಾಸ್ತ್ರಗ್ರಂಥಕ್ಕೆ "ಮದ್ರಾಸ್ ಕ್ರಿಶ್ಚಿಯನ್ ಟೆಕ್ಸಟ್ ಬುಕ್ ಕಮಿಟಿ" ಪ್ರಥಮ ಬಹುಮಾನ ಕೊಟ್ಟಿತು. ರಾಷ್ಟ್ರಸೂತ್ರವೆಂಬ ಭಾರತ ಸಂಸ್ಕೃತಿ ಪುನಾರಚನೆಯ ಯೋಜನೆಗಳಿಗೆ ಆಧಾರವಾದ ಇವರ ಗ್ರಂಥಕ್ಕೆ ರಾಜ್ಯಸರಕಾರ ಅನುದಾನ ಕೊಟ್ಟಿತು.

ಅಭ್ಯಾಸದ ಆಳ-ಅಗಲಗಳಲ್ಲಿ ೧೯೪೨ರಿಂದ ಈವರೆಗೂ ಪ್ರಸಿದ್ಧರಾಗಿರುವ ಶ್ರೀ ಶ್ರೀಧರರ ಗಂಭೀರ, ತರ್ಕಶುದ್ಧ ವೈಜ್ಞಾನಿಕ ಬರೆಹಗಳು ವಿಶ್ವವಿದ್ಯಾಲಯಗಳ ಅಧಿಕೃತ ನಿಯತಕಾಲಿಕೆಗಳಲ್ಲೂ ಕನ್ನಡ ವಿಶ್ವಕೋಶದ ಏಳು ಸಂಪುಟಗಳಲ್ಲೂ ಇತರ ಸಂಶೋಧನಾತ್ಮಕ ಲೇಖನಗಳ ಸಂಗ್ರಹ ಗ್ರಂಥ, ಭಾಷಾಂತರ ಗ್ರಂಥ, ಐತಿಹಾಸಿಕ ಗ್ರಂಥಗಳಲ್ಲೂ ಬೆಂಗಳೂರು ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಮೂಲಕ ಪ್ರಕಟವಾಗಿವೆ. ಈ ಉಭಯಕವಿಗಳ ಪದಪಾಂಡಿತ್ಯವನ್ನು ಶ್ರೀ ಎಂ.ವಿ.ಸೀ. ಒಮ್ಮೆ ಎತ್ತಿ ಹೇಳಿದ್ದರು. ಇವರ ಮನೋರಮ ಕನ್ನಡ ಅರಸುಗನ್ನಡವಾಗಿಯೂ ಅವತರಿಸಿದೆ. ಆಳು (ಜಾನಪದ) ಕನ್ನಡವಾಗಿಯೂ ಪ್ರಕಟವಾಗಿದೆ. ಹಿಂದಿನ ಕಾಲದ ಸಂಪ್ರದಾಯದಂತೆ ಇವರನ್ನು ಪ್ರತಿವಾದಿ ಭಯಂಕರರೆನ್ನಬಹುದು. ಆದ್ದರಿಂದ ಯಾರೂ ಇವರಿಗೆ ಇದಿರಾಡರು-ಹಿಂದುಗಡೆ ರಾವಣ ಜಯಭೇರಿಹೊಡೆದರೆ, ಇವರು ಅದನ್ನು ಗಮನಿಸರು. ಮಹಾತ್ಮಗಾಂಧಿಯವರ ಜೀವನ ಚರಿತ್ರೆಯೇ ಇವರಿಗೆ ಧರ್ಮ-

ರಾಜ, ಭಗವದ್ಗೀತೆಯೇ ಯೋಗರಾಜ, ಅರುಣಗಿರಿ ರಮಣರೇ ಗುರುರಾಜ. ಈ ಪರಾನುಕಂಪ ಪ್ರಧಾನರ ಜೀವನವೂ, ಕಾವ್ಯವೂ ಯೋಜಿತವಾದುದು ಧೀರೋದಾತ್ತತೆಯ ಅಡಿಗಲ್ಲಿನ ಮೇಲೆ. ಈ ವಸ್ತುಸತ್ಯಪ್ರಿಯರ ಶಿಷ್ಯವರ್ಗ ದೊಡ್ಡದು ಗುಣದಲ್ಲೂ ಸಂಖ್ಯೆಯಲ್ಲೂ. ಆದ್ದರಿಂದ ತಮ್ಮ ೬೭ನೆಯ ವಯಸ್ಸಿನ ಅನುಭವಾಮೃತವನ್ನು ಜಾತವೇದ ಎಂಬ ಈ ಕವನ ಸಂಗ್ರಹದಲ್ಲಿ ಸ್ವಜನರ ಮುಂದಿಟ್ಟಿದ್ದಾರೆ.

ರಾಜಶೇಖರ ಹೆಬ್ಬಾರ್
ಸಂಪಾದಕ

ಸಮರ್ಪಣೆ

ಕಾವ್ಯದ ಓಜಸ್ಸು, ಮಾಧುರ್ಯ ಮತ್ತು ಪ್ರಸಾದಗಳೆಂಬ ತ್ರಿಗುಣಗಳ ಪ್ರಾಧಾನ್ಯವನ್ನು ನನಗೆ ಚಿಕ್ಕಂದಿನಿಂದಲೇ ಕಲಿಸುತ್ತ ಬಂದ ಯಕ್ಷಗಾನ ಮಹಾಕವಿಗಳೂ ಪ್ರಸಿದ್ಧ ಮೃದಂಗಕಾರರೂ ಭಾಗವತರೂ ಹಾಗೂ ಅರ್ಥಧಾರಿಗಳೂ ಆಗಿದ್ದ, ನನ್ನ ದೊಡ್ಡಪ್ಪನವರಾದ ದಿವಂಗತ ಬವಳಾಡಿ ಹಿರಿಯಣ್ಣ ಹೆಬ್ಬಾರರ ಚರಣಕಮಲಗಳಲ್ಲಿ ಸಮರ್ಪಿತ.

ಬಿ.ಎಚ್.ಶ್ರೀ.
ಗ್ರಂಥಕರ್ತ

ಕೃತಜ್ಞತೆ

ಹಿರಿಯಣ್ಣನಂತೆ ಈ ಲೇಖಕನನ್ನು ಮೊದಲಿನಿಂದಲೂ ನೋಡಿಕೊಳ್ಳುತ್ತಾ ಬಂದ ಪದ್ಮಭೂಷಣರೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಇಂಗ್ಲೀಷ್ ಬಿ.ಎ, ಆನರ್ಸ್ ಪದವೀಧರರೂ, ಇಂಗ್ಲೀಷ್ ಎಂ.ಎ., ಪದವೀಧರರೂ ಆಗಿರುವ ಮತ್ತು ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಹೋನ್ನತ ಪದವಿಗಳನ್ನಲಂಕರಿಸಿ, ಈಗ "ಶ್ರೀ ಸತ್ಯ ಸಾಯಿ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್ (Deemed University)" ಎಂಬ ಮಹಾ ವಿಶ್ವವಿದ್ಯಾಲಯದ ಕುಲಪತಿಗಳೂ ಆದ ಕವಿ, ತತ್ವಜ್ಞಾನಿ, ಗುರುಭಕ್ತ ಎಂಬ ತ್ರಿಮುಖವುಳ್ಳ ಡಾ. ವಿನಾಯಕ ಕೃಷ್ಣ ಗೋಕಾಕ್ ಮಹಾಶಯರು ಮುನ್ನುಡಿ ಬರೆದು ಕೊಟ್ಟದ್ದಕ್ಕಾಗಿ ಅವರಿಗೆ ಆದ್ಯ ಹೃದಯ ಪೂರ್ವಕ ಕೃತಜ್ಞತೆ.

ಎರಡನೆಯದಾಗಿ, ಅಂತಾರಾಷ್ಟ್ರೀಯ ಧಾರ್ಮಿಕ ವೇದಿಕೆಗೆ ಭಾರತೀಯ ಪ್ರತಿನಿಧಿಗಳಾದ, ವಿಶ್ವಧರ್ಮಪ್ರಜ್ಞರಾದ, ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಅತ್ಯಂತ ಉನ್ನತ ಮಟ್ಟದ ಅಭಿರುಚಿಯುಳ್ಳ ಪೂಜ್ಯ ಧರ್ಮಾಧಿಕಾರಿ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು "ಜಾತವೇದ" ವನ್ನು ಆಮೂಲಾಗ್ರವಾಗಿ ಓದಿ ತಮ್ಮ ಹೃದಯದಲ್ಲುಂಟಾದ ಸ್ಪಂದನಧಾರೆಯನ್ನು ಮುನ್ನುಡಿಗೆ ಚೌಕಟ್ಟಾಗುವಂತೆ ಬರೆದು ಕಳುಹಿಸಿ ಆಶೀರ್ವಾದ ಮಾಡಿದ್ದಕ್ಕಾಗಿ ಅವರಿಗೆ ಗೌರವಾದರ ಪೂರ್ವಕ ಹಾರ್ದಿಕ ಕೃತಜ್ಞತೆ.

ಮೂರನೆಯದಾಗಿ, ನನ್ನ ಕವಿತೆಗಳಲ್ಲಿ ಈ ಸಂಕಲನಕ್ಕೆ ತಕ್ಕವುಗಳನ್ನು ಆಯ್ದು, ಅಕ್ಷರಾದಿ ಸ್ಖಾಲಿತ್ಯಗಳನ್ನು ತಿದ್ದಿ, ಮುದ್ರಿಸುವುದರಲ್ಲಿ ನೆರವಿತ್ತ ಶ್ರೀ ರಾಜಶೇಖರ ಹೆಬ್ಬಾರ್, ಬಿ ಎಸ್.ಸಿ., ಈತನಿಗೆ ಸಾಶೀರ್ವಾದ ಕೃತಜ್ಞತೆ.

ಕೊನೆಯದಾಗಿ, ಬೆಂಗಳೂರಿನ ಮೆಸರ್ಸ್ ಪಿ.ಎ. ಎನ್. ಪ್ರಕಾಶಕರು ಮತ್ತು ವಿತರಣಕಾರರು ಈ ಗ್ರಂಥದ ಪ್ರಕಾಶನದ ಹೊಣೆಯನ್ನೂ ವಿತರಣದ (ವಿಕ್ರಯಿಸಿಕೊಡುವ) ಹೊಣೆಯನ್ನೂ ಪ್ರೀತ್ಯಾದರಗಳಿಂದ ವಹಿಸಿಕೊಂಡಿರುವುದಕ್ಕಾಗಿ ಅವರ ಪರವಾಗಿ ನನಗೆ ಬರೆದ ಪ್ರಾಧಿಕಾರಿ, ಪ್ರಿಯಮಿತ್ರ ಶ್ರೀ ಮ.ಗ.ಶೆಟ್ಟಿ ಅವರಿಗೆ ಸಾದರ, ಅನಂತ ಕೃತಜ್ಞತೆ. ಅಲ್ಲದೆ ಇದನ್ನು ತಮಗೆ ಶಕ್ಯವಿದ್ದಷ್ಟು ಚೆನ್ನಾಗಿ ಪ್ರೀತ್ಯಾದರಗಳಿಂದ ಮುದ್ರಿಸಿಕೊಟ್ಟ ಶಿರಸಿಯ ಶ್ರೀ ಮಹಾಲಕ್ಷ್ಮೀ ಪ್ರಿಂಟಿಂಗ್ ಪ್ರೆಸ್ಸಿನ ಒಡೆಯರಿಗೂ ಹೃದಯ ಪೂರ್ವಕ ಧನ್ಯವಾದಗಳು.

ಬಿ.ಎಚ್. ಶ್ರೀಧರ
ಗ್ರಂಥಕರ್ತ

ಪ್ರೊ.ಬಿ.ಎಚ್.ಶ್ರೀಧರ : ಜೀವನದ ಮುಖ್ಯ ಘಟನೆಗಳು

ಜನನ	:	೨೪ ಏಪ್ರಿಲ್ ೧೯೧೮ ಬಿಜೂರು ಗ್ರಾಮ (ಅವಿಭಜಿತ ದಕ್ಷಿಣ ಕನ್ನಡ)ದ ಬವಲಾಡಿಯಲ್ಲಿ
ತಂದೆ	:	ಸೀತಾರಾಮ ಹೆಬ್ಬಾರ
ತಾಯಿ	:	ನಾಗಮ್ಮ
ತಂಗಿಯರು	:	ರುಕ್ಮಿಣಿ, ಸುಶೀಲ, ರಮ
ಶಿಕ್ಷಣ		
ಪ್ರಾಥಮಿಕ	:	ಬಿಜೂರಿನ ಪ್ರಾಥಮಿಕ ಶಾಲೆಯಲ್ಲಿ
ಮಾಧ್ಯಮಿಕ	:	ಮಿಡಲ್ ಸ್ಕೂಲ್, ಸೊರಬ (೩ ವರ್ಷ) ಮಿಡಲ್ ಸ್ಕೂಲ್, ಸಾಗರ (೧ ವರ್ಷ)
ಪ್ರೌಢ	:	ಮುನಿಸಿಪಲ್ ಹೈಸ್ಕೂಲ್, ಸಾಗರ, ಎಸ್.ಎಸ್.ಎಲ್.ಸಿ. ಶಿವಮೊಗ್ಗ ಕೇಂದ್ರದಲ್ಲಿ
ಇಂಟರ್ ಮಿಡಿಯಟ್	:	ಮೈಸೂರಿನ ಯುವರಾಜ ಕಾಲೇಜಿನಲ್ಲಿ
ಬಿ.ಎ. (ಆನರ್ಸ್)	:	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ (೧೯೪೧)ರಲ್ಲಿ ರಾಜ್ಯಕ್ಕೆ ಮೊದಲಿಗನಾಗಿ ಉತ್ತೀರ್ಣ ಪೂರ್ಣ ಕೃಷ್ಣರಾವ್ ಬಂಗಾರದ ಪದಕ ನವೀನಂ ರಾಮಾನುಜಾಚಾರ್ಯ ಬಂಗಾರದ ಪದಕ 'ಕವಿಯೂ ವಿಜ್ಞಾನಿಯೂ' ಪ್ರಬಂಧಕ್ಕೆ ಹೊನ್ನಸೆಟ್ಟಿ ಬಹುಮಾನ
ಎಂ.ಎ. ಆನರ್ಸ್	:	ಮಹಾರಾಜ ಕಾಲೇಜು, ಮೈಸೂರು.
ವಿವಾಹ	:	ಮೇ (೧೯೪೬) ರಮಾದೇವಿಯವರೊಡನೆ

ಮಕ್ಕಳು : ಸುಮಾ, ಪ್ರತಿಭಾ, ವಿಜಯಾ, ರಾಜಶೇಖರ, ರಾಜೇಶ್ವರಿ

ವೃತ್ತಿ : ಪುಣೆಯ ಫೀಲ್ಡ ಕಂಟ್ರೋಲರ್ ಆಫ್ ಮಿಲಿಟರಿ ಎಕೌಂಟ್ಸ್ ಆಫೀಸಿನಲ್ಲಿ ಒಂದು ವರ್ಷ 'ಗುಮಾಸ್ತಗಿರಿ' (೧೯೪೨)

* ಭಟ್ಕಳದ ಇಸ್ಲಾಮಿಯು ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ಸಹ ಶಿಕ್ಷಕರಾಗಿ ೪ ವರ್ಷ ಹಾಗೂ ಹೆಡ್ ಮಾಸ್ಟರ್ ಆಗಿ ಒಂದು ವರ್ಷ

* 'ಕರ್ಮವೀರ' ವಾರಪತ್ರಿಕೆ (ಹುಬ್ಬಳ್ಳಿ)ಯು ಉಪಸಂಪಾದಕರಾಗಿ (೧೯೪೭–೫೧)

* ಕುಮಟದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕ (೧೯೫೧–೬೨)ರಾಗಿ

* ಶಿರಸಿಯು ಎಂ.ಎಂ. ಕಲಾ–ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪ ಪ್ರಾಚಾರ್ಯರಾಗಿ (೧೯೬೨–೬೯) ಸಂಸ್ಕೃತ ಮತ್ತು ಕನ್ನಡ ಪ್ರಾಧ್ಯಾಪಕರಾಗಿ.

* ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಪ್ರಾಚಾರ್ಯರಾಗಿ (೧೯೬೯–೭೬)

* ಶಿರಸಿಯ ಮಾಡರ್ನ್ ಎಜ್ಯುಕೇಷನ್ ಸೊಸೈಟಿಯ ಆನರರಿ ಮೆನೇಜರ್‌ಗಾಗಿ ೧೫–೬–೧೯೮೨ ರವರೆಗೆ

ನಿಧನ : ಏಪ್ರಿಲ್ ೨೪, ೧೯೯೦

ಪ್ರಕಟಣೆಗಳು : ೧೯ನೇಯ ವಯಸ್ಸಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದಾಗ ಬೆಂಗಳೂರಿನ 'ಸುಬೋಧ' ರಾಮರಾಯರ ಕರೆಯ ಮೇರೆಗೆ ಬರೆದು ಪ್ರಕಟಿಸಿದ ಚಂಪಕಮಾಲಾ ವೃತ್ತದಲ್ಲಿದ್ದ ಕವನ ಮೊದಲ ಪ್ರಕಟಣೆ. ೧೯೯೦ರಲ್ಲಿ ಕೈಗಾ ಅಣು ವಿದ್ಯುತ್ ಸ್ಥಾವರ ಕುರಿತು 'ನಾಗರಿಕ' ಪತ್ರಿಕೆಯಲ್ಲಿ ಕೊನೆಯ ಲೇಖನ. ಈ ಮಧ್ಯದಲ್ಲಿ ೫೦ಕ್ಕೂ ಹೆಚ್ಚು ಪುಸ್ತಕಗಳು, ನೂರಾರು ಲೇಖನಗಳು ಪ್ರಕಟವಾದವು.

ಪ್ರಶಸ್ತಿ/ಗೌರವಗಳು

ಕಾವ್ಯಸೂತ್ರ	:	ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ
		ತೀ.ನಂ.ಶ್ರೀ ಸ್ಮಾರಕ ಬಹುಮಾನ
		ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಬಹುಮಾನ
ರಾಷ್ಟ್ರಸೂತ್ರ	:	ರಾಜ್ಯ ಸರಕಾರ ಅನುದಾನ
		ಮೂರು ಸಾವಿರ ಮಠ, ಹುಬ್ಬಳ್ಳಿ, ಬಹುಮಾನ
ಜ್ಞಾನಸೂತ್ರ	:	ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ
ಮಾನಸ ದರ್ಪಣ	:	ಮದ್ರಾಸ್ ಕ್ರಿಶ್ಚಿಯನ್ ಟೆಕ್ಸ್ಟ್‌ಬುಕ್ ಕಮಿಟಿ ಬಹುಮಾನ
ನೌಕಾಗೀತ	:	ಕೇಂದ್ರ ಸರಕಾರದ ಸಂರಕ್ಷಣಾ ಶಾಖೆ ಬಹುಮಾನ
ರಸಯಜ್ಞ	:	ದೇವರಾಜ ಬಹಾದೂರ ಬಹುಮಾನ
ಮನುಸ್ಮೃತಿ (ರಾಜಧರ್ಮ)	:	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪದವಿ ತರಗತಿ ಪಠ್ಯಪುಸ್ತಕ
		೫೫ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪತ್ರಿಕಾ ಗೋಷ್ಠಿ ಅಧ್ಯಕ್ಷ ಉ.ಕ. ಜಿಲ್ಲಾ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (೧೯೭೪)
		ಕುಂದಾಪುರದಲ್ಲಿ 'ಜೇಸೀ' ಸನ್ಮಾನ (೧೯೮೦)
		ಶಿರಸಿಯ ರೋಟರಿ ಕ್ಲಬ್ ಸನ್ಮಾನ (೧೯೮೭)
		ಶಿರಸಿಯ 'ರಂಗ ಸಂಗ' ಕಲಾರಂಗದವರಿಂದ ಪೌರ ಸನ್ಮಾನ (೧೯೮೭)
		ಯುಗ ಪುರುಷದ ಬಳಗದಿಂದ ಕಿನ್ನಗೋಳಿಯಲ್ಲಿ ಸನ್ಮಾನ (೧೯೮೮)

ಬಿ.ಎಚ್.ಶ್ರೀಧರ ಕೃತಿ ಸೂಚಿ

೧. ಕಾವ್ಯ

ಮೇಘನಾದ	ಸಾಹಿತ್ಯ ಮಂದಿರ, ಮೈಸೂರು	೧೯೪೫
ಕಿನ್ನರಗೀತ	ಕಥಾಂಜಲಿ ಗ್ರಂಥಮಾಲೆ, ಬೆಂಗಳೂರು	೧೯೪೭
ಅಮೃತಬಿಂದು	ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ	೧೯೪೯
ಮಂಜುಗೀತ	ಲೇಖಕರು, ಕುಮಟ	೧೯೫೮
ರಸಯಜ್ಞ	ವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಶಿರಸಿ	೧೯೬೪
ಮುತ್ತುರತ್ನ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ಮ.ಮು. ೧೯೮೭)	೧೯೬೮
ನೌಕಾಗೀತ	ಅಪ್ರಕಟಿತ (ಖಾಸಗಿ ಪ್ರಸಾರದಲ್ಲಿ)	೧೯೬೮
ಕದಂಬ ವೈಭವ	ಪ್ರಬುದ್ಧ ಕರ್ನಾಟಕದಲ್ಲಿ	೧೯೭೦;
	ಸಾಹಿತ್ಯ ಮಂದಿರ ಶಿರಸಿ	೧೯೮೭
ಕಂಟಕಾರಿ ಮಹಾಕಾವ್ಯಂ	ದೀನಬಂಧು ಪ್ರಜಾಶನ, ಹೊನ್ನಾವರ	೧೯೮೧
ಜಾತವೇದ	ಪಿ.ಎ.ಎನ್. ಪಬ್ಲಿಷರ್ಸ್, ಬೆಂಗಳೂರು	೧೯೮೪
ಅಮೃತಬಿಂದು (ಶ್ರೀಧರ ಕಾವ್ಯ ವಾಚಿಕೆ)	ಸಾಹಿತ್ಯ ಪರಿಷತ್ತು ಬೆಂಗಳೂರು	೨೦೦೭

೨. ಯಕ್ಷಗಾನ

ಯಕ್ಷಗಾನ ಪಂಚರಾತ್ರ ವಾರ್ಧಿಕ್ಯ, ಶಿರಸಿಯ 'ಧ್ಯೇಯನಿಷ್ಠ ಪತ್ರಕರ್ತ' ದಿನಪತ್ರಿಕೆಯಲ್ಲಿ ೫–೧೨–೧೯೯೩ ರಿಂದ ೮–೫–೧೯೯೪ರ ವರೆಗೆ ಪ್ರತಿ ಭಾನುವಾರ

೩. ನಾಟಕ

ಮಯೂರ ಶರ್ಮ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ	೧೯೮೮
ಸೋಮಾರಿಗಳ ಕ್ಲಬ್ (ಅಪ್ರಕಟಿತ)	೧೯೮೭

೪. ಆತ್ಮಕಥೆ

ಜೀವಯಾನ, ಬಿ.ಎಚ್.ಶ್ರೀ. ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ ೧೯೯೪

೫. ವಿನೋದ–ವಿಡಂಬನೆ

ಬೇತಾಳಗಳ ಕುಣಿತ	ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ	೧೯೫೧
ಭಾಷಣಗಳ ಭೈರವರ ಒಡ್ಡೋಲಗ	ಎ.ಎಂ.ಜಿ. ಸಾಹಿತ್ಯ ಪ್ರಕಾಶನ, ಉಡುಪಿ	೧೯೬೬

೬. ವಿಮರ್ಶೆ

ಬೇಂದ್ರೆ	ಎಂ.ಜಿ.ಎಂ. ಕಾಲೇಜು ಉಡುಪಿ	೧೯೫೬
ಹೊಸಗನ್ನಡ ಸಾಹಿತ್ಯ ಶೈಲಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ	೧೯೫೬
ಕವೀಂದ್ರ ರವೀಂದ್ರ	ಶಶಿ ಪ್ರಕಾಶನ, ಬೆಂಗಳೂರು	೧೯೫೯
ಕಾವ್ಯಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೮
ಪ್ರತಿಭೆ	ರವೀಂದ್ರ ಪ್ರಕಾಶನ, ಕಾರ್ಗಲ್	೧೯೭೮
ಸಂಸ್ಕೃತಗಳ ಕನ್ನಡಗಳ ಬಾಂಧವ್ಯ	ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮಂಗಳೂರು	೧೯೮೧
ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ	ಶ್ರೀಮಾತಾ ಪ್ರಕಾಶನ ಧಾರವಾಡ	
ಜನ್ನ (ಸಂ.ವಿ.ಸಿ)	ಐ.ಬಿ.ಎಚ್.ಪ್ರಕಾಶನ ಬೆಂಗಳೂರು	೧೯೭೫

೭. ವೈಚಾರಿಕ

ಭಾರತೀಯ ನಾಗರಿಕತೆಗೆ	ಪ್ರಸಾರಾಂಗ	೧೯೫೯
ಮನುವಿನ ಕೊಡುಗೆ	ಕ.ವಿ.ವಿ. ಧಾರವಾಡ (ಮರುಮುದ್ರಣ)	೧೯೭೧
ಪಂಚಮುಖಿ	ಅಂತರಂಗ ಕಾರ್ಯಾಲಯ, ಉಡುಪಿ	೧೯೫೫
ವಿದೇಶದ ತಿಳಿವಳಿಕೆಗಳು	ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಕುಮಟ	೧೯೫೯
ಜ್ಞಾನಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೯
ಮಾನಸದರ್ಪಣ (ಹನುಮಂತರಾವ್ ಅವರೊಂದಿಗೆ)	ಸಮಾಜ ಪುಸ್ತಕಾಲಯ, ಧಾರವಾಡ	೧೯೭೩
ರಾಷ್ಟ್ರಸೂತ್ರ	ವಿಶ್ವ ಪ್ರಕಾಶನ, ಹುಬ್ಬಳ್ಳಿ	೧೯೭೪
ವಿಚಾರ ವಿಜಯ	ರವೀಂದ್ರ ಪುಸ್ತಕಾಲಯ, ಕಾರ್ಗಲ್	೧೯೮೧
ಭಾರತೀಯ ಮೂರ್ತಿಶಿಲ್ಪ	ಬಂಡಾಯ ಪ್ರಕಾಶನ, ಅರೆಅಂಗಡಿ	೨೦೦೯

೮. ಇತಿಹಾಸ

ಬನವಾಸಿಯ ಕದಂಬರು	ಶತಮಾನೋತ್ಸವ ಸಮಿತಿ, ಬನವಾಸಿ (ಎಲ್.ಟಿ. ಶರ್ಮಾರೊಂದಿಗೆ)	೧೯೬೬
ಬನವಾಸಿಯ ಇತಿಹಾಸ	ಸಾಹಿತ್ಯ ಮಂದಿರ, ಶಿರಸಿ	೨೦೦೪

೯. ಇತರೆ

ಮಯೂರ ಶರ್ಮ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು (ಮರುಮುದ್ರಣ ೧೯೭೧)	೧೯೭೧
ಕೌಶಿಕ ರಾಮಾಯಣ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು	೧೯೭೨
ರಮಣ ಮಹರ್ಷಿ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ	೧೯೬೯
ಉತ್ತರ ಕನ್ನಡ ಜಿಲ್ಲೆಯ	ಪ್ರೇಕ್ಷಣೀಯ ಸ್ಥಳಗಳು	(ಉಪಲಬ್ಧವಿಲ್ಲ)
ಬನವಾಸಿಯ ಕೈಪಿಡಿ		೧೯೭೧
ಸಾಹಿತ್ಯ ಚಿಂತನ	(ಮಂಜುವಾಣಿಯಲ್ಲಿ ಧಾರಾವಾಹಿಯಾಗಿ)	
ಶಿವಪುರಾಣ	(ಮಂಜುವಾಣಿಯಲ್ಲಿ ಧಾರವಾಹಿಯಾಗಿ)	
ವೇದರಹಸ್ಯಸಾರ	ರಾಜಶೇಖರ ಹೆಬ್ಬಾರ, ಶಿರಸಿ	೨೦೦೩

೧೦. ಅನುವಾದ

(ಇಂಗ್ಲಿಷಿನಿಂದ)

ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ
(ಅರವಿಂದರ The Foundations of Indian Culture (ಭಾಗ–೧) ಅನುವಾದ)
ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೫

ಭಾರತೀಯ ವಾಙ್ಮಯ
(ಅರವಿಂದರ The Foundations of Indian Culture (ಭಾಗ–೨) ಅನುವಾದ)
ಎನ್.ಆರ್.ರಾವ್‌ರೊಂದಿಗೆ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೭

ಟಿ.ಎಸ್.ಈಲಿಯಟ್ (ಎ.ಸಿ.ಬ್ರ್ಯಾಡ್ ಬ್ರೂಕ್‌ರ T.S.Eliot ಅನುವಾದ)
ಎಂ.ಜಿ.ಎಂ. ಕಾಲೇಜು ಉಡುಪಿ. ೧೯೫೭

ಸ್ವಾತಂತ್ರ್ಯ ಮೀಮಾಂಸೆ
(ಜೆ.ಎಸ್. ಮಿಲ್ಲರರ On Liberty ಅನುವಾದ ಎನ್.ಆರ್. ರಾವ್‌ರೊಂದಿಗೆ)
ಕುಮಟ ೧೯೬೧

ಮಾತೃಶ್ರೀ (ಪಶುಪತಿಯವರ On the Mother Divine ಅನುವಾದ)
ಶ್ರೀ ಅರವಿಂದೋ ಸೊಸೈಟಿ, ಶಿವಮೊಗ್ಗ ೧೯೭೫

ವೇದರಹಸ್ಯ (ಅರವಿಂದ The Secret of the Veda ಅನುವಾದ) (ಅಪ್ರಕಟಿತ)
ನೆಹರೂ ಉವಾಚ (ಉಪಲಬ್ಧವಿಲ್ಲ)
ರಮಣ ಮಾರ್ಗ ಭಾಗ ೧ ಮತ್ತು ಭಾಗ –೨
(ಓಂ ಸಾಧು ಅವರ The Path of Ramana Part-1 & Part 2 ಅನುವಾದ)
ಅಪ್ರಕಟಿತ

ಅನುವಾದ (ಸಂಸ್ಕೃತ)

ಕಾಳಿದಾನ ಕಾವ್ಯ ಸೌರಭ	ರೋಟರಿ ಕ್ಲಬ್, ಕುಮಟ (ಉಪಲಬ್ಧವಿಲ್ಲ)	೧೯೬೨
ಕುಂದಮಾಲೆ (ನಾಟಕ)	ಗೀತಾ ಬುಕ್ ಹೌಸ್, ಮೈಸೂರು	೧೯೬೭
ಸಂಸ್ಕೃತ ಸುಭಾಷಿತ ಸಂಗ್ರಹ	ಪ್ರಸಾರಾಂಬ, ಕ.ವಿ.ವಿ. ಧಾರವಾಡ	೧೯೭೧
ರಾಜಧರ್ಮ	ಪ್ರಸಾರಾಂಗ, ಕ.ವಿ.ವಿ. ಧಾರವಾಡ	೧೯೭೪

(ಮನುಸ್ಮೃತಿ ೭ನೇ ಅಧ್ಯಾಯದ ಅನುವಾದ – ಟಿಪ್ಪಣಿ, ಪೀಠಿಕ ಸಹಿತ ಬಿ.ಆರ್.ಮೋಡಕರೊಂದಿಗೆ)

೧೧. ಸಂಪಾದಿತ

ನವರತ್ನ (ಮಿಸಲೆನಿ) ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ವರ್ಷ ನಮೂದಿಸಿಲ್ಲ)
ಬವವಾಡಿ ಹಿರಿಯಣ್ಣ ಹೆಬ್ಬಾರ್ ವಿರಚಿತ
ಭಾನುಮತಿ ಕಲ್ಯಾಣ (ಯಕ್ಷಗಾನ) ಕಾವ್ಯಾಲಯ ಪ್ರಕಾಶಕರು, ಮೈಸೂರು
೧೯೫೮
ರಸೋ ವೈ ಸಃ (ಹಿರಿಯಣ್ಣ ಹೆಬ್ಬಾರರ ಯಕ್ಷಗಾನ ಮತ್ತು ಭಕ್ತಿ ಸ್ತೋತ್ರಗಳು)
'ಸಾಹಿತ್ಯ ಮಂದಿರ' ಶಿರಸಿ ೧೯೮೭

ಕೆಲವು ಲೇಖನಗಳು

೧. ಅಭಿನಂದನ ಗ್ರಂಥಗಳಲ್ಲಿ

ಸಂಸ್ಕೃತ ನಾಟಕ	ಅಭಿನಂದನೆ	೧೯೫೬
ಕನ್ನಡ ಸಾಹಿತ್ಯಕ್ಕೆ ಮುಗಳಿ	ರಸಿಕರಂಗ ದರ್ಶನ	೧೯೬೬ ಕೊಡುಗೆ
ಸೌಂದರ್ಯ ಮೀಮಾಂಸೆ	ಉಪಾಯನ	೧೯೬೭
ಯಕ್ಷಗಾನ ಬಯಲಾಟ	ಕಾರಂತ ಪ್ರಪಂಚ	೧೯೬೯

ಬೆಂಗಳೂರು ಭಾರ್ಗವ (ಅ.ನ.ಕೃ)	ರಸಚೇತನ	೧೯೭೦
ಗುರುಗಳಿಗೆ ನಮಸ್ಕಾರ	ಸಮರ್ಪಣೆ	೧೯೭೦
ಕುವೆಂಪು ಗದ್ಯ	ಸಹ್ಯಾದ್ರಿ	೧೯೭೪
ಯಕ್ಷಗಾನದ ಸಾಂಸ್ಕೃತಿಕ ಕೊಡುಗೆ	ರಸ ಋಷಿ	೧೯೭೪
ಬೇಂದ್ರೆ ಕಾವ್ಯ ಸ್ತೋತ್ರ	ಇಳಿದು ಬಾ ತಾಯಿ	೧೯೭೭
ಕಾವ್ಯಾನುಶಾಸನ	ಬ್ರಹ್ಮಗಿರಿ	೧೯೭೭
ಅಭಿಜಾತ ಕೃತಿ–ನಲ್ಮೆ	ವಾಙ್ಮಯ ತಪಸ್ವಿ	೧೯೭೭
ಜ್ಞಾನದ ಪೂರ್ಣಕುಂಭ	ನಮನ	೧೯೭೮
ಮಿತ್ರಾಭಿನಂದನ	ಪ್ರವೃತ್ತ	೧೯೭೬
ಆಧುನಿಕ ಸಾಹಿತ್ಯ ಸಮೀಕ್ಷೆ ಇತ್ಯಾದಿ	ಬೆಳ್ವೊಲ	೧೯೮೧

೨. ಸಂಸ್ಮರಣ ಸಂಚಿಕೆಗಳಲ್ಲಿ

ಹೈವನಾಡಿನ ಚರಿತ್ರೆ	ಉ.ಕ.ದರ್ಶನ, ಕ.ಸಾ.ಪ. ಬೆಂಗಳೂರು	೧೯೮೬
ಬನವಾಸಿಯ ಚಕ್ರವರ್ತನ	ಪಡುವಣ (೪೫ನೇಯ ಕನ್ನಡ ಸಾಹಿತ್ಯ ಸಮ್ಮೇಳನ)	
ಶಿರಸಿಯ ಚಾರಿತ್ರಿಕ ಹಿನ್ನೆಲೆ	ಶಿರಸಿ ನಗರಸಭಾ ಸಂಚಿಕೆ	೧೯೬೬
ಹೊನ್ನಾವರ ಚರಿತ್ರೆ	ಹೊನ್ನಾವರ ಭೂ ಅಭಿವೃದ್ಧ ಬ್ಯಾಂಕ್	೧೯೭೭
ಸಿದ್ದಾಪುರದ ಚಾರಿತ್ರಿಕ ಹಿನ್ನೆಲೆ	ಅರ್ಬನ್ ಬ್ಯಾಂಕ್, ಸಿದ್ದಾಪುರ	೧೯೭೯
ಭಾರತದ ಗ್ರಂಥಾಲಯಗಳ ಇತಿಹಾಸ	ಶಿರಸಿ ಪಂಡಿತ್ ಲೈಬ್ರರಿ	೧೯೭೦
ಕೌಶಿಕ ರಾಮಾಯಣ	ಕದಂಬ (ಸಾಹಿತ್ಯ ಸಮ್ಮೇಳನಾಂಕ)	೧೯೮೨
ವಿದ್ವತ್ಕವಿ ಪಾಂಡೇಶ್ವರರು	ತಾಂಬೂಲ (ಉ.ಕ.ಸಾಹಿತ್ಯ ಸಮ್ಮೇಳನಾಂಕ)	೧೯೮೧
ಕನ್ನಡ ಸಾಹಿತ್ಯ ನಡೆದು ಬಂದ ದಾರಿ ಇತ್ಯಾದಿ	ಮೈಸೂರು ದಸರಾ ದರ್ಶಿನಿ	೧೯೬೪

೩. ಪತ್ರಿಕೆಗಳು

ಇಂದಿನ ಕನ್ನಡ ಪ್ರಬಂಧಗಳು	ಕನ್ನಡ ಸಾಹಿತ್ಯ ಪರಿಷತ್ಪತ್ರಿಕ	೪೬/೧

ಔಚಿತ್ಯ	ಜೂನ್ ೧೯೬೭ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೪೨/೧ ಜೂನ್ ೧೯೪೭
ಕುಂದಗನ್ನಡ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೪೧, ೪೨, ೪೩ ಜೂನ್ ೧೯೪೬/೫೮
ಹೊಸಗನ್ನಡ ಛಂದೋವಿಕಾಸ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೪/೧–೨ ಜೂನ್ –ಡಿಸೆಂ.
ಕನ್ನಡತ್ರಯ ವಿಭಾಗಯೋಗ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೬೨/೧ ಜೂನ್ – ಡಿಸೆಂ. ೧೯೭೭
ವಿಮರ್ಶೆ	ಸಾಧನ, ಸಂಪುಟ ೧, ಸಂಚಿಕೆ ೩೧
ಸ್ವಾತಂತ್ರ್ಯ ಮತ್ತು ಭ್ರಮೆ	ಜೀವನ ಜುಲೈ ೧೯೬೮
ರಂಗ ಬಿನ್ನಪ	ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ ೧೯೬೯
ಸಾಹಿತ್ಯ ಚಿಂತನ–ಲೇಖನ ಸರಣಿ	ಮಂಜುವಾಣಿ ೧೯೮೧ ರಿಂದ ೧೯೮೩
ಶಿವ ಪುರಾಣ–ಲೇಖನ ಸರಣಿ	ಮಂಜುವಾಣಿ ೧೯೮೪ ರಿಂದ ೧೯೮೬
ಜನಜೀವನ ಹಾಗೂ ಜಾನಪದ ಕಲೆಗಳು	ಕಾನಡಾವೃತ್ತ ೧೦೮೨
ಯಕ್ಷಗಾನ : ಉಗಮ ಮತ್ತು ಇತಿಹಾಸ	ಸಂಯುಕ್ತ ಕರ್ನಾಟಕ ೨೪–೬–೧೯೮೪
ಸಾಹಿತ್ಯ ಮತ್ತು ಮಹಾಕಲ್ಪನೆ	ಜನತಾ ೧೨–೮–೧೯೬೩
ಮಾನವ ಸಂಸ್ಕೃತಿ	ಜಯಕರ್ನಾಟಕ ಜುಲೈ ೧೯೫೩
ಕಾವ್ಯದಲ್ಲಿ ಪ್ರಾಸ ಏಕೆ ಬೇಕು?	ಕನ್ನಡ ನುಡಿ ೧–೪–೧೯೭೩
ವಿಮರ್ಶಾ ಪರಿಭಾಷೆ	ತಾಯಿ ನುಡಿ ದೀಪಾವಳಿ ಸಂಚಿಕೆ

* ಮುಂತಾದ ಸಾವಿರಾರು ಲೇಖನಗಳು

೪. ಇಂಗ್ಲಿಷ್ ಲೇಖನಗಳು

Manu's Theory of Kingship	JL of K.U.D. YV	1971
Experience and expression	XVII	1973
Classical and Modern Plays	The Mysore Orientalist	1969
Aesthetic Experience	Mysore Oriental Research Institute	1972
Indian History-A Challenge to some Fundamental Assumptions	JL of Mysore University	1977
The Hindu View of History	P.B.Desai Fel. Vol Dharwad	
etc.		

ಶ್ರೀಧರರ ಕುರಿತು

೧. ಕಿರುಹೊತ್ತಿಗೆ

ರಾಜಶೇಖರ ಹೆಬ್ಬಾರ ಹಾಗೂ ಕಿರಣ ಭಟ್ಟ	ಪ್ರೊ.ಬಿ.ಎಚ್.ಶ್ರೀಧರ ಬಿ.ಎಚ್.ಶ್ರೀ ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ	೧೯೯೨
ರಾಜಶೇಖರ ಹೆಬ್ಬಾರ	ಪ್ರೊ.ಬಿ.ಎಚ್.ಶ್ರೀಧರ	೨೦೦೭
ರಾಜಶೇಖರ ಹೆಬ್ಬಾರ	ಶ್ರೀಧರ ಪ್ರಶಸ್ತಿ	೨೦೧೦
ಡಾ.ಶ್ರೀಪಾದ ಭಟ್ಟ		

೨. ಸಂದರ್ಶನ

ಪಾ.ವೆಂ.ಆಚಾರ್ಯ	ಕಸ್ತೂರಿ	ಫೆಬ್ರವರಿ ೧೯೭೪
ಭುವನೇಶ್ವರಿ ಹೆಗಡೆ	ತರಂಗ	೧೯೮೭
ಭಾಗೀರಥಿ ಹೆಗಡೆ	ಉಷಾವಾಣಿ	೨೧–೮–೧೯೮೮
ಮೋಹನ ಹೆಗಡೆ	ಸಂಯುಕ್ತ ಕರ್ನಾಟಕ	೨೬–೪–೧೯೮೭
ಮುಂತಾದವು		

೩. ಸಾಹಿತ್ಯ ವಿಮರ್ಶೆ

ಎಚ್.ಆರ್.ಅಮರನಾಥ–ಪರಂಪರೆಯ ಕಾವಲುಗಾರ:

ಬಿ.ಎಚ್.ಶ್ರೀಧರರ ಕಾವ್ಯ ಸಮೀಕ್ಷೆ ಸೃಜನವೇದಿ ಏಪ್ರಿಲ್ ೧೯೮೭

ಪ್ರೊ.ಬಿ.ಎಚ್.ಶ್ರೀಧರ–ರಾಜಶೇಖರ ಹೆಬ್ಬಾರ ೨೦೦೭

೪. ಗ್ರಂಥಾವಲೋಕನ

ಮೇಘನಾದ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ–೩೧, ೨	
ಮಂಜುಗೀತ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ–೪೩, ೨	
ಜಾತವೇದ	ಪ್ರಜಾವಾಣಿ	೫–೧–೧೯೮೬
ಜಾತವೇದ	ನಾಗರಿಕ	೧೯೮೫
ಜಾತವೇದ	ಸಂಯುಕ್ತ ಕರ್ನಾಟಕ	೫–೧–೧೯೮೬
ಕಂಟಕಾರೀ ಕಾವ್ಯಂ	ಗ್ರಂಥಲೋಕ	೧–೪–೧೯೮೨
ಕವೀಂದ್ರ ರವೀಂದ್ರ	ಕರ್ನಾಟಕ ಭಾರತಿ	೧೯೬೪
ಕಾವ್ಯ ಸೂತ್ರ	ಸಂಯುಕ್ತ ಕರ್ನಾಟಕ	೧೧–೧೦–೧೯೬೯
ಬೇಂದ್ರೆ	ಶಿರಸಿ ಸಮಾಚಾರ	೧–೭–೧೯೮೭
ಪ್ರಜ್ಞಾವಾದ	ವನಶ್ರೀ ಉ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನ ಯಲ್ಲಾಪುರ	೧೯೭೪
ಭಾರತೀಯ ಮೂರ್ತಿಶಿಲ್ಪ	The Indian Express	೧–೮–೧೯೮೮

೫. ಬದುಕು–ಬರೆಹ ಪರಿಚಯದ ಲೇಖನಗಳು

ಮೋಹನ ಹೆಗಡೆ	ಸಂಯುಕ್ತ ಕರ್ನಾಟಕ	೨೬–೪–೧೯೮೭
ರಾಜಶ್ರೀ ಹೆಗಡೆ	The Indian Express	೧೧–೫–೧೯೮೭
ಎಂ.ಎ.ಶರ್ಮ ತದ್ದಲಸೆ	ಪ್ರಜಾಮತ	೨೪–೫–೧೯೮೭
ಹಾ.ಮಾ.ನಾಯಕ	ಪ್ರಜಾವಾಣಿ	೨೧–೫–೧೯೮೭
ಹಾ.ಮಾ.ನಾಯಕ	ಪ್ರಜಾವಾಣಿ	೨೦–೫–೧೯೯೦
ಟಿ.ಎಂ.ಸುಬ್ಬರಾಯ	ಉದಯವಾಣಿ	೬–೫–೧೯೯೦
ಎಚ್ಚೆಸ್ಕೆ	ಸುಧಾ	೨೪–೫–೧೯೮೭
ಪಾ.ವೆಂ.ಆಚಾರ್ಯ	ಉದಯವಾಣಿ	೬–೫–೧೯೯೦
ಕಿರಣ ಭಟ್ ಹಾಗೂ ಅಮರನಾಥ	ಪ್ರಜಾವಾಣಿ	೨೧–೬–೧೯೯೧
ರಾಜೇಶ್ವರಿ ಹೆಬ್ಬಾರ	ಸಂಯುಕ್ತ ಕರ್ನಾಟಕ	೨೦೦೯

* ಮುಂತಾದವು.

೬. ಶ್ರೀಧರ ಸ್ಮರಣೆ – ಸಂ. ಡಾ.ಎಂ.ಜಿ.ಹೆಗಡೆ ೧೯೯೯
(ಅಭಿನಂದನ ಗ್ರಂಥ)

೭. ಶ್ರೀಧರರ ನೆನಪು

ಶ್ರೀಧರರ ನೆನಪು ಚಿರಂತನವಾಗಿ ಉಳಿಯುವಂತೆ ಮಾಡಲು ಅವರ ಕುಟುಂಬದವರು ಶಿಷ್ಯರು ಹಾಗೂ ಅಭಿಮಾನಿಗಳ ಪರವಾಗಿ ಡಾ.ಟಿ.ನಾರಾಯಣ ಭಟ್, ಎಚ್.ಆರ್.ಅಮರನಾಥ, ಕಿರಣಭಟ್, ವಿಷ್ಣುಹೆಗಡೆ ಹಾಗೂ ರಾಜಶೇಖರ ಹೆಬ್ಬಾರ, ಜಗದೀಶ ಭಂಡಾರಿ, 'ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಸಮಿತಿಯನ್ನು ರೂಪಿಸಿ ಪ್ರತಿ ವರ್ಷ ಕನ್ನಡದ ಉತ್ತಮ ಸಾಹಿತ್ಯ ಕೃತಿಗೆ ಬಹುಮಾನ ನೀಡುವ ವ್ಯವಸ್ಥೆ ಮಾಡಿದ್ದಾರೆ (೧೯೯೧ ರಿಂದ) –ಸಿ.ಎನ್.ಹೆಗಡೆ, ಸಿ.ಆರ್.ಶಾನಭಾಗ, ಯು.ಎ.ಐತಾಳ, ವಿಠಲ ಭಂಡಾರಿ, ಶ್ರೀಪಾದ ಭಟ್, ಯಶವಂತ ನಾಯಕ ಇವರು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬಿ.ಎಚ್.ಶ್ರೀಧರ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು

ವರ್ಷ	ಪ್ರಶಸ್ತಿ	ಕೃತಿ	ಅಧ್ಯಕ್ಷತೆ
೧೯೯೧	ನಾ.ಮೊಗಸಾಲೆ	ಪ್ರಭವ (ಕಾವ್ಯ)	ಕೀರ್ತಿನಾಥ ಕುರ್ತಕೋಟಿ
೧೯೯೨	ಗಿರೀಶ ಕಾರ್ನಾಡ	ತಲೆದಂಡ (ನಾಟಕ)	'ಎನ್ಕೆ' ಕುಲಕರ್ಣಿ
೧೯೯೩	ಪಿ.ಲಂಕೇಶ ಹಾಗೂ	ಅಕ್ಕ (ಕಾದಂಬರಿ)	
	ದು.ನಿಂ.ಬೆಳಗಲಿ	ದೇವದಾಸಿ (ಕಾದಂಬರಿ)	ಶಿವರಾಮ ಕಾರಂತ
೧೯೯೪	ಪುರುಷೋತ್ತಮ ಬಿಳಿಮಲೆ	ಶಿಷ್ಟ ಪರಿಶಿಷ್ಟ (ವಿಮರ್ಶೆ)	ಕೆ.ವಿ.ಸುಬ್ಬಣ್ಣ
೧೯೯೫	ಎಚ್.ಎಸ್.ವೆಂಕಟೇಶಮೂರ್ತಿ	ಎಷ್ಟೊಂದು ಮುಗಿಲು (ಕವನ)	ಪಾಟೀಲ ಪುಟ್ಟಪ್ಪ
೧೯೯೬	ಜಿ.ಎಸ್.ಆಮೂರ	ಕನ್ನಡ ಕಥನ ಸಾಹಿತ್ಯ ಕಾದಂಬರಿ ವಿಮರ್ಶೆ	ಪ್ರಸನ್ನ
೧೯೯೭	ಜಯಂತ ಕಾಯ್ಕಿಣಿ	ಅಮೃತಬಳ್ಳಿ ಕಷಾಯ (ಕಥಾಸಂಕಲನ)	ವೇಣುಗೋಪಾಲ
೧೯೯೮	ಸವಿತಾ ನಾಗಭೂಷಣ	ಸ್ತ್ರೀಲೋಕ (ಕಾದಂಬರಿ)	ಸಿ.ಎನ್.ರಾಮಚಂದ್ರನ್
೧೯೯೯	ಕೆ.ವಿ.ನಾರಾಯಣ	ಬೇರು–ಕಾಂಡ–ಚಿಗುರು (ವಿಮರ್ಶೆ)	ವಿಷ್ಣುನಾಯ್ಕ
೨೦೦೦	ಪ್ರತಿಭಾ ನಂದಕುಮಾರ್	ಕವಡೆ ಆಟ (ಕವನ)	ಗಿರಡ್ಡಿ ಗೋವಿಂದರಾಜ್
೨೦೦೧	ಕೆ.ರಾಘವೇಂದ್ರರಾವ್	Imagining the unimagi-nable communities	ಟಿ.ನಾ.ಭಟ್
೨೦೦೨	ಮೊಗಳ್ಳಿ ಗಣೇಶ	ಭೂಮಿ (ಕಥಾ ಸಂಕಲನ)	ಬರಗೂರು ರಾಮಚಂದ್ರಪ್ಪ
೨೦೦೩	ಶಿವರಾಮ ಪಡಿಕ್ಕಲ್	ನಾಡು ನುಡಿಯ ರೂಪಕ (ವಿಮರ್ಶೆ)	ಬಿ.ಎ.ಸನದಿ
೨೦೦೪	ಚಿಂತಾಮಣಿ ಕೊಡ್ಲೆಕೆರೆ	ತಲೆಮಾರಿನ ಕೊನೆಯ ಕೊಂಡಿ	ಜಯಂತ ಕಾಯ್ಕಿಣಿ
೨೦೦೫	ಎ.ಎನ್.ಪ್ರಸನ್ನ	ರಥಸಪ್ತಮಿ (ಕಥಾಸಂಕಲನ)	ಜಿ.ಎಸ್.ಆಮೂರ
೨೦೦೬	ಎಸ್.ದಿವಾಕರ	ನಾಪತ್ತೆಯಾದ ಗ್ರಾಮಾಫೋನ್ ಮತ್ತು ಇತರ ಪ್ರಬಂಧಗಳು (ವೈಚಾರಿಕ ಗದ್ಯ)	ಶಂಭು ಹೆಗಡೆ
೨೦೦೭	ಎಸ್.ಮಂಜುನಾಥ	ಕಲ್ಲ ಪಾರಿವಾಳಗಳ ಬೇಟ (ಕವನ)	ಚಿಂತಾಮಣಿ ಕೊಡ್ಲೆಕೆರೆ
೨೦೦೮	ಗಿರಡ್ಡಿ ಗೋವಿಂದರಾಜ್	ಹಿಡಿಯದ ಹಾದಿ (ಪ್ರಬಂಧ)	ಕಿ.ರಂ.ರಾಮಚಂದ್ರನ್
೨೦೦೯	ಅಶೋಕ ಹೆಗಡೆ	ವಾಸನೆ, ಶಬ್ದ, ಬಣ್ಣ ಇತ್ಯಾದಿ (ಕಥಾ ಸಂಕಲನ)	ಸಿ.ಎನ್.ರಾಮಚಂದ್ರನ್
೨೦೧೦	ಪ್ರಸನ್ನ ಹೆಗ್ಗೋಡು	ಬಾಲಗೋಪಾಲ (ಕಾದಂಬರಿ)	ಲಕ್ಷ್ಮೀಶ ತೋಳ್ಪಾಡಿ
೨೦೧೧	ಆರ್.ಪಿ.ಹೆಗಡೆ	ಸಮಗ್ರ ಸಾಧನೆಗೆ	ಜಯಂತ ಕಾಯ್ಕಿಣಿ
೨೦೧೨	ವಿವೇಕ ಶಾನಭಾಗ	ವಿಶಿಷ್ಟ ಸಾಹಿತ್ಯ	ಗೋಪಾಲಕೃಷ್ಣ ಪೈ

* ಡಾ.ಟಿ.ಪಿ.ಅಶೋಕ, ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಸುವರ್ಣ, ಗೌರೀಶ ಕಾಯ್ಕಿಣಿ, ಡಾ.ಆರ್.ಪಿ.ಹೆಗಡೆ, ಪ್ರೊ.ಜಿ.ಎಸ್.ಅವಧಾನಿ, ಡಾ.ಆರ್.ವಿ.ಭಂಡಾರಿ, ಡಾ.ಎಂ.ಜಿ.ಹೆಗಡೆ, ಪ್ರೊ.ಎಂ.ರಮೇಶ, ರಾಜಶೇಖರ ಹೆಬ್ಬಾರ, ಡಾ.ಶ್ರೀಪಾದ ಭಟ್ ಇವರೆಲ್ಲ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಬಿ.ಎಚ್.ಶ್ರೀಧರ ಶಿಕ್ಷಣ ಪ್ರಶಸ್ತಿ ಪುರಸ್ಕೃತರು

(೧೯೯೫ ರಿಂದ ಕೃಷ್ಣ ಲೋಕರೆಯವರು ನೀಡಿದ ಮೂಲಧನದಿಂದ ಆರಂಭವಾದ ಈ ಪ್ರಶಸ್ತಿಗೆ ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನ ಬಿ.ಎ. ಭಾಗ–೩ ರಲ್ಲಿ ಪ್ರಥಮರಾದ ವಿದ್ಯಾರ್ಥಿಗೆ ಪ್ರತಿವರ್ಷ ನೀಡಲಾಗುತ್ತಿದೆ.)

೨೦೦೫	ವರದುರ್ಗಾ ಭಟ್
೨೦೦೬	ಪ್ರಜ್ಞಾ ಭಟ್
೨೦೦೭	ಪ್ರಜ್ಞಾ ಹೆಗಡೆ
೨೦೦೮	ಗೀತಾ ನಾಯ್ಕ
೨೦೦೯	ವೆಂಕಟೇಶ ನರಸಿಂಹ ಹೆಗಡೆ
೨೦೧೦	ಮಧುಲತಾ ಗೌಡರ್
೨೦೧೧	ಸಿ.ಆರ್.ರೇಷ್ಮಾ
೨೦೧೨	ಶ್ರುತಿ ಭಟ್


ಚಿತ್ರಸಂಪುಟ



ಬಿ.ಎಚ್. ಶ್ರೀಧರರು – ನಿಷ್ಕಪಟ ನಗು



ಬಿ.ಎಚ್. ಶ್ರೀಧರರು – ಮಾತಿನ ಓಘದಲ್ಲಿ



ಬಿ.ಎಚ್. ಶ್ರೀಧರರು – ಚಿಂತಕ ದೃಷ್ಟಿ




(ಎಡದಿಂದ) ಕುಳಿತವರು – ರಮಾದೇವಿ. ಬಿ.ಎಚ್.ಶ್ರೀ, ಮೊಮ್ಮಗ ರಮಣ,
ಟಿ.ಎಮ್. ಸುಬ್ಬರಾಯ, ರಾಜಶೇಖರ ಹೆಬ್ಬಾರ, ಸಾವಿತ್ರಿ (ಸೊಸೆ), ಮೊಮ್ಮಗ ಬ್ರಹ್ಮಾನಂದ



ಕುಂದಾಪುರದಲ್ಲಿ ಕನ್ನಡ ಸಾಹಿತ್ಯೋತ್ಸವ – ಕಾರಂತರೊಂದಿಗೆ ಕಾರ್ಯಕ್ರಮ – 1.11.1988



'ಭಾರತೀಯ ಮೂರ್ತಿಶಿಲ್ಪ' ಪುಸ್ತಕ ಬಿಡುಗಡೆ (1988) ಸಮಾರಂಭದಲ್ಲಿ ಕಲಾವಿದ
ಆರ್.ಜಿ. ರಾಯ್ಕರ, ಡಾ. ಟಿ. ನಾರಾಯಣಭಟ್ ಹಾಗೂ ಬಿ.ಎಚ್.ಶ್ರೀಧರ



ಅಭ್ಯಾಸ ನಿರತ ಬಿ.ಎಚ್.ಶ್ರೀಧರರು



ಬಿ.ಎಚ್.ಶ್ರೀಧರರ ಪ್ರಕಟಿತ ಪುಸ್ತಕಗಳ ಚಿತ್ರ




26.4.1987ರ ಸನ್ಮಾನ – ನಿಂತವರು – ಶ್ರೀ ಎಲ್.ಆರ್. ಭಟ್, ಅವರ ಪತ್ನಿ ನಳಿನಿ (ಭಾರತೀಸುತರ ಮಗಳು), ಕುಳಿತವರು – (ಎಡದಿಂದ) ಶಂತರ ಕಾರಂತ (ಅಳಿಯ), ರಾಜಶೇಖರ ಹೆಬ್ಬಾರ (ಮಗ), ರಮಣ (ಮೊಮ್ಮಗ), ಸಚಿನ್ (ತಂಗಿಯ ಮೊಮ್ಮಗ), ಶ್ರೀಧರರು, ರಮಾದೇವಿ, ಸುಶೀಲೆ (ತಂಗಿ), ವಿಜಯಾ (ಮಗಳು)



ಬಿ.ಎಚ್.ಶ್ರೀಧರ, ರಮಾದೇವಿ, ಬ್ರಹ್ಮಾನಂದ (ಮೊಮ್ಮಗ)



ಮಗಳು ಪ್ರತಿಭಾ ಮತ್ತು ಅಳಿಯ ರಮೇಶ ವೈದ್ಯರೊಂದಿಗೆ ಶ್ರೀಧರ ದಂಪತಿ



ಶಿವರಾಮಕಾರಂತರಿಂದ ಬಿ.ಎಚ್. ಶ್ರೀಧರರಿಗೆ ಸಿದ್ದಾಪುರದಲ್ಲಿ ನಡೆದ
ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಿರುವ ಬಿ.ಎಚ್. ಶ್ರೀ



ಶಿವರಾಮಕಾರಂತರಿಂದ ಶ್ರೀಧರರಿಗೆ ಸನ್ಮಾನ (ಸಿದ್ದಾಪುರ – 1974)



ಸಿದ್ದಾಪುರದ ಎಮ್.ಜಿ.ಸಿ. ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ
ಕೆ.ವಿ. ಸುಬ್ಬಣ್ಣನವರೊಂದಿಗೆ ಪ್ರಿನ್ಸಿಪಾಲ್ ಶ್ರೀಧರರು



ಸಿದ್ದಾಪುರದ ಎಮ್.ಜಿ.ಸಿ. ಕಾಲೇಜಿನ ಕಾರ್ಯಕ್ರಮದಲ್ಲಿ
ಚಿತ್ರನಟ ಉದಯಕುಮಾರರೊಂದಿಗೆ ಬಿ.ಎಚ್.ಶ್ರೀಧರ



ಸಿದ್ದಾಪುರದ ಕಾಲೇಜಿನ ಕಾರ್ಯಕ್ರಮವೊಂದರಲ್ಲಿ ಬಿ.ಎಚ್.ಶ್ರೀ,
ರಾಜ್ಯಪಾಲ ಧರ್ಮವೀರ, ಶ್ರೀ ರಾಮಕೃಷ್ಣ ಹೆಗಡೆ ಮತ್ತಿತರು




ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಶ್ರೀಧರರಿಂದ ಗೌರವಾರ್ಪಣೆ




ಶಿವರಾಮಕಾರಂತರಿಗೆ ಮಾಲಾರ್ಪಣೆ ಮಾಡುತ್ತಿರುವ ಶ್ರೀಧರರು



ಸಿದ್ದಾಪುರದ ಕಾಲೇಜಿನ ಶಿಲನ್ಯಾಸ ಕಾರ್ಯಕ್ರಮ (ಎಡದಿಂದ) – ಬಿ.ಎಚ್.ಶ್ರೀ,
ರಾಮಕೃಷ್ಣ ಹೆಗಡೆ, ಗಣೇಶ ಹೆಗಡೆ ಮತ್ತಿತರು



ಕವಿ ಬೇಂದ್ರೆ ಮತ್ತಿತರೊಡನೆ ಉಪಹಾರ ಸೇವನೆ



ಶಿವಮೊಗ್ಗದಲ್ಲಿ ಬೇಂದ್ರೆಯವರಿಂದ ಸನ್ಮಾನ



ಗೋಪಾಲಕೃಷ್ಣ ಅಡಿಗರೊಂದಿಗೆ (ನಾಲ್ಕನೆಯವರು) ಕುಮಟೆಯ ಕೆನರಾ ಕಾಲೇಜಿನಲ್ಲಿದ್ದಾಗ



26.4.1987ರಂದು ಶ್ರೀಧರರ 70ನೇ ಹುಟ್ಟುಹಬ್ಬದಂದು ಶಿರಸಿಯಲ್ಲಿ ನಡೆದ ಸನ್ಮಾನದ ಚಿತ್ರ. (ಎಡದಿಂದ) – ಜಿ.ವಿ. ಭಟ್, ಡಿ.ಎನ್. ಶಾನಭಾಗ, ಬಿ.ಎಚ್.ಶ್ರೀ, ರಮಾದೇವಿ



ಬಿ.ಎಚ್.ಶ್ರೀಧರ (1968ರ ಸುಮಾರಿಗೆ)



ಹುಬ್ಬಳ್ಳಿಯ 'ಕರ್ಮವೀರ' ವಾರಪತ್ರಿಕೆಯ ಉಪಸಂಪಾದಕರಾಗಿದ್ದಾಗಿನ ಬಿ.ಎಚ್.ಶ್ರೀ (1947–51)



ಕುಮಟೆಯಲ್ಲಿ ವಾಸವಿದ್ದ ಮನೆಯೆದುರು (1951–1962)



ಮೈಸೂರಿನ ಮಹಾರಾಜ ಕಾಲೇಜಿನ ದಿಗ್ಗಜ ಪ್ರಾಧ್ಯಾಪಕರೊಂದಿಗೆ ಶಿಷ್ಯ ಶ್ರೀಧರ
(ನಿಂತವರದಲ್ಲಿ (ಬಲಗಡೆಯಿಂದ) ಎರಡನೇ ಸಾಲಿನಲ್ಲಿ ಮೊದಲನೆಯವರು)



ಸಭೆಯೊಂದರಲ್ಲಿ ಬಿ.ಎಚ್. ಶ್ರೀಧರರು ಮಾತನಾಡುತ್ತಿರುವುದು



ಕುಮಟೆಯ ಸಾಹಿತ್ಯ ಸಮ್ಮೇಲನದಲ್ಲಿ – (ನಿಂತವರು) – ಬಿ.ಎಚ್. ಶ್ರೀಧರ, ವೈಎನ್.ಕೆ.
(ಕುಳಿತವರು) – ಗೋಪಾಲಕೃಷ್ಣ ಅಡಿಗ, ತ.ರಾ.ಸು., ರಾಮಚಂದ್ರ ಶರ್ಮ, ಸು.ರಂ. ಎಕ್ಕುಂಡಿ

ಶ್ರೀಧರಾರ್ಪಣ



ಬ್ರಹ್ಮ ರಂಧ್ರದ ವರೆಗೆ ಚಾಚಿಕೊಂಡಿರುವ ಹಣೆ;
ಸಹಜಗುಹೆಯಲಿ ಗುಹೇಶ್ವರನಂಥ ಕಣ್ಣುಗಳು;
ನೋವು ಸಂಕಟ ಜಗಿದು ಉಗುಳುರಸ ತಂಬಾಕು;
ಮೇಜು ಗಡಗುಟ್ಟಿಸುವ ಯಕ್ಷಗಾನದ ಮುಷ್ಟಿ

ಶಾಸ್ತ್ರೇತಿಹಾಸಗಳು ಹುರಿಗಟ್ಟಿದಂತೆ
ಬರೆಯಬಲ್ಲವನು.
ವಿಶ್ವಕೋಶವೇ ಬಾಯ್ತೆರೆದಂತೆ
ಹುರಿದು ಅರಳಬಲ್ಲವನು,
ಪೂರ್ವಪಶ್ಚಿಮ ದಂಡೆಗಳ ಮೇಲೆ ಕಾಲಿಟ್ಟು
ತುರೀಯ ಸೂರ್ಯನಿಗೆ ತಲೆಬಾಗುವವನು,
ಕಾಮಾರ್ಥ ಕನ್ನಡಕಧಾರಿಗಳ ಬೆವರಿಳಿಸಿ
ಸ್ವಚ್ಛ ಕಣ್ಣಿನ ಬಗ್ಗೆ, ನಿಜದ ಬಣ್ಣದ ಬಗ್ಗೆ
ಸ್ಫಟಿಕದ ಶಲಾಕೆಯಿಂದ ಕಣ್ತೆರೆಯುವವನು.

ಭರತನದೆ ರಸಮೌಲ್ಯ, ಪಾಣಿನಿಯ ವಾಕ್-ಕರಣ,
ಚಾಣಕ್ಯ ನಯನೀತಿ, ಶಂಕರನ ತತ್ವಮತಿ–
ಬರೀ ಅದ್ವಿತೀಯರ ಬಂಟ.
ವರಕವಿಯ ನೆಂಟ, ಅತ್ತಕಡೆ ಹೊಂಟ.

ಹುಟ್ಟಿದವರಿಗೆ ಸಾಯುವುದೇ ಪ್ರಕೃತಿ
ಎನ್ನುವ ವಶಿಷ್ಠರೇ ಹೊರಟುಹೋದರೆ
ಆತ್ಮಹತ್ಯೆಯ ಗುಂಗಿನ ಅಜನಿಗೆ
ಬುದ್ಧಿ ಹೇಳುವವರಾರು?
'ಅಜನಲ್ಲ, ಅಮರ' ಎಂದು ಛೇಡಿಸುವವರಾರು?
ನಿನ್ನ ದೀಕ್ಷಾಮಂತ್ರ ನೆನಪು ಮಾಡುವವರಾರು?
'। ಜೀವೇಮ ಶರದಃ ಶತಮ್ ।' (1990)

–ಎಚ್.ಆರ್.ಅಮರನಾಥ

ತೇಜು ಪಬ್ಲಿಕೇಷನ್ಸ್